
ಮಹಿಳಾ ಸಾಹಿತ್ಯ ಸಂಪುಟ

ಮನುಷ್ಯ ಜಾತಿ
ತಾನೊಂದೆ ವಲಂ

# ಸಂಕೀರ್ಣ

ಮಹಿಳಾ ಸಾಹಿತ್ಯ ಸಂಪುಟ-ಸಂಕೀರ್ಣ

JNANA001613



ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.

# ಮಹಿಳಾ ಸಾಹಿತ್ಯ ಸಂಪುಟ

# ಸಂಕೀರ್ಣ

ಪ್ರಧಾನ ಸಂಪಾದಕರು

## ನಾಡೋಜ ಡಾ. ಮನು ಬಳಿಗಾರ್

ಮಾಲಿಕೆಯ ಸಂಪಾದಕರು

## ಡಾ. ಮಲ್ಲಿಕಾ ಘಂಟಿ

ಸಂಪಾದಕರು

## ಡಾ. ಎನ್. ಲಕ್ಷ್ಮಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು ೫೬೦ ೦೧೮,

MAHILA SAHITYA SAMPUTA-SANKEERNA Chief Editor: Nadoja Dr. Manu Baligar, Editor: Dr. N. Lakshmi Published by: Kannada Sahitya Parishattu, Pampa Mahakavi Road, Chamarajapete, Bengaluru-560018 Pages: xl+253 Price: Rs. 240/-: 2020

ಪ್ರಥಮ ಮುದ್ರಣ : ೨೦೨೦

ಪ್ರತಿಗಳು : ೫೦೦

ಬೆಲೆ : ಇನ್ನೂರ ನಲವತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ಪ್ರಕಟಣಾ ಸಮಿತಿ

ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

ಸಮ್ಮೇಳನಾಧ್ಯಕ್ಷರು - ಡಾ. ಎಚ್.ಎಸ್. ವೆಂಕಟೇಶಮೂರ್ತಿ

ಲ೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಂಚಾಲಕರು, ಪ್ರಕಟಣಾ ವಿಭಾಗ - ಡಾ. ಪದ್ಮರಾಜ ದಂಡಾವತಿ

ಸದಸ್ಯರು

ಶ್ರೀ ಜರಗನಹಳ್ಳಿ ಶಿವಶಂಕ — ಶ್ರೀ ಎ.ಆರ್. ಉಜ್ಜನಪ್ಪ

ಡಾ. ಮೂಡ್ನಾಕೂಡು ಚಿನ್ನಸ್ವಾಮಿ — ಶ್ರೀ ಸಂಜಯ ಅಡಿಗ

ಪ್ರೊ. ಧರಣೇಂದ್ರ ಕುರಕುರಿ — ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್

ಶ್ರೀ ರಂಜಾನ್ ದರ್ಗಾ — ಗೌರವ ಕಾರ್ಯದರ್ಶಿಗಳು

ಡಾ. ಬಿ.ಕೆ. ರವಿ — ಡಾ. ರಾಜಶೇಖರ ಹತಗುಂದಿ

ಡಾ. ತಮಿಳ್ ಸೆಲ್ವಿ — ಶ್ರೀ ಕೆ. ರಾಜಕುಮಾರ್

ಡಾ. ದೊಡ್ಡಮಲ್ಲಯ್ಯ — ಗೌರವ ಕೋಶಾಧ್ಯಕ್ಷರು

ಡಾ. ಎಚ್.ಎಲ್. ಪುಷ್ಪ — ಶ್ರೀ ಪಿ. ಮಲ್ಲಿಕಾರ್ಜುನಪ್ಪ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮುಖಪುಟ ಕಲಾವಿನ್ಯಾಸ : ಚಂದ್ರಕಾಂತ ಪಟ್ಟಣ

ಮುದ್ರಣ : ಬಿ.ಎಂ.ಶ್ರೀ, ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು

# ಅಧ್ಯಕ್ಷರ ನುಡಿ

ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ಈಗ ೧೦೫ ವರ್ಷಗಳನ್ನು ಪೂರೈಸಿ ೧೦೬ನೇ ವರ್ಷದಲ್ಲಿ ಕಾಲಿರಿಸಿದೆ. ನಾಡು, ನುಡಿ, ನೆಲ, ಜಲ ಮತ್ತು ಸಾಹಿತ್ಯ ಹಾಗೂ ಸಂಸ್ಕೃತಿ ಕುರಿತು ಏನೇ ವಿಚಾರ ಇದ್ದರೂ ಪರಿಷತ್ತು ತನ್ನ ಧ್ವನಿ ಎತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರಿನ ಆದಿಯಲ್ಲಿ ಕನ್ನಡ ಇರುವುದು ಅರ್ಥಪೂರ್ಣವೂ, ಸಾರ್ಥಕವೂ ಆಗಿದೆ. ಅಂದಿನ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲವಾಗಿ ಕನ್ನಡ ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬಂತು. ಆಗ ಅದಕ್ಕೆ ಇದ್ದ ಹೆಸರು ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದು. ನಂತರ ಅದು ಕನ್ನಡ ಸಾಹಿತ್ಯ ಪರಿಷತ್ತು ಎಂದು ಈಗಿನ ಹೆಸರು ಪಡೆಯಿತು. ಪರಿಷತ್ತಿನ ಹುಟ್ಟಿಗೆ ಆಗಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅವರೂ ಕಾರಣಕರ್ತರಾಗಿದ್ದರು ಎಂಬುದನ್ನೂ ಇಲ್ಲಿ ಉಲ್ಲೇಖಿಸ ಬೇಕು. ಪರಿಷತ್ತು ಇದುವರೆಗೆ ೮೫ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿದೆ ಮತ್ತು ಪರಿಷತ್ತಿಗೆ ನಾನು ೨೫ನೇ ಅಧ್ಯಕ್ಷನಾಗಿ ಚುನಾಯಿತನಾಗಿದ್ದೇನೆ. ಪರಿಷತ್ತು ಇದುವರೆಗೆ ೧,೨೫ ಕೃತಿಗಳನ್ನು ಪ್ರಕಟಿಸಿದ್ದು ಅದರಲ್ಲಿ ಕೆಲವು ಕೃತಿಗಳು ಹಲವು ಮುದ್ರಣಗಳನ್ನು ಕಂಡಿವೆ. ಶಬ್ದಕೋಶಗಳ ರಚನೆಯಲ್ಲಿ, ಹಳಗನ್ನಡ ಕಾವ್ಯಗಳ ಗದ್ಯಾನುವಾದ ಪ್ರಕಟಣೆಯಲ್ಲಿ ಪರಿಷತ್ತಿನದು ಮುಂಚೂಣಿ ಕೆಲಸ.

ಕನ್ನಡದ ಆದಿ ಕವಿ ಪಂಪನ "ಮನುಷ್ಯ ಜಾತಿ ತಾನೊಂದೆ ವಲಂ" ಎಂಬ ಮಾತನ್ನು ತನ್ನ ಘೋಷ ವಾಕ್ಯವಾಗಿ ಒಪ್ಪಿಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೂ ಚಾಚೂ ತಪ್ಪದೆ ಪಾಲಿಸಿಕೊಂಡು ಬಂದಿದೆ.

ನಾನು ಕನ್ನಡಿಗರ ಅಗಾಧ ಪ್ರೀತಿ ಮತ್ತು ಅವಿಚ್ಛಿನ್ನ ವಿಶ್ವಾಸದ ಫಲವಾಗಿ ದಾಖಲೆ ಗೆಲುವಿನೊಡನೆ ಅಧ್ಯಕ್ಷ ಸ್ಥಾನದಲ್ಲಿ ಕುಳಿತ ದಿನದಿಂದ ಇದುವರೆಗೆ ಪ್ರತಿಭಾ ನ್ಯಾಯ, ಸಾಮಾಜಿಕ ನ್ಯಾಯ, ಪ್ರಾದೇಶಿಕ ಸಮಾನತೆ ಮತ್ತು ಗುಣಗ್ರಾಹಿತ್ವಗಳನ್ನು ಒಂದು ವ್ರತದಂತೆ ಪಾಲಿಸಿಕೊಂಡು ಬಂದಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಚಟುವಟಿಕೆಗಳಲ್ಲಿ ಸಮಸ್ತರನ್ನು ಒಳಗೊಳ್ಳುವ ಕೆಲಸ ಮಾಡಿದ್ದೇನೆ. ದುರ್ಬಲ ವರ್ಗಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗುವಂತೆ ನೋಡಿಕೊಂಡಿದ್ದೇನೆ. ಪರಿಷತ್ತಿನ ಹಳೆಯ ನಿಯಮಾವಳಿಗೆ ತಿದ್ದುಪಡಿ ತಂದ ನಂತರ ಪರಿಷತ್ತಿನ ತಾಲ್ಲೂಕು, ಜಿಲ್ಲೆ ಮತ್ತು ಕೇಂದ್ರ ಘಟಕಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಮಹಿಳೆಯರಿಗೆ ಸಿಕ್ಕ ಹೆಚ್ಚಿನ ಪ್ರಾತಿನಿಧ್ಯ ಐತಿಹಾಸಿಕವಾದುದು. ಏಕೆಂದರೆ ಅಷ್ಟು ಜನರಿಗೆ ಹಿಂದೆ ಎಂದೂ ಈ ಪ್ರಮಾಣದಲ್ಲಿ

ಪ್ರಾತಿನಿಧ್ಯ ಸಿಕ್ಕಿರಲಿಲ್ಲ. ಇದುವರೆಗೆ ಪರಿಷತ್ತಿನ ಪದಾಧಿಕಾರಿ ವರ್ಗದಲ್ಲಿ, ಕಾರ್ಯಕಾರಿಣಿಯಲ್ಲಿ ಅಲಕ್ಷಿತವಾಗಿದ್ದ ಸಮುದಾಯಕ್ಕೆ ಸೂಕ್ತ ಸ್ಥಾನಮಾನವನ್ನು ಈ ಅವಧಿಯಲ್ಲಿಯೇ ದೊರಕಿಸಿದ್ದು ನನಗೆ ಅಪಾರ ಸಂತೋಷವನ್ನೂ ಸಮಾಧಾನವನ್ನೂ ತಂದು ಕೊಟ್ಟಿದೆ.

ಪ್ರಸ್ತುತ ಕಾರ್ಯಕಾರಿ ಸಮಿತಿ ಅವಧಿಯಲ್ಲಿ ಇದುವರೆಗೆ ನಾಲ್ಕು ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳು ನಡೆದಿದ್ದು ಅದರಲ್ಲಿ ಸಾಮಾಜಿಕ ನ್ಯಾಯ ಮತ್ತು ಪ್ರತಿಭಾ ಪಕ್ಷಪಾತಗಳೆರಡನ್ನೂ ಕಾಯ್ದುಕೊಳ್ಳಲಾಗಿದೆ ಎಂಬುದನ್ನು ಕನ್ನಡದ ಪ್ರಾಜ್ಞ ಜನರು ಗಮನಿಸಿದ್ದಾರೆ. ಅದೇ ರೀತಿ ಪರಿಷತ್ತಿನ ಆಶ್ರಯದಲ್ಲಿ ನೀಡಲಾಗುವ, ನಾಡಿನ ಅತ್ಯಂತ ಪ್ರತಿಷ್ಠಿತವಾದ ನೃಪತುಂಗ ಪ್ರಶಸ್ತಿ ಕೊಡುವ ವಿಚಾರದಲ್ಲಿಯೂ ಇದೇ ಮಾನದಂಡವನ್ನು ಅನುಸರಿಸಲಾಗಿದೆ. ಈ ಅವಧಿಯಲ್ಲಿಯೇ ಮತ್ತು ಇದೇ ಮೊದಲ ಸಲ ಪರಿಶಿಷ್ಟ ಜಾತಿಯ ಖ್ಯಾತ ಕವಿ ಡಾ. ಸಿದ್ಧಲಿಂಗಯ್ಯ ಈ ಪ್ರಶಸ್ತಿ ಸಂದುದನ್ನು ಇಲ್ಲಿ ಸ್ಮರಿಸಲು ಬಯಸುವೆ. ಇದನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದಕ್ಕೆ ಕಾರಣ ಇದೆ. ಏಕೆಂದರೆ, ಇದೆಲ್ಲ ಕೇವಲ ಸಾಂಕೇತಿಕವಲ್ಲ. ಇದಕ್ಕೆ ಪೂರಕವಾಗಿಯೇ ಈ ಅವಧಿಯಲ್ಲಿಯೇ ದಲಿತ ಸಾಹಿತ್ಯ ಸಂಪುಟಗಳ ಸರಣಿಯಲ್ಲಿ ಪ್ರಥಮ ಬಾರಿಗೆ ಈಗಾಗಲೇ ಆರು ಸಂಪುಟಗಳು ಪ್ರಕಟವಾಗಿವೆ. ಏಳನೆಯ ಸಂಪುಟ ಅಚ್ಚಿನಲ್ಲಿ ಇದೆ. ಈ ಸಂಪುಟದ ಸಂಚಾಲಕರಾಗಿ ಕನ್ನಡದ ಹಿರಿಯ ವಿದ್ವಾಂಸ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಕಾರ್ಯ ನಿರ್ವಹಿಸಿದ್ದಾರೆ. ಈ ಸಂಪುಟಗಳ ಸಂಪಾದಕರಾಗಿ ಕನ್ನಡದ ಹೆಸರಾಂತ ದಲಿತ ಲೇಖಕರು ಕಾರ್ಯ ನಿರ್ವಹಿಸಿದರು. ಇನ್ನೂ ಮೂರು ಸಂಪುಟಗಳನ್ನು ತರಲು ಪರಿಷತ್ತು ಒಪ್ಪಿಕೊಂಡು ಅದಕ್ಕೆ ಸಂಪಾದಕರನ್ನೂ ನೇಮಿಸಲಾಗಿತ್ತು. ಆದರೆ, ಅವರ ಅನಾಸಕ್ತಿಯ ಕಾರಣವಾಗಿ ಆ ಕೆಲಸ ಮುಂದುವರಿಯಲಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಲು ಬಯಸುವೆ.

ದಲಿತ ಸಂಪುಟಗಳನ್ನು ಪ್ರಕಟಿಸುವುದಕ್ಕೆ ಮಾತ್ರ ನನ್ನ ಬದ್ಧತೆ ನಿಲ್ಲಲಿಲ್ಲ. ಕಳೆದ ವರ್ಷ ಅಂದರೆ, ೨೦೦೯ ರ ಆಗಸ್ಟ್‌ನಲ್ಲಿ ಕೋಲಾರದಲ್ಲಿ ಅಖಿಲ ಕರ್ನಾಟಕ ದಲಿತ ಸಾಹಿತ್ಯ ಸಮ್ಮೇಳನವನ್ನೂ ಪ್ರಸಿದ್ಧ ದಲಿತ ಲೇಖಕ ಡಾ.ಎಲ್.ಹನುಮಂತಯ್ಯ ಅವರ ಅಧ್ಯಕ್ಷತೆಯಲ್ಲಿ ಸಂಘಟಿಸಲಾಗಿತ್ತು. ಎರಡು ದಿನಗಳ ಆ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಯಿತು. ಆ ಮಟ್ಟದ ಮತ್ತು ಆ ಬಗೆಯ ಸಾಹಿತ್ಯ ಸಮ್ಮೇಳನವೊಂದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಅದೇ ಮೊದಲು ಏರ್ಪಡಿಸಲಾಗಿತ್ತು ಎಂಬುದನ್ನು ಇಲ್ಲಿ ಪ್ರಸ್ತಾಪಿಸಲು ಬಯಸುವೆ. ಈ ಸಮ್ಮೇಳನದಲ್ಲಿ ಎಲ್ಲ ಗೋಷ್ಠಿಗಳಲ್ಲಿ ದಲಿತರು ಮಾತ್ರ ಇರುವಂತೆ ನಿಗಾ ವಹಿಸಲಾಗಿತ್ತು. ಅವರು ಏನು ಹೇಳುತ್ತಾರೆ ಎಂಬುದನ್ನು ಉಳಿದ ಎಲ್ಲ ಸಮುದಾಯಗಳ ಜನರು ಕೆಳಗೆ ಕುಳಿತು ಕೇಳಿಸಿಕೊಂಡುದು ಅರ್ಥಪೂರ್ಣವಾಗಿತ್ತು. ಇದು ಕೂಡ ಸಾಂಕೇತಿಕವಾದುದು ಆಗಿರಲಿಲ್ಲ. ಇದನ್ನು ಕೂಡ ಬುದ್ಧಿಪೂರ್ವಕವಾಗಿಯೇ ಮಾಡಲಾಗಿತ್ತು. ಈ ಎರಡೂ ಪ್ರಯತ್ನಗಳನ್ನು, ಅಂಚಿನಲ್ಲಿ ಇರುವ ಒಂದು ಸಮುದಾಯವನ್ನು ಕೇಂದ್ರಕ್ಕೆ ತರುವ ದಿಸೆಯಲ್ಲಿನ ದಿಟ್ಟ ಹೆಜ್ಜೆಗಳು ಎಂದು ಯಾರಾದರೂ ಗುರುತಿಸುತ್ತಾರೆ ಎಂದು ಭಾವಿಸಿದ್ದೇನೆ.

ದಲಿತ ಸಾಹಿತ್ಯ ಸಂಪುಟಗಳಂತೂ ಕನ್ನಡ ಸಾಹಿತ್ಯದಲ್ಲಿ ಚಿರಕಾಲ ಉಳಿಯುವ ಸಂಪುಟಗಳು ಆಗಿದ್ದು ಇದನ್ನು ಒಂದು ವಿಶ್ವವಿದ್ಯಾಲಯ ಮಾಡಬೇಕಾದ ಕೆಲಸ ಎಂದು ಅನೇಕ ವಿದ್ವಾಂಸರು ನನ್ನ ಮುಂದೆ ಹೇಳಿದರು. ಇದು ನಾವು ಮಾಡಿದ ಕೆಲಸದ ಉಪಯುಕ್ತತೆಯನ್ನೂ ಸಾರ್ಥಕತೆಯನ್ನೂ ಸಾಬೀತು ಮಾಡುತ್ತದೆ. ಇಂಥದು ಮಾತ್ರ ಇತಿಹಾಸದಲ್ಲಿ ಉಳಿಯುತ್ತದೆ.

ಇದೀಗ ಮಹಿಳಾ ಸಂಪುಟಗಳ ವಿಚಾರವನ್ನು ಪ್ರಸ್ತಾಪಿಸಲು ಬಯಸುತ್ತೇನೆ. ಕನ್ನಡದಲ್ಲಿ ಲೇಖಕಿಯರ ಸಾಧನೆ ಸಣ್ಣದೇನೂ ಇಲ್ಲ. ಆದರೆ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮಗೆ ಸಿಗಬೇಕಾದ ಸ್ಥಾನ ಸಿಕ್ಕಿಲ್ಲ ಎಂಬ ಅಸಮಾಧಾನ, ಆಕ್ರೋಶ ಅವರಲ್ಲಿ ಇದೆ. ಕನ್ನಡದ ವಿಮರ್ಶೆಯೂ ತಮಗೆ ನ್ಯಾಯ ಕೊಟ್ಟಿಲ್ಲ ಎಂಬ ದೂರು ಅವರದು. ಇದು, ನಮ್ಮ ಸಾಮಾಜಿಕ ಸಂರಚನೆಯಲ್ಲಿಯೇ ಇರುವ ಸಮಸ್ಯೆ ಎಂದು ಯಾರಿಗಾದರೂ ಅರ್ಥವಾಗುತ್ತದೆ. ಅದು ಸಾಹಿತ್ಯ ಮುಂತಾದ ಕ್ಷೇತ್ರಗಳಿಗೂ ವಿಸ್ತರಿಸಿದೆ.

ದೇಶದ ಮತ್ತು ನಾಡಿನ ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಮಹಿಳಾ ಸಮುದಾಯ ಕೂಡ ಅಂಚಿನಿಂದ ಕೇಂದ್ರದ ಕಡೆ ಚಲಿಸುವ ಹೋರಾಟವನ್ನು ಸತತವಾಗಿ ನಡೆಸಿಕೊಂಡು ಬಂದಿದೆ. ಅದು ರಾಜಕೀಯ ಕ್ಷೇತ್ರವೇ ಇರಲಿ, ಸಾಮಾಜಿಕ ಕ್ಷೇತ್ರವೇ ಇರಲಿ ಅಥವಾ ಸಾಹಿತ್ಯ ಕ್ಷೇತ್ರವೇ ಇರಲಿ ಅಲ್ಲಿ ಸಮಾನತೆಗಾಗಿ ಮಹಿಳೆಯ ಹೋರಾಟ ನಿರಂತರವಾಗಿ ನಡೆದುಕೊಂಡು ಬಂದಿದೆ. ನಾನು ಅಧ್ಯಕ್ಷನಾಗಿ ಚುನಾಯಿತನಾದ ನಂತರ ಈ ಸಮುದಾಯಕ್ಕೂ ಅವರಿಗೆ ನ್ಯಾಯವಾಗಿ ಸಿಗಬೇಕಾದ ಸ್ಥಾನ ದೊರಕಿಸಲು ನಿರಂತರವಾಗಿ ಪ್ರಯತ್ನ ಮಾಡಿದ್ದೇನೆ. ಇದು ಕೂಡ ಸಾಂಕೇತಿಕವಾದುದು ಅಲ್ಲ ಎಂದು ಇಲ್ಲಿ ಸ್ಪಷ್ಟಪಡಿಸಲು ಬಯಸುವೆ.

ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಹೇಗೆ ದಲಿತರಿಗಾಗಿ ಒಂದು ಸಮ್ಮೇಳನ ನಡೆದಿರಲಿಲ್ಲವೋ ಹಾಗೆಯೇ ಮಹಿಳೆಯರಿಗಾಗಿ ಒಂದು ಸಮ್ಮೇಳನವೂ ನಡೆದಿರಲಿಲ್ಲ. ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಮಹಿಳಾ ಸಮಾವೇಶ ನಡೆದಿತ್ತು. ಸಮಾವೇಶಕ್ಕೂ ಸಮ್ಮೇಳನಕ್ಕೂ ವ್ಯತ್ಯಾಸ ಇದೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಹಾಗೆಯೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಹೆಸರಾಂತ ಲೇಖಕಿ ಡಾ.ಸುಧಾ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಈ ಸಮ್ಮೇಳನವು ದಲಿತ ಸಮ್ಮೇಳನಕ್ಕಿಂತ ಮುಂಚೆಯೇ ೨೦೦೯ರ ಮಾರ್ಚ್‌ನಲ್ಲಿ ನಡೆಯಿತು. ಅದು ಕೂಡ ಅತ್ಯಂತ ಯಶಸ್ವಿ ಸಮ್ಮೇಳನ ಎಂದು ಹೆಸರು ಮಾಡಿತು.

ಮಹಿಳೆಯರಿಗೆ ಸಿಗಬೇಕಾದ ಸ್ಥಾನಮಾನಗಳನ್ನು ಕೊಡುವ ಪರಿಷತ್ತಿನ ಮತ್ತು ನನ್ನ ಬದ್ಧತೆಯ ಮುಂದುವರಿಕೆಯಾಗಿ ಇದೀಗ ಮಹಿಳಾ ಸಾಹಿತ್ಯ ಸಂಪುಟಗಳು ನಿಮ್ಮ ಕೈಯಲ್ಲಿ ಇವೆ. ಕನ್ನಡದ ಪ್ರಸಿದ್ಧ ಚಿಂತಕಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಯಾದ ಸೋದರಿ ಡಾ.ಮಲ್ಲಿಕಾ ಘಂಟಿಯವರು ಮಹಿಳಾ

ಸಾಹಿತ್ಯ ಸಂಪುಟಗಳ ಹೊಳಹನ್ನು ನನ್ನ ಮುಂದೆ ಇಡುತ್ತಿದ್ದಂತೇ ಒಂದು ಕ್ಷಣವೂ ತಡಮಾಡದೇ ಆಗಬಹುದು ಎಂದು ನಿರ್ಣಯಿಸಿ ಕಥೆ, ವಿಮರ್ಶೆ, ಸ್ತ್ರೀವಾದಿ ಚಿಂತನೆ, ಕಾವ್ಯ,



ಅಂಕಣ, ಲಲಿತ ಪ್ರಬಂಧ, ಜಾನಪದ ಮತ್ತು ಸಂಕೀರ್ಣ ಸಂಪುಟಗಳನ್ನು ಹೊರತರಲು ಯೋಜನೆ ರೂಪಿಸಿದೆವು. ನಾನು ಎಲ್ಲ ಸಂಪುಟಗಳ ಪ್ರಧಾನ ಸಂಪಾದಕನಾಗಿ ಇರುವುದು, ಡಾ.ಮಲ್ಲಿಕಾ ಅವರು ಮಾಲಿಕೆ ಸಂಪಾದಕರಾಗಿ ಇರುವುದು ಮತ್ತು ಪ್ರತಿ ಸಂಪುಟಕ್ಕೂ ಒಬ್ಬೊಬ್ಬರು ಸಂಪಾದಕರನ್ನು ನೇಮಿಸುವುದು ಎಂದು ತೀರ್ಮಾನಿಸಿದೆವು. ಅದೇ ರೀತಿ ಸಂಪುಟಗಳ ಸಂಪಾದಕರಾಗಿ ಡಾ. ಪದ್ಮನಿ ನಾಗರಾಜು, ಡಾ. ಎಂ. ಎಸ್. ಆಶಾದೇವಿ, ಡಾ. ಮಲ್ಲಿಕಾ ಘಂಟಿ, ಡಾ. ಪಿ. ಚಂದ್ರಿಕಾ, ಪ್ರತಿಭಾ ನಂದಕುಮಾರ್, ಡಾ. ತಮಿಳ್ ಸೆಲ್ವಿ ಮತ್ತು ಬಾ. ಹ. ರಮಾಕುಮಾರಿ ಹಾಗೂ ಡಾ. ಎನ್. ಲಕ್ಷ್ಮಿ ಅವರು ಕ್ರಮವಾಗಿ ಆಯಾ ಸಂಪುಟಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಲು ಒಪ್ಪಿಕೊಂಡರು.

ಈ ಎಲ್ಲ ಸಂಪಾದಕರು ಪುರುಷರನ್ನು ಮೀರಿಸುವ ಹಾಗೆ ಅತ್ಯಂತ ಕಡಿಮೆ ಕಾಲದಲ್ಲಿ ತಮ್ಮ ಸಂಪುಟಗಳನ್ನು ಸಿದ್ಧಪಡಿಸಿ ಅಧ್ಯಯನ ಪೂರ್ಣವಾದ ಪ್ರಸ್ತಾವನೆಗಳನ್ನೂ ಬರೆದು ಕೊಟ್ಟಿದ್ದಾರೆ. ಈ ಕೆಲಸ ಇಲ್ಲಿಗೇ ಮುಗಿಯಿತು ಎಂದು ನಾನು ಭಾವಿಸಿಲ್ಲ. ಇವೆಲ್ಲ ಒಳ್ಳೆಯ ಆರಂಭಗಳು ಎಂಬ ಭಾವನೆ ನನ್ನದು. ಕೆಲಸ ಮಾಡುವ ಕರ್ತೃತ್ವ ಶಕ್ತಿ ಇರುವವರಿಗೆ ಆಕಾಶವೇ ಮಿತಿಯಾಗಿರುತ್ತದೆ. ಮತ್ತು ಇಂಥ ಕೆಲಸಗಳು ಮುಂದುವರಿಯುತ್ತಲೇ ಇರಬೇಕು ಎಂಬುದರ ಒಂದು ಸೂಚನೆಯಾಗಿ ಹಾಗೂ ಇಂಥ ಕೆಲಸಗಳಿಗೆ ಒಂದು ಒಳ್ಳೆಯ ಆರಂಭವನ್ನು ಒದಗಿಸಬೇಕು ಎಂದು ಈ ಸಂಪುಟಗಳನ್ನು ರೂಪಿಸಲಾಗಿದೆ. ಇಲ್ಲಿ ನಾವು ಸಂಪಾದಿಸಿರುವ ಒಂದೊಂದು ಸಂಪುಟವನ್ನೇ ಹಲವು ಸಂಪುಟಗಳಾಗಿ ರೂಪಿಸಲು ಅವಕಾಶ ಇದೆ ಎಂಬುದೂ ನಮ್ಮ ಗಮನದಲ್ಲಿ ಇದೆ.

ಗಾರ್ಗಿ ಅತ್ಯಂತ ಪ್ರಖರ ವಿಚಾರವಾದಿ, ಪ್ರಶ್ನೆ ಕೇಳುವ ತನ್ನ ಹಕ್ಕನ್ನು ಪ್ರಾಣವನ್ನು ಪಣಕ್ಕೆ ಇಟ್ಟು ಉಳಿಸಿಕೊಂಡವಳು. ಗಾರ್ಗಿ ಮತ್ತು ಯಾಜ್ಞವಲ್ಕರ ಸಂವಾದಕ್ಕೆ ಮತ್ತು ಚರ್ಚೆಗೆ ನಮ್ಮ ಉಪನಿಷತ್ತುಗಳಲ್ಲಿ ಅನೇಕ ಸಾಕ್ಷಿಗಳು ಇವೆ. ನಮ್ಮದು ಒಂದು ಕಾಲದಲ್ಲಿ ಮಾತೃಪ್ರಧಾನ ಸಂಸ್ಕೃತಿ. ಇದು ಪಿತೃಪ್ರಧಾನ ಸಂಸ್ಕೃತಿಯಾಗಿ ಪರಿವರ್ತನೆಯಾಗುವುದರ ಜೊತೆಗೆ ಸ್ತ್ರೀ ಕುಲ ಅಂಚಿಗೆ ಸರಿಯಿತು. ಈ ಹಿನ್ನಡೆ ಅವರಿಗೆ ಎಲ್ಲ ಕ್ಷೇತ್ರದಲ್ಲಿಯೂ ಆಯಿತು. ಇದನ್ನು ಒಂದು ಹಿನ್ನಡೆ ಎಂದು ಅವರು ಭಾವಿಸದೇ ಒಂದು ಸವಾಲು ಎಂದು ಸ್ವೀಕರಿಸಿ, ಒಂದು ಪಂಥಾಹ್ವಾನ ಎಂದು ಸ್ವೀಕರಿಸಿ ತಮಗೆ ಸಲ್ಲಬೇಕಾದ ಸ್ಥಾನಕ್ಕಾಗಿ ಮಹಿಳೆಯು ಬರೀ ಭಾರತದಲ್ಲಿ ಮಾತ್ರವಲ್ಲ ಜಾಗತಿಕವಾಗಿಯೂ ತನ್ನ ಪ್ರಯತ್ನ ನಡೆಸಿದ್ದಾಳೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೧೯ನೇ ಶತಮಾನದ ಆದಿಯಲ್ಲಿಯೇ "ಅರ್ಧ ಜನಸಂಖ್ಯೆಗೆ ಸಿಗಬೇಕಾದ ನ್ಯಾಯಕ್ಕಾಗಿ' ಧ್ವನಿ ಎತ್ತಿದ ಅನೇಕ ನಿದರ್ಶನಗಳು ನಮಗೆ ಸಿಗುತ್ತವೆ. ಆದಾಗ್ಯೂ, ಮಹಿಳಾ ಸಾಹಿತ್ಯ ಎನ್ನುವುದು ಅಡುಗೆ ಮನೆಯ ಸಾಹಿತ್ಯ ಎಂಬ ಮೂದಲಿಕೆಗೆ ಒಳಗಾಯಿತು. ವಾಸ್ತವದಲ್ಲಿ ಮಹಿಳೆಯರ ಸಾಹಿತ್ಯ ಅಡುಗೆ ಮನೆ ಸಾಹಿತ್ಯವಾಗಿರದೇ ಅದು ಪುರುಷ ಸಾಹಿತ್ಯಕ್ಕೆ ಎಲ್ಲ ರೀತಿಯಲ್ಲಿಯೂ ಸಮಾನವಾಗಿರುವುದನ್ನು ಯಾವ ಪಕ್ಷಪಾತವಿಲ್ಲದೇ ನೋಡುವ ಕಣ್ಣಿಗೆ ಕಾಣಿಸುತ್ತದೆ.



ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಮಹಿಳೆಯರು ಪಾಲುಗೊಂಡುದು ಮತ್ತು ಆಯಾ ಪ್ರಕಾರಗಳಲ್ಲಿ ಸಮರ್ಥವಾಗಿ ಅವರು ಅಭಿವ್ಯಕ್ತಿಸಿದ್ದುದು ಕನ್ನಡ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ಕಾಣಿಸುತ್ತದೆ. ಅಲ್ಲಿ ಹಲವು ಮೇರು ಪ್ರತಿಭೆಗಳು ಮೂಡಿ ಬಂದಿರುವುದೂ ಗಮನಾರ್ಹ. ಈ ಸಾಧನೆಯನ್ನು ಅವರು ಮಾಡಿದ್ದು ಅನೇಕ ಅಡ್ಡಿ ಆತಂಕಗಳ ನಡುವೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸಲೇಬೇಕು.

ಮೊದಲೇ ಇಲ್ಲಿ ಪ್ರಸ್ತಾಪಿಸಿದ ಹಾಗೆ ೧೯ನೇ ಶತಮಾನದ ಆದಿಯಲ್ಲಿಯೇ ಲೇಖಕಿಯರ ಧ್ವನಿ ಕೇಳಿ ಬಂದರೂ ಅವರ ಸಾಹಿತ್ಯಕ್ಕೆ ೧೯೮೦ರ ದಶಕದ ವರೆಗೆ ಸಿಗಬೇಕಾದ ಮನ್ನಣೆ ಸಿಗಲಿಲ್ಲ. ಬಹುಶಃ ಅದೇ ಕಾರಣಕ್ಕಾಗಿ "ಸ್ತ್ರೀವಾದಿ ಚಿಂತನೆ" ಎಂಬ ಹೊಸ ಆಲೋಚನಾ ಕ್ರಮ ಹುಟ್ಟಿಕೊಂಡಿತು. ಮಹಿಳಾ ಸಾಹಿತ್ಯವನ್ನು ಅದರ ನಿಜಾರ್ಥದಲ್ಲಿ ಗುರುತಿಸುವ ಹಾಗೂ ಅವರ ಸಾಹಿತ್ಯಕ್ಕೆ ಒಂದು ಸ್ಥಾನ ನಿರ್ದೇಶನ ಮಾಡುವ ಕೆಲಸವನ್ನು ಈ ಸ್ತ್ರೀವಾದಿ ಚಿಂತನೆ ಮೊದಲ ಬಾರಿಗೆ ರೂಪಿಸಿತು. ಈ ಚಿಂತನೆಯ ಮುಖ್ಯ ಉದ್ದೇಶವೇ ಮಹಿಳಾ ಸಾಹಿತ್ಯ ಕುರಿತ ಹಳೆಯ ವಿನ್ಯಾಸವನ್ನು ಬದಲಿಸುವುದು ಹಾಗೂ ಹೊಸ ಮೀಮಾಂಸೆಯನ್ನು ನಿರ್ಮಿಸುವುದು ಆಗಿತ್ತು. ಇದು ಒಂದು ರೀತಿಯಲ್ಲಿ ಮಹಿಳಾ ಸಾಹಿತ್ಯದ ಅವಲೋಕನಕ್ಕೆ ಹೊಸ ಪರಿಭಾಷೆಯನ್ನು ನಿರ್ಮಿಸಿತು. ಹೆಚ್ಚ ಕಡಿಮೆ ಅದೇ ಸಮಯದಲ್ಲಿ ಕನ್ನಡದಲ್ಲಿ ಬಂಡಾಯ ಸಾಹಿತ್ಯ ಚಳವಳಿಯೂ ಆರಂಭವಾಯಿತು. ೧೯೭೯ ರಲ್ಲಿ ಬೆಂಗಳೂರಿನಲ್ಲಿ ಮೊದಲ ಬಂಡಾಯ ಸಾಹಿತ್ಯ ಸಮ್ಮೇಳನ ನಡೆದಿತ್ತು. ಅಲ್ಲಿ ಮತ್ತು ತದನಂತರ ಬಂಡಾಯ ಸಾಹಿತ್ಯ ಕೂಡ ಕನ್ನಡ ವಿಮರ್ಶೆಗೆ ಹೊಸ ಪರಿಭಾಷೆಯ ಅಗತ್ಯವಿದೆ ಎಂದು ಪ್ರತಿಪಾದಿಸಿತು, ಆಗ್ರಹಿಸಿತು. "ನಮ್ಮ ಸಾಹಿತ್ಯವನ್ನು ನಿಕಷಕ್ಕೆ ಒಡ್ಡಲು ನಿಮಗೆ ಬೇರೆ ದೃಷ್ಟಿಕೋನ ಬೇಕು" ಎಂದು ಬಂಡಾಯ ಮತ್ತು ದಲಿತ ಲೇಖಕರು ಆಗ್ರಹಿಸಿದರು. ಮಹಿಳಾ ಲೇಖಕಿಯರು ಕೂಡ ಇದನ್ನೇ ಪ್ರತಿಪಾದಿಸಿದರು. ಮತ್ತು ಅವರು ಈ ಕೆಲಸವನ್ನು ಪುರುಷರು ಮಾಡಿಯಾರು ಎಂದು ಕಾಯುತ್ತ ಕುಳಿತುಕೊಳ್ಳದೇ ತಾವೇ ಮೇಲ್ಪಂಕ್ತಿ ಹಾಕಿದರು. ದಲಿತ ಮತ್ತು ಬಂಡಾಯ ಲೇಖಕರ ಹಾಗೆಯೇ, "ನಮ್ಮ ಬರವಣಿಗೆಯನ್ನು ನೋಡಬೇಕಾದ ಕ್ರಮ ಇದು" ಎಂದು ಅವರು

ಹೇಳಿಕೊಡಲು ಯತ್ನಿಸಿದರು. ಅದರಲ್ಲಿ ಅವರು ಸಫಲರೂ ಆದರು. ಆ ನೂತನ ಚಿಂತನ ಕ್ರಮ, ದೃಢತೆ, ತಮ್ಮನ್ನು ತಾವು ಮುಖ್ಯ ವೇದಿಕೆಯ ಮೇಲೆ ತಂದುಕೊಳ್ಳಲು ಅವರು ಹೇಗೆ ಹೆಣಗಿದರು ಎಂಬುದಕ್ಕೆ ಈ ಎಲ್ಲ ಸಂಪುಟಗಳು ಕನ್ನಡಿ ಹಿಡಿಯುವಂತೆ ಇವೆ. ಅದನ್ನೆಲ್ಲ ಒಂದು ಬೃಹತ್ ವೇದಿಕೆ ಮೇಲೆ ಬಿಂಬಿಸುವ ಕೆಲಸವನ್ನು ಪರಿಷತ್ತು ಈಗ ಮಾಡಿದೆ. ಆಧುನಿಕ ಕನ್ನಡದ ಮಹಿಳೆಯ ಎಲ್ಲ ಪ್ರಮುಖ ಪ್ರಕಾರಗಳ ಪ್ರಾತಿನಿಧಿಕ ಬರವಣಿಗೆಯನ್ನು ಇಲ್ಲಿ ಸಂಕಲಿಸಿ ಕೊಡಲು ಒಂದು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಇದು ಒಂದು ಅನನ್ಯ ಪ್ರಯತ್ನ. ಏಕೆಂದರೆ ಇದನ್ನು ಬೇರೆಲ್ಲೂ ಇದುವರೆಗೆ ಮಾಡಲಿಲ್ಲ. ಮಾಡಬೇಕು ಎಂದು ಯಾರಿಗೂ ಅನಿಸಲಿಲ್ಲ.

ನಮ್ಮ ಕನ್ನಡದ ಲೇಖಕಿಯರು ಹೇಗೆ ಯೋಚಿಸಿದರು. ಅವರ ಅನುಭವ ಲೋಕ ಹೇಗೆ ಇತ್ತು, ಅದು ಏನನ್ನು ಪರಿಶೋಧಿಸಲು ಪ್ರಯತ್ನ ಮಾಡಿತು. ಅಲ್ಲಿ



ಹೆಣ್ಣಿನ ಆಳದ ತಲ್ಲಣಗಳು, ಸಂತೋಷಗಳು, ದುಃಖಗಳು, ಸುಖಗಳು ಹೇಗೆ ಮೊಗ ಪಡೆದುವು ಎಂಬುದನ್ನು ಈ ಸಂಪುಟಗಳು ಕನ್ನಡಿಗರ ಮುಂದೆ ತೆರೆದು ಇಡುತ್ತವೆ. ಹೆಣ್ಣು ಮತ್ತು ಗಂಡಿನ ಸಂವೇದನೆಯ ನಡುವೆ ಇರುವ ಭಿನ್ನತೆಗಳನ್ನು ಹಿಡಿದು ಇಡಲು ಈ ಸಂಪುಟಗಳು ಯಶಸ್ವಿಯಾಗುತ್ತವೆ ಎಂದು ನಾನು ಭಾವಿಸಿದ್ದೇನೆ. ಕನ್ನಡದ ಓದುಗರು ಈ ಸಂಪುಟಗಳನ್ನು ಪ್ರೀತಿಯಿಂದ ಎದೆಗೆ ಅವಚಿಕೊಳ್ಳುತ್ತಾರೆ ಎಂಬ ನಂಬಿಕೆ ನನ್ನದು. ಮತ್ತು ಸ್ತ್ರೀ ಸಾಹಿತ್ಯ ಕುರಿತ ಉನ್ನತ ಅಧ್ಯಯನಕ್ಕೆ ಈ ಸಂಪುಟಗಳು ಆಕರಗಳು ಆಗುತ್ತವೆ ಎಂದೂ ನಾನು ಪ್ರಬಲವಾಗಿ ನಂಬಿದ್ದೇನೆ. ಇಂಥ ಕೆಲಸವನ್ನು ನಮ್ಮ ಅವಧಿಯಲ್ಲಿ ಮಾಡಿ ಪೂರೈಸುತ್ತಿರುವುದಕ್ಕೆ ನನ್ನ ಮನಸ್ಸಿನಲ್ಲಿ ಸಾರ್ಥಕ ಭಾವನೆ ಮೂಡಿದೆ.

ಈ ಎಲ್ಲ ಸಂಪುಟಗಳ ಎಲ್ಲ ಸಂಪಾದಕಿಯರಿಗೆ ಮತ್ತು ಮಾಲಿಕೆಯ ಸಂಪಾದಕರಾದ ಡಾ.ಮಲ್ಲಿಕಾ ಘಂಟಿಯವರಿಗೆ ನನ್ನ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳನ್ನು ಅಂದವಾಗಿ ಹೊರಗೆ ತರಲು ಮತ್ತು ಸಂಪಾದಕರ ಜೊತೆಗೆ ಸಂಯೋಜಕನ ಕೆಲಸ ಮಾಡಲು ಪರಿಷತ್ತಿನ ಪ್ರಕಟಣೆಯ ವಿಭಾಗದ ರಾಜ್ಯ ಸಂಚಾಲಕರಾದ ಡಾ. ಪದ್ಮರಾಜ ದಂಡಾವತಿಯರು ಬಹುವಾಗಿ ಶ್ರಮಿಸಿದ್ದಾರೆ. ಅವರ ಜೊತೆಗೆ ಪ್ರಕಟಣಾ ವಿಭಾಗದ ಬಿ.ಎಂ.ನಾಗರತ್ನ ಅವರೂ ಕೈ ಜೋಡಿಸಿದ್ದಾರೆ. ಪರಿಷತ್ತಿನ ಬಿ.ಎಂ.ಶ್ರೀ ಅಚ್ಚುಕೂಟದ ಸಿಬ್ಬಂದಿ ಎಂದಿನಂತೆ ಹಗಲೂ ರಾತ್ರಿ ದುಡಿದು ಈ ಸಂಪುಟಗಳನ್ನು ಸಕಾಲದಲ್ಲಿ ಮುದ್ರಿಸಿ ಕೊಟ್ಟಿದ್ದಾರೆ. ಈ ಸಂತೋಷದ ಗಳಿಗೆಯಲ್ಲಿ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ನಾಡೋಜ ಡಾ.ಮನು ಬಳಿಗಾರ್

ಅಧ್ಯಕ್ಷರು

## ಮಾಲಿಕೆಯ ಸಂಪಾದಕರ ನುಡಿ

"ಕಲ್ಲಕಾಲಲಿ ತುಳಿದು ಕೋಮಲಾಂಗಿಯ ಮಾಡಿದರು...." ಎಂಬ ಈ ಸಾಲು ಮಹಿಳಾ ಬದುಕಿಗೆ ಅನ್ವಯಿಸಿಕೊಂಡು ಹೇಳುವುದರ ಹಿಂದೆ ಮನುಕುಲ ಚರಿತೆಯ ಏಳು ಬೀಳಿನ ಅಗಣಿತ ಹಾದಿಗಳ ಪಯಣವಿದೆ. ಈ ಹಾದಿಗಳ ಅನ್ವೇಷಣೆಯೆಂದರೆ ಗಂಡು ರಾಜಕಾರಣದ ಮೋಸದ ಕಣ್ಣಕಟ್ಟಿನ ಆಟದ ತಂತ್ರಗಳನ್ನು ಬಯಲುಗೊಳಿಸುವುದೇ ಆಗಿದೆ. ಮಾನವ ಚರಿತ್ರೆಯನ್ನು ಅರಿಯುವುದೆಂದರೆ ಸಮಾಜವನ್ನು ಅರ್ಥೈಸಿಕೊಳ್ಳುವಿಕೆಯೆಂದೆ ಭಾವಿಸಲಾಗಿದೆ. ಈ ಅರ್ಥೈಸಿಕೊಳ್ಳುವಿಕೆಯು ಪುರುಷರೂಪಿತ, ದ್ವೇಷಪೂರಿತ ವ್ಯಾಖ್ಯಾನಗಳ ಹಿಂದೆ ಬಹುದೊಡ್ಡ ಶಕ್ತಿಯಾಗಿ ವರ್ಣಾಧಾರಿತವಾದ ರಾಜಕಾರಣವಿದೆ. ವೇದ, ಉಪನಿಷತ್ತು, ಸ್ಮೃತಿ, ಅರ್ಥಶಾಸ್ತ್ರ, ಪುರಾಣಾದಿಯಾಗಿ ಶಾಸ್ತ್ರ, ಧರ್ಮಕಾವ್ಯ ಕಾರಣಗಳು ವರ್ಣಾಧಾರಿತ ಪುರುಷಹಿತಾಸಕ್ತಿ ರಾಜಕಾರಣವನ್ನು ಸಕ್ರಿಯಗೊಳಿಸುವಾಗ ಸ್ತ್ರೀಯನ್ನು ಗುರಿಯಾಗಿಸಿಕೊಂಡದ್ದರ ಹಿಂದೆ ಏನಿತ್ತು ಎಂಬುದೆ ನಮ್ಮೆದುರಿನ ಬಹುದೊಡ್ಡ ಪ್ರಶ್ನೆ, ಈ ಪ್ರಶ್ನೆಗಳನ್ನು ಅಂದಂದಿನ ಕಾಲದ ಸಮಾಜದೊಳಗಿದ್ದ ಅನೇಕ ಮಹಾತ್ಮರು ಹಾಕಿಕೊಂಡಿರುವರು. ಆದರೆ ಯಾವ ಕಾಲದಲ್ಲಿಯೂ ನ್ಯಾಯಸಮ್ಮತವಾದ ಉತ್ತರಗಳನ್ನು ಕಂಡುಕೊಳ್ಳಲು ಆಗಿಲ್ಲ ಎಂಬುದನ್ನು ಚರಿತ್ರೆಯ ಓದು ನಮ್ಮರಿವಿಗೆ ತಂದಿದೆ. ಹೀಗಾಗಿಯೆ ನಾವು ಮತ್ತೇ ಇಂದು ವರ್ತಮಾನದಲ್ಲಿ ನಿಂತು ಹಿಂಚಲನೆಯಿಂದ ಬೆನ್ನ ಹಿಂದಿನ ಕತ್ತಲಿನಲ್ಲಿ ಹುಗಿದು ಹೋಗಿರುವ ಅವಳ ಹೆಜ್ಜೆಗಳ ಆಕಾರಗಳನ್ನು ಹುಡುಕುವ ಮತ್ತೆ ಭವಿಷತ್ತಿನ ಹೆಜ್ಜೆಗಳಿಗೆ ಸುಗಮ ಹಾದಿ ನಿರ್ಮಿಸುವ ಇರಾದೆ ಈ ಶತಮಾನದ ಮಹಿಳೆಯರ ಜಾಗೃತ ಪ್ರಜ್ಞೆಯ ಭಾಗವೆಂದೆ ಭಾವಿಸಿರುವೆ.

ಕಿಂಡಿಯಲ್ಲಿ ಕಂಡ ಜಗತ್ತು : ವೇದ, ಉಪನಿಷತ್ತುಕಾಲೀನ ಸಮಾಜದಲ್ಲಿ ಮಹಿಳೆಯರಿಗೆ ಗೌರವದ ಸ್ಥಾನವಿತ್ತೆಂದು ಸನಾತನಿಗಳು ಅರ್ಧಸತ್ಯಗಳನ್ನು ಪೂರ್ಣ ಸತ್ಯಗಳಾಗಿ ಸುವುದಕ್ಕಾಗಿ ಎಷ್ಟೊಂದು ಹೆಣಗಾಡಿದರು ಎಂಬುದಕ್ಕೆ ಸಾಕ್ಷಿ ಪುರಾವೆಗಳ ಮೊರೆ ಹೋಗುವ ಅಗತ್ಯವಿಲ್ಲ. ಹೊರ ಆಕ್ರಮಣಿಗರು ಮತ್ತು ಒಳ ಮೂಲವಾಸಿಗಳ ಸಂಘರ್ಷ, ಸೌಹಾರ್ದ, ಸಮನ್ವಯತೆಗಳಿಂದ ರೂಪುಗೊಂಡ ಸಮಾಜದಲ್ಲಿ ಹೆಣ್ಣಿನ ಹುಟ್ಟಿನ ಬಗ್ಗೆ ಏಕಾಭಿಪ್ರಾಯಗಳಿಲ್ಲವೆಂಬುದನ್ನು ವೇದಗಳಲ್ಲಿರುವ ಕೆಲವು ಋಕ್ಕಗಳಲ್ಲಿ ಕಾಣಬಹುದು. ಋಗ್ವೆದ ಮತ್ತು ಅಥರ್ವಣ ವೇದಗಳಲ್ಲಿ ಹೆಣ್ಣಿನ ಸಾಮಾಜಿಕ ಸ್ಥಾನಮಾನಗಳ ಕುರಿತಂತೆ ಪ್ರಸ್ತಾಪಿಸಲಾಗಿದೆ. ಋಗ್ವದದಲ್ಲಿ ಗಂಡು ಮಗುವಿನ ಬಗ್ಗೆ ಸಮಾಜದಲ್ಲಿ ಬೇಡಿಕೆಯಿತ್ತು ಎಂದು ಹೇಳಿದರೆ ಅಥರ್ವಣ ವೇದದ ಋಕ್ಕೊಂದರಲ್ಲಿ ಮಗ ಹುಟ್ಟಲೆಂದು ಪ್ರಾರ್ಥನೆಗೈಯುತ್ತಿದ್ದರು ಎಂಬುದರ ಉಲ್ಲೇಖವಿದೆ.

"ಗಂಡು ಮಗುವನ್ನು ಪಡೆಯುವುದಕ್ಕಾಗಿ ವೇದಗಳು ಒಂದು ವಿಶೇಷ ಆಚರಣೆಯನ್ನು ಗೊತ್ತುಪಡಿಸಿವೆ. ಅದನ್ನು 'ಪುಂಸವನ' ಸಂಸ್ಕಾರ ಎಂದು ಕರೆಯುತ್ತಾರೆ. ಇದು

ಮೂರು ತಿಂಗಳ ಗರ್ಭಿಣಿ ಇದ್ದಾಗ ಮಾಡುವ ಒಂದು ಸಂಸ್ಕಾರ". "ಪ್ರಜಾಪತಿಯೆ, ನೀನು ಈ ಗರ್ಭವನ್ನು ಸೃಷ್ಟಿಸಿದ್ದೀಯೆ. ಈ ಗರ್ಭದಿಂದ ಗಂಡು ಸಂತಾನ ಜನಿಸಲಿ. ಹೆಣ್ಣು ಸಂತಾನ ಇನ್ನೆಲ್ಲಿಯಾದರೂ ಆಗಲಿ", "ಪ್ರಜಾಪತಿಯೆ ಹುಟ್ಟುವ ಗಂಡು ಮಗುವನ್ನು ಕಾಪಾಡು. ಅವನನ್ನು ಮಹಿಳೆಯನ್ನಾಗಿ ಮಾಡಬೇಡ" [ಬಿ.ವಿ. ವೀರಭದ್ರಪ್ಪ: ವಿಚಾರ ಸಾಹಿತ್ಯ-ವೇದಗಳಲ್ಲಿಯ ಮಹಿಳೆಯರು] ಎಂಬುದರಲ್ಲಿ ಗಂಡಿನ ಪ್ರಧಾನತೆಯನ್ನು ಸಮಾಜ ಎತ್ತಿಹಿಡಿದು ಹೆಣ್ಣಿನ ಕುರಿತಂತೆ ಸಮಾಜದಲ್ಲಿ ನಕಾರಾತ್ಮಕ ಧೋರಣೆಯಿತ್ತು ಎಂಬುದು ತಿಳಿಯುತ್ತದೆ. ಈ ಶಾಸ್ತ್ರೋಕ್ತ, ವೇದೋಕ್ತ ಸಂಗತಿಗಳು ಕಾಲಾನಂತರದಲ್ಲಿ ಎಲ್ಲ ವರ್ಣಗಳಲ್ಲಿಯು ಈ ನಂಬಿಕೆಗಳು ಆಚರಣೆಗೆ ಬರುವುದಕ್ಕೆ ಉದಾರವಾಗಿ ಶ್ರಮಿಸಿವೆ. ಇಂದಿಗೂ ಚೊಚ್ಚಲು ಗರ್ಭಿಣಿಯರಿಗೆ ಹಳ್ಳಿಗಳಲ್ಲಿ ಅಂಬಲಿಗಡಿಗೆ ಪೂಜೆಮಾಡಿಸುವುದರ ಮೂಲಕ ಸ್ತ್ರೀವಿರೋಧಿ ಧೋರಣೆ ಚಾಲ್ತಿಯಲ್ಲಿರಿಸಿರುವುದನ್ನು ಗಮನಿಸಬಹುದು. ಇದೇ ಆಶಯವನ್ನು ನಮ್ಮ ಜನಪದ ಮಹಿಳೆಯರು ಹಂಬಲಿಸಿರುವುದನ್ನು ಗಮನಿಸುವಾಗ ಲಿಂಗರಾಜಕಾರಣ ವರ್ಣಜಿಗಿತವನ್ನು ಕಾಲದೊಂದಿಗೆ ಹೊಸೆದಿತ್ತು. ಶೂದ್ರ ಮಹಿಳೆಯರು ತಮ್ಮನ್ನು ಬೇಟೆಯಾಡಲು ಬಳಸಿದ್ದ ಹತ್ಯಾರಗಳನ್ನೇ ತನ್ನೊಡಲಿನಲ್ಲಿ ಮತ್ತು ಮಡಿಲಿನಲ್ಲಿಟ್ಟುಕೊಳ್ಳುವುದರ ಹಿಂದೆ ವೈದಿಕ ಹಿತಗಳ ಸಾಮಾಜಿಕ ಒತ್ತಡಗಳಿವೆ.

ಬೇಟೆ ಸಂಸ್ಕೃತಿಯಿಂದ ಕೃಷಿ ಸಂಸ್ಕೃತಿಯೆಡೆಗಿನ ಸಾಗುದಾರಿಯಲ್ಲಿ ಸ್ತ್ರೀ ತನ್ನ ಚರಿತ್ರೆಯ ಕೊಂಡಿಯನ್ನು ಕಳಚಿಕೊಂಡದ್ದಕ್ಕೆ ಕಾರಣಗಳು ಸಿಗುತ್ತವೆ. ನೇಗಿಲಿನ ಆವಿಷ್ಕಾರ, ಬೆಂಕಿಯ ಬಳಕೆ ಹೆಣ್ಣಿನ ಕೈಯಲ್ಲಿಯ ಕಟ್ಟುವಿಕೆಯ ಆಯುಧಗಳನ್ನು ಗಂಡಸು ವಶಪಡಿಸಿಕೊಂಡದ್ದರ ಹಿಂದೆ ಬಹುದೊಡ್ಡ ಚರಿತ್ರೆಯಿದೆ. ಇದನ್ನು ಕುಟುಂಬ, ಖಾಸಗಿ, ಆಸ್ತಿಯ ಉಗಮದೊಂದಿಗೆ ಕಾಣಬಹುದು. ಅಲೆಮಾರಿ ಸಮುದಾಯಗಳು ಕಾದಾಟದಲ್ಲಿಯೇ ಬದುಕುತ್ತಿದ್ದ ಕಾರಣ ಕಾದಾಟಕ್ಕೆ ಗಂಡಿನ ಅಗತ್ಯತೆ ಕಾಣಿಸಿಕೊಂಡಿರಬಹುದು ಎಂದು ಸುಲಭವಾಗಿ ಚರಿತ್ರೆಕಾರರು ಹೇಳಿದ್ದನ್ನು ಗಂಡು ಬೇಡಿಕೆಯನ್ನು ಸಮರ್ಥಿಸುವುದಕ್ಕೆ ಧಾರಾಳವಾಗಿ ಬಳಸಿಕೊಳ್ಳಲಾಗಿದೆ. ಹೀಗೆ ಭಾವಿಸುವುದರ ಮೂಲಕ ಹೆಣ್ಣಿನ ದೈಹಿಕ ಶಕ್ತಿಯನ್ನು ನಿರಾಕರಿಸಲಾಗಿದೆ. ಆಕೆಯ ಶಕ್ತಿಯನ್ನು ಕರ್ತವ್ಯದ ಕಕ್ಷೆಯಲ್ಲಿ ಕಟ್ಟಿಹಾಕಿ ಹಲವು ಪಾತ್ರಗಳ ನಿರ್ವಹಣೆಯನ್ನು ಹೊರಿಸಲಾಗಿದೆ. ಈ ಪಾತ್ರಗಳ ಕುರಿತಂತೆ ಋಗ್ವದದಲ್ಲಿ ಮಾಹಿತಿಗಳು ದೊರೆಯುತ್ತವೆ. ಗಂಡಸಿನ ಅಧೀನದಲ್ಲಿರುವ ಹೆಣ್ಣೊಬ್ಬಳು ನಿಷ್ಠೆಯಿಂದ ಮೂರು ಪಾತ್ರಗಳನ್ನು ಆದ್ಯ ಕರ್ತವ್ಯಗಳೆಂದೂ ಕಡ್ಡಾಯವಾಗಿ ಮಾಡಬೇಕು ಎಂಬುದರ ಹಿಂದೆ ಕುಟುಂಬದ ಪರಿಕಲ್ಪನೆ ಗಟ್ಟಿಗೊಂಡಿರುವುದು ಕಾಣಿಸುತ್ತದೆ. "ಗಂಡನನ್ನು ಪ್ರೀತಿಸುವವಳನ್ನು ಜಯಳೆಂದು ಅಧೀನಕ್ಕೊಳಪಡಿಸಿಕೊಂಡ ಗಂಡನ ಮಕ್ಕಳ ತಾಯಿಯನ್ನು 'ಜಾನಿ'ಯಂದು, ಗಂಡನ ಆಚರಣೆಗಳಲ್ಲಿ ಅವನ ಆಜ್ಞೆಯಂತೆ ಭಾಗಿಯಾದವಳನ್ನು 'ಪತ್ನಿ' ಎಂದು ಕರೆಯುವುದರ ಮೂಲಕ ಪುರುಷಾಧಿಪತ್ಯ ಮುನ್ನೆಲೆಗೆ ಬರತೊಡಗಿದೆ. ರಾಜರು ಮತ್ತು ಬಲಿಷ್ಠ (ಧಾರ್ಮಿಕವಾಗಿ, ಆರ್ಥಿಕವಾಗಿ) ಗಂಡಸರು ಬಹುಪತ್ನಿತ್ವ ಪದ್ಧತಿಯನ್ನು ರೂಢಿಯಲ್ಲಿ ತಂದಿದ್ದರು. ಇದಕ್ಕೆ ವಿರುದ್ಧವಾಗಿ ಕೌತುಕಮಯ ಸಂಗತಿಗಳು ಋಗ್ವದದಲ್ಲಿ ಉಲ್ಲೇಖಿತವಾಗಿವೆ. ಈ ಸಂಗತಿಗಳು ಪ್ರಧಾನತೆಯನ್ನು ಎತ್ತಿ ಹಿಡಿಯುವುದಕ್ಕೆ

ಬಳಕೆಗೊಳ್ಳುವುದಕ್ಕೆ ಉಲ್ಲೇಖಿತವಾದವುಗಳಲ್ಲ. ಇಷ್ಟೊತ್ತಿಗಾಗಲೇ ವರ್ಣವ್ಯವಸ್ಥೆ ಹೆಣ್ಣನ್ನು ಲೈಂಗಿಕ ಶುದ್ಧಾಶುದ್ಧಿಯ ಪ್ರಮೇಯದಲ್ಲಿ ದಾಖಲಿಸಿತ್ತು. ಬಹುಪತಿತ್ವದ ಬಗ್ಗೆ ಕೂಡ ಋಗ್ವದದಲ್ಲಿ ಉಲ್ಲೇಖವಿದೆ." ಒಬ್ಬ ಹೆಂಗಸು ಮೊದಲು ಹತ್ತು ಮಂದಿ ಬ್ರಾಹ್ಮಣರಲ್ಲದ ಗಂಡಂದಿರನ್ನು ಹೊಂದಿರಲಿ, ಒಬ್ಬ ಪುರೋಹಿತ ಅವಳ ಕೈ ಹಿಡಿದರೆ ಅವನೊಬ್ಬನೇ ಅವಳ ಗಂಡನಾಗುತ್ತಾನೆ. ಬ್ರಾಹ್ಮಣರು ಮಾತ್ರ ಅವಳ ಗಂಡ ರಾಜನೂ ಅಲ್ಲ, ವೈಶ್ಯನೂ ಅಲ್ಲ ಎಂದು ಒಂದು ಋಕ್ಕು ಹೇಳುತ್ತದೆ. [ಕನ್ನಡ ಕಾವ್ಯಕಂಡ ಹೆಣ್ಣು, ಸಿ.ವೀರಣ್ಣ ಇದು ವರ್ಣವ್ಯವಸ್ಥೆಯಲ್ಲಿ ಬ್ರಾಹ್ಮಣ್ಯದ ಹಿಡಿತ ಗಟ್ಟಿಗೊಳ್ಳುತ್ತಿರುವುದನ್ನು ಅದೇ ಸಂದರ್ಭದಲ್ಲಿ ಹೆಣ್ಣಿಗೆ ಲೈಂಗಿಕ ಸ್ವಾತಂತ್ರದ (ಬಹುಪತಿತ್ವದ) ಅವಕಾಶವನ್ನು ಕಿತ್ತುಕೊಂಡದ್ದನ್ನು ಬಿಂಬಿಸುತ್ತದೆ. ಋಗ್ವದದ ಕಾಲಕ್ಕಾಗಲೇ ಸೀ ಬದುಕಿನ ಅಧಃಪತನ ಪ್ರಾರಂಭವಾಗಿತ್ತು. ಹೆಣ್ಣಿನ ವಿಷಯದಲ್ಲಿ ವೇದಕಾಲೀನ ಸಮಾಜ ಉದಾರವಾಗಿರಲಿಲ್ಲ. ವೆಂಬುದನ್ನು ಹಲವಾರು ಋಕ್ಕುಗಳಲ್ಲಿ ಸ್ತ್ರೀ ಸಂಬಂಧಿ ಹೇಳಿಕೆಗಳಿರುವುದರ ಮೂಲಕ ನೋಡಬಹುದು. ಹೆಣ್ಣಿನ ಬುದ್ಧಿಯನ್ನು ಅಳೆಯಲು ಸಾಧ್ಯವಿಲ್ಲ.. ಹೆಣ್ಣಿನ ಪ್ರೇಮ ಯಾವಾಗಲೂ ಚಂಚಲ' "ಹೆಣ್ಣಿನ ಹೃದಯ ಕಿರುಬನ ಹೃದಯದಂತಿಹದು" ಎಂಬ ಹೇಳಿಕೆಗಳಿಂದ ಸ್ತ್ರೀಯನ್ನು ಅಪಮಾನಿಸಲಾಗಿದೆ.

ಅತ್ಯಂತ ಕಟ್ಟುನಿಟ್ಟಿನ ನಿಯಮಗಳನ್ನು ವೇದಕಾಲೀನ ಸಮಾಜ ಮಹಿಳೆಯರಿಗೆ ವಿಧಿಸಿತ್ತು. ಕೆಲವು ಪ್ರಸಂಗಗಳಲ್ಲಿ ಧಾರಾಳವಾಗಿ ನಡೆದುಕೊಂಡದ್ದರ ಕುರಿತು ಉಲ್ಲೇಖಗಳಿವೆ. ಹೆಣ್ಣಿಗೆ ವಿದ್ಯೆ ನೀಡುವ ವಿಚಾರದಲ್ಲಿ ಒಂದಿಷ್ಟು ಧಾರಾಳತೆಯನ್ನು ಪ್ರದರ್ಶಿಸಿದೆ. ಅದು ವರ್ಣವ್ಯವಸ್ಥೆಯನ್ನು ಮುಂದಿಟ್ಟುಕೊಂಡೆ ಎನ್ನುವುದನ್ನು ಗಮನಿಸಬೇಕು. ವೇದಗಳ ಕಾಲದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರ ಮಧ್ಯೆ ವಿವಾಹಗಳು ನಡೆದಿರುವ ಉಲ್ಲೇಖಗಳಿವೆ. ಹೀಗಾಗಿ ಈ ಎರಡೂ ವರ್ಣಗಳಿಗೆ ವಿದ್ಯೆಯೆ ಪ್ರಧಾನವಾದ ಸಂಪತ್ತಾದ ಕಾರಣ ಅದನ್ನು ಕುಟುಂಬ ಮೂಲದ ಹೆಣ್ಣು ಮಕ್ಕಳಿಗೂ ಹಂಚಿದ್ದರ ಹಿಂದೆ ಸಾರ್ವತ್ರಿಕ ಹಿತವಿರಲಿಲ್ಲ. ಪುತ್ರನಿಲ್ಲದ ಮನೆಯಲ್ಲಿ ಪುತ್ರಿಯರು 'ಪುತ್ರಿಕಳಾಗಿ ಮಗನ ಕರ್ತವ್ಯಗಳನ್ನು ನಿರ್ವಹಿಸಿರುವರು. ಕ್ಷತ್ರಿಯಳಾದ ಘೋಷಾ ಋಗ್ವೆದದ ಅನೇಕ ಋಕ್ಕೂಗಳನ್ನು ರಚಿಸಿದಳೆಂಬ ಖ್ಯಾತಿಯಿದೆ. "ಲೋಪಾ ಮುದ್ರಾ, ಮಮತಾ, ಉಪಾಲಾ, ಸೂರ್ಯ, ಇಂದ್ರಾಣಿ, ಶಚೀ, ಸರ್ಸರಾಜ್ಞೆ ಮತ್ತು ವಿಶ್ವಾವರ" [ಕನ್ನಡ ಕಾವ್ಯಕಂಡ ಹೆಣ್ಣು, ಸಿ.ವೀರಣ್ಣ] ಇವರೆಲ್ಲರೂ ಋಕ್ಕುಗಳ ಕರ್ತೃಗಳೆಂದು ಹೇಳಲಾಗಿದೆ. ವಿಶ್ವಾವರಳಂತೂ ಅಗ್ನಿಯನ್ನು ಕುರಿತು ಋಕ್ಕುಗಳನ್ನು ರಚಿಸಿದ್ದಲ್ಲದೆ ಯಜ್ಞದಲ್ಲಿ ಋತ್ವಿಕನ ಕಾರ್ಯವನ್ನು ನೆರವೇರಿಸಿದಳೆಂದು ಹೇಳಲಾಗಿದೆ.

ವೇದಗಳ ಕಾಲದಲ್ಲಿಯೇ ಕುಟುಂಬ, ಖಾಸಗಿ ಆಸ್ತಿಯ ಪರಿಕಲ್ಪನೆಗಳು ಗಟ್ಟಿಗೊಂಡು ಸ್ತ್ರೀಮೂಲೀಯತೆಯನ್ನು ನಿರ್ನಾಮ ಮಾಡುವ ಎಲ್ಲ ಯೋಜನೆಗಳು ಸಿದ್ಧಗೊಂಡಂತಿದೆ. ಗಂಡು ಮಗುವನ್ನು ಪಡೆಯುವುದಕ್ಕಾಗಿಯೇ ಹಲವಾರು ಆಚರಣೆಗಳು ಕಾಣಿಸಿಕೊಂಡಿವೆ. ಹುಣ್ಣಿಮೆ ಅಮಾವಾಸ್ಯೆಯ ದಿನ ಯಜ್ಞಯಾಗಾದಿಗಳನ್ನು ವಿಶೇಷವಾದ ರೀತಿಯಲ್ಲಿ ಆಚರಿಸುತ್ತ ದೇವರಿಗೆ ಗಂಡುಮಗುವನ್ನು ನೀಡು ಎಂದು

ಬೇಡಿಕೊಳ್ಳುವ ಆಚರಣೆಗಳು ಸಿಗುತ್ತವೆ. ಐತರೇಯ ಬ್ರಾಹ್ಮಣದಲ್ಲಿ ರಾಜ ಹರಿಶ್ಚಂದ್ರನ ಕಥೆ ಬರುತ್ತದೆ. ಅವನಿಗೆ ನೂರು ಜನ ಹೆಂಡತಿಯರಿದ್ದರೂ ಒಂದೂ ಗಂಡು ಮಗುವಿರಲಿಲ್ಲ. ಅವನ ಆಸ್ಥಾನದ



ಬ್ರಾಹ್ಮಣ ವಿದ್ವಾಂಸರು ಪುತ್ರನ ಪ್ರಾಮುಖ್ಯತೆಯನ್ನು ಅವರಿಗೆ ಹೀಗೆ ವಿವರಿಸಿ ಹೇಳುತ್ತಾರೆ. “ತಂದೆಯ ಋಣ ಮಗನ ಮೇಲಿರುತ್ತದೆ. ತಂದೆಯೂ ಮಗನ ಮುಖ ನೋಡಿದ ಕೂಡಲೇ ಅಮರತ್ವವನ್ನು ಪಡೆದು ಋಣಮುಕ್ತನಾಗುತ್ತಾನೆ.... ಮಗನು ಮುಕ್ತಿಯ ನಾವೆ, ಅತ್ಯುನ್ನತ ಸ್ವರ್ಗದ ಬೆಳಕು. ಹೆಂಡತಿಯು ಜೊತೆಗಾತಿ. ಆದರೆ ಮಗಳು ನೋವಿನ ಶೂಲೆ” [ಬಿ.ವಿ. ವೀರಭದ್ರಪ್ಪ: ವಿಚಾರ ಸಾಹಿತ್ಯ-ವೇದಗಳಲ್ಲಿಯ ಮಹಿಳೆಯರು] ಎಂದು ಉಪದೇಶಿಸುವುದರ ಮೂಲಕ ಹೆಣ್ಣಿನ ಹುಟ್ಟಿನ ಬಗ್ಗೆ ಭಯವನ್ನು ಬಿತ್ತಲಾಯಿತು. ರಾಜನನ್ನು ನಿಯಂತ್ರಿಸುತ್ತಿರುವ ಈ ಪುರೋಹಿತಶಾಹಿ ವರ್ಗದಿಂದಲೇ ಮಹಿಳಾ ಸ್ವಾತಂತ್ರ್ಯದ ಹರಣ ಮತ್ತು ಅವಳ ಅಸ್ತಿತ್ವದ ನಿರಾಕರಣೆಯಾದಂತಿದೆ. ಯಾಕೆ ಈ ಪುರೋಹಿತ ವರ್ಗವು ಹೆಣ್ಣಿಗೆ ಇಂತಹ ಶಿಕ್ಷೆಗಳನ್ನು ನೀಡಿರಬೇಕು ಎಂಬುದನ್ನು ನೋಡುವುದಾದರೆ ಮಾತೃಮೂಲ ಸಂಸ್ಕೃತಿಯ ನಾಯಕತ್ವದಲ್ಲಿದ್ದ ನಿಸರ್ಗಜ್ಞಾನ, ಅವರ ದೈಹಿಕ ಸಾಮರ್ಥ್ಯವನ್ನು ಎದುರಿಸುವ ಶಕ್ತಿ ಸಾಲದ ಪುರೋಹಿತಶಾಹಿ ವರ್ಗವು ಕಾಲಕ್ರಮೇಣ ತಂತ್ರ ಪ್ರಧಾನವಾದ ಪುರುಷಯುಕ್ತಿಯನ್ನು ಬಲಗೊಳಿಸುತ್ತಾ ಸ್ತ್ರೀಮೂಲಿಯ ಬಲಿಷ್ಠ ಗಂಡಸರನ್ನು ನಾಯಕರನ್ನಾಗಿಸಿ ಅವರನ್ನು ವಿಶೇಷವಾಗಿ ನಿಯಂತ್ರಿಸುತ್ತ ಮಾತೃ ಮೂಲ ಸಮುದಾಯಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಹೂಡಿದ ಬಹುದೊಡ್ಡ ಸಂಚು ಮಾನವ ಚರಿತ್ರೆಯಲ್ಲಡಗಿದೆ. ಈ ಸಂಚಿನ ಮೊದಲ ಬಲಿಪಶು ಹೆಣ್ಣು ಎಂಬುದನ್ನು ಕಾಲ ಅರಗಿಸಿಕೊಂಡ ಬಹುದೊಡ್ಡ ಪ್ರಮಾದವಿದು.

ಈ ವೇದಕಾಲೀನ ಸಮಾಜ ಹೆಣ್ಣನ್ನು ಅತ್ಯಂತ ಹೀನಾಯವಾಗಿ ಕಂಡಿದೆ. ಶೂದ್ರರು, ನಾಯಿಗಳು ಮತ್ತು ಕಾಗೆಗಳ ಗುಂಪಿಗೆ ಮಹಿಳೆಯರು ಸೇರುತ್ತಾರೆ ಎಂದು ಹೇಳುವುದರ ಮೂಲಕ ಸ್ತ್ರೀ ಸಮುದಾಯವನ್ನು ಮನುಷ್ಯ ಸಮಾಜದಿಂದ ಹೊರಗಿಟ್ಟಿದೆ. ಬಹುಪತ್ನಿತ್ವವನ್ನು ಮತ್ತು ಪ್ರಭುತ್ವವನ್ನು ಒಪ್ಪಿಕೊಂಡಿರುವ ಈ ಯುಗದಲ್ಲಿ ಮಹಿಳೆಯರನ್ನು ಪ್ರಾಣಿಗಳೊಂದಿಗೆ ಅದರಲ್ಲೂ ಕುದುರೆಗಳೊಂದಿಗೆ ಲೈಂಗಿಕ ಕ್ರಿಯೆಗೆ ಒತ್ತಾಯಿಸಿರುವ ಉಲ್ಲೇಖಗಳಿವೆ. ಕುದುರೆಯನ್ನು ಯಾಕೆ ಆಯ್ಕೆ ಮಾಡಿಕೊಂಡರೆಂದರೆ ಅದರ ಶಕ್ತಿ, ಗಮ್ಯತೆಯ ಕಾರಣದಿಂದ. ರಾಜರಿಗೆ ಬಲಿಷ್ಠ ಗಂಡು ಸಂತಾನದ ಅಗತ್ಯವಿತ್ತು. ಈ ಕಾರಣಕ್ಕಾಗಿ ರಾಣಿಯರನ್ನು ಕುದುರೆಯೊಂದಿಗೆ ಲೈಂಗಿಕ ಕ್ರಿಯೆಗೆ ಒತ್ತಾಯಿಸುವುದಷ್ಟೆ ಅಲ್ಲ ಸ್ವತಃ ಹಿರಿಯ ರಾಣಿಯರು ಕುದುರೆಯ ಮಗ್ಗುಲಲ್ಲಿ ಮಲಗಿ ಬಲಿಷ್ಠಗಂಡು ಮಗುವನ್ನು ನೀಡು ಎಂದು ಪ್ರಾರ್ಥಿಸುತ್ತಿದ್ದರು ಎಂಬ ಪ್ರಸಂಗಗಳನ್ನು ವೇದಕಾಲದಲ್ಲಿ ಗಮನಿಸಬಹುದಾಗಿದೆ.

ಹೆಂಡತಿ ತನ್ನ ಸೇವೆ ಮಾಡಲು ಮತ್ತು ತನ್ನ ವಾರಸುದಾರನನ್ನು ಹೆತ್ತುಕೊಡಲು ದೇವರು ಕೊಟ್ಟಿರುವ ಹೆಣ್ಣು. ಅವಳು ತನ್ನ 'ಪೋಷ್ಯ'ಳು ಅಂದರೆ ಆಶ್ರಿತಳು ಎಂದು ಹೇಳಲಾಗಿದೆ. ಬಹುಪತ್ನಿತ್ವವನ್ನು ಒಪ್ಪಿದ ವೇದಕಾಲೀನ ಸಮಾಜದಲ್ಲಿ ಪಟ್ಟದ ರಾಣಿಗಿದ್ದ ಸ್ಥಾನಮಾನಗಳು ಉಳಿದ ಸ್ತ್ರೀಯರಿಗೆ ಇರಲಿಲ್ಲವೆಂಬುದನ್ನು ಗಮನಿಸಬೇಕು. ಪಟ್ಟದ ರಾಣಿಗೆ ಉಳಿದೆಲ್ಲ ರಾಣಿಯರು ಅಧೀನರಾಗಿಯೆ ಇರಬೇಕಾಗಿತ್ತು. ಪಟ್ಟದರಸಿಯ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಮಾತ್ರ ರಾಜ್ಯಪಟ್ಟ ದೊರೆಯುತ್ತಿತ್ತು. ಹೀಗಾಗಿಯೇ ಪಟ್ಟದರಸಿಯರು ಪುತ್ರ ಸಂತಾನಕ್ಕಾಗಿ ಕುದುರೆಯೊಂದಿಗೆ ಮಲಗಲು ಮುಂದಾಗುತ್ತಿದ್ದರು. ಇದನ್ನು ಒಂದಿಷ್ಟು ಸೂಕ್ಷ್ಮವಾಗಿ ಗಮನಿಸಿದರೆ



ವರ್ಣವ್ಯವಸ್ಥೆಯ ಶ್ರೇಣೀಕೃತತೆ ಹೇಗೆ ಕೆಲಸ ಮಾಡಿದೆ ಎಂಬುದು ಅರ್ಥವಾಗುತ್ತದೆ. ಯುದ್ಧವೆಂಬುದು ಸಮುದಾಯ-ಸಮುದಾಯಗಳ ಮಧ್ಯೆ ನಡೆಯುತ್ತಿರುವ ಹೊತ್ತಿನಲ್ಲಿ ಸೋತ ಸಮುದಾಯದ ರಾಜರು, ರಾಣಿಯರು, ಗುಲಾಮರು ಸೇವಕರಾದಿಯಾಗಿ ಸಮಸ್ತವು ಗೆದ್ದವರಿಗೆ ದಕ್ಕುತ್ತಿತ್ತು. ಗೆದ್ದ ರಾಜನ ಪಟ್ಟದರಸಿಯರ ಜೊತೆಗೆ ಸೋತ ರಾಜನ ರಾಣಿಯರು ಸೇವಕರಾಗಿ ಅರಸಿಯರಾಗಿ ಅರಮನೆಯಲ್ಲಿರುತ್ತಿದ್ದರು. ಇಂತಹ ಸಂದರ್ಭದಲ್ಲಿ ಪಟ್ಟದರಸಿಯರಿಗೆ ಗಂಡು ಸಂತಾನವಿಲ್ಲದಿದ್ದರೆ ಅದು ರಾಜನ ದೋಷವಾಗಿ ಕಾಣಿಸದೆ ಅದನ್ನು ಮರೆಮಾಚುವ ಸಲುವಾಗಿ ಕುದುರೆ, ನಿಯೋಗದಂತಹ ಪದ್ಧತಿಗಳು ಆಪತ್‌ಧರ್ಮವಾಗಿ ಕಾಣಿಸಿಕೊಂಡಿವೆ. ಈ ನಿಯೋಗಕ್ಕೆ ಸಿದ್ಧಗೊಂಡ ಗಂಡಸರೆಲ್ಲರು ಬ್ರಾಹ್ಮಣ ಪಂಡಿತರೆ ಆಗಿರುತ್ತಿದ್ದರು. ಮಹಾಭಾರತವನ್ನು ನೆನಪಿಸಿಕೊಂಡರೆ ಇದು ಅರ್ಥವಾಗುತ್ತದೆ. ಬೀಜ ಮತ್ತು ಕ್ಷೇತ್ರದ ಪರಿಕಲ್ಪನೆಯ ಮೂಲಕ ಸ್ತ್ರೀ ಸಮುದಾಯವನ್ನು ಶ್ರೇಣೀಕರಣದಲ್ಲಿ ಹಂಚಲಾಯಿತು. ಈ ಹಂಚಿಕೆಯನ್ನು ಸಮರ್ಥಿಸಿಕೊಳ್ಳಲು ಹೆಣ್ಣಿಗೆ ಹೆಣ್ಣನ್ನೆ ಶತ್ರುವಾಗಿಸಿದರು.

ಸ್ಮೃತಿಗಳನ್ನು ಧರ್ಮಶಾಸ್ತ್ರಗಳೆಂದು ಕರೆಯಲಾಗಿದೆ. ಈ ಶಾಸ್ತ್ರಗಳು ಸಮಾಜವನ್ನು ನಿಯಂತ್ರಿಸುವ ಅಂಕುಶಗಳಂತೆ ಕಾರ್ಯಮಾಡಿವೆ. ವೇದಗಳ ಕಾಲದಲ್ಲಿ ಪುರುಷನ ಖಾಸಗಿ ಆಸ್ತಿಯಾಗಿ ಕುಟುಂಬ ಸೇರಿದ್ದ ಹೆಣ್ಣು ಚರಾಸ್ತಿಯಂತೆ ಬಳಕೆಗೊಂಡಿರುವುದನ್ನು ಕಾಣಬಹುದು. ಬಹುಪತಿತ್ವ ಮತ್ತು ಬಹುಪತ್ನಿತ್ವ ಈ ಎರಡರಲ್ಲಿಯೂ ಹೆಣ್ಣಿನ ಅಸ್ತಿತ್ವವನ್ನು ನಿರಾಕರಿಸಲಾಗಿದೆ. ಈ ಹಂತದಲ್ಲಿ ಮಹಿಳೆಯರನ್ನು ಚರಾಸ್ತಿಯನ್ನಾಗಿಸಲಾಗಿದೆ. ಇವುಗಳ ಮಧ್ಯ ಇರುವ ವ್ಯತ್ಯಾಸವೆಂದರೆ ಅನೇಕ ಪುರುಷರು ಒಂದು ಹೆಣ್ಣನ್ನು ಹೊಂದಿದ್ದರೆ ಇನ್ನೊಂದರಲ್ಲಿ ಒಬ್ಬ ಪುರುಷ ಅನೇಕ ಹೆಣ್ಣುಗಳ ಒಡೆಯನಾಗುವ ಸವಲತ್ತನ್ನು ಪಡೆದಿದ್ದ. ಸಂಪತ್ತು, ಪುಸ್ತಕ ಮತ್ತು ಸ್ತ್ರೀಯರನ್ನು ನೋಡಿಕೊಳ್ಳಲು ಬೇರೊಬ್ಬರನ್ನು ಬಿಡಬಾರದು, ಬೇರೆಯವರ ಕೈಗೆ ಕೊಡಬಾರದೆಂದು ಹೇಳಲಾಗಿದೆ. ಅದನ್ನು ಇಂದು ಪಠ್ಯದಲ್ಲಿ ಶಾಸ್ತ್ರೋಕ್ತವಾಗಿ ಉಳಿಸಿ ಗ್ರಂಥ ಸಂಪಾದನೆಯ ಸಂದರ್ಭದಲ್ಲಿ ಗ್ರಂಥಗಳನ್ನು ಹೇಗೆ ರಕ್ಷಿಸಬೇಕು ಎಂಬುದನ್ನು ಹೇಳುವಾಗ "ಪುಸ್ತಕಂ ವನಿತಂ, ವಿತ್ತಂ ಪರಹಸ್ತಂ ಗತಂ ಗತಾ...." ಗ್ರಂಥವನ್ನು ಅನ್ಯರ ಕೈಗಿತ್ತರೆ ಅದು ಮರಳುವಾಗ ಹರಿಯುವ ಭಯಕಾಡಿದೆ. ಹಾಗೆನೇ ಹಣವನ್ನು ಬೇರೆಯವರಿಗೆ ನೀಡಿದರೆ ಅದು ಇದ್ದರೂಪದಲ್ಲಿ

ಮರಳಲಾರದು. ಹಾಗೆನೇ ಹೆಣ್ಣನ್ನು ಇನ್ನೊಬ್ಬರಿಗೆ ನೀಡಿದರೆ ಅವಳು ಭ್ರಷ್ಟಳಾಗಿ ಬರುತ್ತಾಳೆ ಎನ್ನುವುದರ ಹಿಂದೆ ಯಜಮಾನನಿಗೆ ಹೆಣ್ಣಿನ ದೇಹದ ಮೇಲಿನ ಹಕ್ಕು ಕಳೆದುಕೊಳ್ಳುವ ಲೈಂಗಿಕ ಭಯದಿಂದ ಹೆಣ್ಣನ್ನು ಕಾಯುವಂತೆ ಮಾಡಿದ ಗಂಡಸಿನ ಮನಸ್ಥಿತಿಗೆ ಶಾಸ್ತ್ರಗ್ರಂಥಗಳೇ ಕಾರಣ. ಹೆಣ್ಣಿನ ಬಗ್ಗೆ ಎಷ್ಟೊಂದು ನಕಾರಾತ್ಮಕ ಧೋರಣೆಯಿತ್ತು ಎನ್ನುವುದನ್ನು ಸ್ಥಿತಿಗಳ ಕಾಲದಲ್ಲಿ ಕಾಣಬಹುದು.

ಸ್ಮೃತಿಗಳು ಹೆಣ್ಣು ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲವೆನ್ನುತ್ತವೆ. ಆಕೆಯನ್ನು ಅನ್ಯಾಶ್ರಯದಲ್ಲಿರಿಸುವಾಗ ಮನು ಹೇಳಿದ ಮಾತುಗಳಿಗೆ ಇಂದಿಗೂ ಮರಣವಿಲ್ಲ. ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ಮುಪ್ಪಿನಲ್ಲಿ ಮಗನ ಆಶ್ರಯವನ್ನು ಹೆಣ್ಣಿಗೆ ಸೂಚಿಸುವುದರ ಹಿಂದೆ ಹೆಣ್ಣನ್ನು ಪುರುಷ ಪ್ರಧಾನ ಚೌಕಟ್ಟಿನಲ್ಲಿ ತುರುಕುವುದೇ ಆಗಿತ್ತು. ಮುಂದುವರಿದು ಆಕೆಯನ್ನು ನಿಯಂತ್ರಿಸುವುದಕ್ಕಾಗಿಯೇ ಕೌಟುಂಬಿಕ



ಜವಾಬ್ದಾರಿಯನ್ನು ವಿವಾಹದ ಮೂಲಕ ಹೇರುವ ಹೊತ್ತಿನಲ್ಲಿ ಮನು ಮದುವೆಯ ವಯಸ್ಸನ್ನು ಸ್ತ್ರೀಪುರುಷರಿಗೆ ನಿಗದಿಗೊಳಿಸುತ್ತಾನೆ. ತಂದೆಯಾದವನು ತನ್ನ ಎಂಟು ವರ್ಷದ 'ಗೌರಿ'ಯನ್ನು ಮದುವೆ ಮಾಡಿಕೊಟ್ಟರೆ ಸ್ವರ್ಗ, ಒಂಬತ್ತು ವರ್ಷದ 'ರೋಹಿಣಿ'ಯನ್ನು ಕೊಟ್ಟರೆ ವೈಕುಂಠ, ಹತ್ತು ವರ್ಷದ 'ಕನ್ಯ'ಕಳನ್ನು ಕೊಟ್ಟರೆ ಬ್ರಹ್ಮಲೋಕ, ಹನ್ನೆರಡು ವರ್ಷದ 'ವೃಷಾಲಿ'ಯನ್ನು ಕೊಟ್ಟರೆ ಗೌರವ ಎಂದು ಹೇಳಲಾಗಿದೆ. ಇದೆ ಹೊತ್ತಿನಲ್ಲಿ ವಸಿಷ್ಠ “ಹೆಣ್ಣು ಮಗುವಿಗೆ ಅದು ಬೆತ್ತಲೆಯಾಗಿ ಓಡಾಡುತ್ತಿರುವಾಗಲೇ ಮದುವೆ ಮಾಡಬೇಕೆಂದು ಹೇಳುತ್ತಾನೆ."[ಬಿ.ವಿ. ವೀರಭದ್ರಪ್ಪ: ವಿಚಾರ ಸಾಹಿತ್ಯ- ವೇದಗಳಲ್ಲಿಯ ಮಹಿಳೆಯರು] ಈ ವಿಷಯದಲ್ಲಿ ಎಲ್ಲ ಧರ್ಮಶಾಸ್ತ್ರಗಳು ಸಮ್ಮತಿಸಿವೆ. ಹೆಣ್ಣನ್ನು ಬಾಲ್ಯದಿಂದಲೇ ನಿಯಂತ್ರಿಸುವ ಗಂಡಸಿನ ಉದ್ದೇಶದ ಹಿಂದೆ ಹೆಣ್ಣಿನ ದೈಹಿಕ ಮತ್ತು ಬೌದ್ಧಿಕ ಶಕ್ತಿಯ ಭಯಕಾಡಿದೆ. ಊಳಿಗಮಾನ್ಯ ಪದ್ಧತಿಯು 'ಮನುಸಂಹಿತೆಯನ್ನು' ಸಾಮಾಜಿಕ ಶಾಸನೋಪಾದಿಯಲ್ಲಿ ಗಟ್ಟಿಗೊಳಿಸಿದ ಕಾಲ ಮಹಿಳೆಯರಿಗೆ ಅತ್ಯಂತ ಗ್ರಹಣಕಾಲವಾಗಿದೆ. ಮನುವಿನ ಪ್ರಕಾರ “ಬಾಲಯಾವಾಯುವತ್ಯಾವಾ ವೃದ್ಧಯಾ ವ್ಯಾಪಿ ಯೋಷಿತಾ! ನಸ್ವಾತಂತ್ರಣ ಕರ್ತವ್ಯಂಕಿಂಬೆತ್ಕಾರ್ಯ ಕೃಷ್ಟಷಿ” ಅಂದರೆ ಹುಡುಗಿ, ಯುವತಿ, ಮುದುಕಿ ಮನೆಯಲ್ಲಿ ತನ್ನ ಯಜಮಾನನನ್ನು ಕೇಳದೆ ಸ್ವತಂತ್ರವಾಗಿ ಯಾವ ಕೆಲಸವನ್ನು ಮಾಡಕೂಡದು. ಈ ಮಾತು ಪುರುಷ ಪ್ರಧಾನ ಸಂಸ್ಕೃತಿಯ ಮೌಲ್ಯವಾಗಿಯೆ ಅಂಗೀಕರಿಸಲ್ಪಟ್ಟಿತು. ಮುಂದುವರೆದು ಬಾಲ್ಯವಿವಾಹಕ್ಕೆ ಒಳಗಾಗುವ ಹುಡುಗಿಯರು ಗಂಡನ ಮರಣಾನಂತರ ಹೇಗೆ ಬದುಕಬೇಕು ಎಂಬುದನ್ನು ಕಠಿಣ ನಿಯಮಗಳ ಮೂಲಕ ಆಚರಣೆಯಲ್ಲಿಟ್ಟಿದ್ದರು. ಸತಿ ಪದ್ಧತಿಯ ಬಗ್ಗೆ ಇಲ್ಲಿಯವರೆಗೂ ನಮಗಿದ್ದ ತಿಳುವಳಿಕೆಯನ್ನು ಬದಲಿಸಿ ಕೊಳ್ಳುವಂತಹ ಹಲವಾರು ಸಂಗತಿಗಳು ಸ್ಮೃತಿಗಳಲ್ಲಿ ಕಾಣಿಸುತ್ತವೆ. ವರ್ಣಾಶ್ರಮ ಧರ್ಮಕ್ಕೆ ಒಳಪಟ್ಟಿದ್ದ ವೇದ ಮತ್ತು ಸ್ಮೃತಿಗಳ ಕಾಲದಲ್ಲಿ ಎಲ್ಲ ಮಹಿಳೆ ಮತ್ತು ಎಲ್ಲ ಪುರುಷರಿಗೆ ಏಕರೂಪಿ ಕಾನೂನು ಕಟ್ಟಳೆಗಳಿರಲಿಲ್ಲ. ಕ್ಷತ್ರಿಯ ಮತ್ತು ಬ್ರಾಹ್ಮಣ ಕುಲಗಳ ಶುದ್ಧಿಗಾಗಿ ಹುಟ್ಟಿಕೊಂಡ ಕಾನೂನುಗಳು ಶೂದ್ರ

ಪುರುಷನನ್ನು ಮತ್ತು ಬ್ರಾಹ್ಮಣ ಕ್ಷತ್ರಿಯ ಮಹಿಳೆಯರನ್ನು ಗುರಿಯಾಗಿಸಿಕೊಂಡಿದ್ದವು ಎಂಬುದನ್ನು ಅಂಗೀರಸನ ಹೇಳಿಕೆಯಲ್ಲಿ ಗೋಚರಿಸುತ್ತದೆ. "ಬ್ರಹ್ಮನ ಆಜ್ಞೆಯಂತೆ ಬ್ರಾಹ್ಮಣ ಹೆಂಗಸು ಸತ್ತ ಗಂಡನನ್ನು ಹಿಂಬಾಲಿಸಬಾರದು. ಬ್ರಾಹ್ಮಣ ಜಾತಿಯ ಹೆಣ್ಣು ಸತ್ತ ಗಂಡನೊಡನೆ (ಸತಿ) ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ಅವಳಾಗಲಿ ಅವಳ ಗಂಡನಾಗಲೀ ಸ್ವರ್ಗಕ್ಕೆ ಹೋಗುವುದಿಲ್ಲ" [ಡಾ. ಸಿ. ವೀರಣ್ಣ : ಕನ್ನಡ ಕಾವ್ಯ ಕಂಡ ಹೆಣ್ಣು] ಎಂದು ಅಂಗೀರಸ ಹೇಳುವುದರ ಹಿಂದೆ ಬ್ರಾಹ್ಮಣ ಮಹಿಳೆಯರ ಬಗ್ಗೆ ಮೃದು ಧೋರಣೆಯನ್ನು ಸ್ಮೃತಿಗಳು ಹೊಂದಿದ್ದವು ಎಂಬುದನ್ನು ಗಮನಿಸಬಹುದು. ಮುಂದುವರಿದು ಇವೆ ಸ್ವತಿಗಳು ಬೇರೆ ಬೇರೆ ಕ್ಷತ್ರಿಯ, ವೈಶ್ಯ ವರ್ಣದ ಹೆಣ್ಣು ಮಕ್ಕಳು ಸತಿ ಹೋಗುವುದನ್ನು ಕಡ್ಡಾಯಗೊಳಿಸಿವೆ. ಈ ವರ್ಣದ ಹೆಣ್ಣುಗಳು ಸತಿಹೋಗುವುದರ ಮೂಲಕ ಪತಿಗೆ ಸ್ವರ್ಗದ ಬಾಗಿಲನ್ನು ತೆರೆಯಲಾಗುತ್ತದೆ ಎಂದು ನಂಬಿಸಲಾಗಿದೆ.

ವಿವಾಹದ ಮೂಲಕ ಕುಟುಂಬದ ಚೌಕಟ್ಟು ಭದ್ರಗೊಳ್ಳುತ್ತಿರುವ ಸಂದರ್ಭದಲ್ಲಿ ಬೇರೆ ಬೇರೆ ವರ್ಣಗಳಿಗೆ ಸೇರಿದ ಹೆಣ್ಣು ಮಕ್ಕಳು ಅನುಸರಿಸಬೇಕಾದ ನಿಯಮಗಳನ್ನು



ಮನು ಸ್ಪಷ್ಟವಾಗಿ ಹೇಳಿರುವನು. "ಒಂದೇ ವರ್ಣದವರನ್ನು ವಿವಾಹವಾಗುವಾಗ ಪರಸ್ಪರ ಕೈಗಳನ್ನು ಸೇರಿಸಬೇಕು. ಕ್ಷತ್ರಿಯ ಕನ್ಯ ಬ್ರಾಹ್ಮಣನನ್ನು ವರಿಸುವಾಗ ಬಾಣ ಹಿಡಿಯಬೇಕು. ಉತ್ತಮ ಕುಲದವನನ್ನು ವರಿಸುವ ವೈಶ್ಯ ಕನ್ಯ ಕೈಯಲ್ಲಿ ಚಾಟಿ ಹಿಡಿಯಬೇಕು. ಶೂದ್ರ ಕನ್ಯ ಗಂಡಿನ ವಸ್ತ್ರದ ತುದಿ ಹಿಡಿಯಬೇಕು" ಇದು ವರ್ಣ ವ್ಯವಸ್ಥೆಯನ್ನು ಸ್ತ್ರೀಯರ ಮೂಲಕ ಸ್ಥಿರೀಕರಿಸುವ ಕೆಲಸವನ್ನು ಮಾಡಿದೆ. ಶೂದ್ರ ಪುರುಷ ಉಳಿದ ವರ್ಣಗಳ ಸ್ತ್ರೀಯರನ್ನು ನೋಡುವಂತೆಯೇ ಇರಲಿಲ್ಲ. ನೋಡಿದವರನ್ನು, ಚಾಪೆಯಲ್ಲಿ ಸುತ್ತಿ ಸುಡಬೇಕು ಎಂಬ ಭೀಕರ ನಿಯಮಗಳು ಸಮಾಜದಲ್ಲಿ ರೂಢಿಯಲ್ಲಿದ್ದವು. ಬ್ರಾಹ್ಮಣ ಪುರುಷ ಶೂದ್ರ ಹೆಣ್ಣನ್ನು ಮದುವೆಯಾದರೆ ಸತ್ತ ನಂತರ ನರಕಕ್ಕೆ ಹೋಗುತ್ತಾನೆ ಎನ್ನುವುದರ ಮೂಲಕ ವರ್ಣಸಂಕರಕ್ಕೆ ಸಂಬಂಧಿಸಿ ಶಾಸ್ತ್ರಾಧಿಗಳ ಸಮ್ಮತಿಯಿರಲಿಲ್ಲವೆನ್ನುವುದನ್ನು ಒತ್ತಿ ಹೇಳಲಾಗಿದೆ. ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಮೇಲ್ಮುಖ ಚಲನೆಗೆ ಅವಕಾಶವಿರಲಿಲ್ಲ, ಹೆಣ್ಣಿನ ನಡೆನುಡಿಗಳನ್ನು ಸ್ಮೃತಿಗಳು ಹೀಗೆ ಸೂತ್ರಿಕರಿಸುತ್ತವೆ. 'ಎಳೆಯ ವಯಸ್ಸಿನಲ್ಲಿ ಹೆಣ್ಣು ಪರದೆಯ ಹಿಂದೆ ಇರಬೇಕು. ಗಂಡನ ಅಪ್ಪಣೆಯಿಲ್ಲದೆ ಅವಳು ಹೊರಗೆ ಹೋಗಬಾರದು. ಹೊರಗೆ ಹೋಗಲೇಬೇಕಾದಾಗ ಅವಳು ಸರಿಯಾಗಿ ಬಟ್ಟೆಗಳನ್ನು ಧರಿಸಬೇಕು, ಬಟ್ಟೆ ಹೇಗೆ ಧರಿಸಬೇಕೆಂದರೆ ದೇಹದ ಯಾವ ಭಾಗವೂ ಕಾಣದಂತೆ ಎಚ್ಚರಿಕೆಯಿಂದ ಮುಚ್ಚಿಕೊಂಡಿರಬೇಕು. ಜೋರಾಗಿ ನಡೆಯಬಾರದು, ವ್ಯಾಪಾರಿ ಮತ್ತು ವೃದ್ಧ ವೈದ್ಯ ಇವರನ್ನು ಬಿಟ್ಟು ಬೇರೆಯವರೊಂದಿಗೆ ಮಾತನಾಡಬಾರದು. ನಡೆಯುವಾಗ ಹಾದಿಯಲ್ಲಿ ನಗಬಾರದು ಮತ್ತು ಅನ್ಯರೊಂದಿಗೆ

ಮಾತನಾಡಬಾರದು' ಎಂದು ಹೇಳಿದ್ದು, ಕುಲೀನ ಸ್ತ್ರೀಯರಿಗೆ ಮಾತ್ರವೆಂಬುದನ್ನು ಗಮನಿಸಬೇಕು. ಯಾಕೆ ಕುಲೀನ ಸ್ತ್ರೀಯರಿಗೆ ಈ ನಿಯಮಗಳನ್ನು ಮಾಡಿರಬೇಕು? ವ್ಯಾಪಾರಿ ಮತ್ತು ವೃದ್ಧವೈದ್ಯರನ್ನು ಹೊರತುಪಡಿಸಿ, ಬೇರೆ ಗಂಡಸರೊಂದಿಗೆ ಮಾತನಾಡಬಾರದು ಎಂಬುದರ ಹಿಂದೆ ವರ್ಣಸಂಕಟದ ಭಯ ಮತ್ತು ಹೆಣ್ಣಿನ ದೇಹದ ಮೇಲಿನ ಸ್ವಾಧೀನತೆ ಕುಲಶುದ್ಧಿಯನ್ನು ಗಟ್ಟಿಗೊಳಿಸುವುದಕ್ಕಾಗಿ ಇಂತಹ ಕಟ್ಟಳೆಗಳನ್ನು ಹಾಕಿದಂತಿದೆ. ಗಂಡಿನ ದಾಸ್ಯತ್ವಕ್ಕೆ ಹೆಣ್ಣನ್ನು ನೂಕುವಾಗ ಧರ್ಮಶಾಸ್ತ್ರಗಳು ಶ್ರಮವಹಿಸಿರುವುದರ ಹಿಂದೆ ಏನಿತ್ತು ಎಂಬುದೇ ನಮ್ಮ ಹುಡುಕಾಟದ ಬಹುಮುಖ್ಯ ಸಂಗತಿ, ದೇವದಾಸಿಯರು ದೇವರು ಧರ್ಮದ ಹೆಸರಿನಲ್ಲಿ ರಾಜಪ್ರಭುತ್ವ, ಧರ್ಮ ಪ್ರಭುತ್ವದ ಉಪಭೋಗಕ್ಕಾಗಿ ಕವಲೊಡೆದ ಸ್ತ್ರೀ ಸಮುದಾಯಕ್ಕೆ ಈ ಶೃಂಗಾರ ಪ್ರಧಾನವಾದ ವಿದ್ಯೆಗಳನ್ನು ಕಲಿಯುವ ಅವಕಾಶವನ್ನು ನೀಡಿತ್ತು. ಕುಟುಂಬ ಚೌಕಟ್ಟಿನಲ್ಲಿ ಬಂಧಿಸಲ್ಪಟ್ಟ ಮಹಿಳೆಯರು ತಮ್ಮ ಲೈಂಗಿಕ ಸ್ವಾತಂತ್ರ್ಯವನ್ನು ಕಿತ್ತುಕೊಂಡ ಸಮಾಜವೇ ಇನ್ನೊಂದು ಸಮುದಾಯಗಳ ಸ್ತ್ರೀಯರಿಗೆ ಕುಟುಂಬವನ್ನು ನಿರಾಕರಿಸಿ ಲೈಂಗಿಕ ಸ್ವಾತಂತ್ರ್ಯ ನೀಡಿತ್ತು. ಸಾಮಾಜಿಕ ಗೌರವದಿಂದ ವಂಚಿತರನ್ನಾಗಿಸಿದ ಈ ಸಮುದಾಯದ ಸ್ತ್ರೀಯರು ಹೀನಕುಲವೆಂದು ಕರೆಯಲ್ಪಟ್ಟ ಕುಲದಿಂದ ಬಂದವರಾಗಿದ್ದರು. ಈ ಕುಲಗಳಲ್ಲಿ ಹೆಣ್ಣು ಸಂತತಿಗೆ ಬೇಡಿಕೆಯಿತ್ತು. ಕುಲಕಸುಬನ್ನು ಮುಂದುವರೆಸಿಕೊಂಡು ಹೋಗುವ ವಾರಸುದಾರಿಕೆ ಹೆಣ್ಣುಮಗುವಿಗಿತ್ತು.

ಧರ್ಮಶಾಸ್ತ್ರಗಳ ರಕ್ಷಣೆಗಾಗಿ ಹುಟ್ಟಿದಂತಿರುವ ಕೌಟಿಲ್ಯನ ಅರ್ಥಶಾಸ್ತ್ರ ರಾಜಕೀಯ ಕಾರಣಗಳಿಂದ ಇನ್ನಷ್ಟು ಸ್ತ್ರೀ ಶೋಷಣೆಗೆ ಹೊಸ ಬಗೆಯ ಹಾದಿಗಳನ್ನು ತೆರೆಯಿತು.



ಗೃಹಿಣಿ-ಗಣಿಕೆಯರೆಂದು ಸಮುದಾಯದ ಮಧ್ಯದಲ್ಲಿ ಗೋಡೆ ಕಟ್ಟುವುದರ ಮೂಲಕ ಸ್ತ್ರೀ ಸಮುದಾಯವನ್ನು ಒಡೆದು ನಿರಂತರವಾಗಿ ಪರಸ್ಪರ ಸಾಂಸ್ಕೃತಿಕವಾಗಿ ಕದನಕ್ಕಿಳಸುವಂತೆ ಮಾಡಿದೆ. ಧರ್ಮಶಾಸ್ತ್ರಗಳು ವಾಸ್ತವವಾಗಿ ಹೆಣ್ಣಿಗೆ ಮಾಡಬಾರದೆಂದು ನಿಷೇಧಿಸಿದ ವಿಷಯಗಳನ್ನು ಅರ್ಥಶಾಸ್ತ್ರ ಮಾಡಲು ಪ್ರಚೋದಿಸಿತು. ಕೇವಲ ನಿಯಮಗಳ ರೂಪದಲ್ಲಿದ್ದ ವೇದ, ಸ್ಮೃತಿಕಾರರ ಮಾತುಗಳಿಗೆ ಕಾನೂನು, ದಂಡ, ಶಿಕ್ಷೆಯೆಂಬವುಗಳನ್ನು ಆಡಳಿತದ ಭಾಗವಾಗಿಸಿದ ಅರ್ಥಶಾಸ್ತ್ರ ಹೆಣ್ಣಿಗೆ ಸಂಪೂರ್ಣ ದಿಗ್ಬಂಧನವನ್ನು ಹಾಕಿತು. ಹೆಣ್ಣಿನ ಸ್ತ್ರೀಧನ, ಆಸ್ತಿ ಹಕ್ಕುಗಳ ಮೇಲೆ ರಾಜಾಧಿಕಾರವನ್ನು ಹೇರಿತು. ಗಣಿಕಾ ಸ್ತ್ರೀಯರು ರಾಜಾದಾಯ ಕೊಡಬೇಕು ಎನ್ನುವುದರ ಮೂಲಕ ವೇಶ್ಯಾವೃತ್ತಿಯನ್ನು ಸೇವಾ ತೆರಿಗೆಯ ವಲಯಕ್ಕೆ ತರುವುದರ ಮೂಲಕ ರಾಜನ ಸ್ವತ್ತಾಗಿಯೆ ಈ ವೇಶ್ಯೆಯರು ಇರಬೇಕು. ರಾಜ ಹೇಳಿದವನಿಗೆ ವೇಶ್ಯ ತನ್ನ ದೇಹವನ್ನು ಒಪ್ಪಿಸದಿದ್ದರೆ ಅವಳು ಸಾರ್ವಜನಿಕವಾಗಿ ಶೂದ್ರನ ಕೈಯಿಂದ ಚಡಿ ಏಟು ತಿನ್ನುವುದನ್ನು ಕಾನೂನಾಗಿಸಿದ. ಪ್ರತಿ ತಿಂಗಳು ಪ್ರತಿಯೊಬ್ಬ ವೇಶ್ಯ ತನ್ನ ಎರಡು ದಿನದ

ಸಂಪಾದನೆಯನ್ನು ರಾಜನಿಗೆ ಕೊಡಬೇಕು ಎಂದು ಕಾನೂನು ಜಾರಿಗೊಳಿಸುವಾಗ ಕೌಟಿಲ್ಯನಿಗೆ ವೇಶ್ಯಾವೃತ್ತಿ ನೈತಿಕ ಪ್ರಶ್ನೆಯಾಗಿ ಕಾಡಿದಂತಿಲ್ಲ. ಹೆಣ್ಣಿನ ಎಲ್ಲ ರೀತಿಯ ಒಡೆತನವನ್ನು ಗಂಡಸಿಗೆ ವಹಿಸುವುದರ ಮೂಲಕ ಹೆಣ್ಣನ್ನು ಅಬಲಾಸ್ಥಾನಕ್ಕೆ ನೂಕಿದ. ದೇವರ ಸೇವೆಗೆಂದ ಮಹಿಳಾ ಸಮುದಾಯವೊಂದನ್ನು ಹುಟ್ಟುಹಾಕುವುದರ ಮೂಲಕ ಪುರುಷ ಕೌಟುಂಬಿಕ ಚೌಕಟ್ಟಿನಾಚೆಗೂ ಲೈಂಗಿಕ ಉಪಭೋಗದ ಉಪಕರಣವೊಂದನ್ನು ಎಗ್ಗಿಲ್ಲದೆ ನಿರ್ಮಿಸಿದ್ದ.

ಧರ್ಮ ಶಾಸ್ತ್ರಗಳಿಂದ ವೈದಿಕ ಯುಗದಲ್ಲಿ ಬಂಧಿಸಲ್ಪಟ್ಟ ಮಹಿಳೆಯ ಬದುಕಿಗೆ ಸಂಬಂಧಿಸಿ ನಂತರ ಬಂದ ಧರ್ಮಗಳು ಉದಾರವಾಗಿ ನಡೆದುಕೊಂಡಂತೆ ಹೊರಮೈಯಲ್ಲಿ ಕಾಣಿಸಿದರೂ ಒಳಮೈಯಲ್ಲಿಯ ಗಾಯದ ಉರಿ ಹಾಗೆಯೆ ಉಳಿದಿತ್ತು. ಸ್ತ್ರೀ ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲವೆಂದು ಸಾರುತ್ತ ಬಂದಿದ್ದ ಹಿಂದೂ ಧರ್ಮಕ್ಕೆ ಪ್ರತಿರೋಧ ಒಡ್ಡುತ್ತ ಬಂದ ಯಾವ ಧರ್ಮಗಳು ಮಹಿಳೆಯರನ್ನು ಬಂಧನದಿಂದ ಸಂಪೂರ್ಣವಾಗಿ ಮುಕ್ತಗೊಳಿಸುವ ಸಾಹಸಕ್ಕೆ ಕೈಹಾಕಲಿಲ್ಲ. ಹಿಂದೂ ಧರ್ಮದ ತಾತ್ವಿಕತೆಯನ್ನು ಪ್ರಬಲವಾಗಿ ವಿರೋಧಿಸುತ್ತ ಹೊಸ ಸಮಾಜದ ಸಾಧ್ಯತೆಗಳನ್ನು ತೋರಿಸಿದ ಬೌದ್ಧಧರ್ಮ ಹೆಣ್ಣಿನ ವಿಷಯದಲ್ಲಿ ಅಷ್ಟೊಂದು ಮುಕ್ತತೆಯನ್ನು, ಉದಾರತೆಯನ್ನು ತೋರಿಸಲಿಲ್ಲ. ಧರ್ಮ ಪ್ರಸಾರಕ್ಕೆ ಹುಟ್ಟಿಕೊಂಡ ಸಂಘದಲ್ಲಿ ಸ್ತ್ರೀಯರನ್ನು ಸೇರಿಸಿಕೊಳ್ಳುವ ವಿಚಾರದಲ್ಲಿ ಬುದ್ಧ ಪೂರ್ಣ ಮನಸ್ಸಿನಿಂದ ಒಪ್ಪಿಗೆ ನೀಡಿದಂತಿಲ್ಲ. 'ಸುಲ್ಲವಗ್ಗ'ದಲ್ಲಿ ಬುದ್ಧ ಆನಂದನಿಗೆ ಹೇಳಿರುವ ಈ ಮಾತುಗಳಲ್ಲಿ 'ಕುಟುಂಬ' ಬಹುವಾಗಿ ಕಾಡಿದಂತಿದೆ. ಆನಂದ "ಸ್ತೀ ಗೃಹಕೃತ್ಯಜೀವನದಿಂದ ಮುಕ್ತಳಾಗದೆ ಇದ್ದಿದ್ದರೆ, ನನ್ನ ಧರ್ಮದಡಿಯಲ್ಲಿ ಗೃಹವಿಲ್ಲದವಳಾಗದೆ ಇದ್ದಿದ್ದರೆ, ಧರ್ಮ ಬಹಳ ಕಾಲ ಬದುಕುತ್ತಿತ್ತು. ಕೊನೆಯ ಪಕ್ಷ ಸಾವಿರ ವರ್ಷಗಳಷ್ಟು ಇರುತ್ತಿತ್ತು. ಆದರೆ ಹೆಣ್ಣು ಗೃಹಕೃತ್ಯಗಳನ್ನು ತೊರೆದಿರುವುದರಿಂದ ಅದು ಹೆಚ್ಚೆಂದರೆ ಐನೂರು ವರ್ಷ ಬಾಳೀತು" ಹೆಣ್ಣು ಧರ್ಮ ಸ್ವೀಕಾರ ಮಾಡಿದ್ದರಿಂದ ಧರ್ಮದ ಆಯುಷ್ಯ ಕಡಿಮೆಯಾಗುತ್ತದೆಂಬ ಅಳುಕು ಬುದ್ಧನಿಗಿತ್ತು. ಈ ಅಳುಕಿಗೆ ಕುಟುಂಬದ ಜವಾಬ್ದಾರಿ ಮತ್ತು ಹೆಣ್ಣಿನ ಸಂತಾನೋತ್ಪತ್ತಿ ಕಾರಣವಾಗಿರಬೇಕೆಂದು ಭಾವಿಸಬಹುದು. ಕುಟುಂಬದ ಸಂಪೂರ್ಣ ಹೊಣೆಗಾರಿಕೆಯನ್ನು ಹೆಣ್ಣಿಗೆ

ಹೊರಿಸಲಾಗಿತ್ತು. ಇದರಿಂದ ಮಹಿಳೆ ಬಿಡುಗಡೆಗೊಳ್ಳುವುದೆಂದರೆ ಕುಟುಂಬದ ಚೌಕಟ್ಟು ಮುರಿದಂತೆ ಎಂಬುದು ಬುದ್ಧನಿಗೆ ಅರ್ಥವಾಗಿತ್ತು. ಸಂಸಾರವನ್ನು ಬಂಧನವೆಂದು ಗಂಡಿಗೆ ಹೇಳಿದಂತೆ ಹೆಣ್ಣಿಗೆ ಹೇಳಿಲ್ಲ. ಸಂಸಾರ ಗಂಡಿಗೆ ಬಂಧನವಾದರೆ ಹೆಣ್ಣಿಗೆ ಕರ್ತವ್ಯ ಮತ್ತು ಕಡ್ಡಾಯವಾಗಿ ಪಾಲಿಸಬೇಕಾದ ಮೌಲ್ಯವೆಂದು ಒಪ್ಪಿಸಲಾಗಿದೆ. ಹೀಗಾಗಿಯೆ ಬುದ್ಧನಂತವರಿಗೂ ಸ್ತ್ರೀಯರನ್ನು ಹೊರತುಪಡಿಸಿ ಕುಟುಂಬವನ್ನು ಸರಿಭಾವಿಸಲು ಸಾಧ್ಯವಾದಂತಿಲ್ಲ.

ಧರ್ಮಮಾರ್ಗದಲ್ಲಿ ನಡೆಯಲು ಬಯಸುವ ಗಂಡಸಿಗೆ ಸ್ತ್ರೀ ಬಹುದೊಡ್ಡ ಬಂಡೆಯಾಗಿ ಎಲ್ಲ ಧರ್ಮಗಳಿಗೂ ಕಾಣಿಸಿರುವಳು. ಸ್ತ್ರೀ ಕುರಿತಹಾಗೆ ಬುದ್ಧನಂತಹವರಿಗೂ ಭಯ ಕಾಡಿದೆ. ಶಿಷ್ಯನಾದ ಆನಂದ ಹೆಣ್ಣಿನೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂದು ಕೇಳಿದ್ದಕ್ಕೆ ಬುದ್ಧ "ಸ್ತ್ರೀಯರನ್ನು ನೋಡಲೇಬಾರದು, ನೋಡಲೇಬೇಕಾಗಿ ಬಂದರೆ ಅವರೊಂದಿಗೆ ಮಾತನಾಡಬಾರದು, ಅದೂ ಅನಿವಾರ್ಯವಾದರೆ ತುಂಬಾ ಎಚ್ಚರದಿಂದಿರಬೇಕು" ಎಂದು ಹೇಳುವಲ್ಲಿ ಬುದ್ಧಗುರುದೇವನಿಗಿದ್ದ ಒತ್ತಡಗಳೇನು ಎಂಬುದು ಕಾಲವೇ ಹುಡುಕಬೇಕಾದ ಸಂಗತಿ. ಹೆಣ್ಣಿನ ಬಗ್ಗೆ ಇದ್ದ ದೇಹ ಮೂಲದ ಭಯ ಬುದ್ಧನಂತವರಿಗೂ ಕಾಡಿರಬಹುದೆ? ಪುರುಷನ ಮನಸಿನ ಚಂಚಲತೆಯನ್ನು ಒಪ್ಪಿಕೊಳ್ಳದ ಸಮಾಜ ಸ್ತ್ರೀಯರನ್ನು ದೂಷಿಸುತ್ತಿರುವುದನ್ನು ಗಮನಿಸಬಹುದು. ಸ್ತ್ರೀಯಿಲ್ಲದೆ ಕುಟುಂಬವನ್ನು ಕಲ್ಪಿಸಿಕೊಳ್ಳುವುದೆ ಅಸಾಧ್ಯದ ಸಂಗತಿಯಾಗಿ ಎಲ್ಲ ಕಾಲದ ಸಮಾಜ ಧರ್ಮಗಳಿಗೆ ಕಾಡಿರುವುದರಿಂದ ಹೆಣ್ಣನ್ನು ಕುಟುಂಬಕ್ಕೆ ಸೀಮಿತಗೊಳಿಸುತ್ತಲೆ ಗಂಡಿಗೆ ಕುಟುಂಬದೊಂದಿಗೆ ಅದರ ಜವಾಬ್ದಾರಿ ಇಲ್ಲದೆಯೂ ಬದುಕುವ ಮಾರ್ಗಗಳನ್ನು ಸಮಾಜ ಧರ್ಮಗಳು ಮುಕ್ತವಾಗಿಯೆ ತೆರೆದಿವೆ. ಹೆಣ್ಣಿಗೆ ಮಾತ್ರ ಯಾವುದೆ ಆಯ್ಕೆಗಳನ್ನು ನಿರಾಕರಿಸಿ "ಗೃಹಿಣಿ ಗೃಹಮುಚ್ಚತೆ ಸ್ವರ್ಗದಪಿಗರಿಯಸಿ" ಎನ್ನಲಾಗಿದೆ. ಈ ಸೂತ್ರದಿಂದಲೇ ಹೆಣ್ಣಿನ ಚರಿತ್ರೆಗೆ ಉರುಳು ಬಿಗಿಯಲಾಗಿದೆ.

ಕುಟುಂಬ ಧರ್ಮವನ್ನು ಬುದ್ಧ ಮಹಿಳೆಯರು ಮಾತ್ರ ಪಾಲಿಸಲು ಸಾಧ್ಯವೆಂದು ಭಾವಿಸಿದ ಕಾರಣ ಲಗ್ನವಾಗಲಿರುವ ಮಹಿಳೆಯರಿಗೆ ಉಪದೇಶ ನೀಡುತ್ತಾನೆ. "ನಾರಿಯರೆ ನೀವು ಗಂಡನ ಮನೆಯಲ್ಲಿ ಬೇಗನೆ ಏಳಿರಿ, ಎಲ್ಲರೂ ಮಲಗಿದ ನಂತರ ಮಲಗಿರಿ. ಸಂತೋಷದಿಂದ ಮನೆಗೆಲಸ ಮಾಡಿರಿ. ಮನೆಯನ್ನು ಓರಣವಾಗಿರಿಸಿರಿ, ಮೃಧುಭಾಷಿಣಿಯರಾಗಿರಿ. ಈ ನಡವಳಿಕೆಯನ್ನು ಮದುವೆಯಾಗುವ ಪೂರ್ವದಲ್ಲಿ ನೀವು ಗಳಿಸಿಕೊಳ್ಳಿರಿ. ನೀವು ಗಂಡನ ಮನೆಯಲ್ಲಿ ಎಲ್ಲರ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳಿರಿ, ಅವರವರಿಗೆ ಅನುಕೂಲವಾದ ಊಟವನ್ನು ಬಡಿಸಿರಿ. ನೀವು ಗಂಡನ ಸಂಪತ್ತನ್ನು ಸರಿಯಾಗಿ ಕಾಯ್ದುಕೊಳ್ಳಿರಿ. ನೀವು ಹಾಗೆ ಮಾಡಿದರೆ ಸತ್ತನಂತರ ಅಪ್ಸರೆಯಾಗುತ್ತಿರಿ[ಪುನರುದ್ಧರಣೆ: ಹೊನ್ನಮ್ಮನ ಹದಿಬದೆಯ ಧರ್ಮ, ಡಾ. ಮಧುವೆಂಕಾರೆಡ್ಡಿ, ಪ-೩೫]. ಈ ಮಾತುಗಳನ್ನು ನೋಡಿದರೆ ವೈದಿಕ ನೆಲೆಯ ಹೆಣ್ಣಿನ ಸ್ಥಾನವನ್ನು ಬುದ್ಧ ಒಪ್ಪಿಕೊಂಡ ಹಾಗೆ ತೋರುತ್ತದೆ. ಹೀಗಿರುವ ಬುದ್ಧ ಆಮ್ರಪಾಲಿಯಂಥವಳೊಂದಿಗೆ ನಡೆದುಕೊಂಡದನ್ನು ಸ್ತ್ರೀ ಭಿಕ್ಕುಗಳ ಒಂದು ಪ್ರತ್ಯೇಕ ಗುಂಪೇ ಬೌದ್ಧಧರ್ಮದಲ್ಲಿತ್ತು ಎಂಬುದು ಕೂಡಾ ಹೇಗೆ ಪರಿಭಾವಿಸಬೇಕು ಎಂಬುದು

ಪ್ರಶ್ನೆಯಾಗಿ ಕಾಡುತ್ತಿದೆ. ಸ್ತ್ರೀ ಭಿಕ್ಕುಗಳಿಗೆ ಕೆಲವು ಕಠಿಣ ನಿಯಮಗಳ ಪಾಲನೆಯನ್ನು ಬೋಧಿಸಲಾಗಿತ್ತು. ಒಬ್ಬ ಭಿಕ್ಕುನಿ ನೂರು ವರ್ಷ ಮುಕ್ತಿಗಾಗಿ ಬೇಡಿ ಕಾಲಕಳೆದಿದ್ದರೂ ಆಗ ತಾನೇ ಸನ್ಯಾಸ ಸ್ವೀಕರಿಸುವ ಭಿಕ್ಕುವಿಗೆ ಅವಳು ಎದ್ದು ನಿಂತು ನಮಸ್ಕರಿಸಿ ಎಲ್ಲ ಗೌರವಗಳನ್ನು ತೋರಬೇಕು. ಭಿಕ್ಕು ಆದವಳು ಯಾವುದೇ ಕಾರಣಕ್ಕೆ ಭಿಕ್ಕುವನ್ನು ಅವಮಾನಿಸಬಾರದು ಅಥವಾ ನಿಂದಿಸಬಾರದು. ಅವಳು ಅಧಿಕಾರಯುತವಾಗಿ ಭಿಕ್ಕುಣಿಯರಿಗೆ ವಂದಿಸುವುದನ್ನು ನಿಲ್ಲಿಸಬೇಕು. ಆದರೆ ಭಿಕ್ಕುಣಿಯರು ಭಿಕ್ಕುಗಳಿಗೆ ವಂದಿಸುವುದನ್ನು ಮರೆಯಬಾರದು' ಎಂದು ಹೇಳುವಲ್ಲಿ ಹೆಣ್ಣಿನ ಆತ್ಮಗೌರವವನ್ನು ನಿರಾಕರಿಸಲಾಗಿದೆ. ಪುರುಷಲಿಂಗಿಯಾಗಿ ಹುಟ್ಟುವುದೇ ಶ್ರೇಷ್ಠವೆಂಬ ವೈದಿಕ ಹಿತಾಸಕ್ತಿಯನ್ನು ಬುದ್ಧನಂತವರು ಬೆಂಬಲಿಸಿದ ಹಾಗಿದೆ. ಹೆಣ್ಣಿನ ಅನುಭವ, ವಯಸ್ಸು, ಜ್ಞಾನ, ಶಕ್ತಿ ಯಾವುದು ಪರಿಗಣಿಸಲ್ಪಡುವ ಸಂಗತಿಗಳೇ ಅಲ್ಲವೆನ್ನುವ ಧೋರಣೆ ಎಲ್ಲ ಕಾಲದಲ್ಲಿಯೂ ಸಾಮಾಜೀಕರಣಗೊಂಡಂತಿದೆ.

ಎಂತಹ ಮಹಿಳೆಯರು ಬುದ್ಧನ ಕಾಲದಲ್ಲಿ ಸಂಘಕ್ಕೆ ಸೇರಿದ್ದು ಎನ್ನುವುದನ್ನು ಗಮನಿಸುವುದಾದರೆ, ಕೌಟುಂಬಿಕ ಸುಭದ್ರ ಚೌಕಟ್ಟಿನಲ್ಲಿ ಬಂದಿಸಲ್ಪಟ್ಟವರಲ್ಲದವರು. ಬಡತನದ ಬೇಗೆಯಲ್ಲಿ ಬೆಂದು ಬದುಕು ಬರ್ಬರವೆಂದು ಭಾವಿಸಿದ ಮಹಿಳೆಯರು, ಒಂಟಿತನದ ಭಯವನ್ನು ನೀಗಿಕೊಳ್ಳುವ ಹಂಬಲದ ಮಹಿಳೆಯರು, ಕೌಟುಂಬಿಕ ಹಿಂಸೆ, ರೋಗರುಜಿನಗಳಿಂದ ಬಳಲುತ್ತಿದ್ದ ಮಹಿಳೆಯರು ಬೌದ್ಧ ಭಿಕ್ಕುಣಿಯರಾಗಿ ನೆಮ್ಮದಿ ಕಾಣುವ ಕಾರಣದಿಂದ ಸಂಘ ಸೇರಿರುವರು. ಗಂಡನನ್ನು ಕಳೆದುಕೊಂಡು ವಿಧವೆಯರಾಗಿ ಸಾಮಾಜಿಕ ಅಪಮಾನಗಳಿಂದ ಬಿಡುಗಡೆ ಹೊಂದಲು ಮತ್ತು ರಕ್ಷಣೆ ಪಡೆಯಲು, ಮಕ್ಕಳಿಲ್ಲದೆ ಕುಟುಂಬದ ಆಶ್ರಯತಪ್ಪಿ ಅನಾಥ ಪ್ರಜ್ಞೆಯಿಂದ ಬಳಲುತ್ತಿದ್ದ ಮಹಿಳೆಯರಿಗೆ ಸಂಘ ಪರ್ಯಾಯ ಬದುಕನ್ನು ಕಲ್ಪಿಸಬಹುದು ಎಂಬ ನಿರೀಕ್ಷೆಯಿಂದ ಬಂದ ಮಹಿಳೆಯರ ಬಹುದೊಡ್ಡ ಗುಂಪೇ ಬುದ್ಧನ ಸಂಘದಲ್ಲಿ ಭಿಕ್ಕುಣಿಯರಾಗಿ ಧರ್ಮಪ್ರಚಾರದ ಕಾರ್ಯದಲ್ಲಿ ತೊಡಗಿಕೊಂಡಿರುವರು. ಇಂತಹ ನೆಲೆಯಿಂದ ಬಂದ ಮಹಿಳೆಯರು ಎಳೆಯ ವಯಸ್ಸಿನ ಗಂಡು ಭಿಕ್ಕುಗಳನ್ನು ವಿಚಲಿತರನ್ನಾಗಿಸಬಹುದು ಎಂಬ ಭಯದ ಕಾರಣದಿಂದ ಕಠಿಣ ನಿಯಮಗಳನ್ನು ಮಹಿಳಾ ಭಿಕ್ಕುಣಿಯರಿಗೆ ಹಾಕಿದಂತಿದೆ. ಇದರ ಮಧ್ಯದಲ್ಲಿಯೂ ಮಹಿಳೆಯರು ಬಿಡುಗಡೆಗೊಂಡು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರ ಕುರಿತು ಅನೇಕ ಉಲ್ಲೇಖಗಳಿವೆ. ಥೇರೀಗಾಥಾದಲ್ಲಿ ಮುತ್ತಾಳ ಕುರಿತಂತಿರುವ ಉಲ್ಲೇಖವೊಂದು ಹೀಗಿದೆ : "ಕೋಸಲದ ಒಬ್ಬ ಬಡಬ್ರಾಹ್ಮಣ ಚಿಕ್ಕವಯಸ್ಸಿನಲ್ಲಿಯೇ ಮಗಳು 'ಮುತ್ತಾಳ'ನ್ನು ಗೂನು ಬೆನ್ನಿನ ಮುದುಕನೊಬ್ಬನಿಗೆ ಧಾರೆ ಎರೆದಿದ್ದ. ಈ ಮದುವೆಯನ್ನು ನಿರಾಕರಿಸಿ ಕುಟುಂಬ, ಗಂಡನನ್ನು ತ್ಯಜಿಸಿ ಬೌದ್ಧ ಧರ್ಮ ಸ್ವೀಕರಿಸಿದೆ ಎಂದು ಒಂದು ಗಾಥಾದಲ್ಲಿ ಹೇಳಿರುವಳು".

"ಆಹಾ, ಕಡೆಗೂ ನಾನು ಮುಕ್ತಳು, ಅದೆಷ್ಟು ಅದ್ಭುತ ಸ್ವಾತಂತ್ರ್ಯ!

ಮೂರು ವಾವಸ್ತುಗಳಿಂದ ನಾನು ಮುಕ್ತಳು;

ಬೀಸುವ ಕಲ್ಲು, ಒನಕೆ ಮತ್ತು ಗೂನು ಬೆನ್ನಿನ ಗಂಡ

ಯಾವುದೂ ಈಗಿಲ್ಲ. ಆದರಷ್ಟೇ ಅಲ್ಲ;

ನಾನು ಮರುಹುಟ್ಟು ಮತ್ತು ಸಾವಿನಿಂದಲೂ ಮುಕ್ತಳು,

- xix -

ನನ್ನನ್ನು ಜಗ್ಗಿ ಎಳೆಯುತ್ತಿದ್ದ ಎಲ್ಲವನ್ನೂ ದೂರ ಬೀಸಾಡಿದ್ದೇನೆ" [ಲೋಕಾಯತ: ಅನುವಾದ, ಜಿ.ರಾಮಕೃಷ್ಣ, ಪು.೩೧೮] ಹುಟ್ಟಿನಾರಭ್ಯ ಬಂಧನದಲ್ಲಿದ್ದ ಹೆಣ್ಣುಜೀವ ಬಿಡುಗಡೆ ಹೊಂದಿದಾಗಿನ ಅನುಭೂತಿಯನ್ನು ಹೇಳಿಕೊಳ್ಳುವಾಗ ಬಂಧನದ ಪರಿಕರಗಳಲ್ಲಿ ನಿರ್ಜೀವ ವಸ್ತುಗಳಾದ ಬೀಸುವಕಲ್ಲು, ಒನಕೆಯ ಜೊತೆಗೆ ಗೂನು ಬೆನ್ನಿನ ಗಂಡನನ್ನು ಸಮೀಕರಿಸಿದ್ದು ಚಿಂತನೆಗೆ ತೊಡಗಿಸುತ್ತದೆ. ಇಲ್ಲಿಯವರೆಗೂ ವಸ್ತುವಿನ ಜೊತೆಗೆ ಹೆಣ್ಣನ್ನು ನಿಲ್ಲಿಸಿದ್ದನ್ನು ನೋಡಿದ್ದೇವೆ. ಆದರೆ ಇಲ್ಲಿ ಮುತ್ತಾ ಯಾವ ವ್ಯವಸ್ಥೆ ಯಾವ ವ್ಯಾಖ್ಯಾನವನ್ನು ಹೆಣ್ಣಿನ ಕುರಿತು ಮಾಡಿಕೊಂಡು ಬಂದಿತ್ತೋ ಅದೇ ಮಾದರಿಯ ಆಯುಧದ ಮೂಲಕವೆ ಸಮಾಜವನ್ನು ಎದುರಿಸಿ ಹೊರಬಂದು ತನ್ನ ಆಯ್ಕೆಯ ಹಕ್ಕನ್ನು ಬದುಕಿನ ಹಕ್ಕೆಂದು ಹೇಳುತ್ತಾಳೆ. ಬೀಸುವ ಕಲ್ಲು, ಒನಕೆ, ಗೂನು ಬೆನ್ನಿನಿಂದ ಬಿಡುಗಡೆ ಹೊಂದುವುದೆಂದರೆ ಕುಟುಂಬ ಚೌಕಟ್ಟನ್ನು ಮೀರಿ ಬರುವುದೆ ಆಗಿದೆ. ಒನಕೆ, ಬೀಸುವ ಕಲ್ಲುಗಳ ಕೇವಲ ಸಂಕೇತಗಳೂ ಅಲ್ಲ, ವಸ್ತುಗಳು ಅಲ್ಲ. ಪುರುಷಪ್ರಧಾನ ಸಮಾಜದ ಕುಟುಂಬದಲ್ಲಿ ಒನಕೆಯಿಂದ ಪದಾರ್ಥಗಳನ್ನು ಕುಟ್ಟಿದಂತೆ ಬೀಸುಕಲ್ಲಿನಿಂದ ಧಾನ್ಯಗಳನ್ನು ನುರಿಸಿದಂತೆ ಹೆಣ್ಣು ಜೀವನವನ್ನು ಹಿಂಸಿಸಲಾಗುತ್ತಿತ್ತು. ಇದರೊಂದಿಗೆ ಗೂನು ಬೆನ್ನಿನ ಗಂಡನು ಸೇರಿಕೊಂಡಿದ್ದ ಇಂತಹ ಹಿಂಸೆಯಿಂದ ಬಿಡುಗಡೆ ಹೊಂದುವುದೆಂದರೆ 'ಮರುಹುಟ್ಟು ಪಡೆದ ಹಾಗೆನೇ ಸಾವಿನಿಂದಲೂ ಮುಕ್ತಳು ಎಂದು ಚೇತೋಹಾರಿಯಾಗಿ ಮಾತನಾಡುತ್ತಾಳೆ. ಕೌಟುಂಬಿಕ ಹಿಂಸೆಯಿಂದಾಗಿ ನಿತ್ಯ ಸಾಯುವ ಕ್ರಿಯೆಯಿಂದ ಬಿಡುಗಡೆ ಹೊಂದುವುದರ ಮೂಲಕ ಗಾಳಿ ಬೆಳಕಿನ ಹೊರಲೋಕದಲ್ಲಿ ತನ್ನ ಅಸ್ಮಿತೆಯನ್ನು ದಾಖಲಿಸುತ್ತಲೇ ಒಳಲೋಕ ಜಗ್ಗಿ ಎಳೆಯುತ್ತಿದ್ದವುಗಳನ್ನೆಲ್ಲ ಕಿತ್ತು ಬಿಸಾಡುವುದೆಂದರೆ ವಿಸ್ಮೃತಿಗೆ ಒಳಗಾಗದೆ ಮುಕ್ತ ಮುಕ್ತಳಾದ ಎನ್ನುತ್ತಾಳೆ. ಕೌಟುಂಬಿಕ ಹಿಂಸೆಯಿಂದ ಬಿಡುಗಡೆ ಹೊಂದಿ ಸಂಘ ಸೇರಿ ಭಿಕ್ಕುನಿಯರಾಗಿ ಬದುಕಲೆಂದು ಬಂದವರಿಗೆ ಬುದ್ಧಗುರು ಪರ್ಯಾಯವನ್ನು, ಹಲವು ಗೆರೆಗಳನ್ನು ಎಳೆಯುವುದರ ಮೂಲಕ ತೋರಿಸಿದ. ಈ ಕಾಲದಲ್ಲಿ ಒಂದು ಸಂಗತಿಯೆಂದರೆ ಸತಿ ಸಹಗಮನಕ್ಕೊಳಗಾಗುವುದರ ಕುರಿತು ವಿರೋಧಗಳಿರುವುದನ್ನು ಗಮನಿಸಬೇಕು. ಹೀಗಾಗಿಯೇ ವಿಧವೆಯರೆ ಭಿಕ್ಕುನಿಯರಾಗುತ್ತಿದ್ದರು. ಹೆಣ್ಣಿಲ್ಲದೆ ಕುಟುಂಬವನ್ನು ಕಲ್ಪಿಸಿಕೊಳ್ಳುವುದು ಬುದ್ಧನಂತಹವರಿಗೂ ಸಾಧ್ಯವಾದಂತಿಲ್ಲ. ವಾರಸುದಾರಿಕೆಯ ಪಾವಿತ್ರತೆಯ ಪ್ರಶ್ನೆಗಳು ಕಾಡಿರಬಹುದು.

ಅದೇ ರೀತಿ ಜೈನಧರ್ಮವು ಮಹಿಳೆಯ ಬದುಕಿನಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಗಬಹುದಾದ್ದೇನನ್ನು ಹೇಳಲಿಲ್ಲ. ಧಾರ್ಮಿಕವಾಗಿ ಮಹಿಳೆಯರಿಗೆ ಮೋಕ್ಷದ ಬಾಗಿಲನ್ನು ತೆರೆದವರು ಶ್ವೇತಾಂಬರರು, ಸ್ತ್ರೀಯರೂ ಸನ್ಯಾಸಿನಿ(ಕಂತಿ)ಯರಾಗಿ ಧರ್ಮ ಪ್ರಚಾರಕರಾಗುವ ಅವಕಾಶವಿತ್ತು. ಕಂತಿಯಾಗಿ ಧರ್ಮಕಾರ್ಯದಲ್ಲಿ ತೊಡಗಬಯಸುವ ಮಹಿಳೆಯರು ಯಾರ ಅಪ್ಪಣೆಗಾಗಿ ಕಾಯಬೇಕಾಗಿರಲಿಲ್ಲವೆಂಬುದೊಂದೇ ಈ ಧರ್ಮ ಮಹಿಳೆಯರಿಗಾಗಿ ಮಾಡಿದ ಮಹದುಪಕಾರ. ಬೌದ್ಧ ಭಿಕ್ಕುನಿಯರಿಗಿದ್ದ ನಿಯಮಗಳೇ ಜೈನ ಧರ್ಮದ ಕಂತಿಯರಾದವರಿಗೂ ಇದ್ದವು. ಗಂಡಸರಿಗೆ ಮಾತ್ರ ಮೋಕ್ಷದ ಮಾರ್ಗ ತೆರೆದಿದೆ. ಹೆಣ್ಣು ಮೋಕ್ಷ ಬಯಸುವಂತಿರಲಿಲ್ಲ. ಹೆಣ್ಣು ಭವದಿಂದ ಬಿಡುಗಡೆ ಹೊಂದಿ ಮೋಕ್ಷ ಹೊಂದಬೇಕಾದರೆ ಗಂಡು ಜೀವವಾಗಿಯೇ ಹುಟ್ಟಿರಬೇಕು ಎಂಬುದರ



ಮೂಲಕ ಮಹಿಳೆಯರಿಗೆ ಧಾರ್ಮಿಕ ಸಮಾನತೆಯ ನ್ಯಾಯವನ್ನು ನಿರಾಕರಿಸಲಾಗಿದೆ. ಇಂತಹ ಲಿಂಗವಿರೋಧಿ ತಾತ್ವಿಕ ನೆಲೆಯ ಧರ್ಮಗಳಿಂದ ಹೆಣ್ಣಿನ ಬಿಡುಗಡೆ ಸಾಧ್ಯವಾಗದು. ಕುಲೀನ ಮಹಿಳೆಯರು ಗಂಡ ಸತ್ತ ಮೇಲೆ ಸತಿ' ಹೋಗುವುದಕ್ಕಿಂತಲೂ ಧಾರ್ಮಿಕ ಕಾರ್ಯದಲ್ಲಿ ಪುರುಷ ಪ್ರಧಾನ ಮೌಲ್ಯಗಳನ್ನು ಎತ್ತಿಹಿಡಿದು, ಬದುಕಿನ ಸಾರ್ಥಕತೆಯನ್ನು ಪಡೆದುಕೊಳ್ಳಬೇಕೆಂದು ಉದಾರವಾಗಿ ಹೇಳಿದೆ. ವಾರಸುದಾರಿಕೆಯ ಶುದ್ಧತೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಂಡೆ ಈ ಕಾಲದಲ್ಲಿ ಮಹಿಳೆಯರು ತಮ್ಮ ಕರ್ತವ್ಯವನ್ನು ನಿರ್ವಹಿಸಿರುವರು. ಅಂತಹ ಮಹಿಳೆಯರು ಚರಿತ್ರೆಯಲ್ಲಿ ದಾಖಲಾಗಿರುವರು. ಅತ್ತಿಮಬ್ಬೆಯಂತಹ ಮಹಿಳೆಯರನ್ನು ಮುಂದಿಟ್ಟುಕೊಂಡು ಜೈನಧರ್ಮದ ಉದಾರತೆಯನ್ನು ಅಳೆಯುವಾಗ ಚರಿತ್ರೆಯ ಗ್ರಹಿಕೆ ಇರಬೇಕಾಗುತ್ತದೆ.

ಕರ್ನಾಟಕದ ಧಾರ್ಮಿಕ ಚರಿತ್ರೆಯಲ್ಲಿ ಅತ್ಯಂತ ಸಂಚಲವನ್ನುಂಟು ಮಾಡಿದ ವೀರಶೈವ ಧರ್ಮ ಮಹಿಳೆಯರನ್ನು ಸಮಾನವಾಗಿಯೆ ಕಾಣಲು ಪ್ರಯತ್ನಿಸಿತು. ಆದರೆ ಆ ಕಾಲದಲ್ಲಿ ಹೆಣ್ಣಿನ ಬಗ್ಗೆ ಔದಾರ್ಯವಿತ್ತೇ ವಿನಃ ಸಮಾನತೆಯ ಸಖ್ಯದ ಜಾಡಿರಲಿಲ್ಲ. ಅಲ್ಲಿಯು ವೈರುಧ್ಯಗಳಿರುವುದನ್ನು ಕಾಣಬಹುದು. 'ಶರಣಸತಿ ಲಿಂಗಪತಿ' ಎಂದು ಹೊರಟ ಶರಣರ ನಡಿಗೆ ಕುಟುಂಬದೊಳಗಿಂದ ಹೊರಟದ್ದಲ್ಲ. ಹೆಣ್ಣಾಗುವುದರಲ್ಲಿಯೇ ಶರತ್ವವಿದೆಯೆಂದವರು ಹೆಣ್ಣಾದವಳನ್ನು ಹಲವು ಪರೀಕ್ಷೆಗೆ ಒಳಪಡಿಸುತ್ತಾರೆ. ಆ ಕಾಲದ ಒತ್ತಡಗಳು ಅವರನ್ನು ಹಾಗೆ ನಿರ್ಬಂಧಿಸಿರಬಹುದು. ಹೆಣ್ಣನ್ನು ನಿರ್ಜೀವ ವಸ್ತುಗಳಾದ ಹೊನ್ನು, ಮಣ್ಣಿನೊಂದಿಗೆ ಸಮೀಕರಿಸಿದ್ದರಲ್ಲಿಯೇ ವೈದಿಕಹಿತ ಶರಣರ ಮೂಲಕವೂ ಜೀವಂತವಾಗಿದೆ. ಇದೆಲ್ಲದಕ್ಕೂ ಕಾರಣ ದೇಹಮೀಮಾಂಸೆಯ ಅಘನಿತ ಭಯ ಕಾಡಿದಂತಿದೆ. ಪುರೋಹಿತಶಾಹಿಯನ್ನು ಪ್ರಬಲವಾಗಿ ವಿರೋಧಿಸಿದ ವೀರಶೈವ ಧರ್ಮದ ನಿಜವಾದ ಶಕ್ತಿಯೆಂದರೆ

ಕಾಯಕ ಜೀವಿಗಳು ಲಿಂಗ ತಾರತಮ್ಯತೆಯನ್ನು ಪ್ರಶ್ನಿಸುವ, ಪ್ರತಿಭಟಿಸುವ, ಪರ್ಯಾಯ ಬದುಕಿನ ಕಲ್ಪನೆ. ಶರಣ ಚಳುವಳಿಯಲ್ಲಿ ಕಾಣಬಹುದಾದ ಅತ್ಯಂತ ಆರೋಗ್ಯಕರ ಸಂಗತಿಯೆಂದರೆ ಸ್ತ್ರೀಯರಿಗೆ ಏನು ಬೇಕು, ಬೇಡ ಎಂಬುದನ್ನು ಸ್ತ್ರೀಯರೇ ಹೇಳಿರುವುದು. ಆಧ್ಯಾತ್ಮದ ಮೀಮಾಂಸೆ ಮತ್ತು ಲಿಂಗ ಸಮಾನತೆಯನ್ನು ಎತ್ತಿಹಿಡಿಯಲೆಂದು ಜೇಡರ ದಾಸಿಮಯ್ಯನಂತಹ ಹಿರಿಯ ಶರಣರು ಮಾತನಾಡಿದ್ದನ್ನು ಪ್ರಶ್ನಿಸುವ, ಪರೀಕ್ಷಿಸುವ ಶಕ್ತಿ ಶರಣೆಯರಿಗಿತ್ತು ಎಂಬುದನ್ನು ಕಾಲ ಅಲಕ್ಷಿಸಿದೆ. ಜೇಡರ ದಾಸಿಮಯ್ಯನವರು ದೈಹಿಕ ಅಂಗರಚನೆಯನ್ನು ಮೀರಿ ಆಧ್ಯಾತ್ಮವನ್ನು ಪರಿಭಾವಿಸುವ ರೀತಿ ಹೀಗಿದೆ...

"ಮೊಲೆಮುಡಿ ಬಂದಡೆ ಹೆಣ್ಣೆಂಬರು

ಗಡ್ಡ ಮೀಸೆ ಬಂದಡೆ ಗಂಡೆಂಬರು

ನಡುವೆ ಸುಳಿವ ಆತ್ಮನು

ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ"-

ಆತ್ಮಕ್ಕೆ ಲಿಂಗ ಸೂತಕವಿಲ್ಲವೆಂದು ಒತ್ತಿ ಹೇಳುತ್ತಾರೆ. ಆದರೆ ಆತ್ಮ ಪರಮಾತ್ಮನ ಅರಿಯಲು ಬೇಕಾದ ಮೂಲ ಯಾವುದು ಎಂಬುದನ್ನು ಮರೆತು ಮಾತನಾಡುತ್ತಾರೆ. ಭವದ ಬದುಕಿನಲ್ಲಿಯೇ ಶರಣ ಹುಟ್ಟಿ ಇಹಪರಗಳನ್ನು ಗೆಲ್ಲಬೇಕಾದರೆ ಜ್ಞಾನ ಅರಿವಿನ



ಸಾಕ್ಷಾತ್ಕಾರವಾಗಬೇಕು ಎಂಬುದನ್ನು ಹೆಣ್ಣನ್ನು ಹೊರಗಿಟ್ಟು ಶರಣತತ್ವ ಮುನ್ನೆಲೆಗೆ ಬಂದಿತ್ತು. ಅದನ್ನು ಗೊಗ್ಗವ್ವ, ಕಾಳವ್ವ, ಅಂಬಿಗರ ಚೌಡಯ್ಯ ಪ್ರಶ್ನಿಸುತ್ತಾರೆ. ಮನುಷ್ಯನಲ್ಲಿ ಆತ್ಮದ ಅರಿವು ಮೂಡಬೇಕಾದರೆ ಜ್ಞಾನ ಬೇಕು ಎಂಬುದನ್ನು ಯಾವ ಕಾಲದ ಮಹಾತ್ಮರು ಪರಿಭಾವಿಸಿದಂತಿಲ್ಲ. ಅದನ್ನು ಮೊಟ್ಟ ಮೊದಲಿಗೆ ಗೊಗ್ಗವ್ವ ಜಗತ್ತು

ಕೇಳುವ ಹಾಗೆ ಹೇಳಿದ ರೀತಿ ಹೀಗಿದೆ.

"ಮೊಲೆ ಮುಡಿ ಬಂದಡೆ ಹೆಣ್ಣೆಂಬರು

ಮೀಸೆಕಾಸೆ ಬಂದಡೆ ಗಂಡೆಂಬರು

ಈ ಉಭಯದ ಜ್ಞಾನ

ಹೆಣ್ಣೋ ಗಂಡೋ ನಾಸ್ತಿನಾಥಾ"

ಜೇಡರ ದಾಸಿಮಯ್ಯ ಯಾವ ಮಾನದಂಡದಿಂದ ಲಿಂಗ ನಿರಸನ ಕ್ರಿಯೆಗೆ ತೊಡಗಿದ್ದನೋ ಅದೇ ಮಾನದಂಡದಿಂದಲೇ ಹೆಣ್ಣಿನ ಹಕ್ಕೊತ್ತಾಯ ಏನನ್ನು ಬಯಸುತ್ತದೆ ಎಂಬುದನ್ನು ಹೇಳಿರುವಳು. ವೈದಿಕ ಧರ್ಮದ ಬಹುದೊಡ್ಡ ಪಿತೂರಿಯೆ ಶೂದ್ರ ಮತ್ತು ಮಹಿಳೆಯರನ್ನು ಅಕ್ಷರ ಮತ್ತು ಜ್ಞಾನದಿಂದ ವಂಚಿತರನ್ನಾಗಿಸುವುದಾಗಿತ್ತು. ಈ ಪಿತೂರಿಯನ್ನು ವೈಚಾರಿಕ ಮತ್ತು ವಾಸ್ತವದ ನೆಲೆಯಲ್ಲಿ ಮೊಟ್ಟಮೊದಲಿಗೆ ಪ್ರಶ್ನಿಸುತ್ತಾಳೆ. ಯಾವುದೇ ಧರ್ಮಗಳಾಗಲಿ, ಧಾರ್ಮಿಕ ಮಹಾತ್ಮರಾಗಲಿ ಹೆಣ್ಣಿಗೆ ಬೇಕಿರುವುದೇನು ಎಂಬುದನ್ನು, ಹೆಣ್ಣನ್ನು ಹೊರಗಿಟ್ಟೆ ತೀರ್ಮಾನಿಸಿರುವರು. ಹೀಗಾಗಿಯೇ ಇಂದಿಗೂ ಮಹಿಳೆಯರು ಪುರುಷ ಪ್ರಧಾನ ಸಂಸ್ಕೃತಿಯ ವಾಹಕಗಳಾಗಿ ಬಳಕೆಯಾಗುತ್ತಿರುವರು. ಜ್ಞಾನ ವಲಯಗಳಿಂದಲೇ ಹೆಣ್ಣನ್ನು ಹೊರಗಿಟ್ಟು ಚರಿತ್ರೆ ಕಟ್ಟಿರುವುದರಿಂದ ಹೆಣ್ಣು ವ್ಯಕ್ತಿಯಾಗಿ ಕಾಣೆಯಾಗಿರುವಳು. ಅದೇ ಸಂದರ್ಭದಲ್ಲಿ ಶಕ್ತಿಸ್ವರೂಪಿಣಿಯಾಗಿ ಆರಾಧಿಸಲ್ಪಟ್ಟಿರುವಳು. ಹೆಣ್ಣಿನ ಹೆಣ್ಣನವನ್ನು ಆರಾಧಿಸಿ ಗೌರವಿಸಿದ ಪುರುಷ ವರ್ಗ ಹೆಣ್ಣಾಗುವುದು ಪುಣ್ಯದ ಕೆಲಸವೆಂದು ಸಾರುತ್ತಲೇ ಹೆಣ್ಣನ್ನು ವಿಸ್ಮೃತಿಗೆ ಒಳಗಾಗುವಂತೆ ಅಕ್ಷರ ವಿದ್ಯೆಯನ್ನು ದುಡಿಸಿಕೊಂಡಿದೆ. ಹನ್ನೆರಡನೆಯ ಶತಮಾನದಲ್ಲಿ ಶರಣರಿಗೆ ಸರಿದೊರೆಯಾಗಿ ವಿಚಾರ ವಿನಿಮಯಕ್ಕೆ ಮುಂದಾದ ವಚನಕಾರ್ತಿಯರ ಗ್ರಹಿಕೆಗಳು ಏಕಮುಖಿಯಾದವುಗಳಲ್ಲ. ಕುಟುಂಬ ಹೆಣ್ಣಿಗೆ ಸುರಕ್ಷಿತ ಚೌಕಟ್ಟೆಂದು ಭಾವಿಸಿದ ಸಮಾಜದೊಳಗೆ ಹೆಣ್ಣಿಗೆ ಕುಟುಂಬ ಸುರಕ್ಷಿತತೆಯನ್ನು ನೀಡಲಾರದು. ಅದೊಂದು ಯಾತನಾಮಯ ಶಿಬಿರವೆಂದು ಸ್ವತಃ ಕುಟುಂಬದೊಳಗಿದ್ದ ಶರಣೆಯರು ನಿರ್ಭಿಡೆಯಿಂದ ಮಾತನಾಡುವುದು ಆ ಕಾಲದ ಮಹಿಳೆಯರಿಗಿದ್ದ ಚಾರಿತ್ರಿಕ ಗ್ರಹಿಕೆಗೆ ಹಿಡಿದ ಕನ್ನಡಿ. ಅದೇ ನೆಲೆಯಲ್ಲಿ ಬಯಲಲ್ಲಿದ್ದ ವಚನಕಾರ್ತಿಯರು ತಮ್ಮ ಅನುಭವಗಳನ್ನು ನಿರ್ಭಿಡೆಯಿಂದ ಹೊರಹಾಕಿರುವುದು ಇಂದಿಗೂ ಕೂಡಾ ಅಗಾಧ ಸಂಗತಿಯೆ. ಜ್ಞಾನಮುಖಿಯಾಗಿ ಹೊರಟ ಹನ್ನೆರಡನೆಯ ಶತಮಾನದ ಮಹಿಳೆಯರ ನಡಿಗೆಯ ಹೆಜ್ಜೆಗಳು ಸ್ತ್ರೀ ಅಸ್ಮಿತೆಯ ಮಾರ್ಗ ನಿರ್ಮಿಸುವ ಮೊದಲೆ ಶರಣ ಚಳುವಳಿ ರಾಜಸತ್ತೆಯಿಂದ ಚದುರಿಹೋಗುವಂತಾಯಿತು. ಆರ್ಥಿಕ, ಸಾಮಾಜಿಕ ಸಮಾನತೆಯನ್ನು ಧಾರ್ಮಿಕ ಸಮಾನತೆಯ ಮೂಲಕ ಆಗುಮಾಡಿಕೊಳ್ಳುವ ಪ್ರಯತ್ನದಲ್ಲಿ ಶೂದ್ರ ಮತ್ತು ಮಹಿಳೆಯರನ್ನು ಗಂಭೀರವಾಗಿ ಬಸವಾದಿ ಶರಣರು ಪರಿಗಣಿಸಿದ್ದರು. ಹೀಗಾಗಿಯೆ ಹೆಣ್ಣಿನ ಗೃಹಕೃತ್ಯಕ್ಕೆ ಸಾಮಾಜಿಕ ಗೌರವವನ್ನು ಮತ್ತು ಆರ್ಥಿಕ ಮನ್ನಣೆಯನ್ನು ನೀಡುವ

ಪ್ರಯತ್ನವನ್ನು ಮಾಡಿದರು. ಇಂದಿಗೂ ದುಡಿಮೆಯೆಂದರೆ ಸಂಬಳದ ಮಾನದಂಡದಿಂದಲೇ ಗುರುತಿಸುವ ಪರಿಪಾಠವಿರುವುದರಿಂದ ದಿನವಿಡೀ ಮಹಿಳೆಯರು ಮನೆಯಲ್ಲಿ ದುಡಿಮೆಯಲ್ಲಿ ತೊಡಗಿಕೊಂಡರೂ ಅದನ್ನು ದೇಶದ ಉತ್ಪಾದನಾ ಲೆಕ್ಕದಲ್ಲಿ ಪರಿಗಣಿಸುತ್ತಿಲ್ಲ. ಹೆಣ್ಣಿನ ಕ್ರಿಯಾಶೀಲತೆಯನ್ನು, ದೈಹಿಕ ದುಡಿಮೆಯನ್ನು ಕೌಟುಂಬಿಕ ಏಳು-ಬೀಳಿಗೆ ತಗುಲುಹಾಕಲಾಗಿದೆ. ಅಕ್ಷರಸ್ಥ ಮತ್ತು ಮೇಲ್ವರ್ಗದ ಕುಲೀನ ಸ್ತ್ರೀಯರು 'ಹೌಸ್ ವೈಫ್' (ಗೃಹಿಣಿ) ಸಿಂಡ್ರೋಮ್‌ದಿಂದ ಇಂದಿಗೂ ಬಿಡುಗಡೆ ಹೊಂದಿಲ್ಲವೆಂಬುದು ಗಮನಿಸಬೇಕಾದ ಸಂಗತಿ.

ಧರ್ಮದ ಮೂಲಕ ನಡೆದ ಚರ್ಚೆಗಳಿಗಿಂತಲೂ ಭಿನ್ನವಾದ ಚರ್ಚೆಗಳು ನಮ್ಮ ಆಧುನಿಕ ಸಂದರ್ಭದಲ್ಲಿ ನಡೆದಿವೆ. ಇದಕ್ಕೆ ಕಾರಣ ನಮ್ಮ ಕಾಲದ ಸಾಮಾಜಿಕ- ರಾಜಕೀಯ ಬಿಕ್ಕಟ್ಟುಗಳು. ಇದು ಮಹಿಳೆಗೆ ಹೊಸ ದೃಷ್ಟಿಕೋನವನ್ನು ಕೊಟ್ಟಿರುವುದರಲ್ಲಿ ಯಾವ ಅನುಮಾನಗಳೂ ಇಲ್ಲ. ಈ ವಿಧಾನ ಮಹಿಳೆಯ ಮನೋಭೂಮಿಕೆಯನ್ನು ಅರಿತುಕೊಳ್ಳುವಲ್ಲಿ ಸಹಾಯಕವಾಗಿವೆ. ಜಾತಿ, ವರ್ಗ, ವರ್ಣಗಳ ಸಂಘರ್ಷಕ್ಕೆ ಒಳಗಾದ ಸಮಾಜ ಹೆಣ್ಣಿನ ವಿಷಯಕ್ಕೆ ಬಂದಾಗ ಸಮಾನ ಗುಂಪಾಗಿ ಕಾಣಿಸಿಕೊಂಡಿದೆ. ಯಾಕೆಂದರೆ ಈ ಮೂರೂ ಅಂಶಗಳು ಅಧಿಕಾರಕ್ಕಾಗಿ ಆಕ್ರಮಣಶೀಲತೆಯನ್ನೇ ಅವಲಂಬಿಸಿವೆ. ಅಂತಹ ಆಕ್ರಮಣಶೀಲತೆಯ ಪ್ರವೃತ್ತಿಯಿಂದ ದೂರವಿರುವ ಮಹಿಳೆ ತನ್ನ ಹಕ್ಕುಗಳಿಗಾಗಿ ನಿರಂತರ ಹೋರಾಟವನ್ನು ರೂಪಿಸುವುದು ಅಗತ್ಯವಿದೆ. ಅಂತಹ ಅಗತ್ಯತೆಯ ಚಾರಿತ್ರಿಕ ಅಂಶಗಳನ್ನು ಸಮಕಾಲೀನ ಸ್ತ್ರೀವಾದ ಮುಕ್ತವಾದ ಅಭಿಪ್ರಾಯಗಳನ್ನು ಮಂಡಿಸಿದೆ.

ನಾನು ಶ್ರೇಷ್ಠ ಎನ್ನುವ ಪುರುಷನ ವ್ಯಸನಕ್ಕೂ, ಮಹಿಳೆಯು ನಾನು ಸಮಾನಳು ಎನ್ನುವುದಕ್ಕೂ ಅಗಾಧ ವ್ಯತ್ಯಾಸವಿದೆ. ಶ್ರೇಷ್ಠ ಎನ್ನುವುದು ಒಂದು ಅಹಂಭಾವ. ಮುಂದುವರೆದಂತೆ ಅದೊಂದು ಅಕ್ರಮಶೀಲ ಪ್ರವೃತ್ತಿ. ಅದೇ ಮಹಿಳೆ ಇದನ್ನು ಪ್ರತಿಪಾದಿಸುತ್ತಿರುವ ನೆಲೆ ಅತ್ಯಂತ ಜೀವಪರವಾಗಿದೆ. ಶತಶತಮಾನಗಳಿಂದಲೂ ಅಧೀನತೆಯನ್ನು Feel ಮಾಡಿರುವ ಮಹಿಳೆ ಇಂದು ಕ್ರಿಯಾತ್ಮಕವಾಗಿ ಪ್ರಶ್ನಿಸುತ್ತಿರುವುದು, ತನ್ನ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿರುವುದರ ಹಿಂದೆ ಪುರುಷನ ಹಿತಾಸಕ್ತಿಯೂ ಇದೆ. ಹೆಣ್ಣು ಎಂದಿಗೂ ಕುಟುಂಬವನ್ನು ನಿರಾಕರಿಸಿಲ್ಲ, ಮಾತೃತ್ವವನ್ನು ನಿರಾಕರಿಸಿಲ್ಲ, ಪರಶುರಾಮನಂತೆ ತಾಯಿಯನ್ನೋ, ತಂದೆಯನ್ನೂ ಹತ್ಯೆ ಮಾಡಿಲ್ಲ. ಆಕೆ ಏನಿದ್ದರೂ ಸಂಗೋಪನೆಯ ಶಕ್ತಿಯಾಗಿ ಕಾಣಿಸಿಕೊಂಡಿದ್ದಾಳೆ. ಆಕೆಯ ಸಮಾಜದ ಕಲ್ಪನೆಯಲ್ಲಿ ಧರ್ಮದ ಕಲ್ಪನೆಯಲ್ಲಿ ಪುರುಷನಿದ್ದಾನೆ. ಆತನ ಗೈರು ಹಾಜರಿಯನ್ನು ಯಾವ ಸ್ತ್ರೀವಾದವೂ ಪ್ರತಿಪಾದಿಸಿಲ್ಲ. ಅದೇ ಪುರುಷನ ದೃಷ್ಟಿಕೋನದಲ್ಲಿ ಮಹಿಳೆ ಸಮಾಜದ ಪ್ರತಿನಿಧಿಯಾಗಿ, ಕುಟುಂಬದ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುವುದಿಲ್ಲ. ಈ ದ್ವಂದ್ವವನ್ನು ಬಿಡಿಸಲು ಮಹಿಳೆಗೆ ತನ್ನದೇ ಆದ ತಾತ್ವಿಕತೆಯ ಅವಶ್ಯಕತೆ ಇದೆ. ಅದು ಚಳುವಳಿಯ ರೂಪದಲ್ಲಿರಬಹುದು ಇಲ್ಲವೆ ಹೋರಾಟದ ರೂಪದಲ್ಲಿರಬಹುದು ಅಥವಾ ಸಾಹಿತ್ಯದ ಮೂಲಕವಾಗಿರಬಹುದು. ಇಲ್ಲೆಲ್ಲಾ ಹೆಣ್ಣು ನಿರೀಕ್ಷಿಸುತ್ತಿರುವ ತನ್ನ ಪ್ರಾತಿನಿಧ್ಯವನ್ನು ಆದರೆ ಅದು ಅನಾಯಾಸವಾಗಿ ಸಿಗುವುದಿಲ್ಲ. ಯಾಕೆಂದರೆ ಅದು ಒಬ್ಬ ಪುರುಷನನ್ನು ಪರಿವರ್ತಿಸುವ ಪ್ರಕ್ರಿಯೆ ಅಲ್ಲ. ಇಡೀ ಸಮಾಜವನ್ನು ಬದಲಾಯಿಸುವ ಇರಾದೆ

ಇರುವುದರಿಂದ ಈ ಚಳುವಳಿಗೆ ಸ್ಪಷ್ಟವಾದ ತಾತ್ವಿಕ ನೆಲೆ ಬೇಕಾಗುತ್ತದೆ. ಅಂತಹ ಚಿಂತನೆಗಳು ವಿಭಿನ್ನ ಆಯಾಮಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಅದರಲ್ಲಿಯೂ ಮುಖ್ಯವಾಗಿ ಸ್ತ್ರೀವಾದ ಸಿದ್ಧಾಂತದ ನೆಲೆ ಒಂದಾದರೆ, ಮತ್ತೊಂದು ಸಾಹಿತ್ಯದ ನೆಲೆಯಾಗಿದೆ. ಆದರೆ ಇವೆರಡೂ ಭಿನ್ನ ಚಿಂತನೆಗಳಲ್ಲ. ಪರಸ್ಪರ ಸಹಕರಿಸುತ್ತಿರುವ ಈ ಅಧ್ಯಯನದ ನೆಲೆಗಳು ಸ್ತ್ರೀವಾದಿ ಓದನ್ನು ರೂಪಿಸುತ್ತಿರುವುದು ಮಹತ್ವದ ಸಂಗತಿಯಾಗಿದೆ. ಹೀಗಾಗಿ ಇವೆರಡೂ ನೆಲೆಗಳು ಪ್ರಯತ್ನಿಸುತ್ತಿರುವುದು ಸ್ತ್ರೀ ಪುರುಷರಿಬ್ಬರೂ ಸಮಾನತೆಯನ್ನು ಸಾಧಿಸಬೇಕಾಗಿದೆ ಎಂಬುದನ್ನು ಈ ಹಿನ್ನೆಲೆಯಲ್ಲಿಯೇ ಸ್ತ್ರೀವಾದಿ ಚಿಂತನೆಗಳು ಮುಖ್ಯವಾಗಿ ನಾಲ್ಕು ನೆಲೆಗಳಲ್ಲಿ ನಡೆದಿವೆ ಎಂಬುದನ್ನು ಡಾ.ವೀಣಾ ಮುಜುಂದಾರ್ ಅವರು ವಿಶ್ಲೇಷಿಸುತ್ತಾರೆ.

೧) ವಾಸ್ತವವನ್ನು ಗ್ರಹಿಸಿ ಅರ್ಥ ಮಾಡಿಕೊಳ್ಳುವುದು ಎಂದರೆ ಈವರೆಗೆ ಸತ್ಯದ ಚಿತ್ರಣವೆಂದು ಗ್ರಹಿಕೆಯಾಗಿರುವುದರಲ್ಲಿ ಎಷ್ಟೊಂದು ಅಭ್ಯಾಸವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಈ ಬಗೆಗೆ ಪುನರ್ವ್ಯಾಖ್ಯಾನ ಮಾಡಿಕೊಳ್ಳಬೇಕು. ಸತ್ಯ, ವಾಸ್ತವ ಎಂದು ಗ್ರಹಿಸಿದ್ದು ಪುರುಷ ದೃಷ್ಟಿಕೋನದ್ದಾಗಿದೆಯಲ್ಲವೇ ಎಂಬ ಅರಿವು.

೨) ಸಮಸ್ಯೆಯನ್ನು ಗುರುತಿಸುವಲ್ಲಿ ಆಗಿರುವ ಸ್ಥಿತ್ಯಂತರಗಳು ಹೀಗೆ ಗೌರವಾದರಗಳ ಸ್ಥಾನ ಇತ್ತು ಎಂದು ಈವರೆಗೆ ನಂಬಿಸುತ್ತಾ ಬರಲಾಗಿದೆ. ಇತ್ತೀಚೆಗಷ್ಟೇ ಸಮಸ್ಯೆಯೊಂದಿದೆ ಎಂಬುದನ್ನು ಗುರುತಿಸಿ ಒಪ್ಪಲಾಗಿದೆ. ಅಂದರೆ ರೋಗ ನಿದಾನ (diagnosis) ಜಾರಿಗೊಂಡಿದೆ.

೩) ಆಗಿಹೋದ ತಪ್ಪುಗಳನ್ನು ಮರೆಯಿಸುವ ಪ್ರಯತ್ನ ಸಾಗಿದೆ. ಈ ಪ್ರಯತ್ನ ಹೊಸದಲ್ಲ. ಸ್ತ್ರೀಯನ್ನು ಭ್ರಾಮಕ ನೆಲೆಯಲ್ಲಿಟ್ಟು ವಂಚಿಸಲಾಗುತ್ತಿದೆ. ಮಾತೃತ್ವ, ದೈವತ್ವಗಳ ಮಾತು; ವೇದ ಕಾಲದಲ್ಲಿ ಎಂತೆಂಥ ಸ್ತ್ರೀಯರ ಇರುವಿಕೆ ಸಾಧ್ಯವಿತ್ತು ಎಂಬ ನಿದರ್ಶನಗಳಿಂದ ಪ್ರಯೋಜನವಿಲ್ಲ. ಏಕೆಂದರೆ ಈ ನಿದರ್ಶನಗಳು ಕೇವಲ ಅಪವಾದಗಳು. ಒಬ್ಬ ಇಂದಿರಾಗಾಂಧಿಯನ್ನು ತೋರಿ ಸ್ತ್ರೀಗೆ ಮಹತ್ವದ ಸ್ಥಾನ ಕೊಡಲಾಗಿದೆ ಎಂದಂತೆ, ಬಹುತೇಕ ಸ್ತ್ರೀಯರ ಪಾಡೇನು ಎಂಬುದನ್ನು ಗಮನಿಸಬೇಕು.

೪) ಈವರೆಗೆ ನಡೆದು ಬಂದದ್ದನ್ನು ಪೂರ್ಣ reverse ಮಾಡಬೇಕೋ ಅಥವಾ ನಡೆಯುತ್ತಿರುವ ಕ್ರಮವನ್ನು ತಿದ್ದುಪಡಿ ಮಾಡಿ ಪ್ರಯೋಗಿಸಬೇಕೋ ಎಂಬ ಡೋಲಾಯಮಾನತೆ. ಇಲ್ಲೂ ಸಹ ಭ್ರಮೆಯ ಪ್ರಯೋಗವಿದೆ. ಅಭಿವೃದ್ಧಿ, ಪ್ರಗತಿ, ಸಮಾನತೆಗಳೆಂಬ ಮಾತನಾಡುತ್ತಾ ಜನತೆ, ಸಮುದಾಯ ಎಂಬ ಪದಗಳನ್ನು 'ಪುರುಷ ಎಂಬುದಕ್ಕೆ ಬದಲಾಗಿ ಬಳಸಿದಾಗ 'ಎಲ್ಲ ಸರಿಹೋಯಿತು' ಎಂಬ ಭಾವ ಬರುತ್ತದೆ. ಆ ವಾಸ್ತವದಲ್ಲಿ ಈ 'ಜನತೆ' 'ಸಮುದಾಯ'ದಲ್ಲಿ ಸ್ತ್ರೀ ಸೇರ್ಪಡೆಯಾಗುವುದಿಲ್ಲ. ಈ ಬಗೆಗೆ ಮೈ ಮರೆಯದೆ 'ಸ್ತ್ರೀ' ಸೇರುತ್ತಾಳೆ ಎಂಬ ಬಗ್ಗೆ ಸ್ಪಷ್ಟನೆ ಪಡೆಯಬೇಕು.

ಇಡೀ ಈ ಚಿಂತನೆಯಲ್ಲಿ ಸ್ತ್ರೀಗೆ ಬೇಕಾಗಿರುವುದೇನು ಎಂಬ ಬಗ್ಗೆ ಸ್ಪಷ್ಟವಾದ ಮಂಡನೆ ಇದೆ. ಸೀಗೆ ಬೇಕಾಗಿರುವುದು ಬೇರೆಯೇ ಆದ ವಿಶಿಷ್ಟ ಸ್ಥಾನಮಾನಗಳಲ್ಲ. ಸಮಾಜದ ಜವಾಬ್ದಾರಿಗಳನ್ನು ಹಂಚಿಕೊಳ್ಳುವಲ್ಲಿ ಈಗಿರುವ ವ್ಯವಸ್ಥೆಯ ಅಳವಡಿಕೆಯಲ್ಲಿ ಸ್ತ್ರೀಯ ಪಾಲು, ಜನತೆ, ಸಮುದಾಯ, ಸಮಾಜ ಎಂದಾಗ 'ಸ್ತ್ರೀ'ಯನ್ನೂ ಒಳಗೊಂಡಂತೆ



ಎಲ್ಲರೂ ಎಂಬಂತಹ ವ್ಯಾಖ್ಯಾನ" (ಎಚ್.ಎಸ್.ಶ್ರೀಮತಿ : ಸಮಕಾಲೀನ ಕನ್ನಡ ಸಾಹಿತ್ಯ : ಸ್ತ್ರೀವಾದಿ ಓದಿನ ಹಿನ್ನೆಲೆಯಲ್ಲಿ : ಪುಟ : ೧೧೭-೧೧೮)

ಎಲ್ಲರನ್ನೂ ಒಳಗೊಳ್ಳಬೇಕಾದ ನಮ್ಮ ಸಾಂಸ್ಕೃತಿಕ ಸಂಸ್ಥೆಗಳು ಮಾಡಿದ್ದಾದರೂ ಏನನ್ನು ? ಬೌದ್ಧಿಕ ವಲಯಕ್ಕೆ ಹೆಣ್ಣನ್ನು ದೂರಮಾಡಿ ಅನುಭವಲೋಕಕ್ಕೆ ಸೀಮಿತಗೊಳಿಸಿ, ಆಕೆಯನ್ನು 'ಅಡಿಗೆಮನೆ'ಗೆ ಸಂಕೇತವಾಗಿ ಬಳಸಿ, ಈ ಸಮಾಜ ತಲುಪಿದ್ದಾದರೂ ಎಲ್ಲಿ ? ಅಪೂರ್ಣವಾದ ಬದುಕನ್ನು ಪರಿಚಯಿಸಿದ ಇದುವರೆಗಿನ ಪುರುಷ ಚಿಂತನೆಗಳು ಪೂರ್ಣಗೊಳ್ಳಬೇಕಾದರೆ ಮಹಿಳಾ ಅನುಭವ ಲೋಕವನ್ನು ಆಗು ಮಾಡಿಕೊಳ್ಳಲೇಬೇಕು. ಅಂತಹ ಅಸಮಗ್ರ ಸಾಹಿತ್ಯವನ್ನು ಸಮಗ್ರಗೊಳಿಸುವ ಆಲೋಚನೆಯೂ ಸ್ತ್ರೀವಾದಕ್ಕಿದೆ. ಈ ಕಾರಣಕ್ಕಾಗಿ ಇದುವರೆಗಿನ ಶಾಸ್ತ್ರ, ಪುರಾಣ, ಕಾವ್ಯ, ಚರಿತ್ರೆಯಲ್ಲಿ ಮಹಿಳೆಯ ಆಕೃತಿಗಳನ್ನು ಸ್ತ್ರೀವಾದಿ ಚಿಂತನೆಯ ಮೂಲಕ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗುತ್ತಿದೆ.

ಚರಿತ್ರೆಯುದ್ದಕ್ಕೂ ಗಂಡಾಳ್ವಿಕೆಯನ್ನು ಒಪ್ಪಿಕೊಂಡು ಬಂದ ಸಮಾಜದ ಮನಸ್ಥಿತಿಗೆ ಲಿಂಗಭೇದವಿಲ್ಲ. ಹೀಗಾಗಿಯೇ ನಮ್ಮ ಸಾಹಿತ್ಯಾದಿ ಕಲೆಗಳೆಲ್ಲವೂ ಗಂಡು ಮನಸ್ಥಿತಿಯ ಸ್ಥಿರೀಕರಣಕ್ಕೆ ಸಾಕಷ್ಟು ಶ್ರಮಿಸಿವೆ. ಈ ಚರಿತ್ರೆಯನ್ನು ನೆನಪಿಟ್ಟುಕೊಂಡು ಆಧುನಿಕ ಕಾಲದ ಮಹಿಳೆಯರು ತಮ್ಮ ಬಿಡುಗಡೆಯ ನಕ್ಷೆಯನ್ನು ಅಕ್ಷರದ ಮೂಲಕ ಬರೆಯಲು ಪ್ರಾರಂಭಿಸಿದರು. ಈ ಪ್ರಯತ್ನ ಸ್ವಾತಂತ್ರ ಪೂರ್ವದಿಂದ ಇಂದಿನವರೆಗೂ ವ್ಯಕ್ತಿ ನೆಲೆಯಿಂದ, ಸಂಘಟಿತ ನೆಲೆಯಲ್ಲಿ ನಡೆದಿರುವುದಕ್ಕೆ ಸಾಕ್ಷಿ ಪುರಾವೆಗಳಿವೆ. ಆದರೆ ಕಾಲ ದಾಖಲಿಸಿಕೊಳ್ಳುವ ಒತ್ತಾಸೆಯನ್ನು ಇಂದು ಸಾಹಿತ್ಯ ಪರಿಷತ್ತಿನ ಮೂಲಕ ಹೊರಹಾಕಿದೆ. ಹೀಗಾಗಿ ಮಹಿಳೆಯರು ತಮ್ಮ ಅನುಭವಗಳನ್ನು ತಮಗಿರುವ ಲೋಕ ಗ್ರಹಿಕೆಗಳನ್ನು ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಹೊರಹಾಕುವ ಪ್ರಯತ್ನವನ್ನು ಗಂಭೀರವಾಗಿಯೆ ಮಾಡಿರುವರು.

ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಂಡು ಸಂಭ್ರಮಿಸಿದೆ. ಈ ಸಂಭ್ರಮಕ್ಕೆ ಮಹಿಳೆಯರು ಕಾರಣಿಭೂತರು ಎನ್ನುವುದರಲ್ಲಿ ಅನುಮಾನಗಳಿಲ್ಲ. ಕನ್ನಡಿಗರ ಹೆಮ್ಮೆಯ ಸಂಸ್ಥೆಯಾದ ಸಾಹಿತ್ಯ

ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮನು ಬಳಿಗಾರ ಅವರು ನಂಬಿರುವ ಸಾಮಾಜಿಕ ನ್ಯಾಯ, ಪ್ರತಿಭಾ ನ್ಯಾಯ, ಪ್ರಾದೇಶಿಕ ನ್ಯಾಯ, ಲಿಂಗ ಸಮಾನತೆಯ ನ್ಯಾಯವನ್ನು ಅನುಷ್ಠಾನಗೊಳಿಸಿರುವರು. ಅದರಂಗವಾಗಿ ಇಂದು (ಮಹಿಳಾ ಸಂಪುಟಗಳು) ಮಹಿಳಾ ಸಾಹಿತ್ಯದ ಎಂಟು ಸಂಪುಟಗಳು ಲೋಕದ ನ್ಯಾಯದ ತಕ್ಕಡಿಯನ್ನು ಸರಿದೂಗಿಸುವ ಇರಾದೆಯನ್ನು ಈಡೇರಿಸಿಕೊಳ್ಳುತ್ತಿದೆ. ಕಥೆ, ಕಾವ್ಯ, ಲಲಿತ ಪ್ರಬಂಧ, ಅಂಕಣ, ವಿಮರ್ಶೆ, ಸ್ತ್ರೀವಾದ, ಸಂಕೀರ್ಣ, ಜಾನಪದವೆಂಬ ಎಂಟು ಸಂಪುಟಗಳು ಮಹಿಳೆಯರು ವಿವಿಧ ಪ್ರಕಾರಗಳು ಮಾಡಿದ ಸಾಹಿತ್ಯ ಕೃಷಿಯ ಪ್ರಾತಿನಿಧಿಕ ಸಂಕಲನಗಳಾಗಿವೆ. ಸಾಹಿತ್ಯ ಚರಿತ್ರೆಯ ಒಂಟಿಕಾಲಿನ ನಡಿಗೆಗೆ ಜಂಟಿಕಾಲುಗಳ ಹೆಜ್ಜೆಗಳ ನಾದ ಮುಂದಿನ ತಲೆಮಾರು ಸಾಹಿತ್ಯ ಚರಿತ್ರೆ ಬರೆಯುವುದಕ್ಕೆ ಓದುವುದಕ್ಕೆ ಶೋಧಿಸುವುದಕ್ಕೆ ಬಹುದೊಡ್ಡ ಆಕರ ಸಾಮಗ್ರಿಗಳಾಗಬಲ್ಲವು.



ಪರಿಕಲ್ಪನಾತ್ಮಕ ಎಂಟು ಸಂಪುಟಗಳಲ್ಲಿ ಮಹಿಳೆಯರ ಅನುಭವಗಳು ಅಂತರ್ಗತವಾಗಿರುವ ವಿಷಯಗಳನ್ನು, ಅವುಗಳ ಆಶಯಗಳನ್ನು ದಾಖಲಿಸುವುದು ಕಾಲದ ಅಗತ್ಯವೆಂದು ಭಾವಿಸಿರುವೆ.

ಕಾವ್ಯ ಸಂಪುಟ ಒಂದು : 'ರಾಜಕಾರಣವೇ ಕಾವ್ಯಕಾರಣ' : ಪಿ.ಚಂದಿಕಾರವರು ಪ್ರಾತಿನಿಧಿಕ ಮಹಿಳಾ ಕಾವ್ಯದ ಸಂಪಾದನೆಯ ಪ್ರಾರಂಭದಲ್ಲಿಯೇ ಕವಿತೆಯೇ ಏಕೆ ? ಎಂದು ಪ್ರಶ್ನಿಸಿಕೊಳ್ಳುತ್ತಲೇ ಅದಕ್ಕೆ ಉತ್ತರಗಳನ್ನು ಹೆಣ್ಣಿನ ಒಳಲೋಕದಿಂದಲೇ ಹುಡುಕುವ ಪ್ರಯತ್ನ ಮಾಡಿರುವರು “ಕನ್ನಡ ಮಹಿಳಾ ಕಾವ್ಯದ ಮೊದಲ ಹಂತದಲ್ಲಿ ಅಕ್ಷರಜ್ಞಾನ,ಎರಡನೆಯ ಹಂತದಲ್ಲಿ ಅರಿವು ಮತ್ತು ಮೂರನೆಯ ಹಂತದಲ್ಲಿ ಆತ್ಮ ಪ್ರತ್ಯಯವನ್ನೊಳಗೊಂಡ ದೊಡ್ಡ ಪರಿವರ್ತನೆಯ ನೆಲೆಗಳನ್ನು ಕಾಣುತ್ತೇವೆ ಎಂದು ಕಾವ್ಯಲೋಕದ ಮಹಿಳಾ ಪ್ರವೇಶಿಕೆಗೆ ತಾತ್ವಿಕ ಚೌಕದ್ದೊಂದು ಇತ್ತು ಎಂಬುದನ್ನು ಮುಂದಿಟ್ಟುಕೊಂಡು ಅದರ ಮೂಲಕ ಕಾವ್ಯ ಕಾರಣಗಳನ್ನು ವಿಶ್ಲೇಷಿಸುತ್ತಾರೆ. ಮೊದಲ ತಲೆಮಾರಿನ ಕವಿಯಿತ್ರಿಯರಿಗೆ, ರಾಷ್ಟ್ರೀಯ ಚಳುವಳಿ, ಗಾಂಧಿ ಪ್ರಭಾವ ಮುಂತಾದ ಕಾರಣಗಳಿಗಾಗಿ ಆದರ್ಶ ಸಮಾಜದ ಹಂಬಲ ಮುಖ್ಯವಾಗಿತ್ತು. ತಿರುಮಲೆ ರಾಜಮ್ಮ, ಸರಸ್ವತಿಬಾಯಿ ರಾಜವಾಡೆಯಂಥವರು ಈ ಪಥದಲ್ಲಿ ನಡೆದರೆ ಬೆಳಗೆರೆ ಜಾನಕಮ್ಮ, ಕಾವೇರಮ್ಮನಂಥವರು ಹೆಣ್ಣಿನ ನೋವಿನ ಕಾರಣಗಳನ್ನು ಹುಡಕಲು ಹೊರಟರು.

ಆಧುನಿಕ ಓದಿನ ಪ್ರಭಾವಕ್ಕೊಳಗಾದ ನಂತರದ ತಲೆಮಾರು ಸಮಾಜವೆಂದರೆ ಕೇವಲ ಪುರುಷನೆಂಬುದನ್ನು ಪ್ರಶ್ನಿಸುವುದಕ್ಕೆ ಜಗತ್ತಿನಾದ್ಯಂತ ಪ್ರಾರಂಭವಾಗಿದ್ದ ವಿ ಮೆನ್ ಎನ್ನುವ ಚಳುವಳಿಯ ಇದರ ಪ್ರಭಾವ ಚ.ಸರ್ವಮಂಗಳಾರಂಥವರ 'ಅವನು ಬಸವ'ದ ಮೂಲಕ ಪುರುಷ ಪ್ರಧಾನ ಸಾಂಸ್ಕೃತಿಕ ಮನಸ್ಸು, ಎಳೆದ ಗೆರೆಯನ್ನು ಅಳುಕಿಸದೆ ಅದರ ಸಮಾನಾಂತರವಾದ ಹಿರಿದಾದ ಗೆರೆ ಎಳೆಯುವುದರ ಮೂಲಕ ಕಾವ್ಯದ

ಮಡಿವಂತಿಕೆಯ ಲೋಕದಲ್ಲೊಂದು ಕಲ್ಲು ಒಗೆದು ತರಂಗಗಳು ಏಳುವಂತೆ ಮಾಡಿದರು. ಇದರ ಮುಂದುವರಿಕೆಯಾಗಿ ಸ್ತ್ರೀವಾದವನ್ನು ಅರ್ಥೈಸಿಕೊಂಡು ಹೆಣ್ಣಿನ ಅಸ್ತಿತ್ವ, ಅನನ್ಯತೆಯ ಹುಡುಕಾಟಕ್ಕೆ ಒಂದು ತಲೆಮಾರೆ ಸೃಷ್ಟಿಯಾಯಿತು. ಮಹಿಳಾ ಕಾವ್ಯವೆಂಬುದು ಲೋಕಗ್ರಹಿಕೆಯ ಸಂಚಾರಕ್ಕೆ ಹೊರಟಿತು. ಇದೇ ಹೊತ್ತಿಗೆ ಕರ್ನಾಟಕದಲ್ಲಿ ಸಾಹಿತ್ಯಕ ಚಳುವಳಿಯೊಂದು ಮಹಿಳೆಯರ ಬರಹಕ್ಕೆ ಹಕ್ಕೊತ್ತಾಯಕ್ಕೆ ಒಂದು ವೇದಿಕೆಯನ್ನು ಕಲ್ಪಿಸಿತು. ದಲಿತ ಬಂಡಾಯ ಚಳುವಳಿಯ ಪ್ರಭಾವಕ್ಕೊಳಗಾಗಿ ಮಾತೆ ಆಡದ ಸಮುದಾಯಗಳ ಧ್ವನಿಯಾಗಿ ಅಕ್ಷರಗಳಿಗೆ ಪ್ರತಿಭಟನೆಯ ಅಸ್ತ್ರದ ನಿಗಿ ನಿಗಿ ಕಿಚ್ಚನ್ನು ಪರಿಚಯಿಸಿದರು. ಈ ಹೊತ್ತಿನಲ್ಲಿ ಅಕ್ಷರಲೋಕ ಬೆಚ್ಚಿ ಬೀಳಿಸುವಂತಹ ಸಾಮಾಜಿಕ ಸ್ಫೋಟಕಗಳು ಕಾಣಿಸಿಕೊಂಡವು. ಅಭಿಜಾತ ಸಾಹಿತ್ಯದ ಮಾದರಿಗಳನ್ನು ಮುರಿದು ಕಟ್ಟುವ ಕ್ರಿಯೆಗಳು ಅನುಭವದ ತಾಜಾತನದಿಂದ ಆದವು. ಹೀಗೆ ಮಾತನಾಡಿದ ಬರೆದ ಬಹುದೊಡ್ಡ ಗುಂಪು ಅಲಕ್ಷಿತಲೋಕದಿಂದ ಬಂದವರಾಗಿದ್ದರು. ಈ ಎಲ್ಲ ಸಾಹಿತ್ಯಕ, ಸಾಮಾಜಿಕ, ಲಿಂಗ ರಾಜಕಾರಣಗಳ ಗ್ರಹಿಕೆಗಳನ್ನಿಟ್ಟುಕೊಂಡು ಈ ಸಂಪುಟ ಮಹಿಳಾ ಕಾವ್ಯದ (ಪ್ರಾತಿನಿಧಿಕ) ಪರಿಕಲ್ಪನೆಯ ಹಿನ್ನೆಲೆಯಲ್ಲಿ ಕನ್ನಡ ಕಾವ್ಯದ ನಾಡಿಮಿಡಿತವನ್ನು ಹಿಡಿದಿಟ್ಟಿದೆ.



ಕಥಾ ಸಂಪುಟ ಎರಡು : ಒಳಕುದಿಯ ಹೊರಹಾಕುವ ಜೀವಗಳ ಹಸಿಮಾತು : ಹೆಣ್ಣಿನ ಒಡಲು ಕಥೆಗಳ ಕಡಲು ಎಂದು ಹೇಳಲಾಗಿದೆ. ಈ ಕಡಲಿನ ಆಳ ಅಗಲಗಳನ್ನು ಡಾ.ಪದ್ಮನಿ ನಾಗರಾಜು ಅವರು ಮಹಿಳೆಯರ ಪ್ರಾತಿನಿಧಿಕ ಕಥೆಗಳ ಮೂಲಕ ಅಳೆಯುವ ಪ್ರಯತ್ನವನ್ನು ಈ ಸಂಪುಟದಲ್ಲಿ ಮಾಡಿರುವರು. ಮಾನವ ಇತಿಹಾಸ 'ಮಹಿಳಾ ಇತಿಹಾಸವಲ್ಲ'ವೆಂಬ ಪ್ರಜ್ಞೆಯೊಂದಿಗೆ ಒಡಲಿನ ಕಥೆಗಳ ಕಡಲಿನಲ್ಲಿರುವ ಮುತ್ತುರತ್ನಗಳು ಕಪ್ಪೆ ಚಿಪ್ಪುಗಳನ್ನು ಒಟ್ಟಿಗೆ ಸಂಗ್ರಹಿಸಿರುವರು. “ಸ್ತ್ರೀ ಪರ ಸಾಹಿತ್ಯ ರಚಿಸಿದ ಆರ್.ಕಲ್ಯಾಣಮ್ಮ ಹಾಗೂ ನಂಜನಗೂಡು ತಿರುಮಲಾಂಬರವರನ್ನು ಆಧುನಿಕ ಕನ್ನಡ ಸಾಹಿತ್ಯದ ಮೊದಲ ಲೇಖಕಿಯರು ಎಂದು ಇವರಿಬ್ಬರನ್ನು ಗುರುತಿಸಲಾಗುತ್ತದೆ.” ಮೊದಲ ತಲೆಮಾರಿನ ಕಥೆಗಾರ್ತಿಯರಿಗೆ ಅಕ್ಷರಲೋಕದ ಹಿನ್ನೆಲೆಯಿತ್ತು, ಆದರ್ಶವೆಂದು ಹೇಳಿದ ಸಾಮಾಜಿಕ, ಕೌಟುಂಬಿಕ ಮಾದರಿಗಳಿದ್ದವು. ಇಂತಹ ಮಾದರಿಗಳನ್ನಿಟ್ಟುಕೊಂಡು ಮೊದಲ ತಲೆಮಾರಿನ ಕಥೆಗಾರ್ತಿಯರು ಕಥೆ ಬರೆದದ್ದು ಕೂಡಾ ಆ ಕಾಲದ ಮಡಿವಂತಿಕೆ ಸಮಾಜದಲ್ಲಿ ಸಾಹಸವೆಂದೆ ಭಾವಿಸಲಾಗಿತ್ತು “ಸೀಮಿತ ನೆಲೆಗಟ್ಟಿನಲ್ಲಿ ಮಹಿಳೆ ಪ್ರಾರಂಭದಲ್ಲಿ ಬರೆಯಲಾರಂಭಿಸಿದ ಅವಳ ಕೃತಿಗಳಿಗೆ ಆಯ್ದುಕೊಂಡ ವಸ್ತುಗಳು ಕೂಡಾ ಅವಳು ಕಂಡು ಕೇಳಿದ, ಅನುಭವಿಸಿದ ಘಟನೆಗಳನ್ನೇ ಆಧರಿಸಿದ್ದವಾಗಿದ್ದವು. ಅಂತಹ ಸಾಹಿತ್ಯದಲ್ಲಿ ಗಟ್ಟಿತನ ಕಂಡುಬರದಿದ್ದರೂ, ಬರೆದಳೆಂಬ ಹೆಮ್ಮೆಯ ಬದಲು “ಅಡಿಗೆಮನೆ ಸಾಹಿತ್ಯ” ಎಂದು ಅವಹೇಳನಕ್ಕೊಳಗಾದರೂ ಮಹಿಳೆಯರು ಧೃತಿಗೆಡದೆ ಬರೆದೇ ಬರೆದರು. ಇಂದು ಅಂತಹ ಮಾತುಗಳನ್ನು

ಧಿಕ್ಕರಿಸಿ ಸಮಾನವಾಗಿ ಬರೆದ ಮಹಿಳಾ ಸಾಹಿತ್ಯ (ಕಥೆ)ವನ್ನು ಕಡೆಗಣಿಸಲು ಸಾಧ್ಯವೇ ಇಲ್ಲ"ವೆಂದು ಹಲವು ಪ್ರಥಮಗಳನ್ನು ಕನ್ನಡ ಕಥಾಪರಂಪರೆಯಲ್ಲಿ ಮಹಿಳೆಯರು ಸಾಧಿಸಿರುವುದನ್ನು ಈ ಸಂಪುಟದಲ್ಲಿ ದಾಖಲಿಸಿರುವರು.

ಲಲಿತ ಪ್ರಬಂಧ ಸಂಪುಟ ಮೂರು : ಆತ್ಮದೊಂದಿಗಿನ ಆತ್ಮಸಂವಹನ : ಬರಹಗಾರರಲ್ಲಿ ಓದುಗರು ಇರುತ್ತಾರೆ. ಓದುಗರಲ್ಲಿ ಬರಹಗಾರರು ಇರಬೇಕಾಗಿಲ್ಲ. ಬರಹಗಾರರಲ್ಲಿರುವ ಓದುಗರ ನಡುವಿನ ಸಂಬಂಧಗಳು ಆತ್ಮದೊಂದಿಗಿನ ಆತ್ಮಸಂವಹನದಂತಿರುತ್ತದೆ ಎಂಬುದನ್ನು ಲಲಿತ ಪ್ರಬಂಧಗಳಲ್ಲಿ ಕಾಣಬಹುದು. ಸಾಹಿತ್ಯದಲ್ಲಿ ಗಂಭೀರತೆಗೆ ಮಾತ್ರ ಸ್ಥಾನವೆಂಬುದನ್ನು ಬದಿಗಿಟ್ಟು ಸಾಹಿತ್ಯವು ಮನುಷ್ಯಲೋಕದ ಕನ್ನಡಿಯೆಂದು ಭಾವಿಸುವುದಾದರೆ ಅಲ್ಲಿ ಉಲ್ಲಾಸ, ಉತ್ಸಾಹ, ಸರಸ, ವಿನೋದಗಳಿಗೆಲ್ಲವುಗಳಿಗೂ ಜಾಗವಿದೆ ಎಂಬುದನ್ನು ಬಿಂಬಿಸಲೆಂದೆ ಲಲಿತ ಪ್ರಬಂಧ'ಗಳ ಪ್ರಕಾರವೊಂದು ಹುಟ್ಟಿಕೊಂಡಿದೆ. "ವಿ.ಸೀ.ಯವರು ಭಾವಿಸಿದಂತೆ ಲಲಿತ ಪ್ರಬಂಧಗಳೆಂದರೆ 'ಮನಸ್ಸಿನ ಒಲವು, ಓಟ, ಆಕಾಂಕ್ಷೆಗಳನ್ನು ನೇಯುವ ಒಂದು ಕ್ರಮ" ಎನ್ನುತ್ತಾರೆ. 'ನೇಯುವ ಈ ಕ್ರಮ ಪ್ರಬಂಧಕಾರರ ಕಲೆಗಾರಿಕೆಯನ್ನು ತೋರಿಸುತ್ತದೆ. ಲಲಿತ ಪ್ರಬಂಧಗಳಲ್ಲಿ ವೈಚಾರಿಕತೆ ಇದೆ. ಕಾಲ್ಪನಿಕತೆಯೂ ಇದೆ. ಹಾಸ್ಯ ವಿಡಂಬನೆಗಳೂ ಇವೆ. ಇಂಥ ವಿಭಿನ್ನ ಎಳೆಗಳ ಕಲಾತ್ಮಕ ನೇಯ್ದೆಯುಳ್ಳ ಬರಹವೇ ಲಲಿತ ಪ್ರಬಂಧ" ಈ ಕಲಾತ್ಮಕ ನೇಯ್ದೆಯಲ್ಲಿ ಗಂಡಸಿಗೆ ಅಪರಿಚಿತವಾಗಿದ್ದ ಅದ್ಭುತಲೋಕವೊಂದರ ಪರಿಚಯವನ್ನು ಮಹಿಳೆಯರು ಮಾಡಿಸಿರುವರು. ಅದು ಮಹಿಳಾ ಲೋಕವೆಂದು ಕರೆಯಿಸಿಕೊಂಡ ಅಡಗಿಮನೆಯ ಒಳಗುಟ್ಟನ್ನು ಅದರ ಸೌಂದರ್ಯ ಸಾಧ್ಯತೆಗಳನ್ನು



ಅದರೊಂದಿಗಿದ್ದ ಅದರೊಂದಿಗಿನ ಅನುಭವಗಳನ್ನು ನವಿರಾಗಿ ಹೇಳಿ, ತಾವು ಹಗುರಾಗಿ ಓದುಗರ ಹೃದಯವನ್ನು ಭಾರಗೊಳಿಸುವ ಹಲವು ಕಹಿ ಸತ್ಯಗಳಿಗೆ ಅಕ್ಷರದ ನೆಯ್ದೆ ಕುಸುರಿತನದ ಎಲ್ಲ ಹಂತಗಳ ಮಾದರಿಗಳನ್ನು ಈ ಸಂಪುಟದಲ್ಲಿ ಕಾಣಬಹುದು.

ವಿಮರ್ಶಾ ಸಂಪುಟ ನಾಲ್ಕು : "ಶಕ್ತರನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತದೆಯೇ ಹೊರತು ಅಶಕ್ತರನ್ನಲ್ಲ" : ಎನ್ನುವ ಕಾಲಾತೀತ ಸತ್ಯದ ಪುನರ್ ದರ್ಶನವನ್ನು ಡಾ.ಎಂ.ಎಸ್.ಆಶಾದೇವಿಯವರು ವಿಮರ್ಶಾ ಸಂಪುಟದ ಮೂಲಕ ಮಾಡಿರುವರು. "ಹೆಣ್ಣಿನ ಮಟ್ಟಿಗೆ ಹಲವು ಬಹಿಷ್ಕೃತ, ಅಸಾಧ್ಯ ಕ್ಷೇತ್ರಗಳಲ್ಲಿ ಒಂದಾಯಿತು" ಎಂದು ಸಂಪಾದಕರು ಸರಿಯಾಗಿಯೇ ವಿಮರ್ಶಾ ಕ್ಷೇತ್ರದ ಲಿಂಗರಾಜಕಾರಣವನ್ನು ಗುರುತಿಸಿರುವರು. ಮೊದಲ ತಲೆಮಾರಿನ ಲೇಖಕಿಯರು ತಮ್ಮ ಬರಹದ ಬಗ್ಗೆ ಪುರುಷ ವಿಮರ್ಶಕರು ಉದಾಸೀನತೆಯಿಂದ ಕಾಣುತ್ತಿರುವುದರ

ಕುರಿತು ಸಹನೆಯಿಂದಲೇ ಮಾತನಾಡಿರುವರು. ಸಾಂಸ್ಕೃತಿಕ ಮತ್ತು ಸಾಹಿತ್ಯಕ ರಾಜಕಾರಣದ ಒಳ ಸುಳಿವುಗಳನ್ನು ಗ್ರಹಿಸುವುದರಲ್ಲಿ ಮೊದಲ ತಲೆಮಾರಿನ ಲೇಖಕಿಯರು ಮುಂದಾಗಲಿಲ್ಲ. ದೂರದೃಷ್ಟಿಯ ಕೊರತೆಯಿಂದ ಹಿರಿಯ ತಲೆಮಾರಿನ ಲೇಖಕಿಯರು ಪುರುಷಲೋಕ ಬಯಸಿದ್ದೆಲ್ಲವನ್ನು ಬಿಟ್ಟುಕೊಟ್ಟು "ಇಟ್ಟಂತೆ ಇರುವೆ ಶಿವಾ" ಎನ್ನುವ ಹಾದಿಯಲ್ಲಿಯೇ ನಡೆದದ್ದು ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಬೇಕಾದವರಿಗೆ ಎದುರಾದ ಬಹುದೊಡ್ಡ ಬಿಕ್ಕಟ್ಟೆಂದು ಹೇಳಬಹುದು. ಕಲೆಯ ಕುರಿತ ಹಾಗೇ ಸ್ಥಾಪಿತ ವ್ಯಾಖ್ಯಾನಗಳನ್ನು ಮುರಿದು ಕಟ್ಟುವ ಕ್ರಿಯೆಗಳಿಗಿಂತಲೂ ಸಹನೆಯಿಂದ ಗೆಲ್ಲುವ ವಿಶ್ವಾಸದಿಂದಲೇ ಬರಹವನ್ನು ಪ್ರಾರಂಭದಲ್ಲಿ ಅಗಾಧವಾಗಿಯೇ ಪ್ರೀತಿಸಿದರು.

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ವಿಮರ್ಶೆ ಮತ್ತು ಮೀಮಾಂಸೆ ಪ್ರಧಾನವಾದ ಕಾರಣ ಸಾಂಸ್ಕೃತಿಕ ರಾಜಕಾರಣದ ಚುಕ್ಕಾಣಿ ಗಂಡಸಿನ ಕೈಯಲ್ಲಿಯೆ ಇತ್ತು. ಹೀಗಾಗಿ ಮಹಿಳೆಯರ ಕೃತಿ ಕುರಿತ ಹಾಗೆ ಅವಜ್ಞತೆ ಮತ್ತು ಅಸಡ್ಡೆಯಿಂದ ನೋಡಿದ್ದರ ಕುರಿತು ತಕರಾರುಗಳನ್ನು ಚಾರಿತ್ರಿಕ ನೆಲೆಯಲ್ಲಿ ವಿಮರ್ಶಕಿಯರು ಎತ್ತಿದ ಮೇಲೆಯೇ ಸಾಹಿತ್ಯ ರಾಜಕಾರಣ ಅರ್ಥವಾಯಿತು. ಹೀಗಾಗಿ ಸಿದ್ಧಮಾದರಿಯ ಅಳತೆಗೋಲಿನಿಂದ ಅಳೆಯುವುದರ ಕುರಿತು ಪರ್ಯಾಯ ಸ್ತ್ರೀ ವಿಮರ್ಶಾ ಪರಿಭಾಷೆಗಳ ಹುಡುಕಾಟಕ್ಕೆ ತೊಡಗಿದರು. ಹೀಗಾಗಿಯೇ ಪುರುಷನಿಷ್ಠ ಸಾಹಿತ್ಯ ವಿಮರ್ಶೆಯ ಮಾನದಂಡಗಳನ್ನು ಮೀರಿ ಸ್ತ್ರೀ ನಿಷ್ಠ ವಿಮರ್ಶಾ ಮಾನದಂಡಗಳನ್ನು ಹುಡುಕಿಕೊಂಡರು. ಬಹುಮುಖಿ ಉಭಯಲಿಂಗೆ ಆಶಯಗಳ ಪ್ರಾತಿನಿಧಿಕ ವಿಮರ್ಶೆಯ ಪರಿಭಾಷೆಗಳ ಪರಿಚಯವನ್ನು ಈ ಸಂಪುಟದಲ್ಲಿ ಕಾಣಬಹುದು.

ಸ್ತ್ರೀವಾದಿ ಸಂಪುಟ ಐದು : ಉಭಯಲಿಂಗಿ ಜ್ಞಾನದ ಪರಿ ಇಂತು : ಆರ್ಥಿಕ ಸಂರಚನೆಯಲ್ಲಿ ಹುದುಗಿರುವ ಸಾಮಾಜಿಕ, ಸಾಂಸ್ಕೃತಿಕ ನಮ್ಮ ಬದುಕಿನ ಸ್ವರೂಪವನ್ನು ನಿರ್ಧರಿಸುತ್ತದೆ. ಬಹುತ್ವವನ್ನು ಒಳಗೊಂಡಿರುವ ಮನುಷ್ಯನ ಸಾಮಾಜಿಕ ಸಾಂಸ್ಕೃತಿಕ ಬದುಕನ್ನು ಕಾಲ, ದೇಶಗಳು ನಿರ್ಧರಿಸುತ್ತವೆ ಎನ್ನುವ ಸಾಮಾಜಿಕ ವ್ಯಾಖ್ಯಾನ ನಾವು ಕಾಣುವ ಪ್ರಪಂಚವನ್ನು ಕುರಿತಾದದ್ದು. ಆಯಾಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳೆಲ್ಲವೂ ಪುರುಷಮಯಗೊಂಡಿರುವುದರಿಂದ ಉತ್ಪಾದಕ ನೆಲೆಯಲ್ಲಿ

ಮಹಿಳೆ ಕಾಣೆಯಾಗಿರುವಳು. ರೂಢಿಗತ ಮಹಿಳೆಯರ ಬದುಕಿನ ಸ್ಥಿತಿಗತಿಗಳನ್ನು ಸ್ತ್ರೀವಾದಿ ಪ್ರಜ್ಞೆಯ ಮೂಲಕ ಅಳೆಯಹೊರಟಿದ್ದರ ಹಿಂದೆ ಪಶ್ಚಿಮದಲ್ಲಿ ನಡೆದ ಮಹಿಳಾ ಚಳುವಳಿಯ ಒತ್ತಾಸೆಗಳಿವೆ. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ನಲುಗಿಹೋದ ಹೆಣ್ಣು ಜೀವದ ಕಾರಕಾರಣಗಳನ್ನು ಹುಡುಕುವ ಪ್ರಯತ್ನ ಒಂದು ಕಡೆಯಾದರೆ ಇನ್ನೊಂದು ಕಡೆ ಸ್ತ್ರೀವಾದಿ ಪ್ರಜ್ಞೆಯ ನೆಲೆಯಲ್ಲಿ ಸ್ತ್ರೀ ಸಂಸ್ಕೃತಿಯ ಶೋಧದ ಪ್ರಯತ್ನಗಳು ಆಧುನಿಕ ಓದಿನ ಮುಖೇನ ಕಾಣಿಸಿಕೊಂಡಿತು. ಹೊರ ಮತ್ತು ಒಳಜಗತ್ತಿನ ಶಕ್ತಿ ಕೇಂದ್ರಗಳೆಂದು ಭಾವಿಸಿರುವ ಉತ್ಪಾದನಾ ನೆಲಯಲ್ಲಿ ಹೆಣ್ಣು ಗಂಡಿಗೆ ಸಮಾನತೆಯ ಹಕ್ಕೊತ್ತಾಯವನ್ನು ಸ್ತ್ರೀವಾದಿ ವಿಚಾರಧಾರೆ ಪ್ರತಿಪಾದಿಸಿತು. "ಸ್ತ್ರೀವಾದಿ ವಿಮರ್ಶೆಯು ಸಾಹಿತ್ಯದಲ್ಲಿ ಸ್ಥಾಪಿತವಾದ ಪುರುಷ ಶ್ರೇಷ್ಠತೆಯ ವಿರುದ್ಧ ತನ್ನ ಹೋರಾಟವನ್ನು ಹಲವು ರೀತಿಗಳಲ್ಲಿ ಮಾಡಬೇಕಾಗಿದೆ. ಈ ಹೋರಾಟಕ್ಕೆ ಬೀಳಿಸುವುದರಲ್ಲಷ್ಟೇ ಆಸಕ್ತಿಯಿಲ್ಲ. ಕಟ್ಟುವುದರಲ್ಲಿ ಕೂಡ. ರಚನಾತ್ಮಕವಾದ ತಮ್ಮ ಕರ್ತವ್ಯಗಳನ್ನು ಈ ವಿಮರ್ಶೆ ಮರೆಯುವಂತಿಲ್ಲ. ಆದ್ದರಿಂದ ಸ್ತ್ರೀವಾದಿ ನೆಲೆಯಿಂದ ಬರುವ ಸಾಹಿತ್ಯಕ್ಕೆ ಆದ್ಯ ಗಮನ ನೀಡುತ್ತವೆ" ಎಂದು ಡಾ.ವಿಜಯಾ ದಬ್ಬೆಯವರು ಸ್ತ್ರೀವಾದ ಕನ್ನಡ ಸಾಹಿತ್ಯ ಲೋಕವನ್ನು ಪ್ರವೇಶಿಸುವ ಹೊತ್ತಿನಲ್ಲಿ ಹೇಳಿರುವ ವಿಚಾರಗಳು ಮುಂದಿನ ದಿನಗಳಲ್ಲಿ ಮಹಿಳೆಯರ ಬರಹಕ್ಕೆ ತಾತ್ವಿಕ ಚೌಕಟ್ಟನ್ನು ನೀಡಿದವು. ಸ್ತ್ರೀವಾದಿ ಸೈದ್ಧಾಂತಿಕ ಚೌಕಟ್ಟು ಬಹುರೂಪದ್ದು. ವರ್ಗ ವರ್ಣಗಳಲ್ಲಿ ಹಂಚಿಹೋಗಿರುವ ಭಾರತದ ಮಹಿಳೆಯರ ಬದುಕಿನ ಅನ್ವೇಷಣೆ ಪಶ್ಚಿಮದ ಚೌಕಟ್ಟಿಗೆ ಒಗ್ಗುವುದರಲ್ಲಿ ಹಲವು ಅನುಮಾನಗಳನ್ನು ಹುಟ್ಟುಹಾಕಿದವು. ಪುರುಷ ದ್ವೇಷ ಮತ್ತು ಕೌಟುಂಬಿಕ ಬದುಕನ್ನು ಮುರಿಯುವ ಮನೆಮುರಿಕಿಯರೆಂದು ಭಾವಿಸುವ ಹಾಗೇ ಸ್ತ್ರೀವಾದದ ಸೈದ್ಧಾಂತಿಕತೆಯನ್ನು ಮೊದಮೊದಲು ಅನುಮಾನದಿಂದ ನೋಡಲಾಯಿತು. ಇದಕ್ಕೆ ಕಾರಣ ಶ್ರೇಣೀಕೃತ ನೆಲೆಯಿಂದ ಬಂದ ಮಹಿಳೆಯರ ಗ್ರಹಿಕೆಗಳಾಗಿದ್ದವು. ನಂತರದ ದಿನಗಳಲ್ಲಿ ಭಾರತದ ಚರಿತ್ರೆ ಮುಖೇನ ಸ್ತ್ರೀವಾದಿ ಸಿದ್ದಾಂತವನ್ನು ಅರ್ಥೈಸಿಕೊಳ್ಳುವ ಪ್ರಯತ್ನಗಳು ಹಲವು ನೆಲೆಯಿಂದ ಬಂದ ಮಹಿಳೆಯರ ಮೂಲಕ ನಡೆದ ಕಾರಣ ಸ್ತ್ರೀವಾದ ವಿಶ್ವಾಸಾರ್ಹತೆಯನ್ನು ಸಮಾಜದಲ್ಲಿ ಗಳಿಸಲು ಸಾಧ್ಯವಾಯಿತು. ಈ ಸಾಧ್ಯತೆಗಳನ್ನು ಈ ಸಂಪುಟದ ಬರಹಗಳಲ್ಲಿ ಕಾಣಬಹುದು.

ಅಂಕಣ ಬರಹ ಸಂಪುಟ ಆರು : ಮಾರುಕಟ್ಟೆಯೊಳಗೆ ಮಾನಸಿಯ ಮಾತುಗಳು: ಕನ್ನಡ ಸಾಹಿತ್ಯದ ಪ್ರಕಾರಗಳಿಗೆ ಹೋಲಿಸಿದರೆ ಅಂಕಣ ಬರಹಗಳು ಇತ್ತೀಚಿನ ಬೆಳೆಯಾಗಿದೆ. ಇದು ಒಂದು ರೀತಿಯಲ್ಲಿ ವಿಮರ್ಶಕರ ಮತ್ತು ಗಂಭೀರ ಓದುಗರ ಅಲಕ್ಷಕ್ಕೆ ಇತ್ತೀಚಿನವರೆಗೂ ಒಳಗಾದ ಪ್ರಕಾರವಾಗಿತ್ತು. ಸಾಹಿತ್ಯಕ್ಕಿರುವ ಮಹತ್ವವನ್ನು ಅಂಕಣ ಬರಹಕ್ಕೆ ನೀಡದೆ ಹೋದ ಕಾರಣ ಸಾಹಿತಿಗಳು ಈ ಪ್ರಕಾರದ ಕೃಷಿಯಲ್ಲಿ ಹೆಚ್ಚು ತೊಡಗಿದಂತಿಲ್ಲ ಡಿ.ವಿ.ಜಿ., ಪಾ.ವೆಂ., ನಿರಂಜನರು, ಹಾ.ಮಾ.ನಾಯಕರಂತಹವರು ಇದನ್ನು ಗಂಭೀರವಾಗಿ ತೆಗೆದುಕೊಂಡ ಕಾರಣದಿಂದ ಸಾಹಿತ್ಯದ ಪ್ರಕಾರಗಳ ವ್ಯಾಪ್ತಿಗೆ ಇತ್ತೀಚೆಗೆ ಸೇರಿಸಲ್ಪಟ್ಟಿದೆ. ಸ್ವತಃ ಪತ್ರಿಕೆಯನ್ನು ಹುಟ್ಟುಹಾಕಿದ ಲಂಕೇಶ, ತೇಜಸ್ವಿ, ಚಂದ್ರಶೇಖರ ಪಾಟೀಲರಂಥವರು ಅಂಕಣ ಬರಹಗಳ ಮೂಲಕವೇ ಗುರುತಿಸಿಕೊಂಡಿದ್ದುಂಟು. ಸಮಕಾಲೀನ ಬಿಕ್ಕಟ್ಟುಗಳನ್ನು ಗಮನದಲ್ಲಿಟ್ಟುಕೊಂಡು ಬೆಳೆದ

ಈ ಪ್ರಕಾರ ಇಂದು ಎಲ್ಲರನ್ನು ಒಳಗೊಳ್ಳುತ್ತಿದೆ. ಕನ್ನಡದ ಮುಖ್ಯ ಬರಹಗಾರರು ಮತ್ತು ಯುವ ಬರಹಗಾರರು ಇಂದು ಪತ್ರಿಕೆಗಳಲ್ಲಿ, ಬ್ಲಾಗ್‌ಗಳಲ್ಲಿ, ಅಂಕಣಗಳನ್ನು ಬರೆಯುತ್ತಿರುವರು. ಅಂಕಣಗಳಿಲ್ಲದೆ ಪತ್ರಿಕೆಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗದ ಹಾಗೆ ಇಂದು ಅಂಕಣ ಬರಹ ಮಾನ್ಯತೆಗೆ ಒಳಗಾಗಿದೆ.

ಅಂಕಣ ಬರಹಕ್ಕೆ ಸಮ್ಮಂದಿಸಿ ಹೇಳುವುದಾದರೆ, ಎರಡು ರೀತಿಯ ಅಂಕಣಕಾರರನ್ನು ಕಾಣುತ್ತೇವೆ. ಒಂದು ಸಾಹಿತಿಗಳು ಬರೆಯುವ ಅಂಕಣಗಳು ಮತ್ತು ಭಿನ್ನ ಭಿನ್ನ ಕ್ಷೇತ್ರದ ತಜ್ಞರು ಬರೆಯುವ ಅಂಕಣ, ಸಾಹಿತಿಗಳು ಬರೆಯುವ ಅಂಕಣಕ್ಕೂ ವಿಷಯ ಪರಿಣಿತರು ಬರೆಯುವ ಅಂಕಣಗಳ ಉದ್ದೇಶ, ವ್ಯಾಪ್ತಿ, ವಸ್ತುವಿಷಯಗಳ ನಿರೂಪಣೆಯಲ್ಲಿ ವ್ಯತ್ಯಾಸಗಳಿರುತ್ತವೆ. ಇದಕ್ಕೆ ಕಾರಣ ಬರಹಗಾರನ ಆಯ್ಕೆ, ಆಸಕ್ತಿ, ಎನ್ನಬಹುದು ಈ ಕಾರಣಕ್ಕಾಗಿಯೇ ಮಹಿಳಾ ಅಂಕಣಕಾರರು ಭಿನ್ನರಾಗುತ್ತಾರೆ.

ಪುರುಷ ಕೇಂದ್ರಿತ ಸಮಾಜವನ್ನು ಪುರುಷ ಮಾನದಂಡದಿಂದಲೇ ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಅದೇ ಮಹಿಳೆಯರು ತಮ್ಮ ಅಸ್ಮಿತೆಗೆ ಉಂಟಾದ ಎಲ್ಲ ಬಿಕ್ಕಟ್ಟುಗಳನ್ನು ತಮ್ಮದೇ ಆದ ಅನುಭವ, ಭಾಷೆ, ರೂಪಕಗಳ ಮೂಲಕ ಅಭಿವ್ಯಕ್ತಪಡಿಸುತ್ತಾಳೆ. ಪುರುಷರ ಗ್ರಹಿಕೆಗೆ ನಿಲುಕದ ಬದುಕಿನ ಅಮೂರ್ತವಾದ ಹಲವಾರು ಸಂಗತಿಗಳನ್ನು, ಹಿತಾಸಕ್ತಿಗಳನ್ನು ಪ್ರಶ್ನಿಸುವ, ಪರಿವರ್ತಿಸುವ ರೀತಿಯ ಬರಹಗಳನ್ನು ಮಹಿಳೆಯರು ಅಂಕಣದ ರೂಪಿ ಬರಹಕ್ಕೆ ಒಗ್ಗಿಸಿಕೊಂಡಿರುವರು. ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಕನ್ನಡ ಪತ್ರಿಕೆಗಳು ಮಹಿಳಾ ಅಂಕಣಕಾರರಿಗೆ ನೀಡಿರುವ ಪ್ರೋತ್ಸಾಹ ಆರೋಗ್ಯಕರ ಬೆಳವಣಿಗೆಯಾಗಿದೆ. ಪ್ರಮುಖ ಪತ್ರಿಕೆಗಳಲ್ಲಿ ಮಹಿಳಾ ಅಂಕಣಕಾರರು, ರಾಜಕೀಯ, ಸಾಮಾಜಿಕ ಸಮಸ್ಯೆಗಳು, ಆರೋಗ್ಯ, ನೈರ್ಮಲ್ಯ, ಸಾಹಿತ್ಯ, ಕಲೆ ಮುಂತಾದವುಗಳ ಕುರಿತು ಬರೆಯುತ್ತಿರುವುದು ಮತ್ತು ಓದುವ ವರ್ಗವನ್ನು ವಿಸ್ತರಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಹೀಗೆ ವಿಭಿನ್ನ ನೆಲೆಯಲ್ಲಿ ವಿಭಿನ್ನ ಪತ್ರಿಕೆ, ಕಾಲಗಳಲ್ಲಿ ಪ್ರಕಟಗೊಂಡ ಸ್ತ್ರೀ ದೃಷ್ಟಿಕೋನದ ಅಂಕಣ ಬರಹಗಳನ್ನು ಪ್ರಾತಿನಿಧಿಕವಾಗಿ ಈ ಸಂಪುಟದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಸಂಕೀರ್ಣ ಸಂಪುಟ ಏಳು : ಬಯಲ ರೂಪಿನ ಬಣ್ಣದ ಬಿಂಬಗಳು : ಸಂಕೀರ್ಣ ಎಂಬ ಪದ ಬಳಕೆ ನವ್ಯ ವಿಮರ್ಶಕರ ಮೂಲಕ ಸಾಹಿತ್ಯಲೋಕಕ್ಕೆ ಪರಿಚಯವಾದ ಹಾಗಿದೆ “ಯಾವುದೇ ವಿಷಯ-ವಸ್ತುಗಳನ್ನು ಏಕಮುಖಿಯಾಗಿ ಗ್ರಹಿಸದಿರುವಿಕೆಯನ್ನು ಸಂಕೀರ್ಣವೆಂದು ಭಾವಿಸಿದಂತಿದೆ. “ಸರಳವಲ್ಲ, ಜಟಿಲ ಮತ್ತು ಕಷ್ಟಕರವಾದದ್ದು ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಬದುಕಿನ ಸಂಕೀರ್ಣತೆಗೆ ಕಾರಣವಾದ ಸಂಗತಿಗಳ ಮೇಲೆ ಕ್ಷ ಕಿರಣ ಬೀರುವ ಪ್ರಯತ್ನವನ್ನು ಆಯಾ ಕ್ಷೇತ್ರದಲ್ಲಿ ಮಾಡಲಾಗಿದೆ. ಯಾವುದೇ ಸಾಹಿತ್ಯ ಪ್ರಕಾರದಲ್ಲಿ ಸೇರ್ಪಡಿಸಲು ಸಾಧ್ಯವಾಗದ, ವಿಶಿಷ್ಟ ಬರಹಗಳನ್ನು ದಾಖಲೆಯ ಮತ್ತು ಓದುಗರನ್ನು ಗಮನದಲ್ಲಿಟ್ಟುಕೊಂಡು ಸಂಗ್ರಹಿಸಲು ಮುಂದಾದಾಗ ಅದಕ್ಕೊಂದು ಗುರುತು ಬೇಕಾಗಿತ್ತು. ಅದನ್ನು ಸಂಕೀರ್ಣವೆಂದು ಕರೆದು ಭಿನ್ನ ಭಿನ್ನ ಜ್ಞಾನಶಾಖೆಗಳ ಗ್ರಹಿಕೆಗಳನ್ನು ಒಂದೆಡೆ ತರುವ ಪ್ರಯತ್ನವನ್ನು ಪ್ರಾತಿನಿಧಿಕವಾಗಿ ಮಾಡಲಾಗಿದೆ.

ಹೆಣ್ಣು-ಗಂಡುಗಳನ್ನು ಒಳಗೊಂಡ ಹಾಗೇ ಸಮಾಜ ಏಕಕಾಲದಲ್ಲಿ ಹಲವು ಕಾಲಗಳ ಮೌಲ್ಯಗಳ ಕುರಿತು ಮಾತನಾಡುತ್ತಿರುತ್ತದೆ. ಸರಳವಲ್ಲದ ಬದುಕಿನ ಅನುಭವಗಳ ಅನಾವರಣ ಸಂಕೀರ್ಣ ನೆಲೆಯಲ್ಲಿಯೇ ಆಗುವುದು ಸಹಜ. ಒಂದು ವಸ್ತು ವಿಷಯ, ಕ್ಷೇತ್ರ, ಸಂಗತಿ, ಭಾವ, ಬಣ್ಣಗಳ ಕುರಿತು ಮಾತನಾಡುವ ಬರೆಯುವ ಕ್ರಿಯೆ ಮುಂದುವರಿದಂತೆ, ಬೆಳೆದಂತೆ ಹಲವು ನೆಲೆಯಲ್ಲಿ ಅದರ ಸಾಧ್ಯಾಸಾಧ್ಯತೆಗಳನ್ನು ತೆರೆದು ತೋರಿಸುತ್ತದೆ. ಅಂತಹ ಸಾಧ್ಯತೆಗಳು ಕೇವಲ ಪುರುಷರಿಗೆ ಸೀಮಿತಗೊಂಡಿಲ್ಲ. ಮಹಿಳೆಯರು ತಮಗೆ ದೊರೆತ ಅವಕಾಶಗಳ ಅನುಭವಗಳನ್ನು ದಾಖಲಿಸುವಾಗ, ಹಂಚಿಕೊಳ್ಳುವಾಗ ಅನೇಕ ಬಗೆ, ರೀತಿ, ಶೈಲಿ, ಭಾಷೆಯ ಬಳಕೆ, ಪ್ರಯೋಗಗಳು ಕನ್ನಡದ ಸಂದರ್ಭದಲ್ಲಾಗಿವೆ. ಆಧುನಿಕ ಓದಿನ ಕಾರಣದಿಂದ ಮಹಿಳೆಯರು ಹಲವು ಕ್ಷೇತ್ರಗಳಲ್ಲಿ ತಮ್ಮಿರುವಿಕೆಯನ್ನು ಸಾಬೀತುಪಡಿಸುವಾಗಿನ ಅನುಭವಗಳನ್ನು ಹಂಚಿಕೊಂಡ ಬರಹಗಳನ್ನು ಉಪೇಕ್ಷಿಸುವಂತಿಲ್ಲ. ಸಾಹಿತ್ಯ, ಸಂಗೀತ, ರಾಜಕೀಯ, ಧಾರ್ಮಿಕ, ಆರ್ಥಿಕ, ವಿಜ್ಞಾನ, ಮಾನವೀಕ, ರಂಗಭೂಮಿ, ಅಭಿನಯ, ಮಾಧ್ಯ, ಬಣ್ಣ, ಉದ್ಯಮ ಮುಂತಾದ ರಂಗಗಳಲ್ಲಿ ಪ್ರವೇಶಿಸಿರುವಳು. ಈ ಕ್ಷೇತ್ರಗಳ ಅನುಭವಗಳನ್ನು, ಅವುಗಳ ಪರಿಚಯಿಸುವ ವಿಕಾಸದ ಮಾದರಿಗಳನ್ನು ವಿಶಿಷ್ಟವಾಗಿ ಕಟ್ಟಿಕೊಟ್ಟಿರುವರು. ಓದುಗರ ಅಭಿರುಚಿಯನ್ನು ಮತ್ತು ಚಿಂತನಾಶೀಲತೆಯನ್ನು ಉದ್ದೀಪಿಸುವ ಮಹಿಳೆಯರ ಬರಹಗಳ ಒಟ್ಟುಗೂಡುವಿಕೆಯ ಕಾರಣ ಸಂಕೀರ್ಣ ಸಂಪುಟವೊಂದು ಸಿದ್ಧಗೊಂಡಿದೆ.

ಜಾನಪದ ಸಂಪುಟ ಎಂಟು : ಹಾಡು ಹಾಡೆಂದರೆ ಏನೆಂದು ಹಾಡಲಿ... ಹಾಡಲ್ಲ ಅದು ನಮಪಾಡ : ಜಾನಪದ ಸಾಹಿತ್ಯ ಸಂದರ್ಭದಲ್ಲಿ ಒಂದು ಜನಪ್ರಿಯವಾದ ವ್ಯಾಖ್ಯಾನವಿದೆ. ಅದೇನೆಂದರೆ "ಜನವಾಣಿ ಬೇರು; ಕವಿವಾಣಿ ಹೂ" ಎಂದು ಈ ಜನವಾಣಿಯ ಬೇರಿಗೆ ನೀರೆರೆದವರು ನೀರೆಯರು ಎಂಬುದನ್ನು ಕೂಡಾ ಚರಿತ್ರೆ ಮರೆಮಾಚಿದೆ. ಬ್ರಿಟೀಷರಾಗಮನದಿಂದ ಬೆಳಕು ಬೆಂಕಿ ಕೂಡಿಯೆ ಈ ನೆಲದಲ್ಲಿ ಹಲವು ಪಲ್ಲಟಗಳನ್ನುಂಟು ಮಾಡಿದ್ದವು. ಮೌಖಿಕ ಪರಂಪರೆಯಲ್ಲಿದ್ದ ಬದುಕಿನ ಶ್ರೀಮಂತ ದಾಖಲೆಗಳನ್ನು ಸಂಗ್ರಹಿಸುವ, ಸಂಪಾದಿಸುವ ಕೆಲಸಗಳನ್ನೆಲ್ಲ ಮೊದಲ ತಲೆಮಾರಿನ ಶಿಷ್ಠ ಸಾಹಿತಿಗಳು ಮಾಡಿದರು. ಕೈಗಾರೀಕರಣದಿಂದ ಉದ್ಭವಿಸಿದ ಬಿಕ್ಕಟ್ಟಿಗೆ ತಾಯ್ತನದಂತಿದ್ದ ಜಾನಪದ ಸಾಹಿತ್ಯ ಸಂಸ್ಕೃತಿಯಲ್ಲಿ ಪರಿಹಾರಗಳಿವೆ ಎಂದು ಶಿಷ್ಠಲೋಕ ಪರಿಭಾವಿಸಿತ್ತು. ಆದರೆ ತಾಯಿಯನ್ನೇ ಹೆಡೆಮುರಿಗಿ ಕಟ್ಟಿ ಕತ್ತಲಲ್ಲಿ ಕೂಡಿಹಾಕಿದ್ದನ್ನು ಮರೆತಿತ್ತು. ಹೆಣ್ಣಿನ ಚಾರಿತ್ರಿಕ ಸೋಲಿಗೆ ಕಾರಣಗಳನ್ನು ಅಕ್ಷರವಂಚಿತ ಮಹಿಳೆಯರು ಅನುಭಾವಾಧಾರದ ಮೇಲೆ ಮೌಖಿಕವಾಗಿ ದಾಖಲಿಸುವುದನ್ನು ಮರೆಯಲಿಲ್ಲ. ಹೆಣ್ಣಿನ ಯಾತನಾಮಯ ಬದುಕಿಗೆ ಕಾರಣಗಳನ್ನು ಸಾಮಾನ್ಯ ಹೆಣ್ಣು ಮಹಿಳೆಯೊಬ್ಬಳು ಗ್ರಹಿಸಿದ ರೀತಿ ವಿಸ್ಮಯಗೊಳಿಸುವಂತಿದೆ.

"ಹೆಣ್ಣಿನ ಗೋಳಹತ್ತಿ ಬನ್ನಿಯ ಮರಬೆಂದೋ

ಅಲ್ಲಿ ಸನ್ಯಾಸಿ ಮಠ ಬೆಂದು ಹಾರವರ

ಪಂಚಾಂಗ್ಲತ್ತಿ ಉರಿದಾವೋ"–

ಹೆಣ್ಣಿಗೆ ಅಕ್ಷರದ ಬಾಧ್ಯಸ್ಥಿಕೆಯಿಲ್ಲದಿದ್ದರು ಅರಿವಿನ ಬಾಯಾಗಿ ಮಾತನಾಡಿರುವರು. ಭೂಮಿ ಮೇಲಿನ ಅಸಂಖ್ಯಾತ ಹೆಣ್ಣುಜೀವಗಳ ಗೋಳಿಗೆ ಕಾರಣವನ್ನು ಗುರುತಿಸುವಲ್ಲಿ



ಅನುಭವವೊಂದೆ ಆಧಾರವೆಂಬುದನ್ನು ಗಂಭೀರವಾಗಿ ಪರಿಗಣಿಸುವಂತಹದ್ದು. ತಮ್ಮ ಇರುವಿಕೆಯ ಅರಿವು ಅನುಭವಕ್ಕೆ ಬಂದ ಮೇಲೆ ಪ್ರತಿಭಟಿಸುವ ಪ್ರಶ್ನಿಸುವ, ಅಸಹಾಯಕತೆ, ತೋರ್ಪಡಿಸುವ ಹಲವು ಮಾರ್ಗಗಳಲ್ಲಿ (ಪ್ರಕಾರಗಳಲ್ಲಿ) ದಾಖಲಿಸಿರುವರು. ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ದಿನಗಳಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಜಾನಪದಕ್ಕೆ ಬೇಡಿಕೆ ಬಂದಾಗ ವ್ಯಾಪಾರಕ್ಕೆ ಮುಂದಾದವರು ಗಂಡಸರೇ ಆಗಿದ್ದರು. ಇದರ ಮಧ್ಯದಲ್ಲಿಯು ಅಕ್ಷರಲೋಕಕ್ಕೆ ತೆರೆದುಕೊಂಡ ಮಹಿಳೆಯರು ಪೂರ್ವಿಕರ ಮೌಖಿಕ ಪರಂಪರೆಯಲ್ಲಿ ತಾವಿರುವುದನ್ನು ಅರಿತರು. ಅಕ್ಷರಲೋಕಕ್ಕೆ ತೆರೆದುಕೊಂಡ ಹೆಣ್ಣುಮಕ್ಕಳು ಜಾನಪದ ಬದುಕನ್ನು, ಸಂಸ್ಕೃತಿಯನ್ನು ಅರ್ಥೈಸಿಕೊಂಡಿರುವ ಬರಹವನ್ನು ಪ್ರಾತಿನಿಧಿಕವಾಗಿ ಸಂಗ್ರಹಿಸುವ ಹಂಬಲದಿಂದ ಮಹಿಳಾ ಜಾನಪದ ಸಂಪುಟ ಸಿದ್ಧಗೊಂಡಿದೆ. ಹೀಗೆ ಒಟ್ಟು ಎಂಟು ಸಂಪುಟಗಳು ಪರಿಷತ್ತಿನ ಹಿರಿಮೆಗೆ ಗರಿಯಂದೇ ಭಾವಿಸುವೆ.

ಕನ್ನಡ ಸಾಹಿತ್ಯ ಪರಿಷತ್ತು ದಲಿತ ಸಾಹಿತ್ಯ ಸಂಪುಟಗಳನ್ನು ಹೊರತರುವುದರ ಮೂಲಕ ಚಾರಿತ್ರಿಕ ಮೈಲುಗಲ್ಲೊಂದನ್ನು ಊರಿತ್ತು. ಈ ಹೊತ್ತಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮನು ಬಳಿಗಾರ ಅವರಿಗೆ ಮಹಿಳಾ ಸಾಹಿತ್ಯ ಸಂಪುಟಗಳನ್ನು ಹೊರತರುವ ಕುರಿತು ಪತ್ರವೊಂದನ್ನು ಬರೆದಾಗ ಅದಕ್ಕೆ ತಕ್ಷಣ ಸ್ಪಂದಿಸಿ ಕಾರ್ಯೋನ್ಮುಖರಾದರು. ಈ ಮಾಲಿಕೆಗಳ ಸಂಪಾದಕತ್ವದ ಜವಾಬ್ದಾರಿಯನ್ನು ನನಗೆ ವಹಿಸಿದರು ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಗಂಭೀರವಾದ ಕಾರ್ಯ ಮಾಡಿರುವ ಲೇಖಕಿಯರನ್ನು ಸಂಪರ್ಕಿಸಿ ಇಂತಹದೊಂದು ಮಹತ್ತರವಾದ ಕೆಲಸ ಮಾಡಿಕೊಡಲು ಸಭೆ ಕರೆದು ಎಂಟು ಸಂಪುಟಗಳ ಸಂಪಾದನಾ ಜವಾಬ್ದಾರಿಯನ್ನು ವಹಿಸಿದರು. ಕಾಲಬದ್ಧ ಯೋಜನೆಯೆಂದು ಪದೇ ಪದೇ ನೆನಪಿಸಿ ಕಡಿಮೆ ಅವಧಿಯಲ್ಲಿ ಗಂಭೀರವಾದ ಕೆಲಸವನ್ನು ನಮ್ಮಿಂದ ಮಾಡಿಸಿದ ತಾಯಿ ಹೃದಯದ ಡಾ.ಮನು ಬಳಿಗಾರ ಅವರಿಗೆ ಅನಂತ ಕೃತಜ್ಞತೆಗಳು.

ಪರಿಷತ್ತಿನ ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತಿರುವ ಹಿರಿಯರಾದ ಡಾ.ಪದ್ಮರಾಜ ದಂಡಾವತಿಯವರು ನಮ್ಮ ಆಮೆಗತಿಯ ನಡಿಗೆಯನ್ನು ತೀವ್ರಗೊಳಿಸುವಂತೆ ಉತ್ತೇಜಿಸಿ ನಮ್ಮಿಂದ ಇಂತಹದೊಂದು ಮಹತ್ವದ ಕೆಲಸ ಮಾಡಿಸಿರುವರು. ಅವರಿಗೆ ಕೃತಜ್ಞತೆಗಳನ್ನು ತಿಳಿಸುವುದು ನಮ್ಮ ಕರ್ತವ್ಯ. ಈ ಎಂಟು ಸಂಪುಟಗಳ ಜವಾಬ್ದಾರಿಯನ್ನು ಹೊತ್ತ ನನಗೆ ಹೆಗಲೆಣೆಯಾದ ಸಹೋದರಿ ಪಿ.ಚಂದ್ರಿಕಾ, ಡಾ.ಆಶಾದೇವಿ, ಡಾ.ಪದ್ಮನಿ ನಾಗರಾಜು, ಪ್ರತಿಭಾ ನಂದಕುಮಾರ, ಡಾ.ಲಕ್ಷ್ಮಿದೇವಿ, ಡಾ.ತಮಿಳ್ ಸೆಲ್ವಿ ಮತ್ತು ಬಾ.ಹಾ.ರಮಾಕುಮಾರಿ,

ಡಾ.ಗುರುದೇವಿ ಹುಲ್ಲೆಪ್ಪನವರ ಇವರಿಗೆಲ್ಲ ಕೃತಜ್ಞತೆಗಳನ್ನು ಹೇಳುವುದು ಔಪಚಾರಿಕವಲ್ಲ. ನಾಡಿನುದ್ದಕ್ಕೂ ಸಾಹಿತ್ಯ ಕೃಷಿಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿರುವ ಲೇಖಕಿಯರನ್ನು ಒಳಗೊಳ್ಳಬೇಕೆಂಬ ಹಂಬಲ ನಮ್ಮದಾಗಿದ್ದರೂ ಕಾಲಮಿತಿ ಮತ್ತು ಸಂಪರ್ಕಿಸುವ ಸಾಹಸದಲ್ಲಿ ಯಶಸ್ಸು ಕಾಣದೆ ಕೊನೆಗೆ ಪ್ರಾತಿನಿಧಿಕತನವನ್ನು ಮುಂದಿಟ್ಟುಕೊಂಡು ಈ ಮಹತ್ತರ ಯೋಜನೆಯನ್ನು ಪೂರೈಸಿದ ಸಂತೋಷ ನಮಗಿದೆ. ಇದು ಪ್ರಾರಂಭವಷ್ಟೇ ಮುಂದಿನ ದಿನಗಳಲ್ಲಿ ಇದರ ಮುಂದುವರಿಕೆಯಾದ ಗಮನಾರ್ಹವಾದದ್ದನ್ನು ಸಾಧಿಸುತ್ತೇವೆ ಎಂಬ ವಿಶ್ವಾಸ ಮೂಡಿಸಿದ



ಪರಿಷತ್ತಿಗೆ ಕೃತಜ್ಞತೆಗಳು. ಕಾರ್ಯದರ್ಶಿಯಾದ ರಾಜಶೇಖರ ಹತಗುಂದಿ, ಚೆನ್ನೇಗೌಡ ಅವರಿಗೂ ಮತ್ತು ಲೇಖನಗಳ ಸಂಗ್ರಹಿಸುವಲ್ಲಿ ಸಹಾಯ ಮಾಡಿದ ಡಾ.ವೆಂಕಟಗಿರಿ ದಳವಾಯಿ ಅವರಿಗೂ ಮತ್ತು ಸಕಾಲಕ್ಕೆ ಅಂದವಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಪ್ರೀತಿಯ ಹುಡುಗ ಕೊಟ್ರೇಶ್ ಕೊಟ್ಟೂರು, ನಾಗರತ್ನಾಳಿಗೂ ಹಾಗೂ ಪ್ರಕಟಣಾ ವಿಭಾಗದ ಎಲ್ಲರಿಗೂ ನೆನಕೆಗಳು.

ಕನ್ನಡ ಸಾಹಿತ್ಯ ಪರಿಷತ್ತು ಇಂತಹದೊಂದು ಚಾರಿತ್ರಿಕ ಕಾರ್ಯ ಮಾಡುತ್ತಿರುವ ಹೊತ್ತಿನಲ್ಲಿ ಪರಿಷತ್ತಿನ ಅಧ್ಯಕ್ಷರು ಅತ್ಯಂತ ಆಸಕ್ತಿ ಮತ್ತು ಎಚ್ಚರಿಕೆಯಿಂದ ಸಲಹೆ ಸೂಚನೆಗಳನ್ನು ನೀಡುವಾಗಲೆಲ್ಲ ಲೇಖಕಿಯರ ಅನುಮತಿಯನ್ನು ಕಡ್ಡಾಯವಾಗಿ ಪಡೆಯಲೇಬೇಕು ಎನ್ನುತ್ತಿದ್ದರು. ಜಗತ್ತನ್ನು ನೋಡಬೇಕು, ಜಗತ್ತು ನಮ್ಮನ್ನು ಗಮನಿಸಬೇಕು ಎನ್ನುವ ಉದಾರವಾದ ಮನೋಭಾವ ಲೇಖಕಿಯರಲ್ಲಿದೆ. ಕಡಿಮೆ ಅವಧಿಯಲ್ಲಿ ಬೃಹತ್ ಕೆಲಸಕ್ಕೆ ಕೈ ಹಾಕಿರುವುದರಿಂದ ಬಹುಪಾಲು ಲೇಖಕಿಯರನ್ನು ಸಂಚಾರಿ ವಾಣಿಯ ಮೂಲಕ ಸಂಪರ್ಕಿಸಿ ಅನುಮತಿ ಪಡೆದಿದ್ದೇವೆ. ಎಷ್ಟೋ ಜನ ಹಿರಿಯ ಜೀವಗಳು ನಮ್ಮೊಂದಿಗಿಲ್ಲ, ಅವರ ಬರಹವನ್ನು ಬಿಡುವಂತಿಲ್ಲ, ಅವರ ಸಂಬಂಧಿಕರನ್ನು ಸಂಪರ್ಕಿಸುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಲಾಗಿದೆ. ಎಷ್ಟೋ ಜನ ಲೇಖಕಿಯರ ಹಳೆಯ ವಿಳಾಸಗಳು, ಫೋನ್ ನಂಬರುಗಳು ಬದಲಾಗಿವೆ. ಹೀಗಾಗಿ ಆ ತೊಂದರೆಯನ್ನು ಅನುಭವಿಸುವುದು ಅನಿವಾರ್ಯವಾಗಿತ್ತು. ಎಲ್ಲ ಮಿತಿಗಳ ಮಧ್ಯದಲ್ಲಿ ಒಂದು ಚಾರಿತ್ರಿಕ ಕಾರ್ಯಮಾಡುತ್ತಿರುವುದರಿಂದ ನಮ್ಮೆಲ್ಲ ಲೇಖಕಿಯರು ಗೌರವದಿಂದ ಈ ಕೆಲಸವನ್ನು ಮನಸಾರೆ ಒಪ್ಪಿಕೊಳ್ಳುವರೆಂಬ ನಂಬಿಕೆ ನಮಗಿದೆ.

-ಡಾ. ಮಲ್ಲಿಕಾ ಘಂಟಿ

# ಪ್ರಸ್ತಾವನೆ

## ಬಯಲ ರೂಪಿನ ಬಣ್ಣದ ಬಿಂಬಗಳು

ಚರಿತ್ರೆಯುದ್ದಕ್ಕೂ ಆಯಾ ಕಾಲದಲ್ಲಿ ಮನುಷ್ಯ ಪ್ರಯತ್ನದ ಮೂಲಕ, ಶ್ರಮದ ಮೂಲಕ ಅದ್ಭುತ ಲೋಕವನ್ನು ಸೃಷ್ಟಿಸಿರುವನು. ಭೌತಿಕ ಬದುಕಿನಲ್ಲಿ ಕಂಡುಂಡ ವಸ್ತು ಮೂಲದ ಅನುಭವದ ಸಂಪತ್ತು ಒಂದು ಕಡೆಯಾದರೆ, ಇನ್ನೊಂದು ಕಡೆ ಪಂಚೇಂದ್ರಿಯಗಳಿಗೆ ಅತೀತವಾದ ಅನುಭವದ ಸಂಪತ್ತಿನ ಲೋಕವೊಂದಿದೆ ಎಂದು ಭಾವಿಸಲಾಗಿದೆ. ಕಾಣುವ ಮತ್ತು ಕಾಣದ ಸಂಪತ್ತಿನ ನಡುವಿನ ಸಂಬಂಧಗಳು ಅತ್ಯಂತ ಸಂಕೀರ್ಣವಾಗಿರುತ್ತವೆ. ಭೂಮಿ ಮೇಲಿನ ಪ್ರಾಣಿ ಸಂಕುಲದೊಳಗೊಂದು ಪ್ರಾಣಿ ಮನುಷ್ಯನನ್ನು ಪ್ರಾಣಿಯೆಂದೇ ಕರೆಯಲಾಗಿದೆ. ಮನುಷ್ಯ ಪ್ರಾಣಿ ಮಾನವನಾಗುವುದರ ಕಡೆಗಿನ ಪ್ರಯಾಣವನ್ನು ವ್ಯಾಖ್ಯಾನಕ್ಕೊಳಪಡಿಸುವ ಪ್ರಯತ್ನಗಳು ಅತ್ಯಂತ ಸಂಕೀರ್ಣವಾದವುಗಳು. ಹೀಗಾಗಿ ವ್ಯಕ್ತಿ ಸಮಾಜವಾಗುವುದು ಮತ್ತು ಸಮಾಜ ವ್ಯಕ್ತಿಯಾಗುವ ಪ್ರಕ್ರಿಯೆಗಳ ನಡುವೆ ಒಂದು space (ಸ್ಥಾನ) ಇದ್ದೇ ಇರುತ್ತದೆ. ಅದನ್ನೆ ಹಿರಿಯರು ಲೌಕಿಕ ಮತ್ತು ಆಧ್ಯಾತ್ಮಿಕವೆಂದು ಕರೆದಿರುವರು. ಪ್ರಾಪಂಚಿಕ ಬದುಕಿನ ಆಸಕ್ತಿ, ಮೋಹದಿಂದ ಲೌಕಿಕ ಬದುಕು ನಾಗಾಲೋಟದಿಂದ ಓಡಿದರೆ ಇನ್ನೂ ಕೆಲವು ಸಲ ಆಧ್ಯಾತ್ಮದ ಆಸಕ್ತಿಯಿಂದ ಪ್ರಾಪಂಚಿಕ ಬದುಕಿಗಿಂತಲೂ ಪಾರಮಾರ್ಥಿಕ ಬದುಕು ಶ್ರೇಷ್ಠವೆಂದು ಲೌಕಿಕ ಬದುಕಿನ ಓಟಕ್ಕೆ ಲಗಾಮು ಹಾಕುವ ಪ್ರಯತ್ನಗಳು ನಡೆದಿವೆ. ಇದೆಲ್ಲವನ್ನು ಕಾಲ ನಿರ್ಧರಿಸಿದೆ. ಇದರ ಮೂಲ ಸಮಾಜ ಮತ್ತು ವ್ಯಕ್ತಿಯ ಸಂಬಂಧಗಳು ಹೇಗಿದ್ದವು, ಹೇಗಿರಬೇಕು ಎನ್ನುವುದೂ ಕೂಡ ಪ್ರಶ್ನೆಗೊಳಪಡಿಸಬೇಕಾದವುಗಳೇ.

ಅಲೆಮಾರಿ ಬದುಕಿನಿಂದ ಸಾಂಘಿಕ ಬದುಕನ್ನು ಕಟ್ಟಿಕೊಂಡು ಸಮಾಜದ ಸ್ಥಿರತೆಗಾಗಿ ಮನುಷ್ಯ ನಿರಂತರವಾಗಿ ಶ್ರಮಿಸಿರುವನು. ಸಮಾಜವನ್ನು ಕೂಡಾ ಪುರುಷ ರೂಪದಿಂದಲೇ ಕಂಡರಿಸಲಾಗಿದೆ. ಹೀಗಾಗಿ ಈ ಕಂಡರಿಸುವ ಜ್ಞಾನ ಮತ್ತು ಕ್ರಿಯೆಗಳು ಎಲ್ಲರಿಂದ ಎಲ್ಲರಿಗಾಗಿ ರೂಪಿತಗೊಂಡವುಗಳಲ್ಲ. ಜ್ಞಾನದ ಮೂಲಕ ಪುರುಷ ಕಂಡ ಪ್ರಪಂಚದಲ್ಲಿ ಹೆಣ್ಣು ಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಮಾತ್ರ ಪ್ರವೇಶವನ್ನು ನೀಡಿದ ಕಾರಣ ಬದುಕಿನ ಅರ್ಥ ವಿಸ್ತರಿಸಿಕೊಳ್ಳುವಲ್ಲಿ ಒಂಟಿ ಕೈಯ ಸದ್ದಿಲ್ಲದ ಮದ್ದಿಲ್ಲದ ಚಪ್ಪಾಳೆಗಳಿವೆ. ಜ್ಞಾನದ ಬಲದಿಂದ ಕ್ರಿಯೆಗೆ ಸ್ತ್ರೀ ಕುಲ ಮುಂದೆ ಬಂದಾಗಲೆಲ್ಲ ಒಂಟಿಕೈ ಕಾಣದ ಹಾಗೆ ಬಯಲಲ್ಲಿ ಬೀಸಿ ಬೀಸಿ ಹೆಣ್ಣನ್ನು, ಅವಳ ಧ್ವನಿಯನ್ನು ಉಡುಗಿಸುವ ಪ್ರಯತ್ನಗಳಾಗಿವೆ. ಹೀಗಾಗಿಯೇ ಹೆಣ್ಣಿನ ಜ್ಞಾನಲೋಕದ ಬಗ್ಗೆ ತಾತ್ಸಾರ,

ವ್ಯಂಗ್ಯ, ಕುಹಕ, ಹಿಯ್ಯಾಳಿಕೆಯ ಮಾತುಗಳು ವೇದಗಳ ಹಾಗೆ ಹುಟ್ಟಿಕೊಂಡು ಚಾಲ್ತಿಯಲ್ಲಿವೆ.

'ಅವ'ದೊಂದಿಗೆ 'ನು' ಮತ್ತು 'ಳು' ಸೇರಿಸುವ ಪ್ರಯತ್ನಗಳು ನಾಗರೀಕತೆ ಬೆಳೆದಂತೆ ಸಮಾಜದಲ್ಲಿ ಕಾಣಿಸಿಕೊಳ್ಳಬೇಕಾಗಿತ್ತು ಆದರೆ ವ್ಯಕ್ತಿ ಎಂಬುದು ಪುರುಷನೆಂಬುದೇ ಅಂಗೀಕೃತವಾಗಿ ಹೋಗಿದೆ. ವ್ಯಕ್ತಿ ವಿಕಾಸವೆಂಬುದು ಸಮಾಜ ವಿಸ್ತರಣೆಯಲ್ಲಿರುವುದರಿಂದ ವ್ಯಕ್ತಿಯ ಆದ್ಯತೆ, ಆಸಕ್ತಿಗಳೂ ಭಿನ್ನವಾಗಿವೆ. ಈ ಮಾತನ್ನು ಇಂದು ಆಲೋಚನೆಗೆ ಅನ್ವಯಿಸಿಯೂ ನೋಡಬೇಕಾಗುತ್ತದೆ. ಲಿಂಗ ಅಸಮಾನತೆಯ ಸಮಾಜದಲ್ಲಿ ಹೆಣ್ಣು-ಗಂಡುಗಳ ಆಲೋಚನೆಗಳ ಮೂಲಕ ವಸ್ತುವನ್ನು ಗ್ರಹಿಸುವ ಒಂದು ವಿಧಾನವಂತೂ ಇದೆ. ಆ ವಿಧಾನಗಳು ಒಂದೇ ದಾಟಿ, ಆಕಾರದಲ್ಲಿರುವುದಿಲ್ಲ. ನಮ್ಮ ಅನುಭವಗಳು ವಿಸ್ತರಿಸಿಕೊಂಡಂತೆ ಅವು ಬದಲಾಗುವುದು ಸಹಜ. ಈ ಹಿನ್ನೆಲೆಯಲ್ಲಿ ಹೆಣ್ಣು-ಗಂಡುಗಳ ಅಭಿಪ್ರಾಯಗಳು, ಆಸಕ್ತಿಗಳು ನಿಂತ ನೀರಿನಂತಿರಲು ಸಾಧ್ಯವಿಲ್ಲ. ಹಾಗೆ ನಿಲ್ಲುವುದು ಅಪಾಯಕಾರಿಯೂ ಹೌದು. ಹರಿಯುವ ನೀರಿನಂತೆ ಇರುವ ಆಸಕ್ತಿ ಅಭಿಪ್ರಾಯಗಳಿಗೆ ಯಾವ ಅನುಭವ, ಅವಕಾಶಗಳು ತ್ಯಾಜ್ಯವಲ್ಲ. ಎಲ್ಲವನ್ನು ಪರಿಶುದ್ಧಗೊಳಿಸುವ ಗುಣ ನೀರಿಗಿರುವಂತೆಯೇ ಮನುಷ್ಯರ ಬದುಕು ಕೂಡಾ ಹಾಗೆ ಇರಬೇಕು ಎಂಬುದನ್ನು ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಲೋಕ ಕೂಡಿಯೆ ಬಯಸಿದೆ.

ಆಯಾ ಕ್ಷೇತ್ರದಲ್ಲಿ ಆದಂತಹ ಬದಲಾವಣೆಗಳು, ಬದುಕನ್ನು ಸಮಾಜವನ್ನು ಆಶಯಗಳನ್ನು ಒಳಗೊಂಡು ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ವಿಜ್ಞಾನ, ತತ್ವಜ್ಞಾನ, ರಾಜಕಾರಣಗಳಲ್ಲಿ ಕಾಣಿಸಿಕೊಂಡಿವೆ ಮತ್ತು ಸದಾಕಾಲವೂ ದಾಖಲಿಸಿಕೊಂಡಿವೆ. ಆದರೆ ಇದುವರೆಗೂ ದಾಖಲಾದ ಈ ಅಭಿಪ್ರಾಯಗಳು ಯಾವುದೇ ತಾರತಮ್ಯತೆಯಿಲ್ಲದೆ ಹಾಗೆ ವ್ಯಕ್ತಿಯನ್ನು ಒಳಗೊಂಡಿವೆಯೆ? ಎನ್ನುವ ಪ್ರಶ್ನೆಗಳು ನಮ್ಮನ್ನು ಕಾಡುತ್ತಿವೆ. ಸಮಾಜವೆಂದರೆ ಪುರುಷರೂಪವನ್ನೇ ಕಣ್ಣಲ್ಲಿ ತುಂಬಿದ ಮತ್ತು ತುಂಬಿಸಿಕೊಂಡವರು ವ್ಯಕ್ತಿಯೆಂದರೆ ಯಾರು? ಅವರು ರೂಪಿಸಿದ ಅಭಿಪ್ರಾಯಗಳೆಂತಹವು ಎಂಬುದನ್ನು ಹುಡುಕುವ ಹುಡುಕಾಟಕ್ಕೆ ಇಂದಿಗೂ ಪೂರ್ಣವಿರಾಮವನ್ನಿಡಲಾಗಿಲ್ಲ. ಇಂದು ಮಹಿಳೆಯರು ಪ್ರಶ್ನಾರ್ಥಕ ಚಿಹ್ನೆಯೊಂದಿಗೆ ಹೃಸ್ವ ದೀರ್ಘಗಳನ್ನು ಬದಿಗಿಟ್ಟು ಅಲ್ಪವಿರಾಮದಿಂದ ಪೂರ್ಣವಿರಾಮದ ಕಡೆ ದೃಷ್ಟಿ ಹರಿಸಿರುವುದರಿಂದ ಕಾಲಾನುಕಾಲ ನಿಷೇಧಿತಗೊಂಡಿದ್ದ ಕ್ಷೇತ್ರಗಳ ಪ್ರವೇಶವೆಂಬುದು ಕಾಲಚಕ್ರಕ್ಕೆ ಕಳಚಿದ ಹಲ್ಲೊಂದು ಸೇರಿಕೊಂಡಿರುವುದರಿಂದಲೇ ವಿವಿಧ ಕ್ಷೇತ್ರದ ಕುರಿತ ಹಾಗೆ ಹೆಣ್ಣಿನ ಅನುಭವ ಕ್ಷೇತ್ರ ವಿಸ್ತಾರಗೊಂಡಿದೆ. ವಿಸ್ತಾರಗೊಂಡ ಅನುಭವಗಳನ್ನು ಕೂಡಾ ಹೀಗೆ ದಾಖಲಿಸಿರುವ ಸಂಗತಿಗಳು ಸಾಂಪ್ರದಾಯಿಕ ಪ್ರಕಾರಗಳಲ್ಲಿ ಸೇರ್ಪಡಿಸಲು ಸಾಧ್ಯವಾಗದ ಹಾಗೆ ಬರಹಗಳ ಕ್ಷೇತ್ರ ವೈವಿಧ್ಯಮಯವಾಗಿರುವುದರಿಂದ ಅವುಗಳನ್ನೆಲ್ಲ 'ಸಂಕೀರ್ಣ'ವೆಂದು ಕರೆದು ಅವುಗಳಿಗೂ ಜ್ಞಾನದ ವ್ಯಾಪ್ತಿಯಲ್ಲಿ ಜಾಗವನ್ನು ನೀಡಲಾಗಿದೆ.

ಸಂಕೀರ್ಣ ಸಂಪುಟದಲ್ಲಿರುವ ಲೇಖನಗಳೆಲ್ಲವು ವಿಸ್ತ್ರತವಾದ ಅನುಭವಗಳನ್ನೇ ಮೂಲವಾಗಿಸಿಕೊಂಡಿರುವುದರಿಂದ ಓದುಗರ ತಾಳ್ಮೆಯನ್ನು ಬಯಸುತ್ತವೆ. ಕಾನೂನು,

ವಿಜ್ಞಾನ, ಚಳುವಳಿ, ತಂತ್ರಜ್ಞಾನವೆಂಬ ವಿಧಗಳೆಲ್ಲವೂ ಮಹಿಳೆಯರಿಗೆ ಅನ್ಯಗ್ರಹದಂತೆ. ಗೋಚರಿಸಿದ್ದರೆ ತಪ್ಪು ಅವಳದಲ್ಲ, ಅವಳನ್ನು ಹಾಗಿರಿಸಿದ್ದ ಸಮಾಜದ್ದು ಎಂಬ ಸತ್ಯ ಅರ್ಥವಾದ ಮೇಲೆ ಮಹಿಳೆಯರು ನಿಷೇಧಿತ ಕ್ಷೇತ್ರಗಳಲ್ಲಿ ಪ್ರವೇಶ ಮಾಡಿದರು. ವಿಜ್ಞಾನ, ತಂತ್ರಜ್ಞಾನವೆನ್ನುವುದೆಲ್ಲವು ಗಂಡಸರಿಗೆ ಮಾತ್ರವೆನ್ನುವ ಅಹಂಕಾರಕ್ಕೆ ಮೇರಿಕ್ಯೂರಿಯಂತಹವರು ಬಹುದೊಡ್ಡ ಪೆಟ್ಟನ್ನು ಕೊಟ್ಟರು ಎನ್ನುವುದಕ್ಕೆ ಕಾಲ ಉತ್ತರಿಸಿದೆ. ಕಲ್ಪನಾ ಚಾವ್ಲಾರಂಥವರು ಚಂದ್ರಲೋಕಕ್ಕೆ ಗಂಡಸರೊಂದಿಗೆ ಹೋಗಿ ಬಂದ ಮೇಲೆ ಹೆಣ್ಣಿನ ಸಾಮರ್ಥ್ಯದ ಬಗ್ಗೆ ಗಂಡಸರು ಎಗ್ಗಿಲ್ಲದೆ ಹಾಡಿ ಹೊಗಳಿರವುದನ್ನು ನೋಡಿದ್ದೇವೆ. ಡಾ.ಸರೋಜಾ ಸಂತಿಯವರು ಮೇರಿ ಕ್ಯೂರಿಯನ್ನು ಪರಿಚಯಿಸುವುದರ ಮೂಲಕ ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರು ಮಾಡಿದ ಸಾಧನೆಯನ್ನು ದಾಖಲಿಸಿರುವರು.

ತಂತ್ರಜ್ಞಾನವನ್ನು ಸ್ತ್ರೀಕುಲದ ವಿನಾಶಕ್ಕಾಗಿ ಬಳಸಿಕೊಳ್ಳುತ್ತಿರುವ ಅಪಾಯಗಳನ್ನು ಸಮಾಜಕ್ಕೆ ಮನವರಿಕೆ ಮಾಡಿಕೊಡುವ ಜವಾಬ್ದಾರಿಯು ಆಕೆಯ ಹೆಗಲೇರಿದ್ದು, ಸಂತಸದ್ದಲ್ಲ. ಸಂಕಟದ್ದು, ಅಣುಪರಮಾಣುಗಳು ಮನುಷ್ಯ ಸಮಾಜದ ವಿನಾಶವನ್ನು ಕೇಂದ್ರವಾಗಿರಿಸಿಕೊಂಡದ್ದರ ಬಗ್ಗೆ ಪ್ರಪಂಚದಾದ್ಯಂತ ಕಳವಳ ವ್ಯಕ್ತವಾಗಿದೆ. ಪದ್ಮಾವತಿ.ಬಿ.ಎಸ್.ರವರು ಪರಮಾಣು ನಿಶ್ಯಸ್ತ್ರೀಕರಣದ ಕುರಿತು ಭಾರತದ ನಿಲುವು ಏನಾಗಿತ್ತು ಎಂಬುದನ್ನು ತಿಳಿಸುವ ಪ್ರಯತ್ನ ಮಾಡಿರುವರು. ಭಾರತದಂತಹ ದೇಶ ವಿಜ್ಞಾನ ಕ್ಷೇತ್ರದಲ್ಲಿ ಸಾಧಿಸಿದ್ದರ ಕುರಿತು ಮತ್ತು ಸಾಧಿಸಬೇಕಾಗಿರುವುದರ ಕುರಿತು ಉಮಾ ವೆಂಕಟೇಶ್ ಅವರು ಚರ್ಚಿಸಿರುವರು. ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಪ್ರವೇಶ, ಸಾಧನೆಗಳ ಕುರಿತು ಚೂಡಾಮಣಿ ತಿಗಡಿ ಮತ್ತು ಗೀತಾ ಮಂಜ ಅವರು ವಿವರಿಸಿರುವರು. ಬಿ.ಎಸ್.ಶೈಲಜಾ ರವರು ಲಿಂಗ ಸಮಾನತೆಯಿಂದ ವೈಜ್ಞಾನಿಕತೆ ಮನೋಭಾವ' ಲೇಖನದಲ್ಲಿ ಮಹಿಳೆಯರು ಅಡುಗೆ ಮನೆಯೆಂಬ ಪ್ರಯೋಗಶಾಲೆಯಲ್ಲಿ ಕಂಡು ಹಿಡಿದ ವಿಷಯಗಳು ಇಂದು ಪೇಟೆಂಟ್‌ಗೆ ಒಳಪಡುತ್ತವೆ ಎಂಬುದನ್ನು ದಾಖಲಿಸುತ್ತಲೇ ಅವಳಿಗಿದ್ದ ಗಣಿತಜ್ಞಾನ ಕೇವಲ ಅದ್ಭುತ ಅಷ್ಟೇ ಅಲ್ಲ, ಸಮಾಜ ಕುಟುಂಬಗಳನ್ನು ಭದ್ರವಾಗಿಟ್ಟಿರುವ ವೈವಾಹಿಕ ಸಂಬಂಧದಲ್ಲಿ ಹೆಣ್ಣು ಗಂಡಿನ ವಯಸ್ಸಿನ ಅಂತರವನ್ನು ಒಗಟಿನ ರೂಪದ ಮಾತುಗಳಿಂದ ಅಳೆಯುತ್ತಿದ್ದ ವಿಧಾನಗಳನ್ನು ದಾಖಲಿಸಿರುವರು. ತಂತ್ರಜ್ಞಾನವನ್ನು, ಮಹಿಳಾ ಸಂತತಿಯನ್ನು ನಾಶಗೊಳಿಸುವ ಜೀವವಿರೋಧಿತನವನ್ನು ನೇಮಿಚಂದ್ರ ಅವರು 'ಸ್ತ್ರೀ ಭ್ರೂಣ ಹತ್ಯೆ ಮತ್ತು ತಂತ್ರಜ್ಞಾನ' ಲೇಖನದಲ್ಲಿ ಅತ್ಯಂತ ಕಳವಳಕಾರಿ ಸಂಗತಿಗಳನ್ನು ಬಹಿರಂಗಪಡಿಸಿರುವರು. ಡಾ.ಇಂದಿರಾ ಜೈ ಪ್ರಕಾಶ್ ರವರು 'ಆಧುನಿಕ ಸಮಾಜದಲ್ಲಿ ಆಧುನಕ ಮನೋಬೇನೆಗಳು ಡಾ.ಕೆ.ಸರೋಜಾ ದೇವಿಯವರು 'ವಿಶ್ವ ಮಹಿಳಾ ಆರೋಗ್ಯ ಚಳುವಳಿಯ ಕಾಳಜಿಗಳು' ಮತ್ತು ರೈತ ಚಳುವಳಿಯ ಕುರಿತು ಚುಕ್ಕಿ ನಂಜುಂಡಸ್ವಾಮಿಯವರು 'ಚಳುವಳಿಗಳಲ್ಲಿ ಏನಾಗುತ್ತಿವೆ, ಏನಾಗಿವೆ, ಎಂಬುದರ ಕುರಿತು ವೈಚಾರಿಕವಾಗಿ ಚರ್ಚಿಸಿರುವರು.

ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ ಅವರು ಮಹಿಳೆಯರ ಕುರಿತ ಹಾಗೆ ರೂಪಿಸಿದ ಕಾನೂನುಗಳು ಸಮಾಜದಲ್ಲಿ ಏನಾಗಿವೆ ಎಂಬುದರ ಮೇಲೆ ಬೆಳಕು

ಚೆಲ್ಲುವ ಪ್ರಯತ್ನ ಡಾ.ಹೇಮಲತಾ ಮಹಿಷಿ ಅವರು 'ಕಾನೂನಿನ ವ್ಯಾಪ್ತಿಯಲ್ಲಿ ಮಹಿಳೆಯ ಸಾಮಾಜಿಕ ಬದುಕು' ಮತ್ತು 'ಮಹಿಳೆ ಮತ್ತು ನ್ಯಾಯಾಲಯ' ಎನ್ನುವ ಲೇಖನದಲ್ಲಿ ಸಾ.ರಾ.ಅಬೂಬಕರ್ ಅವರು, 'ಮಹಿಳಾ ಹಕ್ಕುಗಳು ಅದರ ಪರಿಣಾಮಗಳು' ಕುರಿತು ಗೀತಾ ಕೃಷ್ಣಮೂರ್ತಿ ಮತ್ತು 'ಮಹಿಳೆ ಮತ್ತು ಕಾನೂನುಗಳ ಬಗ್ಗೆ ಸಮತಾ ದೇಶಮಾನೆ ಅವರು ಚಿಂತನಾರ್ಹವಾದ ಸಂಗತಿಗಳನ್ನು ದಾಖಲಿಸಿರುವರು.

ಅನಾದಿ ಕಾಲದಿಂದ ಹೆಣ್ಣನ್ನು ಲೈಂಗಿಕ ದೌರ್ಜನ್ಯಕ್ಕೆ ಒಳಪಟ್ಟಿದ್ದನ್ನು ಮತ್ತು ನಾವಿರುವ ಕಾಲದಲ್ಲಿ ಏನಾಗುತ್ತಿದೆ ಎನ್ನುವುದನ್ನು ಕೆ.ಆರ್.ಶಾನಿ 'ಕಮರ್ಷಿಯಲ್ ಸೆಕ್ಸ್ ವರ್ಕಸ್ ್ರ ಮತ್ತು ಸಾಮಾಜಿಕ ತಿರುವು' ಲೇಖನದಲ್ಲಿ ಗಂಭೀರವಾಗಿ ಚರ್ಚಿಸಿರುವರು. ಕುಟುಂಬ ಕಲ್ಯಾಣವೆಂಬುದು ಹೇಗಿರಬೇಕು ಎಂಬುದನ್ನು ಹಿರಿಯರಾದ ಡಾ.ಸರೋಜಿನಿ ಶಿಂತ್ರಿಯವರು ಆರೋಗ್ಯಪೂರ್ಣವಾಗಿ ವಿವರಿಸಿರುವರು.

'ಸ್ತ್ರೀ ಮತ್ತು ಆರ್ಥಿಕ ಸ್ವಾತಂತ್ರ್ಯದ ಕುರಿತು-ಸಂಪ್ರದಾಯ ಮತ್ತು ಆಧುನಿಕತೆ' ಡಾ.ಎನ್.ಕೆ.ಲೋಲಾಕ್ಷಿ ಅವರು ಅರ್ಥಪೂರ್ಣವಾಗಿಯೇ ವಾಸ್ತವವನ್ನು ಗ್ರಹಿಸಿಕೊಂಡಿರುವರು. 'ಜಾಹೀರಾತು ಒಂದು ಭ್ರಮೆ ಮತ್ತು ವಾಸ್ತವ' ಕುರಿತು ಬಿ.ಆರ್.ನಾಗರತ್ನ, ಗ್ರಾಮೀಣ ಪ್ರದೇಶದ ಮಹಿಳೆಯರ ಸಬಲೀಕರಣದ ತೊಡಕುಗಳನ್ನು ಬಿಡಿಸುವ ಪ್ರಯತ್ನವನ್ನು ಸಾವಿತ್ರಿ ಮುಜುಮ್‌ದಾರ ರವರು ಹಾಗೂ ಡಾ.ಸಿದ್ದಗಂಗಮ್ಮ ಅವರ 'ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ' ಕ್ಷೇತ್ರಾಧಾರಿತ ಅನುಭವಗಳ ಮೂಲಕ ಚರ್ಚಿಸಿರುವರು. ಡಾ.ಎಸ್.ವಿ.ಪ್ರಭಾವತಿ ಅವರು 'ಜಾಗತೀಕರಣ ಮತ್ತು ಮಹಿಳೆ' ಹಾಗೂ 'ಮಾರುಕಟ್ಟೆ ಮೌಲ್ಯಗಳು ಮತ್ತು ಮಹಿಳೆ' ಲೇಖನಗಳಲ್ಲಿ ಡಾ.ಮಲ್ಲಿಕಾ ಘಂಟಿಯವರು ಸಮಕಾಲೀನ ಸಂದರ್ಭ ಮಹಿಳೆಯನ್ನು ಸರಕು ಸಂಸ್ಕೃತಿಯಲ್ಲಿ ಸೇರಿಸಿದ್ದರ ಕುರಿತು ವಿವರಿಸಿದ್ದಾರೆ.

ಸಂಗೀತ, ನಾಟ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಅನುರಾಧಾ ಉಭಯಕರ್ ಅವರು 'ನೃತ್ಯಕಲೆ', 'ಸಂಗೀತದಲ್ಲಿ ಸೌಂದರ್ಯ ಮತ್ತು ರಸಾನುಭೂತಿ' ಲೇಖನದಲ್ಲಿ ಡಾ.ಜಯದೇವಿ ಜಂಗಮಶೆಟ್ಟಿ ಅವರು ವಿವರಿಸಿರುವರು. ಭಾಷೆಗೂ ಲಿಂಗರೋಗ ಅಂಟಿಕೊಂಡಿರುವುದರಿಂದ ಹೆಣ್ಣಿನ ಭಾಷೆಯ ಕುರಿತು ಡಾ.ಕೆ.ಆರ್.ಸಿದ್ದಗಂಗಮ್ಮ ಅವರು ವಿಶ್ಲೇಷಿಸಿರುವರು. ಮಾಧ್ಯಮವನ್ನು ಪ್ರಜಾಪ್ರಭುತ್ವದ ಪಿಲ್ಲರ್ ಎಂದೆ ಭಾವಿಸಲಾಗಿತ್ತು. ಮಾಧ್ಯಮ ಧರ್ಮವೆಂಬುದು ಆಧುನಿಕ ಕಾಲದಲ್ಲಿ ಎಂತಹ ಸಂಕಷ್ಟಗಳನ್ನು ಎದುರಿಸುತ್ತಿದೆ ಎಂಬುದನ್ನು ಅದೇ ಕ್ಷೇತ್ರದಲ್ಲಿ ಹಲವಾರು ವರ್ಷ ಕೆಲಸ ಮಾಡುವುದರ ಮೂಲಕ ಅದರ ಎಲ್ಲ ಮಗ್ಗಲುಗಳನ್ನು ಗಂಭೀರವಾಗಿ ಗ್ರಹಿಸಿರುವ ಆರ್.ಪೂರ್ಣಿಮಾರವರು 'ಮಾಧ್ಯಮಗಳು : ಸಂಕಷ್ಟ ಮತ್ತು ಜವಾಬ್ದಾರಿ' ಲೇಖನದಲ್ಲಿ ವಾಸ್ತವಕ್ಕೆ ಕನ್ನಡಿ ಹಿಡಿದಿರುವರು.

ಈ ಸಂಪುಟಕ್ಕೆ ಸಂಬಂಧಿಸಿದ ಲೇಖನಗಳನ್ನು ಸಂಗ್ರಹಿಸುವಾಗ ಲೇಖಕಿಯರ ಅನುಮತಿ ಕೇಳುವುದು ಕರ್ತವ್ಯ. ದೂರವಾಣಿಯ ಮೂಲಕ ಲೇಖಕಿಯರನ್ನು ಸಂಪರ್ಕಿಸಿದಾಗ ಬಹುಪಾಲು ಲೇಖಕಿಯರು ಪರಿಷತ್ತು, ಬಹಳ ದಿನಗಳ



ನಂತರವಾದರೂ ಇಂತಹದೊಂದು ಅದ್ಭುತವಾದ ಕೆಲಸ ಮಾಡುತ್ತಿರುವಾಗ ನಮ್ಮ ಅನುಮತಿಗಿಂತಲೂ ನಮ್ಮ ಸಹಕಾರ ನೀಡುವುದು ನಮ್ಮ ಕರ್ತವ್ಯ ಎಂದು ಪ್ರೀತಿಯಿಂದಲೇ ಒಪ್ಪಿಗೆ ನೀಡಿರುವರು. ಕೆಲವು ಹಿರಿಯ ಲೇಖಕಿಯರು ನಮ್ಮೊಂದಿಗಿಲ್ಲ ಆದರೆ ಅವರ ಬರಹಗಳು ನಮ್ಮೊಂದಿಗಿರಬೇಕು ಎನ್ನುವ ಕಾರಣದಿಂದ ಅಂತಹ ಹಿರಿಯರ ಲೇಖನಗಳನ್ನು ಬಳಸಿಕೊಳ್ಳಲಾಗಿದೆ. ಇಂದು ಎಲ್ಲ ಕ್ಷೇತ್ರದಲ್ಲಿಯೂ ಮಹಿಳೆಯರು ಪ್ರವೇಶ ಮಾಡಿರುವುದರಿಂದ ಆಯಾ ಕ್ಷೇತ್ರಗಳಿಗೆ ಸಂಬಂಧಪಟ್ಟ ಹಾಗೆ ವಿಶೇಷವಾಗಿಯೇ ಬರೆಯುತ್ತಿರುವರು. ಎಲ್ಲರನ್ನೂ ಒಳಗೊಳ್ಳುವ ಆಶಯ ನಮ್ಮದಾಗಿದ್ದರೂ, ನಮಗಿರುವ ಕಾಲಮಿತಿಯಲ್ಲಿ ಮತ್ತು ಸಂಪರ್ಕದ ಸಾಧ್ಯಾಸಾಧ್ಯತೆಗಳ ಹಿನ್ನೆಲೆಯಲ್ಲಿ ಪ್ರಾತಿನಿಧಿಕವಾಗಿ ಈ ಸಂಪುಟವನ್ನು ಸಿದ್ಧಪಡಿಸಿರುವೆ. ಇದು ಪ್ರಾರಂಭ ಮುಂದಿನ ದಿನಗಳಲ್ಲಿ ಇನ್ನೂ ವಿಶೇಷವಾದಂತಹ ರೀತಿಯಲ್ಲಿ ಈ ಕ್ಷೇತ್ರದಲ್ಲಿ ಕೆಲಸ ಮಾಡುವಂತಹ ಎಲ್ಲಾ ಸಾಧ್ಯತೆಗಳೂ ಇವೆ.

ಸಂಕೀರ್ಣ ಸಂಪುಟ ವಿಶಿಷ್ಟವಾದದ್ದು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸಮರ್ಥ ಆಡಳಿತಗಾರರೆಂದು ಹೆಸರು ಪಡೆದ, ಕ್ರಿಯಾಶೀಲ ನಾಡೋಜ ಡಾ.ಮನು ಬಳಿಗಾರ ಅವರು ಇಂತಹದೊಂದು ಅವಕಾಶ ನೀಡಿದ್ದಕ್ಕೆ ಕೃತಜ್ಞತೆ ಅರ್ಪಿಸುವುದು ನನ್ನ ಕರ್ತವ್ಯ. ಈ ಮಾಲಿಕೆಯ ಸಂಪಾದಕರಾದ ಡಾ.ಮಲ್ಲಿಕಾ ಘಂಟಿಯವರಿಗೆ ಧನ್ಯವಾದಗಳು, ಸಂಪುಟ ಕಾರ್ಯದಲ್ಲಿ ಸಲಹೆ ಸಹಕಾರ ನೀಡಿದ ಡಾ.ಪದ್ಮರಾಜ ದಂಡಾವತಿಯವರಿಗೆ, ಕಾರ್ಯದರ್ಶಿಗಳಾದ ಡಾ.ರಾಜಶೇಖರ ಹತಗುಂದಿ, ವ. ಚ. ಚನ್ನೇಗೌಡ ಮತ್ತು ನಾಗರತ್ನ ಅವರಿಗೆ ಕೃತಜ್ಞತೆಗಳು. ಲೇಖನಗಳ ಸಂಗ್ರಹದಲ್ಲಿ ಸಹಕಾರ ನೀಡಿದ ಡಾ.ವೆಂಕಟಗಿರಿ ದಳವಾಯಿ, ಅಂದವಾಗಿ ಅಕ್ಷರ ಜೋಡಣೆ ಮಾಡಿದ ಕೊಟ್ರೇಶ್ ಕೊಟ್ಟೂರು ರನ್ನು ಪ್ರೀತಿಯಿಂದ ಸ್ಮರಿಸುವೆ.

- ಡಾ. ಎನ್. ಲಕ್ಷ್ಮಿ

ಪರಿವಿಡಿ


೧. ಕಾಣದ ಸಂಪತ್ತಿನ ಬೆನ್ನು ಹತ್ತುವ ಹುಚ್ಚುತನ ೧

- ವೀಣಾ ಬನ್ನಂಜೆ

೨. ಕಾನೂನಿನ ವ್ಯಾಪ್ತಿಯಲ್ಲಿ ಮಹಿಳೆಯ ಸಾಮಾಜಿಕ ಬದುಕು ೬

-ಹೇಮಲತಾ ಮಹಿಷಿ

೩. ಲಿಂಗ ಸಮಾನತೆಯಿಂದ ವೈಜ್ಞಾನಿಕ ಮನೋಭಾವ ೨೨

- ಬಿ.ಎಸ್. ಶೈಲಜಾ

೪. ಮೇಡಂ ಕ್ಯೂರಿ ೩೦

-ಡಾ. ಸರೋಜಿನಿ ಸಂತಿ

೫. ಭಾರತದಲ್ಲಿ ವಿಜ್ಞಾನ ಅಂದು, ಇಂದು ೩೭

- ಉಮಾ ವೆಂಕಟೇಶ್

೬. ಕುಟುಂಬ ಕಲ್ಯಾಣದ ನೆಲೆ, ಬೆಲೆ ೫೩

ಡಾ. ಸರೋಜಿನಿ ಶಿಂತ್ರಿ

೭. ಕಮರ್ಷಿಯಲ್ ಸೆಕ್ಸ್‌ವರ್ಕರ್ಸ್‌ರ ಮತ್ತು ಸಾಮಾಜಿಕ ತಿರುವು ೫೬

- ಕೆ.ಆರ್. ಶಾನಿ

೮. ಸಂಗೀತದಲ್ಲಿ ಸೌಂದರ್ಯ ಮತ್ತು ರಸಾನುಭೂತಿ ೬೩

-.ಡಾ. ಜಯದೇವಿ ಜಂಗಮಶೆಟ್ಟಿ

೯. ವಿಶ್ವ ಮಹಿಳಾ ಆರೋಗ್ಯ ಚಳುವಳಿಯ ಕಾಳಜಿಗಳು ೭೧

ಡಾ. ಕೆ. ಸರೋಜಾದೇವಿ

೧೦. ಮಹಿಳೆ ಮತ್ತು ನ್ಯಾಯಾಲಯ ೮೪

- ಸಾರಾ ಅಬೂಬಕರ್

೧೧. ವಿಜ್ಞಾನ - ಮಹಿಳೆ ೮೯

- ಚೂಡಾಮಣಿ ತಿಗಡಿ

೧೨. ಅವಳ ಭಾಷೆ ೯೪

- ಡಾ. ಕೆ.ಆರ್. ಸಿದ್ಧಗಂಗಮ್ಮ

೧೩. ವಿಜ್ಞಾನದಲ್ಲಿ ಮಹಿಳೆ ೧೦೩

– ಗೀತಾ ಮಂಜ

೧೪. ಸ್ತ್ರೀಭ್ರೂಣ ಹತ್ಯೆ ಮತ್ತು ತಂತ್ರಜ್ಞಾನ ೧೨೪

- ನೇಮಿಚಂದ್ರ



೧೫. ರೈತ ಚಳವಳಿ ೧೪೪

- ಚುಕ್ಕಿ ನಂಜುಂಡಸ್ವಾಮಿ

೧೬. ನೃತ್ಯಕಲೆ ೧೪೮

- ಅನುರಾಧಾ ಉಭಯಕ

೧೭. ಕಾಲಾಯ ತಸ್ಮೈ ನಮಃ ೧೭೦

- ಮೀನಾ ಸುಬ್ಬರಾವ್

೧೮. ಆಧುನಿಕ ಸಮಾಜದಲ್ಲಿ ಆಧುನಿಕ ಮನೋಬೇನೆಗಳು ೧೭೩

- ಡಾ. ಇಂದಿರಾ ಜೈ ಪ್ರಕಾಶ್

೧೯. ಸ್ತ್ರೀ ಮತ್ತು ಆರ್ಥಿಕ ಸ್ವಾತಂತ್ರ್ಯ : ಸಂಪ್ರದಾಯ ಮತ್ತು ಆಧುನಿಕತೆ ೧೭೮

ಡಾ. ಎನ್. ಕೆ. ಲೋಲಾಕ್ಷಿ

೨೦. ಜಾಹೀರಾತು ಒಂದು ಭ್ರಮೆ ಮತ್ತು ವಾಸ್ತವ ೧೮೪

- ಬಿ.ಆರ್. ನಾಗರತ್ನ

೧೦. ಮಹಿಳೆ ಮತ್ತು ಕಾನೂನು ೦೮೮

- ಸಮತಾ ದೇಶಮಾನೆ

೧೧. ಜಾವಳಿಗಳು ೦೯೭

ಡಾ. ಟಿ.ಎನ್. ಪದ್ಮಾ

೧೨ ಅಗ್ನಿ ಮತ್ತು ಮಳೆ : ಸ್ತ್ರೀ ಅಭಿವ್ಯಕ್ತಿ ನೆಲೆಗಳು ೧೦೫

ಜಗದೇವಿ ಕಲಕಟ್ಟಿ

೧೪. ಜಾಗತೀಕರಣ ಮತ್ತು ಮಹಿಳೆ ೧೦೯

- ಎಸ್. ವಿ. ಪ್ರಭಾವತಿ

೧೫. ಮಹಿಳಾ ಹಕ್ಕುಗಳು : ಪರಿಣಾಮಗಳು ೧೦೪

ಗೀತಾ ಕೃಷ್ಣಮೂರ್ತಿ

೧೬. ಮಾಧ್ಯಮಗಳು : ಸಂಕಷ್ಟ ಮತ್ತು ಜವಾಬ್ದಾರಿ ೧೨೧

- ಆರ್. ಪೂರ್ಣಿಮಾ

೧೭. ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಸಬಲೀಕರಣ ಸಮಸ್ಯೆಗಳು, ೧೨೬

ಸಾಧ್ಯತೆಗಳು

- ಸಾವಿತ್ರಿ ಮುಜಮ್ದಾರ

೧೮. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ೧೪೪

– ಡಾ. ಸಿದ್ಧಗಂಗಮ್ಮ

*********

# ಕಾಣದ ಸಂಪತ್ತಿನ ಬೆನ್ನು ಹತ್ತುವ ಹುಚ್ಚುತನ

-ವೀಣಾ ಬನ್ನಂಜೆ

ನನಗೆ ವಸುಧೈವ ಕುಟುಂಬದಲ್ಲಿ ತುಂಬಾ ನಂಬಿಕೆ, ನನ್ನ ಒಡಹುಟ್ಟಿದವರಿಗೆ, ಅಕ್ಕಪಕ್ಕದವರಿಗೆ, ಸಂಬಂಧಿಗಳಿಗೆ ನಾನು ಅಂಟಿಕೊಳ್ಳುವುದು ದೊಡ್ಡದಲ್ಲ. ಅದು ಒಂದು ಮೋಹದ ಕಟ್ಟು, ಅದರಾಚೆಗೆ ಕಾರಣವಿಲ್ಲದೆ, ಮೋಹವಿಲ್ಲದೆ ಹುಟ್ಟಿಕೊಳ್ಳುವ ಸಂಬಂಧದಲ್ಲಿ ನನಗೆ ವಿಶೇಷ ಪ್ರೀತಿ. ಯಾವುದೋ ಪೂರ್ವ ಕಾರಣವೇ ಅವರನ್ನು ನನ್ನೊಂದಿಗೆ ಬೆಸೆದಿದೆ. ರಕ್ತಸಂಬಂಧಕ್ಕಿಂತಲೂ ಈ ವಿರಕ್ತಸಂಬಂಧಕ್ಕೆ ನಾನು ತುಂಬ ಹಾತೊರೆದಿದ್ದೇನೆ. ನನ್ನ ಆ ಜಗತ್ತೇ ನನಗೆ ತುಂಬ ದೊಡ್ಡದು, ಮತ್ತು ಮೊದಲಿನಿಂದಲೂ ನಾನು ಅದಕ್ಕೆ ಕಟ್ಟಿಕೊಂಡವಳು. ನನ್ನ ಈ ಒಳಗನ್ನು ತುಂಬ ಚಿಕ್ಕವಳಿದ್ದಾಗಲೇ ಗುರುತಿಸಿದ್ದಕ್ಕೋ ಏನೋ ನನ್ನ ತಾಯಿ, 'ಇದು ಮನೆಗೆ ಮಾರಿ, ಊರಿಗೆ ಉಪಕಾರಿ' ಎನ್ನುತ್ತಿದ್ದಳು. ಬಸವಣ್ಣನ ಮಾತೇ ಅದಕ್ಕೆ ಉತ್ತರ, 'ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವಾ. ನಿಮ್ಮ ನೆರೆಯವರನ್ನು ಪ್ರೀತಿಸು ಎಂಬುದೇ ನಮ್ಮ ಪರಂಪರೆ, ಜೀಸಸ್ ಕೂಡ ಅದನ್ನೇ ಹೇಳಿದ್ದ. ಆದರೆ ಬಸವಣ್ಣ ಹೇಳುವುದು ಅವರಿಗಾಗಿ ಅಳುವುದು ದೊಡ್ಡದಲ್ಲ. ನಿನಗೆ ಸಂಬಂಧವಿಲ್ಲದ, ಯಾವುದೇ ಕಾರಣಗಳಿಂದಲೂ ನಿನಗೆ ಗೊತ್ತಿಲ್ಲದ ದೂರದವರಿಗಾಗಿ ಅಳಬೇಕು. ಅದು ತುಂಬ ಸುಂದರ!

ಅಂಥ ಒಂದು ಹೊಸ ಸ್ನೇಹ ಬದರಿನಾಥ್ ದಂಪತಿಗಳದು, ಬೆಂಗಳೂರಿಗೆ ನಾನು ಬಂದ ಬಳಿಕ ನಮ್ಮ ತಂದೆಯ ಅಭಿಮಾನದಿಂದ ನನ್ನ ಬಳಿಗೆ ಬಂದವರು. ಅವರದು ಅನಿಮಿತ್ತ ಸ್ನೇಹ, ನನ್ನದು ವಿರಕ್ತ ಬಾಂಧವ್ಯ, ಈಗ್ಗೆ ನಾಲ್ಕು ವರ್ಷಗಳಿಂದ ಅವರು ನನ್ನನ್ನು ಕಟ್ಟಿದ್ದಾರೆ, ಕೆಣಕಿದ್ದಾರೆ.

ಅವರು ಇತ್ತೀಚೆಗೆ ತಮ್ಮ ಮಗಳು ಗಗನಾಳ 'ರಂಗಪ್ರವೇಶ' ಕಾರ್ಯಕ್ರಮ ಇಟ್ಟುಕೊಂಡಿದ್ದರು. ಅದು ಭರತನಾಟ್ಯದ ಮೊದಲ ಹೆಜ್ಜೆ, ಆರು ತಿಂಗಳ ಮೊದಲೇ ಅವರು ರಂಗಪ್ರವೇಶಕ್ಕೆ ನಾನೇ ನಿರೂಪಕಿ ಅಂತ ಆದೇಶಿಸಿದರು. ಅದು ಪ್ರೇಮದ ಒತ್ತಾಯ. ನಾನು ಇರುವ ರೀತಿ, ನನ್ನ ಬದುಕು, ಲೋಕವೇ ಬೇರೆ. ನನಗೆ ನಾಟ್ಯಲೋಕ ಎಂದೂ ಅಪರಿಚಿತವೇ, ಅದು ನನ್ನ ಕ್ಷೇತ್ರವಲ್ಲ ಎಂದರೆ ಅವರು ಕೇಳಬೇಕಲ್ಲ? ನನಗೆ ಮಡಿ ಮೈಲಿಗೆ, ನನ್ನದು, ನನ್ನದಲ್ಲದ್ದು ಭೇದವಿಲ್ಲ.

ಆದರೆ ಅದೊಂದು ಪಾರಂಪರಿಕ ನೃತ್ಯಪ್ರವೇಶದ ಕಾರ್ಯಕ್ರಮ. ಅದರೊಳಗೆ ತಮ್ಮದೇ ಆದ ವಿಧಿವಿಧಾನ, ಕಟ್ಟುಪಾಡುಗಳು ಇರುತ್ತವೆ. ಅಂಥಲ್ಲಿ ನನ್ನ ಮೈಲಿಗೆ ಅವರಿಗೆ ಕಷ್ಟವಾಗಬಾರದು ಎಂಬ ಒದ್ದಾಟವಿತ್ತು. ಆದರೆ ಬದರಿನಾಥ್ ದಂಪತಿಗಳು ನನ್ನ ಮಾತು ಕೇಳಲಿಲ್ಲ. ಅವರದೇ ಮಾತು ನಡೆಯಿತು. ಅಂದು ನನಗೂ ರಂಗಪ್ರವೇಶವೇ (ಆರಂಗೇಟ್ರಮ್ ಮೊದಲ ಹೆಜ್ಜೆ).

ನಾನು ನಾಟ್ಯಕ್ಕೆ ಕೆಲವಾರು ತಿಂಗಳು ಇರುವಾಗಲೇ ಆ ಕೆಲಸಕ್ಕೆ ನಿಯುಕ್ತಳಾದ್ದರಿಂದ ಅದರ ಧ್ಯಾನದಲ್ಲೇ ಇದ್ದೆ. ಒಂದು ದೃಷ್ಟಿಯಿಂದ ನಾನು ತುಂಬ ವರುಷಗಳ ಹಿಂದೆ ನಾಟಕದಲ್ಲಿ ನಟಿಸಿದವಳು, ನನ್ನ ನಟನೆ, ಅದರ ಪ್ರದರ್ಶನ ಇದರ ನೆನಪೂ ನನ್ನ ಮುಂದೆ ಹಾಯ್ದುವು.

ನಾನು ಕೆಲವು ರಂಗಪ್ರವೇಶದ ಕಾರ್ಯಕ್ರಮಗಳನ್ನು ನೋಡಿದ್ದೇನೆ. ಅದು ಸರ್ವೆಸಾಮಾನ್ಯವಾಗಿ ಆಂಗ್ಲಭಾಷೆಯ ವಿವರಣೆ ಮತ್ತು ಬಹಳ ಮಟ್ಟಿಗೆ ತಮಿಳು ಹಾಡಿಗೆ ನಾಟ್ಯ, ಅದರೊಳಗೆ ಒಂದು ನಿಯಮಿತ ಡ್ರೆಸ್ ಕೋಡ್, ಸಭಾಕಟ್ಟುಪಾಡು, ಶಿಸ್ತು. ಒಂದು ದೃಷ್ಟಿಯಿಂದ ಮಿಲಿಟರಿ ನಿಯಮದಂಥೆ ಶಿಸ್ತು ಉಳ್ಳದ್ದು. ನನಗೆ ಅಂದು ನನ್ನದೇ ಭಯಗಳಿದ್ದವು. ನಾನು ಕಟ್ಟುಪಾಡುಗಳಿಲ್ಲದವಳು. ನನ್ನದು ಸ್ವಚ್ಛಂದ ಶಿಸ್ತಿನ ಸ್ವತಂತ್ರ ಮಾರ್ಗ, ಪರಂಪರೆಯ ಒಳಗನ್ನು ಕುಡಿಯುತ್ತಲೇ ಹೊಸ ಪರಂಪರೆ ಸೃಷ್ಟಿಸುವ ಹಸಿವುಳ್ಳವಳು, ನನ್ನನ್ನು ಅವರು ಹೇಗೆ ಸ್ವೀಕರಿಸುತ್ತಾರೋ ಎಂಬ ಅನುಮಾನಗಳಲ್ಲೇ ನನ್ನನ್ನು ನಾನು ಸಿದ್ಧಪಡಿಸಿಕೊಂಡೆ. ನನಗನಿಸಿದ್ದು ಹೀಗೆ- ಜಗತ್ತು ಎರಡು ಸಂಪತ್ತುಗಳಿಂದ ತುಂಬಿದೆ. ಒಂದು ಕಾಣುವ ಸಂಪತ್ತು. ಇನ್ನೊಂದು ಕಾಣದ ಸಂಪತ್ತು, ಹೊನ್ನು ಹೆಣ್ಣು (ಗಂಡು) ಮಣ್ಣು ಇವು ಕಾಣುವ ಸಂಪತ್ತು, ಈ ಕಾಣುವ ಸಂಪತ್ತು ಬಾಹ್ಯ ಇಂದ್ರಿಯಗಳ ಆನಂದ ಕಾರಣ, ಒಂದು ಬೋಳು ಗುಡ್ಡವಾಗಿದ್ದ ಊರಿನಲ್ಲಿ ನಾಲ್ಕು ಕಂಪೆನಿ, ಇಂಡಸ್ಟ್ರಿಯ ಕಟ್ಟಡಗಳು ತಲೆ ಎತ್ತಿ ನಿಂತು, ಅಲ್ಲಿ ಒಂದಿಷ್ಟು ಜನ ಕೆಲಸಕ್ಕೆ ತೊಡಗಿ, ರಸ್ತೆಗಳು ತುಂಬಾ ಚಂದ ಆದರೆ ಸಾಕು, ನಾವು ಊರು ಚಂದ್ರ ಆಗಿದೆ ಅಂದು ಬಿಡುತ್ತೇವೆ. ಜನ ಕೂಡಾಚಂದ ಅಂದ್ರೆಚಂದ ಆಗಿದ್ದಾರೆ ಎಂದು ಮಾತಾಡಿಕೊಳ್ಳುತ್ತೇವೆ. ತನ್ನ ಹೆಗಲಿಗೆ ಟವಲ್ ಹಾಕಿ ದುಡಿವಂತೆ ಇದ್ದ ವ್ಯಕ್ತಿ ಪ್ಯಾಂಟ್ ಶರ್ಟ್, ಒಂದು ತನ್ನದೇ ಆದ ಕಾರ್, ಒಂದು ಪುಟ್ಟ ಬಂಗಲೆ ಕಟ್ಟಿಸಿ ಬಿಟ್ಟರೆ ಸಾಕು. ಅವನು ಈಗ ದೊಡ್ಡವನಾಗಿದ್ದಾನೆ ಎಂಬುದು ನಮ್ಮ ವ್ಯಾಖ್ಯಾನ. ಇದು ಬೆಳವಣಿಗೆ ಅಲ್ಲ ಎಂಬುದು ನನ್ನ ಮಾತಿನ ಅರ್ಥವಲ್ಲ. ಇದರ ಭರಾಟೆಯಲ್ಲಿ ಅಂತರಂಗದ ಬೆಳವಣಿಗೆ ನಮಗೆ ಮರೆತೇ ಹೋಗಿದೆ. ಬಹುಶಃ ಅದನ್ನು ಅಳೆಯಲು ಮಾಧ್ಯಮವಾದರೂ ಏನಿದೆ? ಹಾಗಾಗಿ ನಾವು ಆ ಕಾಣದ ಸಂಪತ್ತಿನ ಬೆನ್ನು ಹತ್ತುವುದಿಲ್ಲ. ದೊಡ್ಡವರಾಗುವುದು ಎಂದರೆ ನಮ್ಮಲ್ಲಿರುವ ಸೌಕರ್ಯಗಳಿಂದ, ವಸ್ತುಗಳಿಂದ ಮತ್ತು

ಅಂಥವುಗಳನ್ನು ಖರೀದಿಸುವ ಸಾಮರ್ಥ್ಯವುಳ್ಳ ಹಣದಿಂದ, ಇಂದಿನ ಬೆಳವಣಿಗೆ ಆ ಕಡೆಗಿನದು. ಇರಲಿ, ಅದೂ ಚಂದವೇ.

ಇನ್ನೊಂದು ಕಾಣದ ಸಂಪತ್ತು ಇದೆ. ಅದು ಅರಿವು, ವಿದ್ಯೆ ಅಥವಾ ಜ್ಞಾನ. ಅದಕ್ಕೆ ಬಾಹ್ಯ ಇಂದ್ರಿಯಗಳ ಆನಂದವೊಂದೇ ಫಲವಲ್ಲ. ಅದು ಆಂತರಂಗಿಕ ಅನುಭೂತಿ ಮತ್ತು ಕಣ್ಣಿನಿಂದ ಮರೆಯಾದ ಬಳಿಕವೂ ಆ ಸಂಪತ್ತು (ಆನಂದ) ಉಳಿಯುತ್ತದೆ. ಕಣ್ಣಿಗೆ ಕಾಣುವ ಸಂಪತ್ತು, ಕಾಣುವುದು ಅದರ ಗುಣವಾದ್ದರಿಂದ, ಒಂದು ದಿನ ಹಣದಂತೆಯೂ ಮುಗಿದು ಹೋಗಬಹುದು. ಶಂಕರಾಚಾರ್ಯರು ಜಗನ್ಮಿಥ್ಯಾ ಎಂದದ್ದು ಆ ಅರ್ಥದಲ್ಲೇ ಇರಬೇಕು. ಅದಕ್ಕೆ ಒಂದು ದಿನ ಇಲ್ಲವಾಗಿ ಬಿಡುವ ಸ್ಥಿತಿ ಇದೆ ಎಂಬ ಅರ್ಥದಲ್ಲಿಯೇ ಹೊರತು ಕಾಣಿಸುವ ವಸ್ತುವಿನ ನಿರಾಕರಣೆಯಲ್ಲ ಅದು. (ಇವೆಲ್ಲವೂ ಬ್ರಹ್ಮ ಎಂಬ ಎಚ್ಚರದಿಂದ ನೋಡುವವರಿಗೆ, ಅಂತೂ ಮಿಥ್ಯದ ಬಾಧೆಯೂ ಇಲ್ಲ. ಆ ಮಾತು ಬೇರೆ.) ಅಂತರಂಗದ ಸಂಪತ್ತಿಗೆ ಖಾಲಿಯಾಗುವ ಭಯವಿಲ್ಲ ಮತ್ತು ಅದನ್ನು ಕೊಟ್ಟಷ್ಟು ಹೆಚ್ಚುತ್ತದೆ, ಮೊಗೆದಷ್ಟು ಮಿಗುತ್ತದೆ. ಇಂಥ ಕಾಣದ ಸಂಪತ್ತಿನ ಬೆನ್ನು ಹತ್ತಿದವರು ಇಂದಿನ ಆಧುನಿಕ ಕಾಲದಲ್ಲಿ ಹುಚ್ಚರಂತೆ, ದಡ್ಡರಂತೆ, ದರಿದ್ರರಂತೆ ಕಂಡಿದ್ದಾರೆ. ಅದು ಅಸಹಜವೇನಲ್ಲ, ಕಾಣದ್ದು ಯಾರಿಗೆ ಬೇಕು?

ಅಂಥ ಕಾಣದ ಸಂಪತ್ತನ್ನು ನಾಟ್ಯ, ನಾಟಕ, ಸಂಗೀತ, ಸಾಹಿತ್ಯ ಮುಂತಾದ ಕಲಾ ಪ್ರಕಾರಗಳಲ್ಲೂ ಬೆಳೆಯಿಸಿಕೊಂಡು ಬಂದ ಪರಂಪರೆ ನಮ್ಮದು. ಅಪರೂಪಕ್ಕೆ ಅಂಥ ಒಂದು ಸಂಪತ್ತನ್ನು ಹುಡುಕಿ ನಾಟ್ಯನಾಯಿಕೆ ಗಗನಾ ಹೋಗಿದ್ದಾಳೆ. ಒಂದು ದೃಷ್ಟಿಯಿಂದ ಮಕ್ಕಳು ತಮಗೆ ಬುದ್ಧಿ ತಿಳಿವ ಮೊದಲೇ ತಮ್ಮ ಹಾವಭಾವಗಳಿಂದ ಅಭಿರುಚಿಯನ್ನು ತಿಳಿಸುತ್ತಾರೆ. ಅದನ್ನು ಅರ್ಥೈಸಿಕೊಂಡು ಅದಕ್ಕೆ ಪೂರಕವಾದ ವೇದಿಕೆ ಒದಗಿಸಿ ಕೊಡಬೇಕಾದವರು ಹೆತ್ತ ತಂದೆ ತಾಯಿ, ಗಗನಾ ಬಾಲ್ಯದಲ್ಲಿ ತೋರಿದ ಹಾವಭಾವಗಳಿಂದಲೇ ಅವಳ ಆಕರ್ಷಣೆ ಗುರುತಿಸಿದ ಬದರಿನಾಥ್ ದಂಪತಿಗಳು ಹುಡುಗಿ ಎಂಟು ವರುಷದವಳಿದ್ದಾಗಲೇ ನಾಟ್ಯಶಾಲೆಗೆ ಸೇರಿಸಿಬಿಟ್ಟರು.

ಒಮ್ಮೆ ಆ ನಾಟ್ಯಶಾಲೆಯನ್ನು ನೋಡಬೇಕು. ಹೊರಗೆ ಗಿಜಿಗುಡುವ ಗಾಂಧಿ ಬಜಾರ್, ಅದು ಒಂದು ದೃಷ್ಟಿಯಿಂದ ಕಾಣುವ ಸಂಪತ್ತಿನ ಬೆನ್ನ ಹತ್ತುವ ನಮ್ಮಂಥವರ ಧಾವಂತ, ಗಲಿಬಿಲಿ, ಒತ್ತಡ, ಆವೇಶ, ಅಶಾಂತಿ, ಗದ್ದಲ ಎಲ್ಲವನ್ನೂ ಪ್ರತಿನಿಧಿಸಿದರೆ ಅಲ್ಲೇ ಇರುವ 'ಕಲಾಕ್ಷಿತಿ ನಾಟ್ಯಶಾಲೆ' ಎಂಬ ಆವರಣ ಕಾಣದ ಸಂಪತ್ತಿನ ಲೋಕ ಹೇಗಿರುತ್ತದೆ ಎಂಬುದನ್ನು ಪ್ರತಿನಿಧಿಸುತ್ತದೆ. ಅತ್ಯಂತ ವಿನಯಶೀಲರಾಗಿ ಶಿಷ್ಯೆಯ ನಾಟ್ಯವನ್ನು ನೆಲದಲ್ಲಿ ಕುಳಿತು ಆನಂದಿಸುವ ಕಿಟ್ಟು ಸರ್ (ಪ್ರೊ.ಎಂ.ಆರ್.ಕೃಷ್ಣಮೂರ್ತಿ) ಅವರೊಂದಿಗೆ ನಾಟ್ಯಕ್ಕೆ ತಮ್ಮನ್ನು ಮೀಸಲಿಟ್ಟ ಅವರ ತಂಗಿ, ಮುಂತಾದ ಕುಟುಂಬ.

ಆ ಕ್ಯಾಂಪಸ್ಸಿನ, ಮನೆಯ ಒಳಗೊಮ್ಮೆ ಹೊಕ್ಕು ಬಂದರೆ ತಿಳಿದೀತು ಅದರ ಒಳಗಿರುವ ಪ್ರಶಾಂತ ಮೌನ, ಗಾಢ ತಲ್ಲೀನತೆ, ಜಗದ ಸೌಂದರ್ಯಕ್ಕೆ ಅರ್ಪಿಸಿಕೊಂಡ ಮನಸ್ಸು. ಪ್ರವೇಶದ್ವಾರದಲ್ಲಿ 'ಹೆತ್ತವರಿಗೆ ಪ್ರವೇಶವಿಲ್ಲ' ಎಂಬ ಶರಾ ಬರೆಯಲಾಗಿದೆ. ಎಷ್ಟು ಸುಂದರ ಪರಿಕಲ್ಪನೆ ಅದು!

ಪ್ರತಿ ಪಾಠಶಾಲೆಗೆ (ಗುರುಕುಲಕ್ಕೆ) ಹಿಂದೆ ಮಕ್ಕಳನ್ನು ಕಳಿಸುವುದೆಂದರೆ, ತಂದೆ ತಾಯಿಯರಿಂದ ಕಳಚಿಕೊಂಡು, ಅಧ್ಯಯನ ಮುಗಿಯುವವರೆಗೆ ಗುರುವನ್ನೇ ಸರ್ವಸ್ವವೆಂದು ನಂಬಿ, ಅವರ ತೆಕ್ಕೆಯಲ್ಲೇ ಬೆಳೆದು, ಪರಿಪೂರ್ಣವಾದ ಬಳಿಕ ಮರಳಿ 'ಸಿದ್ಧರಾಗಿ ತಂದೆ ತಾಯಿಯರನ್ನು ಸೇರುವುದು. ಅಲ್ಲಿಯವರೆಗೆ ಗುರುವಿನ ಜೊತೆಗೆ ಸಮರ್ಪಣೆ ಮತ್ತು ನಂಬಿಕೆ. ಈಗ ಹೆತ್ತವರಿಗೆ ಮಕ್ಕಳಿಗಿಂತಲೂ ಮೊದಲು ಪರೀಕ್ಷೆ, ಗುರುವಿಗೂ ಪಾಠಕ್ಕಿಂತ ಟ್ಯೂಶನ್‌ನ ಮೇಲೆ ಕಣ್ಣು, ಗುರು-ಶಿಷ್ಯ ಸಂಬಂಧವೇ ಈಗ ಹೊಸದು. ಇವೆಲ್ಲವೂ ಪರಿವರ್ತನೆ ಜಗದ ನಿಯಮ ಅದು ಒಂದು ಒಳಿತಿನ ಉದ್ದೇಶಕ್ಕಾಗಿಯೇ ಹೀಗೆಲ್ಲ ಬದಲಾಗುತ್ತಿದೆ ಎಂದು ನಂಬಿದವಳು ನಾನು.

ಆದರೆ ನನಗೆ ವಿಸ್ಮಯವಾದದ್ದು ಇಂಥ ನಾಟ್ಯಶಾಲೆಯಲ್ಲಿ ಒಂದು ಮಗುವಿಗೆ ನಾಟ್ಯ ತರಬೇತಿ ಕೊಟ್ಟು ಬೆಳೆಯಿಸಿ, ಆ ಬೆಳೆಯನ್ನು ತಂದೆ ತಾಯಿಯೂ ನೋಡದಂತೆ, ಅದಕ್ಕೆ ಮೋಹದ ಯಾವ ಕಟ್ಟೂ ಇಲ್ಲದೆ ತಾದಾತ್ಮ್ಯ ಹುಟ್ಟಿಸಿ, ರಂಗಪ್ರವೇಶ ಎಂಬ ಆ ಮೊದಲ ಹೆಜ್ಜೆಯ ದಿನವೇ ಅದನ್ನು ಗುರುವೂ, ತಂದೆ ತಾಯಿಯೂ, ಎಲ್ಲಕ್ಕೂ ಮಿಗಿಲಾಗಿ ವಿದ್ಯೆ ಕಲಿತ ವಿದ್ಯಾರ್ಥಿನಿಯು ಸ್ವತಃ ಮೊದಲ ಬಾರಿಗೆ (ಗೆಜ್ಜೆ ಕಟ್ಟಿ, ವೇಷ ತೊಟ್ಟು ತನ್ನನ್ನು ತಾನು) ನೋಡುವುದು.

ನಾಟ್ಯ, ಅಭಿನಯ, ಸಂಗೀತ, ನಾಟಕ ಎಲ್ಲವೂ ಇಂಥದೊಂದು ಅದ್ಭುತ ಕ್ರಿಯೆ. ಅದು ಒಂದು ದೃಷ್ಟಿಯಿಂದ ಗುರುವಿಗೆ ತನ್ನನ್ನು ತೋರುವ, ಸಭೆಯೆಂಬ ಪ್ರೇಕ್ಷಕರಿಗೆ ತನ್ನನ್ನು ಕಾಣಿಸುವ ಮತ್ತು ನಟಿಸುತ್ತ ನಟಿಸುತ್ತ ತನ್ನನ್ನೇ ನೋಡುವ ಒಂದು ಅದ್ಭುತ ದರ್ಶನ ಸಾಧ್ಯತೆ, ನನಗನಿಸಿದಂತೆ ಯಾವುದೇ ಕಲಾಪ್ರಕಾರ ಮೊದಲಿಗೆ ಪ್ರದರ್ಶನ ಆನಂತರಕ್ಕೆ ಅದೊಂದು ದರ್ಶನ.

ತುಂಬ ಹಿಂದೆ ನಾಟ್ಯಪರಂಪರೆ ಹೇಳಿದ ಭರತನನ್ನು ಜನ ಮುನಿ ಎಂದರು. ಇದಕ್ಕೆ ಸಂಬಂಧಿಸಿದ ಧ್ವನಿ, ಪ್ರತಿಭೆ, ರಸ ಮುಂತಾದ ಸಂಗತಿಗಳ ಕುರಿತು ಹೇಳಿದ ಅಭಿನವಗುಪ್ತನನ್ನು ಋಷಿ ಎಂದರು. ಇವರಿಬ್ಬರೂ ತಪಸ್ವಿಗಳು. ಆದರೆ ಅವರು ತಪಸ್ಸಿನ ಒಂದು ಸಾಧ್ಯತೆಯನ್ನು ಕಲಾಪ್ರಕಾರದ ಮೂಲಕ ಹೇಳಿದ್ದರು, ಧ್ಯಾನ ಎಂದರೆ ಕಣ್ಮುಚ್ಚಿ ಕುಳಿತು ನಮ್ಮನ್ನೇ ನೋಡುವುದು, ನೋಡುತ್ತಾ ನೋಡುತ್ತಾ ನಾವೇ ಅದು ಆಗುವುದು.

The observer will become the observed ಎನ್ನುತ್ತಿದ್ದರು ಜೆ.ಕೆ. (ಜಿಡ್ಡು ಕೃಷ್ಣಮೂರ್ತಿ). ನಾಟ್ಯ ಅಥವಾ ನಾಟಕ ಪರಂಪರೆಯೂ ಹೇಳುವುದು ಅದನ್ನೇ. ಮೊದಮೊದಲಿಗೆ ಪಾತ್ರವನ್ನು ಅಭ್ಯಸಿಸುವುದು. ಆ ಮಾತು, ಆ ನಟನೆ, ಆ ವ್ಯಕ್ತಿತ್ವ ಎಲ್ಲವುಗಳನ್ನು ತನ್ನೊಳಗೆ ಕರಗತಗೊಳಿಸಿ, ಬಳಿಕ ಆ ದಿನ ಆ ಪ್ರದರ್ಶನದ ಹೊತ್ತಿಗೆ ತಾನೇ ಆ ಪಾತ್ರ ಆಗುವುದು, ಮತ್ತು ಮುಂದುವರಿದು ಆ ಪಾತ್ರ ತಾನು ಎಂಬ ಎಚ್ಚರದಿಂದ ಅಭಿನಯಿಸುವುದು.

ನನಗೆ ನಾಟ್ಯ ಗೊತ್ತಿಲ್ಲ. ಕಿಟ್ಟುಸ ಗೊತ್ತಿಲ್ಲ. ಅವರ ಕಟ್ಟುಪಾಡು ಗೊತ್ತಿಲ್ಲ. ಎಲ್ಲ ಗೊತ್ತಿಲ್ಲಗಳ ನಡುವೆ ನಾನು ನಿಂತಿದ್ದೆ. ನಾನು ನಿರೂಪಕಿಯಾದ್ದರಿಂದ ನಾಟ್ಯದ ಮುನ್ನೋಟವು ನನಗೆ ಸಾಧ್ಯವಾಗಲಿಲ್ಲ. ನಾನು ನೋಡಿದ್ದು ಓರೆನೋಟ ಮಾತ್ರ ಆದರೆ ಗಗನಾ ಕೊಟ್ಟ ಆರು ಹಾಡುಗಳು ಸ್ವತಂತ್ರ ಕೃತಿಗಳಾಗಿ ಉಳಿಯಲಿಲ್ಲ. ನನಗದು ಒಂದು ಪದ್ಯದಿಂದ ಇನ್ನೊಂದು ಪದ್ಯಕ್ಕೆ ನಾಯಿಕೆ ಮೊದಲು ತನ್ನನ್ನು ನೋಡಿ, ನಂತರ ತನ್ನ ಸೃಷ್ಟಿಕರ್ತನಿಗಾಗಿ ವಿಸ್ಮಯಪಟ್ಟು, ಅವನನ್ನು ಒಲಿದು ಪ್ರೀತಿಸಿ ಅವನಿಗಾಗಿ ಹಂಬಲಿಸುವ ವಿರಹನಾಯಿಕೆಯಾಗಿ, ಬಳಿಕ ಅವನನ್ನು ತಾನೇ ಹಡೆದವಳು ಎಂಬ ಮಾತೃವಾತ್ಸಲ್ಯಕ್ಕೆ ತಿರುಗಿ ತಾಯಿಯಾಗುವ ಕ್ರಮವಾದ ಐದು ಪದ್ಯಗಳ ಬೆಳವಣಿಗೆಯಾಗಿ ಕಂಡರೆ, ಕೊನೆಯ ಹಾಡು 'ತಿಲ್ಲಾನ' ಎಲ್ಲ ಭಾವಗಳ ಅತಿ ಮಂಕಾದ ಪ್ರಶಾಂತ ಸ್ಥಿತಿಯಲ್ಲಿ ಆನಂದದ ಸಾಕ್ಷಾತ್ಕಾರವಾಗಿ ಬರಿಯ ಕಾರಣವಿಲ್ಲದೆ ಕುಣಿಯುವ ಪರಮಾನಂದ ಸ್ಥಿತಿಯಂತೆ ಕಾಣಿಸಿತು. ಹಾಗೆಯೇ ಹಾಡುಗಳನ್ನು ವಿವರಿಸಿದ್ದೆ ಕೂಡ. ಭಾವವಿಲ್ಲದ ಕ್ರಿಯೆಗೆ ಅರ್ಥವಿಲ್ಲ ಎಂದೇ ನನ್ನ ನಂಬಿಕೆ, ಅದಕ್ಕೆ ರತಿಸುಖದಲ್ಲಿ ಓಲಾಡುತ್ತಲೊಮ್ಮೆ ಕೃಷ್ಣಾ ಎನಬಾರದೇ ಎಂಬ ಪುರಂದರದಾಸರ ಮಾತು ನನಗೆ ತುಂಬ ಪ್ರಿಯವಾದದ್ದು. ಮನಸ್ಸೇ ಎಲ್ಲದರ ಭೇದಕ್ಕೆ ಕಾರಣ, ಕೃತಿ ಅದರಷ್ಟಕ್ಕೆ ಒಳಿತೂ ಅಲ್ಲ, ಕೆಡುಕೂ ಅಲ್ಲ. ಆದ್ದರಿಂದಲೇ ಪಶುವಿಗೆ ಸಂಭೋಗ ಮಾತ್ರ, ಅದೇ ಮನುಷ್ಯನಿಗೆ ಭಾವಸ್ಪರ್ಶದಲ್ಲಿ ದೈವತ್ವವಿದ್ದರೆ ಸಂಭೋಗವೂ ಯಜ್ಞವಾದೀತು.

ಆದ್ದರಿಂದಲೇ ದೇವದಾಸಿ, ವಿಲಾಸಿಗಳ ವಸ್ತುವೆಂದು ಮುಸ್ಲಿಮರ ವಿನೋದವಾಗಿದ್ದ ನಾಟ್ಯಕ್ಕೆ ಒಂದು ವಿಶೇಷ ಸ್ಪರ್ಶ ಕೊಟ್ಟು, ನಾಟ್ಯವನ್ನು ಭರತನಾಟ್ಯವನ್ನಾಗಿಸಿದ ರುಕ್ಮಿಣಿದೇವಿ ಅರುಂಡೇಲ್ ನೆನಪಾಗದೇ ಇರಲಿಲ್ಲ. ನನ್ನ ನಾಟಕದ ಪ್ರದರ್ಶನ ನೋಡಿ 'ತೋರಿದ್ದು ಸಾಕು, ನೋಡುವುದನ್ನು ಕಲಿ' ಎಂಬ ಮಾತಿನ ಮೂಲಕ ನನ್ನನ್ನು ನನ್ನೊಳಗೆ ಸೆಳೆದ ಸತ್ಯಕಾಮರ ಮಾತು ಮತ್ತೊಮ್ಮೆ ಎಚ್ಚರಾಯಿತು.

# ಕಾನೂನಿನ ವ್ಯಾಪ್ತಿಯಲ್ಲಿ ಮಹಿಳೆಯ ಸಾಮಾಜಿಕ ಬದುಕು

- ಹೇಮಲತಾ ಮಹಿಷಿ

ಮಹಿಳೆ ದುಡಿಮೆ ಮತ್ತು ಬಿಡುವು. ಈ ಮೂರನ್ನ ಸೇರಿಸ್ಕೊಂಡು ಹ್ಯಾಗೆ ಇದನ್ನ ಕಾನೂನು ಚೌಕಟ್ನಲ್ಲಿ ತರೋದು ಅಂತಾ ನಾನು ಬಹಳ ವಿಚಾರ ಮಾಡ್ತಾ ಇದ್ದೆ. ಕೆಲವೊಂದು ಅಂಶಗಳಲ್ಲಿ ಬಹುಶಃ ಮೂರಕ್ಕೂ ಸಂಬಂಧಪಟ್ಟಂತೆ, ಮೂರನ್ನು ಸೇರಿಸುವಂತಹ ಕಾನೂನಿನ ವಿಷಯಗಳನ್ನ ಪ್ರಸ್ತಾಪಿಸೋದಿಕ್ಕೆ ಇಷ್ಟಪಡ್ತೀನೆ. ಒಂದು ಪುಸ್ತಕದ ಶೀರ್ಷಿಕೆಯನ್ನ ನೋಡ್ತಾ ಇದ್ದೆ "Man's world and Women's Place" ಅಂತಾ. ಇಲ್ಲಿ ಪ್ರಪಂಚ ಇರೋದು ಪುರುಷನು; ಅದ್ರಲ್ಲಿ ಸ್ವಲ್ಪ ಜಾಗ ಇರೋದು ಮಹಿಳೇದು. ಇಷ್ಟು ದಿವಸ ನಾವು ಕೆಲವು ಸಲ ಹಾಗೆ ಮಾತಾಡೇಕಾದ್ರೆ, ಹೊರಪ್ರಪಂಚ ಪುರುಷನು, ಮನೆ ಒಳಗಿನ ಪ್ರಪಂಚ ಮಹಿಳೇದು ಅಂತಿದ್ವಿ. ಆದ್ರೆ, ಈಗ ಮನೆಯ ಒಳಗಡೆ ಪ್ರಪಂಚ ಕೂಡ ಮಹಿಳೇದಲ್ಲ ಅದು ಇಡೀ ಪ್ರಪಂಪವೇ ಪುರುಷನು. ಅದಲ್ಲಿ ಮಹಿಳೆ ತನ್ನ ಜಾಗವನ್ನು ಕಂಡುಕೊಳ್ಳೋದಿಕ್ಕೆ ಪ್ರಯತ್ನ ಪಡ್ತಾ ಇದ್ದಾಳೆ; ನನ್ನ ಜಾಗ ಎಲ್ಲಿದೆ ಅಂತ ಪ್ರಯತ್ನ ಪಡ್ತಾ ಇದ್ದಾಳೆ. ಹಾಗಾಗಿ ಇಡೀ ಮನೇನೂ ಕೂಡ ಅವಳ ಜಾಗ ಅಲ್ಲ. ಅಡಿಗೆ ಮನೆಗೆ ಬಂದ್ರೆ ಅದಾದ್ರು ಅವಳ ಜಾಗ ಅಂದ್ರೆ; ಪೂರ್ತಿ ಅಡಿಗೆ ಮನೇನೂ ಅವಳ ಜಾಗ ಆಗೋದಿಲ್ಲ. ಅಲ್ಲೂ ಕೂಡ ಬೇರೆ ಬೇರೆ ಫೋರ್ಸ್ ವರ್ಕ್ ಆಗ್ತಾ ಇರುತ್ತೆ, ಪೂರ್ತಿ ಅಡಿಗೆ ಮನೆಯ ಮೇಲೂ ಸಹ ಅವಳ ನಿಯಂತ್ರಣ ಇರೋದಿಲ್ಲ. ಅವಳಿಗೆ ಹ್ಯಾಗೆ ಬೇಕೋ ಹಾಗೆ ತನ್ನ ಇಚ್ಛೆಯನ್ನ, ಇಷ್ಟವನ್ನ ತೋರಿಸುವಂತಹ ಜಾಗ ಆಗಿರೋಲ್ಲ. ಬೇರೆ ಬೇರೆ ಕ್ಷೇತ್ರಗಳಲ್ಲಿ ನಾವು ಮಾಡ್ತಾ ಇರೋದಂತಂದ್ರೆ ಹಾಗೆ ಮಹಿಳೆಗೆ ಈ ಮ್ಯಾನ್ಸ್ ವರಲ್ಡ್‌ನಲ್ಲಿ ಮಹಿಳೆ ತನ್ನ ಸ್ಪೇಸ್ ಅನ್ನು ಹ್ಯಾಗೆ ಪಡಕೊಳ್ಳಬೇಕು ಅನ್ನೋದು. ಹ್ಯಾಗೆ ಅದನ್ನ ವಿಸ್ತರಿಸಿಕೊಂಡು ಹೋಗಬೇಕು? ಬರೀ ಎಲ್ಲೋ ಒಂದು ಸ್ಪೇಸ್ ತಗೊಂಡ್ರೆ ಸಾಕಾಗೋದಿಲ್ಲ. ಮೊದಲು ಸ್ವಲ್ಪ ಸ್ಪೇಸ್ ಗಳಿಸ್ಕೋಬೇಕು. ಆಮೇಲೆ ಅದನ್ನು ವಿಸ್ತರಿಸ್ಕೊಳ್ಳುತಾ ಹೋಗಬೇಕು. ಹಾಗೆ ಹೋದಾದ ಮೇಲೆ ಮುಂದೆ ಅದು ಕೇವಲ ಮ್ಯಾನ್ಸ್ ವರಲ್ಡ್ ಆಗಿ ಉಳಿಯೊಲ್ಲ. ಅದು ಎಲ್ಲರ ವರ್ಲ್ಡ್ ಆಗುತ್ತೆ. ಆ ದಿನಕ್ಕೋಸ್ಕರ ನಾವು ಇವತ್ತು ನಮ್ಮ ಸ್ಪೇಸನ್ನು ಕಂಡುಕೊಳ್ತಾ ಹೋಗೋಕಾಗುತ್ತದೆ, ವಿಸ್ತರಿಸ್ಕೊಳ್ತಾ ಹೋಗೋಕಾಗುತ್ತದೆ. ಅದನ್ನ ಹ್ಯಾಗೆ ಮಾಡೋದಿಕ್ಕೆ ಸಾಧ್ಯ, ಅದನ್ನು ನಾವು ನೋಡೋಕಾಗಿದೆ.

ಇಲ್ಲಿ ಶ್ರೀಮತಿಯವರು ಸಾಮಾಜಿಕ ನಿರೀಕ್ಷೆಗಳ ಬಗ್ಗೆ ಮಾತಾಡಿದ್ರು, ಹ್ಯಾಗೆ ನಮ್ಮಲ್ಲಿ ತಲತಲಾಂತರದಿಂದ ಬಂದಿರುವಂತಹ ವಿಷಯಗಳು ಹಲವಾರು ಇರೋದ್ರಿಂದ,

ಹಲವಾರು ಪದ್ಧತಿಗಳಿದಾವೆ, ಕಸ್ಟಮ್ಸ್, ಟ್ರೆಡಿಷನ್ಸ್ ಇವೆಲ್ಲ ಸೇರಿಕೊಂಡು ಇವೊಂದು ಎಕ್ಸ್ ಪೆಕ್ಟೇಷನ್ಸ್ ಅನ್ನ, ಸಾಮಾಜಿಕ ನಿರೀಕ್ಷೆಯನ್ನ ಉಂಟುಮಾಡ್ತಾವೆ. ಈ ಸಾಮಾಜಿಕ ನಿರೀಕ್ಷೆ ಇದ್ದಾಗ್ಯೂ ಕೂಡ ಅದನ್ನ ಮೀರಿ ನಡೆಯೋಕೆ ಸಾಧ್ಯ ಇದೆಯಾ? ಆ ನಿರೀಕ್ಷೆಗಳನ್ನ ಮೀರಿ, ಆ ನಿರೀಕ್ಷೆಗಳಿಗೆ ಅನುಗುಣವಾಗಿ ನಮಗೆ ನಡಕೊಳ್ಳೋದಿಕ್ಕಾಗೋದಿಲ್ಲ ಇವತ್ತಿನ ದಿವಸ ಅಂತ ಹೇಳೋಕೆ ಸಾಧ್ಯ ಇದೆಯಾ? ಆ ನಿರೀಕ್ಷೆಗಳನ್ನ ವಿಫಲಗೊಳಿಸೊಕೆ ಸಾಧ್ಯ ಇದೆಯಾ? ಬ್ಯಾರಿಯರ್‌ನ ಬ್ರೇಕ್ ಮಾಡೋಕೆ ಇವತ್ತು ಸಾಧ್ಯ ಇದೆಯಾ? ಅಂತ ನೋಡಿದಾಗ ನಮ್ಮ ಹಲವಾರು ಕಾನೂನುಗಳು ಇವತ್ತು ನಮಗೆ ಅದನ್ನ ಸಾಧನಗಳನ್ನ ಒದಗಿಸಿಕೊಡುತ್ತೆ.

ಬೇಕಾದಷ್ಟು ಕಾನೂನುಗಳು ಇವತ್ತು ಆಗ್ತಾ ಇದ್ದಾವೆ. ಮತ್ತೆ ಆ ಕಾನೂನುಗಳು ನಮಗೆ ಕೆಲವೊಂದು ಸಾಧನಗಳನ್ನ ಒದಗಿಸಿಕೊಡುತ್ತೆ, ಕಾನೂನು ತಾನೇನೆ ಈ ನಿರೀಕ್ಷೆಗಳನ್ನ ಮೀರಿ ಹೋಗೋದಿಲ್ಲ. ತಾನು ಮೀರಿ ಹೋಗುತ್ತೆ ಆದ್ರೆ ಅದರರ್ಥ ವಾಸ್ತವ ಜೀವನದಲ್ಲೇ ಅದು ಮೀರಿ ಹೋಗುತ್ತೆ. ಬರೀ ಕಾನೂನಿಂದಾನೇ ಆಗುತ್ತೆ ಅಂತ ಹೇಳೋಕಾಗೋದಿಲ್ಲ. ಆ ಕ್ರಿಯೆ ಆಗಬೇಕಾದ್ರೆ ನಾವು ಆ ಸಾಧನದ ಉಪಯೋಗವನ್ನು ಪಡಕೋಬೇಕಾಗುತ್ತೆ, ಕಾನೂನುಗಳ ಉಪಯೋಗವನ್ನ ಪಡಕೊಂಡು ಯಾವ ರೀತಿ ನಮ್ಮ ಸ್ಪೇಸ್ ಕ್ರಿಯೇಟ್ ಮಾಡ್ತಾ ಹೋಗ್ತಿವಿ ಅನ್ನೋದು ಬಹಳ ಮುಖ್ಯ ಆಗುತ್ತೆ. ಹಾಗಾಗಿ ಇಲ್ಲಿ ಕಾನೂನು ಬದ್ಲಾವಣೆ ಮಾಡೋದು ಸುಲಭ ಆಗುತ್ತೆ. ಆದ್ರೆ, ಆ ಸಾಮಾಜಿಕ ನಿರೀಕ್ಷೆಗಳನ್ನ ಮೀರಿ ನಡಿಯೋಕೆ ಕಾನೂನಿನ ಸಹಾಯದಿಂದ ಪ್ರಯತ್ನ ಮಾಡಿದಾಗ ಎಷ್ಟೆಲ್ಲ ಕಷ್ಟಗಳನ್ನ ಅನುಭವಿಸಬೇಕಾಗುತ್ತೆ ಅನ್ನೋದು ಗೊತ್ತಿದೆ. ಆದ್ರೂ ಕೂಡ ಆ ಕೆಲಸವನ್ನ ಮಾಡೋದಿಕ್ಕೆ ಸಾಧ್ಯ ಇದೆಯಾ? ಎಷ್ಟು ಮಾಡೋದಿಕ್ಕೆ ಸಾಧ್ಯ ಇದೆ? ಅದನ್ನ ಹಿಗ್ಗಿಸಿಕೊಳ್ತಾ ಹೋಗೋದಕ್ಕೆ ಸಾಧ್ಯ ಇದೆಯಾ? ನಮ್ಮ ನಮ್ಮ ಹಕ್ಕುಗಳನ್ನ ನಾವು ಅಸರ್ಟ್ ಮಾಡೋದಿಕ್ಕೆ ಸಾಧ್ಯ ಇದೆಯಾ? ಕಾನೂನು ಕೊಟ್ಟಿದೆ. ಅದನ್ನ ನಾವು ಅಸರ್ಟ್ ಮಾಡಿಕೊಳ್ತಾ ಹೋಗೋದಿಕ್ಕೆ ಸಾಧ್ಯ ಆಗುತ್ತಾ

ನಾವು ಇರುವ ಪರಿಸ್ಥಿತಿಯಲ್ಲಿ ಎಷ್ಟರ ಮಟ್ಟಿಗೆ ಮಾಡಬಹುದು. ಈ ಹಲವಾರು ವಿಚಾರಗಳನ್ನು ಕೂಡ ನಾವು ಮಾಡೋಕಾಗುತ್ತೆ. ಆದ್ರೆ ಕಾನೂನು ಇವತ್ತು ಮಹಿಳೆಯರಿಗೆ ಸಾಕಷ್ಟು ಅಸ್ತ್ರಗಳನ್ನ, ಸಾಧನಗಳನ್ನ ಕೊಡ್ತಾ ಇದೆ. ಈ ತಲೆತಲಾಂತರದಿಂದ ಬಂದಂತಹ ಸಾಮಾಜಿಕ ನಿರೀಕ್ಷೆಗಳು ಮಹಿಳೆಯರ ಬಗ್ಗೆ ಏನಿದೆಯೇ ಅದನ್ನ ಮೀರಿ ಹೋಗೋದಿಕ್ಕೆ ಅದನ್ನ ನಾವು ಮಾಡೋದಿಲ್ಲಾಂತ ಹೇಳೋದಿಕ್ಕೆ ನಮಗೆ ಒಂದು ಉತ್ತರವನ್ನ ಕಾನೂನು ಕೊಡ್ತಾ ಇದೆ. ಅದನ್ನ ಎಷ್ಟರಮಟ್ಟಿಗೆ ಇವತ್ತು ಉಪಯೋಗಿಸ್ಕೊಳ್ಳೋಕೆ ಸಾಧ್ಯ ಆಗುತ್ತೆ ಅನ್ನೋದನ್ನು ಕೂಡ ನೋಡಬೇಕಾಗುತ್ತದೆ.

ಈಗ ನಾನು ಕಾನೂನಿನ ಬಗ್ಗೆ ಮಾತಾಡ್ತಿದ್ದ ಮಾತ್ರಕ್ಕೆ ಅದು ವಾಸ್ತವದಲ್ಲಿ ಇದೆ ಅಂಥ ಹೇಳ್ತಾ ಇಲ್ಲ. ಕಾನೂನ್‌ನಲ್ಲಿ ಇದೆ ಅಂತ ಮಾತ್ರ ಹೇಳೇನೆ. ಹ್ಯಾಗೆ ಅದು ನಮಗೆ ಈ ಸಾಧನವನ್ನು ಒದಗಿಸಿಕೊಡ್ತಾ ಇದೆ. ಅನ್ನೋದ್ರ ಬಗ್ಗೆ ಮಾತ್ರ ನಾನಿಲ್ಲಿ ಸೀಮಿತಗೊಳಿಸ್ತೇನೆ. ಯಾಕೆಂದ್ರೆ ವಾಸ್ತವದಲ್ಲಿ ಅದ್ರ ಉಪಯೋಗಗಳು ಆಗ್ತಿದೆಯೋ, ಬಿಡ್ತಿದೆಯೋ ಅದು ಮತ್ತೆ ನಾವು ವಿಚಾರ ಮಾಡ್ಕೊಳ್ಳೋದು, ಮತ್ತೆ ನಾವು ಇರೋ ಪರಿಸ್ಥಿತಿಯಲ್ಲೇ ಅದನ್ನ ಎಷ್ಟುಪಯೋಗಿಸ್ಕೊಳ್ಳೋಕೆ ಸಾಧ್ಯ ಅನ್ನೋದು ಪ್ರತಿಯೊಬ್ಬ ವ್ಯಕ್ತಿ ತನಗೆ ತಾನೇ ವಿಚಾರ ಮಾಡುವಂಥಾದ್ದದು. ಅದು ಎಲ್ಲರಿಗೂ ಸಮಾನವಾಗಿ ಹಕ್ಕುಗಳನ್ನ ಕೊಟ್ರು ಕೂಡಾ, ಅಧಿಕಾರ ಕೊಟ್ರೂ ಕೂಡ ಅದನ್ನ ಪ್ರತಿಯೊಬ್ಬ ವ್ಯಕ್ತಿಯೂ ತಾನಿರುವಂತಹ ಒಂದು ಸನ್ನಿವೇಶದಲ್ಲಿ ಎಷ್ಟರಮಟ್ಟಿಗೆ ಅದನ್ನ ಉಪಯೋಗಿಸ್ಕೋಳೋಕೆ ಸಾಧ್ಯ ಅನ್ನೋದನ್ನೂ ಕೂಡ ನೋಡೋಕಾಗುತ್ತದೆ. ಈಗ ವಿವಾಹದ ಬಗ್ಗೆ ಹೇಳುವುದಾದ್ರೆ ಅದೊಂದು ಸಂಸ್ಥೆಯಾಗಿ ಹ್ಯಾಗೆ ಅದು ಮಹಿಳೆಯರನ್ನು ಒಂದು ಕಟ್ಟುಪಾಡಿಗೆ ಒಳಪಡಿಸಿದೇ ಅಂತ. ಇದು ಬರೀ ಮಹಿಳೆಯರನ್ನು ಪುರುಷರನ್ನು ಕಟ್ಟುಪಾಡಿಗೆ ಒಳಪಡಿಸುತ್ತೆ, ಎಲ್ಲರನ್ನೂ ಅದು ಒಂದು ಕಟ್ಟುಪಾಡಿಗೆ ಒಳಪಡಿಸುವಂತಹ ಸಂಸ್ಥೆಗಳಾದ ಈ ವಿವಾಹವನ್ನ, ಕುಟುಂಬವನ್ನ ಹ್ಯಾಗೆ ವ್ಯಾಖ್ಯಾನ ಮಾಡೋದು. ಏಕೆಂದ್ರೆ ಪ್ರತಿಯೊಂದಕ್ಕೂ ಕೂಡ ಒಂದು ವ್ಯಾಖ್ಯಾನ ಬೇಕಾಗುತ್ತೆ. ಹಾಗೆ ಅದನ್ನು ನೀವು ಸಪೋರ್ಟ ಮಾಡ್ತೀರ, ವಿವಾಹ ಅನ್ನೋದನ್ನ ಹ್ಯಾಗೆ ಎಕ್ಸ್ ಪ್ಲೇನ್ ಮಾಡ್ತೀರ. ಕುಟುಂಬ ಅನ್ನೋದನ್ನ ಹಾಗೆ ಎಕ್ಸ್ ಪ್ಲೇನ್ ಮಾಡ್ತೀರ. ಅದು ಏನದು ಅನ್ನುವಂಥಾದ್ದು. ಇದೇ ಪ್ರಶ್ನೆ ಸ್ಟೇಟ್ ಸಂಬಂಧವಾಗಿ ಬಂದಾಗ, ಒಂದು ರಾಜ್ಯದ ವಿಷಯದಲ್ಲಿ ಬಂದಾಗ ಬಹಳಷ್ಟು, ಅದಕ್ಕೆ ವಿಚಾರ ಮಾಡಿ ಅದಕ್ಕೆ ಒಂದು ಕಾನೂನಿನ ನೆಲೆಗಟ್ಟನ್ನು ಒದಗಿಸಿಕೊಡ ಬೇಕಾಗುತ್ತದೆ. ಆದ್ರೆ ಕೊನೆಗೆ ಸೋಶಿಯಲ್ ಕಾಂಟ್ರಾಕ್ಟ್ ಥಿಯರಿಗೆ ಬಂದಬಿಟ್ಟು ಅಲ್ಲಿ ಪ್ರಜೆಗಳೆಲ್ಲರೂ ಸೇರಿ ಒಪ್ಪಿಗೆಯಿಂದ ರಚಿಸಿದ್ದಂಥದು ಅನ್ನುವಂತಹ ಒಂದು ಕಾನೂನಿನ ನೆಲೆಗಟ್ಟನ್ನ ಅದಕ್ಕೆ ಒದಗಿಸಿಕೊಡಬೇಕಾಗಿ ಬಂತು.

ಮೊದ್ಲು ಹ್ಯಾಗಿತ್ತು ಅಂತಂದ್ರೆ ರಾಜ್ಯವನ್ನು ಆಳುವಂಥವರು ಡಿವೈನ್ ರೈಟ್ ಅನ್ನುವಂತಹ ಮಾತಿತ್ತು. ಅದಕ್ಕೆ ಇನ್ನೇನು ಇಲ್ಲವೇ ಇಲ್ಲ. ಅದು ದೇವರಿಂದ ಬಂದಿರುವಂಥಾದ್ದು, ರಾಜರುಗಳು ಅಂದ್ರೆ ದೇವರುಗಳ ಪ್ರತಿನಿಧಿಗಳು ಅಂತೇಳಿಟ್ಟು ಆ ಡಿವೈನ್ ರೈಟ್ ಥೇರಿ ಮೇಲೆ ಆಳ್ವಿಕೆ ನಡೆಸ್ತಾ ಇದ್ರು. ಮತ್ತೆ ಅವರು ಆಡಳಿತ ನಡೆಸೋದಿಕ್ಕಾಗಿ ಆಯ್ತು ಅಥವಾ ಸ್ಟೇಟ್ ಹ್ಯಾಗೆ ಫಾರಂ ಅಯ್ತು ಅನ್ನೋದುಕ್ಕಾದ್ರೂ ಯಾವುದೇ ತರಹದ ಒಂದು ಕಾನೂನು ಬದ್ಧ ವ್ಯಾಖ್ಯಾನ ಸಿಗತಾ ಇರಲಿಲ್ಲ. ಮುಂದೆ ಅದನ್ನ ಈ ರೀತಿಯಾಗಿ ವ್ಯಾಖ್ಯಾನ ಕೊಟ್ಟಾಗ ಎಲ್ಲರ ಒಪ್ಪಿಗೆಯಿಂದ ಅದು ಆಗಿ ಬಂದಿರುವಂಥದ್ದು ಅಂತಾ ಬಂದಾಗ ಅದಕ್ಕೊಂದು ಅರ್ಥ ಬರುತ್ತೆ, ಆವಾಗ ಪ್ರಜೆಗಳಿಗೂ

ಹಕ್ಕು ಬರುತ್ತೆ; ಆಳುವವರಿಗೂ ಒಂದು ಕರ್ತವ್ಯ ಇರುತ್ತೆ. ಈ ರೀತಿಯಾಗಿ ಒಬ್ಬರಿಗೊಬ್ಬರಿಗೆ ಒಂದು ನಿಯಂತ್ರಣ ಸಾಧಿಸೋದಿಕ್ಕೆ ಸಾಧ್ಯ ಆಗುತ್ತೆ. ಆ ರೀತಿಯಲ್ಲಿ ಇವತ್ತು ವಿವಾಹದ ಒಂದು ವ್ಯವಸ್ಥೆಯನ್ನ ಯಾವ ರೀತಿ ಅದನ್ನ ವ್ಯಾಖ್ಯಾನ ಮಾಡೋದು, ಇದೇನು ಪರಸ್ಪರ ಒಪ್ಪಿಗೆಯಿಂದ ಮಾಡಿಕೊಳ್ಳುವಂಥಾದ್ದೇ? ವಿವಾಹ ಅನ್ನುವಂಥಾದು ಕಾಂಟ್ರಾಕ್ಟಾ ಹಿಂದೆ ಇದನ್ನ ನ್ಯಾಚುರಲ್ ಅಂತೇಳಿ ತಗೊಳ್ತಾ ಇದ್ರು. ಅಂದ್ರೆ, ಸ್ವಾಭಾವಿಕವಾದದ್ದು, ಸಹಜವಾದದ್ದು ಅದಕ್ಕೆ ಇನ್ನೇನು ಅರ್ಥವೇ ಬೇಕಾಗಿಲ್ಲ ಅಂತೇಳಿ, ಸ್ವಾಭಾವಿಕವಾಗಿ ಸಹಜವಾಗಿ ಇರುವಂತಾದು ಆದ್ದರಿಂದ, ಅದಕ್ಕೆ ಇನ್ನೇನು ವ್ಯಾಖ್ಯಾನ ಬೇಕಾಗಿಲ್ಲ ಅಂತ. ಆದ್ರೆ ಹಾಗಾಗೋಕೆ ಸಾಧ್ಯ ಇಲ್ಲ. ಇವತ್ತು ಎಲ್ಲ ಫೆಮಿನಿಸ್ಟ್ ಹೇಳ್ತಾ ಇರೋದೇನಂದ್ರೆ, ಮೊದ್ಲು ವಿವಾಹದ ಬಗ್ಗೆ ಒಂದು ಸರಿಯಾದ ವ್ಯಾಖ್ಯಾನವನ್ನು ನಾವು ಕೊಟ್ಟುಕೊಳ್ಳಬೇಕು. ಮುಖ್ಯವಾಗಿ ನಾವು ಇವತ್ತು ಮಹಿಳೆಯರು ಮಾಡಬೇಕಾದದ್ದು ಅಂತಂದ್ರೆ ವಿವಾಹ ಅನ್ನೋದನ್ನ ಹಾಗೆ ಅರ್ಥಸ್ತಿರಾ ಅಂತಾ. ಇದನ್ನ ನಾವು ಕಾಂಟ್ರಾಕ್ಟ್ ಅಂತ ತಗೊಳೋದಿತ್ತು. ಕೆಲವು ಟರ ಆಂಡ್ ಕಂಡೀಷನ್ಸ್‌ಗೆ ನಾವು ಒಪ್ಪಿಕೊಂಡುಬಿಟ್ಟು, ಕಾಂಟ್ರಾಕ್ಟ್ ಮಾಡಿಕೊಳ್ಳಿ, ವಿವಾಹದಲ್ಲಿ ಆತರ ಆಗುತ್ತಾ, ಇವರ ಕೆಲವು ಟರ್ಮ್ಸ್ ಇಂಥಾದ್ದಿದೆ ಅಂತ. ಅಂದ್ರೆ ನಮ್ಮದು ಇತರ ಟರ್ಮ್ ಇದೆ. ನಿಮ್ಮಿಂದ ನಾವು ಇಂತಿಂಥಾದ್ದು ನಿರೀಕ್ಷೆ ಮಾಡ್ತೀವಂತ, ಅದೇ ತರ ಮಹಿಳೆಯರು, ಪುರುಷರು ಹೇಳೋರು. ನಾನು ಇಂತಿಂಥಾದ್ದು ಪ್ರೊವೈಡ್ ಮಾಡೇನೆ. ನಿಮ್ಮಿಂದ ಇಂತಿಂತಾದ್ದು ನಿರೀಕ್ಷೆ ಮಾಡೇನೆ ಅಂತೇಳಿ, ಈ ರೀತಿಯಾಗಿ ಒಂದು ಟರಮ್ಸ್ ಆಂಡ್ ಕಂಡೀಷನ್ಸ್ ಹಾಕ್ಕೊಂಡು ಮಾರಿಸಿಕೊಂಡಿರುವ ಸಂಸ್ಥೆನಾ ಇದು? ಆ ರೀತಿ ನೋಡಿದಾಗ, ಆತರ ಇರೋದೇ ಇಲ್ಲ, ಇರೋಕೆ ಸಾಧ್ಯವೂ ಇಲ್ಲ. ವಿವಾಹ ಅನ್ನುವಂಥಾದ್ದು ಯಾವ ಕಾಲದಲ್ಲಿ ಅದು ಬಂತೋ, ಯಾವ ಕಾರಣಕ್ಕೆ ಬಂತೋ ಏನೋ, ಸಮಾಜದಲ್ಲಿ ಇದಕ್ಕೊಂದು ವ್ಯವಸ್ಥೆ ಇರಬೇಕು. ಗಂಡು-ಹೆಣ್ಣಿನ ಸಂಬಂಧಕ್ಕೆ ಅಂತ ಬಂತು.

ಮಹಿಳೆ ವಿವಾಹವಾಗಿ ಈ ಕುಟುಂಬ ಸಂಸ್ಥೆಯಲ್ಲಿ ಒಳಗ ಬಂದ ಮೇಲೆ ಕುಟುಂಬದಲ್ಲಿ ಬರುವಂತಹ ತಾಯಿ, ಹೆಂಡತಿ, ಹೆಣ್ಣು ಮಕ್ಕಳು ಇವರನ್ನ ಪೋಷಿಸುವಂತಹ ಕರ್ತವ್ಯ ಮಾತ್ರ ಆ ಕುಟುಂಬಕ್ಕೆ ಬಂತೇ ಹೊರತು ಈ ಮಹಿಳೆಯರಿಗೆ ಇವು ಯಾರದೆ ಹಕ್ಕೂ ಕೂಡ ನಿರೀಕ್ಷಿಸೋದು ಈ ಕುಟುಂಬದಿಂದ ಸಾಧ್ಯ ಆಗಲಿಲ್ಲ ಅಂತ ಇಲ್ಲಿ ಗಂಡುಮಕ್ಕಳು ಹುಟ್ಟಿದ ಕೂಡ್ಲೆ ಕುಟುಂಬದ ಆಸ್ತಿನಲ್ಲಿ ಹಕ್ಕು ಬಂದುಬಿಡುತ್ತೆ. ಅವರು ತಂದೆ ಜೊತೆಗೆ ಹಕ್ಕುದಾರರಾಗಿ ಬಿಡ್ತಾರೆ. ಆರಂಭದಲ್ಲಿ ಈ ಮಕ್ಕಳು ಸಂಪಾದ್ರೆ ಮಾಡಿದ್ದೂ ಕೂಡ ತಂದೆಗೆ ಸೇರ್ತಾ ಇತ್ತು ಅದು. ಆದ್ರೆ ಮುಂದೆ ಕಾಲ ಕ್ರಮೇಣ ಮಕ್ಕಳ ಹಕ್ಕಲ್ಲಿ ಗಂಡು ಮಕ್ಕಳ ಹಕ್ಕನ್ನ ಸ್ವತಂತ್ರಗೊಳಿಸಿಬಿಟ್ಟು, ಅವರು ಸಂಪಾ ಮಾಡಿದ್ದು ಅವರಿಗೆ ಸೇರಿದ್ದು, ಮತ್ತೆ ಹುಟ್ಟಿದಂದಿನಿಂದಲೇ ಗಂಡುಮಕ್ಕಳಿಗೆ ಹಕ್ಕು ಬರುತ್ತೆ ಅಂತ ಕುಟಂಬದಲ್ಲಿ ಸ್ವತಂತ್ರಗೊಳಿಸಿದ್ದು, ಆದ್ರೆ ಹೆಣ್ಣುಮಕ್ಕಳಿಗೆ ಆ ಸ್ವಾತಂತ್ರ್ಯವನ್ನ

ಕೊಡ್ಲಿಲ್ಲ. ಎಲ್ಲಿ ತನಕ ಕೊಡ್ಲಿಲ್ಲಾಂದ್ರೆ ೧೯೫೬ನೇ ಇಸವಿನಲ್ಲಿ ಪ್ರಪ್ರಥಮ ಬಾರಿಗೆ ನಮ್ಮಲ್ಲಿ ಹಿಂದೂ ಸಕ್ಸೇಷನ್ ಆಕ್ಟ್ ಬಂದಾಗ ನಮ್ಮ ಕುಟುಂಬದ ಮಹಿಳೆಯರಿಗೆ ಪುರುಷನ ಸ್ವಂತ ಆಸ್ತಿಯಲ್ಲಿ ಸಮಾನವಾದ ಹಕ್ಕನ್ನ ೫೬ನೇ ಇಸವೀನಲ್ಲಿ ಕೊಟ್ರು. ಮತ್ತೆ ಇತ್ತೀಚೆಗೆ ಬಂದ ೧೯೯೦ರ 'ಅಮೆಂಡ್ ಮೆಂಟ್ ಆಕ್ಟ್' ಪ್ರಕಾರ ಸಕ್ಸೇಷನ್ 'ಅಮೆಂಡ್ ಮೆಂಟ್ ಆಕ್ಟ್' ಹೆಣ್ಣು ಮಕ್ಕಳನ್ನೂ ಸಹ ಈ ಕೋಬಾರ್ಟನಸ್ ಅಂತ ಮಾಡಿಬಿಟ್ಟು, ಹೆಣ್ಣು ಮಕ್ಕಳಿಗೂ ಸಹ ಇವತ್ತು ಹುಟ್ಟಿದಂದಿನಿಂದ ಈ ಕುಟುಂಬದ ಆಸ್ತಿಯಲ್ಲಿ ಹಕ್ಕು ಬರಬೇಕು ಅಂತಾ ಮಾಡಿದರು. ಪಿತ್ರಾರ್ಜಿತ ಆಸ್ತಿನಲ್ಲಿ ಗಂಡು ಮಕ್ಕಿಗೆ ಹ್ಯಾಗೆ ಬರುತ್ತೆ ಹಾಗೆ ಹೆಣ್ಣು ಮಕ್ಕಳಿಗೂ ಬರಬೇಕು ಅಂತ ಇತ್ತೀಚೆಗೆ ೧೯೯೦ರ ತಿದ್ದುಪಡಿ ೧೯೯೪ರಲ್ಲಿ ಜಾರಿಗೆ ಬಂತು. ಆ ಮೂಲಕ ಕುಟುಂಬದ ಹೆಣ್ಣು ಮಕ್ಕಳಿಗೂ ಸಹ ಗಂಡುಮಕ್ಕಳಿಗಿದ್ದಂತಹ ಒಂದು ಸ್ಥಾನಮಾನವನ್ನ ಕಾನೂನಿನ ಮೂಲಕ ಕೊಟ್ರು, ಈ ಕುಟುಂಬ ಅನ್ನೋದನ್ನ ಹ್ಯಾಗೆ ಮಹಿಳೆಯರ್ನ ಎಕ್ಸ್ ಕ್ಲೋಡ್ ಮಾಡಿಕೊಂಡು ಬಂದಿದ್ರೋ, ಮತ್ತೆ ಆ ಕುಟುಂಬದೊಳಗಡೆ, ಕುಟುಂಬದ ವ್ಯಾಖ್ಯೆಯಲ್ಲಿ ಇವರೂ ಕೂಡ ಬರ್ತಾರೆ. ಇದು ಎಲ್ಲಾ ಕಡೇಗೂ ಇಲ್ಲ. ಈ ಅಮೆಂಡ್ ಮೆಂಟ್ ಬಂದಿರೋದು ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳ್ ನಾಡು ಈ ನಾಲ್ಕು ಕಡೆಗೆ ಮಾತ್ರ. ಈ ಸ್ಟೇಟ್ ಅಮೆಂಡ್ ಮೆಂಟ್ ಉಳಿದ ಕಡೆಗೆಲ್ಲ ಇವತ್ತಿಗೂ ಕೂಡ ಮಹಿಳೆಯರು ಆ ಕೋರ್ ಗ್ರೂಪಿನಿಂದ ಹೊರಗಡೆಗೇ ಇರ್ತಾರೆ, ಅದೊಳಗಡೆ ಕೋಪಾರ್ಟನರ್ ಆಗೊಲ್ಲ.

ಹೀಗೆ ತಂದಿರೋದ್ರಿಂದ ಇವತ್ತಿನ ದಿವಸ ಯಾವ ರೀತಿಯ ಬದಲಾವಣೆ ಆಗಿದೆ? ಇಷ್ಟು ದಿವಸ ಹೇಗಿರ್ತಿತ್ತು? ಈ ಸಾಮಾಜಿಕ ವಿಷಯದ ಮಾತು ಬಂದಾಗ ಹಲವಾರು ಗಾದೆಗಳನ್ನು ನಾವು ಹೇಳ್ತಿವಿ 'ಕೊಟ್ಟಹೆಣ್ಣು ಕುಲಕ್ಕೆ ಹೊರಗೆ' ಒಂದೋರ್ತಿ ಮಹಿಳೆಯನ್ನ ಮದುವೆ ಮಾಡಿಕೊಟ್ಟ ಮೇಲೆ ಮುಗೀತು. ಅವಳು ಬೇರೆ ಕುಟುಂಬಕ್ಕೆ ಹೊರಟು ಹೋಗ್ತಾಳೆ. ತಂದೆ ಮನೆ ಜೊತೆಗೆ ಪೂರ್ತಿಯಾಗಿ ಸಂಬಂಧವನ್ನು ಕಡಿದುಕೊಂಡು ಬಿಡ್ತಾಳೆ. ಮತ್ತೆ ಅವಳು ವಾಪಸ್ ಬರೋದಿಕ್ಕೆ ಸಾಧ್ಯ ಇಲ್ಲ. ಒಂದ್ದಾರಿ ಮದುವೆಯಾದ್ರೆ ಮುಗಿತು. ಪಾಲಿಗೆ ಬಂದಿದ್ದು ಪಂಚಾಮೃತ ಇಂಥಾವು ಬೇಕಾದಷ್ಟು ಗಾದೆಗಳು ಸಿಗ್ತಾನೆ. ಅದನ್ನೆಲ್ಲವನ್ನು ಕೂಡಾ ಇತ್ತೀಚೆಗೆ ತಂದಂತಹ ಹಲವಾರು ಕಾನೂನಿನ ತಿದ್ದುಪಡಿಗಳು ಮುರಿಯುತ್ತೆ. ಇವತ್ತು ಕಾನೂನು ಮಾಡಿದೆ. ಅದನ್ನ ಮಾಡಿದ್ರಿಂದ ಏನಾಗಿದೆ ಅಂತಂದ್ರ ಇವತ್ತು 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಅಂತ ಹೇಳೋದಿಕ್ಕೆ ಸಾಧ್ಯ ಇಲ್ಲ. ಯಾಕೆಂದ್ರ ಇವತ್ತಿನ ದಿವಸ ಹೆಣ್ಣುಮಕ್ಕಳಿಗೆ ತಂದೆಯ ಮನೆಯಲ್ಲಿ ಕೂಡ ಆಸ್ತಿ ಹಕ್ಕಿದೆ. ತಂದೆಯ ಸ್ವಯಾರ್ಜಿತ ಆಸ್ತಿನಲ್ಲೂ ಇದೆ, ಕುಟುಂಬದ ಪಿತ್ರಾರ್ಜಿತ ಆಸ್ತಿನಲ್ಲೂ ಇದೆ. ಅದೇ ರೀತಿ ಮದುವೆ ಮಾಡಿಕೊಂಡು ಗಂಡನ ಮನೆಗೆ

ಹೋದ್ಮೇಲೆ ಅಲ್ಲೂ ಸಹ ಗಂಡನ ಮರಣಾನಂತರ ಅವನ ಆಸ್ತಿನಲ್ಲಿ ಏನ್ ಬರತ್ತೋ ಅದರಲ್ಲೂ ಕೂಡ ಹೆಂಡ್ತಿಗೆ ಪಾಲಿರುತ್ತೆ. ಅಂದ್ಮೇಲೆ ಅವಳು ಎರಡೂ ಕುಟುಂಬದ ಭಾಗವಾಗಿ ಉಳಿದಿರುತ್ತಾಳೆ. ಹಿಂದೆ ಇದ್ದ ಒಂದು ಕಲ್ಪನೆ ಏನಿತ್ತಲ್ಲ ಪೂರ್ತಿಯಾಗಿ ಅವಳು ತಂದೆ ಮನೆ ಜೊತೆ ಸಂಪರ್ಕ ಕಡ್ಕೊಂಡು ಬಿಡ್ತಾಳೆ. ಅವಳಿಗೆ ಯಾವುದೂ ತರದ್ದು ಉಳಿಯೋದಿಲ್ಲಾಂತ, ಕಾನೂನಿನ ಪ್ರಕಾರ ಈಗ ಅದು ಸರಿಯಾದ್ದಲ್ಲ. ಮದುವೆಯಾಗಿ ಗಂಡನ ಮನೆಗೆ ಹೋದ್ರೂ ಸಹ ಆ ಹಕ್ಕು ಅವಳಿಗೆ ತವರು ಮನೇನಲ್ಲಿ ಏನಿರುತ್ತೆ ಅದು ಉಳಿದೇ ಇರುತ್ತೆ, ಅದ್ರ ಜೊತೆಗೆ ಗಂಡನ ಮನೆಯಕಡೆ ಬರಬೇಕಾದಂತಹ ಕೆಲವೊಂದು ಹಕ್ಕುಗಳೂ ಸಹ ಅವಳಿಗೆ ಬರುತ್ತೆ. ಆ ರೀತಿಯಲ್ಲಿ ಇವತ್ತು ಹೆಣ್ಣಿನ ಸಾಮಾಜಿಕ ನಿರೀಕ್ಷೆಗಳನ್ನ ಕಾನೂನು ಸರಿಯಾದ್ದಲ್ಲ ಅನ್ನುವಂತಹ ಒಂದು ಘೋಷಣೆಯನ್ನು ಮಾಡುತ್ತದೆ. ಅಂದ್ರೆ ಪೂರ್ತಿ ಕಡಕೊಂಡು ಹೊರಟೋಗೋದನ್ನ ಒಪ್ಪಿಕೊಳ್ಳೋದಿಲ್ಲ. ಅದ್ರ ಜೊತೆಗೆ ತಂದೆ ಮನೆ ಕಡೆ ಆಸ್ತಿನಲ್ಲಿ ವಾಸದ ಮನೆ ಇರುತ್ತೆ. ಈ ವಾಸದ ಮನೆ ಬಗ್ಗೆ ಇರುವ ಕೆಲವೊಂದು ಸ್ಪೆಷಲ್ ಪ್ರಾವಿಜನ್ ಏನಿದೆಯಲ್ಲ ಅದರಲ್ಲಿ ಕೂಡ ಹೆಣ್ಣು ಮಕ್ಕಳಿಗೆ ತವರು ಮನೇನಲ್ಲಿ ಒಂದು ಹಕ್ಕು ಇದೆ; ಸ್ಥಾನವೂ ಇದೆ. ಪೂರ್ತಿ ಹೊರಟ್ಹೋಗಲ್ಲ ಅವರು ಅನ್ನೋದ್ರ ಬಗ್ಗೆ ಒಂದು ಪಾಲನ್ನು ಕೊಡುತ್ತೆ.

ಇದರ ಪ್ರಕಾರ ಈಗ ಆಸ್ತಿನಲ್ಲಿ ಹೆಣ್ಣುಮಕ್ಕಳಿಗೆ, ಗಂಡುಮಕ್ಕಳಿಗೆ ವಿಭಾಗ ಆಗ್ಬೇಕಾಗಿರುತ್ತೆ. ತಂದೆ ಸತ್ಹೋಗಿರ್ತಾನೆ. ಅದು ಒಂದು ವಾಸದ ಮನೆ ಆಗಿರುತ್ತದೆ. ಆವಾಗ ಹೆಣ್ಣುಮಕ್ಕಳಿಗೆ ಇದಲ್ಲಿ ಏನು ಹಕ್ಕಿದೆ? ಆ ಮನೇನಲ್ಲಿ ಆ ಕುಟುಂಬದ ಜನರು ವಾಸಮಾಡ್ತಾ ಇದ್ರೆ, ಅಣ್ಣತಮ್ಮಂದಿರು ವಾಸ ಮಾಡ್ತಿರಬಹುದು. ಆಗ ಅವಳು ಏನೋ ಆಗಿ ಆ ಹೆಣ್ಣು ಮಗಳು ಗಂಡನ ಮನೇನಲ್ಲಿ ಇರೋಕಾಗೋದಿಲ್ಲ. ಅವನು ಹೊರಗೆ ಹಾಕ್ತಾನೆ. ವಿಚ್ಛೇದನ ಆಗುತ್ತೆ, ಗಂಡು ಸತ್ಹೋಗ್ತಾನೆ. ಅವಾಗ ಅತ್ತೆ ಮನೆನವರು ಇಟ್ಟುಕೊಳ್ಳೋದಿಲ್ಲ. ಮನೆಯಿಂದ ಹೊರಗೆ ಹಾಕ್ತಾರೆ. ಆಗ ಅವಳು ಎಲ್ಲಿ ಹೋಗೋಕು? ತವರಿನಲ್ಲಿ ಅವಳಿಗೆ ಸ್ಥಾನ ಇಲ್ಲವಾ ಹಾಗಿದ್ರೆ ಅಂತಂದ್ರೆ. ಇದರ ಪ್ರಕಾರ ಅವಳಿಗೂ ಆ ವಾಸದ ಮನೇನಲ್ಲಿ ಹಕ್ಕಿರೋದ್ರಿಂದ ತಕ್ಷಣಕ್ಕೆ ಅವಳ ವಿಭಾಗ ಮಾಡಿಕೊಳ್ಳಾಕೆ, ಕೇಳೋಕೆ ಬರ್ದೆ ಇದ್ರೂ ಕೂಡ ಅವಳಿಗೆ ಅಲ್ಲಿ ಬಂದು ವಾಸಮಾಡೋ ಹಕ್ಕು ಇದೆ. ಅಂದ್ರೆ ವಿಚ್ಛೇದನ ಪಡೆದಂತಹ ಮಹಿಳೆಗೆ, ವಿಧವೆಯಾದಂಥವಳಿಗೆ, ಮತ್ತೆ ಗಂಡನಿಂದ ತ್ಯಜಿಸಲ್ಪಟ್ಟವಳಿಗೆ, ಗಂಡನ ಮನೇನಲ್ಲಿ ಜಾಗ ಇಲ್ಲೇ ಇದ್ದಾಗ, ತಂದೆ ಬಿಟ್ಹೋಗಿರುವಂತಹ ತನಗೆ ಹಕ್ಕಿರುವ ವಾಸದ ಮನೇನಲ್ಲಿ ಭಾಗಕೇಳೋಕೆ ಆಗ್ಗೆ ಹೋದ್ರು ತಕ್ಷಣಕ್ಕೆ ಬಂದು ವಾಸಮಾಡುವಂತಹ ಹಕ್ಕು ಅವಳಿಗೆ ಇದ್ದೇ ಇದೆ. ಆದ್ರಿಂದ ಈ ತರದ ಕೆಲವೊಂದು ತಲೆತಲಾಂತರದಿಂದ ಬಂದಿರುವಂತಾದ್ದು, ಮತ್ತೆ ಅವಳು ವಾಪಾಸ್ ಬರೋಕೆ ಬರೋಲ್ಲ.

ಹಿಂದೆ ಅವಳನ್ನ ತಂದೆ ಮನೇನಲ್ಲಿ ಇಟ್ಟುಕೊಂಡಿದ್ರೂ ಕೂಡ ಅಣ್ಣ ತಮ್ಮಂದಿಗಳು ಬಂದಿರೋದಕ್ಕೆ ಅವಕಾಶ ಕೊಟ್ಟಿದ್ರೂ ಕೂಡ ಒಂದೇನೋ ಉಪಕಾರ ಮಾಡಿದ್ರ ರೀತೀನಲ್ಲಿ ಕೊಡ್ತಾ ಇದ್ರು ಅದನ್ನ, ಆಮೇಲೆ ಅದನ್ನ ಪ್ರತೀದಿನ ಒಂದು ಹಂಗಿಗೆ ಒಳಗಾಗುವಂಥಾದ್ದು, ಹಂಗಿಸ್ಕೊಳ್ಳೋಕೆ ಒಳಗಾಗುವಂಥಾದ್ದು. ಯಾರದೋ ಮೇಲೆ ನಾನು ಭಾರವಾಗಿದ್ದೀನಿ ಅನ್ನಕ್ಕೊಳ್ಳುವಂಥಾ ಭಾವನೆ ಹೆಣ್ಣು ಮಕ್ಕಳಿಗೆ ಇರ್ತಾ ಇತ್ತು. ಹಾಗಾಗಿ ಅವರು ತಮ್ಮ ಜೀವಮಾನ ಪೂರ್ತಿ ಇವರ ಮನೆಯ ಸೇವೇನಲ್ಲಿ ಕಳಕೊಂಡು ಆ ಒಂದು ಹಂಗಿಗೆ ಒಳಗಾಗೋದುನ್ನ ತಪ್ಪಿಸ್ಕೊಳ್ಳೋದು ಇಂಥಾದೆಲ್ಲ ಇರ್ತಿತ್ತು. ಆದ್ರೆ ಈಗ ಅವಳಿಗೆ ಆ ಮನೇನಲ್ಲಿ ಹಕ್ಕನ್ನ ಕೊಟ್ಟಿರೋದ್ರಿಂದ, ಅವಳ ಹಕ್ಕಿನಿಂದಲೇ ಬಂದು ಇರೋದಕ್ಕೆ ಇವತ್ತು ಅವಕಾಶ ಇದೆ.

ಇವೆಲ್ಲ ಹಾಗೆ ನಮ್ಮ ಒಂದು ಪುರುಷರ ಧೋರಣೆಯದು, ಮಹಿಳೆಯರ ಧೋರಣೆಯಾಗಿ ಬದ್ಲು ಮಾಡಿಕೊಳ್ಳೋದಿಕ್ಕೆ ಇವೆಲ್ಲವೂ ಕೂಡ ಹೇಗೆ ಅವಕಾಶವನ್ನ ಕೊಡುತ್ತೆ ಅನ್ನೋದ್ರ ಬಗ್ಗೆ ಈ ಕಾನೂನನ್ನ ಬಳಸಿಕೊಳ್ಳಬೇಕು. ನಾನು ಆಗ್ಲೆ ಹೇಳಿದ್ದಾಗೆ ಇವು ತಾನಾಗೇ ಕೆಲ್ಸ ಮಾಡೋದಿಲ್ಲ. ಈ ಕಾನೂನನ್ನ ಉಪಯೋಗಿಸ್ಕೊಂಡು ಮಹಿಳೆ ತನ್ನನ್ನು, ತನ್ನ ಹಕ್ಕನ್ನು ಹೇಗೆ ಅಸರ್ಟ ಮಾಡಿಕೊಳ್ತಾಳೆ ಅನ್ನೋದ್ರ ಮೇಲೆ ಕೂಡ ಈ ನಿರೀಕ್ಷೆಗಳನ್ನ ಬದ್ಲಾಯಿಸುವಂತಹ ಕೆಲಸವನ್ನು ಕಾನೂನಿನ ಸಹಾಯದಿಂದ ಮಹಿಳೆ ಹ್ಯಾಗ್ ಮಾಡ್ಕೊಬಹುದು ಅನ್ನೋದನ್ನು ಕೂಡ ಹೇಳ್ತಾ ಇದ್ದೀನಿ.

ಆರ್ಥಿಕತೆಯ ಬಗ್ಗೆ ಒಂದು ಚರ್ಚೆ ಬಂತು. ಮಹಿಳೆಗೆ ಇದುವರೆಗೆ ಒಂದು ಆರ್ಥಿಕ ಬೆಂಬಲ ಇಲ್ಲೇ ಇದ್ದುದರಿಂದ ಅವಳಿಗೆ ಮನೇನಲ್ಲಿ ಸ್ತಾನಮಾನ ಇರ್ತಾ ಇರ್ಲಿಲ್ಲ ಅನ್ನುವಂಥಾದ್ದು. ಆದ್ರೆ, ಮಾತೃಪ್ರಧಾನ ಕುಟುಂಬ ಪದ್ಧತಿನೂ ನಮ್ಮಲ್ಲಿದೆ. ಕೇರಳಾದಲ್ಲಿದೆ, ದಕ್ಷಿಣ ಕನ್ನಡದಲ್ಲಿ ಇದೆ. ಈ ಅಳಿಯ ಸಂತಾನ ಪದ್ಧತಿ ಇದೆ. ಇದನ್ನು ಕೇರಳದಲ್ಲಿ ಮತ್ತು ಮಾಕಟ್ಟುಯಂ' ಅಂತಾರೆ. ಆ ಪದ್ಧತಿ ಇದೆ. ಅದ್ರ ಪ್ರಕಾರ ಕುಟುಂಬದ ಆಸ್ತಿ ಅಲ್ಲಿ ಮಹಿಳೆಯರು ಮಹಿಳೆಯರ ತಲೇನಲ್ಲಿ ಬರ್ತಾ ಇತ್ತು. ಉಳಿದ ಹಿಂದೂ ಕುಟುಂಬಗಳಲ್ಲಿ ಹಿಂದೂ ಕಾನೂನಿನಲ್ಲಿ ಪುರುಷ ತಲೆಮಾರಿನಲ್ಲಿ ಆಸ್ತಿ ಹೇಗೆ ಬರ್ತಾ ಇತ್ತೋ ಹಾಗೆ ಮಹಿಳೆಯರ ತಲೆಮಾರಿನಲ್ಲಿ ಆಸ್ತಿ ಬರುವಂಥಾದ್ದು. ಇಲ್ಲಿ ಮಹಿಳೆಯನ್ನ ಒಂದು ಕುಟುಂಬದ ಪ್ರವರ್ತಕಳು ಅಂತಾ ಕರೀತಾರೆ. ಅವಳಿಂದಾನೇ ಕುಟುಂಬ ಮುಂದುವರಿಯುತ್ತೆ, ಮಹಿಳೆಯ ಮೂಲಕ ಕುಟುಂಬ ಮುಂದುವರೆಯುತ್ತೆ.

ಅಲ್ಲಿ ಪುರುಷ ವಾರಸುದಾರ ಆದ್ರೆ, ಇಲ್ಲಿ ಮಹಿಳೆ ಹಕ್ಕುದಾರಳು ಆಗ್ತಾಳೆ. ನೀ ಯಾವ ತರವಾಡಿಗೆ ಸೇರಿದೋಳು, ಯಾವ ಅಳಿಯ ಕಟ್ಟಿಗೆ ಸೇರಿದೋಳು ಅಂದ್ರೆ ಈ ಪದ್ಧತಿಯಲ್ಲಿ ಮಹಿಳೆಯ ಹೆಸರನ್ನೇಳ್ತಾರೆ ಹೊರತು ಪುರುಷನ ಹೆಸರು ಹೇಳಲ್ಲ.

ಆದ್ರೆ ಅಲ್ಲೂ ಮಾತೃ ಪ್ರಧಾನವಾದಂತಾದ್ದು ಇದೂ ಕೂಡ ಅಲ್ಲಿಯಾದ್ರೂನೂನು ಮಹಿಳೆಯ ಸ್ಥಿತಿ ಹ್ಯಾಗಿದೆ ಅದನ್ನು ಕೂಡ ನಾವು ಎರಡೂ ಕಂಪ್ಯಾರ್ ಮಾಡಿ ನೋಡಬೇಕು. ಪುರುಷ ಪ್ರಧಾನ ಇದ್ದಲ್ಲಿ ಮಾತ್ರ ಮಹಿಳೆಯ ಸ್ಥಿತಿ ಹ್ಯಾಗಿದೆ? ಮಾತೃಪ್ರಧಾನವಾಗಿ ಇದ್ದಾಗ್ಯೂ ಅವಳ ಸ್ಥಿತಿ ಚೆನ್ನಾಗಿದೆಯಾ, ಕೇರಳದಲ್ಲಿ ಇವತ್ತು ಕೆಲವೊಂದು ವಿಚಾರಗಳಲ್ಲಿ ಮಹಿಳೆ ಒಂದು ಸ್ಥಿತಿ ಚೆನ್ನಾಗಿದೆ. ಅವರ ಒಂದು ವಿದ್ಯಾಭ್ಯಾಸ, ಆರೋಗ್ಯದ ದೃಷ್ಟಿ ಇದೆಲ್ಲಾದ್ರಲ್ಲೂ ಚೆನ್ನಾಗಿ ಇದೆ. ಆದ್ರೆ ಮತ್ತೆ ಕುಟುಂಬದ ಚೌಕಟ್ ನಲ್ಲಿ ಬಂದಾಗ, ಕುಟುಂಬದ ಒಳಗಡೆಗೆ ಹ್ಯಾಗಿದೆ ಅಂದ್ರೆ ಆಸ್ತಿ ಅವಳ ಹೆಸರಿನಲ್ಲಿ ಇರುತ್ತೆ ನಿಜ; ಆದರೆ ಅದನ್ನ ನಿರ್ವಹಣೆ ಮಾಡೋ ಮ್ಯಾನೇಜರ್ ಎಲ್ಲಾ ಪುರುಷನೇ ಆಗಿರ್ತಾನೆ. ಅಲ್ಲಿ ಮತ್ತೆ ಮ್ಯಾನೇಜ್‌ಮೆಂಟ್ ಪುರುಷನೇ, ಮನೆಯ ಒಳಗಡೆಗೂ ಕೂಡ ಈ ಮಹಿಳೆಯ ಬಗ್ಗೆ ಇರುವ ನಿರೀಕ್ಷೆಗಳು ಬೇರೆಯಾಗಿದೆಯಾ? ಪಿತೃ ಪ್ರಧಾನದಲ್ಲಿ ಇರುವ ನಿರೀಕ್ಷೆ ಮಹಿಳೆಯ ಬಗ್ಗೆ ಏನಿದೆಯೋ ಅಂಥಾ ನಿರೀಕ್ಷೆಗಳು ಈ ಮಾತೃ ಪ್ರಧಾನದಲ್ಲಿ ಇಲ್ಲವಾ ಅದನ್ನ ಕೂಡ ಒಂದು ಕಂಪ್ಯಾರ್ ಮಾಡಿ ನೋಡಿದಾಗ ಇಲ್ಲೇನು ಬಹಳಷ್ಟು ವ್ಯತ್ಯಾಸ ನಮಗೆ ಕುಟುಂಬದ ಒಳಗೆ ವಿವಾಹದ ಸಂಸ್ಥೆಯ ಒಳಗಡೆಗೆ, ಮಹಿಳೆಯರ ವಿರುದ್ಧ ಅಥವಾ ಮಹಿಳೆಯರ ಸಂಬಂಧಿತವಾಗಿ ಬೇರೆ ರೀತಿಯ ನಿರೀಕ್ಷೆಗಳು ನಮಗೆ ಅಷ್ಟಾಗಿ ಕಂಡು ಬರ್ತಾ ಇಲ್ಲ.

ಅಷ್ಟೇಕೆ ಈಗ ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಕೂಡ ಏನಾಗುತ್ತೆ ಅಂದ್ರೆ ಮದುವೆ ಮಾಡಿಕೊಂಡು ಒಂದು ಕುಟುಂಬದಿಂದ ಇನ್ನೊಂದು ಕುಟುಂಬಕ್ಕೆ ಹೋಗುವಂಥಾದ್ದು ಇದೆಯಲ್ಲ ಆ ಥರಹದ ಒಂದು ಸಿಸ್ಟಮ್ ಇವತ್ತು ಅಲ್ಲಿಲ್ಲ. ಅಲ್ಲಿ ಹದಿನಾರು ವರ್ಷಕ್ಕೇನೇ ಮಕ್ಕಳು ಮನೆಯಿಂದ ಹೊರಟು ಹೋಗ್ತಾರೆ. ಹೊರಗಡೆ ಹೊರಟ್ಹೋಗಿ ತಾವೇ ಓದಿಕೊಂಡು, ಕೆಲಸ ಮಾಡಿಕೊಂಡು, ತಮ್ಮನ್ನ ತಾವು ನಿರ್ವಹಿಸಿಕೊಳ್ಳುತ್ತಾರೆ. ಆರ್ಥಿಕವಾಗಿಯೂ ಸಹ, ತಂದೆತಾಯಿಗಳ ಮೇಲೆ ಕೂಡ ಡಿಪೆಂಡ್ ಆಗೋದಿಲ್ಲ ಅವರು. ಹಾಗಿದ್ದಾಗ್ಯೂ ಕೂಡ ಇಷ್ಟು ಸ್ವತಂತ್ರವಾಗಿರುವಂತಹ ಮಹಿಳೆ ತನಗೆ ಬೇಕಾದ ಉದ್ಯೋಗ ತಗೋಬಹುದು. ಎಲ್ಲಾ ತಗೊಂಡಾಗ್ಲ ಕೂಡ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಕುಟುಂಬದ ಒಳಗಡೆಗೆ ಬಂದ ಕೂಡ್ಲೇನೇ, ವಿವಾಹ ಅನ್ನೋ ಸಂಸ್ಥೆನ ಪ್ರವೇಶ ಮಾಡಿದ ಕೂಡೇನೆ, ಯಾಕೆ ಮತ್ತೆ ಈ ಹೈರಾರ್ಕಿ ಶುರುವಾಗುತ್ತೆ, ಅಲ್ಲೂ ಕೂಡ ಹೈರಾರ್ಕಿ ಶುರುವಾಗುತ್ತೆ. ಹಾಗಾಗಿ ಇದರ ನೆಲೆ ಎಲ್ಲಿಂದ ಬಂತು, ಯಾಕೆ ಬಂತು, ಅನ್ನೋದು ಮೂಲ ಹುಡುಕ್ಕೊಂಡು ಹೋಗೋದಿದೆಯಲ್ಲ, ಅದು ಮಾಡಬೇಕಾದ ಕೆಲ್ಲ. ಅದರ ಜೊತೆಗೇನೇನೆ ಯಾಕೇಂತ ತಲೆ ಕೆಡಿಸ್ಕೊಳ್ತಾ ಕುಳಿತು ಕೊಳ್ಳೋಕ್ಕಿಂತ ಇದು ಹೀಗೆ ಇದನ್ನ ನಾವು ಮೀರಿ ಹೋಗೋಕು ಅನ್ನುವಂಥದ್ದುನ್ನ ಒಂದು ಯೋಚೆ ಮಾಡೋದು ಒಳ್ಳೇದೇನೋ ಅಂತಾ ಅನ್ನಿಸುತ್ತೆ,

ಇನ್ನು ಈ ಕೆಲವೊಂದು ವಿವಾಹಕ್ಕೆ ಸಂಬಂಧಪಟ್ಟ ಕಾನೂನುಗಳು ಏನ್ ತಿದ್ದುಪಡಿಗಳು ಇತ್ತೀಚೆಗೆ ಬಂತೋ; ಅದೂ ಸಹ ಈ ಮಹಿಳೆಯರ ಬಗ್ಗೆ ಇರುವಂತಹ ನಿರೀಕ್ಷೆಗಳನ್ನ ಮರಿಯೋದಿಕ್ಕೆ ಸಹಾಯಕವಾಗುವಂತಹ ಕಾನೂನುಗಳನ್ನು ಮಾಡಲಾಗಿದೆ. ಈ ವಿವಾಹದ ಬಗೆಗೆ ಮಾತುಗಳು ಬಂದಾಗ; ಮಹಿಳೆಗೆ ಮದುವೆಯಾದ್ರೆ, ಒಂದೇ ಸಾರಿ ಮದುವೆಯಾಗುವಂಥಾದ್ದು. ಅವಳು ಮತ್ತೆ ಯೋಚೆ ಕೂಡ ಮಾಡುವ ಹಾಗಿಲ್ಲ. ಆದ್ರೆ ಪುರುಷ ಮಾತ್ರ ವಿವಾಹಿತನಾಗಿದ್ರೂ ಸಂಬಂಧಗಳನ್ನಿಟ್ಟುಕೊಳ್ಳಬಹುದು. ಕಾನೂನು ಬಾಹಿರ ಸಂಬಂಧಗಳನ್ನ ಇಟ್ಟುಕೊಳ್ಳಬಹುದು. ಬೇಕಾದಷ್ಟು ಮದುವೆಗಳನ್ನ ಮಾಡ್ಕೊಬಹುದು. ನಮ್ಮಲ್ಲಿ ೧೯೫೫ನೇ ಇಸವಿ ತನಕ, ಮೊನ್ನೆ ಮೊನ್ನೆಯ ತನಕ, ನಮ್ಮ ಕಾಲದಲ್ಲೇನೆ ಪುರುಷನಿಗೆ ಬೇಕಾದಷ್ಟು ಮದುವೆಯಾಗೋದಿಕ್ಕೆ ಅವಕಾಶ ಇತ್ತು. ಕಾನೂನು ಬದ್ಧವಾಗಿಯೇ ಅವಕಾಶ ಇತ್ತು. ಆಮೇಲೆ ಈ 'ಹಿಂದೂ ಮ್ಯಾರೇಜ್ ಆಕ್ಟ್ ಬಂದ ಮೇಲೆ ಈ ಬಹುವಿವಾಹವನ್ನು ಪುರುಷರೇ ಇರಲಿ, ಮಹಿಳೆಯರೇ ಇರಲಿ, ಯಾರೇ ಮಾಡಿಕೊಂಡೂ ಕೂಡ ಕಾನೂನಿಗೆ ವಿರುದ್ಧ ಅಂತ ಅನ್ನುವಂಥಾದ್ದು ಆಗಿದೆ. ಕಾನೂನು ಅದನ್ನು ನಿಷೇಧಿಸಿ, ಅದನ್ನ ಒಂದು ಅಪರಾಧವನ್ನಾಗಿ ಮಾಡು. ಅದರ ಜೊತೆಗೆ ಈ ವಿಚ್ಛೇದನದ ಹಕ್ಕು ಕೇವಲ ಪುರುಷನಿಗೆ ಮಾತ್ರ ಇದುವರೆಗೆ ಇತ್ತು. ಮಹಿಳೆಗೆ ಮಾತ್ರ ವಿವಾಹ ಕೊನೆತನಕ ಅದು ಪವಿತ್ರ ಬಂಧನ ಅಂತೇಳಿ ಇತ್ತು. ಆದ್ರೆ ಈ ಒಂದು 'ಹಿಂದೂ ಮ್ಯಾರೇಜ್ ಆಕ್ಟ್ ಆಫ್ ೧೯೫೫' ಬಂದ್ಮಲೆ ಇವತ್ತು ಮಹಿಳೆಗೂ ಸಹ ವಿಚ್ಛೇದನ ಪಡೆಯುವ ಹಕ್ಕನ್ನು ಕೊಟ್ಟಿದ್ದಾರೆ. ಅಂದೇಲೆ ವಿವಾಹ ಅಂತ ಅನ್ನುವಂಥದ್ದು ಮುರಿಯಲಾರದ ಸಂಬಂಧ, ಜನ್ಮಜನ್ಮಾಂತರದ ಸಂಬಂಧ ಅನ್ನೋ ಸಾಮಾಜಿಕ ನಿರೀಕ್ಷೆ ಏನಿದೆಯೋ ಅದನ್ನ ಕಾನೂನು ಮುರಿದು; ಇವತ್ತು ಮಹಿಳೆಯರಿಗೆ ವಿಚ್ಛೇದನ ಪಡೆಯುವ ಹಕ್ಕು ಕೊಟ್ಟಿದೆ. ಅಂದ್ರೆ ನಮ್ಮಲ್ಲಿ ವಿವಾಹ ಕೂಡ ಒಂದು ಕಾಂಟ್ರಾಕ್ಟ್ ಆಯ್ತು ಈಗ ಕಾಂಟ್ರಾಕ್ಟ್, ಅಂತಂದ್ರೆ ಎಷ್ಟು ದಿವಸ ಸಾಧ್ಯವೋ ಅಷ್ಟು ದಿವಸ ಜೊತೆಗಿದ್ದು ಆಮೇಲೆ ಬ್ರೇಕ್ ಮಾಡ್ಕೊಳ್ಳೋದಿಕ್ಕೆ ಸಾಧ್ಯವಾಗುವಂತಹ ಸಂಸ್ಥೆಯಿದು. ಇವತ್ತಿನ ದಿವಸ ವಿವಾಹ ಕಾಂಟ್ರಾಕ್ಟ್ ಆದ್ರೂನೂ ಕೂಡ ಬೇಕಾದಾಗ ವಿಚ್ಛೇದನ ಮಾಡಿಕೊಳ್ಳಬಲ್ಲಂತಹ ಸಂಸ್ಥೆಯಾಗಿ ಕಾನೂನು ಮತ್ತು ಅದನ್ನು ಪರಿವರ್ತಿಸಿದೆ. ಪವಿತ್ರವಾದಂತಹ ಒಂದು ಸಂಸ್ಕಾರ ಅನ್ನುವಂಥದ್ದು ಹೋಗಿದೆ. ಕಾರಣ ಏನೂಂತಂದ್ರೆ ಯಾರೂ ಕೂಡ ಆವೊಂದು ವ್ಯವಸ್ಥೆಯ ಒಳಗೆ ಸಿಕ್ಕಿಕೊಂಡು ನರಳುವ ಅವಶ್ಯಕತೆಯಿಲ್ಲ.

ಎರಡು ವ್ಯಕ್ತಿಗಳಿಗೆ ಜೊತೆಯಲ್ಲಿ ಬಾಳೋದಿಕ್ಕೆ ಸಾಧ್ಯವಾಗದೇ ಇದ್ದಾಗ ಹೊರಗೆ ಬರೋದಕ್ಕೆ ಅವಕಾಶ ಇರಬೇಕು. ಮುಖ್ಯವಾಗಿ ಇದು ಮಹಿಳೆಯರಿಗೆ ಸಿಕ್ಕಂತಹ ಒಂದು ವಿಶೇಷ ಸೌಲಭ್ಯ ಅಂತ ತಿಳಿಕೋಬೇಕು. ಯಾಕೆ ಅಂತಂದ್ರೆ, ಇಷ್ಟು ದಿವಸ

ಪುರುಷನಿಗೆ ಅದ್ರುದು ಸೌಲಭ್ಯ ಇತ್ತು. ಬಿಟ್ಟು ಬಿಡಬಹುದಾಗಿತ್ತು. ಅವಳ ಇಟ್ಟುಕೊಂಡು ಇನ್ನೊಂದು ಮದುವೆ ಮಾಡ್ಕೊಬಹುದಾಗಿತ್ತು. ಮನೆಯಿಂದ ಹೊರಗೆ ಹಾಕಬಹುದಾಗಿತ್ತು. ಅವೆಲ್ಲ ಸೌಲಭ್ಯ ಪುರುಷನಿಗೆ ಕಾನೂನು ಇಲ್ಲೇನೂ ಇತ್ತು. ಆದ್ರೆ ಇವತ್ತಿನ ದಿವಸ ಮಹಿಳೆಗೂ ಕೂಡ ಈವೊಂದು ಸೌಲಭ್ಯವನ್ನು ಕಾನೂನು ಕೊಟ್ಟಿರೋದ್ರಿಂದ ಅವಳಿಗೆ ವಿವಾಹ ಸಂಸ್ಥೆಯೊಳಗೆ ಉಸಿರುಕಟ್ಟೋ ವಾತಾವರಣ ಇದ್ರೆ ಖಂಡಿತವಾಗೂ ಇವತ್ತು ಅವಳಿಗೆ ಹೊರಗೆ ಬರೋದಿಕ್ಕೆ ಅವಕಾಶ ಇದೆ.

ಆಸ್ತಿ ಹಕ್ಕನ್ನ ಇವತ್ತು ಅವಳೆ ಕೊಟ್ಟಿದ್ದಾರೆ. ಕಾರಣ ಏನೂಂದ್ರೆ ಅವಳಿಗೂ ಆರ್ಥಿಕವಾಗಿ ಒಂದು ಭದ್ರತೆ ಇರ್ಬೆಕು. ಆರ್ಥಿಕವಾಗಿ ಅವಳಿಗೊಂದು ಕುಟುಂಬದ ಆಸ್ತಿನಲ್ಲಿ ಪಾಲಿದ್ರೆ, ಇವೊಂದು 'ಹೈರಾರ್ಕಿಕಲ್ ಸಿಸ್ಟಮ್' ಏನಿದೆಯೋ, ಮೇಲು ಕೀಳು ಎನ್ನುವುದು ಏನಿದೆಯೋ ಅದು ಹೊರಟುಹೋಗ್ತದೆ. ಪುರುಷನಿಗೆ ಆಸ್ತಿ ಹಕ್ಕಿದೆ ಆದ್ರಿಂದ ಅವನ ಮಾತು ನಡೀಬೇಕು ಮಹಿಳೆಗೆ ಆಸ್ತಿ ಹಕ್ಕಿಲ್ಲ ಅವಳ ಮಾತಿಗೆ ಬೆಲೆಯಿಲ್ಲ ಅನ್ನೋ ಕಾರಣಕ್ಕೋಸ್ಕರನೇ ಅವಳಿಗೆ ಒಂದು ಆರ್ಥಿಕ ಬಲ ತಂದುಕೊಡೋದುಕ್ಕೋಸ್ಕಾರಾನೇ ಇವತ್ತಿನ ದಿವಸ ಆಸ್ತಿ ಹಕ್ಕಿನಲ್ಲಿ ಮಹಿಳೆಗೂ ಕೂಡ ಸಮಪಾಲನ್ನ ಕೊಟ್ಟಿದ್ದಾರೆ.

ಅದೇ ರೀತಿ ಇನ್ನೊಂದು ದತ್ತಕ ಕಾನೂನು, ಇದುವರೆಗೆ ಪುರುಷನಿಗೆ ಮಾತ್ರ ದತ್ತು ತೆಗೆದುಕೊಳ್ಳುವ ಹಕ್ಕಿರ್ತಾ ಇತ್ತು. ಅದೂ ಗಂಡುಮಕ್ಕಳನ್ನ ಮಾತ್ರ ದತ್ತು ತೆಗೆದುಕೊಳ್ಳೋ ಹಕ್ಕಿತ್ತು. ಇವತ್ತಿನ ದಿವಸ ಮಹಿಳೆಗೂ ಕೂಡ ದತ್ತು ತೆಗೆದು ಕೊಳ್ಳೋ ಹಕ್ಕನ್ನು ಕೊಟ್ಟಿದ್ದಾರೆ. ಯಾವ ಮಹಿಳೆ ಅಂತಂದ್ರೆ ವಿಚ್ಛೇದನ ಪಡೆದಂತಹ ಮಹಿಳೆ, ಆಮೇಲೆ ಅವಿವಾಹಿತ ಮಹಿಳೆ ಮತ್ತೆ ವಿಧವೆ ಈ ಮೂರು ಜನ ತಮ್ಮ ಹೆಸರಿನಲ್ಲೇ ದತ್ತನ್ನ ತೆಗೆದುಕೊಳ್ಳಬಹುದು. ಅದ್ರ ಜೊತೆಗೆ ಬರೀ ಗಂಡುಮಕ್ಕಳನ್ನಲ್ಲ, ಹೆಣ್ಣು ಮಕ್ಕಳನ್ನೂ ಕೂಡ ದತ್ತು ತೆಗೆದುಕೊಳ್ಳೋದಿಕ್ಕೆ ಅವಕಾಶ ಇದೆ. ಇದೇನಂದ್ರೆ ಇವೆಲ್ಲ ಮತ್ತೆ ಇದುವರೆಗೆ ಇದ್ದಂತಹ ಒಂದು ಸಂಪ್ರದಾಯವನ್ನು ಮುರಿಯೋದಕ್ಕೋಸ್ಕರವೇ ಬೇರೆ ರೀತಿನಲ್ಲಿ ಒಂದು ವ್ಯವಸ್ಥೆಯನ್ನು ತರಬೇಕು ಅನ್ನುವ ದೃಷ್ಟಿಯಿಂದಾನೇನೆ ಇವತ್ತಿನ ದಿವಸ ಈ ತರಹದ ಹಲಾವರು ತಿದ್ದುಪಡಿಗಳನ್ನು ಮಾಡಿರೋದು.

ಇದೇ ರೀತಿ ಇವತ್ತು ಗಾರ್ಡಿಯನ್ ಶಿಪ್ ಬಗ್ಗೆ ಹೇಳೋದಿದ್ರೆ ಇವತ್ತಿಗೂ ಕೂಡ ಮನೆಯಲ್ಲಿ ತಂದೇನೇ ಮಕ್ಕಳ ಬಗ್ಗೆ ಲೀಗಲ್ ಗಾರ್ಡಿಯನ್, ಫಸ್ಟ್ ಲೀಗಲ್ ಗಾರ್ಡಿಯನ್ ತಂದೆ. ಆಮೇಲೆ ಬರುವಂತವಳು ತಾಯಿ, ತಂದೆ ಇಲ್ಲೇ ಇದ್ದಾಗ ಮಾತ್ರ ತಾಯಿ ಲೀಗಲ್ ಗಾರ್ಡಿಯನ್ ಆಗ್ತಾಳೆ. ಅಲ್ಲಿಯವರೆಗೆ ತಂದೇನೇ ಲೀಗಲ್ ಗಾರ್ಡಿಯನ್, ಇನ್ನುವರೆಗೆ ಅದರ ತಿದ್ದುಪಡಿ ಆಗಿಲ್ಲ. ಆದ್ರೆ, ಇವತ್ತಿನ ದಿವಸ ಸುಪ್ರೀಮ್

ಕೋರ್ಟ್ ಮುಂದೆ ಕೇಸ್ ಬಂದಾಗ ಅವರು ಇವತ್ತಿನ ಒಂದು ಅವಶ್ಯಕತೆಯನ್ನ ಮನಗಂಡು ಇದ್ರಲ್ಲಿ ಕೆಲವೊಂದು ಬದಲಾವಣೆಗಳನ್ನ ಮಾಡಿಟ್ಟು ತಂದೆ ಇದ್ದಾಗ್ಯೂ ಕೂಡ ಹಲವಾರು ಸಂದರ್ಭಗಳಲ್ಲಿ ಅವನಿಗೆ ಗಾರ್ಡಿಯನ್ ಆಗಿ ಕೆಲ್ಸ ಮಾಡೋಕೆ ಬರೋದಿಲ್ಲ; ಸಾಧ್ಯವಾಗದ ಪರಿಸ್ಥಿತಿ ಇರುತ್ತೆ. ಅಂಥಹ ಸಂದರ್ಭದಲ್ಲಿ ತಾಯಿ ನ್ಯಾಚುರಲ್ ಗಾರ್ಡಿಯನ್ ಆಗಿ ಕೆಲಸ ಮಾಡಹುದು ಅನ್ನುವಂತಹ ತೀರ್ಪನ್ನು ಕೊಟ್ಟಿದ್ದಾರೆ. ಇದು ಕೂಡ ಸಂಪ್ರದಾಯವನ್ನ ಬದಲಿಸಲು ಮಾಡಿದಂತಹ ಕಾನೂನಿನ ಪ್ರಯತ್ನ.

ಇನ್ನು ರೇಪ್ ಕಾನೂನಿಗೆ ಬಂದ್ರೆ, ಅತ್ಯಾಚಾರದ ಕೇಸ್‌ಗೆ ಬಂದ್ರೆ, ಇಲ್ಲೂ ಕೂಡ ಹ್ಯಾಗೆ ಸಂಪ್ರದಾಯ ಕೆಲ್ಸ ಮಾಡ್ತಾ ಇರುತ್ತೆ ಅಂತಂದ್ರೆ; ಇವತ್ತಿಗೂ ಸಹ ಬೇರೆ ಮಹಿಳೆಯ ಒಪ್ಪಿಗೆ ಇಲ್ಲನೇನೆ ಸಂಭೋಗ ಮಾಡಿದಾಗ ಅದು ಅತ್ಯಾಚಾರವಾಗುತ್ತೆ; ರೇಪ್ ಆಗುತ್ತೆ. ಆದ್ರೆ ಹೆಂಡತಿಯ ಒಪ್ಪಿಗೆ ಇಲ್ಲೇ ಇದ್ದಾಗ್ಯೂ ಕೂಡ ಸಂಭೋಗ ನಡೆದ್ದಾಗ ಅದು ರೇಪ್ ಆಗೋದಿಲ್ಲ. ಕೇವಲ ಹನ್ನೆರಡು ವರ್ಷಕ್ಕೆ ಕಡಿಮೆ ಇರುವಂತವಳು. ಅವಳು ಮೈನರ್ ಅನ್ನೋ ಕಾರಣಕ್ಕೆ ಹೆಂಡತಿಯಾಗಿದ್ರೂ ಕೂಡ ರೇಪ್ ಆಗುತ್ತೆ. ಆದ್ರೆ ಹದಿನೆಂಟು ವರ್ಷದ ಮೇಲ್ಪಟ್ಟ ಹುಡುಗಿ ಹೆಂಡತಿಯಾಗಿದ್ರೆ ಅವಳ ಒಪ್ಪಿಗೆ ಇಲ್ಲೆ ಇದ್ದಾಗ್ಯೂ ಕೂಡ ಬಲತ್ಕಾರವಾಗಿಯೂ ಕೂಡ ಅವಳೊಂದಿಗೆ ಅವನು ಸಂಭೋಗ ನಡೆಸಿದ್ರೂ ಕೂಡ ಅದು ರೇಪ್ ಆಗೋದಿಲ್ಲ. ಮತ್ತೆ ಸಪರೇಟೆಡ್ ವೈಫ್ ಇರ್ತಾಳಲ್ಲ ಅಲ್ಲೂ ಕೂಡ ಅವನು ಹೋಗಿ ಗಂಡನ ಅಧಿಕಾರವನ್ನ ಚಲಾಯಿಸಬಹುದು. ಇಲ್ಲಿ ಸಪರೇಟಡ್ ಅಂತಂದ್ರೆ ಏನೇಳ್ತಾರಂತಂದ್ರೆ, ಏನೋ ಜಗಳ ಆಡಿಕೊಂಡು ಬೇರೆ ಬೇರಯಾಗಿ ಇರ್ತಾರೆ. ಆದ್ರೂ ಕೂಡ ಅಲ್ಲೋಗಿ ಗಲಾಟೆ ಮಾಡಬಹುದು, ತನ್ನ ಅಧಿಕಾರ ಸ್ಥಾಪಿಸಬಹುದು. ನಾನು ನಿನ್ನ ಗಂಡಾಂತ, ಯಾಕೇಂತಂದ್ರೆ ಸಪರೇಟೆಡ್ ಅನ್ನೋದಕ್ಕೆ ಏನೇಳ್ತಾರಂತಂದ್ರ, ಅವಳು ಕೋರ್ಟಿಂದ ಜೂಡಿಷಿಯಲ್ ಸಪ್ರೇಷನ್ ಡಿಕ್ರಿ ತಗೊಂಡು ಬಂದ್ರೆ ಮಾತ್ರ ಆಗ ಗಂಡನಿಗೆ ಅಧಿಕಾರ ಚಲಾಯಿಸೋದಿಕ್ಕೆ ಬರೋದಿಲ್ಲ. ಇಲ್ಲೇ ಇದ್ರೆ ಗಂಡ ಅಧಿಕಾರ ಚಲಾಯಿಸಬಹುದು. ಹೆಂಡತಿಯಿಂದ ಸೇವೇ ಅಂತ. ತನ್ನ ಒಂದು ಡಿಮಾಂಡ್ ಮಾಡಬಹುದು, ಆ ರೀತಿಯ ಒಂದು ವ್ಯಾಖ್ಯಾನ ಕೂಡ, ಕಾನೂನಿನ ಒಳಗಡೆ ಇವತ್ತಿನ ದಿವಸ ಇದೆ. ಇನ್ನ ಈ ಅಡಲ್ಟ್ರಿ ಬಗ್ಗೆ ಬಂದಬಿಟ್ಟಂತನು ಆ ಕಾನೂನು ಇವತ್ತಿಗೂ ಸಹ ಹಿಂದಿನ ಒಂದು ಸಂಪ್ರದಾಯವನ್ನೇ ಪ್ರತಿಬಿಂಬಿಸುತ್ತೆ. ಅಂದ್ರೆ ವಿವಾಹಿತ ಮಹಿಳೆ ಜೊತೆಗೆ ಬೇರೆ ಪುರುಷ ಸಂಬಂಧ ಇಟ್ಟಕೊಂಡಿದ್ರೆ ಆ ಮಹಿಳೆಯ ಗಂಡ ಆ ಪುರುಷನ ಮೇಲೆ ಕೇಸ್ ಹಾಕಬಹುದು. ಜೈಲಿಗೆ ಕಳುಹಿಸಬಹುದು. ವ್ಯಭಿಚಾರ ಅಂತ ಅನ್ನೋ ಕಾರಣಕ್ಕೆ; ಅಡಲೀ ಅನ್ನೋ ಕಾರಣಕ್ಕೆ, ಆ ಪುರುಷನ ಮೇಲೆ ಕೇಸ್ಹಾಕಿ ಕಳಿಸಬಹುದು. ಆದ್ರೆ ಅದೇ ಒಬ್ಬ ಮಹಿಳೆ ತನ್ನ ಗಂಡನ ಜೊತೆ

ಬೇರೆಯವರು ಅನೈತಿಕ ಸಂಬಂಧ ಇಟ್ಟುಕೊಂಡಾಗ ಅದು ಅಡಲ್ಟ್ರಿ ಆಗೊಲ್ಲ, ಅವಳಿಗೇನು ಆಕ್ಷನ್ ಕೂಡ ತಗೊಳೋಕೆ ಬರೋಲ್ಲ. ಈ ರೀತಿ ಕಾನೂನಿನಲ್ಲಿಯೇ ಇವತ್ತು ನಾವು ಹಿಂದಿನ ಕೆಲವೊಂದು ಸಾಂಪ್ರದಾಯಿಕ ಮೌಲ್ಯಗಳನ್ನ ನೋಡ್ತಾ ಇದ್ದೇವೆ. ಇನ್ನೂ ಕೂಡ ತಿದ್ದುಪಡಿ ಮಾಡೋಕಂತ ಬಾಳ ಕೇಳ್ತಾ ಇದ್ದಾರೆ. ಈ ಅಡಲ್ಟ್ರಿದು ಏನೂ ವ್ಯಾಖ್ಯಾನ ಇದೆಯೋ ಅದನ್ನ ಬದ್ದಿ ಮಾಡೋಕು, ಇಬ್ಬರಿಗೂ ಕೂಡ ಸಮಾನವಾದಂತಹ ಒಂದು ಹಕ್ಕಿರಬೇಕು. ಮತ್ತೆ ಗಂಡ ತಪ್ಪು ಮಾಡಿದಾಗ್ಯೂ ಕೂಡ ಕ್ರಮ ತೆಗೆದುಕೊಳ್ಳೋದಕ್ಕೆ ಈಕೆಗೆ ಅಧಿಕಾರ ಇರಬೇಕು. ಮತ್ತೆ ಹೆಂಡ್ತೀನ ಯಾಕೆ ಬಿಡ್ತೀರ ಅದಲ್ಲಿ ಹೆಂಡ್ತಿ ಬೇರೆಯವನ ಜೊತೆಗೆ ಇದ್ದಾಗ ಅಲ್ಲಿ ಅವಳನ್ನ ಒಂದು ವಸ್ತುವಾಗಿ ಭಾವಿಸಿ ಇವನ ಸಾಮಾನನ್ನ ಬೇರೆಯವರು ಕದ್ದುಕೊಂಡು ಹೋಗ್ತಿದ್ದಾರಂತ ಆಕ್ಷನ್ ತಗೊಳ್ಳೋದಷ್ಟೆ ಅದು. ಇನ್ನೇನಲ್ಲ. ಇವನ ಸಾಮಾನು, ಇವನ ಪೂಜೇಷನ್ ಅವಳು ಮಹಿಳೆ, ಅವುಳನ್ನ ಕಿತ್ತುಕೊಂಡು ಬೇರೆ ಪುರುಷ ಹೋಗ್ತಿದ್ದಾಗ ಅವನು ಹೇಗೆ ತಡಕೊಂಡಿರೋಕೆ ಸಾಧ್ಯ. ಒಂದು ಹಸುವನ್ನು ತೆಗೆದುಕೊಂಡೋದ್ರೆ ಹೇಗೆ ಥೆಫ್ಟ್ ಆಗುತ್ತೆ. ಆವೊಂದು ಪ್ರಿನ್ಸಿಪಲ್ ಮೇಲೆ ಇರೋದದು, ಆ ತಾತ್ವಿಕ ನೆಲೆಗಟ್ಟಿನ ಮೇಲೆ ಆವೊಂದು ಕಾನೂನು ಕೂಡ ಇರೋದು. ಅದನ್ನ ಕೂಡ ಇವತ್ತು ತಿದ್ದುಪಡಿ ಮಾಡೋಕು ಅಂತ ಕೇಳ್ತಾ ಇರೋದು.

ಇನ್ನು ವರದಕ್ಷಿಣೆಯ ಕಾನೂನಿಗೆ ಬಂದಬಿಟ್ರಂತನೂನು, ಇಲ್ಲಿ ಇದಕ್ಕೆ ಯಾವ ತರದ ಜೆಸ್ಟಿಫಿಕೇಷನ್ ಇದೆ ಹೇಳಿ, ಹಿಂದೇನೋ ಆಸ್ತಿ ಹಕ್ಕು ಇರಲಿಲ್ಲ ಅನ್ನೋ ಕಾರಣಕ್ಕೆ ಮಹಿಳೆಗೆ ಏನೋ ಮದುವೆ ಸಂದರ್ಭದಲ್ಲಿ ಕೊಟ್ಟು ಕಳಿಸ್ತಾ ಇರ್ತಿದ್ರು, ಆದ್ರೆ ಇವತ್ತಿನ ದಿವಸ ಆಸ್ತಿ ಹಕ್ಕನ್ನು ಕೊಟ್ಟು, ಅವಳು ಕೆಲಸಕ್ಕೂ ಹೋಗಿ ದುಡಿದೂ ತರಿದ್ದಾಗ ಈ ವರದಕ್ಷಿಣೆಗೆ ಇವತ್ತು ಏನು ಜಸ್ಟಿಫಿಕೇಷನ್ ಇದೆ. ಅಂದ್ರೆ ಇನ್ನೇನು ಇಲ್ಲ. ಅವಳು ಮಹಿಳೆ ಅನ್ನೋ ಕಾರಣಕ್ಕೆ, ಮದುವೆ ಮಾಡಿಕೊಂಡು ಬಂದಮಾತ್ರಕ್ಕೆ ಇವಳ ಒಂದು ತೊತ್ತಾಗ್ತಾಳೆ ಅಂದ್ರೆ ಇವಳ ಮೇಲೆ ಒಂದು ಭಾರವಾಗ್ತಾಳೆ ಅಂತನ್ನೋ ರೀತೀನಲ್ಲಿ ಕೆಲವರು ಅಭಿಪ್ರಾಯ ಪಡುವುದನ್ನು ನಾನು ಫೋನಿನ್ ಕಾರ್ಯಕ್ರಮ ಮಾಡಿದಾಗ ಕೇಳಿದ್ದೀನಿ. ತಗೋಳೋದಲ್ಲಿ ಏನ್ ತಪ್ಪಿದೆ. ಅವಳಿಗೆ ನಾವು ಎರಡೊತ್ತು ಊಟ ಹಾಕೋದಿಲ್ವ ಮದುವೆ ಆದರೆ ಅನ್ನೋ ಮಾತು. ಅಂದ್ರೆ ಇನ್ನೂ ಕೂಡ ಈ ರೀತಿ ಯೋಚನೆ ಮಾಡೋ ಜನ ನಮ್ಮಲ್ಲಿದ್ದಾರೆ. ವರದಕ್ಷಿಣೆ ತಗೊಳ್ಳೋದು ತಪ್ಪಲ್ಲ ಅವಳನ್ನ ಮದುವೆ ಮಾಡುಕೊಂಡು ಬಂದೇಲೆ ಜೀವಮಾನ ಪೂರ್ತಿ ಸಾಕೋದಿಲ್ಲವ, ಎರಡೊತ್ತು ಊಟ ಹಾಕೋದಿಲ್ಲವ, ಅಂದ್ರೆ ಅವಳು ಮಾಡುವ ಕೆಲಸಗಳು ಮದುವೆ ಮಾಡಿಕೊಂಡು ಹೋದ್ಮಲೆ ಬೆಲೆ ಇಲ್ಲೆ ಇರುವಂಥದ್ದು. ಅವಳೇ ಒಟ್ಟಿನಲ್ಲಿ ಬೆಲೆ ಇಲ್ಲ. ಅವಳು ಸುಮ್ಮನೆ ಭಾರ ಮನೆಯೊಳಗೆ ಏನೋ ಉಪಕಾರ ಮಾಡಿ, ಮದುವೆ

ಮಾಡಿ, ಕರಕಂಡು ಬಂದಿದೀವಿ ಅವಳನ್ನು ಅನ್ನೋ ತರಹ ಇದೆ. ಒಂದೆರಡು ಗಂಡುಮಕ್ಕಳಾದ್ರೆ ಆಮೇಲೆ ಮಕ್ಕಳನ್ನ ಇಟ್ಟುಕೊಂಡು ಅವಳನ್ನ ಹೊರಗ್ಹಾಕಬಹುದು. ಹೆಣ್ಣ ಒಂದು ಸಾಧನ ಅನ್ನೋರೀತಿನಲ್ಲಿ ಇವತ್ತು ಮಹಿಳೆಯರ್ನ ನೋಡುವಂತಹ ದೃಷ್ಟಿ ಹಾಗೆಯೇ ಇದೆ. ವರದಕ್ಷಿಣೆ ನಿಷೇಧ ಕಾನೂನು ಇದ್ರೂ ಕೂಡ ಅದನ್ನು ಜಸ್ಟಿಫೈ ಮಾಡುವಂತಹ ಜನರು ಇವತ್ತಿಗೂ ಕೂಡ ನಮ್ಮ ಸಮಾಜದಲ್ಲಿ ಇದ್ದಾರೆ.

ಈ ದುಡಿಮೆಯ ಬಗ್ಗೆ ಬಂದಾಗ ಇಷ್ಟೆಲ್ಲ ಕಾನೂನುಗಳನ್ನ ಉಪಯೋಗಿಸ್ಕೊಂಡು ಯಾವ ರೀತಿ ಮಹಿಳೆ ತನ್ನನ್ನು ತಾನು ಸ್ಥಾಪಿಸ್ಕೋತಾಳೆ. ತನ್ನ ಸ್ಪೇಸ್ ಕಂಡಕೋತಾಳೆ. ಆಸ್ತಿ ಹಕ್ಕಿದೆ, ಬೇರೆ ತರದ ಪ್ರೊಟೆಕ್ಷನ್‌ಗಳೂ ಇದೆ. ಇದೆಲ್ಲವನ್ನೂ ಉಪಯೋಗಿ ಸ್ಕೊಂಡು ಈಗಿರುವಂತಹ ಒಂದು ಹೈರಾರ್ಕಿಕಲ್ ಸಿಸ್ಟಮ್ ಕುಟುಂಬದಲ್ಲಿ ಅಥವಾ ಹೊರಗಡೆಗೆ ಏನಿದೆಯಲ್ಲ, ಅದನ್ನ ತೊಡೆದು ಹಾಕೊದಿಕ್ಕೆ ಅವಳು ಪ್ರಯತ್ನವನ್ನು ಮಾಡೋಕಾಗುತ್ತೆ. ಇವತ್ತು ಮಹಿಳೆ ಹೊರಗೋಗಿ ದುಡಿತಾ ಇದಾಳೆ, ಮತ್ತೆ ಅಲ್ಲೂ ಕೂಡ ಅವಳಿಗೆ ಹೊರಗಡೆಗೆ ಕೆಲ್ಸ ಮಾಡೋ ಜಾಗದೊಳಗೆ ಸ್ವಲ್ಪ ಪ್ರೋಟೆಕ್ಷನ್ ಗಳನ್ನು ಕೊಟ್ಟಿದ್ದಾರೆ. ಫ್ಯಾಕ್ಟ್ರಿಗಳಲ್ಲಿ ಫ್ಯಾಕ್ಟ್ರಿಸ್ ಆಕ್ಟ್ ಇದೆ. ಮಹಿಳೆಯರಿಗೆ ಅಲ್ಲಿ ಸ್ವಲ್ಪ ಮಟ್ಟಿಗೆ ಪ್ರೊಟೆಕ್ಷನ್ ಇದೆ. ಅದರ ಜೊತೆಗೆ ಅವಳಿಗೆ ಕೆಲವೊಂದು ಬಿಡುವಿನ ಸಮಯವನ್ನ ಕೊಡಬೇಕು ಅಂತಾನೂ ಕೂಡ ಇದೆ. ಅದು ಎಷ್ಟರಮಟ್ಟಿಗೆ ಕೊಡ್ತಾರೋ ಬಿಡ್ತಾರೋ, ಅದು ಕಾನೂನಿನಲ್ಲಿ ಇರೋದನ್ನ ಮಾತ್ರ ನಾನು ಹೇಳ್ತಿನಂತ ನಾನು ಮೊದ್ಲೇ ಹೇಳೆ ನಿಮಗೆ, ನಿಜವಾಗೂ ಇದೆಯೇ ಇಲ್ಲವೋ, ಬಿಡುವನ್ನ ಕೊಡಬೇಕಂತ ಇದೆ. ಅವಳಿಗೆ ಡೆಲಿವರಿಯಾದಾಗ, ಮೊದಲು ನಂತರವೂ ಕೂಡ ಸ್ವಲ್ಪ ಮಟ್ಟಿಗೆ ಬಿಡುವನ್ನ ಕೊಡಬೇಕು. ಆಮೇಲೆ ಸಣ್ಣ ಮಗುವಿದ್ದಾಗ ದಿನಕ್ಕೆ ಎಷ್ಟು ಸಾರಿ ಹಾಲುಕುಡಿಸೋದಕ್ಕೆ ಬಿಡುವನ್ನ ಕೊಡಬೇಕನ್ನೋದು ಕೂಡ ಎಲ್ಲ ಇದಾವೆ. ಆದ್ರೆ ಇಂತಹ ಕಾನೂನುಗಳೇ ಕೆಲವೊಮ್ಮೆ ಅವಳ ವಿರುದ್ಧವಾಗಿಯೂ ಕೂಡ ವರ್ತಿಸೋದುಂಟು. ಯಾಕೆಂದ್ರೆ ಇಷ್ಟೆಲ್ಲ ಕೊಟ್ಟಬಿಟ್ಟು ನಾವು ಯಾಕೆ ಮಹಿಳೆಯರನ್ನ ಇಟ್ಟುಕೊಳ್ಳೇಕು. ಯಾರೋ ಒಬ್ಬ ಗಂಡಸನ್ನ ತಗೊಳ್ಳೋಣ. ಅವಳಿಗೆ ಇಷ್ಟು ಮೆಟರ್‌ನಿಟಿ ಲೀವ್ ಕೊಡಬೇಕು, ಮೆಟರ್‌ನಿಟಿ ಬೆನಿಫಿಟ್ ಕೊಡಬೇಕು. ಯಾಕೆ ಬೇಕು ಇವೆಲ್ಲ ಅನ್ನುವಂತಹ ಭಾವನೆ ಕೂಡ ಕೆಲವು ಕಡೆ ಇರುತ್ತೆ. ಆದ್ರೆ ಆ ರೀತಿಯಾಗಿ ಡಿಸ್ಕ್ರಿಮಿನೇಷನ್ ಇವತ್ತು ಮಾಡೋಕೆ ಬರೋಲ್ಲ. ನಮ್ಮ ಸಂವಿಧಾನದ ಪ್ರಕಾರ ಮಹಿಳೆಗೆ ಕೆಲವೊಂದು ಸೌಲಭ್ಯಗಳನ್ನು ಕೊಡಬೇಕಾಗುತ್ತೆ ಅನ್ನೋ ಕಾರಣಕ್ಕೋಸ್ಕರ ಡಿಸ್ಕ್ರಿಮಿನೇಷನ್ ಮಾಡೋದಿಕ್ಕೆ ಸಾಧ್ಯ ಇಲ್ಲ. ಆದ್ರೆ ಈ ಒಂದು ಬಿಡುವನ್ನ ಹೊರಗಡೆಗೆ ಕೊಡಬಹುದು ಇವತ್ತು. ಮತ್ತೆ ಅಲ್ಲಿ ಅವಳು ಗೌರವವಾಗಿ ಕೆಲ್ಸ ಮಾಡಿಕೊಂಡು ಹೋಗೋದಿಕ್ಕೆ ಕೆಲವೊಂದು ಕಾನೂನುಗಳನ್ನ ಕೂಡ ಮಾಡಿದ್ದಾರೆ.

ಮಹಿಳೆ ಮೇಲೆ ಲೈಂಗಿಕ ಕಿರುಕುಳ ಆಗಬಾರ್ದು ಅನ್ನೋ ಕಾರಣಕ್ಕೆ ಕೂಡ ಸುಪ್ರೀಮ್ ಕೋರ್ಟ್ ಕೆಲವೊಂದು ಗೈಡ್ ಲೈನ್ಸ್ ಹಾಕ್ಕೊಟ್ಟಿದೆ. "ಸೆಕ್ಸುಯಲ್ ಹರಾಸ್ ಮೆಂಟ್ ಇನ್ ವರ್ಕ್ ಪ್ಲೇಸಸ್", ಅದಾಗದೇ ಇದ್ದಾಂಗೆ ತಡೆಗಟ್ಟೋದಕ್ಕೂ ಕೂಡ ಗೈಡ್ ಲೈನ್ಸ್ ಹಾಕ್ಕೊಟ್ಟಿದೆ. ಇದೆಲ್ಲ ಸರಿ, ಹೊರಗಡೆಗೆ ಬಿಡುವು ಕೊಡ್ತಾರೋ, ಬಿಡ್ತಾರೂ? ಅದು ಕಾನೂನಂತು ಇದೆ. ಆದ್ರೆ ಮನೆಯೊಳಗಡೆಗೆ ಬಿಡುವನ್ನ ಯಾವ ಕಾನೂನು ಕೊಡೋಕೆ ಸಾಧ್ಯ. ಒಂದು ಪ್ರೈವೇಟ್ ಬಿಲ್ಲನ್ನು ಪಾರ್ಲಿಮೆಂಟ್ ಇಟ್ಟಿದ್ರು. ಪ್ರತೀ ಭಾನುವಾರ ಮಹಿಳೆಗೆ ಬಿಡುವನ್ನು ಕೊಡಬೇಕು. ಅವಳು ಅಡಿಗೆ ಮನೆಯಿಂದ ಮೊದಲು ಬಿಡುಗಡೆ ಆಗಬೇಕು ಅಂತಾ ಒಂದು ಪ್ರೈವೇಟ್ ಬಿಲ್ಲನ್ನ ಪಾರ್ಲಿಮೆಂಟ್ ಮುಂದೆ ತಂದಿದ್ರು. ಆದ್ರೆ ಬಿಲ್ ಮಾಡಬಹುದು. ಚಾರಿಗೆ ತರೋದಿಕ್ಕೆ ಸಾಧ್ಯ ಆಗುತ್ತಾ ಅನ್ನುವಂಥದ್ದನ್ನ ನೋಡಬೇಕು.

ಇಲ್ಲಿ ನಮ್ಮ ಧೋರಣೆಗಳು ಇದೆಯಲ್ಲ, ನಮ್ಮ ಮಹಿಳೆಯರಲ್ಲೇ ಇರುವಂಥಹ ಕೆಲವೊಂದು ಧೋರಣೆಗಳು ಇದೆಯಲ್ಲ, ಎಲ್ಲಾ ಕೆಲ್ಸಾನೂ ನಾವೇ ಮಾಡಿದ್ದೇನೆ ಚೆನ್ನಾಗಾಗೋದು. ನಾವೇ ಮಾಡೋಕು ಅಂತಾ. ನಮ್ಮ ಲೇಖಕರೊಬ್ರು ಹೇಳ್ತಾ ಇದ್ರು ಹೆಣ್ಣು ಮಕ್ಕಳು ಕೈತುಂಬ ಬಳೆಹಾಕ್ಕೊಂಡು ಜಣಜಣಾಂತ ಶಬ್ದ ಮಾಡ್ಕೊಂಡು ಬಡಿಸಿದ್ರೆ ತುಂಬಾ ಚೆನ್ನಾಗಿರುತ್ತೆ ಊಟ ಅಂತ. ಅದ್ಯಾಕೆ ಗಂಡಸರು ಬಡಿಸಿದ್ರೆ ಊಟ ಚೆನ್ನಾಗಿರೋಲ್ಲ? ಅವರು ಕಾಫಿ ಮಾಡಿಕೊಟ್ರು ಚೆನ್ನಾಗಿರುತ್ತೆ, ಬಳೆ ಹಾಕ್ಕೊಂಡು ಮಾಡಿಕೊಟ್ಟರೆ ಚೆನ್ನಾಗಿರುತ್ತಾ? ಕೆಲವು ಲೇಖಕಿಯರೂ ಇಂಥಹ ಕೆಲವು ಮಾತನ್ನ ಆಡ್ತಿದ್ರು, ಇವತ್ತಿಗೂ ಕೂಡ ಕೆಲವು ಸಮರ್ಥ ಮಹಿಳೆಯರು ಇದ್ದಾರೆ. ಬೇಕಾದ್ದು ಕೆಲಸ ಮಾಡಿಕೊಂಡು ಬರೋರು ಇದ್ದಾರೆ. ಆದ್ರೂ ಅವರು ಇವತ್ತಿಗೂ ಹೇಳ್ಕೊತಾರೆ; ಅಯ್ಯೋ ನಮ್ಮ ಮನೇನಲ್ಲಿ ಅಡಿಗೆ ಕೆಲ್ಸ ಎಲ್ಲಾ ನಾನೇ ಮಾಡ್ತೀನಿ. ಪಾತ್ರೆ ತೊಳೆಯೋ ಕೆಲ್ಸನೂ ನಾನೇ ಮಾಡ್ತೀನಿ, ಬಟ್ಟೆ ಒಗೆಯೋ ಕೆಲ್ಸಾನೂ ನಾನೇ ಮಾಡ್ತೀನಿ, ಬೇಕಾದಂಗೆ ಕೆಲ್ಸಕ್ಕೆ ಇಟ್ಟುಕೊಳ್ಳೋ ಹಾಂಗಿರ್ತಾರೆ. ತಮ್ಮ ಸಾಮರ್ಥ್ಯವನ್ನ ಬೇರೆ ಕೆಲ್ಸಕ್ಕೆ ಉಪಯೋಗಿಸ್ಕೊಳ್ಳೋಕೆ ಸಾಧ್ಯ ಇರುತ್ತೆ. ಅಂಥದ್ರಲ್ಲೂ ಕೂಡ ಅವರು ಈ ಕೆಲ್ಸಗಳನ್ನ ಮಾಡುವುದರಲ್ಲಿ ನನ್ನ ಮನೆ ಕೆಲ್ಸಾನ ನಾನೇ ಮಾಡ್ತೀನಪ್ಪಾ ಅಂತಾ ಹೆಮ್ಮೆ ಪಟ್ಟುಕೊಳ್ಳುವಂಥಾ ಸ್ಟೇಟ್‌ಮೆಂಟ್‌ಗಳನ್ನು ಕೊಡ್ತಾ ಇರ್ತಾರೆ. ಅದನ್ನ ಬಹಳ ಎತ್ತರದಲ್ಲಿ ಇರುವಂತಹ ಮಹಿಳೆಯರೇ ಕೊಡ್ತಿದ್ದಾಗ, ಅದನ್ನ ಸಮಾಜ ಎತ್ತಿಹಿಡಿಯುತ್ತಾ, ನೋಡಿ ಇಂತಹ ಶ್ರೇಷ್ಠ ಮಹಿಳೆ, ಮಹಾನ್ ಮಹಿಳೆಯ ಬಾಯಿಂದ ಇಂಥಾದ್ದು ಬಂದಿದೆ, ಎಂಥಾ ದೊಡ್ಡ ಆದರ್ಶ ಅಂತ ಘೋಷಿಸ್ತಾ ಇದ್ದಾಗ ಎಲ್ಲರಿಗೂ ಸಹ ಅಪರಾಧಿ ಪ್ರಜ್ಞೆ ಬಂದೋಗಿ ಬಿಡುತ್ತೆ. ಹೌದೌದು ನಾವೂ ಹಿಂಗೇ ಹೇಳೋಕು ಅಂತನ್ನೋ ರೀತೀನಲ್ಲಿ ಸಮಾಜದ ಮನ್ನಣೆ ಗಳಿಸ್ಕೊಳ್ಳಬೇಕಾದ್ರೆ ನಾನೂ ಕೂಡ ಎಷ್ಟೇ ನನಗೆ

ಸಾಮರ್ಥ್ಯ ಇದ್ರೂ ಬೇಕಾದಷ್ಟು ದೊಡ್ಡ ಕೆಲ್ಸ ಮಾಡೋಕೆ ಸಾಧ್ಯ ಇದ್ರೂ; ಮತ್ತೆ ನಮ್ಮನೇ ಪಾತೇನ ನಾನೇ ತೊಳಿತೀನಿ ಅನ್ನೋವಂತಹ ಮಾತುಗಳನ್ನಾಡಿ ಮೆಚ್ಚುಗೆಯನ್ನ ಗಳಿಸ್ಕೋಬೇಕು ಅನ್ನುವಂತಹ ಸ್ಥಿತಿ ಇವತ್ತಿಗೂ ನಮ್ಮಲ್ಲಿದೆ. ಅದಕ್ಕೆ ನಾನು ಹೇಳೆ, ನಾನು ಹೆಮ್ಮೆಪಟ್ಕೋಳೀನಿ, ನಮ್ಮನೇನಲ್ಲಿ ನಾನು ನಾಲ್ಕು ಜನಕ್ಕೆ ಕೆಲ್ಸ ಕೊಟ್ಟಿದೀನಿ ಅಂತ ಹೇಳೆ, ಕೆಲಸದೋಳಿಗೆ ಕೆಲಸ ಕೊಟ್ಟಿದೀನಿ. ಅಡಿಗೆಯವಳಿಗೆ ಕೆಲ್ಸ ಕೊಟ್ಟಿದೀನಿ, ನಮ್ಮ ಆಫೀಸ್ ನಲ್ಲಿ ಟೈಪಿಸ್ಟ್ ಕೆಲ್ಸ ಕೊಟ್ಟಿದೀನಿ. ನಮ್ಮ ಡ್ರೈವರ್‌ಗೆ ಕೆಲ್ಸ ಕೊಟ್ಟಿದೀನಿ. ನನ್ನ ಬಿಡುವಿನ ಸಮಯವನ್ನ ನಾನು ಸದುಪಯೋಗ ಪಡಿಸ್ಕೋತೀನಿ. ನಮ್ಮನೆ ಕೆಲ್ಸದೋಳಿಗೆ ಬರೋದೇ ಬಟ್ಟೆ ಒಗೆಯೋದು, ಪಾತ್ರೆ ತೊಳೆಯೋದು, ಬೇರೆ ಕೆಲ್ಸ ಅವಳಿಗೆ ಬರೊಲ್ಲ. ನನಗೆ ಬೇರೆ ಕೆಲ್ಸ ಬರುತ್ತೆ ಅಂದರೆ ನಾನು ಬೇರೆ ಕೆಲ್ಸ ಮಾಡಿ, ಅಷ್ಟು ಉತ್ಪಾದನೆಯನ್ನ ಮಾಡಿ, ಈ ನಾಲ್ಕು ಜನಕ್ಕೆ ಉದ್ಯೋಗ ಕೊಟ್ಟು, ಅವರು ಜೀವನ ನಡೆಸೋದಿಕ್ಕೆ ಸಹಾಯ ಮಾಡ್ತೀನಿ ಅಂತ ನಾನು ಹೆಮ್ಮೆ ಪಟ್ಟಕೊಡ್ತೀನಿ. ನಾನೇ ಪಾತ್ರೆ ತೊಳ್ಕೊತೀನಂತ ನಾನು ಖಂಡಿತಾ ಹೇಳೋದಿಲ್ಲಾಂತ ನಾನು ಹೇಳೋದು. ಹಾಗಾಗಿ ಇವತ್ತು ನಮ್ಮ ಧೋರಣೆಗಳಲ್ಲಿ ಕೂಡ ನಾನು ಬದ್ಲಾವಣೆ ಮಾಡಿಕೊಳ್ಳುವಂತಹ ಅವಶ್ಯಕತೆ ಬಹಳಷ್ಟು ಇದೆ.

ಕೆಲವೊಮ್ಮೆ ಈ ಕೇಸ್‌ಗಳು ನ್ಯಾಯಾಲಯದ ಮುಂದೆ ಬಂದಾಗ ಮಹಿಳೆಯರನ್ನ ಅಸರ್ಟ್ ಮಾಡಾಕೆ ಹೋದಾಗ ಕೆಲವೊಮ್ಮೆ ಹ್ಯಾಗೆ ಹಳೆಯ ಮೌಲ್ಯಗಳು ಹೊಸ ಮೌಲ್ಯಗಳಿಗೆ ಘರ್ಷಣೆ ಕೋರ್ಟಿನ ಮುಂದೆ ಅದು ಹಾಗೇ ಬಂದಿರುತ್ತೆ. ಅದನ್ನ ತೀರ್ಮಾನ ಮಾಬ್ಲೆಕಾದಂತಹದು ಕೋರ್ಟಿಗೆ ದೊಡ್ಡ ಸಮಸ್ಯೆ ಆಗೋಗಿಬಿಡುತ್ತೆ. ಈಗ ಮಹಿಳೆಯು ಕೂಡ ಕೆಲ್ಸದಲ್ಲಿರ್ತಾಳೆ, ಪುರುಷಾನು ಇರ್ತಾನೆ. ಅವನೊಂದು ಕಡೇನಲ್ಲಿ ಇರ್ತಾನೆ, ಇವಳೊಂದು ಕಡೇನಲ್ಲಿರ್ತಾಳೆ ಅವಾಗ ಮಹಿಳೆಯಾದವಳು ನಾನಿದ್ದಲ್ಲೇ ಅವನು ಬರ್ಬೇಕು. ಅವನಿದ್ದಲ್ಲಿ ನಾನೋಗಲ್ಲಾಂತ ಹೇಳಿದ್ರೆ, ಅಂಥಾ ಸಂದರ್ಭದಲ್ಲಿ ಇವರು ನ್ಯಾಯಾಲಯ ವಯಾ ಮೀಡಿಯಾ ಮಾಡಿ ಕುಟುಂಬಕ್ಕೆ ಕೆಲ್ಸ ಮಾಡೋದು ಅನಿವಾರ್ಯವಾಗಿದ್ದು ಮತ್ತೆ ಅವಳಿಂದ ಅವಳು ಹೆಚ್ಚು ಗಳಿಕೆ ಮಾಡ್ತಾ ಇದ್ರೆ ಅವಾಗ ಗಂಡ ಅಲ್ಲಿಗೆ ಹೋಗೋಕು ಅಂತಾ ಕೂಡ ಹೇಳಿದ್ದಾರೆ. ಕೆಲವೊಂದು ಸಂದರ್ಭದಲ್ಲಿ ಗಂಡಾನೇ ಅಲ್ಲಿಗೆ ಹೋಗೋಕು ಅಂತ ಕೂಡ ಹೇಳಿದ್ದಾರೆ.

ಇನ್ನ ಕೆಲವು ಕೇಸಸ್‌ನಲ್ಲಿ ಹ್ಯಾಕ್ಹರುತ್ತೆ ಅಂತಂದ್ರೆ ಅವಳು ಸಾಫ್ಟ್‌ವೇರ್ ಇಂಜಿನಿಯರ್ ಆದ್ರೆ, ಇಲ್ಲಿ ಅವರು ಕೇಸ್ ಹಾಕೋದೇನಪ್ಪಾಂದ್ರೆ ಮನೇ ಕೆಲ್ಸಾನೆ ಇವಳು ಮಾಡೋದಿಲ್ಲ. ಎಲ್ಲ ನಮ್ಮ ಅಮ್ಮಾನೇ ಮಾಡ್ತಾಳೆ. ಎದ್ದು ಕೆಲ್ಸಕ್ಕೆ ಓಡೋಗ್ಬಿಡ್ತಾಳೆ, ರಾತ್ರಿ ತಡವಾಗಿ ಬರ್ತಾಳೆ, ಏಳು ಗಂಟೆಗೆ ಬರ್ತಾಳೆ ಅಂತೆಲ್ಲಾ... ಸಾಫ್ಟ್‌ವೇರ್ ಇಂಜಿನಿಯರ್‌ಗೆ ಕೆಲ್ಸ ಹ್ಯಾಗಿರುತ್ತೆ ಹಾಗೆ ಬರಬೇಕಾಗುತ್ತೆ. ಅದು ಹೋಗ್ಲಿ ಇಪ್ಪತ್ತು

ಸಾವಿರ, ಮೂವತ್ತು ಸಾವಿರ ಸಂಬಳ ತಗೊಂಡು ಬರಬೇಕು. ಆದ್ರೆ, ಅವಳು ಅರ್ಧಗಂಟೆ ತಡವಾಗಿ ಬರಬಾರ್ದು. ನಮ್ಮಮ್ಮ ಬೆಳಗ್ಗಿಂದ ಅವರೇ ಕೆಲ್ಸ ಮಾಡ್ತಾ ಇದ್ದಾರೆ. ನಾನು ಬಂದು ನಾನೇ ಕಾಫಿ ಮಾಡ್ಕೊಬೇಕಾಗಿದೆ. ಗಂಡನ ಬಗ್ಗೆ ಕೂಡ ಲಕ್ಷ ಇಲ್ಲ. 'ಶಿ ಈಸ್ ನಾಟೇ ಟೂ ಹಿಂದೂ ವೈಫ್' ಅಂತ ಹೇಳಿದ್ದಾರೆ.

ಕೆಲವರು ಡ್ರಾಫ್ಟ್ ಮಾಡೇಕಾದ್ರೆ ಅವಳು 'ಶಿ ಈಸ್ ನಾಟ್ ಟ್ರೂ ಹಿಂದೂ ವೈಫ್ ಅಂತ. ಏನ್ ' ಟ್ರೂ ಹಿಂದೂ ವೈಫ್' ಅಂತಂದ್ರೆ, ಮುಸ್ಲಿಂ ವೈಫ್ ಬೇರೆ, ಕ್ರಿಶ್ಚಿಯನ್ ವೈಫ್ ಬೇರೇನಾ. ಟೂ ಹಿಂದೂ ವೈಫ್ ಅಂತಂದ್ರೆ ಪೂರ್ತಿ ಗಂಡನ ಸೇವೆ ಮಾಡೋಕು, ಅತ್ತೆ-ಮಾವನ ಸೇವೆ ಮಾಡೋಕು. ಇವತ್ತಿಗೂ ಕೂಡ ನಮ್ಮ ಡೈವೋರ್ಸ್ ಪಿಟೀಷನ್‌ಗಳಲ್ಲಿ ಇದನ್ನ ಹಾಕ್ತರೆ. ಮಕ್ಕಳನ್ನ ನೋಡಿಕೊಳ್ಳೋಲ್ಲ. ಈಗ ಕಸ್ಟಡಿ ಪ್ರಶ್ನೆ ಬಂದಾಗ ಮಕ್ಕಳದು ಇದು ಬರುತ್ತೆ, ಹೆಂಡ್ತಿ ಕೆಲಸದಲ್ಲಿದ್ದಾಳೆ ಅದಕ್ಕೆ ಕಸ್ಟಡಿ ಅವಳಿಗೆ ಕೊಡಬಾರ್ದು, ಇಂಥವೆಲ್ಲ ಇವತ್ತಿನ ದಿವಸ ಹಲವಾರು ಪ್ರಶ್ನೆಗಳಾಗಿ ನ್ಯಾಯಾಲಯದ ಮುಂದೆ ಬರ್ತಾ ಇದೆ. ನ್ಯಾಯಾಲಯ ತುಂಬಾ ಟ್ರಡಿಷನ್ ಆಗಿ ಯೋಚೆ ಮಾಡ್ತಾ ಇಲ್ಲ. ಅದೂ ಕೂಡ ಮಹಿಳೆಯ ಒಂದು ಪರಿಸ್ಥಿತಿಯನ್ನು ಪರಿಗಣನೆಗೆ ತೆಗೆದುಕೊಂಡು, ಬದಲಾದ ಕಾಲವನ್ನು ಪರಿಗಣನೆಗೆ ತಗೊಂಡು ತೀರ್ಪುಗಳನ್ನ ಕೊಡ್ತಾ ಇದ್ದಾರೆ, ಆ ದೃಷ್ಟಿಯಿಂದ ಇವತ್ತು ನ್ಯಾಯಾಲಯದಿಂದ ಮಹಿಳೆಯರಿಗೆ ಸ್ವಲ್ಪ ಮಟ್ಟಿಗೆ ಸಹಾಯ ಆಗ್ತಾ ಇದೆ. ಹೆಚ್ಚಿನದು ಆಗೇ ಇದ್ರೂ ಸ್ವಲ್ಪ ಮಟ್ಟಿಗೆ ಸಹಾಯ ಆಗ್ತಾ ಇದೆ. ಈ ದೃಷ್ಟಿಯಿಂದ ಈತರದ ಬೇಕಾದಷ್ಟು ಕಾನೂನುಗಳು ಇವತ್ತು ಇದೆ. ನಾನು ಹೇಳಿದ್ದಾರೆ ಇದುವರೆಗೆ ಬಂದಂತಹ ಟ್ರೆಡಿಷನ್ಸ್ ಅನ್ನು, ಕಸ್ಟಮ್ಸ್ ಅನ್ನು, ಸಾಮಾಜಿಕ ನಿರೀಕ್ಷೆಗಳನ್ನು, ಇದನ್ನೆಲ್ಲ ಮುರಿಯೋದಿಕ್ಕೆ ಮೀರಿ ಹೋಗೋದಿಕ್ಕೆ, ನಮ್ಮ ಪರಿಸ್ಥಿತಿಯನ್ನು ಬದ್ಲಾವಣೆ ಮಾಡೋದಿಕ್ಕೆ ಸ್ಪೇಸ್ ಕಂಡುಕೊಳ್ಳೋದಿಕ್ಕೆ ಇವುಗಳ ಸಹಾಯವನ್ನ ಪಡಕೊಂಡು ಹ್ಯಾಗೆ ನಾವು ಬೆಳೀತೀವಿ ಅನ್ನೋದು ನಮ್ಮ ಮೇಲಿರುತ್ತೇ ಹೊರತು, ಬೇರೆ ಯಾವುದೂ ಮೇಲೂ ಇರೋದಿಲ್ಲಾಂತ ಹೇಳಿ ನನ್ನ ಮಾತನ್ನು ಮುಗಿಸ್ತೀನಿ.

# ಲಿಂಗ ಸಮಾನತೆಯಿಂದ ವೈಜ್ಞಾನಿಕ ಮನೋಭಾವ

- ಬಿ.ಎಸ್.ಶೈಲಜಾ

ಮಹಿಳೆಯರು ಮತ್ತು ವಿಜ್ಞಾನ ಬಹಳ ದೂರ ದೂರ - ಈಚೆಗೆ ಶಿಕ್ಷಣ ದೊರಕಿದ ಮೇಲೆ ಮಾತ್ರ ಪರಿಸ್ಥಿತಿ ಸುಧಾರಿಸಿದೆ ಎಂಬ ಮಾತು ಆಗಾಗ್ಗೆ ಕೇಳಿಬರುತ್ತಿದೆ. ಆದರೆ ಅವರು ಪ್ರಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿ ಕಂಡುಕೊಂಡ ತಿಳುವಳಿಕೆಗಳು ಈಗ ಬೆಳಕಿಗೆ ಬರತೊಡಗಿವೆ, ಪೇಟೆಂಟ್‌ಗಳಾಗುತ್ತಿವೆ. ಅರಿಸಿನದ ಬಳಕೆಯಿಂದ ಆರಂಭಿಸಿ, ಹಪ್ಪಳ ಒಣಗಿಸುವ ಸ್ಥಳದ ಆಯ್ಕೆಯವರೆಗೂ ಅವರ ಪ್ರಕೃತಿ ಅಧ್ಯಯನ ವಿಸ್ತರಿಸಿತ್ತು. ಪರಿಸರ ಸಂರಕ್ಷಣೆಯಲ್ಲಿ ಗ್ರಾಮೀಣ ಮಹಿಳೆಯರ ಪಾತ್ರ ಈಗ ಎಲ್ಲರ ಗಮನ ಸೆಳೆದಿದೆ. ಅವರು ಪುಸ್ತಕಗಳನ್ನು ಬರೆದಿಡಲಿಲ್ಲ. ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಲಿಲ್ಲ. ಆದ್ದರಿಂದ ಈ ಮಾನದಂಡದಲ್ಲಿ ಮಾತ್ರ ಅವರು ಸಂಶೋಧನಾ ಕ್ಷೇತ್ರಕ್ಕೆ ಕಾಲಿರಿಸಿದ್ದು ಈಚೆಗೆ ಎನ್ನಬಹುದು.

೧೭೦೪ರಲ್ಲಿ ಜನವರಿ ೧೬ನ್ನು ಹಳೆಯ ಹೊಸ ವರ್ಷ ಎಂದು ಕರೆಯುತ್ತಿದ್ದರು. ಅದಕ್ಕೆ ಮುಂಚೆ ಹೊಸ ವರ್ಷದ ಆರಂಭ ಏಪ್ರಿಲ್ ೧ ಇತ್ತು. ಅದು ಜನವರಿ ೧ಕ್ಕೆ ಏಕೆ ಬದಲಾಯಿತು? ಈ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದಾಗ ಕಂಡದ್ದು ಇಂಗ್ಲೆಂಡ್‌ನಿಂದ ಪ್ರಕಟವಾಗುತ್ತಿದ್ದ "ಲೇಡೀಸ್ ಡೈರಿ" ಎಂಬ ನಿಯತಕಾಲಿಕ! ಅದು ಮಹಿಳೆಯರಿಗಾಗಿ ಮೀಸಲಾದ ಪತ್ರಿಕೆ, ೧೭೦೪ ರಿಂದ ೧೮೧೬ ರವರೆಗೆ ಇದು ಪ್ರಕಟವಾಗುತ್ತಿತ್ತು. ಅದರಲ್ಲಿ ಮೊದಲ ಪುಟದಲ್ಲಿ ಒಂದು ಪಟ್ಟಿ ಇಂದಿನ ಕ್ಯಾಲೆಂಡರ್‌ಗಳಲ್ಲಿರುವಂತೆ ಆಯಾ ತಿಂಗಳ ವಿಶೇಷಗಳನ್ನು ಅಲ್ಲಿ ಕಾಣಬಹುದಾಗಿತ್ತು. ನನ್ನ ಕಣ್ಣಿಗೆ ಮುಖ್ಯವಾಗಿ ಕಂಡದ್ದು ವಿಷಯ, ಉತ್ತರಾಯಣ, ದಕ್ಷಿಣಾಯನ - ಇಂತಹ ಅಂಶಗಳು. ಇವಲ್ಲದೆ ಕೆಲವೊಂದು ಆಚರಣೆಗಳ ದಿನಾಂಕಗಳಿದ್ದವು. ಇಲ್ಲಿ "ಹಳೆಯ ಹೊಸ ವರ್ಷದ ಆರಂಭ" ಎಂಬ ನಮೂದು ಕಂಡಿತು. ಅಂದರೆ ಹೊಸ ವರ್ಷದ ಆರಂಭವನ್ನು ಜನವರಿ ೧ ಎಂದು ಅಂಗೀಕರಿಸಿದ ಮೇಲೂ ಕೆಲಕಾಲ ಹಳೆಯ ಪದ್ಧತಿ ಜಾಲ್ತಿ ಇತ್ತು ಎಂದಾಯಿತಲ್ಲವೇ? ನನ್ನ ಗಮನ ಇಡೀ ಸಂಪುಟದತ್ತ ಸರಿಯಿತು. ಇದು ಇಂಟರ್‌ನೆಟ್‌ನಲ್ಲಿ ಲಭ್ಯವಿದೆ. ಇದರಲ್ಲಿ ಮಹಿಳೆಯರಿಗೆ ವಿಶೇಷ ಎನ್ನಬಹುದಾದ ವಿಷಯಗಳು ಬೆರಳೆಣಿಕೆಯಷ್ಟು ಮಾತ್ರ - ಆರೋಗ್ಯ, ಹೆಣಿಗೆ ಮುಂತಾದವು. ಉಳಿದ ಲೇಖನಗಳೆಲ್ಲಾ ಗಣಿತದ್ದು. ಇದು ನನಗೆ ಆಶ್ಚರ್ಯ ಉಂಟು ಮಾಡಿತು, ಬರೆಯುತ್ತಿದ್ದವರಲ್ಲಿ ಮಹಿಳೆಯರು ಮಾತ್ರವಲ್ಲ ಪುರುಷರೂ ಇದ್ದರು.

ಹಾಗಾದರೆ ಇದು “ಲೇಡೀಸ್ ಡೈರಿ” ಯಾಕಾಯಿತು ? ನನಗೆ ಉತ್ತರ ತಿಳಿಯಲಿಲ್ಲ. ಇದೇ ರೀತಿ “ಜೆಂಟಲ್‌ಮೆನ್ಸ್ ಮ್ಯಾಗಝೀನ್” ಎಂಬ ನಿಯತಕಾಲಿಕೆಯೂ ಇತ್ತು. ಅದರಲ್ಲಿಯೂ ಗಣಿತದ ಸವಾಲುಗಳು ಇರುತ್ತಿದ್ದವು.

ಇದರಲ್ಲಿರುವ ಗಣಿತದ ಸವಾಲುಗಳು ಬಹಳ ಸ್ವಾರಸ್ಯವಾಗಿವೆ. ಈ ಸವಾಲುಗಳು ಮತ್ತು ಉತ್ತರಗಳು ಇಂಟರ್‌ನೆಟ್‌ನಲ್ಲಿ ಸಿಗುತ್ತವೆ. ಆಯಾ ಸಮಸ್ಯೆಗಳ ಉತ್ತರಗಳು ಮುಂದಿನ ಸಂಚಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಕೆಲವು ಸಮಸ್ಯೆಗಳನ್ನು ಎರಡು ಮೂರು ಬೇರೆ ಬೇರೆ ಬಗೆಯಲ್ಲಿ ಬಿಡಿಸಬಹುದಾಗಿದ್ದುದನ್ನು ಓದುಗರು ಬರೆದು ಕಳುಹಿಸುತ್ತಿದ್ದರು.

ಹಿಂದೆ ಕನ್ನಡದಲ್ಲಿ “ಕೈಲಾಸ” ಎಂಬ ಮಾಸ ಪತ್ರಿಕೆ ಬರುತ್ತಿತ್ತು. ಅದರಲ್ಲಿ ಇಂತಹ ಸಮಸ್ಯೆಗಳು ಆಗೊಂದು ಈಗೊಂದು ಪ್ರಕಟವಾಗುತ್ತಿದ್ದವು. “ಹೊಸತು ಸಂಚಿಕೆಯ ಆರಂಭದ ದಿನಗಳಲ್ಲಿಯೂ ಹೀಗೆ ಪ್ರತಿ ತಿಂಗಳೂ ಸಮಸ್ಯೆ; ಅದರ ಮುಂದಿನ ತಿಂಗಳು ಉತ್ತರ ಪ್ರಕಟವಾಗುತ್ತಿತ್ತು.

ಲೇಡೀಸ್ ಡೈರಿ - ಗಣಿತ ಸಮಸ್ಯೆಗಳು

೧೮೧೬ರಲ್ಲಿ “ಲೇಡೀಸ್ ಡೈರಿ” ನಿಯತಕಾಲಿಕೆಯ ಪ್ರಕಟಣೆ ನಿಂತುಹೋಯಿತು. ಕಾರಣ ಗೊತ್ತಿಲ್ಲ. ಒಟ್ಟು ೯೩೨ ಗಣಿತ ಸಮಸ್ಯೆಗಳು ಸುಮಾರು ೧೧೨ ವರ್ಷಗಳ ಅವಧಿಯಲ್ಲಿ ಪ್ರಕಟವಾಗಿವೆ. ಸಂಖ್ಯಾಶಾಸ್ತ್ರಜ್ಞರು ಇವನ್ನು ವರ್ಗೀಕರಿಸಿದ್ದಾರೆ. ಅತ್ಯಂತ ಹೆಚ್ಚು ಸಮಸ್ಯೆಗಳು ರೇಖಾಗಣಿತದ್ದು, ಮುಂದಿನ ಸ್ಥಾನ ಖಗೋಳ ವಿಜ್ಞಾನಕ್ಕೆ. ಬೀಜಗಣಿತ ಮತ್ತು ತ್ರಿಕೋಣಮಿತಿಯ ಲೆಕ್ಕಗಳೂ ಇವೆ. ಒಟ್ಟಿನಲ್ಲಿ ಹೇಳುವುದಾದರೆ ಇದರ ಮಟ್ಟ ಸಾಧಾರಣಕ್ಕಿಂತ ಎತ್ತರದ್ದು. ಸ್ತ್ರೀಯರಿಗಾಗಿ ಎಂದು ಸರಳವಾದ ಲೆಕ್ಕಗಳನ್ನೇ ಕೊಟ್ಟಿಲ್ಲ. ಸವಾಲು ಹಾಕುವವರಲ್ಲ ಮತ್ತು ಬಿಡಿಸಿರುವವರಲ್ಲಿ ಪುರುಷರೂ ಇದ್ದಾರೆ.

ಇದಲ್ಲದೆ ಕೆಲವು ಸುಂದರ ಕವನಗಳಿವೆ - ಅದರಲ್ಲಿಯೇ ಸವಾಲು ಅಡಗಿದೆ. ಒಂದು ಉದಾಹರಣೆ ಗಮನಿಸಿ, ಥ ಎಂಬುದು ಕವಿಯ ವಯಸ್ಸು; ಥಿ ಎಂಬುದು ಬಾಲೆಯ ವಯಸ್ಸು: ಅದರ ಸಮೀಕರಣಗಳು

x3 + x2y=4640y

x2y-y3=537.6x

ಇದನ್ನು ಕವಿ ಕೇಳುವ ಪರಿ ಹೀಗಿದೆ.

ನನ್ನ ಮೆಚ್ಚಿನ ಹುಡುಗಿ, ಭುವನಸುಂದರಿ

ನನ್ನ ಒಲುಮೆಯ ನಿವೇದನೆಗಳೆಲ್ಲಾ ನಿರರ್ಥಕವೇ ಸರಿ

ನೀ ಪ್ರೌಢ; ನಿನ್ನ ನಾನೊಲ್ಲೆ, ನಾ ಕುವರಿ ಎನ್ನುವಳಲ್ಲಾ

ಅವಳ ಮಾತಿದು ಸರಿಯೇ, ತಿಳಿಸಿ ಜಾಣೆಯರೇ, ನೀವೆಲ್ಲಾ



ಮತ್ತೊಬ್ಬ ಕೇಳುವ ಪ್ರಶ್ನೆ - ಇಂದು ನನ್ನ ನಿಶ್ಚಿತಾರ್ಥದ ದಿನ; ನನ್ನ ವಯಸ್ಸು ಅವಳ ಮೂರರಷ್ಟು; ಚಿಂತೆಯಿಲ್ಲ; ಇನ್ನು ಹದಿನೈದು ವರ್ಷಗಳ ನಂತರ ಅವಳ ವಯಸ್ಸು ನನ್ನ ಅರ್ಧದಷ್ಟು ಮಾತ್ರ ಹಾಗಾದರೆ ನಮ್ಮ ವಯಸ್ಸುಗಳೆಷ್ಟು?

ಇಂತಹ ಅನೇಕ ಪ್ರಶ್ನೆಗಳಿವೆ. ಸಣ್ಣ ವಯಸ್ಸಿನ ಹುಡುಗಿಯರು ಎರಡರಷ್ಟು ಮೂರರಷ್ಟು ವಯಸ್ಸಿನವರನ್ನು ಮದುವೆಯಾಗುತ್ತಿದ್ದುದು ಸಾಮಾನ್ಯವೇ ಅಥವಾ ಇದು ಸವಾಲಿಗೋಸ್ಕರ ಸೃಷ್ಟಿಯಾದವೋ ಎಂಬುದರ ಬಗ್ಗೆ ಸಮಾಜಶಾಸ್ತ್ರಜ್ಞರು ತಲೆ ಕೆಡಿಸಿಕೊಳ್ಳಬಹುದು.

ಅದೇನೇ ಇರಲಿ, ಅಂದಿನ ಮಹಿಳೆಯರು ಈ ಬಗೆಯ ಲೆಕ್ಕಗಳನ್ನು ಮಾಡಬಲ್ಲ ಪರಿಣತಿ ಪಡೆದಿದ್ದರು ಎಂಬುದು ಗಮನಾರ್ಹ. ಈ ಪತ್ರಿಕೆಯನ್ನು ಟಿಪ್ಪರ್ ಎಂಬಾತ ೧೭೦೪ರಲ್ಲಿ ಆರಂಭಿಸಿದಾಗ ಅಂದಿನ ಮಹಾರಾಣಿ ಆನೆ ಬಹಳ ಉತ್ತೇಜನ ಕೊಟ್ಟು ಎಲ್ಲ ಸ್ತ್ರೀಯರು ಓದಲೇಬೇಕೆಂದು ಆಗ್ರಹಿಸಿದ್ದಳಂತೆ. ಆ ದಿನಗಳಲ್ಲಿ "ಗಣಿತ ಎಂಬುದು ಬಹಳ ತೊಡಕಿನ ವಿಷಯ; ಮಹಿಳೆಯರ ನಾಜೂಕು ಮೆದುಳಿಗೆ ಇದರಿಂದ ಘಾಸಿಯಾಗಬಹುದು" ಎಂಬ ನಂಬಿಕೆ ಪ್ರಚಲಿತವಾಗಿತ್ತಂತೆ ; ಇದು ಇನ್ನ್ಯಾವುದೋ ಸಂದರ್ಭದಲ್ಲಿ ಪ್ರಕಟವಾಗಿದ್ದ ಸುದ್ದಿ. ಆದರೆ ಈ ಸಂಪುಟಗಳನ್ನು ಓದಿದ ಮೇಲೆ ಈ ನಂಬಿಕೆ ಸುಳ್ಳು ಎಂದು ಅನ್ನಿಸುವುದಿಲ್ಲವೇ?

ಇದು ಚರಿತ್ರೆ ಎನ್ನಿಸಿಕೊಂಡಿತು. ಪ್ರಸ್ತುತಕ್ಕೆ ಬರೋಣ. ಪ್ರತಿ ವರ್ಷ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಬಾಲಕಿಯರದೇ ಮೇಲುಗೈ ಎಂಬ ಮಾತನ್ನು ಕೇಳುತ್ತೇವೆ. ಆದರೆ ಅದರ ಹಿಂದಿರುವ ಸತ್ಯವನ್ನು ಅಂಕಿ ಅಂಶಗಳು ಮುಚ್ಚಿ ಹಾಕುತ್ತವೆ. ಉದಾಹರಣೆಗೆ ಯಾವುದೋ ಒಂದು ಶಾಲೆಯಲ್ಲಿ ಒಂದನೇ ತರಗತಿಗೆ ೫೦ ಗಂಡುಮಕ್ಕಳು ೫೦ ಹೆಣ್ಣುಮಕ್ಕಳು ಸೇರುತ್ತಾರೆ ಎಂದುಕೊಳ್ಳೋಣ. ಐದು ವರ್ಷದ ನಂತರ ಸುಮಾರು ೧೦-೧೦ ಮಕ್ಕಳು ಚುರುಕಾಗಿ ಕಲಿಯುತ್ತಾರೆ ಎಂಬ ಅಂಶ ಎಲ್ಲರ ಗಮನಕ್ಕೆ ಬರುತ್ತದೆ. ಉಳಿದ ೨೦-೨೦ ಸಾಧಾರಣ ಕಲಿಕೆಯವರು. ಇನ್ನು ೧೦-೧೦ ತೀರಾ "ಮಂದಮತಿಗಳು" ಎಂದು ಶಿಕ್ಷಕರು ತೀರ್ಮಾನಿಸುತ್ತಾರೆ. (ಕ್ಷಮಿಸಿ; ಯಾವುದೇ ವ್ಯಕ್ತಿ ಮಂದಮತಿಯಲ್ಲ; ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಚಾಕಚಕ್ಯತೆ ಇದ್ದೇ ಇರುತ್ತದೆ; ಆದರೆ ನಮ್ಮ ಶಿಕ್ಷಣ ವ್ಯವಸ್ಥೆ ಅದನ್ನು ಗುರುತಿಸಲಾರದು) ಆದ್ದರಿಂದ ಐದನೆಯ ತರಗತಿಗೆ ಮುಂದುವರಿಯುವವರ ಸಂಖ್ಯೆ ಹೀಗಿರಬಹುದು -೫೦ ಗಂಡು ಮಕ್ಕಳು; ೪೦ ಹೆಣ್ಣುಮಕ್ಕಳು. ಏಕೆಂದರೆ "ಮಂದಮತಿ" ಎನ್ನಿಸಿಕೊಂಡ ೧೦

ಹೆಣ್ಣುಮಕ್ಕಳಿಗೆ ಶಿಕ್ಷಣ ಅಲ್ಲಿಗೇ ಮೊಟಕಾಗಿಬಿಡುತ್ತದೆ. (ಮನೆಗೆಲಸಕ್ಕೆ ಒಂದು ಅಳು ಎಂದು ಲೆಕ್ಕ ಹಾಕುವವರಿದ್ದಾರೆ. ಇನ್ನು ಮೂರು ವರ್ಷದ ಬಳಿಕ ಇನ್ನೂ ಹತ್ತು ಹೆಣ್ಣುಮಕ್ಕಳು



ಮನೆ ಸೇರುತ್ತಾರೆ. ಕಾರಣಗಳು ಹಲವಾರು - ಇಲ್ಲಿ ಪ್ರಸ್ತಾಪಿಸುವ ಅವಶ್ಯಕತೆ ಇಲ್ಲ. ಕೊನೆಗೆ ಎಸ್ಎಸ್ಎಲ್‌ಸಿ ಬರೆಯುವವರು ೫೦ ಗಂಡುಮಕ್ಕಳು; ೩೦ ಹೆಣ್ಣುಮಕ್ಕಳು. ಈ ೩೦ ಹೆಣ್ಣು ಮಕ್ಕಳಲ್ಲಿ “ಮಂದಮತಿಗಳು (ಫಲಿತಾಂಶದ ಇಳಿತಕ್ಕೆ ನೇರವಾಗಿ ಕಾರಣವಾಗುವವರು) ಈಗಾಗಲೇ ಬಿಟ್ಟು ಹೋಗಿರುವುದರಿಂದ ಸಹಜವಾಗಿ ಎಲ್ಲರೂ “ಪಾಸ್” ಆಗಿ ಶೇಕಡಾವಾರು ನೂರಕ್ಕೆ ಹತ್ತಿರವೇ ಆಗಬಹುದು. ಆದರೆ ಗಂಡು ಮಕ್ಕಳಲ್ಲಿ ಈ ಬಗೆಯ “ಸೋಸುವಿಕೆ” (ಶೋಷಣೆ?) ಆಗಿಲ್ಲವಾದ್ದಲಂದ ೫೦ರಲ್ಲಿ ೪೦ ಮಾತ್ರ “ಪಾಸ್” ಆಗುತ್ತಾರೆ. ಶೇಕಡಾವಾರು ಇಳಿಯುತ್ತದೆ.

ಇಲ್ಲಿ ಇನ್ನೂ ಒಂದು ಅಂಶ ಗಮನಿಸಬೇಕಾಗಿದೆ - ಆರಂಭದಲ್ಲಿಯೇ ಗಂಡು - ಹೆಣ್ಣು ಅನುಪಾತದಲ್ಲಿ ವ್ಯತ್ಯಾಸವಿರುವುದು ಸಾಮಾನ್ಯ, ಶಾಲಿ ದೂರವಿರುವ ಪ್ರದೇಶಗಳಲ್ಲಿಯಂತೂ ಬಹಳವೇ ವ್ಯತ್ಯಾಸವಿರುತ್ತದೆ. ಈ ತಾರತಮ್ಯ ಎಸ್ಎಸ್ಎಲ್‌ಸಿಯ ಮುಂದಿನ ತರಗತಿಗಳಿಗೂ ಅನ್ವಯಿಸುತ್ತದೆ. (ಇದರಿಂದ ಶೇಕಡಾ ೫೦ ಬುದ್ಧಿಮತ್ತೆಯನ್ನು ನಾವು ಪೋಲು ಮಾಡುತ್ತಿದ್ದೇವೆ ಎನ್ನಬಹುದಲ್ಲವೇ?) ಅದರಲ್ಲೂ ಮುಂದಿನ ಹಂತಗಳಲ್ಲಿ ಮಹಿಳೆಯರು ಹಿಂದೆ ಬೀಳುತ್ತಿದ್ದಾರೆ ಎಂಬುದಕ್ಕೆ ವಿವಾಹ ಮುಖ್ಯ ಕಾರಣವಾಗುತ್ತದೆ. ವಿವಾಹದ ನಂತರ ಆಕೆಗೆ ಶಿಕ್ಷಣ ಮುಂದುವರಿಸುವುದಕ್ಕಾಗಲೀ, ವೃತ್ತಿ ಕೈಗೆತ್ತಿಕೊಳ್ಳುವುದಕ್ಕಾಗಲೀ ಸ್ವಾತಂತ್ರ್ಯವಿಲ್ಲ ಎಂಬುದು ಸರ್ವ ವಿದಿತ. ಹಾಗಾಗಿ ಉನ್ನತ ಅಧ್ಯಯನ ಅದರಲ್ಲೂ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯರ ಸಂಖ್ಯೆ ಸೊನ್ನೆ ಆಗಿಲ್ಲ ಎಂಬುದೇ ಹೆಗ್ಗಳಿಕೆಯ ವಿಷಯವಾಗಿದೆ.

ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ

ಇದು ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆಯಾದರೂ ಬೇರೆ ಬೇರೆ ವಿಭಾಗಗಳಲ್ಲಿ ಮಹಿಳೆಯರು ತೊಡಗಿಕೊಂಡಂತೆ (ಉದಾ ಶಿಕ್ಷಕ ವೃತ್ತಿ) ವಿಜ್ಞಾನ ಕ್ಷೇತ್ರಗಳಲ್ಲಿ ಹೆಚ್ಚಾಗಿ ತೊಡಗಿಕೊಂಡಿಲ್ಲ. ಇದು ಈಚೆಗೆ ಬದಲಾಗುತ್ತಿದೆ ಎಂಬುದು ಸಂತೋಷದ ಸಂಗತಿ. ಎಲ್ಲ ಸಂಶೋಧನಾ ಸಂಸ್ಥೆಗಳಲ್ಲಿ ಮಹಿಳೆಯರು ಕಂಡುಬರುತ್ತಿದ್ದಾರೆ. ಆದರೆ ಪ್ರಶ್ನಿಸಬೇಕಾದ ಸಂಗತಿ ಎಂದರೆ ಅವರ ಕೊಡುಗೆಗಳಿಗೆ ಹೆಚ್ಚಿನ ಮಾನ್ಯತೆ ಸಿಗುತ್ತದೆಯೇ? ಎಂಬುದು. ಉನ್ನತ ಹುದ್ದೆಗಳಿಗೆ ದೊರೆಯುವ ಸೀಮಿತ ಅವಕಾಶಗಳಿಗೆ ಸಾಕಷ್ಟು ಸ್ಪರ್ಧೆ ಇರುತ್ತದೆ - ಇಲ್ಲಿ ಕೇವಲ ಕಾರ್ಯಕ್ಷಮತೆ ಮಾತ್ರವಲ್ಲದೆ ಮುನ್ನುಡಿ ತಮ್ಮ ಕಾರ್ಯದ ಬಗ್ಗೆ ತಿಳಿಸಿಕೊಡುವ (ಜಂಭ ಕೊಚ್ಚಿಕೊಳ್ಳುವ) ಹೊಣೆಗಾರಿಕೆಯೂ ಸೇರುತ್ತದೆ. ಇಲ್ಲಿ ಬಹುಶಃ ಮಹಿಳೆಯರು ಹಿಂದೆ ಬೀಳುತ್ತಿದ್ದಾರೆ ಎನ್ನಿಸುತ್ತದೆ,

ಮನೆ ಮತ್ತು ವೃತ್ತಿ ಎರಡನ್ನೂ ನಿಭಾಯಿಸುವ ಗುರುತರ ಕರ್ತವ್ಯದ ಭಾರದಲ್ಲಿ ಇದರಿಂದ (ಜಂಭ ಕೊಚ್ಚಿಕೊಳ್ಳುವುದರಿಂದ) ದೂರವಾಗುತ್ತಿದ್ದಾರೆ. ಹೀಗಾಗಿ ಪ್ರಶಸ್ತಿ - ಗೌರವಗಳ



ಪಟ್ಟಿಯಲ್ಲಿ ಮಹಿಳೆಯರ ಹೆಸರು ಕಾಣುವುದು ಕಡಿಮೆ. ಆದರೆ ಈ ಮಿತಿಯನ್ನು ದಾಟಿ ಪ್ರಶಸ್ತಿ ಗಳಿಸುತ್ತಿರುವವರ ಸಂಖ್ಯೆ ಬೆರಳೆಣಿಕೆಯಷ್ಟಾದರೂ ಇದೆ ಎಂದು ಸಮಾಧಾನ ಪಟ್ಟುಕೊಳ್ಳಬಹುದು.

ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರಿಗೆ ತಮ್ಮ ಕಾರ್ಯಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಆಗುಹೋಗುಗಳ ಬಗ್ಗೆ ತಿಳುವಳಿಕೆ ಬಹಳ ಮುಖ್ಯ. ಇಂದಿನ ಇಂಟರ್‌ನೆಟ್ ಯುಗದಲ್ಲಿ ಇದನ್ನು ಪಡೆದುಕೊಳ್ಳುವುದೂ ಸಾಧ್ಯವಿದೆ, ಆದರೆ ಅದನ್ನು ಗ್ರಹಿಸಿಕೊಂಡು ತಮ್ಮ ಸಂಶೋಧನೆಯ ಗುಣಮಟ್ಟವನ್ನು ಎತ್ತರಿಸಿಕೊಂಡಲ್ಲಿ ಮಾತ್ರ ತಾವೂ ಮೇಲಿರಲು ಸಾಧ್ಯ. ಇದು ಇಂದಿನ ಯುವ ಪೀಳಿಗೆಗೆ ಅತಿ ಅವಶ್ಯವಾಗಿ ತಿಳಿಸಬೇಕಾಗಿದೆ. ಇದು ಮಹಿಳೆಯರಿಗೆ ಮಾತ್ರವಲ್ಲದೆ ಪುರುಷರಿಗೂ ಅನ್ವಯಿಸುತ್ತದೆ.

ವಿಜ್ಞಾನ-ತಂತ್ರಜ್ಞಾನದಲ್ಲಿ ಮಹಿಳೆಯರು ಹೆಚ್ಚಾಗಿ ತೊಡಗಿಕೊಳ್ಳುವಂತೆ ಪ್ರೋತ್ಸಾಹಿಸುವುದಕ್ಕಾಗಿ ಅನೇಕ ಯೋಜನೆಗಳನ್ನು ಸರ್ಕಾರಗಳು ಮತ್ತು ಸಂಶೋಧನಾ ಸಂಸ್ಥೆಗಳು ಆರಂಭಿಸಿಕೊಂಡಿವೆ. ಆದರೆ ಇದನ್ನು ಮಹಿಳೆಯರು ಎಷ್ಟು ಯಶಸ್ವಿಯಾಗಿ ಬಳಸಿಕೊಳ್ಳುತ್ತಿದ್ದಾರೆ ಎಂಬುದು ಮುಖ್ಯ ಉದಾಹರಣೆಗೆ ಕಿಶೋರ ವೈಜ್ಞಾನಿಕ ಪ್ರೋತ್ಸಾಹ ಯೋಜನಾ ಎಂಬ ಯೋಜನೆ ಹತ್ತನೆಯ ತರಗತಿಯ ಹಂತದಲ್ಲಿಯೇ ಪ್ರತಿಭಾವಂತರನ್ನು ಗುರುತಿಸಿ ಪಿಎಚ್‌ಡಿ ವರೆಗೂ ವಿದ್ಯಾರ್ಥಿ ವೇತನ ನೀಡುತ್ತದೆ. ಆದರೆ ಇದರ ಫಲಾನುಭವಿಗಳಲ್ಲಿ ಕರ್ನಾಟಕದವರು ಬೆರಳೆಣಿಕೆಯಷ್ಟು ಮಾತ್ರ. ಇದಕ್ಕೆ ಕಾರಣ ಆ ಮಟ್ಟಕ್ಕೆ ಮಕ್ಕಳನ್ನು ಏರಿಸಲಾಗದ ಶೈಕ್ಷಣಿಕ ವ್ಯವಸ್ಥೆ, ಒಂದು ದಿನದ ಕಾರ್ಯಾಗಾರಗಳು ಮತ್ತು ಹಲವಾರು ದಿನಗಳ ಕಮ್ಮಟಗಳು ಈ ಕೊರತೆಯನ್ನು ತುಂಬಿಸಲಾರವು. ಇದಕ್ಕೆ ಆರಂಭದ ಹಂತದಿಂದಲೇ ತಯಾರಿ ನಡೆಸುವುದು ಅಗತ್ಯವಿದೆ. ಪರೀಕ್ಷೆಯಲ್ಲಿ ಅಂಕ ಗಳಿಸುವುದೊಂದೇ 'ಶಿಕ್ಷಣದ ಗುರಿಯಾದಲ್ಲಿ ಕಂಠಪಾಠ ಮಾಡುವ ಛಾತಿಯುಳ್ಳವರು ಮಾತ್ರ ಮೇಲೇರುತ್ತಾರೆ. ಆದರೆ ಇಂತಹ ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಹಿಂದೆ ಬೀಳುತ್ತಾರೆ.

ಸಾಮಾನ್ಯವಾಗಿ ಪ್ರತಿಯೊಂದು ಮನೆಯಲ್ಲೂ ಹೆಣ್ಣುಮಕ್ಕಳಿಗೆ ಅಡುಗೆಯ ವಿಷಯಗಳನ್ನೇ ಹೆಚ್ಚಾಗಿ ಕಲಿಸುತ್ತಿದ್ದರು. ಈಚಿನ ದಿನಗಳಲ್ಲಿ ಗಂಡು ಮಕ್ಕಳೂ ಇದನ್ನು ಕಲಿಯಲೇಬೇಕಾದ ಪರಿಸ್ಥಿತಿ ಉದ್ಭವಿಸುತ್ತಿದೆ. (ಆರೋಗ್ಯಕರ ಊಟ ಸಿಗುವುದು ಕಷ್ಟವಾಗುತ್ತಿದೆ!) ಹೆಚ್ಚಿನ ಓದಿಗೆಂದು ಹೊರದೇಶಗಳಿಗೆ ಹೋಗುವವರು

ಸ್ವಯಂಪಾಕವನ್ನೇ ಆಶ್ರಯಿಸಬೇಕಾಗುತ್ತದೆ. ಇದು ಆರೋಗ್ಯ ಮತ್ತು ಆರ್ಥಿಕ ನಿರ್ವಹಣೆಗೆ ಅನುಕೂಲಕರವಾಗುತ್ತದೆ ಎಂಬುದನ್ನು ಗಂಡು ಮತ್ತು ಹೆಣ್ಣು ಮಕ್ಕಳೆಲ್ಲರೂ ಬಹಳ



ಬೇಗ ಕಂಡುಕೊಳ್ಳುತ್ತಿದ್ದಾರೆ. ಆದ್ದರಿಂದ ನಮ್ಮ ಸಮಾಜ ಈ ಅಂಶವನ್ನು (ಅಡುಗೆ ಮಾತ್ರವಲ್ಲ ಅಡುಗೆ ಮನೆ ನಿರ್ವಹಣೆ ಕೂಡ) ಲಿಂಗ ತಾರತಮ್ಯದಿಂದ ಹೊರತುಪಡಿಸಿದರೆ ಒಳ್ಳೆಯದು. ಇದೇ ರೀತಿ ಶೌಚಾಲಯವನ್ನು ಬಳಸುವುದರ ಜೊತೆಗೆ ನಿಯಮಿತವಾಗಿ ಶುಚಿಗೊಳಿಸುವುದೂ ಕೂಡ ಎಲ್ಲರ ಕರ್ತವ್ಯ - ಗಂಡು ಹೆಣ್ಣಿನ ಭೇದವಿಲ್ಲ ಎಂಬುದನ್ನೂ ಸಣ್ಣ ವಯಸ್ಸಿನಲ್ಲಿಯೇ ತಿಳಿಸಿಕೊಡಬೇಕಾದ ಬಹು ದೊಡ್ಡ ಜವಾಬ್ದಾರಿ ಸಮಾಜದ ಮೇಲಿದೆ. ಈ ಅಂಶಗಳು ವೈಜ್ಞಾನಿಕ ಮನೋಭಾವ ಬೆಳೆಸಲು ಬಹಳ ಪರಿಣಾಮಕಾರಿಯಾಗುತ್ತವೆ.

ವಿಜ್ಞಾನ ಗಂಭೀರ ವಿಷಯವೇ?

ಧಾರ್ಮಿಕ ಕಾರ್ಯಕ್ರಮ ಮತ್ತು ಸಾಮಾಜಿಕ ಕಾರ್ಯಕ್ರಮಗಳಿಗೆ ದೊರಕುತ್ತಿರುವ ಸ್ವೀಕೃತಿ ವಿಜ್ಞಾನಕ್ಕೆ ಸಂಬಂಧಿಸಿದಂತಹ ಕಾರ್ಯಕ್ರಮಗಳಿಗೆ ದೊರಕುವುದಿಲ್ಲ. ಬೆಂಗಳೂರಿನಂತಹ ನಗರದಲ್ಲಿ ನಡೆಯುವ ವಿಜ್ಞಾನ ಕಾರ್ಯಕ್ರಮಗಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುವುದಿಲ್ಲ. ಇದಕ್ಕೆ ಮೂಲ ಕಾರಣ ವಿಜ್ಞಾನ ಎಂಬುದು ಬಹಳ ಗಂಭೀರವಾದ ವಿಷಯ, ಗಣಿತವಂತೂ ಕಬ್ಬಣದ ಕಡಲೆ ಎಂದು ಸಣ್ಣ ವಯಸ್ಸಿನಿಂದಲೇ ತಲೆಗೆ ತುಂಬುವುದು. ಇದು ಒಂದು ಸಮಸ್ಯೆಯಾದರೆ ಭಾಷೆಯ ತೊಡಕು ಇನ್ನೊಂದು.

ಈ ಎಲ್ಲ ಅಂಶಗಳೂ ಪುರುಷರಿಗೂ ಸ್ತ್ರೀಯರಿಗೂ ಅನ್ವಯಿಸುವಂತಹುದೇ. ಆದರೆ ಬೇರೆ ಬೇರೆ ಹಂತಗಳಲ್ಲಿ ಗಮನಿಸಿದಾಗ ಲಿಂಗ ತಾರತಮ್ಯ ಕಾಣುತ್ತದೆ. ಉದಾಹರಣೆಗೆ ವಿಜ್ಞಾನ ಕಲಿಸುವುದರಲ್ಲಿ ಪ್ರಯೋಗಗಳ ಪಾತ್ರ ಬಹಳ ಮುಖ್ಯ. ಇಲ್ಲಿ ಬಹಳಷ್ಟು ಶಿಕ್ಷಕಿಯರು ಹಿಂದೆ ಬೀಳುತ್ತಾರೆ. ಕಾರಣಗಳು ಹಲವಾರು ಅದಕ್ಕೆ ಅವಶ್ಯವಾದ ಸಾಮಗ್ರಿಗಳನ್ನು ಕೊಂಡು ಅಥವಾ ಸಂಗ್ರಹಿಸಿ ತರುವಲ್ಲಿ ಇತರರನ್ನು ಅವಲಂಬಿಸಬೇಕಾದದ್ದು ದೊಡ್ಡ ತೊಡಕು. ಪ್ರಯೋಗಗಳು ಯಾವುದೇ ಕಾರಣದಿಂದ ಕರ್ತವ್ಯದ ಅವಧಿಯನ್ನು ಮೀರಿದರೆ ಮನೆ ಮುಟ್ಟುವಲ್ಲಿ ವಿಳಂಬವಾಗುವ ಚಿಂತೆ, ಇನ್ನೂ ಹಲವಾರು ಕಾರಣಗಳಿವೆ. ಇದರಿಂದ ಈ ರೀತಿಯ ಕಮ್ಮಟಗಳಲ್ಲಿ, ಈ ಬಗ್ಗೆ ನಡೆಯುವ ಚರ್ಚೆಯಲ್ಲಿ ಅವರು ಪಾಲ್ಗೊಳ್ಳುವುದೇ ಸಾಧ್ಯವಾಗುವುದಿಲ್ಲ. ಗಣಿತ ಬೋಧನೆಗೆ ಇದು ಅಡ್ಡಿಯಾಗುವುದಿಲ್ಲವಾದ್ದರಿಂದ ಆ ವಿಭಾಗದಲ್ಲಿ ಅನೇಕ ಶಿಕ್ಷಕಿಯರು ಅತ್ಯಂತ ಯಶಸ್ವಿಯಾಗಿದ್ದಾರೆ. ಅಲ್ಲಿ ನಡೆಸಬಹುದಾದ ಚಟುವಟಿಕೆಗಳಿಗೆ ಒತ್ತುಕೊಟ್ಟು ಶ್ರದ್ಧೆಯಿಂದ ಪಾಠ ಕಲಿಸಿದ್ದಾರೆ.

ಇಲ್ಲಿ ಗಮನಿಸಲೇಬೇಕಾದ ವಿಷಯವೊಂದಿದೆ. ಅತಿ ಸಮರ್ಪಕವಾಗಿ ತಮ್ಮ ವೃತ್ತಿಯನ್ನು ನಿರ್ವಹಿಸುತ್ತಿರುವ ಶಿಕ್ಷಕಿಯರೂ ತಮ್ಮ ಸಾಂಪ್ರದಾಯಿಕ ಚೌಕಟ್ಟಿನಿಂದ



ಹೊರಬಂದಿಲ್ಲ. ಕಮ್ಮಟದಲ್ಲಿ ತಮ್ಮ ಅನುಮಾನಗಳನ್ನು ಮುಕ್ತವಾಗಿ ಚರ್ಚಿಸಲಾಗದೇ ಹಿಂಜರಿಯುತ್ತಾರೆ. ಆ ನಂತರ ಸಂಪನ್ಮೂಲ ವ್ಯಕ್ತಿಯನ್ನು ಚಹಾ ವಿರಾಮದಲ್ಲೋ, ಭೋಜನ ಸಮಯದಲ್ಲೋ ಕೇಳಿ ತಮ್ಮ ಕುತೂಹಲ ತಣಿಸಿಕೊಳ್ಳುತ್ತಾರೆ. (ಪಶ್ನೆ ಕೇಳಬೇಕಾದವರು ಹಿಂದೆ ನಿಂತು ಬೇರೆಯವರ ಬಾಯಿಯಿಂದ ಪ್ರಶ್ನೆ ಕೇಳಿಸುವುದು ಸಾಧಾರಣವಾಗಿ ಕಂಡು ಬರುವ ದೃಶ್ಯ) ಏಕೆ ಹೀಗೆ ಎಂದರೆ "ನಾನು ಪ್ರಶ್ನೆ ಕೇಳಿದರೆ ಇತರರು ನಗಾಡಬಹುದು" ಎಂಬ ಉತ್ತರ ಸಿದ್ಧವಾಗಿರುತ್ತದೆ. ಇದಕ್ಕೆ ಅವರು ಬೆಳೆದು ಬಂದ ಪರಿಸರವೇ ಕಾರಣ, ಯಾವುದನ್ನೂ ಪ್ರಶ್ನಿಸಬಾರದು ಎಂಬ ಆಲೋಚನಾಪರತೆಯನ್ನು ಅಂಕುರದಲ್ಲೇ ಮೊಟಕುಗೊಳಿಸಿದುದರ ಪರಿಣಾಮ. ಇದೇ ಮನೋಭಾವವನ್ನು ಅವರು ತಮಗೆ ಗೊತ್ತಿಲ್ಲದಂತೆ ಶಿಷ್ಯಯರಿಗೆ ಬಿತ್ತಿಬಿಡುತ್ತಾರೆ. ಇದು ಕೆಲವೊಂದು ನಿರ್ದಿಷ್ಟ ವರ್ಗದ (ಅಲ್ಪಸಂಖ್ಯಾತ) ಮಹಿಳೆಯರಲ್ಲಿ ಅತಿ ಹೆಚ್ಚು.

ವೈಜ್ಞಾನಿಕ ತಿಳುವಳಿಕೆ ಎಲ್ಲರ ಕರ್ತವ್ಯ

ವೈಜ್ಞಾನಿಕ ಮನೋಭಾವ ಎಂಬುದೊಂದು ಜವಾಬ್ದಾರಿಯನ್ನು ಸಾಮಾನ್ಯವಾಗಿ ಮಹಿಳೆಯ ಮೇಲೆಯೇ ಹೊರಿಸಲಾಗುತ್ತದೆ. ಅತ್ತೆಯ (ಮತ್ತು ಮಾವನ) ದಬ್ಬಾಳಿಕೆಯಲ್ಲಿ ಸೊಸೆ ಅಂಧ ಶ್ರದ್ಧೆಯ ಆಚರಣೆಗಳನ್ನು ಅನುಸರಿಸಲೇಬೇಕಾಗುತ್ತದೆ; ಪ್ರತಿಭಟಿಸುವುದು ಅಗೌರವ; ಸಂಸಾರದಲ್ಲಿ ಹುಳಿ ಹಿಂಡಿದಂತಾಗುತ್ತದೆ ಎಂಬುದು ಸಾಮಾಜಿಕ ಸತ್ಯ ಇನ್ನು ಮುಂದಿನ ಪೀಳಿಗೆಯ ಕತೆ ಏನು? ಮಾತು ಕಲಿಯಲು ಆರಂಭಿಸಿದಾಗಲಿಂದಲೇ ರಾಹು ಕಾಲ ಎಂಬಂತಹ ಪದವನ್ನು ಕೇಳುತ್ತಾ ಬೆಳೆವ ಹೆಣ್ಣು (ಗಂಡು ಕೂಡ) ಅದನ್ನು ತಲೆಯಿಂದ ಒದ್ದು ಓಡಿಸುವುದಾದರೂ ಹೇಗೆ? ಅದೇ ರೀತಿ ತಿಳುವಳಿಕೆಯಿಲ್ಲದೇ ದೇವಸ್ಥಾನದೊಳಕ್ಕೆ ಕಾಲಿಟ್ಟು ಒದೆ ತಿಂದ ಮಗು ಮುಂದೆ ಎಂದಾದರೂ ಆ ದಿಕ್ಕಿಗೆ ತಲೆ ಹಾಕುವುದೇ? ಮೂಢನಂಬಿಕೆಗಳ ಕುರಿತು ತಿಳುವಳಿಕೆಗಳನ್ನು ಮೂಡಿಸಬೇಕಾದದ್ದು ಶೈಶವದಲ್ಲಿ. ಇದು ತಾಯಿಯ ಜವಾಬ್ದಾರಿ ಮಾತ್ರವೇ ಆಗುವುದಿಲ್ಲ. ತಂದೆ, ಅಜ್ಜಿ, ತಾತ, ಶಿಕ್ಷಕರು ಎಲ್ಲರದೂ ಆಗುತ್ತದೆ.

ಇಲ್ಲೊಂದು ಘಟನೆಯನ್ನು ಉದಾಹರಿಸಬಹುದು. ದಿಕ್ಕಿಲ್ಲದ ಮಹಿಳೆಯರಿಗಾಗಿ ವೃತ್ತಿ ತರಬೇತಿ ನೀಡಲು ಸ್ಥಾಪನೆಯಾಗಿದ್ದ ಸಂಸ್ಥೆಯೊಂದು ಪ್ರತಿ ವರ್ಷ ಅದರ ದಾನಿಗಳಿಗೆ ಮತ್ತು ಹಿತೈಷಿಗಳಿಗೆ ಕೊಡುವುದಕ್ಕಾಗಿ ಕ್ಯಾಲೆಂಡರ್ ಅನ್ನು ಛಾಪಿಸುತ್ತಿತ್ತು. ಇದಕ್ಕಾಗಿ ನಕ್ಷತ್ರಗಳ ನಕ್ಷೆಯನ್ನು ಕೇಳಿಕೊಂಡು ನನ್ನ ಬಳಿ ವ್ಯವಸ್ಥಾಪಕರು

ಬಂದರು. ಹಳೆಯ ಕ್ಯಾಲೆಂಡರ್‌ನ್ನು ತೋರಿಸಿದರು. ಅದರಲ್ಲಿ ಯಥಾಪ್ರಕಾರ "ಹಲ್ಲಿ ಶಕುನ ಫಲ" ಮತ್ತು "ನಕ್ಷತ್ರದೋಷ"ಗಳು ಇದ್ದವು. ಅಂದರೆ ಯಾವ್ಯಾವ ನಕ್ಷತ್ರದಲ್ಲಿ ಹುಟ್ಟಿದವಳಿಗೆ ಅತ್ತೆ ಇಲ್ಲದ ಮನೆ, ಮಾವ ಇಲ್ಲದ ಮನೆ..... ಇಂತಹವುಗಳ ಪಟ್ಟಿಯೇ ಇತ್ತು. ಇದನ್ನು



ತೆಗೆದು ಹಾಕಿದಲ್ಲಿ ಮಾತ್ರ ನಾನು ನಕ್ಷೆ ಕೊಡುವುದಾಗಿ ಹೇಳಿದೆ. ಅವರು ಒಪ್ಪಿದರು. ಆದರೆ ಅವರ ಸಂಸ್ಥೆಯಲ್ಲಿದ್ದ ಹೆಚ್ಚಿನ ಮಹಿಳೆಯರು ಕ್ಯಾಲೆಂಡರ್‌ನಲ್ಲಿ ಕೊಟ್ಟಿದ್ದ ವಿವಿಧ ರೀತಿಯ ದೋಷಗಳಿಂದಾಗಿ ಅವಿವಾಹಿತರಾಗಿ ಉಳಿದು ತಂದೆ ತಾಯಿ ಗತಿಸಿದ ಮೇಲೆ ಬೀದಿಗೆ ಬಿದ್ದವರಾಗಿದ್ದರು. ಕ್ಯಾಲೆಂಡರ್‌ನಲ್ಲಿ ಈ ಅಂಶವನ್ನು ತೆಗೆದು ಹಾಕಿದ್ದರಿಂದ ಏನೂ ಅನಾಹುತವಾಗಲಿಲ್ಲ.

ಇದೇ ಮನೋಭಾವವನ್ನು ಎಲ್ಲ ಮಾಧ್ಯಮಗಳು ಮತ್ತು ಪತ್ರಿಕೆಗಳವರೂ ಬೆಳೆಸಿಕೊಂಡರೆ ಪುಟಗಳು, ಸಮಯ, ಮಾನವ ಸಂಪನ್ಮೂಲ ಎಲ್ಲವನ್ನೂ ಉಳಿಸಿ ಮೂಢನಂಬಿಕೆಗಳನ್ನು ತೊಡೆದುಹಾಕುವತ್ತ ದಿಟ್ಟ ಹೆಜ್ಜೆ ಇಟ್ಟಂತಾಗುತ್ತದೆ.

# ವಿಜ್ಞಾನಿ - ಮೇಲಿ ಕ್ಯೂಲಿ

-ಡಾ. ಸರೋಜನಿ ಸಂತ

ವ್ಯಕ್ತಿ ತಾನು ರೂಪಿಸಿದ ಸಮಾಜದ ಬಗೆಗೆ ವಸ್ತುನಿಷ್ಟ ಅಧ್ಯಯನ ಕೈಗೊಂಡು ಸಮಾಜದ ವಿಭಿನ್ನ ಆಯಾಮಗಳನ್ನು ಆಲೋಚನೆಗೆ ಹಚ್ಚುವಂತೆ ಮಾಡುವ ಪ್ರಕ್ರಿಯೆ ಸಾಮಾಜಿಕ ಚಿಂತನೆಯನ್ನು ಒಳಗೊಳ್ಳುತ್ತದೆ. ಸಾಮಾಜಿಕ ಚಿಂತನೆಯನ್ನು ಬರವಣಿಗೆ ಮೂಲಕ ದಾಖಲಾಗುವ ಕ್ರಮ ಒಂದು ಬಗೆಯಾದರೆ, ವ್ಯಕ್ತಿ ತನ್ನ ವಾಸ್ತವ ಜೀವನದಲ್ಲಿ ಸಾಮಾಜಿಕ ಚಿಂತನೆಯ ರೂಪರೇಷೆಗಳನ್ನು ಬದುಕಿ ತೋರಿಸುವುದು ಇನ್ನೊಂದು ಬಗೆಯಾಗಿದೆ. ಈ ಹಿನ್ನೆಲೆಯಲ್ಲಿ ಸ್ತ್ರೀವಾದ ಸಾಮಾಜಿಕ ಚಿಂತನೆಯ ಒಂದು ನೆಲೆಯಾಗಿದ್ದು 'Feminism is a way of life' ಎಂದು ಹೇಳಲಾಗಿದೆ. ಈ ಮಾತಿಗೆ ಮೇರಿ ಕ್ಯೂರಿಯ ವ್ಯಕ್ತಿತ್ವ ಮತ್ತು ಜೀವನ ಪ್ರತೀಕವಾಗಿದೆ. ಸ್ತ್ರೀವಾದಿ ಸಿದ್ಧಾಂತ 'ಮಹಿಳೆಯ ವೈಯಕ್ತಿಕ ಜೀವನಕ್ಕೆ ಒಳಗಾಗಿದೆ' ಎಂದು ಹೇಳುತ್ತದೆ. ಈ ಮಾತನ್ನು ವೈಯಕ್ತಿಕ ನೆಲೆಯಲ್ಲಿ ಅರ್ಥೈಸದೆ ಮಹಿಳಾ ಸಮುದಾಯದ ಹಿನ್ನೆಲೆಯಲ್ಲಿ ಅರ್ಥೈಸಬೇಕು. ಇದಕ್ಕೆ ವಿರುದ್ಧವಾದ ಪೋಲೆಂಡಿನಲ್ಲಿ ಮಹಿಳೆಯರಿಗೆ ವಿಜ್ಞಾನ ನಿಷಿದ್ಧವಾಗಿದ್ದ ಕಾಲದಲ್ಲಿಯೇ ವಿಜ್ಞಾನ ಕ್ಷೇತ್ರದಲ್ಲಿ ಅಸಾಧಾರಣವಾದದ್ದನ್ನು ಸಾಧಿಸಿ ತೋರಿಸಿದ ಮೇರಿ ಕ್ಯೂರಿ ಮಹಿಳಾ ಸಮುದಾಯಕ್ಕೆ ಮಾದರಿಯಾಗಿದ್ದಾಳೆ. ಆಕೆ ವಿಜ್ಞಾನದಲ್ಲಿ ತಳೆದ ಅಪಾರ ಆಸಕ್ತಿಯಿಂದಾಗಿ ದೇಶ ಬಿಟ್ಟು ಕಷ್ಟಗಳನ್ನು ಎದುರಿಸಿ ಕೋಶಗಳನ್ನು ಓದಿ, ವಿಜ್ಞಾನ ಕ್ಷೇತ್ರವೇ ಬೆರಗಾಗುವಂತೆ ಸಾಧನೆ ಮಾಡಿ ತೋರಿಸಿದ್ದಾಳೆ.

ಪೋಲೆಂಡ್ ಪರಾಡಳಿತದ ಪದತಲದಲ್ಲಿ ನಲುಗಿದ ಸಣ್ಣದೇಶವಾಗಿತ್ತು. ಅಲ್ಲಿನ ಬ್ಲಾಡಿಸ್ಲಾವ್ ಸ್ಕ್ಲೋಡೋವ್‌ಸ್ಕಿ ಹಾಗೂ ಬೊನಿಸ್ಲಾವಾ ಸ್ಕ್ಲೋಡೋವಸ್ಕಿ ದಂಪತಿಗಳಿಗೆ ಮೇರಿ ಕ್ಯೂರಿ ಐದನೆಯ ಮಗುವಾಗಿ ಜನಿಸಿದಳು. ಕಡುಬಡತನದಲ್ಲಿ ದುಡಿದು ಕಲಿಕೆಯ ಪ್ರತಿಕೂಲ ಪರಿಸ್ಥಿತಿಗಳನ್ನು ಮೀರಿ ಜಗತ್‌ಪ್ರಸಿದ್ಧ ವಿಜ್ಞಾನಿಯಾದಳು. ಮೇರಿಯ ಜೀವನ ಸಾಧನೆ ಮಹಿಳಾ ಸಮುದಾಯಕ್ಕೊಂದು ವಿಭಿನ್ನ ಮಾದರಿಯಾಗಿದೆ. ಮಹಿಳೆ ಎಂದರೆ ದ್ವಿತೀಯ ದರ್ಜೆಯ ಪ್ರಜೆ ಎಂದು ಪರಿಗಣಿಸಿದ ಪುರುಷ ಸಮಾಜದಲ್ಲಿ ಮೇರಿ ಕ್ಯೂರಿ ಒಬ್ಬ ಮಹಿಳೆಯಾಗಿ ಪುರುಷರಿಗಿಂತಲೂ ಹೆಚ್ಚಿನ ಸಾಧನೆ ಮಾಡಿದ್ದಾಳೆ. ಅವಳ ಸಾಧನೆ ಕೇವಲ ಮಹಿಳಾ ಸಮುದಾಯಕ್ಕೆ ಮಾತ್ರ ಮಾದರಿಯಾಗಿರದೆ, ಸಮಸ್ತ ಮಾನವ ಕುಲಕ್ಕೆ ಪ್ರೇರಣೆಯಾಗಿದೆ. ಪೋಲೆಂಡಿನಲ್ಲಿ ಜನಸಾಮಾನ್ಯರಿಗೆ ವಿಜ್ಞಾನ ಕ್ಷೇತ್ರ ನಿಷೇಧಿತವಾಗಿದ್ದು ವಿಜ್ಞಾನ ಹೆಣ್ಣುಮಕ್ಕಳು ತಲೆ ಕೆಡಿಸಿಕೊಳ್ಳಬಾರದ ವಿಷಯ ಎಂಬ ಪೂರ್ವಾಗ್ರಹ ನೆಲೆಸಿತ್ತು. ಮೇರಿಯ ಅದಮ್ಯ ಕುತೂಹಲ ವೈಜ್ಞಾನಿಕ ಶೋಧನೆಗೆ ತುಡಿಯುತ್ತಿತ್ತು. ಪ್ರತಿಯೊಂದು ವಿಚಾರವನ್ನು ಕೂಲಂಕುಶವಾಗಿ ಅದರ ಪರಿಪೂರ್ಣ ರೂಪದಲ್ಲಿ ಅರಿಯುವ ತೀವ್ರತೆ ಆಕೆಗಿತ್ತು. ಪೋಲೆಂಡಿನ ನಿಷೇಧಿತ

ಕಾಯ್ದೆಗಳಿಂದ ಜನಸಾಮಾನ್ಯರನ್ನು ಬಿಡುಗಡೆ ಮಾಡುವ, ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಹಿಡಿದಿಟ್ಟ ಕುರುಡು ಕಾನೂನುಗಳಿಂದ ಹೆಣ್ಣುಮಕ್ಕಳನ್ನು ಮುಕ್ತಗೊಳಿಸುವ ಬಯಕೆ ಮೇರಿಯ ಕುಟುಂಬಕ್ಕಿತ್ತು. ಝಾರ್ (ದೊರೆ) ಆಡಳಿತದಡಿಯಲ್ಲಿದ್ದ ಪೋಲೆಂಡ್ ಮಹಿಳೆಯರಿಗೆ ಉನ್ನತ ಶಿಕ್ಷಣವನ್ನು ನಿಷೇಧಿಸಿದ್ದು ಅಲ್ಲಿಯ ವಿಶ್ವವಿದ್ಯಾಲಯಗಳು ಮಹಿಳೆಯರಿಗೆ ಪ್ರವೇಶ ನಿರಾಕರಿಸಿದ್ದವು. ಮೇಧಾವಿ ಹೆಣ್ಣುಮಕ್ಕಳು ಉನ್ನತ ವ್ಯಾಸಂಗ ಮಾಡಲು ವಿದೇಶಿ ವಿಶ್ವವಿದ್ಯಾನಿಲಯಕ್ಕೆ ತೆರಳಬೇಕಿತ್ತು. ಉನ್ನತ ವ್ಯಾಸಾಂಗದ ಕನಸು ಕಂಡಿದ್ದ ಮೇರಿಗೆ ಬಡತನದಲ್ಲಿ ಕಳೆದುಹೋಗುವ ಆತಂಕ ಇರಲಿಲ್ಲ. ತೀವ್ರ ಆಸಕ್ತಿ ಮತ್ತು ಕಠಿಣಶ್ರಮದಿಂದ ಕೊಡುಗೆ ನೀಡಬಲ್ಲ, ಸಾಧನೆ ಮೆರೆಯಬಲ್ಲ ಭರವಸೆ ಆಕೆಗಿತ್ತು. ದುಡಿದು ಬಾಳುವ, ಸಂಕಷ್ಟ ಎದುರಿಸುವ, ಸಮಸ್ಯೆ ನಿವಾರಿಸಿಕೊಳ್ಳುವ ಗತ್ತು ಎದೆಗಾರಿಕೆ ಅವಳಲ್ಲಿ ಅಚಲವಾಗಿತ್ತು. ದಿವಂಗತ ಮಾಜಿ ರಾಷ್ಟ್ರಪತಿಗಳಾದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಹೇಳುವಂತೆ 'Low aim is crime' ಎಂಬ ಮನೋಪ್ರವೃತ್ತಿಗೆ ಆಕೆ ಸೇರಿದವಳಾಗಿದ್ದಳು. ಹೆಣ್ಣುಮಕ್ಕಳು ಹೆಜ್ಜೆ ಇಡದ ಕ್ಷೇತ್ರದಲ್ಲೆಲ್ಲ ಮೇರಿ ತನ್ನ ಛಾಪು ಮೂಡಿಸಿದಳು. ಮೇರಿಗೆ ಮೇರಿಯೇ ಸಾಟಿಯಾಗಿದ್ದು ಅವಳು ಹೋಲಿಕೆಗೆ ಸಿಗದ ಸಾಧನೆಯ ಪಥದಲ್ಲಿ ಮುನ್ನಡೆದಿದ್ದಳು.

ದುಡಿಮೆ ಅವಳ ಬದುಕಿನ ಅನಿವಾರ್ಯವಾಗಿತ್ತು. ಅವಳ ಎದೆಯಲ್ಲಿ ಪೋಲೆಂಡ್ ಬಗೆಗಿನ ಒಲವು ಮಿಡಿತವಿತ್ತು. ಸ್ವಾತಂತ್ರ್ಯದ ಕಸುವಿತ್ತು ಕನಸಿತ್ತು. ಪೋಲೆಂಡ್‌ನಲ್ಲಿ ಕೆಲವರು ದಂಗೆ ಎದ್ದ ಬದುಕನ್ನು ಪಣಕ್ಕಿಟ್ಟಿದ್ದರೆ ಮತ್ತೆ ಕೆಲವರು ಧರ್ಮದ ಪವಾಡಗಳನ್ನು ನಿರೀಕ್ಷಿಸುತ್ತಿದ್ದರು. ಮತ್ತಷ್ಟು ಮಂದಿ ಆತಂಕವಾದಕ್ಕೆ ಈಡಾಗಿದ್ದರು. ಅದೇ ಸಮಯದಲ್ಲಿ ವಿಚಾರವಂತರ ಬಲವಾದ ಸಂಘಟನೆ ಆರಂಭವಾಗಿತ್ತು. ದೇಶದ ಸ್ವಾತಂತ್ರ್ಯ ಯಾರಿಗೂ ತತ್‌ಕ್ಷಣದಲ್ಲಿ ಕೈಗೆಟುಕುವ ಕನಸಾಗಿರಲಿಲ್ಲ. ವಿದ್ಯಾವಂತ ವರ್ಗ ಮಾತ್ರ ತಮ್ಮ ರಾಷ್ಟ್ರದ ಬೌದ್ಧಿಕ ಸಂಪತ್ತನ್ನು ಹೆಚ್ಚಿಸುವ ಪ್ರತಿಯೊಬ್ಬನ ಎದೆಯಲ್ಲಿ ಜ್ಞಾನದ ಬೆಳಕನ್ನು ಹಚ್ಚಿಡುವ ಆಶಾವಾದಿಯಾಗಿತ್ತು. ಮೇರಿ ಈ ಆಶಾವಾದಿಗಳ ಗುಂಪಿಗೆ ಸೇರಿದವಳಾಗಿದ್ದಳು. ತನ್ನ ಬದುಕಿನ ದುಡಿಮೆಯನ್ನು ತಾನೇ ಮಾಡುತ್ತಿದ್ದಳು. ದುಡಿಮೆಯ ಅನಿವಾರ್ಯತೆಯ ನಡುವೆಯೂ ಮೇರಿ ಬಡ ಹೆಂಗಸರಿಗೆ ಪಾಠ ಹೇಳಿಕೊಡುತ್ತಿದ್ದಳು. ಮಹಿಳೆಯರ ಶಿಕ್ಷಣ ಕುರಿತ ನಿಲುವು ಅಚಲವಾಗಿತ್ತು. ಮಹಿಳೆಯರಿಗೆ ವಿಜ್ಞಾನವನ್ನು ಗುಪ್ತವಾಗಿ ರಹಸ್ಯ ತರಗತಿಯಲ್ಲಿ ಹೇಳಿಕೊಡುತ್ತಿದ್ದಳು. ಪಾಠ, ಪ್ರವಚನ, ಹಸ್ತಪ್ರತಿಗಳು, ತಮ್ಮದೇ ರೀತಿಯಲ್ಲಿ ಮಹಿಳಾ ಜಾಗೃತಿ ಪರಿಕರಗಳಾಗಿದ್ದವು. ಮಹಿಳೆಯರಲ್ಲಿ ಅರಿವು, ಜಾಗೃತಿ ನೀಡುವುದು ಚಳುವಳಿಯ ಒಂದು ಭಾಗವಾಗಿತ್ತು.

ಪ್ಯಾರಿಸ್‌ಗೆ ಹೋಗಿ ವೈದ್ಯಶಾಸ್ತ್ರ ಓದುವುದು ಅಕ್ಕ ಬೋನ್ಯಾಳ ಕನಸಾಗಿತ್ತು. ಮೇರಿ ತನ್ನ ವೈಯಕ್ತಿಕ ಸಾಧನೆಗೆ ಮಾತ್ರ ಸೀಮಿತವಾಗಿರದೇ ತನ್ನ ಅಕ್ಕನ ಆಶೆ ಆಕಾಂಕ್ಷೆಗಳಿಗೂ ನೀರೆದಳು. ತನ್ನ ದುಡಿಮೆಯ ಹಣವನ್ನು ಅಕ್ಕಳ ವಿದೇಶಿ ವಿದ್ಯಾಭ್ಯಾಸಕ್ಕೆ ಮೀಸಲಿಟ್ಟಳು. ಅಕ್ಕ ಬೋನ್ಯಾಳನ್ನು ಪ್ಯಾರಿಸ್‌ಗೆ ಕಳುಹಿಸಿ ವೈದ್ಯಕೀಯ

ಶಿಕ್ಷಣಕ್ಕೆ ದಾಖಲಿಸಿದಳು. ಮೇರಿ ಪೋಲೆಂಡ್‌ನ ದೂರದ ಹಳ್ಳಿಗಳಲ್ಲಿ ಪಾಠ ಹೇಳಿಕೊಡುವ ಕೆಲಸ ಆರಂಭಿಸಿದಳು, ಬೇಸಿಗೆಯ ರಜೆಯನ್ನೂ ಬಿಡದೆ ದುಡಿದಳು. ಅವಳಿಗೆ ದುಡಿದ



ಹಣದಲ್ಲಿ ಚಿಕ್ಕಾಸು ಕೂಡ ಅಗತ್ಯವಾಗಿತ್ತು. ವಿಶ್ರಾಮವೆಂಬುದು ಅವಳ ಮನಸ್ಸಿಗೆ ಸುಳಿಯದ ದೂರದ ಕಲ್ಪನೆಯಾಗಿತ್ತು. ಮಕ್ಕಳಿಗೆ ಕಲಿಸುತ್ತಿದ್ದ ವಿಷಯಗಳಲ್ಲೂ ಆಕೆಗೆ ಆಸಕ್ತಿ ಕುದುರಿ ಅವುಗಳ ಆಮೂಲಾಗ್ರಹ ಅಧ್ಯಯನಕ್ಕೆ ತೊಡಗಿದಳು. ನೆರೆಯ ಸಕ್ಕರೆ ಕಾರ್ಖಾನೆಯ ಗ್ರಂಥಾಲಯದಲ್ಲಿದ್ದ ಭೌತಶಾಸ್ತ್ರ, ಸಮಾಜಶಾಸ್ತ್ರಗಳನ್ನೆಲ್ಲ ತಂದು ಓದಿದಳು. ತಂದೆಗೆ ಬರೆದ ಪತ್ರಗಳ ಮುಖೇನ ತನ್ನ ಗಣಿತ ಜ್ಞಾನವನ್ನು ಹಿಗ್ಗಿಸಿಕೊಂಡಳು. ತಾನು ಕಾಣದ ಭವಿಷ್ಯಕ್ಕೆ ಸಾಧ್ಯವಿದ್ದಷ್ಟೂ ತಯಾರಿ ಮಾಡಿಕೊಳ್ಳುತ್ತಿದ್ದಳು. ಉನ್ನತ ಶಿಕ್ಷಣ ಪಡೆಯಬೇಕೆಂಬುದು ಮೇರಿಯ ದೃಢನಿರ್ಧಾರವಾಗಿತ್ತು. ಅದನ್ನು ಸಾಧಿಸಲು ಮೇರಿ ಕಡುಕಷ್ಟ ಪಡುತ್ತಿದ್ದಳು. ಸ್ತ್ರೀಯರು ಸಾಂಪ್ರದಾಯಿಕ ಪಾತ್ರಗಳಿಂದ ಹೊರಬರಬೇಕು ಎಂಬುದನ್ನು ಮೇರಿ ತನ್ನ ಜೀವನದಲ್ಲಿ ಸಾಧಿಸಿ ತೋರಿಸಿದ್ದಾಳೆ. ತನ್ನ ಶಿಕ್ಷಣದ ಸಲುವಾಗಿ ತಾನು ತಂದೆಗೆ ಭಾರವಾಗದೆ ತನ್ನ ಶಿಕ್ಷಣಕ್ಕಾಗಿ ತಂದೆಯ ಬಳಿ ಹಟ ಹಿಡಿಯದೆ ತಾನೇ ಕಷ್ಟಪಡುತ್ತಿದ್ದಳು.

ಅಕ್ಕ ತಂಗಿಯರ ಅರಿವಿನ ದಾಹ ಪರಸ್ಪರರ ಬದುಕನ್ನು ಅಭಿವೃದ್ಧಿಪಡಿಸಿತು. ಅಕ್ಕನ ಓದು ಮುಗಿದೊಡನೆ ತಂದಿಯ ಓದು ಪ್ರಾರಂಭವಾಯಿತು. ಮೇರಿ ಪ್ಯಾರಿಸ್ ನೆಲದ ಸ್ವತಂತ್ರ ಸ್ವಚ್ಛಂಧ ಹವೆಯನ್ನು ಹೀರಿಕೊಂಡಳು. ಸೋರ್ಬನ್ ವಿಶ್ವವಿದ್ಯಾಲಯದಲ್ಲಿ ೧೮೯೧ ನವೆಂಬರ್ ೩ ರಂದು ವಿಜ್ಞಾನ ತರಗತಿಗಳು ಪ್ರಾರಂಭವಾದವು. ಅವು ವಿಜ್ಞಾನವನ್ನು ಹಿಗ್ಗಿನ ತಾಣವನ್ನಾಗಿಸಿದ್ದ ತರಗತಿಗಳಾಗಿದ್ದವು ಅಲ್ಲಿದ್ದ ವ್ಯವಸ್ಥಿತ ಪ್ರಯೋಗಶಾಲೆ, ರಾಶಿ ರಾಶಿ ಪುಸ್ತಕಗಳಿದ್ದ ಗ್ರಂಥಾಲಯ ಮೇರಿಯ ಉತ್ಸಾಹವನ್ನು ಇಮ್ಮಡಿಸಿತು, ಮುಮ್ಮಡಿಸಿತ್ತು. ಅದು ಆಕೆಯ ಹಲವು ವರ್ಷಗಳ ತಪಸ್ಸು ಫಲಿಸಿದಂತಿತ್ತು. ಮೇರಿಯ ಮುಂದೆ ಕದತೆರೆದ ವಿಜ್ಞಾನದ ಬ್ರಹ್ಮಾಂಡವಿತ್ತು. ಅನಿವಾರ್ಯ ದುಡಿತಕ್ಕೆ ಹಚ್ಚಿಕೊಂಡು ದಿಕ್ಕೆಟ್ಟಿದ್ದ ಮೇರಿ ತನ್ನೆಲ್ಲ ಆಸಕ್ತಿ ಉತ್ಕಟತೆಯನ್ನು ವಿಜ್ಞಾನವೊಂದಕ್ಕೆ ಹಚ್ಚಿ ಮುನ್ನಡೆದಿದ್ದಳು. ಅದುಮಿಟ್ಟಿದ್ದ ಹಲವಾರು ವರ್ಷಗಳ ಅವಳ ಅರಿವಿನ ಹಸಿವು ಹಿಗ್ಗಿ ಬಾಯ್ದೆರೆದ್ದಿತ್ತು. ವಿಜ್ಞಾನದ ಜ್ಞಾನವನ್ನೆಲ್ಲ ಒಂದೇ ಬೊಗಸೆಯಲ್ಲಿ ಕುಡಿಯುವ ಅದಮ್ಯ ಬಯಕೆ ಅವಳದಾಗಿತ್ತು. ಗಣಿತಶಾಸ್ತ್ರ, ಭೌತಶಾಸ್ತ್ರ ಎರಡರಲ್ಲೂ ಸ್ನಾತಕೋತ್ತರ ಪದವಿ ಪಡೆದಳು. ಅವಳ ಬದುಕಿನಲ್ಲಿ ರಂಗು ರಂಗಿನ ಬಣ್ಣದ ಬದುಕಿರದೆ ಕಪ್ಪು ಬಿಳುಪಿನ ಬಡತನದ ಸರಳರೇಖೆ ಇತ್ತು. ಸರಳ ಜೀವನದಲ್ಲಿ ಸಾಧನೆಯ ಹಾದಿ ಮೈ ತಳೆಯುತ್ತಿತ್ತು. ಕಡು ಕಷ್ಟವಾದರೂ ಇಷ್ಟ ಪಟ್ಟಿದ್ದನ್ನು ಪಡೆಯುವ ಕಡೆಗೆ ಅವಳ ನಡೆ ಸಾಗಿತ್ತು.

'ಮೇಧಾವಿ ಮಹಿಳೆಯರು ಅತಿ ವಿರಳವಾಗಿರುತ್ತಾರೆ, ಸಾಧನೆಯ ಹಾದಿಯಲ್ಲಿ ಪುರುಷರಿಗೆ ದೊಡ್ಡ ತೊಡಕಾಗುತ್ತಾರೆ' ಹೀಗೆ ಭೌತರಸಾಯನ ಶಾಸ್ತ್ರಗಳ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಪಿಯರ್ ಕ್ಯೂರಿ ತನ್ನ ದಿನಚರಿಯಲ್ಲಿ ಬರೆದುಕೊಂಡಿದ್ದನು. ಇಂಥ ಮನೋಭಾವದ ಪಿಯರ್ ಪರಿಚಯ ಮೇರಿಗಾಯಿತು. ಪಿಯರ್ ಪ್ಯಾರಿಸ್ ನೆಲದವನಾಗಿದ್ದರೂ ಆತನ ಕುಟುಂಬದ ಆರ್ಥಿಕ ಸ್ಥಿತಿ ಮೇರಿಯ ಹಾಗೇ ಕಡುಕಷ್ಟದ್ದಾಗಿರಲಿಲ್ಲ. ಆತನಿಗೂ ವಿಜ್ಞಾನದಲ್ಲಿ ಅಗಾಧ ಆಸಕ್ತಿಯಿತ್ತು. ಅವರಿಬ್ಬರ ನಡುವೆ ದೇಶ, ಭಾಷೆ, ಪರಿಸರ, ಸಂಸ್ಕೃತಿಗಳ ಅಂತರವಿತ್ತಾದರೂ ಅವರಿಬ್ಬರ ವೈಯಕ್ತಿಕ ಹಿನ್ನೆಲೆಯಲ್ಲಿ ಸಾಮ್ಯತೆಯಿತ್ತು. ಅವನದು ಉನ್ನತ ಆದರ್ಶಗಳ ಗೌರವಾನ್ವಿತ



ಕುಟುಂಬವಾಗಿತ್ತು. ಮೇರಿಯಂತೆ ಪಿಯರನಿಗೂ ವಿಜ್ಞಾನ ಕ್ಷೇತ್ರದಲ್ಲಿ ಪ್ರೀತಿಯ ಸೆಳೆತ ಮತ್ತು ಅಗಾಧ ಆಸಕ್ತಿ ಇತ್ತು. ಅವರಿಬ್ಬರಿಗೂ ಅಂಧಶ್ರದ್ಧೆಯಲ್ಲಿ, ಮತಾಚರಣೆಯಲ್ಲಿ, ಸಂಪ್ರದಾಯದಲ್ಲಿ ನಂಬಿಕೆ ಇರಲಿಲ್ಲ. ಅವರು ೧೮೯೫, ಜುಲೈ ೨೬ ರಂದು ಬೆರಳಿಗೆ ಉಂಗುರ ತೊಡಿಸುವ ಕ್ರಿಶ್ಚಿಯನ್ ವಿವಾಹ ಆಚರಣೆಯನ್ನು ಅನುಸರಿಸದೆ ವಿವಾಹವಾಗಿದ್ದರು. ಶುದ್ಧ ಮಾನವ ಪ್ರೇಮಿಗಳಾಗಿದ್ದ ಅವರಿಬ್ಬರೂ ಜಾತಿ, ಮತ, ಧರ್ಮಗಳ ಹಂಗು ತೊರೆದು ಸ್ವತಂತ್ರ ಜೀವಿಗಳಾಗಿದ್ದರು. ಅವರು ತಮ್ಮ ಆಪ್ತರೆದುರು ಕುಟುಂಬ ಸದಸ್ಯರೆದುರು ಸತಿ-ಪತಿಗಳಾಗಿದ್ದರು. ಧರ್ಮ, ಸಂಪ್ರದಾಯ, ಆಚರಣೆಗಳು ಮಹಿಳೆಯನ್ನು ಅಧೀನತೆಗೆ ತಳ್ಳುತ್ತವೆ ಎಂದು ಸ್ತ್ರೀವಾದಿಗಳ ವಾದವಾಗಿದೆ. ಮೇರಿಕ್ಯೂರಿ ಅವನ್ನೆಲ್ಲ ನೇರವಾಗಿ ಧಿಕ್ಕರಿಸಲಿಲ್ಲವಾದರೂ ಪರೋಕ್ಷವಾಗಿ ಅವಳ ಬದುಕು ಸ್ತ್ರೀವಾದಿ ನಿಲುವಿಗೊಂದು ಪ್ರತೀಕವಾಗಿತ್ತು. ಉದಾರವಾದಿ ಸ್ತ್ರೀವಾದಿಯಂತೆ ಇರುವ ವ್ಯವಸ್ಥೆಯಲ್ಲಿಯೇ ಹೊಂದಿಕೊಂಡು ಸಾಧಿಸಿ ತೋರಿಸುವ ಛಲಗಾತಿಯಾಗಿದ್ದಳು. ಒಬ್ಬ ಮಹಿಳೆಯಾಗಿ ಹೊಂದಿಕೊಂಡು ಸಾಧಿಸಿ ತೋರಿಸುವ ಛಲಗಾತಿಯಾಗಿದ್ದಳು. ಒಬ್ಬ ಮಹಿಳೆಯಾಗಿ ಮೇರಿ ಮನೆಯ ಕೆಲಸಗಳಿಗಷ್ಟೇ ಸೀಮಿತವಾಗದೇ ಅಪ್ಪಟ ವಿಜ್ಞಾನಿಯಂತೆ ಪ್ರಯೋಗಶಾಲೆಯಲ್ಲಿ ಶೋಧನೆಗೆ ನಿರತಳಾಗಿದ್ದಳು. ದಿನನಿತ್ಯದ ಕೌಟುಂಬಿಕ ಕೆಲಸ ಕಾರ್ಯಗಳನ್ನು ಶೋಧನೆಗೆ ನಿರತಳಾಗಿದ್ದಳು. ದಿನನಿತ್ಯದ ಕೌಟುಂಬಿಕ ಕೆಲಸಕಾರ್ಯಗಳನ್ನು ಹಗುರುಗೊಳಿಸುವ ಮತ್ತು ಸಮಯ ಉಳಿಸುವ ಕಲೆ ಅವಳಲ್ಲಿತ್ತು. ಹಣವಿಲ್ಲದೆಯೂ ಜೀವನ ನಡೆಸುವುದರಲ್ಲಿ ಪರಿಣಿತಳಾಗಿದ್ದಳು. ಅತ್ಯಂತ ಕಡಿಮೆ ಸೌಲಭ್ಯದಲ್ಲೂ ಸರ್ವಸ್ವವನ್ನು ತೂಗಿಸಬಲ್ಲ ಕುಶಲೆಯಾಗಿದ್ದಳು. ಬಡತನದ ಬವಣೆಯನ್ನು ಉಂಡಿದ ಅವಳಿಗೆ ಹಣದ ಹುಚ್ಚಿನ ಅಪಾಯವೂ ಗೊತ್ತಿತ್ತು. ಹಾಗಾಗಿ ಅವಳ ವ್ಯಕ್ತಿತ್ವದ ಕೇಂದ್ರಬಿಂದುವಿನಲ್ಲಿ ವಿಜ್ಞಾನ ಕುರಿತ ಆಸಕ್ತಿ ಒಂದು ಚೂರು ಕರಗದೆ, ಕುಂದದೇ ಗಟ್ಟಿಯಾಗುಳಿದಿತ್ತು. ಮಹಿಳೆಯರು ಮನೆಗೆಲಸಕ್ಕೆ

ಮಾತ್ರ ಸೀಮಿತವಾಗದೇ ಮನೆಯಿಂದ ಹೊರಬಂದು ಮನೆಯಾಚೆಗಿನ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು ಎಂಬ ಉದಾರವಾದಿ ಸ್ತ್ರೀವಾದಿ ಸಿದ್ಧಾಂತಿಯಂತೆ ಮೇರಿಯ ಜೀವನದ ನಿಲುವೂ ಆಗಿತ್ತು.

ಮೇರಿಗೆ ಪಿಯರ್ ಕ್ಯೂರಿ ಸಾಂಪ್ರದಾಯಿಕ ಗಂಡನಾಗಿರದೇ ಅವನೊಬ್ಬ ಸ್ನೇಹಿತ, ಮಾರ್ಗದರ್ಶಕ, ಆತ್ಮೀಯ ಸಂಗಾತಿಯಾಗಿದ್ದನು. ಮೇರಿಯ ತೀವ್ರಗತಿಯ ಸಂಶೋಧನೆಯನ್ನು ಅತಿನಿಕಟದಿಂದ ಗಮನಿಸಿದ್ದ ಪಿಯರ್ ಕ್ಯೂರಿ ಆಕೆಯ ಕೆಲಸದಲ್ಲಿ ನೇರವಾಗಿ ಪಾಲ್ಗೊಳ್ಳದಿದ್ದರೂ ಪ್ರಶಂಸೆ ಪ್ರೋತ್ಸಾಹದ ಮಾತುಗಳಿಂದ ಹುರಿದಂಬಿಸುತ್ತಿದ್ದನು. ಅವನು ತನ್ನ ಸ್ವಂತ ಸಂಶೋಧನೆಯನ್ನು ತೊರೆದು ಮೇರಿಯ ಮೂಲಧಾತುವಿನ ಹುಡುಕಾಟದಲ್ಲಿ ಜೊತೆಯಾದನು. ಜಗತ್ತಿನಲ್ಲಿ ಇಂತಹ ಸಂಗಾತಿಗಳು ಇರುವುದು ಅತಿವಿರಳವೆಂದು ಹೇಳಬೇಕು. ಪ್ರೇಮದಲ್ಲಿ ಒಂದಾದ ಈ ಅದ್ವಿತೀಯ ದಂಪತಿಗಳು ಭೌತವಿಜ್ಞಾನದ ಹೊಸ ಅಧ್ಯಾಯ ಬರೆಯುವುದರಲ್ಲೂ ಜೊತೆಯಾಗಿದ್ದರು. ಎರಡು ಮಿದುಳು, ನಾಲ್ಕು ಕೈಗಳು ಸೇರಿ ಒಂದೇ ಕೆಲಸವನ್ನು ಮುಳುಗಿರುತ್ತಿದ್ದವು. ಅವರಿಬ್ಬರ ಸಾಂಗತ್ಯ ಕನಸನ್ನು ದಿಟವಾಗಿಸುವ ಹಟದಲ್ಲಿತ್ತು. ಅವರಿಬ್ಬರೂ ಪ್ರತಿಯೊಂದು



ವಿಷಯದಲ್ಲೂ ಪಾಲುದಾರಿಕೆ ಪಡೆದು ಪರಿಪೂರ್ಣರಾಗಿದ್ದರು. ಅವರ ಜೋಡಿ ಸಂಶೋಧನೆಯಲ್ಲಿ, ದುಡಿಮೆಯಲ್ಲಿ ಒಂದಾಗಿತ್ತು. ಯಾರಿಂದಲೂ ಯಾವುದರಿಂದಲೂ ಬೇರೆ ಮಾಡಲಾಗದ ಅವರಿಬ್ಬರ ಸಾಂಗತ್ಯ ಒಬ್ಬರೊಬ್ಬರಲ್ಲೂ ಐಕ್ಯತೆ ಸಾಧಿಸುವ ಮಟ್ಟ ತಲುಪಿತ್ತು. ೧೮೯೮ರ ಜುಲೈ ಹೊತ್ತಿಗೆ ಪಿಚ್‌ಗ್ಲೆಂಡಿನಲ್ಲಿ ಎರಡು ಹೊಸ ಮೂಲಧಾತುಗಳ ಇರುವು ಅವರಿಗೆ ಕಂಡುಬಂತು. ಅದರಲ್ಲೊಂದರ ಇರುವನ್ನು ಅವರ ಪ್ರಯೋಗಗಳು ನಿಖರವಾಗಿ ತೋರಿದವು. ಇದಕ್ಕೊಂದು ಹೆಸರಿಡು ಎಂದು ಮೇರಿಗೆ ಪಿಯರ್ ಕ್ಯೂರಿ ಸಹಜವಾಗಿ ಹೇಳಿದನು ಮೇರಿಯ ಮನಸ್ಸು ತನ್ನ ತಾಯ್ನಾಡಿನತ್ತ ಹರಿದಾಡುತ್ತಿತ್ತು. ಭೂಪಟದಿಂದ ಅಳಿಸಿ ಹಾಕಿದ್ದ ಪೋಲೆಂಡ್‌ನ್ನು 'ಪೊಲೋನಿಯಂ' ಎಂದು ಉಸುರಿದಳು. ಅದೇ ಹೆಸರು ಆ ಹೊಸ ಮೂಲ ಧಾತುವಿನ ಹೆಸರಾಗಿತ್ತು. ಮೇರಿಯ ತಾಯ್ನಾಡಿನ ಅಭಿಮಾನ ಇಡೀ ಜಗತ್ತಿಗೆ ಪ್ರಕಟವಾಗಿತ್ತು.

ಮೇರಿ ಕ್ಯೂರಿ ಮತ್ತು ಪಿಯರ್ ಕ್ಯೂರಿಗೆ ಉದ್ಯೋಗ ತಿಂಗಳ ಸಂಬಳ ತರುವ ಆದಾಯವಾಗಿರದೇ ದೇಹ, ಬುದ್ಧಿ, ಮನಸ್ಸಿನ ಅಂತಃಸತ್ವವೆಲ್ಲ ಇಡಿಯಾಗಿ ಹೀರುವ ಸಂಶೋಧನಾ ಹವ್ಯಾಸವಾಗಿತ್ತು. ಪಿಯರ್ ಕ್ಯೂರಿ ಮಹತ್ತರ ಸಂಶೋಧನೆಗಳ ಮೂಲಕ ಈಗಾಗಲೇ ಹೆಸರು ಮಾಡಿದ್ದನು. ಮಾನವ ನಿರ್ಮಿಸಿದ ಯಾವುದೇ ವ್ಯವಸ್ಥೆಯಲ್ಲಿ ಬುದ್ಧಿವಂತರಿಗೆ ಅವಕಾಶ ಇರುವುದು ಅತ್ಯಂತ ಕಡಿಮೆ. ಅದೇ ರೀತಿ ಸೋರ್ಬನ್ ವಿಶ್ವವಿದ್ಯಾಲಯದಲ್ಲೂ ಅವನಿಗೆ ಪ್ರೊಫೆಸರ್ ಹುದ್ದೆ ದಕ್ಕಲಿಲ್ಲ. ಪಿಯರ್ ಕ್ಯೂರಿ ಪ್ಯಾರಿಸ್‌ನ ಹೊರಗೂ ತನ್ನ

ಸಂಶೋಧನೆಯಿಂದ ಪ್ರಸಿದ್ಧಿ ಪಡೆದಿದ್ದನು. ಜೀನಿವಾ ವಿಶ್ವವಿದ್ಯಾಲಯ ತನ್ನ ಪ್ರಯೋಗಶಾಲೆಯಲ್ಲಿ ಕೆಲಸ ಮಾಡಲು ಅವನಿಗೆ ಆಹ್ವಾನ ನೀಡಿತ್ತು. ಅವರಿಬ್ಬರ ಅಂದಿನ ಆರ್ಥಿಕ ಸ್ಥಿತಿಯಲ್ಲಿ ಈ ಹುದ್ದೆ ತೀರ ಅವಶ್ಯಕವಿತ್ತು. ಹೀಗಿದ್ದರೂ ತಮ್ಮ ಸಂಶೋಧನಾ ಕಾರ್ಯವನ್ನು ಅರ್ಧಕ್ಕೆ ಕೈಬಿಟ್ಟು ಅಲ್ಲಿಗೆ ಹೊರಡಲಿಲ್ಲ. ಮೇರಿ ಕ್ಯೂರಿ ತನ್ನ ಸಂಸಾರದ ಭಾರವನ್ನು ಗಂಡನೊಬ್ಬನ ಹೆಗಲೇರಿಸಿ ಕೂಡುವ ಮಹಿಳೆಯಾಗಿರಲಿಲ್ಲ. ಶಾಲೆಯೊಂದರಲ್ಲಿ ಭೌತಶಾಸ್ತ್ರದ ಉಪನ್ಯಾಸಕಿಯಾಗಿ ಕೆಲಸಕ್ಕೆ ಸೇರಿ ದುಡಿಯತೊಡಗಿದಳು. ತನಗೆ ಒದಗುವ ಅವಕಾಶಗಳ ಬಗ್ಗೆ ಅವಳು ಎಂದಿಗೂ ಚಿಂತಿಸಲಿಲ್ಲ. ಅವರಿಬ್ಬರೂ ನೀರವ ರಾತ್ರಿಯ ಕತ್ತಲಲ್ಲಿ ರೇಡಿಯಂ ಅನ್ನು ಕಂಡುಹಿಡಿದಿದ್ದರು. ಬೆಳಕನ್ನು ಆರಿಸಿ ಹೋದ ದಂಪತಿಗಳಿಗೆ ನಕ್ಷತ್ರ ಪುಂಜವೇ ಕೈಯಲ್ಲಿತ್ತು. ರೇಡಿಯಂ ಎಂಬ ವಸ್ತುವಿಗೆ ಮಾರುಕಟ್ಟೆಯಲ್ಲಿ ಅಗಾಧ ಬೇಡಿಕೆ ಉಂಟಾಗಿತ್ತು. ರೇಡಿಯಂ ತಯಾರಿಸುವ ವಿಧಾನವನ್ನು ಪೇಟೆಂಟ್‌ಗೆ ಒಳಪಡಿಸಲು ಪಿಯರ್ ಕ್ಯೂರಿ ಬಯಸಿದ್ದನಾದರೂ ಅದು ವೈಜ್ಞಾನಿಕ ಪ್ರವೃತ್ತಿಗೆ ವಿರುದ್ಧವಾದುದೆಂದು ಮೇರಿ ನಿರಾಕರಿಸಿದಳು. ಜ್ಞಾನ ಪ್ರಸಾರದ ಸಾಧನವಾಗಿ ವಿಜ್ಞಾನವಿರಬೇಕು, ಬಡತನ ಸಿರಿತನಗಳ ಆಯ್ಕೆ ಎದುರಾದಾಗ ಶ್ರೀಮಂತಿಕೆ ತಿರಸ್ಕಾರಕ್ಕೆ ಒಳಗಾಗಬೇಕೆಂದು ನಿರ್ಧರಿಸಿ ವಿಜ್ಞಾನ ಕ್ಷೇತ್ರದಲ್ಲಿ ಅವರು ಒಂದು ಶಕ್ತಿಯಾಗಿ ಬೆಳೆದರು. ತಮ್ಮ ವೈಯಕ್ತಿಕ ಬದುಕಿಗಿಂತ ವಿಚಾರಗಳು ಜನರನ್ನು ತಲುಪಬೇಕೆಂದು ಅವರು ಹೇಳಿರುವುದು ವೈಚಾರಿಕ ಸಮಾಜ ನಿರ್ಮಿತಿಗೆ ಅವರು ನೀಡಿದ ಕೊಡುಗೆ ಎಂತಹದೆಂದು ತಿಳಿದು ಬರುತ್ತದೆ.



ಪಿಯರ್ ಕ್ಯೂರಿ ೧೯೦೬ ಏಪ್ರಿಲ್ ೧೯ ರಂದು ನಡೆದ ಅಪಘಾತದಲ್ಲಿ ಕೊನೆವುಸಿರೆಳೆದ ಮೇಲೆ ಪ್ರಯೋಗಾಲಯದಲ್ಲಿ ಎರಡು ಕೈಗಳು ಮಾತ್ರ ದುಡಿಯುವಂತಾದವು. ಒಂದು ಮಿದುಳು, ಒಂದಿಷ್ಟು ಸಂದೇಹಗಳು, ಸಮಸ್ಯೆಗಳು, ತನ್ನಲ್ಲೇ ಮಥಿಸಿ ಕಂಡುಕೊಳ್ಳಬೇಕಾದ ಪರಿಹಾರಗಳು ಮಾತ್ರ ಉಳಿದವು. ಅವರಿಬ್ಬರ ನಡುವೆ ದುಡಿದು ತರುವ ಗಂಡ, ಮಡಿಹಾಕುವ ಹೆಂಡತಿಯ ಸಂಬಂಧವಿರಲಿಲ್ಲ. ಅವರು ನೂರಾರು ಸಾಧ್ಯತೆಗಳು ಆಯಾಮಗಳು ತೆರೆದುಕೊಂಡಿದ್ದ ಸಂಬಂಧ ಸೃಷ್ಟಿಸಿಕೊಂಡಿದ್ದರು. ವಿಧವೆ ಮೇರಿ ಕ್ಯೂರಿಗೆ ಸರ್ಕಾರ ರಾಷ್ಟ್ರೀಯ ಪಿಂಚಣಿ ಹಣ ನೀಡಲು ಮುಂದಾಯಿತು, ಆಕೆ ಅದನ್ನು ತಿರಸ್ಕರಿಸಿದಳು, 'ನನಗೆ ಪಿಂಚಣಿ ಬೇಕಿಲ್ಲ. ನನ್ನಲ್ಲಿ ದುಡಿಯುವ ಶಕ್ತಿಯಿದೆ. ನನ್ನ ಮತ್ತು ನನ್ನ ಮಕ್ಕಳಿಗಾಗುವಷ್ಟು ದುಡಿಯಬಲ್ಲೆ' ಎಂದು ಹೇಳಿರುವುದು ಮೇರಿಯಲ್ಲಿದ್ದ ದುಡಿಯುವ ಅದಮ್ಯ ಶಕ್ತಿ ಮತ್ತು ಸ್ವಾವಲಂಬಿ ಬದುಕಿನ ಬಗೆಗೆ ತಿಳಿಸುತ್ತದೆ. ಮೇರಿ ಕ್ಯೂರಿ ೧೯೦೬ ಮೇ ೧೩ ರಂದು ಪ್ರೊಫಸರ್ ಹುದ್ದೆಗೆ ಆಯ್ಕೆಯಾಗಿದ್ದು ಸೋರ್ಬನ್ ವಿಶ್ವವಿದ್ಯಾಲಯದ ಮೊಟ್ಟ ಮೊದಲ ಮಹಿಳೆಯಾದಳು. ಆ ಹೊತ್ತಿಗೆ ಮೇರಿ ಕ್ಯೂರಿ ವಿಜ್ಞಾನ ಕ್ಷೇತ್ರದಲ್ಲಿ ಪ್ರಸಿದ್ಧಿಯಾಗಿದ್ದಳು. ಅವಳಿಗೆ ಹಲವಾರು ಗೌರವ ಸೂಚಕ ಡಿಗ್ರಿಗಳು, ಪ್ರಶಸ್ತಿಗಳು ಬಂದಿದ್ದವು. ಅವನ್ನು ಎಂದಿಗೂ ಆಕೆ ಪ್ರದರ್ಶನಕ್ಕೆ ಇಡಲಿಲ್ಲ. ಅವಳದು ಹಣ, ಪ್ರಸಿದ್ಧಿಗಳಿಗೆ

ಮಾರುಹೋದ ವ್ಯಕ್ತಿತ್ವ ಆಗಿರಲಿಲ್ಲ. ಫ್ರಾನ್ಸ್‌ನ ವಿಜ್ಞಾನ ಅಕಾಡೆಮಿಗೆ ಮೇರಿ ಕ್ಯೂರಿಯನ್ನು ಆರಿಸದಿರಲು ಆಕೆ ಹೆಣ್ಣೆಂಬ ಏಕಮಾತ್ರ ಕಾರಣವಾಗಿತ್ತು. ಫ್ರಾನ್ಸ್ನ ವಿಜ್ಞಾನ ಅಕಾಡೆಮಿಯಲ್ಲಿ ಮಹಿಳೆಗೆ ಪ್ರವೇಶವಿಲ್ಲವೆಂಬುದು ಮೇರಿ ಕ್ಯೂರಿಗೆ ನಿರಾಶೆ ತರದೆ ತನ್ನ ಕರ್ತವ್ಯದಲ್ಲಿ ಮತ್ತಷ್ಟು ಶ್ರದ್ಧೆಯಿಂದ ಮುಂದುವರೆಯುಸವಂತ ಮಾಡಿತು. ಆಕೆಯ ಶ್ರೇಷ್ಠ ಸಂಶೋಧನೆಗಳನ್ನು ಗುರುತಿಸಿ ೧೯೧೧ನೇ ಸಾಲಿನ ರಸಾಯನಶಾಸ್ತ್ರ ನೊಬೆಲ್ ಪಾರಿತೋಷಕ ಸಂದಿತು, ಅದುವರೆಗೂ ಯಾವ ಹೆಣ್ಣಾಗಲೀ, ಗಂಡಾಗಲೀ ಯಾರೂ ಎರಡು ಬಾರಿ ನೋಬೆಲ್ ಪಾರಿತೋಷಕ ಪಡೆದವರಿರಲಿಲ್ಲ. ಮೇರಿ ಕ್ಯೂರಿ ಗಂಡಸರ ರಂಗಭೂಮಿ ಎಂದುಕೊಂಡಿದ್ದ ವಿಜ್ಞಾನ ಕ್ಷೇತ್ರದಲ್ಲಿದ್ದವಳು. ಪುರುಷರು ಹಕ್ಕಿನಿಂದ ತಮ್ಮದೆಂದು ತಿಳಿದ ಕ್ಷೇತ್ರದಲ್ಲಿ ಯಶಸ್ವಿಯಾದ ಏಕೈಕ ಮಹಿಳೆ ಮೇರಿ ಕ್ಯೂರಿ ಎಂಬುದು ಮಾನವನ ಬೌದ್ಧಿಕ ಸಾಧನೆಗೆ ಲಿಂಗತಾರತಮ್ಯದ ಸೋಂಕಿಲ್ಲವೆಂದು ಸಾರಿದೆ.

೧೯೧೪ರಲ್ಲಿ ಪ್ಯಾರಿಸ್ ಮತ್ತು ಜರ್ಮನ್ ನಡುವೆ ಮೊದಲ ಮಹಾಯುದ್ಧ ಆರಂಭವಾಗಿತ್ತು. ಮೇರಿ ತನ್ನ ಸಂಶೋಧನೆಯನ್ನು ಸದ್ಯಕ್ಕೆ ನಿಲ್ಲಿಸಿ ತನ್ನ ಎರಡನೇ ತಾಯಿನಾಡಾದ ಫ್ರಾನ್ಸ್‌ನ ಸೇವೆಗೆ ಸಿದ್ಧಳಾದಳು. ಈ ಯುದ್ಧಕಾಲದಲ್ಲಿ ಮೇರಿ ಎಲ್ಲ ಮಹಿಳೆಯರಂತೆ ಬಿಳಿವಸ್ತ್ರಧರಿಸಿ ದಾದಿ ಸೇವೆ ಸಲ್ಲಿಸದೇ, ೧೮೯೫ರಲ್ಲಿ ರಾಂಟನ್ ಕಂಡುಹಿಡಿದಿದ್ದ ಕ್ಷ-ಕಿರಣಗಳ ಬಳಸಿ ಕ್ಷ-ಕಿರಣ ಸಜ್ಜಿತ ಕಾರುಗಳನ್ನು ಮೇರಿ ಸಿದ್ಧಪಡಿಸಿದಳು. ೧೯೧೪ರಲ್ಲಿ ಫ್ರಾನ್ಸ್‌ನಲ್ಲಿ ಕ್ಷ-ಕಿರಣದ ಸಲಕರಣೆಗಳಿರಲಿಲ್ಲ. ಫ್ರಾನ್ಸಿನ ಮಹಿಳಾ ಸಂಗದ ಸಹಾಯ ಪಡೆದು ಸಿದ್ಧವಾದ ಸಾಮಾನ್ಯ ಮೋಟಾರುಗಳಿಗೆ ರಾಂಟನ್ ಉಪಕರಣ ಅಳವಡಿಸಿ ತಯಾರಿಸಿದ ಸಂಚಾರಿ ಕ್ಷ-ಕಿರಣಾಲಯಗಳು ಆಸ್ಪತ್ರೆಯಿಂದ ಆಸ್ಪತ್ರೆಗೆ ಓಡಾಡತೊಡಗಿದವು. ಮೇರಿ ಕ್ಷ-ಕಿರಣ ಸಜ್ಜಿತ ಕಾರುಗಳನ್ನು

ಏರಿ ಯುದ್ಧರಂಗಕ್ಕೆ ಮುನ್ನುಗ್ಗಿದಳು. ತನಗೆ ತಡೆಯೊಡ್ಡಿದ ಅಧಿಕಾರಿಗಳನ್ನು ಒಲಿಸಿಕೊಂಡು ರೇಗಿದವರನ್ನು ಪೀಡಿಸಿಯಾದರೂ ಒಳಹೊಕ್ಕು ಗಾಯಾಳುಗಳ ಸೇವೆಗೆ ಟೊಂಕಕಟ್ಟಿ ನಿಂತಳು. ಗುಂಡು ಹೊಕ್ಕ ಸೈನಿಕರ ದೇಹದೊಳಗೆ ಶಸ್ತ್ರಕ್ರಿಯೆ ಇಲ್ಲದೆ ದೇಹದೊಳಗೆ ಇಣುಕಬಲ್ಲ ಕ್ಷ-ಕಿರಣಗಳಿಂದ ಪರೀಕ್ಷಿಸಿ ವೈದ್ಯರಿಗೆ ಚಿಕಿತ್ಸೆ ಮಾಡಲು ಸಹಾಯ ಮಾಡುತ್ತಿದ್ದಳು. ವೈಜ್ಞಾನಿಕ ಹಿನ್ನೆಲೆ, ಮುನ್ನುಗ್ಗುವ ಧೈರ್ಯವಷ್ಟೇ ಮೇರಿಯ ಕ್ಯೂರಿಯ ಶಕ್ತಿಯಾಗಿರದೇ ಆಕೆ ಎಂಥಾ ಪರಿಸ್ಥಿತಿಯಲ್ಲೂ ಎದೆಗುಂದದೆ ಸಮಸ್ಯೆಯನ್ನು ಸಮರ್ಥವಾಗಿ ನಿಭಾಯಿಸಬಲ್ಲ ಗಟ್ಟಿಗಿತ್ತಿಯಾಗಿದ್ದಳು. ತನ್ನ ಯಾವುದೇ ಕೆಲಸಕ್ಕೂ ಯಾರ ಸಹಾಯವನ್ನೂ ಪಡೆಯದೆ ತನ್ನ ಕೆಲಸವನ್ನು ತಾನೇ ಮಾಡಿಕೊಳ್ಳುತ್ತಿದ್ದಳು. ಸ್ವಾವಲಂಬಿಯಾಗಿದ್ದ ಆಕೆ ಗಂಡಸರ ಕ್ಷೇತ್ರದಲ್ಲಿ ಗಂಡಸರಿಗಿಂತ ಮಿಗಿಲಾದ ಗಂಡಸರು ಗುರುತಿಸುವಂತಹ ಮೇರು ಸಾಧನೆ ಮಾಡಿದಳು. ಯುದ್ಧದ ವೆಚ್ಚಗಳು ಅತ್ಯಧಿಕವಿತ್ತು. ಸರಕಾರ ನಾಗರಿಕದಲ್ಲಿ ತಮ್ಮ ಕೈಲಾದ ಸಹಾಯ ನೀಡುವಂತೆ ಕೋರಿತ್ತು. ಮೇರಿ ತನ್ನ ಮಗಳಾದ ಐರಿನ್‌ನ್ನೊಡನೆ ಮಾತನಾಡಿ ದೇಶದ ಈ ತುರ್ತುಪರಿಸ್ಥಿತಿಯಲ್ಲಿ ತಮ್ಮಲ್ಲಿದ್ದ ಹಣ, ಬಂಗಾರವನ್ನೆಲ್ಲ ದೇಶಸೇವೆಗೆ ಅರ್ಪಿಸಿದಳು. ತನ್ನ ಅಸಾಧಾರಣ ಸಂಶೋಧನೆಯನ್ನು ಗೌರವಿಸಿ ನೀಡಿದ್ದ ಪ್ರಶಸ್ತಿ ಪತ್ರಗಳು ಎರಡನೆಯ ನೊಬೆಲ್ ಪಾರಿತೋಷಕ ಮತ್ತದರ ಹಣವನ್ನೆಲ್ಲ ಸರಕಾರಕ್ಕೆ ಒಪ್ಪಿಸಿದಳು. ಸಾಮಾನ್ಯವಾಗಿ ಮಹಿಳೆಗೆ ಬೆಳ್ಳಿ, ಬಂಗಾರ, ವಜ್ರ, ವೈಡೂರ್ಯಗಳಂಥ ಒಡವೆ ಮೇಲೆ ಹೆಚ್ಚು ಆಸೆ ಎಂಬುದಾಗಿ ಹೇಳಲಾಗುತ್ತದೆ. ಮೇರಿ ಕ್ಯೂರಿ ದೇಶದ ಸಂಕಟದ ಸ್ಥಿತಿಯಲ್ಲಿ ವೈಯಕ್ತಿಕ ಆಸೆ, ಆಕಾಂಕ್ಷೆಗಳನ್ನು ಮೆಟ್ಟಿ ನಿಂತ ಬಗೆ ನಮಗೆ ಕಾಣುತ್ತದೆ.

ಮಹಾ ಮಾನವತಾವಾದಿಯಾಗಿದ್ದ ಮೇರಿಯ ಕ್ಯೂರಿಯ ನಡೆ ನುಡಿ ಸರಳವಾಗಿದ್ದು ಸ್ವಾವಲಂಬಿಯಾಗಿ ಬದುಕು ಸಾಗಿಸಿದಳು. ಪಿಯರ್ ಕ್ಯೂರಿಯ ಮೂಲಕ ಮೇರಿಯ ಸಾಧನೆಯನ್ನು ಗುರುತಿಸುತ್ತಿದ್ದ ಜನರಿಗೆ ಆಕೆ ಯಾವುದೇ ಉತ್ತರ ನೀಡಲಿಲ್ಲ. ಬದಲಿಗೆ ತನ್ನ ಶಕ್ತಿಯನ್ನು ಪ್ರಕಟಪಡಿಸಿ ಎರಡು ಬಾರಿ ನೋಬೆಲ್ ಪ್ರಶಸ್ತಿ ಪಡೆದ ಏಕೈಕ ವ್ಯಕ್ತಿಯಾಗಿದ್ದಾಳೆ. ಆ ಮಹಿಳೆಗೆ ಸ್ತ್ರೀವಾದವೇ ಬದುಕಿನ ದಾರಿ ಆಗಿದ್ದರೆ ಮೇರಿಯ ಬದುಕೆ ಸ್ತ್ರೀವಾದದ ಬದುಕಾಗಿರುವುದು ಆಕೆಯ ಉನ್ನತ ವ್ಯಕ್ತಿತ್ವದ ಹೆಗ್ಗುರುತಾಗಿದೆ.

ಹೆಚ್ಚಿನ ಓದಿಗೆ ಸಂಪರ್ಕಿಸಬೇಕಾದ ಜಾಲತಾಣಗಳು :

1. https://www.nobelprize.org/nobel-prizes/chemistry/laureates/1911/
marie-curie-bio.html

2. https://en.wikipedia.org/wiki/Marie_Curie

# ಭಾರತದಲ್ಲಿ ವಿಜ್ಞಾನ ಅಂದು, ಇಂದು

- ಉಮಾ ವೆಂಕಟೇಶ್

ಪೀಠಿಕೆ: ನಮ್ಮ ಭೂತ ಮತ್ತು ವರ್ತಮಾನದ ವಿದ್ಯಮಾನಗಳಿಗೆ ಸಾಕ್ಷಿಯಾಗಿರುವ ಅನಂತವಾದ ಕಾಲಚಕ್ರದ ಬದಲಾವಣೆಗಳಲ್ಲಿ ನಾವೆಲ್ಲರೂ ಭಾಗಿಗಳು. ತನ್ನ ಉನ್ನತ ಬುದ್ಧಿಮತ್ತೆಯಿಂದ ಇಂದು ಭೂಮಿಯಲ್ಲಿ ತನ್ನ ಸಾರ್ವಭೌಮತ್ವವನ್ನು ಸಾಧಿಸಿರುವ ಮಾನವ, ತಾನೇ ಸೃಷ್ಟಿಸಿರುವ ಸಕಾರಾತ್ಮಕ ಮತ್ತು ನಕಾರಾತ್ಮಕ ಬದಲಾವಣೆಗಳ ಮೂಲಕ ತನ್ನ ಶ್ರೇಷ್ಠತೆಯನ್ನು ಎಷ್ಟರಮಟ್ಟಿಗೆ ಮೆರೆಯುತ್ತಿದ್ದಾನೆಂದರೆ, ಪ್ರಸ್ತುತ ಭೌಗೋಳಿಕ ಯುಗವನ್ನು ಅಂತ್ರೋಪೊಸೆನ್ಸ್ (Anthropocence) ಎಂದು ಮರುನಾಮಕರಣ ಮಾಡಿದ್ದಾನೆ. ಪ್ರಪಂಚದಲ್ಲಿ ಇದುವರೆಗೆ ಹುಟ್ಟಿ ಮೆರೆದು, ನಶಿಸಿಹೋದ ನಾಗರಿಕತೆಗಳು ಸಾವಿರಾರು ವರ್ಷಗಳಿಂದ ನಡೆಸುತ್ತಿರುವ ವ್ಯಾಪಾರ, ವ್ಯವಹಾರ, ಯುದ್ಧಗಳ ಮೂಲಕ ಪರಸ್ಪರ ಪ್ರಭಾವಿತರಾಗಿರುವುದು ವಾಸ್ತವ ಸಂಗತಿ. ಕಾಲಾಂತರದಲ್ಲಿ ನಡೆದಿರುವ ಬದಲಾವಣೆಗಳು ನಮ್ಮ ಜೀವನ ಮೌಲ್ಯಗಳು, ಕ್ರಿಯಾಶೀಲತೆ ಮತ್ತು ಚಿಂತನೆಗಳ ಮೇಲೆ, ಗಾಢವಾದ ಪರಿಣಾಮ ಬೀರಿರುವುದರಲ್ಲಿ ಸಂದೇಹವೇ ಇಲ್ಲ. ಇದಕ್ಕೆ ಯಾವ ದೇಶ ಮತ್ತು ಸಮಾಜಗಳೂ ಹೊರತಾಗಿಲ್ಲ. ನಮ್ಮ ಮಾನವ ಸಮಾಜವನ್ನು ಕ್ರಮೇಣವಾಗಿ, ಆದರೆ ತೀವ್ರವಾಗಿ ಬದಲಾಯಿಸಿರುವ ಒಂದು ಕ್ಷೇತ್ರವೆಂದರೆ ವಿಜ್ಞಾನ; ಜ್ಞಾನವನ್ನು ಬೆಳೆಸಿ ಸಂಘಟಿಸುವ ಒಂದು ವ್ಯವಸ್ಥಿತ ಯೋಜನೆ. ಈ ವಿಶ್ವದ ಆಗು-ಹೋಗುಗಳು, ಇಲ್ಲಿ ಜರುಗುವ ವಿದ್ಯಮಾನಗಳ ಸೈದ್ಧಾಂತಿಕ ಪ್ರತಿಪಾದನೆಯನ್ನು, ಪ್ರಾಯೋಗಿಕವಾಗಿ ಒರೆಹಚ್ಚಿ ನೋಡಿ, ನಮ್ಮ ಸುತ್ತುಮುತ್ತಲಿನ ನೈಸರ್ಗಿಕ ಪ್ರಪಂಚವನ್ನು ಅಧ್ಯಯನ ಮಾಡುವ ಒಂದು ಕ್ರಮಬದ್ಧ ಮಾರ್ಗ, ಮಾನವ ಅನಾದಿಕಾಲದಿಂದಲೂ ತನ್ನ ಕುತೂಹಲ ಪ್ರವೃತ್ತಿಯ ಮೂಲಕ, ತನ್ನ ಸುತ್ತಲಿನ ಆಗುಹೋಗುಗಳ ಬಗ್ಗೆ ಪ್ರಶ್ನಿಸುತ್ತಲೇ ಇದ್ದಾನೆ. ಈ ರೀತಿ ಎಲ್ಲವನ್ನೂ ಪ್ರಶ್ನಿಸುವ ಅವನ ಪ್ರವೃತ್ತಿಯೇ ವೈಜ್ಞಾನಿಕ ಆವಿಷ್ಕಾರಗಳಿಗೆ ದಾರಿಯಾಯಿತು. ಇಂತಹ ನೂರಾರು ಆವಿಷ್ಕಾರಗಳು ಇಂದು ನಮ್ಮ ಜೀವನದ ಗುಣಮಟ್ಟವನ್ನು ಉತ್ತಮಗೊಳಿಸಿವೆ, ಹಾಗೂ ನಮ್ಮ ನಾಗರಿಕತೆಗಳ ಒಂದು ಅವಿಭಾಜ್ಯ ಅಂಗವೆನಿಸಿವೆ ಎನ್ನುವ ಸತ್ಯವನ್ನು ನಾವು ಕಡೆಗಣಿಸುವಂತಿಲ್ಲ.

ಭಾರತೀಯ ವಿಜ್ಞಾನ ಪರಂಪರೆ: ನಮ್ಮ ಇತಿಹಾಸವು ನಮ್ಮ ಪೂರ್ವಿಕರು ಗಣಿತಶಾಸ್ತ್ರ ಖಗೋಳಶಾಸ್ತ್ರ, ವೈದ್ಯಕೀಯ ವಿಜ್ಞಾನ, ಗಿಡಮೂಲಿಕೆಗಳಲ್ಲಿ ನಡೆಸಿದ ಅಧ್ಯಯನಗಳಲ್ಲಿ ಕಂಡುಬರುತ್ತದೆ. ಇದಕ್ಕೆ ನಮ್ಮ ಪ್ರಾಚೀನ ಗ್ರಂಥಗಳಲ್ಲಿರುವ

ಉಲ್ಲೇಖಗಳಲ್ಲಿ ಹೇರಳವಾದ ಪುರಾವೆಗಳಿರುವುದು ನಿಜ. ಹಾಗಾಗಿ ವಿಜ್ಞಾನದ ತಳಹದಿಯ ಬೇರುಗಳು ನಮ್ಮ ಪೂರ್ವಿಕರಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಹರಡಿದ್ದವು. ಭಾರತದ ಶಾಸ್ತ್ರೀಯ ತತ್ತ್ವಶಾಸ್ತ್ರ ಹಾಗೂ ವೈಜ್ಞಾನಿಕ ಚಿಂತನೆಯ ಒಂದು ಸ್ಥೂಲ ಪರೀಕ್ಷೆ ಕೂಡಾ ಅನೇಕ ಶತಮಾನಗಳಿಂದ ಝಳಪಿಸುತ್ತಿರುವ ನಮ್ಮ ನಾಗರಿಕತೆಯಲ್ಲಿ, ಪುರಾಣ ಶಾಸ್ತ್ರಗಳ ಜೊತೆಗೆ, ಪ್ರಬಲವಾದ ತರ್ಕಾಧಾರಿತ ಚಿಂತನೆಯ ಪರಂಪರೆ ಇತ್ತು ಎನ್ನುವುದನ್ನು ಪ್ರಸ್ತುತಪಡಿಸಿದೆ. ಈ ವಾದಕ್ಕೆ ಪುರಾವೆ ನೀಡುವಂತಹ ಸಾಂಖ್ಯ ತತ್ತ್ವಶಾಸ್ತ್ರ, ಭಾಸ್ಕರನ ಬೀಜ-ಗಣಿತ, ಆರ್ಯಭಟನ ಖಗೋಳಶಾಸ್ತ್ರದ ಪರಿಣತಿ, ಬ್ರಹ್ಮಗುಪ್ತ, ನೀಲಕಂಠ ಮತ್ತು ಮಾಧವರಂತಹ ಮೇಧಾವಿ ಗಣಿತಜ್ಞರ ಕೊಡುಗೆ, ಚರಕ ಹಾಗೂ ಸುಶ್ರುತರ ಆಯುರ್ವೇದ ಪಾಂಡಿತ್ಯ ಹೀಗೆ ಹಲವು ಹತ್ತು ನಿದರ್ಶನಗಳಿವೆ. ಸಮೃದ್ಧವಾಗಿ ಪ್ರಗತಿಯ ಹಾದಿಯಲ್ಲಿ ನಡೆದಿದ್ದ, ಸಿಂಧೂ ಕಣಿವೆಯ ನಾಗರಿಕತೆಯ ಅವಶೇಷಗಳು, ಸುಮಾರು ೪,೫೦೦ ವರ್ಷಗಳ ಹಿಂದೆ, ಭಾರತದ ಉಪಖಂಡದಲ್ಲಿದ್ದ ಬೆಳವಣಿಗೆಗಳ ಬಗ್ಗೆ ತಿಳಿಸುತ್ತವೆ. ಇತ್ತೀಚೆಗೆ, ಪಾಶ್ಚಿಮಾತ್ಯ ದೇಶದ ಪಂಡಿತರು, ಸೃಜನಶೀಲ ಇಸ್ಲಾಮಿಕ್ ಸ್ವಯಂಸೇವಕರ ಮೂಲಕ, ಇಂಡಿಕ್ ಗಣಿತದ ಕಲ್ಪನೆಗಳು ನಿಶ್ಯಬ್ದವಾಗಿ, ವಿವರಿಸಲಾಗದಂತಹ ರೀತಿಯಲ್ಲಿ ಪ್ರಸರಣವಾಗಿವೆ ಎಂದು ಗುರ್ತಿಸಿರುವುದು ಒಂದು ಗಮನಾರ್ಹವಾದ ಸಂಗತಿ. ನಾಲ್ಕು ಶತಮಾನಗಳ ಹಿಂದೆ, ಮರುವ್ಯಾಖ್ಯಾನಗೊಂಡ ಈ ಗಣಿತಶಾಸ್ತ್ರವೇ, ಮುಂದೆ ಯೂರೋಪಿನಲ್ಲಿ, ಆಧುನಿಕ ವಿಜ್ಞಾನ ಎಂದು ಕರೆಯಲ್ಪಡುವ ಒಂದು ಆಳವಾದ ಕ್ರಾಂತಿಯಲ್ಲಿ ಅಂತ್ಯಗೊಂಡಿತು. ಇಷ್ಟಾದರೂ, ನಮ್ಮ ಪೂರ್ವಿಕರ ಸಾಧನೆಗಳನ್ನು ನಿಖರವಾಗಿ ಬರವಣಿಗೆಯಲ್ಲಿ ದಾಖಲಿಸುವ ಸಂಸ್ಕೃತಿ ನಮ್ಮಲ್ಲಿ ಅಷ್ಟಾಗಿರಲಿಲ್ಲ. ಎಲ್ಲಾ ವಿಷಯಗಳನ್ನೂ ಬಾಯಿಮಾತುಗಳ ಮೂಲಕ, ಪೀಳಿಗೆಯಿಂದ ಪೀಳಿಗೆಗೆ ರವಾನಿಸುವ ಪದ್ಧತಿ ಪ್ರಚಲಿತವಾಗಿತ್ತು.

ಹೀಗೆ ಪಾರಂಪರಿಕವಾಗಿ ಭಾರತೀಯ ಸಂಸ್ಕೃತಿಯಲ್ಲಿ ವೈಜ್ಞಾನಿಕ ಚಿಂತನೆಯ ಉಲ್ಲೇಖವಿದ್ದರೂ, ಹಿಂದಿನ ರೀತಿನೀತಿಗಳನ್ನು ಅನುಸರಿಸುತ್ತಿದ್ದ ನಮ್ಮ ಜನಸಾಮಾನ್ಯ ಪೂರ್ವಿಕರಲ್ಲಿ, ಮೂಢನಂಬಿಕೆಗಳು ಹೇರಳವಾಗಿದ್ದವು. ಅಲ್ಲಿ ತರ್ಕಾಧಾರಿತ ಮತ್ತು ವೈಜ್ಞಾನಿಕ ಚಿಂತನೆಗಳಿಗೆ ಹೆಚ್ಚು ಅವಕಾಶಗಳಿರಲಿಲ್ಲ. ಯಾವುದನ್ನೂ ಪ್ರಶ್ನಿಸಕೂಡದು! ಹಿಂದಿನಿಂದ ಬಂದ ರೀತಿನೀತಿಗಳಲ್ಲಿ ಕುಂದುಕೊರತೆಗಳನ್ನು ಹುಡುಕಬಾರದು. ಋಷಿಮೂಲ, ನದೀಮೂಲಗಳ ಬಗ್ಗೆ ಯಾವ ಚರ್ಚೆಗೂ ಅವಕಾಶವಿರಲಿಲ್ಲ. ಗುರುಕುಲ ಶಿಕ್ಷಣ ಪದ್ಧತಿಯ ಮೂಲಕ ಲಭ್ಯವಿದ್ದ ವಿದ್ಯಾಭ್ಯಾಸ ಕೇವಲ ಮೇಲ್ವರ್ಗದ ಪುರುಷರ ಸೊತ್ತಾಗಿತ್ತು. ಮಹಿಳೆಯ ಸ್ಥಾನಮಾನವಂತೂ ಕೇವಲ ಸಂಸಾರ ಮತ್ತು ಮಕ್ಕಳ ಪಾಲನೆಗೆ ಸೀಮಿತವಾಗಿದ್ದ ಕಾರಣ, ಮನೆಯಲ್ಲಿ ಮಕ್ಕಳಿಗೆ ತಾಯಿಯರಿಂದ ದೊರೆಯುತ್ತಿದ್ದ ಮೊದಲ ಪಾಠ ಕೇವಲ ಮಾತೃಭಾಷೆಯ ಕಲಿಕೆಯಷ್ಟೇ ಎನ್ನಬಹುದು.

ಕ್ರಿಸ್ತಶಕ: ಕ್ರಿಸ್ತಪೂರ್ವದಲ್ಲಿ ವಿಜೃಂಭಿಸುತ್ತಿದ್ದ ನಮ್ಮ ನಾಗರಿಕತೆ, ನಂತರ ಪರಕೀಯರ ದಾಳಿ, ಆಂತರಿಕ ಕಲಹಗಳು, ಸಾಮಾಜಿಕ ಪಿಡುಗುಗಳಿಗೆ ಬಲಿಯಾಗಿ ಕೇವಲ ತನ್ನ ಅರ್ಥಿಕವಾಗಷ್ಟೇ ಅಲ್ಲ, ರಾಜಕೀಯವಾಗಿಯೂ ಹಿನ್ನಡೆಯಿತು. ಇಷ್ಟಾದರೂ, ಹೊರದೇಶಗಳೊಡನೆ ನಡೆಯುತ್ತಿದ್ದ ವ್ಯಾಪಾರ-ವ್ಯವಹಾರಗಳ ಮೂಲಕ ವಿದೇಶಿಯರ ರೀತಿನೀತಿ, ವಸ್ತು-ಸಂಸ್ಕೃತಿಯ ಪ್ರಭಾವಗಳು ನಮಗರಿವಿಲ್ಲದಂತೆ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿದ್ದದ್ದು ನಿಜವಾದ ಸಂಗತಿ, ಚೀನ, ಪರ್ಷಿಯಾ ಮತ್ತು ಯೂರೋಪ್ ದೇಶಗಳಿಂದ ನಮ್ಮ ದೇಶಕ್ಕೆ ನುಸುಳಿರುವ ಅನೇಕ ಖಾದ್ಯಗಳು, ವಸ್ತ್ರ-ವಿಭೂಷಣಗಳು, ಸಂಗೀತ-ನೃತ್ಯ, ಭಾಷೆಯ ವೈವಿಧ್ಯತೆಗಳು ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಸಂಸ್ಕೃತಿಯನ್ನು ಸಂಪನ್ನಗೊಳಿಸಿವೆ ಎನ್ನುವ ವಾಸ್ತವತೆಯನ್ನು ತಳ್ಳಿಹಾಕುವಂತಿಲ್ಲ.

ಪಾರಂಪರಿಕವಾಗಿ, ವೇದ-ಉಪನಿಷತ್ತುಗಳು, ತತ್ತ್ವಶಾಸ್ತ್ರಗಳನ್ನು ಜೀವನದ ಮುಖ್ಯ ಅಂಗವನ್ನಾಗಿಸಿಕೊಂಡು ಜೀವನ ನಡೆಸುತ್ತಾ ಬಂದ ನಮ್ಮ ಜನಸಾಮಾನ್ಯರಲ್ಲಿ, ಸಾಕ್ಷಾಧಾರ, ಪುರಾವೆಗಳ ಮೇಲೆ ಆಧಾರಿತವಾದ, ಪ್ರಾಯೋಗಿಕ ವಿಷಯಗಳ ಅಧ್ಯಯನದ ಬಗ್ಗೆ ಹೆಚ್ಚಿನ ಒಲವು ಕಂಡುಬರುವುದಿಲ್ಲ. ೧೪ನೆಯ ಶತಮಾನದಿಂದ ಪ್ರಾರಂಭವಾಗಿ, ೧೭ನೆಯ ಶತಮಾನದವರೆಗೆ ಯೂರೋಪಿನಲ್ಲಾದ ನವೋದಯ ಪ್ರಗತಿ, ೧೮ನೆಯ ಶತಮಾನದಲ್ಲಿ, ಬ್ರಿಟನ್ನಿನಲ್ಲಿ ಪ್ರಾರಂಭವಾಗಿ, ಇಡೀ ಯೂರೋಪನ್ನು ಆವರಿಸಿದ ಕೈಗಾರಿಕಾ ಕ್ರಾಂತಿಯಂತಹ ಒಂದು ದೊಡ್ಡ ಬದಲಾವಣೆ ನಮ್ಮ ದೇಶದಲ್ಲಿ ನಡೆಯಲಿಲ್ಲ. ಧರ್ಮಪೀಠವನ್ನೆದುರಿಸಿ ನಿಂತು, ತನ್ನ ವೈಜ್ಞಾನಿಕ ವಾದವನ್ನು ಮಂಡಿಸುವ ಕೆಚ್ಚೆದೆ ತೋರಿದ ಗೆಲಿಲಿಯೋ, ಅದ್ಭುತ ಕಲೆ, ವಿಜ್ಞಾನ, ವೈದ್ಯಕೀಯ ಶಾಸ್ತ್ರಗಳಲ್ಲಿ ಅಪರಿಮಿತ ಪರಿಣತಿ ತೋರಿದ ಲಿಯನಾರ್ಡೊ ಡಾ ವಿಂಚಿಯಂತಹ ಮೇಧಾವಿಗಳ ಜನ್ಮ ನಮ್ಮಲ್ಲಾಗಲಿಲ್ಲ. ಹಳೆಯ ನಂಬಿಕೆ ಮತ್ತು ಪದ್ಧತಿಗಳಿಗೆ ನಮ್ಮ ದೇಶ ಜೋತುಬಿದ್ದಿದ್ದಾಗಲೇ, ೧೮೫೦ರ ಸಮಯದಲ್ಲಿ, ಯೂರೋಪಿನಲ್ಲಿ ಕೈಗಾರಿಕಾ ಕ್ರಾಂತಿ ಉಚ್ಛಾಯ ಸ್ಥಿತಿಯಲ್ಲಿತ್ತು. ಅದೇ ಸಮಯದಲ್ಲಿ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ವ್ಯಾಪಾರ ನಡೆಸಲು ತಕ್ಕಡಿ ಹಿಡಿದು ನಮ್ಮ ದೇಶವನ್ನು ಪ್ರವೇಶಿಸಿತ್ತು.

ಬ್ರಿಟಿಷ್ ವಸಾಹತು ಆಡಳಿತ: ಬ್ರಿಟಿಷರು ವಿಭಜನಾ ನೀತಿಯನ್ನನುಸರಿಸಿ, ಸಲೀಸಾಗಿ ನಮ್ಮ ದೇಶವನ್ನು ತಮ್ಮ ಬುಟ್ಟಿಗೆ ಬೀಳಿಸಿಕೊಂಡು ನಮ್ಮನ್ನಾಳಲು ಪ್ರಾರಂಭಿಸಿದ್ದಾಗ, ವಿಜ್ಞಾನದ ನೆರಳು ನಮ್ಮ ಮೇಲಿನ್ನೂ ಬಿದ್ದಿರಲಿಲ್ಲ. ಕೇವಲ ವ್ಯಾಪಾರಕ್ಕಾಗಿ, ನಮ್ಮ ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಶ್ರೀಮಂತಿಕೆಯನ್ನು ಕೊಳ್ಳೆಹೊಡೆಯುವ ಉದ್ದೇಶದಿಂದ ಬಂದ ಬ್ರಿಟಿಷರು, ನಮ್ಮ ಪ್ರಾಚೀನ ವಿದ್ಯಾಭ್ಯಾಸ ಪದ್ಧತಿಯನ್ನಳಿಸಿ, ಆಧುನಿಕವೆನಿಸಿದ್ದ ಇಂಗ್ಲಿಷ್ ಭಾಷೆಯ ಮಾಧ್ಯಮದ ವಿದ್ಯಾಭ್ಯಾಸವನ್ನು ನಮ್ಮ ಮೇಲೆ ಹೇರಿದ್ದರು. ಇದರ ಮೂಲಕ, ಈಸ್ಟ್-ಇಂಡಿಯಾ ಕಂಪನಿಯಲ್ಲಿ ಕೇವಲ ಲೆಕ್ಕ ಬರೆಯಲು

ಸ್ಥಳೀಯರನ್ನು ತಯಾರು ಮಾಡುವ ಉದ್ದೇಶವಿತ್ತೇ ವಿನಾಃ ಮೇಧಾವಿಗಳನ್ನು, ರಾಜಕಾರಣಿಗಳನ್ನು ಅಥವಾ ವಿಜ್ಞಾನಗಳನ್ನು ಬೆಳೆಸುವ ಆಕಾಂಕ್ಷೆ ಅವರಿಗಿರಲಿಲ್ಲ. ಸಾಮಾನ್ಯ ಜನಗಳು ಕೇವಲ ತಮ್ಮ ಜೀವನ ನಡೆಸಿದರೆ ಸಾಕೆಂಬ ಭಾವನೆಯಿಂದ ಬದುಕುತ್ತಿದ್ದ ಸಮಯ. ಜೊತೆಗೆ ನಮ್ಮ ಸಮಾಜದಲ್ಲಿ ಎಲ್ಲ ಕಸುಬುಗಳು ಜಾತಿಪದ್ಧತಿಯ ಮೇಲಾಧಾರಿತವಾಗಿದ್ದವು. ವಿದ್ಯೆ ಕೇವಲ ಮೇಲ್ಜಾತಿಯವರ ಸೊತ್ತಾಗಿದ್ದ ದಿನಗಳು. ಜೊತೆಗೆ ಇತರ ಕಸುಬಿನವರು ತಮ್ಮ ಕಸುಬಿನ ರಹಸ್ಯಗಳನ್ನು, ಒಳಗುಟ್ಟುಗಳನ್ನು ಬಿಟ್ಟುಕೊಡುತ್ತಿರಲಿಲ್ಲ. ಈ ಪರಿಸ್ಥಿತಿ ನಮ್ಮ ಭಾರತದ ನಕ್ಷೆಯನ್ನಷ್ಟೇ ಅಲ್ಲ, ನಮ್ಮ ಸಮಾಜ, ಅಭಿವೃದ್ಧಿ, ಚಿಂತನೆ ಎಲ್ಲವನ್ನೂ ಬದಲಿಸಿತೆನ್ನಬಹುದು.

ಹಾಗಿದ್ದರೂ ಕೂಡಾ, ಬ್ರಿಟಿಷ್ ಆಳ್ವಿಕೆಯ ಸಮಯದಲ್ಲಿ, ಇಂಗ್ಲಿಷ್ ಮಾಧ್ಯಮದಲ್ಲಿ ಆಧುನಿಕ ಶಿಕ್ಷಣದ ಲಾಭ ಪಡೆದ, ಸರ್ ಸಿ. ವಿ. ರಾಮನ್, ಎಸ್. ಚಂದ್ರಶೇಖರ್, ಶ್ರೀನಿವಾಸ ರಾಮಾನುಜನ್, ಸರ್ ಜಗದೀಶಚಂದ್ರ ಬೋಸ್, ಎಸ್. ಎನ್. ಬೋಸ್, ಮೇಘನಾದ್ ಸಹಾ, ಹೋಮಿ ಜೆ. ಭಾಭಾ, ವಿಕ್ರಮ್ ಸಾರಾಭಾಯಿ, ಸರ್.ಎಮ್. ವಿಶ್ವೇಶ್ವರಯ್ಯ -ಹೀಗೆ ಹಲವು ಹತ್ತು ಮೇಧಾವಿಗಳು ನಮ್ಮಲ್ಲೂ ಪ್ರಕಟವಾದರು. ಮಹಾತ್ಮ ಗಾಂಧಿ, ಜವಾಹರ್‌ಲಾಲ್ ನೆಹರು, ಸುಭಾಷ್ ಚಂದ್ರ ಬೋಸ್, ವಲ್ಲಭಭಾಯಿ ಪಟೇಲ್ ಅಂತಹ ಘಟಾನುಘಟಿ ರಾಜಕಾರಣ ಮುತ್ಸದ್ದಿಗಳೂ ನಮ್ಮಲ್ಲಿದ್ದರು. ಆದರೂ, ವಿಜ್ಞಾನ ಮತ್ತು ವೈಜ್ಞಾನಿಕ ಚಿಂತನೆ ಇನ್ನೂ ಜನಸಾಮಾನ್ಯರನ್ನು ತಲುಪಿರಲಿಲ್ಲ. ಅನಕ್ಷರತೆ ಎಲ್ಲೆಲ್ಲೂ ತಾಂಡವವಾಡುತ್ತಿತ್ತು.

೬೦ರ ಸ್ವತಂತ್ರ ಭಾರತ: ೧೯೪೭ರಲ್ಲಿ ಭಾರತ ಸ್ವತಂತ್ರ ದೇಶವಾಯಿತು, ಬ್ರಿಟಿಷರು ಬಿಟ್ಟುಹೋದ ಇಂಗ್ಲಿಷ್ ಭಾಷೆ, ರೈಲ್ವೆ ವ್ಯವಸ್ಥೆ ಮತ್ತು ಅಂಚೆ ಪದ್ಧತಿಗಳ ಜೊತೆಗೆ ಅವರ ಶಿಕ್ಷಣ ಪದ್ಧತಿಯೂ ನಮ್ಮಲ್ಲಿ ಬೇರು ಬಿಟ್ಟಿತ್ತು. ಇಷ್ಟೆಲ್ಲಾ ಬದಲಾವಣೆಗಳ ಸುಳಿಯಲ್ಲಿ ಸಿಲುಕಿ, ದಾಸ್ಯದ ಕಪಿಮುಷ್ಟಿಯಿಂದ ಮುಕ್ತಿಹೊಂದಿದ್ದ ಸ್ವತಂತ್ರ ಭಾರತದಲ್ಲಿ, ೬೦ರ ದಶಕದ ಪ್ರಜಾಪ್ರಭುತ್ವ ಮುಕ್ತ ವಾತಾವರಣದ, ಒಡೆಯರ್ ರಾಜವಂಶದವರು ವಾಸಿಸುತ್ತಿದ್ದ ಅರಮನೆಗಳ ರಾಜಧಾನಿ, ಸಂಸ್ಕೃತಿಯ ತವರೂರೆನಿಸಿದ್ದ ಸುಂದರವಾದ ಮೈಸೂರಿನಲ್ಲಿ, ವಿದ್ಯಾವಂತ ಕುಟುಂಬದಲ್ಲಿ ಹುಟ್ಟಿ, ಬೆಳೆದು, ಉತ್ತಮವಾದ ಶಿಕ್ಷಣ ಪಡೆಯುವ ಅವಕಾಶ ನನಗೆ ಸಿಕ್ಕಿತ್ತು. ಜವಹರಲಾಲ್ ನೆಹರು ಮುಂದಾಳತ್ವದಲ್ಲಿ ಪಂಚವಾರ್ಷಿಕ ಯೋಜನೆ, ಕೈಗಾರಿಕೀಕರಣ, ನಗರಗಳ ಆಧುನಿಕೀಕರಣಗಳಂತಹ ಯೋಜನೆಗಳ ಜೊತೆಗೆ, ಭಾರತವನ್ನು ೨೦ನೆಯ ಶತಮಾನದ ವೈಜ್ಞಾನಿಕ ಪ್ರಪಂಚಕ್ಕೆ ಕರೆದೊಯ್ಯುವದು ಅಂದಿನ ನಮ್ಮ ಸುಶಿಕ್ಷಿತ ರಾಜಕಾರಣಿಗಳ ಮಹತ್ವಾಕಾಂಕ್ಷೆಯಾಗಿತ್ತು. ಪಾಶ್ಚಿಮಾತ್ಯ ದೇಶಗಳಲ್ಲಿ ಅಷ್ಟು ಹೊತ್ತಿಗಾಗಲೇ, ವಿಜ್ಞಾನ ತನ್ನ ಶ್ರೇಷ್ಠತೆಯನ್ನು ಮೆರೆಯುತ್ತಿದ್ದು, ಮಾನವ ಅಂತರಿಕ್ಷ ಪ್ರವೇಶಿಸಿದ್ದ, ಅಮೆರಿಕೆಯ ವಾಟ್ಸನ್ ಮತ್ತು

ಇಂಗ್ಲೆಂಡಿನ ಕ್ರಿಕ್, ಜೀವಿಗಳಲ್ಲಿ ಸರ್ವಸ್ವವನ್ನೂ ನಿರ್ಧರಿಸುವ, ಆಓಂ ಡಬಲ್ ಹೆಲಿಕ್ಸ್ ರಚನೆಯ ರಹಸ್ಯವನ್ನು ಬಿಚ್ಚಿಟ್ಟಿದ್ದರು.

ನಮ್ಮಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಮೇಲೆ ಮಾತಾಪಿತೃಗಳು ಹೆಚ್ಚಿನ ಗಮನ ಕೊಡುತ್ತಿದ್ದ ಸಮಯ ಆಗಷ್ಟೇ ಶುರುವಾಗಿತ್ತು. ಮನೆಯ ಹತ್ತಿರದಲ್ಲೇ ಇದ್ದ ಕಾನ್ವೆಂಟ್ ಶಾಲೆಯಲ್ಲಿ ನನ್ನ ಪ್ರಾಥಮಿಕ ಶಿಕ್ಷಣ ನಡೆದಿತ್ತು. ಆ ಶಾಲೆಯಲ್ಲಿ ಬೋಧಿಸುತ್ತಿದ್ದ ಮಿಶನರಿ ಕ್ರೈಸ್ತ ಸನ್ಯಾಸಿನಿಯರು ವಾರದಲ್ಲಿ ಎರಡು ಬಾರಿಯಾದರೂ ಶಾಲೆಯ ಪಕ್ಕದಲ್ಲೇ ಇರುವ ಚರ್ಚಿಗೆ ನಮ್ಮೆಲ್ಲರನ್ನೂ ಎಳೆದೊಯ್ದು, ಪ್ರಾರ್ಥನೆಯ ಬಲವಂತ ಮಾಘಸ್ನಾನ ಮಾಡಿಸುತ್ತಿದ್ದರು. ಪ್ರಾಥಮಿಕ ಶಾಲೆಯಲ್ಲಿ ಪಠ್ಯಕ್ರಮದ ಶಿಕ್ಷಣವೇ ಹೊರತು, ವಿಜ್ಞಾನದ ಬಗ್ಗೆ ಯಾವ ಹೆಚ್ಚಿನ ಒತ್ತಿರಲಿಲ್ಲ. ಇನ್ನು ಮನೆಯಲ್ಲಿ ಅಜ್ಜ, ಅಪ್ಪ, ಚಿಕ್ಕಪ್ಪ ಎಲ್ಲರೂ ವಿದ್ಯಾವಂತರಾದರೂ, ಅವರ ಜ್ಞಾನ ಕೇವಲ ವೃತ್ತಿಗೆಂದು ಗಳಿಸಿದ್ದ ಸರ್ಟಿಫಿಕೇಟಿಗೆ ಸೀಮಿತವಾಗಿತ್ತು. ಮನೆಯಲ್ಲಿ ಹಿಂದಿನ ರೀತಿನೀತಿಗಳು, ಮಡಿ ಮೈಲಿಗೆಯ ಪದ್ಧತಿಗಳು ಮೆರೆದಾಡುತ್ತಿದ್ದವು. "ಕಸವನ್ನು ಮೂಲೆಯಲ್ಲಿ ಇಟ್ಟಿದ್ದರೆ, ಹೆಣ್ಣುಮಕ್ಕಳು ಪ್ರತಿ ಹಬ್ಬದಲ್ಲೂ ಮುಟ್ಟಾಗುತ್ತಾರೆ", "ಹಲ್ಲಿ ಬಿದ್ದರೆ ಅಪಶಕುನಿ, ಸತ್ತವರ ಸೂತಕ ಆಚರಿಸದಿದ್ದರೆ ಮನೆ ಹಾಳಾಗತ್ತೆ", "ಅಪಸ್ಮಾರದ ರೋಗಿಗಳಿಗೆ ಮೈಮೇಲೆ ದೇವರು ಬರತ್ತೆ", "ಸನ್ಯಾಸಿಯ ವಿಭೂತಿಯೇ ಎಲ್ಲಾ ರೋಗಗಳಿಗೆ ಪರಿಹಾರ", ಹೀಗೆ ಪಟ್ಟಿ ಬೆಳೆಸುತ್ತಲೇ ಹೋಗಬಹುದು.

ಆ ಸಮಯದಲ್ಲಿ ಅಮೆರಿಕ ಮತ್ತು ವಿಯಟ್ನಾಮ್ ದೇಶಗಳ ನಡುವೆ ನಡೆಯುತ್ತಿದ್ದ ಯುದ್ಧದ ಬಗ್ಗೆ ಮನೆಯಲ್ಲಿ ಹಿರಿಯರ ನಡುವೆ ನಡೆಯುತ್ತಿದ್ದ ಮಾತುಕತೆಗಳಲ್ಲಿ, ಯುದ್ಧದಲ್ಲಿ ಸಂಭವಿಸುತ್ತಿದ್ದ ಪ್ರಾಣಹಾನಿಯ ಬಗ್ಗೆ, ಅಮೆರಿಕ ಹೇರಳವಾಗಿ ಬಳಸುತ್ತಿದ್ದ ಬಾಂಬುಗಳು, ರಾಸಾಯನಿಕ ಶಸ್ತ್ರಾಸ್ತ್ರಗಳ ಬಗ್ಗೆ ಸಂತಾಪ ಸೂಚಿಸುತ್ತಾ, "ಅಯ್ಯೋ ಕಾಲ ಕೆಟ್ಟುಹೋಯಿತು, ವಿಜ್ಞಾನೇ ವಿನಾಶ" ಎನ್ನುವ ಸಾಲು ಪದೇಪದೇ ನಮ್ಮ ಕಿವಿಗಳ ಮೇಲೆ ಬಿದ್ದಾಗ, ನಮ್ಮ ಎಳೆಯ ಮನಗಳು ಈ ಸಾಲಿನ ಅರ್ಥವನ್ನು ಗ್ರಹಿಸಲು ಅಸಮರ್ಥವಾಗಿದ್ದವು. ನೀಲ್ ಆರ್ಮ್ಸ್ಟ್ರಾಂಗ್ ಚಂದ್ರನ ಮೇಲೆ ಕಾಲಿಟ್ಟ ವಿಷಯವನ್ನು ಪೇಪರಿನಲ್ಲಿ ಓದಿ ತಿಳಿದಾಗ ಸಂಭ್ರಮಿಸುತ್ತಿದ್ದ ನಮ್ಮ ಮುಂದೆ, ದೊಡ್ಡಮ್ಮ ಮೂಗುಮುರಿಯುತ್ತಾ, "ಏನು ಚಂದ್ರನ ಮೇಲೆ ಕಾಲಿಡುವ ಯೋಗ್ಯತೆ ಇದೆಯೇ ಇವರಿಗೆ! ಬರೀ ಸುಳ್ಳು, ಎಲ್ಲಿಯದೋ ಕಲ್ಲುಮಣ್ಣು ತಂದು, ಚಂದ್ರನ ಮೇಲಿಂದು ಎಂದು ಅಪಪ್ರಚಾರ ಮಾಡುತ್ತಿದ್ದಾರೆ" ಎನ್ನುವ ಪಿತೂರಿವಾದವನ್ನು ಮಂಡಿಸಿದ್ದನ್ನು ಕೇಳಿ ನಾವು ಹೌಹಾರಿದ್ದೆವು.

ಅಷ್ಟು ಹೊತ್ತಿಗಾಗಲೇ ರೇಡಿಯೋ, ಟೆಲಿಫೋನ್, ಟೆಲಿಗ್ರಾಫ್, ಮೋಟಾರುಕಾರುಗಳನ್ನು ಮಧ್ಯಮವರ್ಗ ಮತ್ತು ಶ್ರೀಮಂತ ಜನ ಬಳಸುತ್ತಿದ್ದರು. ವಿಮಾನ, ಅಂತರಿಕ್ಷಯಾನದ ವೈಜ್ಞಾನಿಕ ಆವಿಷ್ಕಾರಗಳನ್ನು ಪಶ್ಚಿಮ ಗೋಲ ಕಂಡಾಗಿತ್ತು. ಭಯಂಕರ ಸಾಂಕ್ರಾಮಿಕ

ರೋಗಗಳನ್ನು ಹೆಚ್ಚುಕಡಿಮೆ ಲಸಿಕೆಗಳ ಮೂಲಕ ಓಡಿಸಿದ್ದರು. ನಮ್ಮ ಜನ ಆಗತಾನೇ ಮಾರುಕಟ್ಟೆ ಪ್ರವೇಶಿಸಿದ್ದ ನೈಲಾನ್, ನೈಲೆಕ್ಸ್, ಟೆರಿಲೀನ್, ಟೆರಿಕಾಟ್ ಬಟ್ಟೆಗಳನ್ನು ಉಟ್ಟು ಮೆರೆದಾಡುತ್ತಿದ್ದ ದಿನಗಳವು. ಪ್ಲಾಸ್ಟಿಕ್ ನಿಧಾನವಾಗಿ ತಲೆಯೆತ್ತುತ್ತಿತ್ತು. ದಿನನಿತ್ಯ ವಿಜ್ಞಾನದಿಂದಾದ ಲಾಭವನ್ನು ಪಡೆಯುತ್ತಿದ್ದರೂ, "ನಮ್ಮ ಕಾಲದಲ್ಲೇ ಚೆನ್ನಾಗಿತ್ತು, ಇಷ್ಟೊಂದು ಅನ್ಯಾಯವಿರಲಿಲ್ಲ," ಎಂದು ಲೊಚಗುಟ್ಟುತ್ತಿದ್ದುದನ್ನು ಕೇಳುತ್ತಲೇ ಇದ್ದೆ. ಮೈಸೂರಿನ ದಸರಾ ವಸ್ತುಪ್ರದರ್ಶನದಲ್ಲಿ ಇಡುತ್ತಿದ್ದ ಟಿವಿ ಮಾದರಿಯೊಂದನ್ನು ನೋಡಿ ಅದು ಹೇಗೆ ಕೆಲಸ ಮಾಡಬಹುದು ಎನ್ನುವುದರ ಬಗ್ಗೆ ತಿಳಿಯುವ ಕುತೂಹಲ ನಮಗಿದ್ದರೂ, ಅದರ ಬಗ್ಗೆ ತಿಳಿದವರು ಇರಲಿಲ್ಲ.

ನಮ್ಮ ಮಾಧ್ಯಮಿಕ ಶಾಲೆಯಲ್ಲೂ, ವಿಜ್ಞಾನದ ಬೋಧನೆ ಕೇವಲ ಪಠ್ಯಪುಸ್ತಕಗಳಿಗೆ ಸೀಮಿತವಾಗಿತ್ತೇ ವಿನಾಃ, ಪ್ರಾಯೋಗಿಕವಾಗಿ ಕಲಿಸುವ ವ್ಯವಸ್ಥೆ ಇರಲಿಲ್ಲ. ಪ್ರಾಯೋಗಿಕ ಬೋಧನೆಗೆ ಅಗತ್ಯವಾದ ಸಂಪನ್ಮೂಲ, ಅದರಲ್ಲಿ ಪಳಗಿದ ತರಬೇತಿ ಪಡೆದ ಉಪಾಧ್ಯಾಯರ ಕೊರತೆ ಎದ್ದು ಕಾಣುತ್ತಿತ್ತು, ಮಾದರಿ ಮೈಸೂರಿನ ಪರಿಸ್ಥಿತಿ ಹೀಗಿದ್ದರೆ, ಇನ್ನು ಹಳ್ಳಿ ಪರಿಸ್ಥಿತಿಯಂತೂ ಶೋಚನೀಯ ಎಂದು ಬೇರೆ ಹೇಳಲೇಬೇಕಿಲ್ಲ! ನಮ್ಮ ಮನೆಗಳಲ್ಲಿ ಕೇವಲ ಇಂಜಿನಿಯರಿಂಗ್, ಗಣಿತಶಾಸ್ತ್ರದ ಬಗ್ಗೆ ಹೆಗ್ಗಳಿಕೆ ಮತ್ತು ಹೆಮ್ಮೆಯ ಭಾವನೆಯನ್ನು ನೋಡಿದ್ದೇನೆಯೇ ಹೊರತು, ಮೂಲಭೂತ ವಿಜ್ಞಾನದ ಬಗ್ಗೆ, ಅದನ್ನು ಅಧ್ಯಯನ ಮಾಡುವ ಮಕ್ಕಳ ಬಗ್ಗೆ ಅಂತಹ ಅಭಿಮಾನ, ಆಸಕ್ತಿಯಿರಲಿಲ್ಲ. ಬಿ.ಎಸ್ಸಿ. ಮತ್ತು ಎಮ್.ಎಸ್ಸಿ. ಮಾಡುವವರು ಶುದ್ಧ ನಿಷ್ಪ್ರಯೋಜಕರೆಂದೇ ತಿಳಿದಿದ್ದರು. ಬಿ.ಎಸ್ಸಿ. ಮುಗಿದೊಡನೆ ಅವರಿಗೆ ಗುಮಾಸ್ತಿಕೆಯೋ ಇಲ್ಲಾ ಔಷಧಿ ಮಾರುವ ಸೇಲ್ಸ್‌ಮನ್ ಕೆಲಸ ಖಾಯಂ ಎನ್ನುವುದು ಸಾಮಾನ್ಯಜ್ಞಾನವಾಗಿತ್ತು. ಅದರಲ್ಲೂ ಜೀವವಿಜ್ಞಾನದ ವಿದ್ಯಾರ್ಥಿಗಳನ್ನು ಕಂಡರೆ ಹೆಚ್ಚಿನ ತಾತ್ಸಾರ. "ಏನು ಕಪ್ಪೆ ಕುಯ್ತಾ ಇದ್ದೀಯಾ! ಬರೀ ಪ್ರಾಣಿಹಿಂಸೆ, ನರಕಕ್ ಹೋಗ್ತೀಯಾ", ಎಂದು ನನ್ನ ಸೋದರ ಸಂಬಂಧಿಯನ್ನು ಮೂದಲಿಸುತ್ತಿದ್ದ ಸಂಗತಿ ನೆನಪಿದೆ. ಗಣಿತದ ಬಳಕೆಯಿಲ್ಲದ ಮತ್ತು ಸಂಪರ್ಕವಿಲ್ಲದ ಇತರ ವಿಷಯಗಳು ನಿಷ್ಪ್ರಯೋಜಕ ಎನ್ನುವ ಅಜ್ಞಾನದ ಹೇಳಿಕೆಗಳು ಹೇರಳವಾಗಿ ಕೇಳಲು ಸಿಗುತ್ತಿದ್ದವು.

೭೦ರ ದಶಕಃ ನಾನು ಹೈಸ್ಕೂಲಿಗೆ ಕಾಲಿಟ್ಟೆ, ಮೈಸೂರಿನ ಉತ್ತಮವಾದ ಶಾಲೆಗಳಲ್ಲಿ ಒಂದಾದ ಭಗಿನಿ ಸೇವಾ ಸಮಾಜದಲ್ಲಿ ಒಳ್ಳೆಯ ಉಪಾಧ್ಯಾಯನಿಯರಿದ್ದರು. ಹಾಗಾಗಿ ಪಠ್ಯಕ್ರಮದ ಶಿಕ್ಷಣವೇನೋ ಚೆನ್ನಾಗಿತ್ತು. ಆದರೆ, ಪ್ರಾಯೋಗಿಕವಾಗಿ ಯಾವ ತರಬೇತಿಯೂ ಇಲ್ಲ. ನಾವಿನ್ನೂ ಸರಳವಾದ ಮೈಕ್ರೋಸ್ಕೋಪ್ ನೋಡಿರಲಿಲ್ಲ. ಅದಕ್ಕೆ ಕಾಲೇಜ್ ಮೆಟ್ಟಿಲು ಹತ್ತುವವರೆಗೂ ಕಾಯಬೇಕಾಯ್ತು. ನನಗೆ ಯಾವಾಗಲೂ ಜೀವವಿಜ್ಞಾನದಲ್ಲಿ ಆಸಕ್ತಿ, ನನ್ನ ಸುತ್ತಲ ಪರಿಸರದಲ್ಲಿ ನಡೆಯುವ ವಿದ್ಯಮಾನಗಳನ್ನು ಆಳವಾಗಿ

ತಿಳಿಯಬೇಕೆನ್ನುವ ಬಯಕೆ ಇತ್ತು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ೬೦% ನಂಬರ್ ಬಂದರಾಯ್ತು. ಅದೇ ನಮ್ಮ ಗುರಿಯಾಗಿತ್ತೇ ವಿನಾಃ, ನಾವು ಓದುತ್ತಿರುವ ವಿಷಯಗಳನ್ನು ಏಕೆ ಆಳವಾಗಿ ತಿಳಿದುಕೊಳ್ಳಬೇಕು ಎನ್ನುವ ಬಗ್ಗೆ ಯಾರೂ ತಿಳಿಯ ಹೇಳುತ್ತಲೇ ಇರಲಿಲ್ಲ.

ಮುಂದೆ ಪಿಯುಸಿ ಮತ್ತು ಬಿಎಸ್ಸಿಯಲ್ಲಿ ಜೀವ ವಿಜ್ಞಾನದ ವಿಷಯಗಳನ್ನೇ ಆರಿಸಿಕೊಂಡಿದ್ದೆ. ಅದೃಷ್ಟವಶಾತ್, ಮಹಾರಾಣಿ ಕಾಲೇಜಿನಲ್ಲಿ ನಮ್ಮ ಸಸ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಪ್ರೊಫೆಸರ್ ಪದ್ಮಕುಮಾರ್ ತಮ್ಮ ಅದ್ಭುತ ಉಪನ್ಯಾಸಗಳಿಂದ ಸಸ್ಯಶಾಸ್ತ್ರದಲ್ಲಿ ನನ್ನ ಮನ ಆಳವಾಗಿ ಯೋಚಿಸಲು ಒಳ್ಳೆಯ ಬುನಾದಿ ಹಾಕಿದ್ದರು. ಸರ್ಕಾರಿ ಕಾಲೇಜಿನಲ್ಲಿ ಓದುತ್ತೇವೆ ಎಂದು, ಪ್ರೈವೇಟ್ ಕಾಲೇಜಿನಲ್ಲಿ ಓದುತ್ತಿದ್ದ ನಮ್ಮ ಸಂಬಂಧಿಗಳು ಮೂಗು ಮುರಿಯುತ್ತಿದ್ದರೂ, ನಮ್ಮ ಕಾಲೇಜಿನಲ್ಲಿ ಇದ್ದ ಸೌಲಭ್ಯ ಸವಲತ್ತುಗಳು ಅವರ ಕಾಲೇಜಿನಲ್ಲಿರಲಿಲ್ಲ ಎನ್ನುವ ವಾಸ್ತವತೆಯ ಅರಿವು ನಮಗಿತ್ತು. ಇಂತಹ ಪ್ರೇರಣೆಯಿಂದ ಸಸ್ಯಶಾಸ್ತ್ರದಲ್ಲಿ ಉತ್ತಮ ಅಂಕ ಗಳಿಸಿದ್ದೆ. ಬಿಎಸ್ಸಿ ಸಮಯದಲ್ಲೂ, ಪ್ರಾಯೋಗಿಕ ತರಗತಿಗಳು ಹೆಚ್ಚಾಗಿ ಟಾಕ್ಸಾನಮಿ, ಅನಾಟಮಿ, ಮಾರ್ಫಾಲಜಿ ಅಂತಹ ವಿಷಯಗಳಲ್ಲಿ ನಮ್ಮನ್ನು ತಯಾರು ಮಾಡಿದ್ದವೇ ಹೊರತು, ಜೆನೆಟಿಕ್ಸ್, ಸಸ್ಯತಳಿಶಾಸ್ತ್ರಗಳಂತಹ ಆನ್ವಯಿಕ ವಿಷಯಗಳಲ್ಲಿ ನಮಗೆ ಯಾವ ತರಬೇತಿಯೂ ಇರಲಿಲ್ಲ. ಕಾರಣ ಆ ವಿಷಯಗಳನ್ನು ನಮ್ಮ ಪಠ್ಯಕ್ರಮದಲ್ಲಿ ಸೇರಿಸಿಯೇ ಇರಲಿಲ್ಲ. ಇಷ್ಟು ಹೊತ್ತಿಗಾಗಲೇ, ಯೂರೋಪ್, ಅಮೆರಿಕ ದೇಶಗಳಲ್ಲಿ, ಡಿಎನ್‌ಎ ಸೀಕ್ವೆನ್ಸಿಂಗ್ ಮತ್ತು ಕ್ಲೋನಿಂಗ್ ಬಗ್ಗೆ ವಿಜ್ಞಾನಿಗಳು ಆಳವಾದ ಸಂಶೋಧನೆ ನಡೆಸಿ ಆಗಿತ್ತು. ಅಮೆರಿಕೆಯಲ್ಲಿ DNA ಮತ್ತು RNA ಬಗ್ಗೆ ನಡೆಸಿದ ತನ್ನ ಸಂಶೋಧನೆಗಾಗಿ ನೋಬೆಲ್ ಪುರಸ್ಕಾರ ಪಡೆದ, ನಮ್ಮ ದೇಶದವರೇ ಆದ ಹರಗೋವಿಂದ್ ಖೊರಾನಾ ಬಗ್ಗೆ ನಮಗೆ ಯಾರೂ ಉತ್ತಮವಾದ ಮಾಹಿತಿ ಕೊಟ್ಟಿರಲೇ ಇಲ್ಲ!

೮೦ರ ದಶಕಃ ಸಸ್ಯಶಾಸ್ತ್ರದಲ್ಲಿ ಎಮ್.ಎಸ್ಸಿ. ಪದವಿಗೆ ಪ್ರವೇಶ ಸಿಕ್ಕಿತೆಂದು ತಿಳಿದಾಗ, ನಮ್ಮ ತಂದೆಯ ಸೋದರ ಸಂಬಂಧಿಗಳಿಬ್ಬರು, ನನ್ನ ಕಡೆ ನೋಡುತ್ತಾ, ವ್ಯಂಗ್ಯವಾಗಿ “ಓಹೋ ಏನು ಬಾಟನಿ ಅಂದ್ರೆ ಬರಿ ಎಲೆ, ಕಾಯಿ ಹುಡುಕ್ಕೊಂಡ್ ಹೋಗೋದ್ ತಾನೆ! ಅದಕ್ಕೇನು ಸ್ಕೋಪ್ ಇದೆ? ಯಾವ ಕೆಲಸ ಸಿಗತ್ತೆ?” ಎನ್ನುತ್ತಾ ತಮ್ಮ ಅಜ್ಞಾನವನ್ನು ಪ್ರದರ್ಶಿಸಿದ್ದರು. ಸಸ್ಯಾಹಾರಿಗಳಾಗಿ, ದಿನನಿತ್ಯ ಸಸ್ಯಗಳ ಎಲ್ಲಾ ಭಾಗಗಳನ್ನು ತಿಂದು ಬದುಕುತ್ತಿರುವ ಈ ಜನರಿಗೆ ಸಸ್ಯಶಾಸ್ತ್ರದ ಬಗ್ಗೆ ಇಷ್ಟೊಂದು ತಾತ್ಸಾರ! ಇವರೆಲ್ಲಾ ಕೇವಲ ಸರ್ಕಾರಿ ಕಚೇರಿಗಳಲ್ಲಿ ಗುಮಾಸ್ತರರಿ ಮಾಡುತ್ತಿದ್ದ ಸತ್ಪಜೆಗಳು. ಇದು ೮೦ರ ದಶಕದಲ್ಲಿದ್ದ ನಮ್ಮ ಭಾರತದ ವಿದ್ಯಾವಂತ ನಾಗರಿಕ ಸಮಾಜ! ಇಂದಿನ ವಿಜ್ಞಾನ, ನಾಳಿನ ತಂತ್ರಜ್ಞಾನ ಎನ್ನುವುದರ ಅರಿವು ಇನ್ನೂ ಮೂಡಿರಲಿಲ್ಲ. ೬೦-೭೦ರ ದಶಕದಲ್ಲಿ

ಭಾರತದಲ್ಲಿ ನಡೆದ ಹಸಿರುಕ್ರಾಂತಿಯ ಹಿಂದಿನ ರಹಸ್ಯ, ಜೀವವಿಜ್ಞಾನದಲ್ಲಿ ಪ್ರಪಂಚ ಸಾಧಿಸಿದ್ದ ಪ್ರಗತಿ ಎನ್ನುವ ನಿಜಸಂಗತಿ ನಮ್ಮ ಜನ ಸಾಮಾನ್ಯರ ತಲೆಗೆ ಇನ್ನೂ ಹತ್ತಿರಲಿಲ್ಲ. ಸುಮ್ಮನೆ ಎಲ್ಲರ ಬಾಯಲ್ಲೂ ಓ ಇದು ಹೈಬ್ರಿಡ್ ತಳಿ, ಅದಕ್ಕೆ ಇಷ್ಟೊಂದು ಹೆಚ್ಚಿನ ಫಸಲು ಎಂದು ಕೇಳಿಬರುತ್ತಿತ್ತೇ ವಿನಃ, ಆ ಹೈಬ್ರಿಡ್ ತಳಿಯನ್ನು ಬೆಳೆಸಲು ತಳಿವಿಜ್ಞಾನ ಕಾರಣ ಎನ್ನುವುದರ ಬಗ್ಗೆ ಅವರು ತಲೆಕೆಡಿಸಿಕೊಂಡಿರಲಿಲ್ಲ. ಜೊತೆಗೆ ಹೊಸ ಆವಿಷ್ಕಾರಗಳನ್ನು ಸಂದೇಹ ದೃಷ್ಟಿಯಿಂದ ನೋಡುತ್ತಿದ್ದದ್ದೆ ಹೆಚ್ಚು. ನಾಟಿ ಫಸಲಿನ ಬಗ್ಗೆ ಹೆಚ್ಚಿನ ಅಭಿಮಾನ. ಹೈಬ್ರಿಡ್ ತರಕಾರಿ ಹಣ್ಣುಗಳಲ್ಲಿ ರುಚಿ ಕಡಿಮೆ ಎನ್ನುವ ಲೊಚಗುಟ್ಟುವಿಕೆ ದಿನವೂ ಮನೆಗಳಲ್ಲಿ ನಡೆದೇ ಇತ್ತು. ಆದರೆ ಭರದಿಂದ ಬೆಳೆಯುತ್ತಿದ್ದ ಭಾರತ ಪ್ರಜೆಗಳ ಹೊಟ್ಟೆತುಂಬಲು, ನಾಟಿಬೆಳೆ ವ್ಯವಸಾಯಕ್ಕೆ ಶಕ್ತಿ ಇರಲಿಲ್ಲ ಎನ್ನುವುದು ಬಹುತೇಕ ಮಂದಿಗೆ ತಿಳಿದಿರಲಿಲ್ಲ. ಈ ಹಸಿರುಕ್ರಾಂತಿಗೆ ಕಾರಣರಾದ ಡಾ.ಎಮ್.ಎಸ್. ಸ್ವಾಮಿ ನಾಥನ್ ಎನ್ನುವ ಪ್ರಖ್ಯಾತ ತಳಿವಿಜ್ಞಾನಿ, ಆ ಸಮಯದಲ್ಲೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದ್ದರೂ, ನಮ್ಮ ಕಾಲೇಜಿನಲ್ಲಾಗಲೀ, ಪೇಪರ್ ಮತ್ತು ಮ್ಯಾಗಜೀನುಗಳಲ್ಲಾಗಲೀ ಅವರ ಬಗ್ಗೆ ವಿಶೇಷವಾಗಿ ಎಲ್ಲೂ ಓದಿರಲಿಲ್ಲ. ಸರಿ, ಎಮ್.ಎಸ್ಸಿ, ದಿನಗಳಲ್ಲಿ, ನಮ್ಮ ವಿಶ್ವವಿದ್ಯಾಲಯಗಳು ಜಾತೀಯತೆಯೆಂಬ ಪಿಡುಗಿನಿಂದ ಸಂಪೂರ್ಣವಾಗಿ ಸೊರಗಿರುವ ವಿಷಯ ಖುದ್ದಾಗಿ ಅರಿವಾಯಿತು.

ದುರದೃಷ್ಟವಶಾತ್, ಇಲ್ಲಿಯೂ ನಮ್ಮ ಶಿಕ್ಷಣ ಕೇವಲ ಪಠ್ಯಕ್ರಮಕ್ಕೆ ಅನುಗುಣವಾಗಿ ವಿನಃ, ಸಂಶೋಧನೆಯ ಮೇಲೆ ಯಾವ ಒತ್ತೂ ಇರಲಿಲ್ಲ. ಇಂದಿಗೂ ಈ ಪದ್ಧತಿ ಜಾರಿಯಲ್ಲಿದೆ ಎಂದು ತಿಳಿದು ಆಘಾತವಾಯಿತು. ವೃತ್ತಿ ವೈಷಮ್ಯ ಹೇರಳವಾಗಿರುವ ಮಾನಸ ಗಂಗೋತ್ರಿಯಲ್ಲಿ, ವಿದ್ಯಾರ್ಥಿಗಳ ಮುಂದೆ ಜಗಳವಾಡುತ್ತಿದ್ದ ನಮ್ಮ ಶಿಕ್ಷಕ ಮಹಾಶಯರಿಗೆ, ವಿಜ್ಞಾನದ ಬಗ್ಗೆ ನಮ್ಮನ್ನು ಪ್ರೇರೇಪಿಸುವ ಯಾವ ಉದ್ದೇಶವೂ ಇರಲಿಲ್ಲ. ಎಮ್.ಎಸ್ಸಿ. ಮಾಡುತ್ತಿದ್ದ ಸಮಯದಲ್ಲಿ, ಮೈಸೂರಿನಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನದ ಕಾಂಗ್ರೆಸ್ ಸಮ್ಮೇಳನದ ಸಮಯದಲ್ಲಿ, ಪ್ರಸಿದ್ಧ ಕೃಷಿ ವಿಜ್ಞಾನಿ ಎಮ್, ಎಸ್.ಸ್ವಾಮಿನಾಥನ್ ಅವರನ್ನು ಭೇಟಿಯಾಗಿ, ಅವರ ಜೊತೆ ತೆಗೆಸಿಕೊಂಡ ಫೋಟೊ ನನ್ನ ವಿದ್ಯಾರ್ಥಿ ಜೀವನದ ಅಮೂಲ್ಯ ಕ್ಷಣವೆನ್ನಬಹುದು. ಇಷ್ಟು ಹೊತ್ತಿಗಾಗಲೇ ಜೀವವಿಜ್ಞಾನದ ಪ್ರಪಂಚದಲ್ಲಿ ಕ್ರಾಂತಿ ಎಬ್ಬಿಸಿದ್ದ ಡಿಎನ್ಎ ಸರಣಿಯನ್ನು ತ್ವರಿತವಾಗಿ ನಕಲಿಸುವ ಪಿಸಿಆರ್ ಎನ್ನುವ ಸ್ವಯಂಚಾಲಿತ ವಿಧಾನದ ಆವಿಷ್ಕಾರ ನಡೆದಿತ್ತು. ನಮಗೆ ಇದರ ಹೆಸರೂ ತಿಳಿದಿರಲಿಲ್ಲ! ಇಂತಹ ರೋಗಗ್ರಸ್ತ ವ್ಯವಸ್ಥೆಯಲ್ಲಿ, ಸ್ವಯಂ ಪ್ರೇರಣೆಯಿಂದ ಪಿಎಚ್.ಡಿ. ಪದವಿ ಮಾಡಬೇಕೆಂಬ ಆಕಾಂಕ್ಷೆ ಹೊತ್ತಿದ್ದೆ.

ಕರ್ನಾಟಕ ವಿಶ್ವವಿದ್ಯಾಲಯ ೧೯೮೫-೯೦: Indian Council of Agricultural Research ಸಂಸ್ಥೆಯ ಸಂಶೋಧನಾ ವೇತನ ಪಡೆದು, ಪಾಚಿ ಸಸ್ಯ ವಿಜ್ಞಾನದಲ್ಲಿ ಸಂಶೋಧನೆ ನಡೆಸಲು, ಮೈಸೂರು ಬಿಟ್ಟು, ಉತ್ತರ ಕರ್ನಾಟಕದಲ್ಲಿರುವ ಮತ್ತೊಂದು

ಸಂಸ್ಕೃತಿಯ ನಗರ ಧಾರವಾಡವನ್ನು ಸೇರಿದೆ. ಒಲೆಯಿಂದ ಕೋಡೊಲೆಗೆ ಬಿದ್ದ ಅನುಭವ, ಮೈಸೂರು ವಿಶ್ವವಿದ್ಯಾಲಯವನ್ನು ಪೀಡಿಸುತ್ತಿದ್ದ ಜಾತೀಯತೆಯ ರೋಗ, ಈ ವಿದ್ಯಾಕೇಂದ್ರವನ್ನು ಸಹ ಬಲವಾಗಿ ಕಾಡುತ್ತಿತ್ತು. ಅಲ್ಲಿಗಿಂತಲೂ ಹೆಚ್ಚು ಸಂಕುಚಿತ ಮನೋಭಾವನೆಯ ಜನ, ಲಿಂಗಭೇದ ನೀತಿ ಹೀಗೆ ಹಲವಾರು ಸಮಸ್ಯೆಗಳನ್ನು ಹಾಗೂ ಹೀಗೂ ಎದುರಿಸುತ್ತಾ ನನ್ನ ಡಿಗ್ರಿ ಮುಗಿಸಿದ ಕೂಡಲೆ, ಅಲ್ಲಿಂದ ಕಾಲಿಗೆದರೆ ಸಾಕಪ್ಪಾ ಎನ್ನುವ ಅನುಭವ. ಎಲ್ಲಿಯೂ ವಿಜ್ಞಾನದ ಸಂಶೋಧನೆಯ ಅನನ್ಯ ಸ್ವಾದವನ್ನು ಅನುಭವಿಸುವ ಅವಕಾಶವೇ ಇಲ್ಲ. ಜೀನ್ ಥೆರಪಿ, ಮಾನವನ ಜೀನೋಮುಗಳ ರಹಸ್ಯವನ್ನು ಬಿಡಿಸಿದ ಅತ್ಯುನ್ನತ ಅನ್ವೇಷಣೆಗಳು ನಡೆಯುತ್ತಿದ್ದಾಗ, ನಾವಿನ್ನೂ ಹಳೆಯ ತಲಮಾರಿನ ಸ್ಪೆಕ್ಟ್ರೋಫೋಟೋಮೀಟರ್, ಸೆಲ್ ಕೌಂಟಿಂಗ್, ಅಂತಹ ವಿಧಾನಗಳನ್ನು ಬಳಸುತ್ತಿದ್ದೆವು. ಆಗಿನ್ನೂ ನಮ್ಮ ದೇಶಕ್ಕೆ ಇಣುಕುತ್ತಿದ್ದ ಕಂಪ್ಯೂಟರ್ ಎನ್ನುವ ಉಪಕರಣವನ್ನು ನಾವಿನ್ನೂ ನೋಡಿರಲಿಲ್ಲ. ನಮ್ಮ ವಿಭಾಗದಲ್ಲಿದ್ದ ಬೆರಳೆಣಿಸುವ ಸಂಖ್ಯೆಯ ಒಂದಿಬ್ಬರು ಪ್ರೊಫೆಸರುಗಳು ವಿದೇಶಗಳ ವಿಶ್ವವಿದ್ಯಾಲಯಕ್ಕೆ ಹೋಗಿ ಬಂದಿದ್ದರೆ, ಅವರನ್ನು ದೇವರ ಪೀಠದಲ್ಲಿ ಕೂರಿಸಿ ಮೆರೆಸಿದ್ದರು. ಅವರೋ ತಲೆತಿರುಗಿ ಯಾರನ್ನೂ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಪ್ರತಿಯೊಂದು ವಿಭಾಗದಲ್ಲೂ ಒಬ್ಬರನ್ನು ಕಂಡರೆ ಮತ್ತೊಬ್ಬರಿಗಾಗದು. ಇನ್ನು ಮುಕ್ತವಾಗಿ ವಿಜ್ಞಾನದ ವಿಷಯವನ್ನು ಚರ್ಚಿಸುವ, ಸಹಭಾಗಿತ್ವದಲ್ಲಿ ಸಂಶೋಧನೆ ನಡೆಸುವ ಅವಕಾಶವೇ ಇರಲಿಲ್ಲ. ಹುಡುಗಿಯಾದರಂತೂ, ಅವರಿಗೆ ಇನ್ನೂ ಅನೇಕ ಸಮಸ್ಯೆಗಳು. ಇನ್ನು ಕೆಲವೇ ಸಂಖ್ಯೆಯಲ್ಲಿದ್ದ ಗಣ್ಯ ಸಂಶೋಧನಾ ಸಂಸ್ಥೆಗಳ ಒಳಕ್ಕೆ ಕಾಲಿಡಲು ವಿಶ್ವವಿದ್ಯಾಲಯದ ಮಂದಿಗೆ ವಿಶೇಷವಾದ ಅರ್ಹತೆ ಅಥವಾ ಅಲ್ಲಿಯವರ ಕೃಪಾಕಟಾಕ್ಷ ಬೇಕಿತ್ತು. ಇಲ್ಲದಿದ್ದಲ್ಲಿ ನಮ್ಮಂತಹ ಬಡಪಾಯಿಗಳಿಗೆ ಅಲ್ಲಿ ಪ್ರವೇಶವಿರಲಿಲ್ಲ. ಇಂತಹ ಒಂದು ಪರಿಸರದಲ್ಲಿ ವಿಜ್ಞಾನದ ಬೆಳವಣಿಗೆಯಾಗಲು ಕಾರಣವೇ ಇಲ್ಲ.

ಇಷ್ಟೆಲ್ಲಾ ಸಾಹಸ ಪಟ್ಟು ಪಿಎಚ್.ಡಿ. ಮುಗಿಸಿದರೂ, ಅರ್ಹ ಕೆಲಸ ಪಡೆಯುವ ಕನಸು ಕನಸಾಗಿಯೇ ಉಳಿಯಿತು. ೯೦ರ ಆದಿಭಾಗದಲ್ಲಿ ಮದುವೆಯ ನಂತರ, ಪತಿ ಭೌತ ವಿಜ್ಞಾನಿಯಾದ್ದರಿಂದ ಭಾರತದ ಗಣ್ಯ ಸಂಶೋಧನಾ ಸಂಸ್ಥೆಯ ಸ್ವರೂಪವೊಂದನ್ನು ನೋಡುವ ಅವಕಾಶ ಸಿಕ್ಕಿತು. ಪುಣೆಯಲ್ಲಿ ಹೊಸದಾಗಿ ಸ್ಥಾಪಿತವಾಗಿದ್ದ, ಅಂತರ್ವಿಶ್ವವಿದ್ಯಾಲಯ ಖಗೋಳಶಾಸ್ತ್ರ ಮತ್ತು ಖಭೌತಶಾಸ್ತ್ರ ಕೇಂದ್ರದಲ್ಲಿ ಪೋಸ್ಟ್ ಡಾಕ್ಟರಲ್ ಅಧ್ಯಯನ ನಡೆಸಿದ್ದ ನನ್ನ ಪತಿ ಗುರುತ್ವಾಕರ್ಷಣೆಯ ಅಲೆಗಳ ಬಗ್ಗೆ ಸಂಶೋಧನೆ ನಡೆಸಿದ್ದರು. ಇಲ್ಲಿನ ಸೌಲಭ್ಯಗಳು ನಿಜಕ್ಕೂ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿದ್ದ ಸವಲತ್ತುಗಳಿಗಿಂತ ನೂರು ಪಟ್ಟು ಉತ್ತಮವಾಗಿದ್ದವು. ಹಾಗಾಗಿ ಅಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತರಬೇತಿ ಪಡೆದ ಗಣ್ಯ ಸಂಸ್ಥೆಗಳ ವಿಜ್ಞಾನಿಗಳಿದ್ದರು. ಈ

ಸಂಸ್ಥೆಯ ಬಗಲಿನಲ್ಲಿದ್ದ ಜಿ.ಎಮ್.ಆರ್.ಟಿ. ಎನ್ನುವ ಮತ್ತೊಂದು ಸಂಶೋಧನಾ ಸಂಸ್ಥೆ, ಕಡಿಮೆ ವೆಚ್ಚದಲ್ಲಿ ರೇಡಿಯೋ ಟೆಲಿಸ್ಕೋಪ್ ಒಂದನ್ನು ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಂಡಿತ್ತು. ಅದೇ ಮಟ್ಟದ ಬುದ್ಧಿಶಾಲಿಗಳು ವಿಶ್ವವಿದ್ಯಾಲಯಗಳಲ್ಲಿ ಸವಲತ್ತುಗಳಿಲ್ಲದೆ ಕೊಳೆಯುತ್ತಿದ್ದರು ಎನ್ನುವುದನ್ನು ಎರಡು ಕಡೆ ಈಗಾಗಲೇ ಕಂಡಿದ್ದ ನನಗೆ, ಈ ಮಲತಾಯಿ ಧೋರಣೆಯ ನಮ್ಮ ದೇಶದ ಪಾಲಿಸಿಗಳು ದೇಶವನ್ನು ಪ್ರಗತಿಯತ್ತ ನಡೆಸಬಹುದು ಎನ್ನುವ ವಿಶ್ವಾಸ ನೀಡಲಿಲ್ಲ.

೯೦ರ ಅಂತ್ಯಭಾಗದಲ್ಲಿ, ಗುರುತ್ವಾಕರ್ಷಣೆಯ ಅಲೆಗಳ ಅನ್ವೇಷಣೆಯ ಪ್ರಾಯೋಗಿಕ ವಿಭಾಗದಲ್ಲಿ ಸಂಶೋಧನೆ ನಡೆಸುವ ಸದವಕಾಶ ನನ್ನವರಿಗೆ, ಯು.ಕೆ. ದೇಶದ ಕಾರ್ಡಿಫ್ ವಿಶ್ವವಿದ್ಯಾಲಯದಲ್ಲಿ ಸಿಕ್ಕಾಗ, ಒಡನೆಯೇ ಸಂಸಾರ ಸಮೇತ ಅಲ್ಲಿಗೆ ಸ್ಥಳಾಂತರ ಗೈಯ್ಯುವ ತೀರ್ಮಾನ ಕೈಗೊಂಡೆವು. ಅಲ್ಲಿಂದ ಮುಂದೆ ವಿಜ್ಞಾನದ ನಿಜವಾದ ಮಹತ್ವ ಮತ್ತು ಚೇತನವೆಂದರೇನು ಅನ್ನುವುದನ್ನು ಅರಿತುಕೊಂಡಿದ್ದೇವೆ. ಅಲ್ಲಿಗೆ ಹೋದ ೧೦ ವರ್ಷಗಳ ತರುವಾಯ, ಗುರುತ್ವಾಕರ್ಷಣ ದಲೆಗಳನ್ನು ಅನ್ವೇಷಿಸುವ ಮಹತ್ಕಾರ್ಯದಲ್ಲಿ ಸಫಲತೆ ದೊರೆತಾಗ ನಮ್ಮ ಪ್ರಯತ್ನಕ್ಕೆ ನಿಜವಾದ ಯಶಸ್ಸು ದೊರೆತ ಅನುಭವವಾಯಿತು. ಅಷ್ಟೇ ಅಲ್ಲದೇ, ನಮ್ಮಿಬ್ಬರು ಮಕ್ಕಳು, ಅಲ್ಲಿನ ಮುಕ್ತ ವಾತಾವರಣದಲ್ಲಿ ವಿಜ್ಞಾನ ಅಧ್ಯಯನ ನಡೆಸಿ, ತಮ್ಮ ಕನಸುಗಳನ್ನು ನನಸಾಗಿಸುತ್ತಿದ್ದಾರೆ. ಈ ಮಧ್ಯದಲ್ಲಿ ನಮ್ಮ ದೇಶಕ್ಕೆ ಅನೇಕ ಬಾರಿ ಹೋಗಿಬಂದಿದ್ದೇವೆ.

ನೂತನ ಮಿಲೇನಿಯಮ್: ನಮ್ಮ ದೇಶವನ್ನು ಸುನಾಮಿಯಂತೆ ಆವರಿಸಿ ಕ್ರಾಂತಿಯೆಬ್ಬಿಸಿದ ಕಂಪ್ಯೂಟರ್ ತಂತ್ರಜ್ಞಾನದ ಪ್ರಗತಿ, ವಿಜ್ಞಾನವನ್ನು ಸಾಕಷ್ಟು ಮೂಲೆಗುಂಪಾಗಿಸಿದೆ. ವಿಜ್ಞಾನದ ಶಿಕ್ಷಣದ ಕಡೆಗೆ ದೃಷ್ಟಿ ಹರಿಸುವ ಯುವಕ- ಯುವತಿಯರ ಸಂಖ್ಯೆ ಬಹಳ ಕಡಿಮೆ. ಸಾಫ್ಟ್‌ವೇರ್ ಇಂಜಿನಿಯರಿಂಗ್ ಪದವಿಯಿಲ್ಲದ ತರುಣರುತರುಣಿಯರು, ಶುದ್ಧ ಶುಂಠಿಗಳು ಎನ್ನುವಂತಾಗಿದೆ. ಬ್ಯಾಂಕ್, ಬಹುರಾಷ್ಟ್ರೀಯ ನಿಗಮದ ಉದ್ದಿಮೆಗಳಲ್ಲಿ ಒಂದು ಸಾಧಾರಣ ಕೆಲಸ ಇದ್ದರೂ ಸರಿ, ಆದರೆ ಮೂಲಭೂತ ವಿಜ್ಞಾನವನ್ನು ಕಣ್ಣೆತ್ತಿ ನೋಡುವುದೂ ಮಹಾಪಾಪ! ಕೇವಲ ಈ ಕ್ಷೇತ್ರದಲ್ಲಿ ಉದ್ಯೋಗದ ಅವಕಾಶವಿರುವ ಪ್ರಸಕ್ತ ಪರಿಸ್ಥಿತಿಯಲ್ಲಿ, ಜನಸಾಮಾನ್ಯರ ತಪ್ಪೇನಿಲ್ಲ! ಸ್ವಾತಂತ್ರ ಬಂದಾಗಿನಿಂದ, ಅಂತಾರಾಷ್ಟ್ರೀಯ ಮಟ್ಟದಲ್ಲಿ, ಭಾರತೀಯ ವಿಜ್ಞಾನ ಮತ್ತು ವಿಜ್ಞಾನಿಗಳ ಕೊಡುಗೆಯೇನು? ಈ ಪ್ರಶ್ನೆ ಎದ್ದಾಗಲೆಲ್ಲ, ನಮ್ಮ ಉನ್ನತ ಪರಂಪರೆ, ಸಂಸ್ಕೃತಿ ಮತ್ತು ಹಿಂದಿನ ಪುರಾಣ ಮತ್ತು ಹಲವಾರು ಸಾಧನೆಗಳನ್ನು ಎತ್ತಿ ಹಿಡಿದು, ಎಲ್ಲರ ಬಾಯಿಬಡಿಯುವ ನೂತನ ಸಂಪ್ರದಾಯವೊಂದು ಭಾರತದಲ್ಲಿ ತಲೆ ಎತ್ತಿದೆ. ಇತ್ತೀಚೆಗೆ, ನಡೆದ ರಾಷ್ಟ್ರೀಯ ವಿಜ್ಞಾನದ ಕಾಂಗ್ರೆಸ್ ಮೇಳದಲ್ಲಿ, "ಭಾರತದಲ್ಲಿ ವಿಜ್ಞಾನದ ಇತಿಹಾಸ" ಎನ್ನುವ ವಿಷಯದ ಬಗ್ಗೆ ಒಂದು ದೊಡ್ಡ ಚರ್ಚೆಯಾಯಿತು! ಪ್ರತಿಷೇಧ

ಅಭಿಪ್ರಾಯಗಳಿರುವ ಈ ವಿಷಯದ ಬಗ್ಗೆ ಇಂತಹದೊಂದು ಭಾರಿ ಸಮ್ಮೇಳನದಲ್ಲಿ ಚರ್ಚೆ ನಡೆಯಬೇಕಾದ್ದು ಸೂಕ್ತವೇನೋ ನಿಜ,

ಈ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದ ಹಲವು ಸಂಸ್ಕೃತ ವಿದ್ವಾಂಸರು ಮತ್ತು ಹಿಂದೂವಾದವನ್ನು ಪ್ರಬಲವಾಗಿ ಬೆಂಬಲಿಸುತ್ತಿರುವ, ಸಂಪ್ರದಾಯವಾದಿಗಳ ಒಂದು ತಂಡದವರು, "ಆಧುನಿಕ ವಿಜ್ಞಾನ, ತಂತ್ರಜ್ಞಾನದ ಅನೇಕ ಶಾಖೆಗಳಾದ ಕ್ವಾಂಟಮ್ ಮೆಕಾನಿಕ್ಸ್, ಸಾಪೇಕ್ಷತೆ, ಅಂತರಿಕ್ಷಯಾನ, ಪರಮಾಣು ಅಸ್ತ್ರಗಳ ಬಳಕೆಯಿಂದ ಹಿಡಿದು, ಜೀವಕೋಶ ಜೀವ-ವಿಜ್ಞಾನ (Stem cell research) ಮತ್ತು ಪ್ಲಾಸ್ಟಿಕ್ ಸರ್ಜರಿಯ ಬಗ್ಗೆಯೂ ನಮ್ಮ ಪೂರ್ವಜರಿಗೆ ಬಹಳ ಚೆನ್ನಾಗಿ ತಿಳಿದಿತ್ತು", ಎಂಬ ಹಕ್ಕಿನ ಹೇಳಿಕೆ ನೀಡಿದರು. ಇವರ ಪ್ರತಿವಾದಿಗಳು, ಇಂತಹ ಪ್ರಾಚೀನ ಸಾಧನೆಗಳ ಮೇಲಿನ ಹಕ್ಕು ಸಾಧನೆಗಳು ಅಸ್ಪಷ್ಟ, ಸಂಶಯಾಸ್ಪದ ಹಾಗೂ ಅಸಂಬದ್ಧವೆಂದು ವ್ಯಂಗ್ಯವಾಗಿ ತಳ್ಳಿಹಾಕಿ, ಸಾಕ್ಷಾಧಾರ ಮತ್ತು ಪುರಾವೆಗಳಿಲ್ಲದ ಇಂತಹ ಹೇಳಿಕೆಗಳು ನಮ್ಮ ದೇಶದ ವಿಜ್ಞಾನಿಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ನಗೆಪಾಟಲಿಗೀಡಾಗಿಸುತ್ತಿವೆ ಎಂದು ತಮ್ಮ ಪ್ರತಿವಾದವನ್ನು ಮಂಡಿಸಿದ್ದರು. ಈ ಹೇಳಿಕೆಗಳನ್ನು ನೀಡುವ ಗುಂಪಿನ ವಾದಗಳು, ಹಲವಾರು ಹಳೆಯ ಪುಸ್ತಕಗಳಲ್ಲಿರುವ ಕೆಲವು ವಿನ್ಯಾಸಗಳಿಂದ ಪ್ರೇರಿತವಾಗಿದ್ದು,ಅವನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ ನಮ್ಮವರೇ ಹಲವಾರು ತಂತ್ರಜ್ಞಾನ ಪಂಡಿತರು, ಇದನ್ನು ವೈಜ್ಞಾನಿಕವಾಗಿ ದೋಷಯುಕ್ತವೆಂದು ತೋರಿಸಿಯಾಗಿದೆ. ಅಂದ ಹಾಗೆ ಈ ಪ್ರತಿವಾದ ಗುಂಪಿನ ವಿಜ್ಞಾನಿಗಳೆಲ್ಲಾ ಖ್ಯಾತರು, ಸಂಸ್ಕೃತ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ನಿಜವಾಗಿಯೂ ಅಭಿಮಾನವುಳ್ಳವರೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ!

ಉನ್ನತ ಪರಂಪರೆಯಿರುವ ಭಾರತ ದೇಶದ ಹಲವು ಹಿಂದುತ್ವ ಪ್ರತಿಪಾದಿ ಸಂಪ್ರದಾಯವಾದಿಗಳು, ಇಂದು ಅಸಂಭವವೆನಿಸುವ, ನಗೆಪಾಟಲಿನ ಕಥೆಗಳನ್ನೇಕೆ ಸೃಷ್ಟಿಸುತ್ತಿದ್ದಾರೆ? ಕೇವಲ ಹಿಂದಿನ ಪರಂಪರೆಯ ಬಗ್ಗೆ ಹೆಮ್ಮೆಯಿರುವ ನಮ್ಮಲ್ಲಿ ನಿಜಕ್ಕೂ ತಾರ್ಕಿಕ ಮತ್ತು ವೈಜ್ಞಾನಿಕ ಮನೋಭಾವನೆ ಇದೆಯೇ? ಬ್ರಿಟಿಷರ ದಾಸ್ಯದಲ್ಲಿದ್ದಾಗಲೂ ಸೃಷ್ಟಿಯಾದಂತಹ ಮೇಧಾವಿಗಳು, ಇಂದು ಸ್ವತಂತ್ರ ಭಾರತದಲ್ಲೇಕೆ ಹುಟ್ಟುತ್ತಿಲ್ಲ? ಇದಕ್ಕೆ ಕಾರಣ ನಮ್ಮ ಪ್ರಸಕ್ತ ರಾಜಕೀಯ ಪರಿಸ್ಥಿತಿ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಭ್ರಷ್ಟಾಚಾರದಿಂದ ತುಂಬಿರುವ ನಮ್ಮ ವ್ಯವಸ್ಥೆ, ಜಾತೀಯತೆಯ ತಳಹದಿಯ ಮೇಲಾಧಾರಿತವಾಗಿದ್ದು, ಸಮಾಜದ ಪ್ರತಿಯೊಂದು ಹಂತದಲ್ಲೂ ಈ ಸಿದ್ಧಾಂತವನ್ನೇ ಅನುಸರಿಸುತ್ತಾ, ಗುಣಮಟ್ಟವನ್ನು ಸಂಪೂರ್ಣವಾಗಿ ತುಳಿದುಹಾಕಿದೆ. ಶಾಲಾ ಕಾಲೇಜಿನ ದಿನಗಳಿಂದಲೂ, ಈ ಕೊಳೆತುನಾರುವ ವ್ಯವಸ್ಥೆಯ ಸೂತ್ರಗಳಿಗೆ ಬಲಿಯಾಗಿ, ವಿಜ್ಞಾನದಲ್ಲಿ ಉನ್ನತ ವಿದ್ಯಾಭ್ಯಾಸ ನಡೆಸಿದರೂ, ಸರಿಯಾದ ಕೆಲಸ ಸಿಗದೆ ಫಜೀತಿಪಟ್ಟ ನಮ್ಮ

ಅನುಭವ ಇಂದಿಗೂ ಹಸಿರಾಗಿಯೇ ಇದೆ. ಈಗಲೂ ಭಾರತದಿಂದ ಬರುವ ನಮ್ಮ ತರುಣ ವಿಜ್ಞಾನಿಗಳ ಜೊತೆ ಮಾತನಾಡಿದರೆ, ಅವರ ಅನುಭವಗಳು ನಮ್ಮದಕ್ಕಿಂತ ಬೇರೆಯಿಲ್ಲ. ಕೆಲವು ವಿಷಯಗಳಲ್ಲಿ ಇನ್ನೂ ಕೆಟ್ಟಿದೆ ಎನ್ನುವ ಇತ್ತೀಚಿನ ಸುದ್ದಿ ಕೇಳಿ ನಿರಾಸೆಯಾಯಿತು. ಅವರ ಪ್ರಕಾರ ಇಂದಿಗೂ ನಮ್ಮ ಶಿಕ್ಷಣ ಪದ್ಧತಿ ಕೇವಲ ಪಠ್ಯ ಪುಸ್ತಕದ ವಿಷಯಸೂಚಿಯಾಧಾರಿತ, ಟೆಸ್ಟ್ ಮತ್ತು ಪರೀಕ್ಷೆಗಳ ಫಲಿತಾಂಶಾಧಾರಿತ ವ್ಯವಸ್ಥೆಯಾಗಿಯೇ ಉಳಿದಿದೆ. ಕಾಲೇಜುಗಳಲ್ಲಿ ಸಂಶೋಧನೆಯ ಮೇಲೆ ಯಾವ ಒತ್ತೂ ಇಲ್ಲ. ನಮ್ಮ ಮಕ್ಕಳಿಗೆ ಸ್ವತಂತ್ರವಾಗಿ ಚಿಂತಿಸಿ, ಓದಿದ್ದನ್ನು ಪ್ರಾಯೋಗಿಕವಾಗಿ ಒರೆಹಚ್ಚಿ ನೋಡಿ ಕಲಿಯುವ ಸ್ವಾತಂತ್ರ್ಯ, ಸೌಲಭ್ಯ ಮತ್ತು ವಾತಾವರಣವಿಲ್ಲ. ನಾಯಿಕೊಡೆಗಳಂತೆ ತಲೆಯೆತ್ತಿ ಹರಡಿರುವ, ಗುಣಮಟ್ಟವಿಲ್ಲದ, ಮಾನದಂಡದ ಅರಿವಿಲ್ಲದ ಖಾಸಗಿ ಶಾಲಾ ಕಾಲೇಜುಗಳು, ಶಿಕ್ಷಣವನ್ನು ವ್ಯಾಪಾರದ ರೀತಿಯಲ್ಲಿ ಮಾರುತ್ತಿವೆ. ಇವರನ್ನು ಪರೀಕ್ಷಿಸಿ, ಇವರ ಅವ್ಯವಹಾರಗಳನ್ನು ಶಿಕ್ಷಿಸುವವರಿಲ್ಲ. ಹಳ್ಳಿಗಳಲ್ಲಂತೂ, ಪರಿಸ್ಥಿತಿ ಇನ್ನೂ ಶೋಚನೀಯವಾಗೇ ಉಳಿದಿದೆ. ಇನ್ನು ಉನ್ನತ ವಿದ್ಯಾಭ್ಯಾಸದ ಪರಿಸ್ಥಿತಿಯಂತೂ ಮತ್ತಷ್ಟು ಹದಗೆಟ್ಟಿದೆ. ಲಕ್ಷಾಂತರ ವಿದ್ಯಾರ್ಥಿಗಳು ತಮ್ಮ ಪದವಿಗಾಗಿ ಅವಲಂಬಿಸಿರುವ ನಮ್ಮ ನೂರಾರು ವಿಶ್ವವಿದ್ಯಾಲಯಗಳು ಕೇವಲ ಜಾತಿಯಾಧಾರಿತ ವ್ಯವಸ್ಥೆಯ ಮೇಲೆ ನಿಂತಿದ್ದು, ಗುಣಮಟ್ಟ ಕಳಪೆ ಸಂಶೋಧನೆಯಂತೂ ಶೂನ್ಯ ಎನ್ನಬಹುದು.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆಗೈದು, ಸಾಕಷ್ಟು ಐಶ್ವರ್ಯವನ್ನು ಸಂಪಾದಿಸಿರುವ ಭಾರತವೇಕೆ ಇನ್ನೂ ವಿಜ್ಞಾನ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಿಂದೆಯೇ ಉಳಿದಿದೆ? ಇದಕ್ಕೆ ಕಾರಣ ಹಲವಾರು. ಇದೊಂದು ಬಹುಕ್ರಿಯಾತ್ಮಕ ಸಮಸ್ಯೆಯೆನ್ನಬಹುದು. ನಮ್ಮ ಮಕ್ಕಳನ್ನು ವಿಜ್ಞಾನದೆಡೆಗೆ ಒಲಿಸುವ, ಪ್ರೇರೇಪಿಸುವ ವೈಜ್ಞಾನಿಕ ಪ್ರಭಾವಶಾಲಿ ಕಾರ್ಯಕ್ರಮಗಳು ಶಾಲೆ, ಕಾಲೇಜುಗಳಲ್ಲಿಲ್ಲ. ನಮ್ಮ ದೂರದರ್ಶನ ಮಾಧ್ಯಮದಲ್ಲಿ, ಮಕ್ಕಳು ಮತ್ತು ಮಾತಾಪಿತೃಗಳನ್ನು ಬಡಿದೆಬ್ಬಿಸಿ ಎಚ್ಚರಿಸುವಂತಹ ಜನಪ್ರಿಯ ವೈಜ್ಞಾನಿಕ ಕಾರ್ಯಕ್ರಮಗಳಂತೂ ಇಲ್ಲವೇ ಇಲ್ಲ. ದೇಶದಲ್ಲಿ ನೂರಾರು ಟೆಲಿವಿಜನ್ ಚಾನಲ್ಲುಗಳಿದ್ದರೂ, ಅಲ್ಲಿ ಕಾಣಸಿಗುವುದು ಕೇವಲ ಕೌಟುಂಬಿಕ ಕಲಹ ಪ್ರಾಧಾನ್ಯದ ಸರಣಿಗಳು, ಕ್ರಿಕೆಟ್, ಬಾಲಿವುಡ್, ರಿಯಾಲಿಟಿ ಪ್ರದರ್ಶನ ಕಾರ್ಯಕ್ರಮಗಳಷ್ಟೇ! ೯೦ರ ದಶಕದ ಶುರುವಿನಲ್ಲಿ, ನಮ್ಮ ದೂರದರ್ಶನ ಪ್ರಸಾರ ಪ್ರಾರಂಭವಾದ ದಿನಗಳಲ್ಲಿ ಪ್ರಸಿದ್ಧ ನಾಟಕಕಾರ, ನಿರ್ದೇಶಕ, ನಟ ಗಿರೀಶ್ ಕಾರ್ನಾಡ್ ನಡೆಸಿಕೊಡುತ್ತಿದ್ದ "Turning Point" ಎನ್ನುವ ಜನಪ್ರಿಯ ವಿಜ್ಞಾನ ಕಾರ್ಯಕ್ರಮ ಸೊಗಸಾಗಿರುತ್ತಿತ್ತು. ಅಷ್ಟೇ ಅಲ್ಲ, ಆ ಕಾರ್ಯಕ್ರಮಕ್ಕೆ ವಿಶ್ವಸಂಸ್ಥೆ ಆ ವರ್ಷದ ಅತ್ಯುತ್ತಮ ಜನಪ್ರಿಯ ವಿಜ್ಞಾನ

ಕಾರ್ಯಕ್ರಮವೆಂದು ಗೌರವಿಸಿದ್ದು ಇನ್ನೂ ನೆನಪಿದೆ. ಇಂತಹ ಉತ್ತಮ ಗುಣಮಟ್ಟದ ಕಾರ್ಯಕ್ರಮಗಳನ್ನು ಪ್ರಸರಿಸುತ್ತಿದ್ದ ನಮ್ಮ ದೂರದರ್ಶನವೇಕೆ ಇಂದು ಕಳಪೆಯಾಗಿದೆ?

ಪ್ರಪಂಚದ ಅದ್ಭುತ ಸಂಗತಿಗಳನ್ನು ಸರಣಿಯ ರೂಪದಲ್ಲಿ ತಯಾರಿಸಿ ಪ್ರಸರಿಸುವ ಈ ಕಾರ್ಯಕ್ರಮಗಳು, ಎಳೆಯ ಹೃದಯಗಳನ್ನು ಪ್ರಭಾವಿತಗೊಳಿಸುವುದರಲ್ಲಿ ಸಂದೇಹವೇ ಇಲ್ಲ. ಸಿ.ವಿ.ರಾಮನ್, ಚಂದ್ರಶೇಖರ್, ರಾಮಾನುಜನ್, ಹರಗೋಬಿಂದ್ ಖುರಾನಾ ಅಂತಹ ಮೇಧಾವಿಗಳಿಗೆ ಜನ್ಮವಿತ್ತ ನಮ್ಮ ನಾಡಿನಲ್ಲಿ, ಅವರ ಜೀವನ- ಚರಿತ್ರೆಯನ್ನು ಆಧರಿಸಿ ಮಾಡಿರುವ ಉತ್ತಮವಾದ ಸಾಕ್ಷ್ಯಚಿತ್ರಗಳಿಲ್ಲ. ಪಾಶ್ಚಾತ್ಯರು ಅವರ ಸಾಧನೆಗಳನ್ನು ಇಂದಿಗೂ ಕೊಂಡಾಡಿ ಅವರ ನೆನಪಿನಲ್ಲಿ ಚಿತ್ರಗಳನ್ನು ತಯಾರಿಸುತ್ತಿರುವುದನ್ನು ನೋಡಿಕೊಂಡು ನಾವಿನ್ನೂ ಕೈಕಟ್ಟಿಯೇ ಕುಳಿತಿದ್ದೇವೆ. ಇದುವರೆಗೂ ನಮ್ಮ ದೇಶದಲ್ಲಿ ನಡೆದಿರಬಹುದಾದ ವೈಜ್ಞಾನಿಕ ಸಾಧನೆಗಳ ಬಗ್ಗೆ ನಮ್ಮ ಸರಕಾರ ಯಾವ ಉತ್ತಮ ಮಟ್ಟದ ಸಾಕ್ಷ್ಯ ಚಿತ್ರಗಳನ್ನೂ ನಿರ್ಮಿಸುವ ಗೋಜಿಗೆ ಹೋದಂತಿಲ್ಲ. ಸಾಮಾನ್ಯ ಜನರಲ್ಲಿ ಸಾಂಕ್ರಾಮಿಕ ರೋಗದಂತೆ ಹಬ್ಬಿರುವ ಮೂಢನಂಬಿಕೆಗಳನ್ನು ನಿರ್ಮೂಲನಗೊಳಿಸಿ, ವಿಜ್ಞಾನದಿಂದ ನಾವು ಪಡೆಯುತ್ತಿರುವ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನಗಳು ಬಹಳ ಕಡಿಮೆ. ವಿಜ್ಞಾನ ಮತ್ತು ವಿಜ್ಞಾನಿಗಳ ಬಗ್ಗೆ ಇಂಗ್ಲಿಷ್ ಭಾಷೆಯಲ್ಲಿ ಹಲವಾರು ಜನಪ್ರಿಯ ಪುಸ್ತಕಗಳು ಅಲ್ಲೊಂದು ಇಲ್ಲೊಂದು ಪ್ರಕಟವಾಗುತ್ತಿರಬಹುದು. ಆದರೆ ಇಂಗ್ಲಿಷ್ ಭಾಷೆಯ ಅರಿವಿಲ್ಲದಂತಹ ಸಾಮಾನ್ಯ ಜನರನ್ನು ಮುಟ್ಟುವಂತಹ ಜನಪ್ರಿಯ ಲೇಖನಗಳು, ಪುಸ್ತಕಗಳು ಪ್ರಾಂತೀಯ ಭಾಷೆಗಳಲ್ಲಿ ಅಷ್ಟೇನು ಪ್ರಕಟವಾಗುತ್ತಿಲ್ಲ. ಖಗೋಳಶಾಸ್ತ್ರ, ಗಣಿತಶಾಸ್ತ್ರ, ವೈದ್ಯಕೀಯ, ಗಿಡಮೂಲಿಕೆ ಶಾಸ್ತ್ರಗಳಲ್ಲಿ ಭಾರತದ ಸಾಧನೆ, ಕೊಡುಗೆಗಳ ಬಗ್ಗೆ ಸ್ವತಂತ್ರ ಸಂಶೋಧನೆ ಮತ್ತು ಅಧ್ಯಯನಗಳು ಹೆಚ್ಚಿಗೆ ನಡೆಯುತ್ತಿಲ್ಲ. ವಿಶ್ವವಿದ್ಯಾಲಯಗಳು, ಗಣ್ಯ ಸಂಶೋಧನಾ ಸಂಸ್ಥೆಗಳ ನಡುವಿರುವ ಅಂತರ ದಿನದಿನಕ್ಕೂ ಹೆಚ್ಚುತ್ತಲೇ ಇದೆ. ಖಾಸಗಿ ಮತ್ತು ಸರಕಾರಿ ಶಿಕ್ಷಣ ಸಂಸ್ಥೆಗಳ ನಡುವಿನ ಅಂತರ, ಸಂಪನ್ಮೂಲಗಳ ಕೊರತೆ, ಶೋಷಣೆ, ಮಲತಾಯಿ ಧೋರಣೆಗಳು ಮುಂದುವರೆಯುತ್ತಲೇ ಇವೆ. ಈಗ ಎರಡು ದಶಕಗಳಿಂದ ಭಾರತ ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿ, ಮಧ್ಯಮವರ್ಗದ ಜನಜೀವನ ಮಟ್ಟವನ್ನು ಸುಧಾರಿಸಿರುವ ಪ್ರಭಾವಿ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ತಮಗಿರುವ ಅಧಿಕಾರವನ್ನು ಉಪಯೋಗಿಸಿ, ತಮ್ಮದೇ ಶಂಖವನ್ನೂದುತ್ತಾ ಒಂದು ಪರ್ಯಾಯ ವ್ಯವಸ್ಥೆಯನ್ನು ಸೃಷ್ಟಿಸಿಬಿಟ್ಟಿವೆ. ನಮ್ಮ ಯುವಜನಾಂಗ ಅದನ್ನು ಬಿಟ್ಟರೆ ಮತ್ತೊಂದಿಲ್ಲ ಎನ್ನುವ ರೀತಿಯಲ್ಲಿ, ಆ ಶಂಖನಾದಕ್ಕೆ ಮರುಳಾಗಿ ತಲೆತೂಗುತ್ತಿದೆ.

ಇಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲೂ ವಿಜ್ಞಾನದಲ್ಲಿ ಆಸ್ಥೆಯಿರುವ ಒಂದು ಸಣ್ಣ ಸಂಖ್ಯೆಯ ಯುವಜನರು ತಮ್ಮ ಭವಿಷ್ಯವನ್ನರಸಿ ವಿದೇಶೀ ವಿಶ್ವವಿದ್ಯಾಲಯಗಳಿಗೆ

ಉನ್ನತ ವಿದ್ಯಾಭ್ಯಾಸಕ್ಕೆ ಬಂದರೂ, ದೇಶಕ್ಕೆ ವಾಪಸಾಗುವುದು ಬಹಳ ಅಪರೂಪ. ಹಾಗಾಗಿ ಈಗ ೫೦ ವರ್ಷಗಳ ಹಿಂದಿದ್ದಂತೆ ಈಗಲೂ ಪ್ರತಿಭಾ ಪಲಾಯನ ನಡೆಯುತ್ತಲೇ ಇದೆ. ಇತ್ತೀಚಿನ ವರ್ಷಗಳಲ್ಲಿ ಭಾರತದ ಹಲವಾರು ಗಣ್ಯ ಸಂಶೋಧನಾ ಸಂಸ್ಥೆಗಳು ಉತ್ತಮ ದರ್ಜೆಯ ಸಂಶೋಧನೆ ನಡೆಸುತ್ತಿರುವುದು ಸ್ವಲ್ಪ ಆಶಾದಾಯಕ ಸುದ್ದಿ, ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ ಇಸ್ರೋ, ದೂರಸಂಪರ್ಕ ಉಪಗ್ರಹಗಳನ್ನು ಹಾರಿಸಿ ದಾಖಲೆ ಸ್ಥಾಪಿಸಿರುವುದಲ್ಲದೇ, ಚಂದ್ರಯಾನ, ಮಂಗಳಯಾನದಂತಹ ಉತ್ತಮ ಯೋಜನೆಗಳನ್ನು ಹಮ್ಮಿಕೊಂಡಿದೆ. ಇಂತಹ ಉನ್ನತ ದರ್ಜೆಯ ಸಂಶೋಧನೆಗಳಲ್ಲಿ ಬಹುಮಟ್ಟಿಗೆ ತಮ್ಮದೇ ತಂತ್ರಜ್ಞಾನವನ್ನು ಬಳಸುತ್ತಿರುವುದು ಹೆಮ್ಮೆಯ ವಿಷಯ. ಇಸ್ರೋ ಸಂಸ್ಥೆ ಇತ್ತೀಚೆಗೆ ನಮ್ಮ ವಿಶ್ವವಿದ್ಯಾಲಯಗಳು ಮತ್ತು ಐಐಟಿ ಸಂಸ್ಥೆಗಳೊಡನೆ ಸಹಭಾಗಿತ್ವದಲ್ಲಿ ಸಣ್ಣ ಉಪಗ್ರಹಗಳನ್ನು ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸುತ್ತಿರುವುದು ಸಂತೋಷದ ಸಂಗತಿ. ಆದರೆ, ಇಂತಹ ಸಹಭಾಗಿತ್ವದ ಯೋಜನೆಗಳು ಜೀವವಿಜ್ಞಾನ ಕ್ಷೇತ್ರದಲ್ಲಿ ನಡೆಯಬೇಕಾಗಿದೆ.

ಭಾರತೀಯ ಖಗೋಳ ವಿಜ್ಞಾನ ಸಂಸ್ಥೆಗಳು ಅಂತಾರಾಷ್ಟ್ರೀಯ ಮಟ್ಟದ ಬೃಹತ್ ಪ್ರಯೋಗಗಳಲ್ಲಿ ಸಹಭಾಗಿತ್ವ ನಡೆಸುತ್ತಿದ್ದರೂ, ಈ ಪ್ರಯೋಗಗಳ ಉಪಕರಣಗಳ ನಿರ್ಮಾಣದಲ್ಲಿ ನಮ್ಮ ದೇಶದ ಕೊಡುಗೆ ಗಮನಾರ್ಹವಾಗಿಲ್ಲ ಎನ್ನುವುದು ವಾಸ್ತವ ಸಂಗತಿ. ಈ ವಿದೇಶೀ ಅವಲಂಬನೆ ೬೦ರ ದಶಕದಲ್ಲಿದ್ದಂತೆ ಇನ್ನೂ ಇರುವುದು ಸ್ವಲ್ಪ ವಿಪರ್ಯಾಸವೇ! ನಾವು ದೇಶ ಬಿಟ್ಟು ಎರಡು ದಶಕಗಳಾದವು. ಈ ನಡುವೆ ನಮ್ಮ ದೇಶ ವಿವಿಧ ರಂಗಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದೆ. ಮಧ್ಯಮವರ್ಗದ ವರಮಾನ ಹೆಚ್ಚಿದೆ, ತರುಣರು ಉತ್ತಮ ದರ್ಜೆಯ ಜೀವನ ನಡೆಸುತ್ತಿದ್ದಾರೆ, ಊಟೋಪಚಾರ, ಉಡುಗೆ-ತೊಡುಗೆ, ವಿನೋದ-ವಿಹಾರ, ಮನೋರಂಜನೆ, ಕ್ರೀಡೆಯ ಸವಲತ್ತುಗಳು ನಮ್ಮ ದಿನಗಳಿಗಿಂತ ಉತ್ತಮವಾಗಿವೆ. ಮಧ್ಯಮ ವರ್ಗದ ಜನಸಂಖ್ಯೆ ಇಮ್ಮಡಿಯಾಗಿದೆ. ಹಾಗಾಗಿ ಅವರಲ್ಲಿ ಆಸಕ್ತಿಯಿರುವ ಕೆಲವರು ವಿಜ್ಞಾನ ಶಿಕ್ಷಣವನ್ನರಸಿ ಯು.ಕೆ., ಯೂರೋಪ್ ಮತ್ತು ಅಮೆರಿಕ ದೇಶಗಳಿಗೆ ಹೆಚ್ಚಿನ ಸಂಖ್ಯೆಯಲ್ಲಂತೂ ಬರುತ್ತಿದ್ದಾರೆ. ಆದರೆ ಅವರಲ್ಲಿ ವಾಪಸಾಗುವವರು ಕಡಿಮೆ. ಈಗೀಗ ವಾಪಸಾದವರಿಗೆ ಭಾರತದಲ್ಲಿ ತಲೆಯೆತ್ತುತ್ತಿರುವ ಹೊಸ ಐಐಟಿ ಶಾಖೆಗಳು, ಐಸರ್ ಎನ್ನುವ ನೂತನ ವೈಜ್ಞಾನಿಕ ಸಂಸ್ಥೆಗಳಲ್ಲಿ ಕೆಲಸ ಸಿಗುತ್ತಿದ್ದರೂ, ವಾಪಸಾದ ಕೆಲವೇ ವರ್ಷಗಳಲ್ಲಿ ಅಲ್ಲಿನ ರಾಜಕೀಯ, ಅವ್ಯವಸ್ಥೆಗಳಿಗೆ ಬೇಸತ್ತು ದೇಶ ಬಿಟ್ಟು ಮತ್ತೆ ಪಶ್ಚಿಮದ ಕಡೆಗೆ ಪ್ರಯಾಣಿಸುತ್ತಾರೆ, ಇಲ್ಲವೆ ಸಂಪೂರ್ಣವಾಗಿ ಭ್ರಮನಿರಸನರಾಗಿ ವಿಜ್ಞಾನನ್ನೇ ಬಿಟ್ಟಿರುವ ನಿದರ್ಶನಗಳಿವೆ.

ಮುಕ್ತಾಯ: ಮನೆಯಲ್ಲಿ ತಂದೆತಾಯಿಯರು ವಿದ್ಯಾವಂತರಾದರೂ, ವೈಜ್ಞಾನಿಕ ಚಿಂತನೆಯಿರುವ ಮಂದಿ ಕೇವಲ ಬೆರಳೆಣಿಕೆಯಷ್ಟು, ನಾವು ವಿದ್ಯಾರ್ಥಿಗಳಾದಾಗ ಯಾವ ಪರಿಸ್ಥಿತಿ ಇತ್ತೋ, ಈಗಲೂ ಹೆಚ್ಚು ಕಡಿಮೆ ಅದೇ ಸ್ಥಿತಿ ಇರುವುದು ಬಹಳ ನಿರಾಶಾದಾಯಕ. ನೌಕರಿಗಾಗಿಯೇ ಕಲಿಕೆ ಮತ್ತು ಆ ಮೂಲಕ ಡಿಗ್ರಿ ಪಡೆದು ಒಂದು ಸರ್ಕಾರೀ ನೌಕರಿ ಪಡೆದುಬಿಟ್ಟರೆ ಅಥವಾ ಮಲ್ಟಿನ್ಯಾಶನಲ್ ಉದ್ಯಮದಲ್ಲಿ ಕ್ಯಾಂಪಸ್ ಆಯ್ಕೆ ಆದರೆ ಸಾಕು, ಜೀವನ ಸಾರ್ಥಕ ಎಂಬ ಮನೋಭಾವ ಇನ್ನೂ ಸುಳಿದಾಡುತ್ತಿರುವುದರಿಂದಲೋ ಏನೋ, ಕೆಲವೊಂದು ಅದ್ಭುತ ಪಾರಂಪರಿಕ ಕಲಾವಂತಿಕೆಯಿಂದಲೇ ಜೀವನ ಅಸಾಧ್ಯವಾಗಿರುವ ಇಂದಿನ ಕೃತಕ ಬದುಕಿನ ಸುಳಿಯಲ್ಲಿ ಸಿಕ್ಕ ಜನಸಾಮಾನ್ಯನಿಗೆ ವಿಜ್ಞಾನದ ಅದ್ಭುತ ಆವಿಷ್ಕಾರಗಳ ಒಳಹೊಕ್ಕ ತಲಸ್ಪರ್ಶಿ ಅಧ್ಯಯನದ ಗಂಧವೇ ಇಲ್ಲದಂತಾಗಿದೆ. ಈಗಿನ ವಸ್ತುಸ್ಥಿತಿಗೆ ಕಾರಣ ನಮ್ಮ ಹಳೆಯ ನಂಬಿಕೆಗಳು ಮಾತ್ರವಲ್ಲ; ಕೇವಲ ಕೆಲವೆಡೆಗಳಲ್ಲಿ ಪ್ರಚಲಿತವಿದ್ದ ಸಾಮಾಜಿಕ ವ್ಯತ್ಯಯಗಳನ್ನು ಸಾರ್ವತ್ರಿಕವೆಂದು ಸಾರಿ, ರಾಜಕಾರಣಿಗಳು ಹುಟ್ಟುಹಾಕಿದ ಜಾತೀಯತೆಯೆಂಬ ವಿಷಬೀಜದ ತಪ್ಪು ಕಲ್ಪನೆಯಿಂದ ನಮ್ಮ ಸಮಾಜ ಒಡೆಯುವಂತಾದುದೂ ಸೇರಿ, ಈ ಪಿಡುಗು ನಮ್ಮ ಶತಮಾನಗಳ ಅದ್ಭುತ ಮೌಖಿಕ ಪರಂಪರೆಯನ್ನು ಕಬಳಿಸುತ್ತಿರುವುದು ವಿಪರ್ಯಾಸವೇ ಸರಿ. ಕಾಲಸಮ್ಮತವಾಗಿದ್ದ ಅದ್ಭುತ ಜ್ಞಾನವಾಹಿನಿಯನ್ನು ಪ್ರಸ್ತುತಗೊಳಿಸಿ ಬೆಳೆಸುವುದರ ಬದಲಾಗಿ ಅದನ್ನು ಕಡೆಗಣಿಸಿ ಅವನತಿಯೆಡೆಗೆ ಸಾಗಿಸುತ್ತಿರುವುದು ನಿಜಕ್ಕೂ ಶೋಚನೀಯ. ವೀಣೆ ನುಡಿಸುವ ನುರಿತ ಕಲೆಗಾರಿಕೆಯೊಂದಿಗೆ ವೀಣೆಯನ್ನು ತಯಾರು ಮಾಡುವ ಕಲಾವಂತಿಕೆಯೂ ಸಾಮರಸ್ಯದಿಂದ ಬೆಳೆದುಬಂದಿದ್ದನ್ನು ಗಮನಿಸಲೇಬೇಕು. ಅಂತಹ ಸಾಮರಸ್ಯವನ್ನು ಬೆಳೆಸದೆ ಮೇಲುಕೀಳೆಂಬ ಭಾವನೆ ಹುಟ್ಟುಹಾಕಿದುದು ಸ್ವಾತಂತ್ರಾನಂತರದ ನಮ್ಮ ದೇಶದ ಕೆಟ್ಟ ಪಾಲಿಸಿಗಳು,

ಈ ಮಧ್ಯೆ ನಮ್ಮ ಸಮಾಜ ಮತ್ತು ವ್ಯವಸ್ಥೆಯಲ್ಲಿ ಸುಧಾರಣೆ ತರಲು ಭಗೀರಥ ಪ್ರಯತ್ನ ನಡೆಸುತ್ತಿರುವ ನಿಸ್ಪೃಹ ಮಂದಿ ತಮ್ಮ ಕಾರ್ಯಗಳನ್ನು ಜಾರಿಯಲ್ಲಿಟ್ಟಿದ್ದಾರೆ. ಬೆರಳ ತುದಿಯಲ್ಲಿ ಗೂಗಲ್, ಯಾಹೂ ಸರ್ಚ್ ಇಂಜಿನುಗಳ ಲಭ್ಯವಿರುವ ಇಂದಿನ ಮಾಹಿತಿ ತಂತ್ರಜ್ಞಾನ ಕೂಡಾ, ನಿನ್ನೆಯ ಮೂಲವಿಜ್ಞಾನದ ಆವಿಷ್ಕಾರಗಳ ಕೊಡುಗೆ ಎನ್ನುವ ಜ್ಞಾನೋದಯ ಇತ್ತೀಚೆಗೆ ನಮ್ಮ ದೇಶದ ಯುವಜನಾಂಗದಲ್ಲಿ ನಿಧಾನವಾಗಿ ಮೂಡುತ್ತಿರುವುದು ಶುಭಸೂಚನೆ. ಪಿಯುಸಿ ಪರೀಕ್ಷೆಗಳಲ್ಲಿ ಅಗ್ರಶ್ರೇಣಿ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳು, ತಮ್ಮ ದೃಷ್ಟಿಯನ್ನ ವಿಜ್ಞಾನದೆಡೆಗೆ ಹೊರಳಿಸುತ್ತಿದ್ದಾರೆ ಎನ್ನುವ ಸುದ್ದಿ ಓದಿದಾಗ, ನನ್ನ ಮನದಲ್ಲಿ ನಮ್ಮ ಸಮಾಜ ಮತ್ತೊಂದು ಬದಲಾವಣೆಯ ಕ್ರಾಂತಿಯತ್ತ ನಡೆಯುತ್ತಿದೆಯೇ ಅನ್ನುವಂತಹ ಆಶಾವಾದದ ಮೊಳಕೆ ಚಿಗುರೊಡೆಯುತ್ತಿದೆ. ತರುಣಿಯರು ತಮ್ಮ ವಿದ್ಯಾಭ್ಯಾಸ ಮತ್ತು ವೃತ್ತಿಯನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತಿರುವುದು ಮತ್ತೊಂದು ಮಹತ್ತರ ಬದಲಾವಣೆ.

ಬಯಸಿ ಬಂದ ಪರಿವರ್ತನೆಗಳನ್ನು ಸ್ವಾಗತಿಸುತ್ತಾ, ಬೇಡವೆಂದರೂ ಬಂದವನ್ನು ತಿರಸ್ಕರಿಸುತ್ತಾ ಇಲ್ಲವೇ ಸ್ವೀಕರಿಸುತ್ತಾ ನಡೆದ ನನ್ನ ಜೀವನದ ಪ್ರತಿಯೊಂದು ಘಟ್ಟದಲ್ಲೂ, ಈ ಪರಿವರ್ತನೆಗಳು ನನ್ನ ಚಿಂತನೆಯನ್ನು ತಟ್ಟದೇ ಬಿಟ್ಟಿಲ್ಲ. ನನ್ನ ದೇಶವನ್ನು ಬಿಟ್ಟು, ವಿದೇಶದ ನೂತನ ಪರಿಸರ, ಸಂಸ್ಕೃತಿ ಮತ್ತು ಬದಲಾವಣೆಗಳಲ್ಲಿ, ನನ್ನನ್ನು ಬದಲಿಸಿ, ಕರಗಿಸಿ, ರೂಪಿಸಿದ ಬದಲಾವಣೆಗಳು ನನ್ನ ವ್ಯಕ್ತಿತ್ವ, ಕ್ರಿಯಾಶೀಲತೆ, ಜೀವನ ಮೌಲ್ಯಗಳನ್ನು, ಆಚಾರವಿಚಾರಗಳನ್ನು ನಿಜಕ್ಕೂ ಒರೆಹಚ್ಚಿವೆ. ಸಮಯವೆಂಬ ಅನಂತ ಪ್ರವಾಹದ ಅಲೆಗಳಿಗೆ ಸಿಲುಕಿ, ಅದರ ಜೊತೆಯಲ್ಲೇ ಈಜುತ್ತಾ ಸಾಗುತ್ತಿರುವ ನಮ್ಮ ಜೀವನದ ಎಲ್ಲಾ ಆಯಾಮಗಳಲ್ಲೂ ಬದಲಾವಣೆಗಳಾಗಿವೆ.

ಕಳೆದ ಐದು ದಶಕಗಳಿಂದ, ಯೂರೋಪ್ ಮತ್ತು ಅಮೆರಿಕ ದೇಶಗಳಲ್ಲಿ ನೆಲಸಿರುವ ನಮ್ಮ ಜನಾಂಗ, ಇಂದು ಆ ಸಮಾಜದಲ್ಲಿ ತಮ್ಮ ಕ್ಷೇತ್ರಗಳಲ್ಲಿ ಉನ್ನತ ಸಾಧನೆಗೈದು ಗಣ್ಯರೆನಿಸಿಕೊಂಡಿದೆ. ಮೈಕ್ರೋಸಾಫ್ಟ್, ಗೂಗಲ್, ಅಮೆಜಾನ್‌ನಂತಹ ಬೃಹತ್ ಬಹುರಾಷ್ಟ್ರೀಯ ಉದ್ದಿಮೆಗಳಲ್ಲಿ ನಾಯಕತ್ವ ವಹಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ನಮ್ಮ ದೇಶದ ವ್ಯಕ್ತಿಗಳು, ನಮ್ಮ ವಿದ್ಯಾಭ್ಯಾಸದ ವ್ಯವಸ್ಥೆಯಿಂದಲೇ ಬಂದವರು. ಭಾರತದ ವಿಶ್ವವಿದ್ಯಾಲಯಗಳಲ್ಲೇ, ಅಲ್ಲಿನ ಗಣ್ಯ ಸಂಸ್ಥೆಗಳಲ್ಲೇ ಪದವಿ ಪಡೆದವರು. ಹಾಗಿದ್ದರೂ ಅವರೆಲ್ಲಾ ಇಲ್ಲಿನ ವ್ಯವಸ್ಥೆಯಲ್ಲಿ ಗಣ್ಯರೆನಿಸಿಕೊಂಡು, ಇಲ್ಲೇ ನೆಲೆಸುವ ನಿರ್ಧಾರ ಮಾಡಿರುವುದು ನಮ್ಮ ದೇಶದ ವ್ಯವಸ್ಥೆಯಲ್ಲಿನ ಕೊರತೆಯನ್ನು ಎತ್ತಿಹಿಡಿಯುತ್ತದೆ ಅಲ್ಲವೇ? ನಮ್ಮ ವಿಶ್ವವಿದ್ಯಾಲಯಗಳಲ್ಲಿರುವ ಪಠ್ಯಕ್ರಮದ ಗುಣಮಟ್ಟವು ಇತರ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ ಕಳಪೆ ಎನ್ನಬಹುದು. ಜೊತೆಗೆ ನಮ್ಮಲ್ಲಿ ಸಂಶೋಧನೆಗೆ ಒತ್ತು ಕೊಡುವುದಿಲ್ಲ. ಈಗಂತೂ ನಮ್ಮಲ್ಲಿ ಅನೇಕ ಕಾಲೇಜುಗಳು ಸ್ವಾಯತ್ತ ಸಂಸ್ಥೆಗಳೆಂಬ ಅರ್ಹತೆ ಪಡೆದು, ತಮ್ಮದೇ ಆದ ಪದವಿಗಳನ್ನು ನೀಡುತ್ತಿವೆ. ಇಂತಹ ಸಂಸ್ಥೆಗಳಲ್ಲಿ ಪದವಿ ಪತ್ರಗಳನ್ನು ಖರೀದಿಸಬಹುದು ಎನ್ನುವ ದೂರುಗಳು ಬಹಳವಾಗಿವೆ. ಈ ಸಂಸ್ಥೆಗಳ ಗುಣಮಟ್ಟವನ್ನು ನಿಯಂತ್ರಿಸಬೇಕಾದ ನಮ್ಮ ಸರಕಾರಗಳು ಭ್ರಷ್ಟಾಚಾರದಿಂದ ತುಂಬಿವೆ ಎನ್ನುವುದು ಹೊಸತೇನಲ್ಲ. ಅಮೆರಿಕ ಮತ್ತು ಯೂರೋಪಿನ ವಿದ್ಯಾಸಂಸ್ಥೆಗಳ ಪಠ್ಯಕ್ರಮ ಸಂಶೋಧನೆಗೆ ಹೆಚ್ಚು ಒತ್ತು ನೀಡುವುದಲ್ಲದೇ, ಇಲ್ಲಿ ವಿದ್ಯಾರ್ಥಿಗಳು ಕೇವಲ ತಮ್ಮ ಪ್ರತಿಭೆ ಮತ್ತು ಪರಿಶ್ರಮಗಳಿಂದ ಉತ್ತಮ ಫಲಿತಾಂಶ ನಿರೀಕ್ಷಿಸಬಹುದೇ ವಿನಾ, ಪದವಿಯನ್ನು ಖರೀದಿಸಲು ಸಾಧ್ಯವಿಲ್ಲ. ಹಲವಾರು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ್ದರೂ, ನಮ್ಮ ವೈಜ್ಞಾನಿಕ ಚಿಂತನೆಯಲ್ಲಿ ಇನ್ನೂ ಕೊರತೆಯಿರುವುದು ವಿಚಾರಮಾಡಬೇಕಾದ ವಿಷಯ.

ಕುಟುಂಬ ಕಲ್ಯಾಣದ - ನೆಲೆ, ಬೆಲೆ

ಡಾ. ಸರೋಜಿನಿ ಶಿಂತ್ರಿ

ಜಗತ್ತು ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಜನಸಂಖ್ಯಾ ಸ್ಫೋಟವು ಅತ್ಯಂತ ಜಟಿಲತಮ ಮತ್ತು ಭಯಾನಕ ಸಮಸ್ಯೆ ಆಗಿದೆಯೆಂಬದಕ್ಕೆ ಸೆಪ್ಟೆಂಬರ್ ತಿಂಗಳ ಮೊದಲ ವಾರದಲ್ಲಿ ಕಾಯರೋ ಪಟ್ಟಣದಲ್ಲಿ ತಮ್ಮ ತಮ್ಮೊಳಗಿನ ಸೈದ್ಧಾಂತಿಕ ಮತ್ತು ರಾಜಕೀಯ ಮತ ಭೇದಗಳನ್ನು ಬದಿಗಿಟ್ಟು ಎಲ್ಲ ದೇಶಗಳು ಈ ವಿಷಯ ಕುರಿತು ಅಲೋಚನೆ ಮಾಡಲು ಸೇರಿದ್ದೆ ಸಾಕ್ಷಿ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಈ ಸಮಸ್ಯೆ ಅಷ್ಟೊಂದು ತೀವ್ರತೆಯನ್ನು ಪಡೆದಿಲ್ಲ. ಕಾರಣ, ಈ ವಿಷಯದಲ್ಲಿ ಅಲ್ಲಿರುವ ಉಚ್ಚತಮವಾದ ಜೀವನ ಮಟ್ಟ ತಿಳಿವಳಿಕೆ ಮತ್ತು ವೈದ್ಯಕೀಯ ಸೌಲಭ್ಯಗಳು ಜೊತೆಗೆ ಕುಟುಂಬದ ಬಗ್ಗೆ ಅವರಿಗಿರುವ ದೃಷ್ಟಿಕೋನ, ಕೂಡಿರುವದಕ್ಕೆ (Living Together) ಅವರು ಹೆಚ್ಚು ಒಲವನ್ನು ತೋರಿಸುತ್ತಿರುವರೇ ವಿನಃ ಮದುವೆ ಮತ್ತು ಅದರ ಮುಖಾಂತರ ಒಳಪಡಬೇಕಾದ ಕುಟುಂಬಕ್ಕೆ ಅಲ್ಲ. ಇದರಿಂದ ಒದಗಬಹುದಾದ ದುಷ್ಪರಿಣಾಮಗಳನ್ನು ಅರಿತೇ ಕೆಲವು ವರುಷಗಳ ಹಿಂದೆ ಪ್ರಸಿಡೆಂಟ್ ಜಾರ್ಜ್ ಬುಶ್ ಅವರು ಅಮೇರಿಕೆಯ ಮಹಿಳೆಯರಿಗೆ 'ತಿರುಗಿ ಮನೆಗೆ ಹೋಗಿ' (Go back Home) ಅರ್ಥಾತ್ ಕುಟುಂಬವನ್ನು ಉಳಿಸಿ ಎಂದು ಕರೆ ನೀಡಿದರೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆರ್ಥಿಕ ಪ್ರಗತಿಯ ದೇಣಿಗೆಯಾಗಿ ಕೊಟ್ಟ ದೈಹಿಕ ಸುಖದ ಸುಪ್ಪತ್ತಿಗೆಯಲ್ಲಿ ತಮ್ಮಷ್ಟಕ್ಕೆ ತಾವೇ ಬಾಳಬಲ್ಲೆವೆಂಬ ನೆಮ್ಮದಿ ಮಾತ್ರ ಈ ದೇಶಗಳಿಗೆ ಇಲ್ಲ. ಜಗತ್ತಿನ ಯಾವುದೇ ಮೂಲೆಯಲ್ಲಿ ಏನೊಂದು ಅನಾಹುತವು ಜರುಗಿದರೂ ಅದರ ಪರಿಣಾಮ ಎಲ್ಲೆಡೆಗೆ ಹರಡುತ್ತದೆಂಬ ಭೀತಿ ಇವರಿಗಿದೆ. ಆದ್ದರಿಂದಲೇ ಅಭಿವೃದ್ಧಿಶೀಲ ಮತ್ತು ಹಿಂದುಳಿದ ದೇಶಗಳಲ್ಲಿ ನಾಗಾಲೋಟದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯ ಹೆಚ್ಚಳವನ್ನು ತಡೆಯದಿದ್ದರೆ ಎಲ್ಲರಿಗೂ ವಿಪತ್ತು ಕಾಯ್ದದ್ದೇ ಎಂಬುದರ ಅರಿವು ಆಗಿದೆ.

ಕಾಯರೋ ಸಭೆಯಲ್ಲಿ ಕುಟುಂಬ ಕಲ್ಯಾಣದ ದೃಷ್ಟಿಯಿಂದ ಜನಸಂಖ್ಯಾ ನಿಯಂತ್ರಣಕ್ಕೆ ಪ್ರತಿಪಾದಿಸಲಾದ ಕೆಲವು ಯೋಜನೆಗಳಲ್ಲಿ ಒಂದು ಮಾತ್ರ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿಸಿತು. ಅದು ಕುಟುಂಬ ಯೋಜನೆಯಲ್ಲಿ ಗರ್ಭಪಾತದ ಪಾತ್ರ, ಇಸ್ಲಾಮ ಮತ್ತು ವ್ಯಾಟಿಕನ್‌ಗಳೆರಡೂ ಧರ್ಮದ ಹೆಸರಿನಲ್ಲಿ ಗರ್ಭಪಾತವನ್ನು ಜನಸಂಖ್ಯಾ ನಿಯಂತ್ರಣಕ್ಕಾಗಿ ಉಪಯೋಗಿಸುವುದನ್ನು ವಿರೋಧಿಸಿದವು. ಅಷ್ಟೇ ಪ್ರಭಾವಮಯವಾಗಿ ಉಳಿದ ದೇಶಗಳು (ಭಾರತವನ್ನೊಳಗೊಂಡಂತೆ) ಮಹಿಳೆಯ

ಆರೋಗ್ಯದ ದೃಷ್ಟಿಯಿಂದ ಇದನ್ನು ಪ್ರತಿಪಾದಿಸಿದವು. ಇವುಗಳ ನಾಯಕತ್ವವನ್ನು ವಹಿಸಿದ ದೇಶವೆಂದರೆ ಅಮೇರಿಕೆ. ವಿರೋಧವಾಗಿ ಸಂಪ್ರದಾಯಸ್ಥ ಇಸ್ಲಾಮ ದೇಶಗಳು ಮತ್ತು ರೋಮನ್ ಮತ್ತು ರೋಮನ್ ಕ್ಯಾಥೋಲಿಕ್ ದೇಶಗಳು ತಮ್ಮ ಪತಿತ ಮೌಲ್ಯಗಳನ್ನು ನಮ್ಮ ಮೇಲೆ ಹೇರಲು ಮುಂದುವರಿದವರೆಂದು ಹೇಳಿಕೊಳ್ಳುವ ಈ ದೇಶಗಳು ಪ್ರಯತ್ನಿಸುತ್ತಿವೆಯೆಂದು ಆಕ್ರೋಶ ಮಾಡಿದವು. ಈ ವಿವಾದದಿಂದ ತಾವು ಯಾವ ಆಶಯಕ್ಕಾಗಿ ನೆರದಿದ್ದರೋ ಅದುವೆ ನಿಷ್ಪಲವಾಗಬಾರದೆಂಬ ಉದ್ದೇಶದಿಂದ ಸರ್ವರಿಗೂ ಗ್ರಾಹ್ಯವಾದ ಒಂದು ಯೋಜನೆಯನ್ನು ಮುಂದಿಡಲಾಯಿತು. ಕುಟುಂಬ ಕಲ್ಯಾಣ ಯೋಜನೆಗಾಗಿ ಜನಸಂಖ್ಯೆಯನ್ನು ನಿಯಂತ್ರಿಸುವ ವಿಷಯದಲ್ಲಿ ಆಯಾ ದೇಶಗಳು ತಮ್ಮ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ತಮ್ಮ ಕಾರ್ಯ ಯೋಜನೆಗಳನ್ನು ರೂಪಿಸಿಕೊಳ್ಳಬೇಕೆಂದು ಹೇಳಲಾಯಿತು. ಈ ಯೋಜನೆಗಳಲ್ಲಿ ಮಹಿಳೆಯ ಪಾತ್ರ ಬಹು ಮುಖ್ಯವಾಗಿರುವು ದರಿಂದ ಅವಳಿಗೆ ಅವಶ್ಯವಾದ ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಕೊಡುವುದಲ್ಲದೆ, ಸಮಾಜದಲ್ಲಿ ಆಕೆಗೆ ಪುರುಷನಿಗೆ ಸಮಾನವಾದ ಸ್ಥಾನಮಾನವನ್ನು ಕಲ್ಪಿಸಿಕೊಡಬೇಕೆಂಬುದಕ್ಕೆ ಒತ್ತು ನೀಡಲಾಯಿತು.

ನಮ್ಮದೇಶದಲ್ಲಿ ಗರ್ಭಪಾತಕ್ಕೆ ಕಾನೂನಿನ ಮಾನ್ಯತೆಯಿದೆ. ಆದರೆ ಇದನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಭ್ರೂಣಹತ್ಯೆಗೆ ದುರುಪಯೋಗಗೊಳಿಸಿ ಕೊಳ್ಳುತ್ತಿವೆಯೆಂಬ ವಿಷಯ ಎಲ್ಲರಿಗೂ ವಿದಿತವಾದದ್ದು. ವೈದ್ಯಕೀಯ ಕಾರಣಕ್ಕಾಗಿ ಭ್ರೂಣದ ಅವಸ್ಥೆಯನ್ನು ಪರೀಕ್ಷಿಸಿ ತಿಳಿದುಕೊಳ್ಳುವದು ಅವಶ್ಯ. ಆದರೆ ಅದರ ಲಿಂಗವನ್ನು ತಿಳಿದುಕೊಳ್ಳಲೆಂದೇ ಈ ವೈದ್ಯಕೀಯ ಜ್ಞಾನದ ದುರುಪಯೋಗ ಮಾಡಿಕೊಂಡು, ಅದು ಹೆಣ್ಣಾಗಿದ್ದರೆ, ತಂದೆ- ತಾಯಂದಿರು ವೈದ್ಯರೊಂದಿಗೆ ಒಂದು ಒಪ್ಪಂದಕ್ಕೆ ಬಂದು ಗರ್ಭಪಾತ ಮಾಡಿಸಲು ಯೋಚಿಸುತ್ತಾರೆ. ಇದು ಕೆಲವು ಹಿಂದುಳಿದ ದೇಶಗಳಲ್ಲಿಯೂ ನಡೆಯುತ್ತಿದೆ. ಸಾಂಸ್ಕೃತಿಕವಾಗಿ ಭವ್ಯ ಪರಂಪರೆಯನ್ನು ಹೊಂದಿರುವೆವು ಎಂದು ಜಂಭ ಕೊಚ್ಚಿಕೊಳ್ಳುವ ನಮ್ಮ ದೇಶದಲ್ಲಿ ಇದು ಮಿತ ಮೀರಿ ಬೆಳೆದಿದೆ. ಅಂಕಿ ಸಂಖ್ಯೆಗಳು ದಿಗ್ಭ್ರಮೆಗೊಳಿಸುವುವಂತಹವು ಇವೆಯೆಂಬ ಕಾರಣದಿಂದ ಅವುಗಳನ್ನು ನಾನು ಇಲ್ಲಿ ಕೊಡುತ್ತಿಲ್ಲ. ಇದು ದುರ್ದೈವದ ವಿಷಯ. ಈ ಕಾರಣಕ್ಕಾಗಿ ಗರ್ಭಪಾತವನ್ನು ವಿರೋಧಿಸಲೇ ಬೇಕಾಗುತ್ತದೆ. ಆದರೆ ಇನ್ನುಳಿದ ಸಂದರ್ಭಗಳಲ್ಲಿ ಗರ್ಭಪಾತವನ್ನು ನಿಷೇಧಿಸಲಿಕ್ಕಾಗದು. ಗಾಂಧೀಜಿಯವರಂತಹ ಮಹಾತ್ಮರು ಸಂಯಮವನ್ನು ಬೋಧಿಸಿದ್ದುಂಟು. ಆದರೆ ಅವರು ಬಯಸಿದ ಹಾಗೆ, ಮಹಿಳೆಯರು ಸೀತೆಯಂತೆ ಇದ್ದರೂ ಎಷ್ಟು ಪುರುಷರು ರಾಮನಂತೆ ಇದ್ದಾರೆ ? ಆದ್ದರಿಂದ ಈ ವಾಸ್ತವಿಕಾಂಶವನ್ನು ಲಕ್ಷದಲ್ಲಿಟ್ಟುಕೊಂಡು ನೈತಿಕ ಮೌಲ್ಯವನ್ನು ಸ್ವಲ್ಪ ವಿಷಯವನ್ನು ಅಲೋಚಿಸಬೇಕಾಗುತ್ತದೆ.

ಮೊದಲನೆಯ ಅಂಶವೆಂದರೆ ಮಹಿಳೆಗೆ ಮಹಿಳೆಗೆ ತನ್ನ ದೇಹದ ಮೇಲೆ ಅಧಿಕಾರವಿರಬೇಕು. ಅರ್ಥಾತ್ ವೈದ್ಯಕೀಯ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ತನಗೆ ಬೇಡವಾದ ಮಗುವನ್ನು ಹೆರಲು ಯಾವ ಒತ್ತಡವೂ ಆಕೆಯ ಮೇಲೆ ಇರಕೂಡದು.

ಅದನ್ನು ನಿರ್ಧರಿಸುವ ಹಕ್ಕು ಅವಳಿಗಿರಬೇಕು. ಎರಡನೆಯ ಅಂಶವೆಂದರೆ, ಬೇಡಾದ ಗರ್ಭದ ಪತನಕ್ಕಾಗಿ ಆಕೆಗೆ ವೈದ್ಯಕೀಯ ಸೌಲಭ್ಯಗಳು ದೊರಕಬೇಕು. ಇಲ್ಲವಾದರೆ, ಅವೈದ್ಯಕೀಯ ಉಪಾಯಗಳಿಗೆ ಆಕೆ ಮೊರೆ ಹೋಗುವದಾದರೆ ಆಕೆಯ ಆರೋಗ್ಯ ಮತ್ತು ಜೀವಕ್ಕೆ ವಿಪತ್ತು ಕಾಯ್ದಿಟ್ಟಂತೆ. ವಿಷಯ ಸೂಕ್ಷ್ಮಾತಿಸೂಕ್ಷ್ಮ ನೈತಿಕ ಅಂಶವನ್ನು ಒಳಗೊಂಡಿದೆಯೆಂಬದರಲ್ಲಿ ಸಂಶಯವಿಲ್ಲ. ವಾಸ್ತವಿಕತೆಯನ್ನು ಗಮನದಲ್ಲಿಟ್ಟುಕೊಂಡು ಯಾವುದೋ ಕಡಿಮೆ ಅಪಾಯದ್ದೂ ಅದನ್ನೇ ನಾವು ಆರಿಸಿಕೊಳ್ಳಬೇಕಾಗಿದೆ. ಮಹಿಳೆಯ ಮೇಲೆ ಜವಾಬ್ದಾರಿ ಹೆಚ್ಚಿರುವದರಿಂದ ಆಕೆಗೆ ಸರಿಯಾಗಿ ಮಾರ್ಗದರ್ಶನ ನೀಡುವ ಶಿಕ್ಷಣದ ಅವಶ್ಯವಿದೆ. ಇಲ್ಲಿ ಪುರುಷನ ಸಹಕಾರ ಅತ್ಯವಶ್ಯ. ಆತನಿಗೂ ಅವಶ್ಯಕತೆ ಅಷ್ಟೇ ಇದೆ.

ಜನಸಂಖ್ಯೆಯ ನಿಯಂತ್ರಣದ ಹೆಸರಿನಲ್ಲಿ ಕುಟುಂಬವೆಂಬ ಸಂಸ್ಥೆಯನ್ನು (Institution) ಛಿದ್ರಗೊಳಿಸಬಾರದೆಂಬುದನ್ನು ನಾವು ನೆನಪಿಡಬೇಕು. ೧೯೯೪ನೇ ವರುಷವು ಅಂತರರಾಷ್ಟ್ರೀಯ ಕುಟುಂಬ ವರುಷವೆಂದು ಘೋಷಿಸಲ್ಪಟ್ಟಿದೆ. ಕಾಲಾಂತರದಿಂದ ಧರ್ಮ ಶಾಸ್ತ್ರಗಳಲ್ಲಿ ಸ್ಥಾನವನ್ನು ಹೊಂದಿರುವ ಕುಟುಂಬವು ನಮ್ಮದೇಶದಲ್ಲಿ ಗಟ್ಟಿಮುಟ್ಟಾದ ಬೇರುಗಳನ್ನು ಹೊಂದಿದೆ. “ಹೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು” ಎಂದು ಕೇಳಿದ ಸಂಚಿಯ ಹೊನ್ನಮ್ಮ ಕುಟುಂಬದ ಮಹತ್ವವನ್ನು ಎತ್ತಿಹಿಡಿಯುವದರೊಂದಿಗೆ ಅದನ್ನು ಕಾಯ್ದುಕೊಂಡು ಹೋಗುವಲ್ಲಿ ಮಹಿಳೆ ಮಾಡಬೇಕಾದ ತ್ಯಾಗ ಮತ್ತು ಸಾಧನೆಗಳನ್ನು ಹೇಳಿದ್ದಾಳೆ. ಆದ್ದರಿಂದ ಈ.ಯು.ಎನ್.ಓ. ಮಾಡಿದ ಘೋಷಣೆಯು ನಮಗೆ ಮಹತ್ವದಾಗಿ ಕಾಣಲಿಕ್ಕಿಲ್ಲ ಆದರೆ ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲಿ ಕುಟುಂಬದ ಛಿದ್ರ ವಿವಿಧವಾಗಿದೆ. ಛಿದ್ರವಾದುದಕ್ಕೆ ತೇಪೆ ಹಚ್ಚಿ ಒಂದನ್ನಾಗಿ ಮಾಡುವ ಸಮಸ್ಯೆ ಅವರದಾಗಿದೆ. ಕುಟುಂಬದ ಅಸ್ತಿತ್ವವನ್ನೇ ಹಾಳು ಮಾಡಿದ ಕಮ್ಯುನಿಜಂ ನೆಲಕಚ್ಚಿದೆ. ಕುಟುಂಬದ ನೆಲಗಟ್ಟನ್ನು ರಕ್ಷಿಸಿಕೊಂಡು ಬಂದ ನಾವು ಅದನ್ನು ಆರೋಗ್ಯಕರವಾದ ಪರಿಸರದಲ್ಲಿ ನೆಟ್ಟು ಅದರ ಕಲ್ಯಾಣದ ಮಾರ್ಗವನ್ನು ಹುಡಕಿ ಬೆಳೆಸಬೇಕಾಗಿದೆ. ಇದರಲ್ಲಿ ಮಾಡಬೇಕಾದ ಪಾತ್ರ ಮಹತ್ವದ್ದಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಈ ಸಂದೇಹ ಪಟ್ಟಣದ ವಾಸಿಗಳಿಗಂತೂ ಸರಿಯೇ; ಮುಖ್ಯತಃ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಸಹೋದರಿಯರಿಗೆ ಮುಟ್ಟಿಸಬೇಕಾಗಿದೆ.

# ಕಮರ್ಷಿಯಲ್ ಸೆಕ್ಸ್‌ವರ್ಕರ್ಸ್ ಮತ್ತು ಸಾಮಾಜಿಕ

# ತಿರುವು

- ಕೆ.ಆರ್. ಶಾನಿ

ನಮ್ಮ ಬದುಕಿನ ವಿವಿಧ ಆಯಾಮಗಳನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಾ ಬಂದರೆ ನಾವು ಸಾಗಿ ಬಂದ ಹಲವಾರು ಮಜಲುಗಳು ನಮ್ಮನ್ನು ಸಂತೋಷಗೊಳಿಸುತ್ತವೆ. ಕೆಲವೊಂದು ಸಂದರ್ಭದಲ್ಲಿ ದುಃಖವನ್ನು ತರುತ್ತವೆ. ನಮ್ಮ ಬದುಕಿನ ಜೊತೆಗೆ ನಮ್ಮೊಡನೆ ಬದುಕುವವರ ಜೀವನದ ವಿವಿಧ ಆಯಾಮಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಿದರೆ ನಮ್ಮದೇ ರೀತಿಯ ಅನುಭವಗಳು ಇಲ್ಲಿಯೂ ಆಗಬೇಕು. ಆದರೆ, ಅದು ಹಾಗಾಗುತ್ತದೆಯೇ ಇಲ್ಲವೆ ಎನ್ನುವುದೆಲ್ಲ ಇಂದಿನ ಚರ್ಚಾಸ್ಪದ ವಿಷಯ. ನಾವು ಯಾಕೆ ಇನ್ನೊಬ್ಬರ ಬಗ್ಗೆ ಅಥವಾ ಪರವಾಗಿ ಮಾತನಾಡಬೇಕು? ನಮಗೆ ಅದಕ್ಕೆ ಬೇಕಾದ ನೈತಿಕ ಮೌಲ್ಯಗಳಿವೆಯೇ? ವಿಷಯಗಳು ಇಷ್ಟು ಸರಳವಾಗಿಲ್ಲ. ಸಮಾಜವಿಜ್ಞಾನದ ವಿದ್ಯಾರ್ಥಿಗಳಾದ ನಾವು ಕೆಲವೊಮ್ಮೆ ನಮ್ಮ ನೈಜ ಕರ್ತವ್ಯವನ್ನು ಮಾಡಬೇಕಾಗುತ್ತದೆ. ಸಮಾಜದೊಡನೆ ಇರುವ ನಮ್ಮ ಬಾಧ್ಯತೆಗಳನ್ನು ಕೆಲವೊಮ್ಮೆ ಒಂದಲ್ಲ ಒಂದು ರೀತಿಯಲ್ಲಿ ನಾವು ನಿರ್ವಹಿಸಬೇಕಾಗುತ್ತದೆ. ಈ ಕೆಳಗಿನ ವಿಷಯಗಳು ಒಂದು ನಿರ್ದಿಷ್ಟವಾದ ಬದಿಗೊತ್ತಲ್ಪಟ್ಟ ಮಹಿಳೆಯರ ಪರವಾಗಿನವುಗಳಾಗಿವೆ.

ಮಹಿಳೆಯರ ಪ್ರತಿಭಟನಾ ರಾಜಕಾರಣವು ದಿನದಿಂದ ದಿನಕ್ಕೆ ತಮ್ಮ ವ್ಯಾಪ್ತಿಯನ್ನು ವೃದ್ಧಿಸುತ್ತಾ ಬಂದಿರುವುದು ಗಮನೀಯ. ತಮ್ಮ ಸಾಮಾಜಿಕ ಚಳುವಳಿಯ ಪರಂಪರೆಯಿಂದ ಮಹಿಳೆಯರು ಸಂದರ್ಭೋಚಿತವಾಗಿ ಪ್ರತಿಭಟನಾ ರಾಜಕಾರಣದಲ್ಲಿ ಹೆಸರು ಮಾಡುತ್ತಿರುವುದು ನಿಜಕ್ಕೂ ಗಂಭೀರವಾದ ವಿಷಯ. ಅಂತಹ ಒಂದು ಅಧ್ಯಯನದ ಬಗ್ಗೆ ಈ ಬರವಣಿಗೆ.  ಸಾಮಾಜಿಕ ಗುಂಪುಗಳನ್ನು ನಾವು ನಮ್ಮ ಅನುಕೂಲತೆಗಳಿಗೆ ತಕ್ಕಂತೆ ರೂಪಿಸಿಕೊಂಡಿದ್ದೇವೆ. ಅದರಲ್ಲಿ ಪ್ರಮುಖವಾದೊಂದು ಗುಂಪು ಬದಿಗೊತ್ತಲ್ಪಟ್ಟ ಗುಂಪು, ಯಾವುದನ್ನು ಇಂದು ನಾವು "ಪ್ರಮುಖ"ವೆಂದು ಪರಿಗಣಿಸಿದ್ದೇವೆಯೋ ಅದರಿಂದ ವಂಚಿತರಾದವರನ್ನು ನಾವು ಬದಿಗೊತ್ತಲ್ಪಟ್ಟಿರುವವರು ಎಂದು ಸಾಧಾರಣವಾಗಿ ಕರೆಯುತ್ತೇವೆ. ಅವರು ಬದಿಗೊತ್ತಲ್ಪಟ್ಟಿದ್ದಾರೆಯೇ? ಅಥವಾ ಅವರೇ ಬದಿಗೊತ್ತಿಸಿಕೊಂಡಿದ್ದಾರೆಯೇ? ಎನ್ನುವುದೆಲ್ಲ ಇಂದು ಗಂಭೀರವಾಗಿ ಚರ್ಚೆಯಾಗುತ್ತಿರುವ ವಿಷಯ. ಮಹಿಳೆಯರು ಸಂಖ್ಯೆಯಲ್ಲಿ ಅಧಿಕವಾಗಿದ್ದರೆ, ನಿರಂತರವಾಗಿ ದುಡಿಯುವ ವರ್ಗವೆಂದು ಹೆಸರು ಪಡೆದುಕೊಂಡಿದ್ದಾರೆ, ಎಲ್ಲ ರಂಗಗಳಲ್ಲೂ ಇದ್ದರೂ ಇಲ್ಲದಂತಿದ್ದಾರೆ, ಶಿಕ್ಷಿತರಾಗಿದ್ದಾರೆ,ಆಧುನಿಕತೆಗೆ ಒಳಗಾಗುತ್ತಿದ್ದಾರೆ. ಆದರೂ, ನಿರಂತರವಾಗಿ ದೌರ್ಜನ್ಯಕ್ಕೊಳಗಾಗುತ್ತಿದ್ದಾರೆ.

ಶೋಷಣೆಗೆ ಒಳಗಾಗುವುದು ಅವರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಇದೆಲ್ಲದರ ಜೊತೆಗೆ ಮಹಿಳೆಯರೊಳಗೆ ಅದ್ಭುತವಾದ ವೈವಿಧ್ಯತೆಯಿದೆ. ಅದನ್ನು ಆರ್ಥಿಕವಾಗಿ, ಸಾಮಾಜಿಕ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಹಾಗೂ ಹೇಗೆ ಅದು ವಾಸ್ತವತೆಯಲ್ಲಿಯದೆಯೋ ಹಾಗೆಲ್ಲ ವೈವಿಧ್ಯತೆಯಿಂದ ವಿಂಗಡಿಸಬಹುದು. ಬಹುಶಃ ಈ ವೈವಿಧ್ಯತೆಯೇ ಕೆಲವೊಂದು ಸಂದರ್ಭದಲ್ಲಿ ಮಹಿಳಾ ವಿಷಯಗಳ ಚರ್ಚೆಯನ್ನು ಮಾಡಿರಬೇಕು ಎಂದರೆ ಖಂಡಿತಾ ತಪ್ಪಾಗುವುದಿಲ್ಲ. ಈ ಎಲ್ಲ ಚರ್ಚೆಗಳ ವ್ಯಾಪ್ತಿಯನ್ನು ಅಧಿಕಗೊಳಿಸಿರುವ ಇತ್ತೀಚಿನ ಒಂದು ಪ್ರಮುಖ ಬೆಳವಣಿಗೆಯೆಂದರೆ "ಕಮರ್ಷಿಯಲ್ ಸೆಕ್ಸ್ ವರ್ಕಸ್್ರ*ರ ಬೀದಿಗಿಳಿದ ಹೋರಾಟ. ಇವರ ಇತ್ತೀಚಿನ ಬಹಿರಂಗ ಹೋರಾಟವು ಹಾಗೂ ಬೇಡಿಕೆಗಳು ಮಹಿಳಾ ಚಿಂತನೆಯ ದಿಕ್ಕು ಬದಲಿಸುವಂತ ಶಕ್ತಿಯನ್ನು ಪಡೆದುಕೊಂಡಿದೆ.

ಮಹಿಳಾ ಚಿಂತನೆ ಹಾಗೂ ಚಿಂತನೆಯಕ್ರಮ ನಿರಂತರವಾಗಿ ಬದಲಾಗುತ್ತಾ ಬಂದಿರುವುದರ ಜೊತೆಗೆ ತನ್ನ ವಸ್ತು ವಿಷಯಗಳ ಬಗ್ಗೆ ನಿಖರತೆಯನ್ನು ಪಡೆದುಕೊಂಡಿತು. ಆದರೆ, ಗಂಭೀರವಾಗಿ ಕಮರ್ಷಿಯಲ್ ಸೆಕ್ಸ್ ವರ್ಕಸ್್ರಗಳ ಸಮಸ್ಯೆಗಳನ್ನು ಒಂದು ವಿಶೇಷವಾದ ಅಧ್ಯಯನದ ವಿಷಯವನ್ನಾಗಿ ಪರಿವರ್ತಿಸಿಕೊಂಡಿರಲಿಲ್ಲ. ಆದರೆ "ಕಸವಗಳು ಬೀದಿಗಿಳಿದು ಪ್ರತಿಭಟನೆ ಕೈಗೊಂಡ ನಂತರ ಮಹಿಳಾ ಚಿಂತನೆಯ ಸ್ವರೂಪ ಬದಲಾಗುತ್ತಾ ಬಂದಿದೆ. ಇದರ ನಡುವೆ ವೇಶ್ಯಾವಾಟಿಕೆಯ ಬಗ್ಗೆ ಗಂಭೀರ ಚಿಂತನೆ ನಡೆಸಿದ್ದು ಮಹಿಳಾ ಹೋರಾಟಗಾರರು "ಕಸವೆಗಳ ರೀತಿಯ ಪ್ರತಿಭಟನೆಯನ್ನು ನಿರೀಕ್ಷಿಸಿರಲಿಲ್ಲವೇನೋ. ವೇಶ್ಯಾವಾಟಿಕೆಯ ಮೇಲಿನ ಚಿಂತನೆ ಕೆಲವೊಮ್ಮೆ ಗಾಢವಾದ ವೈಚಾರಿಕತೆಯನ್ನು ಪಡೆದುಕೊಂಡಿದೆ. ಕಮರ್ಷಿಯಲ್ ಸೆಕ್ಸ್ ವರ್ಕಸ್್ರಗಳ ಆತಂಕ ಮತ್ತು ಉದ್ದೇಶಗಳು ಈ ಸಮಾಜಕ್ಕೆ ಸ್ಪಷ್ಟವಾಗಿರುವುದನ್ನು ಗಮನಿಸಿದರೆ, 'ಕಸೆವ'ಗಳು ಈ ಸಮಾಜಕ್ಕೊಂದು ಪ್ರಮುಖವಾದ ಪಾಠ ಕಲಿಸಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಮೊನ್ನೆ ಕಸೆವ'ಗಳು ಬೀದಿಗಿಳಿದ ತಮ್ಮ ಆತಂಕಗಳನ್ನು ನೋಡಿಕೊಳ್ಳಲು ಮಾಡಿದ ಎಲ್ಲ ಪ್ರಯತ್ನಗಳು ಈ ದೇಶದಲ್ಲಿ ನಡೆದಂತ ಮೊದಲ ಪ್ರಯತ್ನ. ಅದರ ವೈಶಿಷ್ಟ್ಯತೆಯು ಅದರ ಶಕ್ತಿಯಾಗಿದೆ. ಈ ಸಾಮಾಜಿಕ ವ್ಯವಸ್ಥೆಯ ಬಗ್ಗೆ, ಸಂಪ್ರದಾಯದ ಬಗ್ಗೆ 'ಕಸೆವ'ಗಳಿಗೆ ಚಿಂತೆ ಇರಲಿಲ್ಲ. ಬಹುಶಃ ಅವುಗಳ ಬಗ್ಗೆ ಚಿಂತಿಸಿದರೆ ಆ ಚಿಂತನೆಯೇ ಒಂದು ಸಾಮಾಜಿಕ ಸಮಸ್ಯೆಯಾಗಿ ಸಂಪ್ರದಾಯವಾಗಿ ಅವರ ಶೋಷಣೆಯನ್ನು ವೃದ್ಧಿಸುತ್ತದೆ ಎನ್ನುವುದನ್ನು ಕಸೆವ'ಗಳು ಇಂದು ತಿಳಿದುಕೊಂಡಿದ್ದಾರೆ. ಆಧುನಿಕತೆಯನ್ನು ಬೆಂಬಲಿಸುವ ಹಾಗೂ ಬದುಕಿನಲ್ಲಿ ಅಳವಡಿಸಿಕೊಳ್ಳುವ ರೀತಿ ರಿವಾಜುಗಳು ಸಾಮಾಜಿಕ ಹಿಡಿತಗಳನ್ನು ಸಡಿಲಿಸಬಲ್ಲವು ಎನ್ನುವ ನಂಬಿಕೆಗಳನ್ನು ಇರಿಸಿಕೊಂಡಿದ್ದ ಮಹಿಳೆಯರಿಗೆ ಮತ್ತೆ ಮತ್ತೆ ಹೊಸ ಆತಂಕಗಳು ಉಂಟಾಗಿರುವುದರಿಂದ 'ಕಸೆವ'ಗಳು ಪ್ರಮುಖವಾಗಿ 'ಕಾನೂನಿನ ಭಾಷೆಯಲ್ಲಿ ಮಾತನಾಡಲು ಪ್ರಾರಂಭ ಮಾಡಿದ್ದಾರೆ. ಆದುದರಿಂದಲೇ, ರಾಜ್ಯ, ಕಾನೂನು, ನ್ಯಾಯಾಲಯ, ರಾಜ್ಯದ ಅಳಿವು-ಉಳಿವು, ಉತ್ತಮ ಕಾರ್ಯ ಹಾಗೂ ಉತ್ತಮ

ಆಡಳಿತಗಾರರ ಅಗತ್ಯಗಳ ಬಗ್ಗೆ ಅವರು ಗಂಭೀರವಾಗಿ ಮಾತನಾಡಲು ಪ್ರಾರಂಭ ಮಾಡಿರುವುದು. ಇದೊಂದು ಅತ್ಯಂತ ಮೌಲ್ಯಾಧಾರಿತ ಚೌಕಟ್ಟಿನ ರಾಜಕೀಯ ಬೆಳವಣಿಗೆ ಬೇರೆ ಯಾವ ವ್ಯವಸ್ಥೆಯ ಮೇಲೆಯು ತಮ್ಮ ಬಯಕೆಗಳನ್ನು ತೋಡಿಕೊಳ್ಳುವ ಧೈರ್ಯ ಮತ್ತು ವಿಶ್ವಾಸವಿಲ್ಲದಿರುವುದರಿಂದ "ಕಸೆವ"ಗಳು ಇಂದು ರಾಜ್ಯದ ಮೇಲೆ ತಮ್ಮ ಭಾರವನ್ನು ಹೊರಿಸುತ್ತಿರುವುದು ಅವರಲ್ಲಿರುವ ರಾಜಕೀಯ ನಂಬಿಕೆ ಅಥವಾ ಸಾರ್ವಜನಿಕ ಸಂಸ್ಥೆಗಳ ಮೇಲೆ ಇರುವ ಭರವಸೆಯನ್ನು ತಿಳಿಸುತ್ತದೆ.

ಸಾರ್ವಜನಿಕರು ಒಗ್ಗಟ್ಟಾಗಿ ಖಾಸಗೀಕರಣದ ಪ್ರಭಾವದಿಂದ ರಾಜ್ಯದ ಹೊರತಾಗಿ ಬದುಕನ್ನು ರೂಪಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ "ಕಸೆವಗಳು ಗಂಭೀರವಾಗಿ ಸಾರ್ವಜನಿಕ ಸಂಸ್ಥೆಗಳ ಚೌಕಟ್ಟನ್ನು ಬಳಸಿಕೊಳ್ಳುತ್ತಿರುವುದು ಭಾರತದ ಪರಿಸ್ಥಿತಿಗೆ ಅತ್ಯಂತ ಉತ್ತಮವಾದ ಬೆಳವಣಿಗೆ ಎಂದು ಪರಿಗಣಿಸಬೇಕು. ಪ್ರಮುಖವಾಗಿ ಮಹಿಳೆಯರು ಇಂತಹ ಒಂದು ಚಿಂತನೆಗೆ ದಾರಿಮಾಡಿಕೊಟ್ಟಿರುವುದು ಈ ದೇಶದ ಭವಿಷ್ಯದಲ್ಲಿ ನಂಬಿಕೆ ಇಟ್ಟಿರುವ ಜನರ ನೈತಿಕ ಸ್ಥೈರ್ಯವನ್ನು ವೃದ್ಧಿಸಿದೆ. ಕಸವಗಳು ಸಾರ್ವಜನಿಕ ಸಂಸ್ಥೆಗಳನ್ನು ಬೆಂಬಲಿಸುವುದರ ಜೊತೆಗೆ, ಅವರು ಮುಂದಿಟ್ಟಿರುವ ಹಲವಾರು ಬೇಡಿಕೆಗಳನ್ನು ಗಮನಿಸಿದರೆ "ಸಾಮಾಜಿಕವಾಗಿ ಅವಮಾನಕ್ಕೊಳಗಾಗಿದ್ದ ವರ್ಗದ ಜನರು ಇಂದು ಬೇರೆಲ್ಲರಿಗಿಂತಲೂ ವಿಶೇಷವಾಗಿ ಚಿಂತಿಸುವ ಮಟ್ಟಕ್ಕೇರಿದ್ದಾರೆ" ಎಂದರೆ ಯಾವುದೇ ಕಾರಣಕ್ಕೂ ತಪ್ಪಾಗುವುದಿಲ್ಲ. ಉದಾಹರಣೆಗೆ, ನಮ್ಮ ದೇಹದ ಮೇಲೆ ನಮಗೆ ಹಕ್ಕಿದೆ, ನಮ್ಮಲ್ಲಿಗೆ ಬರುವ ಗಿರಾಕಿಗಳನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ನಮಗೆ ಬೇಕು ಎನ್ನುವ ವಾದಗಳು ಹೊರಗಿನವರಿಗೆ ಆಶ್ಚರ್ಯಕರವಾಗಿ ಕಂಡರೂ ಅದರಲ್ಲಿ ಸಾಕಷ್ಟು ಗಂಭೀರತೆ ಇರುವುದನ್ನು ಗಮನಿಸಬೇಕು. ಈ ವಾದಗಳ ಮುಖಾಂತರ "ಕಸೆವಗಳು ವೈಚಾರಿಕತೆಯ ಆಯಾಮವನ್ನು ಸಾರ್ವಜನಿಕ ಬದುಕಿಗೆ ಒದಗಿಸಿಕೊಟ್ಟಿದ್ದಾರೆ. ಹಾಗೆಯೇ "ಕಸೆವಗಳು ಎತ್ತಿಕೊಂಡ ಎಲ್ಲ ಸಾಮಾಜಿಕ ಅಜೆಂಡಾಗಳು ಸಾಮಾಜಿಕ ವಿಜ್ಞಾನದ ವಿದ್ಯಾರ್ಥಿಗಳಿಗೆ ಅಗತ್ಯವಾಗಿ ವಿಶ್ಲೇಷಣೆ ಮಾಡಬೇಕಾಗಿರುವ ವಿಷಯಗಳು.

ಈ ಹಿನ್ನೆಲೆಯಲ್ಲಿ ಗಂಭೀರವಾದ ಎರಡು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಬೇಕು. ಮೊದಲನೆಯದು, "ಕಸೆವಗಳು ಬೀದಿಗಿಳಿದ ಸಂದರ್ಭ"- ನಮ್ಮ ಸಮಾಜದಲ್ಲಿ ಸೆಕ್ಸ್‌ಗೆ ಸಂಬಂಧಿಸಿದ ಯಾವುದೇ ವಿಷಯಗಳಾಗಲಿ ಅದನ್ನು ಗುಪ್ತವಾಗಿರಿಸುವುದು ಒಂದು ಸಂಸ್ಕೃತಿಯ ಭಾಗ, ಅದು ಯಾಕೆ, ಯಾವಾಗ, ಯಾರಿಂದ ಬಂತು ಎನ್ನುವುದೆಲ್ಲ ಇಂದು ನಿರಂತರವಾಗಿ ಸಂದೇಹಗಳನ್ನು ಸೃಷ್ಟಿ ಮಾಡುತ್ತಿರುವ ಚರ್ಚೆಗಳು, ದೇವತೆಗಳ ರೂಪದಲ್ಲಿರುವ ಸೆಕ್ಸ್ ಸಂಬಂಧಿ ಚಟುವಟಿಕೆಗಳು ಶಿಲ್ಪದ ರೂಪದಲ್ಲಿ ದೇವಸ್ಥಾನದ, ಗೋಪುರಗಳ ಮೇಲೆ ರಾರಾಜಿಸುವುದನ್ನು ನಾವು ಅಷ್ಟೇನೂ ಗಂಭೀರವಾಗಿ ಪರಿಗಣಿಸಿಲ್ಲ. ಆದರೆ, ದೇವರುಗಳಲ್ಲದವರ ಸೆಕ್ಸ್ ವಿಷಯಗಳನ್ನು ಅತ್ಯಂತ ಗುಪ್ತವಾಗಿರಿಸಿದ್ದೇವೆ. "ಹೆಚ್ಚೆಚ್ಚು ಗುಪ್ತವಾಗಿರಿಸಿದರೆ ಹೆಚ್ಚೆಚ್ಚು ಸಂತೋಷ" ಎನ್ನುವ ಥಿಯರಿಯ ಅಡಿಯಲ್ಲಿ

ಅದು ಕಾರ್ಯಗತಗೊಳ್ಳುತ್ತಿದೆ. ಸೆಕ್ಸ್‌ನ ಮಡಿಮೈಲಿಗೆ ಇರುವ ನಮ್ಮ ಸಮಾಜದೊಳಗೆ "ಕಸೆವಗಳು ಬೀದಿಗಿಳಿದು ನಾವು ಸೆಕ್ಸ್‌ವರ್ಕ್‌ನಲ್ಲಿ ತೊಡಗಿಸಿಕೊಂಡಿರುವರು, ನಾವೂ ಮನುಷ್ಯರೇ, ನಮಗೂ ಮನುಷ್ಯರಿಗೆ ಇರುವ ಎಲ್ಲ ಹಕ್ಕುಗಳು ದೊರೆಯಬೇಕು, ನಮ್ಮನ್ನೂ ಮನುಷ್ಯರಂತೆ ಕಾಣಬೇಕು ಎಂದು ಧ್ವನಿಯೆಬ್ಬಿಸಿದ ಕ್ಷಣಗಳನ್ನು ಯಾರೂ ಯಾವ ಕಾರಣಕ್ಕೂ ಮರೆಯಬಾರದು. ಅಂತಹ ಧ್ವನಿ ಇಂದಿನ ಸಾಮಾಜಿಕ ಬದುಕಿನ ಶೈಲಿಯನ್ನು ದಂಗುಬಡಿಸಿದೆ. ಹೊಟ್ಟೆಪಾಡಿಗಾಗಿ, ಕುಟುಂಬದ ಹೊಣೆಗಾರಿಕೆಯಿಂದ, ತಮ್ಮ, ತಂಗಿ, ವಯಸ್ಸಾದ ಅನಾರೋಗ್ಯ ಪೀಡಿತ ತಾಯಿ-ತಂದೆ ಹೇಗೆ ಹಲವಾರು ಹೊಣೆಗಾರಿಕೆಯನ್ನು ಮುಂದಿಟ್ಟುಕೊಂಡು ಅವರೆಲ್ಲರ ಮುಲಭೂತ ಬೇಡಿಕೆಗಳ ಈಡೇರಿಕೆಗಾಗಿ ಕೈಗೊಂಡ ಕೊನೆಯ ಪರ್ಯಾಯ ವ್ಯವಸ್ಥೆಯೇ ಸೆಕ್ಸ್‌ವರ್ಕ್ (ಗಮನಿಸಿಃ ಯಾರೂ ಕಾಮದ ಚಟತೀರಿಸಿಕೊಳ್ಳಲು ವೇಶ್ಯಾ ವೃತ್ತಿಗಿಳಿದವರಲ್ಲ). ಇಂತಹ ಗಂಭೀರವಾದ ವಿಷಯಗಳನ್ನೊಳಗೊಂಡ ಮುಖವಿರುವ "ಕಸೆವಗಳು ಅದರದ್ದಲ್ಲದ ಪ್ರಪಂಚದ ಹೊರಗಡೆ ಬದುಕುವ ವ್ಯಕ್ತಿಗಳಲ್ಲಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಆಯ್ಕೆಮಾಡಿಕೊಂಡ ಮಾರ್ಗವು ಅತ್ಯಂತ ಪ್ರಭಾವಶಾಲಿಯಾದದ್ದು. ಬೀದಿಗಿಳಿದು ಹೋರಾಟ ಮಾಡುವ ಯಾವುದೇ ಗುಂಪು ನೈಜವಾಗಿ ಪ್ರಜಾಪ್ರಭುತ್ವವನ್ನು ಬೆಂಬಲಿಸುವ ಗುಂಪು, ಆದುದರಿಂದಲೇ 'ಕಸೆವ'ಗಳು ಬೀದಿಗಿಳಿದಾಗ ಅವರು ಮಾಡಿದ ಕಾರ್ಯ ಪ್ರಜಾಪ್ರಭುತ್ವವನ್ನು ಬೆಂಬಲಿಸಿದ್ದು, 'ಕಸೆವ'ಗಳನ್ನು ವೈಚಾರಿಕತೆಯ ಮಾರ್ಗಕ್ಕೆ ತಂದು ಈ ದೇಶದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳ ಸ್ಥಾಪನೆಗೆ ಹೋರಾಟ ಮಾಡಲು ಪ್ರೇರೇಪಿಸಿರುವ ಯಾವುದೇ "ಪರದೆಯ ಹಿಂದಿನ ಶಕ್ತಿ" ಮಾಡಿರುವ ಕೆಲಸವು ನಿಜಕ್ಕೂ ಶ್ಲಾಘನೀಯ ಹಾಗೂ ಚಾರಿತ್ರಿಕವಾದದ್ದು, ಎಂದೆಂದಿಗೂ ಪರದೆಯ ಹಿಂದೆಯೇ ಇದ್ದು, ಬಹಿರಂಗವಾಗಿ ತಮ್ಮನ್ನು ತಾವು ಎಲ್ಲರಂತೆ ಕಂಡುಕೊಳ್ಳದೆ ಬದುಕು ಎನ್ನುವುದನ್ನು ಸಾಗಿಸುತ್ತಿದ್ದ ಸೆಕ್ಸ್ ವರ್ಕರ್ಸ್‌ರಗಳನ್ನು ಸಂಚಯನಗೊಳಿಸಿರುವ ಕಾರ್ಯವು ಇತ್ತೀಚಿನ ಸಾಮಾಜಿಕ ಚಳುವಳಿಯ ಒಂದು ವಿಶೇಷವಾದ ಅಧ್ಯಾಯ. ಮನುಷ್ಯರಂತೆ ಬದುಕಲು ನಮ್ಮನ್ನು ಮನುಷ್ಯರಂತೆ ಕಾಣಿರಿ ಎಂದು ಕರೆ ನೀಡುವ ಮಟ್ಟಿಗೆ ಸೆಕ್ಸ್ ವರ್ಕರ್ಸ್‌ರಗಳನ್ನು ತಯಾರು ಮಾಡಿರುವ ಎಲ್ಲ ಸಂಘಟನೆಗಳಿಗೂ ಈ ದೇಶದ ಸಾಮಾಜಿಕ ಕಳಕಳಿ ಇರುವವರ ಬೆಂಬಲವಿದೆ.

ಎರಡನೆಯದು, 'ಕಸೆವ'ಗಳು ನಮ್ಮನ್ನು ಹೇಗೆ ಪರಿಗಣಿಸುತ್ತಾರೆ ಎನ್ನುವ ರೀತಿಯಲ್ಲಿ ಮಾತನಾಡುವಾಗ "ತಮ್ಮ ವ್ಯವಹಾರದಲ್ಲಿ ಮೌಲ್ಯವಿರಬೇಕು ಎನ್ನುವುದನ್ನು ಮಾರ್ಮಿಕವಾಗಿ ಹೇಳಿರುವುದನ್ನು ಗಮನಿಸಬೇಕು. ಕಸೆವಗಳನ್ನು ಮುಂದಿಟ್ಟುಕೊಂಡು ಗಿರಾಕಿಗಳ ಕಾಮದಾಸೆಗಳನ್ನು ಪೂರೈಸುವ ನೆಪದಲ್ಲಿ ಹಣಕೂಡಿ ಹಾಕುವ ಯಾವುದೇ ದಲ್ಲಾಳಿಯು 'ಕಸೆವ'ಗಳನ್ನು ಮನುಷ್ಯರ ರೀತಿಯಲ್ಲಿ ನೋಡಿಕೊಳ್ಳುತ್ತಿಲ್ಲ ಎನ್ನುವುದಕ್ಕೆ 'ಕಸೆವ'ಗಳ ಹೋರಾಟವೇ ಸಾಕ್ಷಿ. ನಮ್ಮನ್ನು ಮಾನವರಂತೆ ಕಾಣಬೇಕು ಎನ್ನುವ ಆತಂಕದ ನುಡಿಯಲ್ಲಿ ನಮ್ಮನ್ನು ಮಾನವರಂತೆ ಕಾಣುತ್ತಿಲ್ಲ ಎನ್ನುವ ಅರ್ಥವಿದೆ. ದಲ್ಲಾಳಿಗಳಂತೆ, ಗಿರಾಕಿಗಳು ಕೂಡ ಕಸೆವಗಳನ್ನು ಹಾಗೆ ನಡೆಸಿಕೊಂಡಿರಬೇಕು.

ಯಾಕೆಂದರೆ, 'ಕಸೆವ'ಗಳು ನೇರವಾಗಿ ಸಂಬಂಧ ಹೊಂದಿರುವ ಎರಡು ಗುಂಪಿನ ಜನರಿದ್ದಾರೆ. ಒಂದು ಅವರ ಏಜೆಂಟ್ ಮತ್ತೊಬ್ಬ ಅವರ ಗಿರಾಕಿ. ಇದೊಂದು ರೀತಿಯಲ್ಲಿ 'ಮಾರುಕಟ್ಟೆಯ ಸಂಬಂಧ'ವೇ ಇರಬೇಕು. ಹಣಕೊಟ್ಟು ಪಡೆದ ವಸ್ತುವಿನ ಮೇಲೆ ಗಿರಾಕಿಗೆ ಇರುವ ಹಕ್ಕುದಾರಿಕೆಯ ಕಲ್ಪನೆ ಒಂದು ಕಡೆಯಾದರೆ ಮತ್ತೊಂದು ಕಡೆ ವಸ್ತುವಿಗೆ ವಸ್ತುವಿನದ್ದೇ ಆದ ಮೌಲ್ಯವಿದೆ ಎನ್ನುವುದನ್ನು ಮರೆಯುವ ಶಕ್ತಿಯಿರುವ ಗಿರಾಕಿಗಳು. "ಕಸೆವಗಳನ್ನು ವಸ್ತುಗಳಂತೆ ಪರಿಗಣಿಸುವ ಗಿರಾಕಿಗಳು ಹಣ ನೀಡುವ ಹೆಸರಲ್ಲಿ ವಿಕೃತವಾಗಿ ನಡೆಸಿಕೊಂಡಿರಬಹುದು, ಆದುದರಿಂದಲೇ ಈ ವಿಕೃತವನ್ನು 'ಕಸೆವ'ಗಳು ಪ್ರತಿಭಟಿಸಿದ್ದಾರೆ. ಇಂತಹ ವಿಕೃತದಿಂದ ರಕ್ಷಣೆ ಪಡೆದುಕೊಳ್ಳಲು ಅವರು ರಾಜ್ಯದ ಮಧ್ಯಪ್ರವೇಶಿಕೆಯನ್ನು ಬಯಸಿದ್ದಾರೆ. ಅರ್ಥಾತ್ ಕಾನೂನಿನ ರೀತಿಯ ರಕ್ಷಣೆಗೆ ಹೋರಾಟ ಮಾಡುತ್ತಿದ್ದಾರೆ.

ಕಮರ್ಷಿಯಲ್ ಸೆಕ್ಸ್ ವರ್ಕರ್ ಮತ್ತು ಗಿರಾಕಿಯ ನಡುವಿನ ವ್ಯವಹಾರ ಮೂರನೆಯ ವ್ಯಕ್ತಿಗೆ ನ್ಯಾಯೀಕರಿಸಬಹುದಾದದ್ದೆ. 'ಕಸೆವ' ಒಂದು ಕಡೆ ಸರಿ-ಯಾಕೆಂದರೆ ಅವಳು ಮನುಷ್ಯಳು. ಗಿರಾಕಿಯೂ ಸರಿ ಯಾಕೆಂದರೆ ಹಣಕೊಟ್ಟು ಏನು ಬೇಕೋ ಅದನ್ನು ಪಡೆಯುವ ಹಕ್ಕು ಅವನಿಗಿದೆ. ಅವರು ಹಣಕ್ಕಾಗಿ ದುಡಿಯುತ್ತಾರೆ ಎನ್ನುವ ಕಾರಣಕ್ಕಾಗಿಯೇ ಇವರು ಹಣಕೊಟ್ಟು ಹೋಗುತ್ತಾರೆ. ಆದುದರಿಂದ 'ಕಸೆವ'ಗಳ ಸಮಸ್ಯೆ ಪರಿಹಾರವಾಗಬೇಕಾದರೆ ಅವರು ಸೆಕ್ಸ್ ವರ್ಕ್ ಬಿಡಬೇಕು. ಹೇಗೆ ನಾವು ಹಲವಾರು ಭಾಷೆಯಲ್ಲಿ ಮಾತನಾಡಿದ್ದೇವೆ. ಕಾರ್ಖಾನೆ ಉದ್ಧಾರವಾಗಬೇಕಾದರೆ ಕಾರ್ಮಿಕರು ಕೆಲಸ ತೊರೆಯಬೇಕು ಎನ್ನುವ ಭಾಷೆ ಬಳಸಿ ಕಾರ್ಖಾನೆ ಉದ್ಧಾರ ಮಾಡಲು ಹೊರಟಿರುವ ಜನರು ನಾವು. ಆದುದರಿಂದ, ಈ ಕಾರ್ಖಾನೆಯ ಭಾಷೆಯನ್ನೇ ಕಸೆವಗಳಿಗೆ ಬಳಸಿರಬಹುದು. ಅದೇನೆ ಇರಲಿ, ಇಂದು ಗ್ರಾಹಕ ತನ್ನ ಹಕ್ಕುಗಳನ್ನು ವಿಶಾಲವಾದ ಮಾರುಕಟ್ಟೆ ಸಿದ್ಧಾಂತದ ಚೌಕಟ್ಟಿನೊಳಗೆ ಅರ್ಥೈಸಿಕೊಳ್ಳಲು ಸಫಲವಾಗುತ್ತಿರುವ ಕಾಲದಲ್ಲಿ ಕಸವಗಳ ಗೋಳನ್ನು ಕೇಳುವವರು ಯಾರು?

ದೇಹ ಮಾರಿಕೊಳ್ಳುವ ಕ್ರಿಯೆಯ ಹಿಂದೆ ಮತ್ತು ಮುಂದೆ ಏನೇ ಇರಲಿ, ಅಂತಹ ಒಂದು ಕ್ರಿಯೆಯನ್ನು ಈ ಸಮಾಜ ತುಂಬಾ ಕೀಳಾಗಿ ಕಂಡುಕೊಂಡಿದೆ. ಅಂತಹ ಕೀಳಾಗಿ ಕಾಣುವ ಮನೋಸ್ಥಿತಿಯು ಸಮಾಜದೆಲ್ಲೆಡೆ ಹರಡಿದೆ. 'ಕಸೆವ'ಗಳ ಹಿಂದಿನ ವಾಸ್ತವಗಳನ್ನು, ಕಣ್ಣೀರಿನ ಕಥೆಗಳನ್ನು ಕೇಳಿ ತಿಳಿದುಕೊಳ್ಳುವ ಮನೋಸ್ಥಿತಿಯ ಅಪಹರಣವಾಗಿದೆ. ಆದುದರಿಂದ ಕಸೆವಗಳು ಅಂತಹ ಮನೋಸ್ಥಿತಿಯನ್ನು ಎದುರಿಸಲು ಮುಂದಾಗಿದ್ದಾರೆ. ತಮ್ಮನ್ನು ಹೇಗೆ ಬೇಕೋ ಹಾಗೆ ಬಳಸಿಕೊಳ್ಳುವ ವೇಶ್ಯಾವೃತ್ತಿಯನು ಬೆಂಬಲಿಸುವ ಪುರುಷರಿಗೆ ಕಣ್ಣು ತೆರೆಸಿ ಮನುಷ್ಯರನ್ನಾಗಿ ಮಾಡುವ ಕ್ರಿಯೆಯಲ್ಲಿ ಕಸೆವಗಳು ತೊಡಗಿದ್ದಾರೆ ಎಂದರೆ ತಪ್ಪಾಗಲಾರದು. ಬದುಕಿನ ಎಲ್ಲ ಕ್ಷಣಗಳಲ್ಲಿ ತಾವು ಎದುರಿಸುತ್ತಿರುವ ಸಾಮಾಜಿಕ ದುರಂತಗಳನ್ನು ಮೆಲುಕು ಹಾಕುತ್ತಾ ಅವರು ಕುಳಿತರೆ ಕೆಲವೊಮ್ಮೆ ಈ ದೇಶದ ಚಾರಿತ್ರಿಕ ಘಟನೆಗಳನ್ನು ನೆನಪಿಸಿಕೊಡುತ್ತಾರೆ. ಚರಿತ್ರೆಯಲ್ಲಿ

ಹೆಣ್ಣುಗಳನ್ನು ಅಮಾನವೀಯವಾಗಿ ಬಳಸಿಕೊಂಡ ಇತಿಹಾಸವಿರುವ ಈ ದೇಶದಲ್ಲಿ ಅದು ಮುಂದುವರಿಯುತ್ತಾ ಬಂದಿದೆ. ಅಂದಿಗಿಂತ ಇಂದು ಅದು ಕಠೋರವಾಗಿದೆ. ಅಂದು ಕೆಲವರು ಅದನ್ನು ಬೆಂಬಲಿಸಿದರು, ಇಂದು ಎಲ್ಲರು ಅದನ್ನು ಅನಿವಾರ್ಯವೆಂದು ಪರಿಗಣಿಸುತ್ತಾರೆ.

ಈ ಮೇಲಿನ ವಿಷಯಗಳನ್ನು ಗಮನಿಸಿದಾಗ ಒಬ್ಬ ಸಾಮಾಜಿಕ ವಿಜ್ಞಾನದ ವಿದ್ಯಾರ್ಥಿಗೆ ತೋರಬಹುದಾದ ಸಂಗತಿಗಳು ಈ ಕೆಳಗಿನಂತಿವೆ.

ಸಾಮಾಜಿಕ ಚಳುವಳಿಗಳು ಇಂದು ತಮ್ಮ ವಿಶಾಲಾರ್ಥವನ್ನು ಕಳೆದುಕೊಳ್ಳುತ್ತಿವೆ. ದಿನದಿಂದ ದಿನಕ್ಕೆ ಅದರ ವ್ಯಾಪ್ತಿ ಸಂಕುಚಿತಗೊಳ್ಳುತ್ತಿರುವುದರಿಂದ ಸಮಾಜದ ಕೆಲವು ವಿಶಿಷ್ಟವಾದ ವಿಷಯಗಳಿಗೆ ಇಂದು ಒತ್ತು ನೀಡುತ್ತಿವೆ.

ಕಸವಗಳ ಚಳುವಳಿಯ ಇತಿಹಾಸದ ಹೊಸ ಅಧ್ಯಾಯವೆಂದು ಪರಿಗಣಿಸಬೇಕು.

ಮಹಿಳಾ ಚಳುವಳಿಯು ಮಾಡಲಾಗದ ವಿಷಯ ಈಗ ಮರುಪರಿಶೀಲನೆಯೊಂದಿಗೆ ಹೊರಬಂದಿರುವುದರಿಂದ ಇದೊಂದು ಪ್ರಮುಖ ವಿಷಯವೆಂದು ಪರಿಗಣಿಸಿ ಗಂಭೀರವಾದ ಸಂಶೋಧನೆ ನಡೆಯಬೇಕಾಗಿದೆ.

ಕಸೆವಗಳನ್ನು ನಿರಂತರವಾಗಿ ಜಾಗರೂಕರನ್ನಾಗಿ ಮಾಡಿ ಕಸೆವಗಳ ಜಯದ ಪರಿಣಾಮವನ್ನು ಪರದೆಯ ಹಿಂದೆ ನಿಂತು ನೋಡಿ ಸಂತೋಷ ಪಡುತ್ತಿರುವ ನಿಯೋಗಗಳು ಇನ್ನೂ ಗಂಭೀರವಾಗಿ ಸಾಮಾಜಿಕವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು.

ಕಸೆವಗಳ ವಿಷಯಗಳನ್ನು ಕಸೆವಗಳಿಗೆ ಬಿಟ್ಟುಬಿಡದೆ, ಅದೊಂದು ಈ ದೇಶದ ಮಹಿಳಾ ಸಮಸ್ಯೆ ಎಂದು ಪರಿಗಣಿಸಬೇಕು.

ಸಂಘಟಿತ ಹೋರಾಟದಲ್ಲಿ ಮಹಿಳೆಯರು ಸಫಲರಾಗಬೇಕಾದರೆ ಅಸಂಘಟಿತರಾಗಿರುವ ಮಹಿಳೆಯರನ್ನು ಗೌರವಿಸಬೇಕು ಹಾಗೂ ಸಾಮಾಜಿಕವಾಗಿ ಅವರನ್ನೆಲ್ಲ ಗುರುತಿಸಬೇಕು.

ವಿವಿಧ ವೇದಿಕೆಗಳನ್ನು ಪ್ರತಿನಿಧಿಸುವವರು ಎಂದಿಗೂ ಧ್ವನಿ ಇಲ್ಲದವರ ಪರವಾಗಿ ನಿಂತು ಅವರಿಗೆ ಮಾತನಾಡಲು ಪ್ರೇರಣೆ ನೀಡುವುದು.

ಸಾಂಸ್ಕೃತಿಕವಾಗಿ ಸಾಮಾಜಿಕ ಸಂಬಂಧಗಳ ವೃದ್ಧಿಗೆ ಅವಕಾಶಗಳನ್ನು ಕಲ್ಪಿಸಿಕೊಂಡು 'ಕಸೆವ'ಗಳು ಅಥವಾ ಇನ್ನ್ಯಾವುದೇ ಮಹಿಳಾ ಗುಂಪುಗಳ ಬದುಕನ್ನು ಚಿತ್ರಿಸಿ ಎಲ್ಲರ ಬದುಕಿನಂತೆ ಅವರ ಬದುಕು ಎನ್ನುವುದನ್ನು ಮಾಡಿ ತೋರಿಸುವುದು.

ಇವೆಲ್ಲದರ ಜೊತೆಗೆ, ಈಗಾಗಲೇ ಮುಂಚೂಣಿಯಲ್ಲಿರುವ ಮಹಿಳಾ ಹೋರಾಟ/ ಚಳುವಳಿ ವೇದಿಕೆಗಳು 'ಕಸೆವ'ಗಳ ಸಮಸ್ಯೆಗಳನ್ನು ಸಾಮಾಜಿಕ, ಸಾರ್ವಜನಿಕ ಹಾಗೂ ಸಾಂಸ್ಕೃತಿಕ ಸಮಸ್ಯೆಗಳೆಂದು ಗುರುತಿಸಿ ಅದರೊಡನೆ ಬೆರೆತು, ಅವರೊಡನೆ ಬೆರೆತು ಮಹಿಳಾ ಚಳುವಳಿಯ ನೆಲೆಯನ್ನು ವೃದ್ಧಿಸಿಕೊಳ್ಳಬೇಕು. ಕಮರ್ಷಿಯಲ್ ಸೆಕ್ಸ್‌ವರ್ಕಗಳು ನಮ್ಮದೇ ಸಮಾಜದ ಅವಿಭಾಜ್ಯ ಅಂಗವೆಂದು ಪರಿಗಣಿತರಾಗಬೇಕು. ಇದಕ್ಕೆ ಕಾನೂನಿನ ಜೊತೆಗೆ ಈ ಸಮಾಜದ ಎಲ್ಲ ಮಾನವತಾವಾದಿಗಳ ಮನಸ್ಸು ಅತ್ಯಂತ ಪ್ರಮುಖವಾಗಿ ಬೇಕಾಗಿದೆ.

# ಸಂಗೀತದಲ್ಲಿ ಸೌಂದರ್ಯ ಮತ್ತು ರಸಾನುಭೂತಿ

ಡಾ. ಜಯದೇವಿ ಜಂಗಮಶೆಟ್ಟಿ

ಸಂಗೀತ ಸೇರಿದಂತೆ ಎಲ್ಲ ಲಲಿತ ಕಲೆಗಳಲ್ಲಿ ಸೌಂದರ್ಯವನ್ನು ಅಪೇಕ್ಷಿಸಲಾಗುತ್ತದೆ. ಸಂಗೀತ, ಸಾಹಿತ್ಯ, ನೃತ್ಯ ಇತ್ಯಾದಿ ಸುಂದರವಾಗಿರಬೇಕು ಎನ್ನುವುದು ಸಾಮಾನ್ಯ ನಿರೀಕ್ಷೆ. ಹಾಗೇ ನೋಡಿದರೆ; ಸೌಂದರ್ಯ ಶಾಸ್ತ್ರ ಪ್ರತ್ಯೇಕ ಅಧ್ಯಯನದ ಶಿಸ್ತಾಗಿ ಅಗಾಧವಾಗಿ ಬೆಳೆದಿದೆ. ಒಂದು ಕಾಲದಲ್ಲಿ ಸೌಂದರ್ಯಶಾಸ್ತ್ರವನ್ನು ತತ್ವಶಾಸ್ತ್ರದ ಭಾಗವಾಗಿ ನೋಡಲಾಗುತ್ತಿತ್ತು. ಸೌಂದರ್ಯಶಾಸ್ತ್ರವನ್ನು ಚೆಲುವಿನ ತತ್ವಶಾಸ್ತ್ರೀಯ ಭಾವನೆ ಎಂದೇ ಪರಿಗಣಿಸುತ್ತಿದ್ದರು. ಸತ್ಯಂ ಶಿವಂ ಸುಂದರಂ ಎಂಬ ಹೇಳಿಕೆ ಈ ಹಿನ್ನೆಲೆಯಲ್ಲಿಯೇ ಹುಟ್ಟಿಕೊಂಡಿರಬಹುದು. ಸೌಂದರ್ಯಶಾಸ್ತ್ರದ ಬಗೆಗಿನ ವಿವಿಧ ವ್ಯಾಖ್ಯಾನಗಳು, ವಿದ್ವಾಂಸರಲ್ಲಿನ ಭಿನ್ನ ಅಭಿಪ್ರಾಯಗಳು ಈ ಲೇಖನದ ಬರವಣಿಗೆಯಲ್ಲಿ ಪೂರಕ ಸಾಮಗ್ರಿಗಳನ್ನಾಗಿ ಬಳಸಿಕೊಳ್ಳಲಾಗಿದೆ. ಸೌಂದರ್ಯಶಾಸ್ತ್ರ ಯಾವ ರೀತಿಯಲ್ಲಿ ಕಲೆಗಳಿಗೆ ಅನ್ವಯಿಸಲ್ಪಟ್ಟಿದೆಯೋ ಹಾಗೆಯೇ ಸಾಂಸ್ಕೃತಿಕ ಅಂಶಗಳಿಗೂ ಅನ್ವಯಿಸುತ್ತದೆ.

ಬಹುಪಾಲು ಸೌಂದರ್ಯಶಾಸ್ತ್ರಜ್ಞರು ಕಲೆಯ ಮೂಲ ಅಂತಃಸ್ಸತ್ವವೇ ಸೌಂದರ್ಯ ಎಂದು ಪರಿಭಾವಿಸಿದ್ದಾರೆ. ಕಲೆಯ ಮೌಲ್ಯ ನಿರ್ಣಯ ಸೌಂದರ್ಯದ ಪ್ರಮಾಣವನ್ನವಲಂಬಿಸಿದೆ. ಒಂದು ಸಂಗೀತ ಕಛೇರಿ ಸುಂದರವಾಗಿದೆ ಎಂದು ಪ್ರೇಕ್ಷಕರು ಒಪ್ಪಿಕೊಳ್ಳಬೇಕಾದರೆ; ವಾಸ್ತವದಲ್ಲಿ ಅದು ಸುಂದರವಾಗಿರಬೇಕು. ಆಗ ಮಾತ್ರ ಸಂವೇದನಾಶೀಲ ಪ್ರೇಕ್ಷಕ ಸೌಂದರ್ಯಾತ್ಮಕ ಭಾವನೆಗಳನ್ನು ಆಸ್ವಾದಿಸುತ್ತಾನೆ. ಸೌಂದರ್ಯಾತ್ಮಕ ಭಾವನೆಗಳೆಂದರೆ; ರಸಭಾವಗಳೇ. ಸಂಗೀತದಲ್ಲಿ ಸೌಂದರ್ಯ ಇದೆ ಅಥವಾ ಇಲ್ಲ ಎಂಬ ಅಭಿಪ್ರಾಯಗಳು ರೂಪುಗೊಳ್ಳುವುದೇ ರಸಾನುಭೂತಿಯ ತೀವ್ರತೆಯನ್ನು ಆಧರಿಸಿ.... ಸಂಗೀತ ಒಂದು ಕಲೆ. ಆ ಕಲೆ ಸಾರ್ಥಕಗೊಳ್ಳುವುದು; ಸೌಂದರ್ಯ ಮತ್ತು ರಸಾನುಭೂತಿಯಿಂದ, ಸಂಗೀತದಲ್ಲಿ ಸೌಂದರ್ಯ ಮತ್ತು ರಸಾನುಭೂತಿಯ ಅಂಶಗಳನ್ನು ಹುಡುಕುವುದೆಂದರೆ; ಶ್ರೇಷ್ಟ ಸಂಗೀತದ ಆಸ್ವಾದನೆ ಮಾಡುವುದೆಂದೇ ಅರ್ಥ.

ಭಾರತೀಯ ಮತ್ತು ಪಶ್ಚಿಮದ ಸೌಂದರ್ಯಶಾಸ್ತ್ರಜ್ಞರು, ಸೌಂದರ್ಯಶಾಸ್ತ್ರವನ್ನು (aesthetics) ವಿಭಿನ್ನ ಆಯಾಮಗಳಲ್ಲಿ ಶೋಧಿಸಿದ್ದಾರೆ. ಸೌಂದರ್ಯಶಾಸ್ತ್ರವು ಕಲೆಯನ್ನು, ಜಗತ್ತನ್ನು ಹೊಸದೃಷ್ಟಿಕೋನದಿಂದ ಗ್ರಹಿಸುವ ವಿಧಾನಗಳನ್ನು ಕಲಿಸಿಕೊಟ್ಟಿದೆ..

ಕಲೆಯ ಸೌಂದರ್ಯದ ಮೌಲ್ಯಗಳ ನಿರ್ಣಯದಲ್ಲಿ ಕೆಲವರು 'ಸಂವೇದನೆಯ ಭಾವನಾತ್ಮಕ' ಅಂಶಗಳಿಗೆ ಒತ್ತುಕೊಟ್ಟರೆ ಇನ್ನೂ ಕೆಲವರು ಕಲೆಯನ್ನು ಸಂವೇದನಾಶೀಲ ಮತ್ತು ಪಾಂಡಿತ್ಯಪೂರ್ಣವಾಗಿ ಗ್ರಹಿಸಿದಾಗ ಮಾತ್ರ ಸೌಂದರ್ಯದ ಮೌಲ್ಯ ಸಮರ್ಪಕವಾಗಿರುತ್ತದೆ' ಎಂದು ಪ್ರತಿಪಾದಿಸಿದ್ದಾರೆ. ಸೌಂದರ್ಯದ ಮೌಲ್ಯ ನಿರ್ಣಯವನ್ನು ಒಂದು ಹಂತದವರೆಗೆ ಸಾಂಸ್ಕೃತಿಕವಾಗಿ ರೂಪಿಸಬಹುದು. ಆದರೆ ಸೌಂದರ್ಯದ ಮೌಲ್ಯ ನಿರ್ಣಯ ಸಾಪೇಕ್ಷವಾದುದು. ಹಾಗಾಗಿ ಸೌಂದರ್ಯದ ಮೌಲ್ಯ ನಿರ್ಣಯದಲ್ಲಿ ಆರ್ಥಿಕ, ರಾಜಕೀಯ, ನೈತಿಕ ಮೌಲ್ಯಗಳೂ ಪ್ರಮುಖ ಪಾತ್ರ ವಹಿಸುತ್ತವೆ. ಬ್ರಿಟನ್‌ನಲ್ಲಿ ವಿಕ್ಟೋರಿಯನ್ನರಿಗೆ ಆಫ್ರಿಕಾ ಶಿಲ್ಪಕಲೆ ಕುರೂಪವಾಗಿ ಕಂಡರೆ ಅದೇ ಶಿಲ್ಪ ಎಡ್ವರ್ಡಿಯನ್ನರಿಗೆ ಸುಂದರವಾಗಿ ಕಾಣುತ್ತದೆ. ಅಷ್ಟು ಮಾತ್ರವಲ್ಲ ಚಿತ್ರಕಲೆಯನ್ನು ಸುಂದರಗೊಳಿಸುವ ವಿಷಯ ಸಂಗೀತವನ್ನು ಸುಂದರಗೊಳಿಸುವುದಕ್ಕಿಂತ ಭಿನ್ನವಾಗಿದೆ.

ಸೌಂದರ್ಯಶಾಸ್ತ್ರ ಸಾಹಿತ್ಯ, ಸಂಗೀತ, ನೃತ್ಯ ಮಾತ್ರವಲ್ಲ ಸಮಸ್ತ ಸಾಂಸ್ಕೃತಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿ ರೂಪುಗೊಂಡಿರುವುದರಿಂದ ಅದರ ವ್ಯಾಪ್ತಿ ವಿಸ್ತಾರವಾದುದು. ತತ್ವಶಾಸ್ತ್ರೀಯ ಸೌಂದರ್ಯಶಾಸ್ತ್ರವಂತೂ ಕೇವಲ ಕಲೆಯ ಬಗ್ಗೆ ಮಾತನಾಡುವುದಿಲ್ಲ. ಖ್ಯಾತ ದಾರ್ಶನಿಕ ಲೇಖಕ ಟಾಲ್‌ಸ್ಟಾಯ್ 'ಕಲೆ ಎಂದರೆ ಏನು..? ಎಂದು ಪ್ರಶ್ನಿಸುತ್ತಲೇ ಕಲೆಗೆ ಹೊಸ ವ್ಯಾಖ್ಯಾನ ನೀಡುತ್ತಾರೆ. ಕಲೆಗಾಗಿ ಕಲೆ ಎಂಬ ವಾದವನ್ನು ಹಲವರು ಒಪ್ಪಿಕೊಳ್ಳುವುದಿಲ್ಲ. ಆದರೆ ಕಲೆ ಮನುಷ್ಯ ಸಂವೇದನೆಗಳ ಜೊತೆ ವ್ಯವಹರಿಸುತ್ತದೆ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಕಲೆಯ ಉದ್ದೇಶ ಮತ್ತು ಪ್ರಯೋಜನಗಳ ಬಗ್ಗೆ ಸಾಕಷ್ಟು ಭಿನ್ನ ಅಭಿಪ್ರಾಯಗಳಿವೆ. ಕಲೆಯನ್ನು ನೈತಿಕ-ರಾಜಕೀಯ ಉದ್ದೇಶಗಳಿಂದ ಸ್ವತಂತ್ರವಾಗಿಡಬೇಕು ಎಂಬ ವಾದ ಇರುವಂತೆ, ಕಲೆ-ಸಾಮಾಜಿಕ, ರಾಜಕೀಯ ಬದಲಾಣೆಗೆ ಪೂರಕವಾಗಿ ಬಳಸಿಕೊಳ್ಳಬೇಕು ಎನ್ನುವವರೂ ಇದ್ದಾರೆ. ಆದರೆ ಕಲೆ ಮತ್ತು ಸೌಂದರ್ಯದ ಅಗತ್ಯವನ್ನು ಯಾವ ಪಂಥದವರೂ ಅಲ್ಲಗಳೆಯುವುದಿಲ್ಲ.

ಸೌಂದರ್ಯಶಾಸ್ತ್ರದಂತೆ ರಸಸಿದ್ಧಾಂತವೂ ಚರ್ಚೆ-ವಾಗ್ವಾದಗಳ ಮೂಲಕ ಸದೃಢವಾಗಿ ಬೆಳೆದುನಿಂತಿದೆ. ಭಾರತೀಯ ಸೌಂದರ್ಯಶಾಸ್ತ್ರಜ್ಞ ಭರತನ ನಾಟ್ಯಶಾಸ್ತ್ರದ ಮೂಲಕ ರಸಸಿದ್ಧಾಂತ ಹುಟ್ಟು ಪಡೆಯಿತು. ನಾಟ್ಯಶಾಸ್ತ್ರವನ್ನು ಪಂಚಮವೇದ ಎಂದು ಭರತ ಪರಿಚಯಿಸುತ್ತಾನೆ. ಮುಖ್ಯವಾಗಿ ನಾಟ್ಯಶಾಸ್ತ್ರವು ರಸದ ಸೌಂದರ್ಯಾತ್ಮಕ ಸಂಗತಿಗಳನ್ನು ಪ್ರಸ್ತುತಪಡಿಸುತ್ತದೆ. ಭರತ ಮುನಿಯ ನಾಟ್ಯಶಾಸ್ತ್ರದ ಮುಖ್ಯ ಉದ್ದೇಶ ನಟನೆಯ ಪಾಠ ಹೇಳಿಕೊಡುವುದು. ಭರತನ ನಾಟ್ಯದ ಜೀವಾಳವೇ ಅಭಿನಯ. ರಸಸಿದ್ಧಾಂತದ ಮೂಲ; ಭರತನ ರಸಸೂತ್ರ "ವಿಭಾವಾನುಭಾವ ವ್ಯಭಿಚಾರಿ, ಸಂಯೋಗಾದ್ರಸ ನಿಷ್ಪತ್ತಿಃ" ಎಂದರೆ; ವಿಭಾವಗಳು, ಅನುಭಾವಗಳು, ಸಂಚಾರಿ

ಭಾವಗಳು, ಇವುಗಳ ಸಂಯೋಗದಿಂದ ರಸ ನಿಷ್ಪತ್ತಿಯಾಗುವುದು ಎಂದರ್ಥ. ಭರತನ ರಸಸೂತ್ರವನ್ನು ಆಧಾರವಾಗಿಟ್ಟುಕೊಂಡು ಅಭಿನವ ಗುಪ್ತ ಮೊಟ್ಟಮೊದಲ ಬಾರಿಗೆ ರಸ ಸಿದ್ಧಾಂತಕ್ಕೆ 'ತಾಂತ್ರಿಕ' ವ್ಯಾಖ್ಯಾನ ನೀಡಿದ. ಭಿನ್ನ ನೆಲೆಯಲ್ಲಿ ವಿಸ್ತರಿಸಿದ. ರಸ ಸಿದ್ಧಾಂತವನ್ನು ತುತ್ತತುದಿಗೆ ತೆಗೆದುಕೊಂಡ ಹೋದ.

ರಸ ಸಿದ್ಧಾಂತದ ಪ್ರಕಾರ; ಕಲೆಗಳು ಪ್ರಧಾನವಾಗಿ ಎಂಟು ರಸಗಳನ್ನು ಸ್ಫುರಿಸುತ್ತವೆ. ಆದರೆ ಕಾಶ್ಮೀರದ ಸೌಂದರ್ಯಶಾಸ್ತ್ರಜ್ಞ ಆನಂದವರ್ಧನ ತನ್ನ ಧ್ವನ್ಯಾಲೋಕ ಕೃತಿಯಲ್ಲಿ ಒಂಬತ್ತನೆಯ ರಸವೆಂದು 'ಶಾಂತಿರಸ' ವನ್ನು ವರ್ಣಿಸುತ್ತಾನೆ. ಧ್ವನ್ಯಾಲೋಕದಿಂದ 'ಶಾಂತಿರಸ ಅರ್ಥಾತ್ ಶಾಂತರಸ ಗಣನೀಯವಾಗಿ ಅಭಿವೃದ್ಧಿ ಹೊಂದಿತು. ಅದಕ್ಕೆ ವ್ಯಾಪಕ ಮನ್ನಣೆಯೂ ದೊರೆಯಿತು. ಅಭಿನವ ಗುಪ್ತನಂತೂ 'ಶಾಂತರಸ'ವನ್ನು ರತ್ನ ಖಚಿತ ಕಂಠಾಭರಣದ ದಾರಕ್ಕೆ ಹೋಲಿಸುವ ಮೂಲಕ ಅದರ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತಾನೆ. ಶೃಂಗಾರ, ಹಾಸ್ಯ, ಕರುಣಾ, ರೌದ್ರ, ವೀರ, ಭಯಾನಕ, ಭೀಬತ್ಸ, ಅದ್ಭುತ ಎಂಬ ಎಂಟು ರಸಗಳ ಜೊತೆಗೆ ಶಾಂತರಸವೂ ಹೀಗೆ ನೆಲೆ ನಿಂತಿತು. ಭರತಮುನಿ ರಸ ಸಿದ್ಧಾಂತದ ಮೂಲ ಪುರುಷ, ಅಭಿನವಗುಪ್ತನಿಂದ ಅಭಿವೃದ್ಧಿಗೊಂಡ ರಸ ಸಿದ್ಧಾಂತಕ್ಕೆ ಸೌಂದರ್ಯ ಶಾಸ್ತ್ರದಲ್ಲಿ ವ್ಯಾಪಕ ಮಾನ್ಯತೆ ದೊರೆಯಿತು.

ಸಂಗೀತ ಒಂದು ಶುದ್ಧ ಕಲೆ, ಗಾಯನ-ವಾದವನ್ನೊಳಗೊಂಡ ಸಂಗೀತ; ಉಳಿದ ಲಲಿತಕಲೆಗಳಿಗಿಂತಲೂ ಭಿನ್ನವೂ, ವಿಶಿಷ್ಟವೂ ಆಗಿದೆ. ಸಂಗೀತ ಕಲೆಯನ್ನು 'ಸುಂದರ'ವಾಗಿ ಪ್ರಸ್ತುತಪಡಿಸುವ ಕಲಾವಿದ, ವ್ಯಕ್ತಿಗತ ಪ್ರತಿಭೆಯ ಜೊತೆಗೆ ಪರಂಪರೆಯ ಸಮಸ್ತ ಶಕ್ತಿಯನ್ನು ಆವಾಹಿಸಿಕೊಳ್ಳಬೇಕಾಗುತ್ತದೆ. ಸಂಗೀತದಲ್ಲಿನ ಸೌಂದರ್ಯಾತ್ಮಕ ಸಂಗತಿಗಳನ್ನು ಹಾಗೂ ರಸಾನುಭೂತಿಯ ವಿವಿಧ ಸ್ತರಗಳನ್ನು ಸ್ಪರ್ಶಿಸಬೇಕಾದರೆ ಸೌಂದರ್ಯಶಾಸ್ತ್ರ ಮತ್ತು ರಸಸಿದ್ಧಾಂತದ ಸ್ಥೂಲ ಪರಿಚಯ ಅಗತ್ಯವೆಂದು ಭಾವಿಸಿ ಪೀಠಿಕೆ ಭಾಗವನ್ನು ನೀಡಲಾಗಿದೆ. ಸಂಗೀತದ ಒಟ್ಟು ಸೌಂದರ್ಯ ಗ್ರಹಿಕೆಗೆ ರಸಾನುಭೂತಿ ತಳಹದಿ ಇದ್ದಂತೆ. ಎಲ್ಲ ಲಲಿತ ಕಲೆಗಳಂತೆ ಸಂಗೀತವೂ ಸಾರ್ಥಕ ಪಡೆಯುವುದು ಮತ್ತು ಪರಿಪೂರ್ಣಗೊಳ್ಳುವುದು ಪ್ರೇಕ್ಷಕರ ಕ್ರಿಯಾತ್ಮಕ ಪ್ರತಿಸ್ಪಂದನದಲ್ಲಿ, ಸೌಂದರ್ಯ ಮತ್ತು ರಸಾನುಭೂತಿ ಎಂಬೆರಡು ಪದಗಳು ಸಂಗೀತದ ಸಂದರ್ಭದಲ್ಲಿ ಹೆಚ್ಚು ಅರ್ಥವಂತಿಕೆ ಪಡೆದುಕೊಳ್ಳಬೇಕೆಂದರೆ; ಶ್ರೇಷ್ಟ ಸಂಗೀತದಷ್ಟೆ ಶ್ರೇಷ್ಟ ಕೇಳುಗ-ಪ್ರೇಕ್ಷಕರ ಅಗತ್ಯವಿದೆ.

ಶ್ರೇಷ್ಟ ಪ್ರೇಕ್ಷಕನೆಂದರೆ; ಸಂಗೀತದ ಅಭಿರುಚಿಯುಳ್ಳ, ಸಂವೇದನಾಶೀಲ ವ್ಯಕ್ತಿ. ಸಂಗೀತದ ಸಮಸ್ತ ಜ್ಞಾನ ಪಡೆದ ವ್ಯಕ್ತಿ ಸಂವೇದನಾಶೀಲತೆ ಮತ್ತು ಭಾವನಾತ್ಮಕತೆ ಹೊಂದಿಲ್ಲದಿದ್ದರೆ; ಶ್ರೇಷ್ಟ ಪ್ರೇಕ್ಷಕನಾಗಲಾರ.. ಹೆಚ್ಚೆಂದರೆ; ಸಂಗೀತ ಪ್ರಸ್ತುತಿಯ ಎಲ್ಲ

ಹಂತದಲ್ಲಿ ಲೋಪಗಳನ್ನು ಕಾಣುವ ಟೀಕಾಕಾರನಾಗುತ್ತಾನೆ. ಸಂಗೀತ ಕಲೆಯ ಸೌಂದರ್ಯ ಕಾಣಲು ಮತ್ತು ರಸಾನುಭೂತಿ ಪಡೆಯಲು ಪ್ರೇಕ್ಷಕನ ಮನೋಧರ್ಮ ಹಾಗೂ ಆತನ ಸಾಂಸ್ಕೃತಿಕ ಹಿನ್ನೆಲೆ ಪ್ರಮುಖ ಪಾತ್ರ ವಹಿಸುತ್ತವೆ. ಆಫ್ರಿಕಾದ ಗಾಯನ ಶೈಲಿಗಳನ್ನು ಆಲಿಸಿ ಆಸ್ವಾದಿಸುವ ಪ್ರೇಕ್ಷಕನಿಗೆ ಭಾರತದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಹಿಡಿಸಲಿಕ್ಕಿಲ್ಲ. ಹಾಗೆಯೇ ನಿರಂತರವಾಗಿ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ಎಲ್ಲ ಪ್ರಕಾರಗಳನ್ನು ಆಲಿಸಿ ರಸಾನುಭೂತಿ ಪಡೆಯುವ ಶ್ರೇಷ್ಠ ಪ್ರೇಕ್ಷಕನಿಗೆ ಆಫ್ರಿಕಾದ ಸಂಗೀತ ಕರ್ಕಶವಾಗಿ ಅಥವಾ ಬರಿ ಸಪ್ಪಳವಾಗಿ ಕಿವಿಯ ಮೇಲೆ ಬೀಳಬಹುದು. ಇಷ್ಟಾಗಿಯೂ ಸಂಗೀತ ದೇಶ ಭಾಷೆಗಳ ಎಲ್ಲೆ ಕಟ್ಟುಗಳನ್ನು ಮೀರಿ ವಿಸ್ತರಿಸುವ ಮತ್ತು ಮನಕ್ಕೆ ತಟ್ಟುವ ಸಾಮರ್ಥ್ಯ ಹೊಂದಿದೆ ಎಂಬುದನ್ನು ಅಲ್ಲಗಳೆಯಲಾಗದು. ಯಾವುದೇ ದೇಶ, ಭಾಷೆಯ ಸಂಗೀತವಿರಲಿ ಒಂದು ಬಾರಿ ಅಭಿರುಚಿ, ಆಸಕ್ತಿ ಮೂಡಿದರೆ ಆ ಸಂಗೀತದ ಸೌಂದರ್ಯ ಸೆಳೆಯುತ್ತದೆ. ರಸಭಾವಗಳು ಪ್ರೇಕ್ಷಕನನ್ನು ಸಂಗೀತದಲ್ಲಿ ಮಿಂದೇಳುವಂತೆ ಮಾಡುತ್ತವೆ.

ಸಂಗೀತದ ಸೌಂದರ್ಯ ಸವಿಯುವುದು ಮತ್ತು ರಸಾನುಭೂತಿ ಹೊಂದುವುದು 'ದೈವ ಸಾಕ್ಷಾತ್ಕಾರದಷ್ಟೇ' ಸರಳ ಹಾಗೂ ಕಠಿಣ. ಶುದ್ಧಾಂತಃಕರಣವುಳ್ಳ ನಿಜಭಕ್ತ ಸದಾ ದೇವರ ಒಡನಾಡಿ, ಆತನಿಗೆ ದೈವ ಸಾಕ್ಷಾತ್ಕಾರ ಎಂಬುದು ಉಸಿರಾಡುವಷ್ಟೆ ಸಹಜ. ಬುದ್ಧಿಮತ್ತೆಯನ್ನು ಅವಲಂಬಿಸಿದ, ಚಂಚಲ ಮನದ ವ್ಯಕ್ತಿಗೆ 'ದೈವ ಸಾಕ್ಷಾತ್ಕಾರ' ಕಠಿಣ ತಪದ ಮಾತು. ಸಂಗೀತದ ಸಾಮಾನ್ಯ ಕೇಳುಗ ಸಹಜಭಾವದಲ್ಲಿ ಸಂಗೀತ ಆಲಿಸಿದರೆ ಪ್ರತಿ ಹಂತದಲ್ಲೂ ಆತನಿಗೆ ರಸಾನುಭೂತಿಯಾಗುತ್ತದೆ. ಸಂಗೀತಗಾರ ಎಷ್ಟೇ ಅದ್ಭುತವಾಗಿ ಗಾಯನ-ವಾದನ ಪ್ರಸ್ತುತಪಡಿಸಿದರೂ ಸಹೃದಯ ಪ್ರೇಕ್ಷಕರು ಇಲ್ಲದಿದ್ದರೆ ಗೋರ್ಕಲ್ಲ ಮೇಲೆ ಮಳೆ ಸುರಿದಂತಾಗುತ್ತದೆ. ಕೇಳುಗನ ಮನಸ್ಸು ಯಾವುದೋ ಕಾರಣಕ್ಕೆ ದುಃಖಪೂರಿತವಾಗಿದ್ದರೆ; ಆತನಿಗೆ ಶೃಂಗಾರ ರಸಭಾವ ಸುರಿಸುವ ಗಾಯನ - ವಾದನ ರುಚಿಸುವುದಿಲ್ಲ. ಹಾಗಂತ ಸಂಗೀತಕ್ಕೆ ಕೇಳುಗನನ್ನು ಆಕರ್ಷಿಸುವ, ಹಿಡಿದಿಡುವ ಸಾಮರ್ಥ್ಯ ಇಲ್ಲವೆಂದಲ್ಲ. ಎಷ್ಟೋ ಬಾರಿ ಖುಷಿಯಲ್ಲಿ ಇರುವ ಕೇಳುಗ ದುಃಖದ ಭಾವಗಳನ್ನು ಸ್ಫುರಿಸುವ ರಾಗ ಹಾಡುಗಳನ್ನು ಕೇಳಿದರೆ ದುಃಖಿತನಾಗುತ್ತಾನೆ.

ಸಂಗೀತದ ಸಾಮಾನ್ಯ ಪ್ರೇಕ್ಷಕನಿಂದಲೇ ಒಂದು ಮಟ್ಟದ ಅರ್ಹತೆಯನ್ನು ಅಪೇಕ್ಷಿಸುವ 'ಸಂಗೀತ ಕಲೆ' ಸಂಗೀತದ ಸೌಂದರ್ಯ ಮತ್ತು ರಸಾನುಭೂತಿಯ ತೀವ್ರತೆಯ ಮಟ್ಟವನ್ನು ಮೌಲ್ಯ ನಿರ್ಣಯ ಮಾಡುವ ಸಂಗೀತ ವಿಮರ್ಶಕನ ಹೊಣೆಗಾರಿಕೆ ಮತ್ತಷ್ಟು ಹೆಚ್ಚಾಗಿರುತ್ತದೆ. ಸಂಗೀತ ವಿಮರ್ಶಕ, ಸಂಗೀತ ಶಾಸ್ತ್ರದ ಬಗ್ಗೆ, ಘರಾಣಾ ಪರಂಪರೆ ಹಾಗೂ ಗಾಯಕ ಪ್ರಸ್ತುತಪಡಿಸುವ ರಾಗ-ಬಂದೀಶ ಕುರಿತು ತಿಳುವಳಿಕೆ

ಹೊಂದಿರುತ್ತಾನೆ. ಸಂಗೀತಗಾರ ತನ್ನ ಸೃಜನಾತ್ಮಕ ಪ್ರತಿಭೆಯಿಂದ ರಾಗವನ್ನು ಎಷ್ಟು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಿದ. ತನ್ನನ್ನೂ ಸೇರಿದಂತೆ ನೆರೆದ ಪ್ರೇಕ್ಷಕರನ್ನು ಆ ಗಾಯನ ಯಾವ ಮಟ್ಟದಲ್ಲಿ ಆವರಿಸಿತು. ಗಾಯನ ಪ್ರಸ್ತುತಿಯ ಸೌಂದರ್ಯ ಮತ್ತು ರಸಾನುಭೂತಿಯ ಸಂವೇದನಾಶೀಲ ನೆಲೆಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಸ್ವರ ಹಚ್ಚುವಿಕೆಯ (ಲಗಾವ್) ಹಂತದಿಂದ ಹಿಡಿದು ರಾಗಾಲಾಪನೆ, ಲಯಕಾರಿ, ಬೋಲ್‌ತಾನ, ತಾನಗಳ ಚಲನೆಯ ತೀವ್ರತೆ, ಸಂವೇದನಾಶೀಲ ಸಂಗತಿಗಳ ಅವಲೋಕನ ಮಾಡುತ್ತಲೇ ರಸಾನುಭೂತಿಯ ವಿವಿಧ ಸ್ತರಗಳಲ್ಲಿ ಹಾದು ಹೋಗಬೇಕಾಗುತ್ತದೆ. ಆಗ ಮಾತ್ರ ರಾಗ ಪ್ರಸ್ತುತಿಯ ಒಟ್ಟು ಸೌಂದರ್ಯದ ವಸ್ತುನಿಷ್ಠ ಮೌಲ್ಯ ನಿರ್ಣಯ ಸಾಧ್ಯವಾಗುತ್ತದೆ. ಎಲ್ಲಕ್ಕೂ ಮಿಗಿಲಾಗಿ ಸಂಗೀತ ವಿಮರ್ಶಕ ಗಾಯನ ಪ್ರಸ್ತುತಿಗೂ ಮುಂಚೆ ಸಂಗೀತ ಶಾಸ್ತ್ರ ತಿಳವಳಿಕೆಯ ಅಹಂಮಿಕೆ ಬದಿಗಿಟ್ಟು, ಸಹಜಭಾವದಲ್ಲಿ ಸಹೃದಯನಾಗಿ ಸಂಗೀತವನ್ನು ಆಲಿಸಬೇಕಾಗುತ್ತದೆ.

ಸಂಗೀತದ ರಸಾನುಭೂತಿ ಮತ್ತು ಸೌಂದರ್ಯಾಭಿವ್ಯಕ್ತಿಯ ಪರಿಯೇ ಅತ್ಯಂತ ಸಂಕೀರ್ಣವಾದುದು. ಶ್ರೇಷ್ಠ ಸಂಗೀತಗಾರರು ಯಾವತ್ತೂ ವಿಮರ್ಶಕರು ಮತ್ತು ಅಧಿಕಾರ ಸ್ಥಾನದಲ್ಲಿರುವವರನ್ನು ಮೆಚ್ಚಿಸಲು ಹಾಡುವುದಿಲ್ಲ. ಶ್ರೇಷ್ಠ ಪ್ರೇಕ್ಷಕ ಅಥವಾ ದೇವರಿಗಾಗಿ ಹಾಡುತ್ತಾರೆ. ಸಂಗೀತಗಾರ ಗಾಯನ ಪ್ರಸ್ತುತಿಯ ಸಂದರ್ಭದಲ್ಲಿ ಸಣ್ಣ ಅಡ್ಡಿಯನ್ನೂ ಸಹಿಸುವುದಿಲ್ಲ. ರಾಗ ಮತ್ತು ರಸಗಳ ಅಭಿವ್ಯಕ್ತಿ ಶಾಸ್ತ್ರೀಯ ಚೌಕಟ್ಟಿನಲ್ಲೇ ಅನಾವರಣಗೊಳ್ಳುತ್ತಾ ಸಾಗಿದರೂ ರಸಾನುಭೂತಿಯ ಸಂವೇದನಾಶೀಲ ನೆಲೆ ಸಂಗೀತಗಾರನ ಭಾವ ತೀವ್ರತೆ - ಸ್ವರ ಸಾಕ್ಷಾತ್ಕಾರದೊಂದಿಗೆ ಮಿಳಿತಗೊಂಡಿರುತ್ತದೆ. ಗಾಯಕನ ಭಾವ ತನ್ಮಯತೆಯೇ ರಾಗದ ವಿವಿಧ ಅಂಗಗಳು ಮತ್ತು ಶಾಸ್ತ್ರೀಯ ಚಲನೆಯ ಗತಿ ಒಟ್ಟಂದದಲ್ಲಿ ಬೆರೆತು ಅಪ್ರಜ್ಞಾಪೂರ್ವಕವಾಗಿ ರಸಾನುಭೂತಿ ಸ್ಫುರಿಸಿ, ಸೌಂದರ್ಯದ ಪ್ರಖರತೆ ಹೊರಹೊಮ್ಮುತ್ತದೆ. ಒಟ್ಟಿನಲ್ಲಿ ರಾಗ ಪ್ರಸ್ತುತಿಯ ಮೂಲಕ 'ಸೌಂದರ್ಯ' ಸಂಭವಿಸುತ್ತದೆ.

ಸಂಗೀತದ ಸೌಂದರ್ಯ ಶಿಲ್ಪದ ನಿರ್ಮಿತಿಗೆ ಸಂಗೀತ ಪ್ರಕಾರಗಳು, ಬಂದೀಶಗಳು, ರಾಗಗಳು, ರಾಗದಲ್ಲಿನ ಸ್ವರಗಳು ಪ್ರಮುಖ ಪಾತ್ರ ವಹಿಸುತ್ತವೆ. ಸಂಗೀತದ ಸಮಸ್ತ ಸಾಮಗ್ರಿಗಳು ನುರಿತ ಗಾಯಕನಲ್ಲಿ ಒಂದು ಹದದಲ್ಲಿ ಸಂಯೋಜನೆಗೊಂಡು 'ಪವಾಡ' ಸಂಭವಿಸುವಂತೆ ಮಾಡುತ್ತವೆ. ಮೊದಲೇ ಹೇಳಿದಂತೆ ಸಂಗೀತದ ಸೌಂದರ್ಯ ಹೆಚ್ಚುವಲ್ಲಿ ಸಂಗೀತಗಾರನ ವ್ಯಕ್ತಿಗತ ಪ್ರತಿಭೆ - ಸಾಧನೆಯ ಜೊತೆಗೆ ಬಹುದೊಡ್ಡ ಪರಂಪರೆಯೇ ಆತನೊಳಗೆ ಸೇರಿಕೊಂಡು ಪ್ರಮುಖ ಪಾತ್ರ ವಹಿಸುತ್ತದೆ. ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಗಾರರು, ಸಾಮಾನ್ಯವಾಗಿ ಖಯಾಲ್-ಖ್ಯಾಲ್ ಗಾಯನ, ಠುಮರಿ, ಟಪ್ಪಾ, ಹೋರಿ, ಚೈತಿ, ಖಜರಿ, ದಾದರಾ, ಸಾದರಾ, ಗಜಲ್ , ಭಜನ್ ಪ್ರಕಾರಗಳನ್ನು

ಪ್ರಸ್ತುತಪಡಿಸುತ್ತಾರೆ. ಖ್ಯಾಲ್ ಗಾಯನ ಶಾಸ್ತ್ರೀಯವಾದುದು. ಆ ಪ್ರಕಾರದಲ್ಲಿ ಬಡಾಖ್ಯಾಲ್, ಛೋಟಾ ಖ್ಯಾಲ್‌ಗಳನ್ನು ಬಳಸುತ್ತಾರೆ. ಇಲ್ಲಿ ಬಂದೀಶ-ಬೀಜ್ ರಾಗ ಮತ್ತು ರಸಭಾವಗಳ ಆತ್ಮ ಇದ್ದಂತೆ. ಒಂದೋ ಎರಡು ಸಾಲಿನ ಬಂದೀಶ- ನಿರ್ದಿಷ್ಟ ಭಾವ ಸ್ಫುರಿಸುವ ಸಾಹಿತ್ಯ, ಖಾಲ್ ಗಾಯನದಲ್ಲಿ ಸಾಹಿತ್ಯ; ರಾಗಾಲಾಪನೆಯ ಆತ್ಮದಂತಿದ್ದರೂ ರಸಭಾವ ಸ್ಫುರಿಸುವಲ್ಲಿ ರಾಗ, ಸ್ವರ ಮತ್ತು ಸಂಗೀತದ ಇನ್ನಿತರ ಪರಿಕರಗಳು ಮುಖ್ಯ ಪಾತ್ರ ವಹಿಸುತ್ತವೆ.

ಪ್ರತಿ ರಾಗವು ಮತ್ತು ರಾಗದಲ್ಲಿನ ಪ್ರಧಾನ ಸ್ವರಗಳು ನಿರ್ದಿಷ್ಟ ರಸಭಾವ ಸ್ಫುರಿಸುವ ಸಾಮರ್ಥ್ಯ ಪಡೆದಿರುತ್ತವೆ. ಉದಾಹರಣೆ : ಖಮಾಜ್- ಶೃಂಗಾರ, ಮಾರವಾ - ಕರುಣಾರಸ, ಪೂರಿಯಾ-ಭಕ್ತಿರಸ, ಸೋಹನಿ- ಶೃಂಗಾರ ರಸ ಉತ್ಪತ್ತಿ ಮಾಡುವ ಶಕ್ತಿ ಪಡೆದಿವೆ. ಹಾಗೆಯೇ ಸ್ವರ ಸಂಯೋಗದಲ್ಲೂ ರಸ ಭಾವ ಹೊರಹೊಮ್ಮುತ್ತದೆ. ನಿದರ್ಶನಕ್ಕೆ ಷಡ್ಡ ರಿಷಭ ಕೂಡಿದರೆ ವೀರರಸ, ಗಾಂಧಾರ ನಿಷಾದ ಸಂಯೋಗಗೊಂಡರೆ, ಕರುಣಾರಸ, ಮಧ್ಯಮ - ಪಂಚಮದ ಸಾಹಚರದಲ್ಲಿ ಹಾಸ್ಯ-ಶೃಂಗಾರ ರಸಭಾವ ಉಕ್ಕುತ್ತದೆ. ದೈವತ್ ಭೀಭತ್ಸ ಮತ್ತು ಭಯಾನಕ ರಸಭಾವ ಮೂಡಿಸಿದರೆ, ಷಡ್ಡ ಮತ್ತು ರಿಷಬ್, ರೌದ್ರ, ಅದ್ಭುತ ರಸೋತ್ಪತಿಗೆ ಕಾರಣವಾಗುತ್ತವೆ. ಇಂತಹ ನೂರಾರು ನಿದರ್ಶನಗಳನ್ನು ನೀಡಬಹುದು. ಖ್ಯಾಲ್ ಗಾಯನದಲ್ಲಿ ಮಾತ್ರ ರಸೋತ್ಪತ್ತಿಯ ಹೆಚ್ಚು ಹೊಣೆ ಸಂಗೀತದ ಸಂಗತಿಗಳನ್ನು ಅವಲಂಬಿಸಿದೆ. ಸ್ವರ ಚಲನೆಯ ಸೂಕ್ಷ್ಮಗಳನ್ನು ಶ್ರೇಷ್ಠ ಗಾಯಕ ಅಪ್ರಜ್ಞಾಪೂರ್ವಕವಾಗಿಯೇ ಪ್ರಯೋಗಿಸುತ್ತಿರುತ್ತಾನೆ. ಖ್ಯಾಲ್ ಗಾಯನದಲ್ಲಿ ಕಲ್ಪನೆಗೆ ಹೆಚ್ಚು ಅವಕಾಶವಿರುವುದರಿಂದ ಗಾಯಕ ಶಾಸ್ತ್ರೀಯ ಚೌಕಟ್ಟಿನಲ್ಲೂ ಸ್ವಾತಂತ್ರ್ಯ ಪಡೆದಿರುತ್ತಾನೆ. ಸ್ವರ ಸಂಗತಿಗಳ ಚಮತ್ಕಾರ ರಸಭಾವಗಳ ಸುರಿಸುವಿಕೆಗೆ ಚೈತನ್ಯ ನೀಡುತ್ತದೆ.

ಉಪಶಾಸ್ತ್ರೀಯ ಗಾಯನ ಪ್ರಕಾರಗಳಾದ ಠುಮರಿ, ಟಪ್ಪಾ, ಹೋರಿ, ಚೈತಿ, ಖಜರಿ, ದಾದರಾ, ಸಾದರಾ ಸಂಗೀತ ಪ್ರಸ್ತುತಿಯಲ್ಲಿ ರಸೋತ್ಪತ್ತಿಗೆ ಸಂಗೀತದಷ್ಟೆ ಸಾಹಿತ್ಯವೂ ಸಮಪ್ರಮಾಣದ ಶಕ್ತಿ ಹಂಚಿಕೊಳ್ಳುತ್ತದೆ. ಠುಮರಿಯಲ್ಲಿ ವಿರಹ ಮತ್ತು ಶೃಂಗಾರ ಭಾವ ಸ್ಫುರಿಸುವ ಸಾಹಿತ್ಯ ಇರುತ್ತದೆ. ಸಾಹಿತ್ಯವನ್ನು ಹೆಚ್ಚು ಭಾವಪೂರ್ಣವಾಗಿ ಪ್ರಸ್ತುತಪಡಿಸಲು ಸಂಗೀತ ಕ್ರಿಯಾತ್ಮಕ ಸಾಧನವಾಗಿ ದುಡಿಯುತ್ತದೆ. ಇಲ್ಲಿಯೂ ರಾಗ-ಸ್ವರಗಳು ಮತ್ತು ಸಂಗೀತಗಾರನ ಪ್ರತಿಭಾಪೂರ್ಣ ಭಾವಪೂರ್ಣ ಪ್ರಸ್ತುತಿ ರಸಾನುಭೂತಿ ಪಡೆದುಕೊಳ್ಳಲು ನೆರವಾಗುತ್ತದೆ. ಸಾಹಿತ್ಯ-ಸಂಗೀತ ಎಷ್ಟೇ ಸುಂದರವಾಗಿದ್ದರೂ ಸಂಗೀತಾರನ ಪ್ರತಿಭಾ ಸಾಮರ್ಥ್ಯವೇ ಸೌಂದರ್ಯಾಭಿವ್ಯಕ್ತಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಖ್ಯಾಲ್ ಗಾಯನದಲ್ಲಿ ರಸಾನುಭೂತಿ ಹೊಂದಲು ಮತ್ತು ಸೌಂದರ್ಯ ಸವಿಯಲು ಪ್ರೇಕ್ಷಕನಿಗೆ ಗಾಢ ತನ್ಮಯತೆ ಅಗತ್ಯವಾಗಿರುತ್ತದೆ.

ಉಪಶಾಸ್ತ್ರೀಯ ಗಾಯನ ಪ್ರಕಾರಗಳು ಪ್ರೇಕ್ಷಕರನ್ನು ಆಕರ್ಷಿಸುವ ಗುಣ ಪಡೆದಿರುತ್ತವೆ. ಮಾತ್ರವಲ್ಲ ಭಾವಪಲ್ಲಟ ಗೊಳಿಸುವ ಸಾಮರ್ಥ್ಯ ಹೊಂದಿವೆ. ಖುಷಿಯಲ್ಲಿರುವ ಪ್ರೇಕ್ಷಕನಿಗೆ ದುಃಖದ ಭಾವ ಮೂಡುವಂತೆ ಮಾಡುವ ದುಃಖದಲ್ಲಿರುವವನಿಗೆ ಮುದದ ಖುಷಿಯ ಭಾವನೆ ಸ್ಫುರಿಸುವ ಶಕ್ತಿ ಉಪಶಾಸ್ತ್ರೀಯ ಗಾಯನ ಪ್ರಕಾರಗಳಿಗಿದೆ.

ಗಜಲ್-ಭಜನಾ ಸಂಗೀತ ಪ್ರಕಾರಗಳಲ್ಲಿ ರಸಭಾವ ಸ್ಫುರಿಸುವ ಹೊಣೆಗಾರಿಕೆ ಹೆಚ್ಚು ಸಾಹಿತ್ಯವನ್ನು ಅವಲಂಬಿಸಿದೆ. ಶಕ್ತಿಶಾಲಿ ಸಾಹಿತ್ಯಕ್ಕೆ ಸಂಗೀತ ಪೂರಕ ಸಾಧನವಾಗಿ ಬಳಕೆಯಾಗಿರುತ್ತದೆ. ಸಂಗೀತದ ಅಭಿರುಚಿ ಇಲ್ಲದವರಿಗೂ ತನ್ನತ್ತ ಸೆಳೆಯುವ ಶಕ್ತಿ ಈ ಗಾಯನ ಪ್ರಕಾರಗಳಿಗಿದೆ. ಭಕ್ತಿ ಸಂಗೀತವಂತೂ ಅರ್ಥಪೂರ್ಣ ಸಾಹಿತ್ಯದಿಂದಾಗಿ ಭಕ್ತರಲ್ಲಿ ಭಕ್ತಿ ರಸಭಾವವೇ ಉಕ್ಕಿಸುತ್ತದೆ. ಗಜಲ್, ಭಜನ್, ವಚನ ಗಾಯನ, ದಾಸವಾಣಿ, ಅಭಂಗ, ತತ್ವಪದ ಗಾಯನ, ಭಾವಗೀತೆಗಳ ಗಾಯನ ರಸಾನುಭೂತಿ ಹೊಂದಲು ಸೌಂದರ್ಯಭಾವ ಹೊಮ್ಮಿಸಲು ತಮ್ಮದೇ ರೀತಿಯಲ್ಲಿ ಕ್ರಿಯಾಶೀಲವಾಗಿವೆ. ಪ್ರೇಕ್ಷಕನ ಮನೋಧರ್ಮಕ್ಕನುಗುಣವಾಗಿ ಖಾಲ್, ಠುಮರಿ, ಗಜಲ್, ಭಜನಾ ಪ್ರಕಾರಗಳು ಪ್ರಾಮುಖ್ಯತೆ ಪಡೆಯುತ್ತವೆಯೇ ಹೊರತು, ಸೌಂದರ್ಯಾಭಿವ್ಯಕ್ತಿಯಲ್ಲಿ ಮತ್ತು ರಸಭಾವ ಸ್ಫುರಿಸುವಲ್ಲಿ ಯಾವ ಪ್ರಕಾರವೂ ಶ್ರೇಷ್ಠ-ಕನಿಷ್ಠ ಎಂದೇನಿಲ್ಲ. ಖ್ಯಾಲ್ ಗಾಯನ ಪ್ರಕಾರ ಕಳೆದ ನೂರು ವರ್ಷಗಳಿಂದ ಪ್ರಾಭಲ್ಯ ಮೆರೆಯುತ್ತಿದೆ. ಹಾಗಂತ ಉಪಶಾಸ್ತ್ರೀಯ ಗಾಯನ ಪ್ರಕಾರಗಳನ್ನು ಕಡೆಗಣಿಸುವಂತಿಲ್ಲ. ಸಂಗೀತ ಪ್ರೇಕ್ಷಕರ ಸಂಖ್ಯೆ ನೂರ್ಮಡಿಸುವಲ್ಲಿ ಎಲ್ಲ ಗಾಯನ ಪ್ರಕಾರಗಳು ಶ್ರಮಿಸಿವೆ.

ಜಾನಪದ ಸಂಗೀತ, ಎಲ್ಲ ಗಾಯನ ಪ್ರಕಾರಗಳಿಗೆ ತಾಯಿ ಇದ್ದಂತೆ. ಜಾನಪದ ಸಂಗೀತದ ಸೌಂದರ್ಯಾಭಿವ್ಯಕ್ತಿ ಮತ್ತು ರಸಾನುಭೂತಿಯ ಪ್ರಕ್ರಿಯೆ ಅಪರೂಪ ಅನನ್ಯವಾದುದು. ಭಕ್ತಿ ಸಂಗೀತದ ಅಡಿಪಾಯವೇ ಜಾನಪದ ಸಂಗೀತ, ಮಧ್ಯಕಾಲೀನ ಭಕ್ತಿ ಪರಂಪರೆಯ ಮಹಾನ್ ಚೇತನಗಳ ಅಭಿವ್ಯಕ್ತಿ ಹೆಚ್ಚು ಪ್ರಚಾರ ಮಾಡಿದ್ದೇ ಜನಪದ ಸಂಗೀತಗಾರು. ಜನಪದದ ಲಯ, ಮಟ್ಟುಗಳ ಪರಿಷ್ಕರಣಗೊಂಡ ರೂಪಗಳನ್ನು ಶಾಸ್ತ್ರೀಯ ಗಾಯನ ಪರಂಪರೆಗಳೂ ಬಳಸಿಕೊಳ್ಳುತ್ತಿವೆ. ಜನಪದ ಸಂಗೀತದ ಸೌಂದರ್ಯ ಮತ್ತು ರಸಾನುಭೂತಿ ಅನಾದಿಕಾಲದಿಂದಲೂ ಸಮುದಾಯಗಳಿಗೆ ಜೋಗುಳ ಹಾಡಿನಂತೆ ಭಾವಚೈತನ್ಯ ನೀಡಿದೆ. ಜನಪದ ಸಂಗೀತದ ತಲಸ್ಪರ್ಶಿ ಅಧ್ಯಯನಗಳು ಅದರ ವ್ಯಾಪಕತೆ ಮತ್ತು ಹೆಚ್ಚುಗಾರಿಕೆಯನ್ನು ಮನದಟ್ಟು ಮಾಡಿಸಿಕೊಡಬಲ್ಲವು. ಹುಕ್ಕೇರಿ ಬಾಳಪ್ಪನವರು ಜನಪದದ ಸಂಗೀತದ ಕಣಜವೇ ಆಗಿದ್ದರು. ಅವರ ಗಾಯನದ ಸೌಂದರ್ಯ ಆವರಿಸುವ ಪರಿ ಶಾಸ್ತ್ರೀಯ ತಿಳವಳಿಕೆಗೂ ಮೀರಿದ್ದಾಗಿತ್ತು.

ಸಂಗೀತ-ಸೌಂದರ್ಯ-ರಸಾನುಭೂತಿ; ಒಂದರೊಳಗೊಂದು ಬೆರೆತು ಹೋಗಿವೆ. ಸಂಗೀತದ ಒಡಲೊಳಗೆ ಸೌಂದರ್ಯವಿದೆ. ಸೌಂದರ್ಯದ ಸ್ವರೂಪ

ನಿರ್ಣಯವಾಗುವುದೇ ರಸಾನುಭೂತಿಯ ವಿವಿಧ ಸ್ಥರಗಳಲ್ಲಿ ಅಥವಾ ರಸಾನುಭೂತಿಯ ವಿವಿಧ ಮಜಲುಗಳ ಒಟ್ಟು ಅಭಿವ್ಯಕ್ತಿಯೇ ಸೌಂದರ್ಯ. ಸಂಗೀತದಲ್ಲಿನ ಸೌಂದರ್ಯದ ಮೌಲ್ಯ ನಿರ್ಣಯ ಇತ್ತೀಚಿನ ದಿನಗಳಲ್ಲಿ ರಸಾನುಭೂತಿಯ ಗಾಢ ಅರಿವಿನ ಹಿನ್ನೆಲೆಯಲ್ಲಿ ಆಗುತ್ತಿಲ್ಲ. ರಸಾನುಭೂತಿಯ ಗಾಢ ಅರಿವು ಪ್ರೇಕ್ಷಕನಿಗೆ ಅಥವಾ ಸಂಗೀತ ವಿಮರ್ಶಕನಿಗೆ ದಕ್ಕುವುದೇ ಸಂಗೀತಗಾರನ ಗಾಢ ತನ್ಮಯತೆಯ ಸೂಕ್ಷ್ಮ ಪರಿವೀಕ್ಷಣೆಯಲ್ಲಿ. ಇದು ಬೌದ್ಧಿಕ ತಿಳವಳಿಕೆಯ ಮಟ್ಟದಲ್ಲಿ ದಕ್ಕುವಂಥದ್ದಲ್ಲ. ಎಲ್ಲ ಬಗೆಯ ಪೂರ್ವಾಗ್ರಹಗಳಿಂದ ಮುಕ್ತವಾದ ಮನಸ್ಸು ಮಾತ್ರ ಶ್ರೇಷ್ಠ ಸಂಗೀತದ ಸೌಂದರ್ಯಾಭಿವ್ಯಕ್ತಿ ಮತ್ತು ರಸಾನುಭೂತಿಯ ನೈಜ ಮೌಲ್ಯ ನಿರ್ಣಯ ಮಾಡಲು ಸಾಧ್ಯ.

ಹಾಗೆ ನೋಡಿದರೆ; ಸಂಗೀತದ ಬಗ್ಗೆ ಉತ್ಕಟ ಪ್ರೀತಿ ಮತ್ತು ಗಾಢ ಅಭಿರುಚಿ ಹೊಂದಿರುವ ಸಹಜ ಭಾವದ ಪ್ರೇಕ್ಷಕ ಅತ್ಯುತ್ತಮ ಸಂಗೀತದ ಸೌಂದರ್ಯವನ್ನು ಕಾಣುತ್ತಾನೆ. ಉತ್ಕಟ ರಸಾನುಭೂತಿ ಅನುಭವಿಸುತ್ತಾನೆ. ಹಾಗೆ ಕಂಡ-ಅನುಭವಿಸಿದ ಭಾವ ದ್ರವ್ಯದ ಅಂತಃಸ್ಸತ್ವವನ್ನು ಅಕ್ಷರ ರೂಪದಲ್ಲಿ ಅಥವಾ ಮಾತುಗಳಲ್ಲಿ ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯ ಆತ ಹೊಂದಿರುವುದಿಲ್ಲ. ಆತನ ಅನುಭವ ಶಿಸು ಕಂಡ ಕನಸಿನಂತಿರುತ್ತದೆ. ಸಂಗೀತಗಾರನ ಹೆಸರು, ಜಾತಿ, ಪ್ರದೇಶ ಯಾವುದನ್ನೂ ಲೆಕ್ಕಿಸದೇ 'ಸಂಗೀತ' ಪ್ರಸ್ತುತಿಯ ಸೌಂದರ್ಯದ ಮೌಲ್ಯ ನಿರ್ಣಯ ಸಾಧ್ಯವಾಗಬೇಕು. ಅದು ಸಾಧ್ಯವಾಗುವುದು ಸಂಗೀತದ ಗಾಢ ರಸಾನುಭೂತಿಯಲ್ಲಿ ಮಿಂದೆದ್ದಾಗ ಮಾತ್ರ ಶ್ರೇಷ್ಠ ಸಂಗೀತ; ಎಲ್ಲ ಕಾಲಕ್ಕೂ ಸಹೃದಯಿ ಕೇಳುಗನನ್ನು ಗಾಢ ಅನುಭೂತಿಯಲ್ಲಿ ಧಮ್ಮೋ ಎನ್ನುವಂತೆ ಮಾಡಿದೆ. ಭಾರತ-ಕರ್ನಾಟಕ ಶ್ರೇಷ್ಠ ಸಂಗೀತಗಾರರನ್ನು, ಸಂಗೀತವನ್ನು ಸೃಷ್ಟಿಸುತ್ತಲೇ ಇದೆ. ಅವರು ತೋರಿದ ಬೆಳಕಲ್ಲಿ ಸೌಂದರ್ಯ ಮತ್ತು ರಸಾನುಭೂತಿಯ ಅರಿವನ್ನು ವಿಸ್ತರಿಸಿಕೊಳ್ಳುವ ಪುಟ್ಟ ಪ್ರಯತ್ನವಿದು.

# ವಿಶ್ವ ಮಹಿಳಾ ಆರೋಗ್ಯ ಚಳುವಳಿಯ ಕಾಳಜಿಗಳು

ಡಾ. ಕೆ. ಸರೋಜಾದೇವಿ

ಇಡೀ ವಿಶ್ವದ ಅನೇಕ ದೇಶಗಳಲ್ಲಿ "ಸ್ತ್ರೀಯರ ಪ್ರಜನನ ಆಯ್ಕೆ ಹಾಗೂ ಅವರ ಮೂಲ ಆರೋಗ್ಯ ಸೌಲಭ್ಯಗಳ ಹಕ್ಕನ್ನು" ಮಹಿಳೆಯರ ಮಾನವ ಹಕ್ಕುಗಳು ಎಂಬುದಾಗಿ ಸ್ತ್ರೀವಾದಿ ಚಳುವಳಿಗಳು ಗುರ್ತಿಸಿ ಮಾನ್ಯತೆ ನೀಡಿವೆ. ಅಲ್ಲದೆ ಈ ಚಳುವಳಿಯಲ್ಲಿ ಪಾಲ್ಗೊಂಡಿರುವ ಅನೇಕ ಸಂಘಟನೆಗಳು ಸ್ತ್ರೀಯರ ಪ್ರಜನನ ಆಯ್ಕೆ ಹಾಗೂ ಪ್ರಜನನ ಆರೋಗ್ಯ ಸೌಲಭ್ಯಗಳ ಹಕ್ಕುಗಳನ್ನು ಮೂಲಭೂತವಾದ ಮಾನವ ಹಕ್ಕುಗಳೆಂದೇ ಪರಿಗಣಿಸಿ ಅವುಗಳನ್ನು ಸ್ತ್ರೀಯರಿಗೆ ನೀಡಬೇಕೆಂದು ಆಯಾ ದೇಶಗಳ ಸರಕಾರಗಳ ಮೇಲೆ ಒತ್ತಡ ಹೇರುತ್ತಿವೆ. ಆರೋಗ್ಯ ಕಾರ್ಯನೀತಿಗಳು, ಗರ್ಭನಿರೋಧಕ ಸಂಶೋಧನೆಗಳು, ಜನಸಂಖ್ಯಾ ನಿಯಂತ್ರಣ ಕಾರ್ಯನೀತಿಗಳು, ಕುಟುಂಬ ಕಲ್ಯಾಣ ಕಾರ್ಯ ಕ್ರಮಗಳು ಹಾಗೂ ಆಯಾ ದೇಶಗಳ ಅಭಿವೃದ್ಧಿ ಪ್ರಕ್ರಿಯಗಳು ಯಾವ ರೀತಿ ಮಹಿಳೆಯರ ನಿಜವಾದ ಕಾಳಜಿಗಳನ್ನು ನಿರ್ಲಕ್ಷಿಸಿವೆ ಹಾಗೂ ಇವುಗಳೆಲ್ಲಾ ಹೇಗೆ ಮಹಿಳೆಯರನ್ನು ವಸ್ತುಗಳಂತೆ ಭಾವಿಸಿ ನಡೆಸಿಕೊಂಡಿವೆ ಎಂಬುದನ್ನು ಅಂಕಿ ಅಂಶಗಳ ಸಾಕ್ಷ್ಯಗಳ ಸಮೇತ ದಾಖಲಿಸಿಕೊಂಡು ಹಲವಾರು ದೇಶಗಳಲ್ಲಿ ಮಹಿಳಾ ಸಂಘಟನೆಗಳು ಪ್ರತಿಭಟನೆಗಳನ್ನು ಮಾಡಿವೆ.೧

ಭಾರತದಲ್ಲೂ ಸಹ ಸ್ತ್ರೀವಾದಿ ಹೋರಾಟಗಾರರು ಹಾಗೂ ಮಾನವ ಹಕ್ಕುಗಳ ಹೋರಾಟಗಾರರು ಒಂದಾಗಿ ಕಳೆದ ಒಂದೂವರೆ ದಶಕದಿಂದ ಸ್ತ್ರೀ ಆರೋಗ್ಯಕ್ಕೆ ಧಕ್ಕೆಯನ್ನುಂಟುಮಾಡುವ ಕೆಲವು ವಿಷಯಗಳ ಬಗ್ಗೆ ತೀವ್ರವಾದ ಹೋರಾಟ ನಡೆಸಿದ್ದಾರೆ. ಈ ವಿಷಯಗಳ ವಿರುದ್ಧದ ಹೋರಾಟಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು.

೧. ಮಹಿಳೆಯರ ಆರೋಗ್ಯದ ಮೂಲಭೂತ ಅಗತ್ಯಗಳನ್ನು ಕಡೆಗಣಿಸಿ ಅವರ ಮೇಲೆ ಜನನ ನಿಯಂತ್ರಣ ವಿಧಾನಗಳನ್ನು ಹೇರುತ್ತಿರುವುದರ ವಿರುದ್ಧದ ಹೋರಾಟ,

೨. ವಿಶ್ವ ಆರೋಗ್ಯ ಸಂಸ್ಥೆಯಿಂದ, ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ ಹಾಗೂ ಭಾರತೀಯ ಔಷಧಿ ನಿಯಂತ್ರಕರಲ್ಲಿ ಯಾರೊಬ್ಬರಿಂದಲೂ ಅನುಮತಿ ಪಡೆಯದೇನೇ ಯಾವ ನೀತಿ ನಿಯಮಾವಳಿಗಳಿಗೆ ಬದ್ಧರಾಗದೇನೇ 'ಕ್ವಿನಾನ್' ನಂಥಹ ಅಪಾಯಕಾರಿ ಗರ್ಭ ನಿರೋಧಕವನ್ನು ಪ್ರಯೋಗಾತ್ಮಕವಾಗಿ ಉಪಯೋಗಿಸಿ ನಡೆಸುತ್ತಿದ್ದ ಸಂಶೋಧನೆಗಳ ವಿರುದ್ಧ ಹೋರಾಡಿ ಭಾರತದ ಸರ್ವೋಚ್ಚ

ನ್ಯಾಯಾಲಯದಿಂದ ಅವನ್ನು ನಿಷೇಧಿಸುವಲ್ಲಿ ಈ ಹೋರಾಟಗಾರರು ಯಶಸ್ವಿಯಾಗಿದ್ದಾರೆ.

೩. ವೈದ್ಯಕೀಯ ತಾಂತ್ರಿಕತೆಗಳ ದುರುಪಯೋಗ, ಗರ್ಭದಲ್ಲಿರುವ ಭ್ರೂಣದ ಲಿಂಗ ಪತ್ತೆ ಮತ್ತು ಸ್ತ್ರೀ ಭ್ರೂಣ ಹತ್ಯೆಯ ವಿರುದ್ಧದ ಚಳುವಳಿ ನಡೆಸಿದ್ದಾರೆ.

೪. ಅನಗತ್ಯ ಸಿಜೇರಿಯನ್ ಹೆರಿಗೆಗಳು, ಗರ್ಭಕೋಶವನ್ನು ಅನಗತ್ಯವಾಗಿ ತೆಗೆದು ಹಾಕುವಂತಹ ವೈದ್ಯಕೀಯ ತಾಂತ್ರಿಕತೆಯ ದುರುಪಯೋಗಗಳ ವಿರುದ್ಧವೂ ಹೋರಾಟ ನಡೆದಿದೆ.

೫. ಪತಿಗೆ ಅಥವಾ ಕುಟುಂಬಕ್ಕೆ ಬೇಡವೆನಿಸಿದ ಮಹಿಳೆಯರನ್ನು ಹುಚ್ಚಿಯರೆಂದು ವೈದ್ಯರಿಂದ ಪ್ರಮಾಣೀಕರಿಸಿ ಅವರನ್ನು ಹುಚ್ಚಾಸ್ಪತ್ರೆಯ ಶಾಶ್ವತ ರೋಗಿಗಳನ್ನಾಗಿರಿಸಿ, ತನ್ಮೂಲಕ ಮಾನಸಿಕ ಆರೋಗ್ಯವಿರುವ ಪ್ರತಿ ಪ್ರಜೆಗೂ ಇರುವ ಮೂಲಭೂತ ಹಕ್ಕುಗಳಿಂದ ಅವರನ್ನು ವಂಚಿಸಲು, ಭಾರತೀಯ ಮಾನಸಿಕ ಆರೋಗ್ಯದ ಕಾನೂನನ್ನು ದುರುಪಯೋಗ ಮಾಡುತ್ತಿರುವುದರ ವಿರುದ್ಧ ಹೋರಾಟ ನಡೆದಿದೆ.

೬. ವಿಷ ಹಾಗೂ ಸುಟ್ಟ ಗಾಯಗಳಿಗೆ ಸಂಬಂಧಿಸಿದಂತೆ ಮಹಿಳೆಯರಿಗೆ ಆಗುತ್ತಿರುವ ಹಿಂಸೆಯ ವಿರುದ್ಧ ಅವರಿಗೆ ಸರಿಯಾದ ರಕ್ಷಣೆ ಮತ್ತು ಚಿಕಿತ್ಸೆಗಳು ತುರ್ತಾಗಿ ಸಿಗದಿರುವುದರ ವಿರುದ್ಧ ಹೋರಾಟವನ್ನು ಹಲವಾರು ಮಹಿಳಾ ಸಂಘಟನೆಗಳು ನಡೆಸುತ್ತಲೇ ಇವೆ.

ಹೀಗೆ ಬಹುಮುಖಿಯಾದ ಸ್ತ್ರೀಪರ ಹೋರಾಟದ ಫಲವಾಗಿ ನಮ್ಮ ದೇಶದಲ್ಲಿಯೂ ಸಹ ನಿಧಾನವಾಗಿ ಆದರೆ ದೃಢವಾಗಿ ಸ್ತ್ರೀ ಆರೋಗ್ಯವನ್ನು ಕುರಿತಂತೆ ಮಹಿಳಾ ದೃಷ್ಟಿಕೋನವೊಂದರ ಉದಯವಾಗಿದೆ. ಇದುವರೆಗೂ ಮಹಿಳೆಯರ ಆರೋಗ್ಯ ಸಂಬಂಧಿ ವಿಷಯಗಳನ್ನು ವೈದ್ಯಕೀಯ ದೃಷ್ಟಿಯಿಂದ ಮಾತ್ರ ನೋಡುವ, ಸ್ತ್ರೀರೋಗಗಳಿಗೆ ವೈದ್ಯಕೀಯ ಕಾರಣಗಳು ಹಾಗೂ ಸ್ತ್ರೀರೋಗಗಳ ಸ್ಥಿತಿಗತಿಗಳ ಬಗ್ಗೆ ವಿವರಣೆ ನೀಡುವಲ್ಲಿಗೆ ಸರ್ಕಾರದ, ಸಂಬಂಧಿಸಿದ ಇಲಾಖೆಗಳ, ವೈದ್ಯರ ಹಾಗೂ ಜನ ಸಾಮಾನ್ಯರ ನೋಟ ಸೀಮಿತವಾಗಿತ್ತು. ಆದರೆ ಈ ಸೀಮಿತ ಪರಿಧಿಯ ಆಚೆಗೂ ನೋಟ ಹರಿಸಿದಲ್ಲಿ ಮಹಿಳೆಯರ ಆರೋಗ್ಯವು ಅಥವಾ ಅನಾರೋಗ್ಯವು ಅವರಿರುವ ಸಾಮಾಜಿಕ, ಆರ್ಥಿಕ, ರಾಜಕೀಯ, ಸೈದ್ಧಾಂತಿಕ ಹಾಗೂ ಸಾಂಸ್ಕೃತಿಕ ಸಂದರ್ಭಗಳ ಮೇಲೆ ಆಧಾರಿತವಾಗಿದೆ ಎಂಬ ಸತ್ಯದ ಅರಿವು ನಿಚ್ಚಳವಾಗಿ ಮೂಡುವುದರಲ್ಲಿ ಸಂಶಯವಿಲ್ಲ.

ಇನ್ನು ವಿಶ್ವ ಮಹಿಳಾ ಆರೋಗ್ಯ ಚಳುವಳಿಯತ್ತ ನೋಟ ಹರಿಸಿದಲ್ಲಿ ಈ ಚಳುವಳಿಗಾರರು ಸ್ತ್ರೀಯರಿಗೆ ಎಂಥಹ ಸಂತಾನ ನಿರೋಧಕಗಳು ಬೇಕು ಎಂಬುದನ್ನು

ನಿರ್ಧರಿಸಿ ಅಂಥವನ್ನು ಸಂಶೋಧಿಸಿ ಸಿದ್ಧಪಡಿಸಬೇಕೆಂಬ ಬೇಡಿಕೆಯನ್ನು ಪ್ರಮುಖವಾಗಿ ಮುಂದಿರಿಸಿದ್ದಾರೆ. ಈ ಚಳುವಳಿಗಾರರ ಪ್ರಕಾರ ಇಂಥಹ ಗರ್ಭನಿರೋಧಕಗಳು ಮೊದಲನೆಯದಾಗಿ ಪೂರ್ತಿ ಮಹಿಳೆಯರ ಪೂರ್ಣ ನಿಯಂತ್ರಣದಲ್ಲಿರಬೇಕು. ಅಂದರೆ, ಅವುಗಳನ್ನು ಉಪಯೋಗಿಸುವಲ್ಲಿ ಆರೋಗ್ಯ ಕಾರ್ಯಕರ್ತರ ಅಥವಾ ವೈದ್ಯರ ನೆರವು ಮತ್ತು ನಿಗಾಗಳ ಅಗತ್ಯವಿರಬಾರದು. ಎರಡನೆಯದಾಗಿ ಅವು ದೇಹದ ಆಂತರಿಕ ವ್ಯವಸ್ಥೆಗಳ ಮಧ್ಯೆ ಪ್ರವೇಶಿಸಿ ಕೆಲಸ ಮಾಡುವಂತಿರಬಾರದು. ಅಂದರೆ ಅವು ಮಾತ್ರೆಗಳ ಅಥವಾ ಚುಚ್ಚು ಮದ್ದಿನ ರೂಪದಲ್ಲಿ ಇರಬಾರದು. ಮೂರನೆಯದಾಗಿ ಮತ್ತು ಮುಖ್ಯವಾಗಿ ಗರ್ಭನಿರೋಧಕಗಳು ಮಹಿಳೆಯರಿಗೆ ಲೈಂಗಿಕ ರೋಗಗಳಿಂದ ಸಂಪೂರ್ಣ ರಕ್ಷಣೆ ನೀಡಬೇಕು. ಆಗ ಲಭ್ಯವಿರುವ ವೈಜ್ಞಾನಿಕ ತಾಂತ್ರಿಕತೆಯಲ್ಲಿ ಈ ಮೂರೂ ಗುಣಗಳನ್ನುಳ್ಳ ಸಂತಾನ ನಿರೋಧಕಗಳನ್ನು ಸಿದ್ಧಪಡಿಸುವದು ಒಂದು ದೊಡ್ಡ ಸವಾಲು ಎಂದೇ ಅನೇಕ ವಿಜ್ಞಾನಿಗಳ ಅಭಿಪ್ರಾಯವಾಗಿದೆ. ಕೆಲವು ವಿಜ್ಞಾನಿಗಳ ಪ್ರಕಾರ ಯೋನಿಯಲ್ಲಿ ಉಪಯೋಗಿಸಬಹುದಾದ ಗರ್ಭನಿರೋಧಕ ಸಾಧನಗಳನ್ನು ಚೆನ್ನಾಗಿ ಸಂಶೋಧಿಸಿ, ಅಭಿವೃದ್ಧಿ ಪಸಿದಲ್ಲಿ ಮಹಿಳಾ ಚಳುವಳಿಗಾರರು ಕೇಳುತ್ತಿರುವಂತಹ ಗರ್ಭನಿರೋಧಕಗಳನ್ನು ಸಿದ್ಧಪಡಿಸಲು ಸಾಧ್ಯವಿದೆ.

ಆದರೆ ಯೋನಿಯಲ್ಲಿ ತಡೆಯೊಡ್ಡುವ ವಿಧಾನಗಳು ಅತ್ಯಂತ ಹಳೆಯ ವಿಧಾನಗಳಾಗಿದ್ದು ಈಗ ಲಭ್ಯವಿರುವ ಸಾಧನಗಳೆಂದರೆ ಡಯಾಫ್ರಮ್, ಗರ್ಭಕೋಶದ ಬಾಯಿಯ ಮುಚ್ಚಳ ಹಾಗೂ ನೊರೆ, ಜೆಲ್ಲಿ ಇತ್ಯಾದಿ ರೂಪಗಳಲ್ಲಿರುವ ವೀರ್ಯಾಣು ಹಂತಕಗಳು, ಮಹಿಳೆಯ ಆಂತರಿಕ ವ್ಯವಸ್ಥೆಗಳಲ್ಲಿ ಕೆಲಸಮಾಡುವ ನುಂಗುವ ಗುಳಿಗೆಗಳು, ಗರ್ಭಕೋಶದಲ್ಲಿಡಬಹುದಾದ ಸಂತಾನ ನಿರೋಧಕ ಸಾಧನಗಳು ಇತ್ಯಾದಿಗಳನ್ನು ಚೆನ್ನಾಗಿ ಅಭಿವೃದ್ಧಿಪಡಿಸಿದ್ದರೂ ಸಹ, ಯೋನಿಯಲ್ಲಿ ತಡೆಯೊಡ್ಡುವ ಸಾಧನಗಳನ್ನು ಎಷ್ಟೋ ದಶಕಗಳಿಂದ ಅಭಿವೃದ್ಧಿ ಪಡಿಸಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ಆದ್ದರಿಂದಲೇ ಯೋನಿಯಲ್ಲಿ ತಡೆಯೊಡ್ಡುವ ಗರ್ಭನಿರೋಧಕಗಳು ಸಂತಾನ ನಿರೋಧವನ್ನು ಸಾಧಿಸುವಲ್ಲಿ ಹೆಚ್ಚು ಯಶಸ್ವಿಯೂ ಆಗಿಲ್ಲ ಹಾಗೂ ಸ್ತ್ರೀಯರಲ್ಲಿ ಇವು ವ್ಯಾಪಕವಾಗಿ ಬಳಕೆಯಲ್ಲಿಯೂ ಇಲ್ಲ. ಇದುವರೆಗೂ ಇವುಗಳಲ್ಲಿ ಏನಾದರೂ ಒಳ್ಳೆಯ ಬದಲಾವಣೆಗಳಾಗಿದ್ದಲ್ಲಿ ಅವು ಆಕಸ್ಮಿಕವಾಗಿ ಅಥವಾ ಪರೋಕ್ಷವಾಗಿ ಉಂಟಾಗಿವೆ ಎಂಬುದು ಪರಿಣಿತರ ಅಭಿಪ್ರಾಯ, ವಿಜ್ಞಾನಿಗಳ ಪ್ರಕಾರ ಗರ್ಭಕೋಶದ ಬಾಯಿ ಹಾಗೂ ಯೋನಿಯ ಮೇಲ್ಪದರಗಳ ಗುಣಲಕ್ಷಣಗಳನ್ನು ಇನ್ನೂ ಚೆನ್ನಾಗಿ ಸಂಶೋಧಿಸಿದಲ್ಲಿ ಅವುಗಳ ಮೇಲೆ ತೆಳುವಾದ ಪದರದಂತೆ ಹರಡಿಕೊಳ್ಳಬಲ್ಲಂಥಹ ಗರ್ಭ ನಿರೋಧಕಗಳನ್ನು ರೂಪಿಸಲು ಸಾಧ್ಯ. ಇಂಥಹ ರಾಸಾಯನಿಕ ಗರ್ಭನಿರೋಧಕಗಳನ್ನು ಲೈಂಗಿಕ ಸೋಂಕುಗಳನ್ನು ಹಾಗೂ ವೀರ್ಯಾಣುಗಳನ್ನು ನಾಶಮಾಡುವಂತೆ ಸಿದ್ಧಪಡಿಸಲು ಸಾಧ್ಯವಿದೆ ಹಾಗೂ ಈ ದಿಸೆಯಲ್ಲಿ ಸಂಶೋಧನೆ ನಡೆಸಲು ಹಣ ಮತ್ತು ಪ್ರೋತ್ಸಾಹಗಳೆರಡೂ ಅಗತ್ಯ ಎಂಬುದು ವಿಜ್ಞಾನಿಗಳ ಅಭಿಪ್ರಾಯವಾಗಿದೆ.

ಹಲವಾರು ದೇಶಗಳಲ್ಲಿ ನಡೆಯುತ್ತಿರುವ ಮಹಿಳಾ ಚಳುವಳಿಗಳಿಂದಾಗಿ, ಜನಸಂಖ್ಯಾ ನಿಯಂತ್ರಣ ಕ್ಷೇತ್ರದಲ್ಲಿ ಮುಖ್ಯ ಪಾತ್ರವಹಿಸುತ್ತಿರುವ ಅಂತರ ರಾಷ್ಟ್ರೀಯ ಸಂಸ್ಥೆಗಳು, ಸಂಶೋಧನೆಗಳಿಗೆ ಹಣ ಒದಗಿಸುವ ದತ್ತಿಗಳು/ದಾನಿಗಳು, ರಾಷ್ಟ್ರೀಯ ಸರಕಾರಗಳು ಇತ್ಯಾದಿಗಳು, ಆರೋಗ್ಯ ಹಾಗೂ ಜನಸಂಖ್ಯಾ ನಿಯಂತ್ರಣಗಳಲ್ಲಿ ಮಹಿಳೆಯರ ಕಾಳಜಿಗಳೂ ಮುಖ್ಯ ಎಂಬುದನ್ನು ನಿಧಾನವಾಗಿಯಾದರೂ ಗುರುತಿಸಲಾರಂಭಿಸಿವೆ. ಹೀಗಾಗಿ ಯಾವುದೇ ಪ್ರಜನನ ಆರೋಗ್ಯಕ್ಕೆ ಸಂಬಂಧಿಸಿದ ತಾಂತ್ರಿಕತೆಯನ್ನು ಕಂಡುಹಿಡಿಯುವ, ಅಭಿವೃದ್ಧಿಪಡಿಸುವ ಎಲ್ಲಾ ಹಂತಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವಿರಬೇಕೆಂಬುದನ್ನು ತಾತ್ವಿಕವಾಗಿ ಒಪ್ಪಲಾಗಿದೆ. ತಮ್ಮ ವಿಶಿಷ್ಟ ಜೈವಿಕ ಹಾಗೂ ಸಾಮಾಜಿಕ ಪಾತ್ರಗಳಿಂದಾಗಿ, ಸಂತಾನೋತ್ಪತ್ತಿ ಹಾಗೂ ಲೈಂಗಿಕ ವಿಷಯಗಳಲ್ಲಿ ಸ್ತ್ರೀಯರಿಗೆ ಆಯ್ಕೆಗಳು ಬಹಳ ಸೀಮಿತವಾಗಿವೆ. ಆದ್ದರಿಂದ ನೈತಿಕ ಕಾರಣಗಳಿಗಾಗಿಯಾದರೂ, ಪ್ರಜನನ ಆರೋಗ್ಯ ಸಂಶೋಧನೆಗಳಲ್ಲಿ ಹಾಗೂ ಪ್ರಜನನ ಆರೋಗ್ಯ ಸೇವೆಗಳಲ್ಲಿ ಮಹಿಳೆಯರನ್ನು ಪ್ರಯೋಗಕ್ಕೆ ಒಳಪಡುವ ವಸ್ತುಗಳಂತೆ ಪರಿಗಣಿಸದೆ, ಅವರನ್ನು ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ವ್ಯಕ್ತಿಗಳನ್ನಾಗಿ ಪರಿಗಣಿಸಿ ಅವರನ್ನು ಹಾಗೆಯೇ ನಡೆಯಿಸಿಕೊಳ್ಳಬೇಕಾಗಿದೆ. ಇದರಿಂದ ತಮ್ಮ ತಮ್ಮ ಅಗತ್ಯಗಳಿಗೆ ತಕ್ಕಂತೆ, ತಮ್ಮ ಸಾಮಾಜಿಕ ಆರ್ಥಿಕ ಸಾಮರ್ಥ್ಯಕ್ಕೆ, ಸಂದರ್ಭಕ್ಕೆ ತಕ್ಕ ಪ್ರಜನನ ಆಯ್ಕೆಯನ್ನು ಮಾಡಿಕೊಳ್ಳುವ ಅವಕಾಶಗಳನ್ನು ಮಹಿಳೆಯರಿಗೆ ನೀಡಿದಂತಾಗುತ್ತದೆ.

ಪ್ರಜನನ ಆರೋಗ್ಯ ಸೇವೆಗಳು ಹಾಗೂ ಸಂಶೋಧನೆಗಳ ಬಗ್ಗೆ ಪ್ರತಿಹಂತದಲ್ಲೂ ನಿರ್ಣಯ ತೆಗೆದುಕೊಳ್ಳುವಾಗ ಮಹಿಳೆಯರನ್ನು ಒಳಗೊಳ್ಳುವುದು ಹಾಗೂ ಎಲ್ಲವನ್ನೂ ನೆಲೆಯಲ್ಲಿ ನಿಂತು ಮಹಿಳಾ ದೃಷ್ಟಿಕೋನದಿಂದ ಪರಿಶೀಲಿಸಬೇಕೆಂಬ ಬೇಡಿಕೆಗೆ ಬಲವಾದ ವ್ಯವಹಾರಿಕ ಕಾರಣಗಳೂ ಇವೆ. ಏಕೆಂದರೆ ಪ್ರಜನನ ರೋಗಗಳನ್ನು ತಡೆಗಟ್ಟುವಲ್ಲಿ ಮತ್ತು ಚಿಕಿತ್ಸೆ ಮಾಡುವಲ್ಲಿ ಉಪಯೋಗಿಸುವ ವಿಧಿ ವಿಧಾನಗಳನ್ನು ಹಾಗೂ ಗರ್ಭನಿರೋಧಕಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಮಹಿಳೆಯರ ಅಗತ್ಯಗಳನ್ನು, ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಒಳ್ಳೆಯದು. ಏಕೆಂದರೆ ಹೀಗೆ ಮಾಡಿದಲ್ಲಿ ಅಂಥಹ ಆರೋಗ್ಯ ಕಾರ್ಯಕ್ರಮಗಳಿಗೆ ಹಾಗೂ ಗರ್ಭನಿರೋಧಕಗಳಿಗೆ ಗರಿಷ್ಠ ಮಟ್ಟದ ಉತ್ತಮ ಪ್ರತಿಕ್ರಿಯೆ ಮಹಿಳೆಯರಿಂದ ದೊರಕುವುದು. ಜೊತೆಗೇನೇ ಇದರಿಂದಾಗಿ ಮಹಿಳೆಯರ ವೈಯ್ಯಕ್ತಿಕ ಆರೋಗ್ಯ ಸುಧಾರಿಸಿ ಸಮಾಜದ ಸಮುದಾಯದ ಆರೋಗ್ಯವೂ - ಉತ್ತಮಗೊಳ್ಳುವುದರಲ್ಲಿ ಸಂಶಯವಿಲ್ಲ.

ಆದರೆ ಇಂದು ಅನೇಕ ದೇಶಗಳಲ್ಲಿ ಜನನ ನಿಯಂತ್ರಣಕ್ಕಾಗಿ ಇರುವ ಧ್ಯೆಯಗಳು ಮತ್ತು ಧೋರಣೆಗಳು ೧೯೬೦-೧೯೭೦ ರ ದಶಕಗಳಲ್ಲಿದ್ದ ಹಳೆಯ ಧ್ಯೆಯ ಧೋರಣೆಗಳನ್ನೇ ಪ್ರತಿಫಲಿಸುತ್ತಿವೆ. ಜೊತೆಗೆ, ಕಳೆದ ಎರಡು ದಶಕದಿಂದೀಚೆಗೆ ಅಂದರೆ, ೧೯೮೦ ರಿಂದ ಈಚೆಗೆ ಲೈಂಗಿಕತೆ ಹಾಗೂ ಸಂತಾನೋತ್ಪತ್ತಿಯ ವಿಷಯಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಉದಾಹರಣೆಗೆ ಅನೇಕ ಬಡದೇಶಗಳಲ್ಲಿ ಹೆಚ್ಚುತ್ತಲೇ

ಇರುವ ಆರ್ಥಿಕ ಸಂಕಷ್ಟಗಳಿಂದಾಗಿ ಆಯಾ ದೇಶಗಳ ಆರೋಗ್ಯ ಸೇವಾ ಸೌಲಭ್ಯಗಳ ಗುಣಮಟ್ಟ ಒಂದೇ ಸಮನೆ ಕುಸಿಯುತ್ತಿದೆ. ಏಡ್ಸ್‌ನ್ನೂ ಸೇರಿದಂತೆ ಲೈಂಗಿಕ ಖಾಯಿಲೆಗಳು ಹಾಗೂ ಹೆಚ್.ಐ.ವಿ ಸೋಂಕುಗಳು ಇಡೀ ವಿಶ್ವದಲ್ಲಿ ಪಿಡುಗಿನಂತೆ ಹೆಚ್ಚುತ್ತಿವೆ. ಗರ್ಭಪಾತಗಳ ಸಂಖ್ಯೆ ಹೆಚ್ಚುತ್ತಿದ್ದು ಅದಕ್ಕೆ ಬೇಕಾಗುವ ಆರೋಗ್ಯ ಸೌಲಭ್ಯಗಳ ಬೇಡಿಕೆ ಹೆಚ್ಚುತ್ತಲೇ ಇದ್ದರೂ ಸಹ ಅಂಥಹ ಸೌಲಭ್ಯಗಳ ತೀವ್ರಕೊರತೆ ಅನೇಕ ದೇಶಗಳಲ್ಲಿದೆ. ಕುಟುಂಬ ನಿಯಂತ್ರಣ ಹಾಗೂ ಆರೋಗ್ಯ ಸೇವೆಗಳು ಆಯಾ ದೇಶಗಳ ಜನರ ನಿರೀಕ್ಷೆಯ ಮಟ್ಟವನ್ನು ಇನ್ನೂ ಮುಟ್ಟಿಲ್ಲ. ಕೊನೆಯದಾಗಿ ಹಾಗೂ ಮುಖ್ಯವಾಗಿ ಪ್ರಜನನ ಆರೋಗ್ಯದ ಬಗ್ಗೆ ಸಮಾಜ ವಿಜ್ಞಾನಿಗಳಲ್ಲಿ ಹಾಗೂ ಜೀವ ವೈದ್ಯಕೀಯ ಕ್ಷೇತ್ರಗಳಲ್ಲಿ ತುರ್ತಾಗಿ ನಡೆಯಬೇಕಾಗಿರುವ ಸಂಶೋಧನೆಗಳಿಗೆ ಧನ ಸಹಾಯ ಸಿಗುತ್ತಿಲ್ಲ.

ಮರುವಿಮರ್ಶೆ ಮತ್ತು ಮರು ಚಿಂತನೆ ನಡೆಯಬೇಕಾದ ಮೂರು ಮುಖ್ಯ ವಿಷಯಗಳು

ಈ ಎಲ್ಲಾ ಬದಲಾವಣೆಗಳು, ಮರುವಿಮರ್ಶೆ ಮತ್ತು ಮರು ಚಿಂತನೆ ಮಾಡಬೇಕಾದ ಮೂರು ಮುಖ್ಯ ವಿಷಯಗಳತ್ತ ಬೆರಳು ಮಾಡಿ ತೋರಿಸುತ್ತಿವೆ. ಇವುಗಳೆಂದರೆ-

(i) ಪ್ರಜನನ ಆರೋಗ್ಯ ಕ್ಷೇತ್ರದಲ್ಲಿ ನಡೆಯುತ್ತಿರುವ ಸಂಶೋಧನೆಗಳು,

(ii) ಈಗ ಲಭ್ಯವಿರುವ ಆರೋಗ್ಯ ಸೇವಾ ಸೌಲಭ್ಯಗಳು ಮತ್ತು ತಾಂತ್ರಿಕತೆ ಹಾಗೂ

(iii) ಪ್ರಜನನ ಆರೋಗ್ಯಕ್ಕೆ ಸಂಬಂಧಿಸಿದ ಧ್ಯೆಯ ಧೋರಣೆಗಳು ಹಾಗೂ ವಿಧಾನಗಳು.

ಜನಸಂಖ್ಯಾ ನಿಯಂತ್ರಣದ ಹಿತಾಸಕ್ತಿಗಳಾದ ವಿಜ್ಞಾನಿಗಳೊಂದಿಗೆ, ತಜ್ಞವೈದ್ಯರೊಂದಿಗೆ, ಸರಕಾರಿ ಕಾರ್ಯನೀತಿ ನಿರೂಪಕರೊಂದಿಗೆ ಹಾಗೂ ರಾಷ್ಟ್ರದ ಆರೋಗ್ಯ ಇಲಾಖೆಗಳೊಂದಿಗೆ ಚರ್ಚೆ ಹಾಗೂ ಮಾತುಕತೆಗಳನ್ನು ನಡೆಸುತ್ತಲೇ ಪ್ರಜನನ ಆರೋಗ್ಯ ಕ್ಷೇತ್ರದಲ್ಲಿ ತಂಪಿರಾರುವ ಹಲವಾರು ಬದಲಾವಣೆಗಳಿಗಾಗಿ ಅಂತರ ರಾಷ್ಟ್ರೀಯ ಮಹಿಳಾ ಚಳುವಳಿಯ ಒತ್ತಡ ತರುತ್ತಿದೆ. ಮಹಿಳಾ ಆರೋಗ್ಯ ಚಳುವಳಿಯಲ್ಲಿ ಪ್ರಗತಿಪರ ವಿಚಾರಗಳುಳ್ಳ ವೈದ್ಯಕೀಯ ತಜ್ಞರೂ ಇದ್ದು, ಒಂದು ಸಮುದಾಯದಲ್ಲಿ ಅಥವ ಒಂದು ದೇಶದಲ್ಲಿ ಜನಸಂಖ್ಯೆಯನ್ನು ನಿಯಂತ್ರಿಸುವ ಪ್ರತಿ ಯೋಜನೆಯಲ್ಲಿ ವೈಯಕ್ತಿಕ ಪ್ರಜನನ ಆಯ್ಕೆ ಮತ್ತು ವೈಯಕ್ತಿಕ ಆರೋಗ್ಯ ಮುಖ್ಯ ಉದ್ದೇಶಗಳಾಗಿರಬೇಕೆಂದು ವಾದಿಸುತ್ತಿದ್ದಾರೆ. ಇಂದು ಮಹಿಳೆಯರಿಗೆ ಇರಬೇಕಾದ ಪ್ರಜನನ ಆರೋಗ್ಯದ ಹಕ್ಕುಗಳನ್ನು ದೊರಕಿಸಿಕೊಡಬೇಕಾದರೆ ಯಾವ ಧ್ಯೆಯಗಳನ್ನು ಮತ್ತು ಯಾವ ಆಯಕಟ್ಟಿನ, ಉಪಾಯಗಳನ್ನು ಉಪಯೋಗಿಸ ಬೇಕೆಂಬುದರ ಬಗ್ಗೆ ಈ ಚಳುವಳಿಯಲ್ಲಿರುವವರು ಚಿಂತಿಸಿ, ಚರ್ಚಿಸಿ ಮರುವಿಮರ್ಶೆ ಮಾಡಿ ಸ್ಪಷ್ಟಿಕರಿಸಿಕೊಳ್ಳುತ್ತಿದ್ದಾರೆ. ಮಹಿಳಾ ಚಳುವಳಿಯ ವಕ್ತಾರರ ಪ್ರಕಾರ ವೈಯಕ್ತಿಕವಾಗಿ ಮಹಿಳೆಯರಿಗೆ ಪ್ರಜನನ ಆರೋಗ್ಯದ ಹಕ್ಕುಗಳನ್ನು ನೀಡಿದಲ್ಲಿ ಆಯಾ ದೇಶದ

ಜನಸಂಖ್ಯೆಯ ಬೆಳವಣಿಗೆ ಆಯಾ ದೇಶದ ವಿಕಾಸಕ್ಕೆ ಲಭ್ಯವಿರುವ ಸಂಪನ್ಮೂಲಗಳಿಗೆ ತಕ್ಕಂತೆ ತನ್ನಷ್ಟಕ್ಕೆ ತಾನೇ ತಗ್ಗುತ್ತದೆ.

ಅಂತರ ರಾಷ್ಟ್ರೀಯ ಮಹಿಳಾ ಆರೋಗ್ಯ ಚಳುವಳಿಯ ಗುರಿಗಳು

ವಿಶ್ವ ಮಹಿಳಾ ಆರೋಗ್ಯ ಚಳುವಳಿಯ ಬಹುಮುಖ್ಯ ಗುರಿಗಳೆಂದರೆ,

ಲೈಂಗಿಕ ರೋಗಗಳನ್ನು ತಡೆಗಟ್ಟುವುದು ಮತ್ತು ನಿಯಂತ್ರಿಸುವುದು. ಇದಕ್ಕಾಗಿ ವಿಶೇಷವಾಗಿ ಲೈಂಗಿಕ ಜೊತೆಗಾರನು ಸಹಕರಿಸದಿದ್ದಲ್ಲಿ ಮಹಿಳೆಯೇ ಉಪಯೋಗಿಸ ತಕ್ಕ ಸುರಕ್ಷಾ ವಿಧಾನಗಳ ಅಭಿವೃದ್ಧಿ ಹಾಗೂ ಇಂಥಹ ಸುರಕ್ಷಿತವಾದ ಗರ್ಭನಿರೋಧಕಗಳನ್ನು ವಿಶಾಲವ್ಯಾಪ್ತಿಯಲ್ಲಿ ಹಂಚಿಕೆ ಮಾಡುವುದು.

– ಪುರುಷರು ತಮ್ಮ ಲೈಂಗಿಕ ನಡವಳಿಕೆಯ ಹೊಣೆಯನ್ನು ಅವರೇ ಹೊರುವಂತೆ ಒತ್ತಾಯ ತರುವುದು ಹಾಗೂ ತಮ್ಮ ಹೆಂಡತಿ/ಲೈಂಗಿಕ ಸಂಗಾತಿ ಹಾಗೂ ಮಕ್ಕಳ ಆರೋಗ್ಯಕ್ಕೆ ಅವರನ್ನೇ ಹೊಣೆಗಾರರನ್ನಾಗಿ ಮಾಡುವುದು.

- ಬೇಡದ ಬಸಿರುಗಳನ್ನು ಮಹಿಳೆಗೆ ಯಾವುದೇ ರೀತಿಯಲ್ಲಿ ಅಪಾಯವಾಗದ ಹಾಗೆ ಕೊನೆಗೊಳಿಸುವ ಸುರಕ್ಷಿತ ತಾಂತ್ರಿಕತೆ ಹಾಗೂ ಆರೋಗ್ಯ ಸೇವಾ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು.

ಸ್ತ್ರೀಯರ ಜೀವನ ಚಕ್ರದ ಪೂರ್ತಿ ಅವರ ಲೈಂಗಿಕ ಹಾಗು ಪ್ರಜನನ ಆರೋಗ್ಯದ ಅಗತ್ಯಗಳನ್ನು ಪೂರೈಸುವಂಥಹ ಆರೋಗ್ಯ ಸೇವಾ ಸೌಲಭ್ಯಗಳ ಗುಣಮಟ್ಟ ಹೆಚ್ಚಿಸುವುದು. ಮಹಿಳೆಯರನ್ನು ಸಬಲರನ್ನಾಗಿಸುವಂಥಹ ಹಾಗೂ ಬಡತನ ನಿವಾರಣೆ ಮಾಡುವಂಥಹ ಬದಲಾವಣೆಗಳನ್ನು ಸಾಮಾಜಿಕ ಆರ್ಥಿಕ ಕಾರ್ಯನೀತಿಗಳಲ್ಲಿ ತರುವುದು. ಇದರಿಂದ ಸುರಕ್ಷಿತವಾದ ಲೈಂಗಿಕ ಹಾಗೂ ಜನನ ನಿಯಂತ್ರಣಕ್ಕೆ ಅನುಕೂಲಕರವಾದ ಪರಿಸರ ನಿರ್ಮಾಣವಾಗುತ್ತದೆ.

ಈ ದಿಸೆಯಲ್ಲಿ ವಿಜ್ಞಾನಿಗಳು ಹಾಗೂ ಸ್ತ್ರೀ ಆರೋಗ್ಯ ಚಳುವಳಿಯ ಪ್ರತಿಪಾದಕರ ನಡುವೆ ಮಾತುಕತೆಗಳು ಬ್ರೆಜಿಲ್, ನೈಜೀರಿಯಾ ಹಾಗೂ ಫಿಲಿಪ್ಪಿನ್ಸ್ನಲ್ಲಿ ನಡೆದಿವೆ. ಅಷ್ಟೇ ಅಲ್ಲದೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಮಾನವ ಸಂತಾನೋತ್ಪತ್ತಿಯ ಬಗ್ಗೆ ಅಭಿವೃದ್ಧಿ, ತರಬೇತಿ ಹಾಗೂ ಸಂಶೋಧನೆಗಳ ವಿಶೇಷ ಕಾರ್ಯಕ್ರಮ ಮತ್ತು ನ್ಯೂಯಾರ್ಕಿನ ಅಂತರ ರಾಷ್ಟ್ರೀಯ ಮಹಿಳಾ ಆರೋಗ್ಯ ಸಂಯುಕ್ತ ರಂಗಗಳ ನಡುವೆ ವಿಚಾರವಿನಿಮಯ ನಡೆದಿವೆ. ಇಂಥಹ ಚರ್ಚೆ, ವಿಚಾರ ವಿನಿಮಯ ಮತ್ತು ಮಾತುಕತೆಗಳು ಸಾಧ್ಯ ಹಾಗೂ ಉಪಯುಕ್ತ ಎಂಬುದನ್ನು ಇವೆಲ್ಲಾ ಪ್ರಯತ್ನಗಳು ತೋರುತ್ತಿವೆ. ಆದರೂ ಸಹ ಮಹಿಳಾ ಆರೋಗ್ಯ ಪ್ರತಿಪಾದಕರು, ಸರಕಾರಗಳ

ಆರೋಗ್ಯ ನೀತಿನಿರೂಪರನ್ನು ಸಂಶಯದಿಂದಲೇ ನೋಡುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಪ್ರಜನನ ಆರೋಗ್ಯದ ಬಗೆಗಿನ ಸಂಶೋಧನೆ ಹಾಗೂ ಸೇವೆಗಳ ಬಗ್ಗೆ ಕಾರ್ಯನೀತಿಗಳನ್ನು ರೂಪಿಸುವಾಗ ಸಹಜವಾಗಿಯೇ ಅಥವಾ ಬೇಕೆಂತಲೇ ಸ್ತ್ರೀ ಆರೋಗ್ಯ ಪ್ರತಿಪಾದಕರನ್ನು ಅನೇಕ ಸರ್ಕಾರಗಳು ಕೈ ಬಿಡುತ್ತಿವೆ. ಆದರೆ ಸ್ತ್ರೀ ಆರೋಗ್ಯ ಚಳುವಳಿಕಾರರು ತಮ್ಮ ಪ್ರಯತ್ನಗಳನ್ನು ನಿಲ್ಲಿಸಿಲ್ಲ ಮತ್ತು ತಮ್ಮ ಪ್ರಯತ್ನಗಳ ಗತಿಯ ತೀವ್ರತೆಯನ್ನಾಗಲೀ ತಗ್ಗಿಸಿಲ್ಲ. ಇವರುಗಳ ಪ್ರಕಾರ ಮುಂದಿನ ಸಹಸ್ರಮಾನದಲ್ಲಿ ಸ್ತ್ರೀ ಆರೋಗ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ಮುಖ್ಯ ಕಾರ್ಯಸೂಚಿಯ ಮೂಲ ಭಾಗಗಳಾಗಿರಬೇಕು ಎಂದು ಒತ್ತಾಯಿಸುತ್ತಿರುವ ಅಂಶಗಳೆಂದರೆ-

(i) ಲೈಂಗಿಕ ರೋಗಗಳ ನಿಯಂತ್ರಣ ಮತ್ತು ತಡೆಗಟ್ಟುವಿಕೆ,

(ii) ಆರೋಗ್ಯ ಸೇವಾ ಸೌಲಭ್ಯಗಳಿಗಾಗಿ ಬೇಕಾಗುವ ಪರಿಕರಗಳು, ಕಟ್ಟಡ, ಸಿಬ್ಬಂದಿ ಇತ್ಯಾದಿಗಳನ್ನು ಬಲಪಡಿಸುವುದು,

(iii) ಪ್ರಜನನ ಆರೋಗ್ಯ ಸೌಲಭ್ಯಗಳನ್ನು ಕುಟುಂಬ ನಿಯಂತ್ರಣದಿಂದಾಚೆಗೂ ಕೊಂಡೊಯ್ದು ಅದರ ವ್ಯಾಪ್ತಿಯನ್ನೂ ಹಾಗೂ ಗುಣಮಟ್ಟವನ್ನೂ ಅಭಿವೃದ್ಧಿ ಪಡಿಸುವುದು

ಹಾಗೂ

(iv) ಸ್ತ್ರೀಯರ ಆರೋಗ್ಯದ ಹಕ್ಕುಗಳನ್ನು ತುಳಿದುಹಾಕುವ ಎಲ್ಲಾ ಪ್ರವೃತ್ತಿಗಳನ್ನು ತೊಡೆದು ಹಾಕುವದು.

ಈ ದಿಸೆಯಲ್ಲಿ ಸ್ತ್ರೀ ಆರೋಗ್ಯ ಚಳುವಳಿಯು ಸುಮಾರಾದ ಯಶಸ್ಸು ಪಡೆದಿರುವುದನ್ನು ಅಲ್ಲಗಳೆಯುವಂತಿಲ್ಲ. ಮೆಕ್ಸಿಕೋ ನಗರದಲ್ಲಿ ೧೯೯೩ ರ ಮಾರ್ಚ ೮ ರಿಂದ ೧೦ ರ ವರೆಗೂ ನಡೆದ "೨೦೦೦ ಶತಮಾನದಾಚೆಗಿನ ಗರ್ಭನಿರೋಧಕ ಸಂಶೋಧನೆ ಮತ್ತು ಅಭಿವೃದ್ಧಿ" ಎಂಬ ಸಮಾವೇಶದಲ್ಲಿ ಘೋಷಿತವಾದ ಪ್ರಜನನ ಸಂಶೋಧನೆಯ ಕಾರ್ಯಸೂಚಿಯಲ್ಲಿ ಸ್ತ್ರೀ ಆರೋಗ್ಯ ಚಳುವಳಿಯು ಇದುವರೆಗೂ ಗಳಿಸಿರುವ ಈ ಯಶಸ್ಸು ತಕ್ಕಮಟ್ಟಿಗೆ ಪ್ರತಿಫಲಿತವಾಗಿದೆ. ಕಾರ್ಯಸೂಚಿಯು ಒತ್ತು

ನೀಡಿರುವ ವಿಷಯಗಳೆಂದರೆ

(i) ಸ್ತ್ರೀಯರೇ ನಿಯಂತ್ರಿಸಬಹುದಾದ ಹಾಗೂ ಅವರನ್ನು ಲೈಂಗಿಕ ಸೋಂಕು ರೋಗಗಳಿಂದ ಕಾಪಾಡಬಲ್ಲ ಹಾಗೂ ಸಾಧ್ಯವಿದ್ದಲ್ಲಿ ಅವರಿಗೆ ಗರ್ಭನಿರೋಧಕ ರಕ್ಷೆಯನ್ನು ನೀಡಬಲ್ಲ ವಿಧಾನಗಳನ್ನು / ಸಾಧನಗಳನ್ನು ಅಭಿವೃದ್ಧಿಪಡಿಸುವುದು

(ii) ಮುಟ್ಟಾಗುವುದು ತಡವಾದಾಗ ಮುಟ್ಟನ್ನು ಪ್ರೇರೇಪಿಸುವ ವಿಧಾನಗಳನ್ನು ಅಭಿವೃದ್ಧಿಪಡಿಸುವುದು ಮತ್ತು

(iii) ಪುರುಷರು ಉಪಯೋಗಿಸುವಂಥಹ ಸಂತಾನ ನಿರೋಧಕ ವಿಧಾನ ಮತ್ತು ಸಾಧನಗಳನ್ನು ಅಭಿವೃದ್ಧಿ ಪಡಿಸುವುದು.



# ಮಹಿಳಾ ಆರೋಗ್ಯ ಚಳುವಳಿಯಲ್ಲಿ ಅಂತರರಾಷ್ಟ್ರೀಯ ಹಾಗೂ ದೇಶಿಯ ಸಂಘಟನೆಗಳು

ವಿಶ್ವದ ಅನೇಕ ದೇಶಗಳಲ್ಲಿ ಮಹಿಳೆಯರು, ಸ್ತ್ರೀಸಂಘಟನೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಳ್ಳುತ್ತಿದ್ದು, ಅಂತರ ರಾಷ್ಟ್ರೀಯ ವೇದಿಕೆಗಳಲ್ಲಿ ಮತ್ತು ಕಾರ್ಯನೀತಿ ನಿರೂಪಣಾ ಸಮಿತಿಗಳಲ್ಲಿ ಅವರ ಧ್ವನಿ ಮಾರ್ದನಿಗೊಳ್ಳುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಸಂಬಂಧಿಸಿದ ಅಂತರ ರಾಷ್ಟ್ರೀಯ ಸಮಾವೇಶಗಳಿಗೆ, ಅದರಲ್ಲಿಯೂ ಕೈರೋದಲ್ಲಿ ನಡೆದ ಅಂತರ ರಾಷ್ಟ್ರೀಯ ಜನಸಂಖ್ಯೆ ಮತ್ತು ವಿಕಾಸವನ್ನು ಕುರಿತ ಸಮಾವೇಶ ಹಾಗೂ ಬೀಜಿಂಗ್‌ನಲ್ಲಿ ನಡೆದ ನಾಲ್ಕನೇ ವಿಶ್ವ ಮಹಿಳಾ ಸಮಾವೇಶಗಳಿಗೆ ಮಹಿಳೆಯರ ಒತ್ತಾಯದ ದನಿಗಳು ಕಾರಣವಾಗಿದ್ದವು ಎನ್ನುವುದು ಅತಿಶಯೋಕ್ತಿಯಲ್ಲ. ಈ ಸಮಾವೇಶಗಳಲ್ಲಿ ಭಾಗವಹಿಸಿದ ಮಹಿಳಾ ಪ್ರತಿನಿಧಿಗಳು ತಮ್ಮ ಜ್ಞಾನ ಮತ್ತು ಪರಿಣಿತಿಯಿಂದ ಸ್ತ್ರೀಪರ ಕಾಳಜಿಗಳನ್ನು ಪ್ರಭಾವಶಾಲಿಯಾಗಿ ಮಂಡಿಸಿ ವಿಶ್ವದ ಗಮನ ಸೆಳೆದಿದ್ದಾರೆ. UNFPA (United Nation Fund for Population Activities), ವಿಶ್ವಬ್ಯಾಂಕ್ ಮತ್ತು ಜನಸಂಖ್ಯಾ ಪರಿಷತ್ತಿನಂತಹ ಅಂತರ ರಾಷ್ಟ್ರೀಯ ಸಂಸ್ಥೆಗಳಲ್ಲಿ ಸಹ ಮಹಿಳಾ ಪ್ರತಿನಿಧಿಗಳು ಸ್ತ್ರೀಪರವಾದ ಪ್ರಭಾವ ಬೀರಲು ಪ್ರಯತ್ನಿಸುತ್ತಿದ್ದಾರೆ. ಸ್ತ್ರೀಯರ ಮೇಲೆಸಗಲಾಗುತ್ತಿರುವ ಹಿಂಸೆಯ ವಿವಿಧ ರೂಪಗಳನ್ನು ಬಲವಾಗಿ ವಿರೋಧಿಸುವುದರೊಂದಿಗೇ, ತಮ್ಮ ಸಮಗ್ರತೆ ಹಾಗೂ ತಮ್ಮ ಸ್ವಂತ ದೇಹ ಮತ್ತು ಜೀವನದ ಮೇಲಣ ಸ್ವಾತಂತ್ರ್ಯಕ್ಕಾಗಿ ಸ್ತ್ರೀಯರು ನಡೆಸುತ್ತಿರುವ ಎಲ್ಲಾ ಬಗೆಯ ಹೋರಾಟಗಳಿಗೆ ಅಂತರ ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಹಿಳಾ ಜಾಲಗಳು ಬೆಂಬಲ ನೀಡುತ್ತಿವೆ. ಮಹಿಳಾ ಚಳುವಳಿಯಲ್ಲಿರುವ ಕಾರ್ಯಶೀಲ ಕಾರ್ಯಕರ್ತರುಗಳು, ಬೇರೆ ಬೇರೆ ದೇಶಗಳಿಂದ, ವಿವಿಧ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಹಾಗೂ ವಿವಿಧ ಜನಾಂಗೀಯ ಹಿನ್ನೆಲೆಗಳಿಂದ ಬಂದಿದ್ದರೂ ಅವರೆಲ್ಲರಿಗೂ ಸ್ತ್ರೀಯರ ಸ್ವಾತಂತ್ರ್ಯ ಹಾಗೂ ಸಬಲೀಕರಣಗಳೇ ಮುಖ್ಯ ಗುರಿಗಳಾಗಿವೆ. ಇವುಗಳು ವಿಶ್ವ ಮಹಿಳಾ ಚಳುವಳಿಯು ಇನ್ನೂ ಸಾಧಿಸಬೇಕಾಗಿರುವ ಸವಾಲುಗಳಾಗಿಯೇ ಉಳಿದಿವೆ.

ಮಹಿಳೆಯರ ಆರೋಗ್ಯಕ್ಕೆ ಅನ್ವಯಿಸಿದಂತೆ ಈ ದಿಸೆಯಲ್ಲಿ ಅಂತರ ರಾಷ್ಟ್ರೀಯ ಜಾಲವುಳ್ಳ ಹಲವಾರು ಸಂಘಟನೆಗಳು ಅನೇಕ ದೇಶಗಳಲ್ಲಿ ಈಗಾಗಲೇ ಕೆಲಸ ಮಾಡುತ್ತಿವೆ. ಉದಾಹರಣೆಗೆ "ಪ್ರಜನನ ಹಕ್ಕುಗಳಿಗಾಗಿ ಮಹಿಳೆಯರ ವಿಶ್ವಜಾಲ" (Women's Global Network for Reproductive Rights) ಹಾಗೂ ತಳಿಶಾಸ್ತ್ರ ತಾಂತ್ರಿಕತೆಗಳನ್ನು ವಿರೋಧಿಸುವ ಸ್ತ್ರೀವಾದಿ ಅಂತರ ರಾಷ್ಟ್ರೀಯ 250" (Feminist International Network for Resistance to Reproductive and Genetic Engineering), ಇವು ವಿಶ್ವ ಮಹಿಳಾ ಆರೋಗ್ಯ ಚಳುವಳಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ.



ಭಾರತದಲ್ಲಿ ಸಹ ನಿಜವಾದ ಹಲವು ಮಹಿಳಾ ಸಂಘಟನೆಗಳಿದ್ದು ಅವೂ ಈ ದಿಸೆಯಲ್ಲಿ ಕೆಲಸ ಮಾಡುತ್ತಿವೆ. ಅವುಗಳಲ್ಲಿ "ಮಹಿಳಾ ವೇದಿಕೆ" (Forum for Women) ಮತ್ತು "ಲಿಂಗ ನಿರ್ಣಯ ಹಾಗೂ ಆಯ್ಕೆಯ ತಾಂತ್ರಿಕತೆಗಳ ವಿರೋಧೀ 3" (Forum Against Sex Determination & Selection Techniques) ಇವು ಸಂಬಂಧಿಸಿದ ಅಂತರ ರಾಷ್ಟ್ರೀಯ ಜಾಲಗಳೊಂದಿಗೆ ನಿಕಟ ಸಂಪರ್ಕವಿರಿಸಿಕೊಂಡು ಕೆಲಸ ಮಾಡುತ್ತಿವೆ. ಇನ್ನು, ಮಹಿಳೆಯರ ಆರೋಗ್ಯ ವೇದಿಕೆಯವರು (Forum for Women's Health) "ಸಂತಾನ ನಿರೋಧ ವ್ಯಾಕ್ಸಿನ್" ಹಾಗೂ "ನಾರ್‌ಪ್ಲಾಂಟ್; ಕೆಲವು ಅನುಭವಗಳ ಮೇಲಣ ಚಿಂತನೆಗಳು" ಎಂಬ ಪ್ರಕಟಣೆಗಳನ್ನು ಹೊರತಂದಿದ್ದಾರೆ. ಜೊತೆಗೆ ಮಹಾರಾಷ್ಟ್ರ ರಾಜ್ಯದ ಶಿರೂರಿನಲ್ಲಿರುವ ಸರಕಾರೀ ಪ್ರಮಾಣಿತ ಶಾಲೆಯಲ್ಲಿದ್ದ ಬುದ್ಧಿಮಾಂದ್ಯ ಹುಡುಗಿಯರಿಗೂ ಹಾಗೂ ಬುದ್ಧಿಮಾಂದ್ಯ ಸ್ತ್ರೀಯರಿಗೂ ಸಾರಾಸಗಟಾಗಿ ಗರ್ಭಕೋಶವನ್ನು ತೆಗೆದು ಹಾಕಲಾದ ಶಸ್ತ್ರಚಿಕಿತ್ಸೆಯ ಅಧಿಕೃತ ಕ್ರಮದ ಬಗ್ಗೆ ಒಂದು ವರದಿಯನ್ನು ಈ ವೇದಿಕೆ ಪ್ರಕಟಿಸಿದೆ. ಇದರಲ್ಲಿ ಬುದ್ಧಿಮಾಂದ್ಯ ಸ್ತ್ರೀಯರು ಹಾಗೂ ಹುಡುಗಿಯರ ಘನತೆಯನ್ನು (?) ಕಾಪಾಡುವ ನೆವದಲ್ಲಿ ನಡೆಸಲಾದ ಈ ಕ್ರಮವು ಅವರನ್ನು ಲೈಂಗಿಕವಾಗಿ ಶೋಷಿಸಲು ಹೇಗೆ ಸಹಕಾರಿಯಾಗಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಇನ್ನು ಲಿಂಗ ನಿರ್ಣಯ ಮತ್ತು ಆಯ್ಕೆಯ ತಾಂತ್ರಿಕತೆಗಳ ವಿರೋಧಿ ವೇದಿಕೆ ಈ ತಾಂತ್ರಿಕತೆಗಳ ವಿರುದ್ಧ ಸಕ್ರಿಯ ಚಳುವಳಿ ನಡೆಸುವುದರೊಂದಿಗೆ, ಈ ಹೊಸ ತಾಂತ್ರಿಕತೆಗಳ ದುರ್ಬಳಕೆಯ ಬಗ್ಗೆ ೧೯೮೮ರಲ್ಲಿ ಸರ್ವೆ ನಡೆಸಿ ವರದಿಯೊಂದನ್ನು ಪ್ರಕಟಿಸಿದೆ."

ವೈವಿಧ್ಯತೆಗಾಗಿ ವಿವಿಧ ಸ್ತ್ರೀಯರು (Diverse Women for Diversity) ಎಂಬ ವೇದಿಕೆಯ ಅಡಿಯಲ್ಲಿ ವಿಶ್ವದ ಹಲವಾರು ಖಂಡಗಳ ಮಹಿಳೆಯರು ಪ್ರಕೃತಿಯಲ್ಲಿಯೇ ಸಹಜವಾಗಿರುವ ವೈವಿಧ್ಯತೆಗೆ, ತಳಿಶಾಸ್ತ್ರ ತಾಂತ್ರಿಕತೆಗಳನ್ನು ವಾಣಿಜ್ಯಕರಣಗೊಳಿಸುತ್ತಾ ಹೋಗುತ್ತಿರುವ ವ್ಯಾಪಾರೀ ಸಂಸ್ಥೆಗಳಿಂದ ಹೇಗೆ ತೀವ್ರ ಅಪಾಯವುಂಟಾಗಿದೆ ಎಂಬುದರ ಬಗ್ಗೆ ವಿಶ್ವದ ಜನರ ಮತ್ತು ಸರ್ಕಾರಗಳ ಗಮನ ಸೆಳೆಯುತ್ತಿದ್ದಾರೆ. ಈ

ವ್ಯಾಪಾರೀ ಸಂಸ್ಥೆಗಳು ತಮ್ಮ ಲಾಭಕ್ಕೋಸ್ಕರ ಉಗ್ರವಾಗಿ ಪ್ರತಿಪಾದಿಸುತ್ತಿರುವ ಏಕರೂಪ ಸಂಸ್ಕೃತಿಯಿಂದ ಮಾನವನ ಪ್ರಾಕೃತಿಕ ವೈವಿಧ್ಯತೆ ಸಹ ಹೇಗೆ ಅಪಾಯಕ್ಕೊಳಗಾಗಲಿದೆ ಎಂಬುದರ ಬಗ್ಗೆ ಜಾಗೃತಿ ಹರಡುತ್ತಾ ಈ ಬಗೆಯ ರೂಪ ಸಂಸ್ಕೃತಿಯ ವಿರುದ್ಧ ಈ ವೇದಿಕೆ ಹೋರಾಟ ಆರಂಭಿಸಿದೆ."

ಇಂದು ಮಹಿಳೆಯರ ಪ್ರಜನನ ಸ್ವಾತಂತ್ರ್ಯವನ್ನು ಹೆಚ್ಚಿಸುವ ದಿಸೆಯಲ್ಲಿ ಯಾವ್ಯಾವ ಪ್ರಯತ್ನಗಳು ಎಲ್ಲೆಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿವೆ ಎಂಬುದರ ಬಗ್ಗೆ ಅನುಭವಗಳ ಮತ್ತು ಹೊಸ ಚಿಂತನೆಗಳ ಪರಸ್ಪರ ವಿನಿಮಯ ನಡೆಯಬೇಕಾಗಿದೆ. ಪಾಶ್ಚಿಮಾತ್ಯ ವೈದ್ಯಕೀಯ ಪದ್ಧತಿಗಳು ಹಾಗೂ ಔಷಧಿಗಳಿಗೆ ಪ್ರತಿಯಾಗಿ ವಿಶ್ವದ ಬಹುಸಂಖ್ಯಾತ ಮಹಿಳೆಯರಿಗೆ ಸುಲಭವಾಗಿ ದೊರಕಬಹುದಾದ ದೇಶಿಯ ವೈದ್ಯಕೀಯ ಪದ್ಧತಿಗಳನ್ನು



ಹಾಗೂ ಆಯಾ ಸ್ಥಳದಲ್ಲಿಯೇ ದೊರಕುವ ವನೌಷಧಿಗಳನ್ನು ಉಪಯೋಗಿಸ ಬೇಕೆಂಬ ಅಭಿಪ್ರಾಯವನ್ನು ಮಹಿಳಾ ಆರೋಗ್ಯ ಚಳುವಳಿಯಲ್ಲಿ ಇತ್ತೀಚೆಗೆ ಬಲವಾಗಿ ಪ್ರತಿಪಾದಿಸಲಾಗುತ್ತಿದೆ. ದೆಹಲಿಯ 'ಜಾಗೋರಿ' ಸ್ತ್ರೀ ಸಂಘಟನೆಯು 'ಶೋಧಿನಿ' ಎಂಬ ಸಂಶೋಧನಾ ಸಂಸ್ಥೆಯೊಂದಿಗೆ ಸೇರಿಕೊಂಡು ಮಹಿಳೆಯರ ಖಾಯಿಲೆಗಳಿಗೆ ಉಪಯುಕ್ತವಾಗಬಲ್ಲ ಔಷಧೀಯ ಸಸ್ಯಗಳನ್ನು ದಾಖಲಾತಿ ಮಾಡುತ್ತಿದೆ. ಇದೇ ಲೇಖಕಿಯ ಮಾರ್ಗದರ್ಶನದಲ್ಲಿ ಪಿಹೆಚ್.ಡಿ. ಪದವಿಗಾಗಿ ನಡೆಸಲಾದ ಸಂಶೋಧನೆಯಲ್ಲಿ ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಪ್ರಚಲಿತವಾಗಿರುವ ಸ್ಥಳೀಯ ಆರೋಗ್ಯ ಪದ್ಧತಿಗಳನ್ನು ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳಿಗೆ ಅನ್ವಯಿಸುವಂತೆ ಅಧ್ಯಯನ ಮಾಡಿ ನೂರೈವತ್ತು ಸ್ಥಳೀಯ ವನೌಷಧಿಗಳನ್ನು ದಾಖಲು ಮಾಡಲಾಗಿದೆ. ನಮ್ಮ ದೇಶದ ವಿವಿಧ ಭಾಗಗಳಲ್ಲಿ ಆಯಾ ಭಾಗಗಳ ಸ್ಥಳೀಯರು ತಲೆತಲಾಂತರಗಳಿಂದ ಉಪಯೋಗಿಸಿ ಉಪಯುಕ್ತವೆಂಬುದಾಗಿ ಸಿದ್ಧವಾಗಿರುವ ವನೌಷಧಿಗಳನ್ನು, ಔಷಧೀಯ ಸಸ್ಯಗಳನ್ನು ಪರದೇಶಗಳ ಕಂಪನಿಗಳು ಪೇಟೆಂಟ್ ಮಾಡಿಕೊಳ್ಳದಂತೆ ತಡೆಯೊಡ್ಡಲು ಈ ಬಗೆಯ ದಾಖಲಾತಿಗಳು ಅತ್ಯಂತ ತುರ್ತಾಗಿ ಬೇಕಾಗಿವೆ ಎಂಬುದು ಇಲ್ಲಿ ಗಮನಾರ್ಹ.

ಇನ್ನು, ಮಹಿಳೆಯರ ಆರೋಗ್ಯ ಸಬಲೀಕರಣಕ್ಕಾಗಿ ನವದೆಹಲಿಯ 'ಸಹೇಲಿ' ಸಂಘಟನೆಯು ೧೯೯೪ರಲ್ಲಿ "Women's talk; Contraceptive Safety and Our Health" ಎಂಬ ಪುಸ್ತಕವೊಂದನ್ನು ಪ್ರಕಟಿಸಿದೆ. ಇದನ್ನು ಭಾರತೀಯ ಭಾಷೆಗಳಿಗೆ ತರ್ಜುಮೆ ಮಾಡುವ ಯೋಜನೆಯೂ ಇದೆ. ಇದರಲ್ಲಿ ದೇಹದಲ್ಲಿ ಗರ್ಭನಿರೋಧಕಗಳು ಕೆಲಸ ಮಾಡುವ ರೀತಿ, ಅವುಗಳನ್ನು ಸರಿಯಾಗಿ ಬಳಸುವ ವಿಧಾನ, ಅವುಗಳ ಕಾರ್ಯಕ್ಷಮತೆ, ಅವುಗಳ

ಬಳಕೆಯಿಂದ ಶಾರೀರಿಕ ಪ್ರಕ್ರಿಯೆಗಳಲ್ಲಿ ಉಂಟಾಗಬಹುದಾದ ಬದಲಾವಣೆಗಳು ಹಾಗೂ ಆರೋಗ್ಯಕ್ಕೆ ಉಂಟಾಗಬಹುದಾದ ಅಪಾಯಗಳು ಇತ್ಯಾದಿಗಳನ್ನು ಈ ಸಣ್ಣ ಪುಸ್ತಕದಲ್ಲಿ ಸರಳವಾಗಿ ವಿವರಿಸಲಾಗಿದೆ.

ಸ್ತ್ರೀ ಆರೋಗ್ಯ ಹಾಗೂ ಪ್ರಜನನ ಹಕ್ಕುಗಳ ಬಗ್ಗೆ ಕಾಳಜಿಯಿರುವ ಭಾರತೀಯ ಸ್ತ್ರೀವಾದಿಗಳು ಇತ್ತೀಚೆಗೆ ನವದೆಹಲಿಯಲ್ಲಿ "ಪರಿಧಿ" ಎಂಬ ಸಂಘಟನೆಯನ್ನು ಆರಂಭಿಸಿದ್ದಾರೆ. ಚೋದನಿಯುಕ್ತ ಗರ್ಭನಿರೋಧಕಗಳು ಹಾಗೂ ಇನ್ನಿತರ ಗರ್ಭನಿರೋಧಕಗಳಿಂದ ಉಂಟಾಗಬಹುದಾದ ದುಷ್ಪರಿಣಾಮಗಳಿಗೆ ತಮ್ಮನ್ನು ಒಡ್ಡಿಕೊಳ್ಳಲು ಒಪ್ಪದ, ಆದರೆ ಗರ್ಭ ನಿರೋಧಕಗಳ ಅಗತ್ಯವಿರುವ ಸ್ತ್ರೀಯರಿಗೆ ಈ ಸಂಸ್ಥೆ ಡಯಾಫ್ರಮ್‌ಗಳನ್ನು ಹಂಚಲು ಆಲೋಚಿಸುತ್ತಿದೆ. ಇಂತಹ ಮಹಿಳೆಯರಿಗೆ ಡಯಾಫ್ರಮ್‌ಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲೂ ನಿರ್ಧರಿಸಿದೆ. ಡಯಾಫ್ರಮ್‌ಗಳ ಸರಿಯಾದ ಬಳಕೆ, ಅದರ ಕಾರ್ಯಕ್ಷಮತೆ ಹಾಗೂ ಅದು ಎಷ್ಟರಮಟ್ಟಿಗೆ ಮಹಿಳೆಯರಿಗೆ ಒಗ್ಗುತ್ತದೆ ಹೊಂದುತ್ತದೆ ಎಂಬುದನ್ನೆಲ್ಲಾ ಅಧ್ಯಯನ ಮಾಡಲು 'ಪರಿಧಿ' ತೀರ್ಮಾನಿಸಿದೆ. ಈ ಯೋಜನೆಯಡಿಯಲ್ಲಿ ತಮ್ಮ ನಿಯಂತ್ರಣದಲ್ಲಿಯೇ ಇರುವಂತಹ



ಗರ್ಭನಿರೋಧಕಗಳನ್ನು ಸ್ತ್ರೀಪರವಾದ ಸ್ನೇಹಶೀಲ ಪರಿಸರದಲ್ಲಿ ಮಹಿಳೆಯರಿಗೆ ನೀಡಲು ಪ್ರಾಮುಖ್ಯತೆ ಕೊಡಲಾಗಿದೆ. ಲಿಂಗ ತಾರತಮ್ಯವು ಹಾಸುಹೊಕ್ಕಾಗಿರುವ ನಮ್ಮ ಸಮಾಜದಲ್ಲಿ ಮಹಿಳೆಯರ ಮುಖ್ಯ ಆರೋಗ್ಯ ಅಗತ್ಯಗಳನ್ನು ಪೂರೈಸಲು ಈಗಿರುವ ವೈದ್ಯಕೀಯ ಸೇವಾ ಸೌಲಭ್ಯಗಳ ವ್ಯವಸ್ಥೆಗೆ ಪ್ರತಿ ವ್ಯವಸ್ಥೆ ತರುವ ಪ್ರಯೋಗಾತ್ಮಕ ಪ್ರಯತ್ನಗಳಿಗೆ ಪರಿಧಿಯ ಈ ಯೋಜನೆ ಒಂದು ಉದಾಹರಣೆ. ಸ್ತ್ರೀಯರಿಗೆ ತಮ್ಮ ದೇಹದ ಮೇಲೆ ಸ್ವಯಂ ನಿರ್ಧಾರದ ಹಕ್ಕು ಹಾಗೂ ಸ್ವಾತಂತ್ರ್ಯವಿರಬೇಕೆಂಬ ಸ್ತ್ರೀವಾದಿ ತಾತ್ವಿಕ ನೆಲೆಗಟ್ಟಿನ ಮೇಲೆ ಈ ಬಗೆಯ ಪ್ರಯತ್ನಗಳು ನಡೆದಿವೆ.

ಈ ದಿಸೆಯಲ್ಲಿ ಮಹಿಳಾ ಅಧ್ಯಯನಗಳ ವಿದ್ವಾಂಸರು ಹಾಗೂ ಮಹಿಳಾ ಆರೋಗ್ಯ ಚಳುವಳಯು ಕಾರ್ಯಶೀಲ ಕಾರ್ಯಕರ್ತರು ಒಟ್ಟಿಗೇ ಕೆಲಸ ಮಾಡಬೇಕಾಗಿದೆ. ಮಹಿಳಾ ಅಧ್ಯಯನಗಳ ತಜ್ಞರು ಸ್ತ್ರೀಯರ ದೇಹಕ್ಕೆ ಹಾಗೂ ಪ್ರಜನನ ಆರೋಗ್ಯಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕ ವಿಧಾನಗಳ ಮತ್ತು ತಾಂತ್ರಿಕತೆಗಳ ಅಧಿಕಾರದ ಪಾರಮ್ಯವನ್ನು ಪ್ರಶ್ನಿಸುತ್ತಾ ಹೋಗುತ್ತಿದ್ದಂತೆ, ಸ್ತ್ರೀ ಆರೋಗ್ಯ ಚಳುವಳಿಕಾರರು 'ಫಲವತ್ತತೆಯ ಬಗ್ಗೆ ತಿಳಿದುಕೊಳ್ಳಿ', 'ನಿಮ್ಮ ದೇಹದ ಬಗ್ಗೆ ಅರಿಯಿರಿ, 'ಗರ್ಭನಿರೋಧಕಗಳ ಸಂಪೂರ್ಣ ಜ್ಞಾನ ನಿಮಗಿರಲಿ' ಎಂದು ಈ ವಿಷಯಗಳ ಬಗ್ಗೆ ಸಾಮಾನ್ಯ ಸ್ತ್ರೀಯರಲ್ಲಿ ಜಾಗೃತಿ ಮೂಡಿಸುತ್ತಾ ಇದ್ದಾರೆ. ಈ ಚಳುವಳಿಯಲ್ಲಿರುವ ಸ್ತ್ರೀ

ಸಂಘಟನೆಗಳು ಮಹಿಳೆಯರ ಆರೋಗ್ಯಕ್ಕೆ, ಅವರ ಆರೋಗ್ಯದ ಹಕ್ಕುಗಳಿಗೆ ಧಕ್ಕೆ ತರುವ ಹಲವಾರು ವಿಷಯಗಳ ವಿರುದ್ಧವಾಗಿ ನ್ಯಾಯಾಲಯದ ಕಟ್ಟೆ ಹತ್ತುತ್ತಿದ್ದಾರೆ.

ಹೀಗೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಮಹಿಳಾ ಆರೋಗ್ಯ ಚಳುವಳಿಯು ಪ್ರಾಮುಖ್ಯತೆ ಬಲಿಯುತ್ತಾ ಹೋಗುತ್ತಿದೆ. ಹೊಸ ಹೊಸ ಪ್ರಜನನ ತಾಂತ್ರಿಕತೆಗಳು ಹೆಚ್ಚುತ್ತಾ ಹೋಗುತ್ತಿರುವುದರಿಂದ, ಈ ಚಳುವಳಿಯ ಪಾತ್ರವೂ ವಿಸ್ತಾರಗೊಳ್ಳುತ್ತಾ ತೀವ್ರಗತಿಯಲ್ಲಿ ನಡೆಯಬೇಕಾಗಿದ್ದು ಅದರ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ನಮ್ಮ ದೇಶದ ಸುಮಾರು ಎಲ್ಲಾ ಸ್ತ್ರೀ ಸಂಘಟನೆಗಳು ಮಹಿಳೆಯರ ಪ್ರಜನನ ಆರೋಗ್ಯ ಮತ್ತು ಸಬಲೀಕರಣಗಳ ಬಗ್ಗೆ ಹಾಗೂ ಕೌಟುಂಬಿಕ ಹಿಂಸೆಯ ವಿರುದ್ಧ ಹೋರಾಟದಲ್ಲಿ ಆಸಕ್ತಿ ತೋರುತ್ತಿರುವುದು ನಮ್ಮಲ್ಲೂ ಮಹಿಳಾ ಆರೋಗ್ಯ ಚಳುವಳಿಯು ಬೆಳೆಯುತ್ತಿರುವುದಕ್ಕೆ ಸಾಕ್ಷಿ.

ಇನ್ನೂ ಒಂದು ವಿಶೇಷವೆಂದರೆ, ಇತ್ತೀಚೆಗೆ ಮಹಿಳಾ ಆರೋಗ್ಯ ಪ್ರತಿಪಾದಕರು ಹಾಗೂ ಮಾನವ ಹಕ್ಕುಗಳಿಗಾಗಿ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿರುವ ಸಂಸ್ಥೆಗಳೇ ಅಲ್ಲದೆ ವೈದ್ಯ ವಿಜ್ಞಾನಿಗಳೂ ಸಹ, ಪ್ರಸ್ತುತ ಅಭಿವೃದ್ಧಿ ಪಡಿಸುತ್ತಿರುವ ಪ್ರಜನನ ಆರೋಗ್ಯದ ತಾಂತ್ರಿಕತೆಗಳು ಸ್ತ್ರೀ ಹಾಗೂ ಪುರುಷರ ಅಗತ್ಯಗಳನ್ನು ಸರಿಯಾಗಿ ಪೂರೈಸಲು ಸಾಧ್ಯವೋ ಇಲ್ಲವೋ ಮತ್ತು ಯಾವ ಸಂದರ್ಭಗಳಲ್ಲಿ ಈ ತಾಂತ್ರಿಕ ಸಾಧನಗಳ (ಹೊಸ ಗರ್ಭ ನಿರೋಧಕಗಳ), ದೊಡ್ಡ ಪ್ರಮಾಣದ ಹಂಚಿಕೆ ಹಾಗೂ



ಸರಿಯಾದ ಉಪಯೋಗ ಸಾಧ್ಯವಾಗುತ್ತದೆ ಎಂಬುದನ್ನು ತಿಳಿದುಕೊಳ್ಳಲು ಕಾಳಜಿಪೂರ್ವಕ ಆಸಕ್ತಿ ತೋರಿಸುತ್ತಿದ್ದಾರೆ. ಅಲ್ಲದೆ ಇವೆಲ್ಲವನ್ನೂ ತಿಳಿದುಕೊಳ್ಳಲು ಸಮಾಜ ವಿಜ್ಞಾನಗಳಲ್ಲಿ ಈ ಬಗ್ಗೆ ಸಂಶೋಧನೆ ಅದರಲ್ಲಿಯೂ ವಿಶೇಷವಾಗಿ ಸಕ್ರಿಯ ಸಂಶೋಧನೆಗಳು ಅಗತ್ಯವೆಂಬುದನ್ನು ಗುರ್ತಿಸಿದ್ದಾರೆ. ಜೊತೆಗೆ ಸ್ತ್ರೀ ಪುರುಷರ ಲೈಂಗಿಕತೆ ಮತ್ತು ಸ್ತ್ರೀ ಪುರುಷರ ನಡುವೆ ಇರುವ ಶ್ರೇಣೀಕೃತ ಅಧಿಕಾರದ ಬಾಂಧವ್ಯಗಳು- ಹೇಗೆ ಇಡೀ ಜನಸಮುದಾಯದ ಪ್ರಜನನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿವೆ. ಎಂಬುದರ ಬಗ್ಗೆ ಗಂಭೀರ ಚಿಂತನೆ ನಡೆದಿದೆ. ಈ ವಿಷಯಗಳ ಬಗ್ಗೆ ನಡೆಯಬೇಕಾದ ಸಂಶೋಧನೆಗಳು, ಮರು ವಿಮರ್ಶೆ ಹಾಗೂ ಮರು ಚಿಂತನೆಗಳು ಎಷ್ಟು ಮಹತ್ವ ಪೂರ್ಣವಾದದ್ದು ಎಂಬ ಅರಿವು ಮೂಡಿರುವುದು ಹಾಗೂ ಈ ದಿಸೆಯಲ್ಲಿ ಚಿಂತನೆ ನಡೆದಿರುವುದು ಸ್ತ್ರೀ ಆರೋಗ್ಯ ಚಳುವಳಿಯ ಒಂದು ಸೀಮಿತ ಯಶಸ್ಸಿನ ಪ್ರತಿಫಲವೆನ್ನಬಹುದು.

ಗ್ರಂಥಋಣ:


೧. GERMAIN AND A. FAUNDES, (1994), "Women's priorities in reproductive research" in J. Khanna, P.F.A., Vanlook and P.D. Griffin (Eds.), Challenges in Reproductive Health Research. Binnial Report 1992-93, Geneva W.H.O, pp. 58-65.

೨. GOPALAN SARALA AND SHIVA MIRA (Eds), (2000), National Profile on Women, Health and Development New Delhi., Voluntary Health Association of India & World Health Organisation p. 92.

೩. ZANEVELO, L.J.D. (1994). "Vaginal Contraception since 1984; Chemical Agents and Barrier devices". In Vanlook, P.FA. and Pereg-Palatio (Eds). Contraceptive research and development 1984-94, the road from Mexico city to Cairo and Beyond., New Delhi Oxford University Press.

೪. M.F. FATHALLA (1994). "Launching a second contraceptive Technology revolution" In J.Khanna, P.F.A. Vanlook and P.D. Griffin (Eds.) Challenges in Reproductive Health Researchi, Binnial Report 1992-93 Geneva W.H.O. pp. 75-82.

೫. GUPTA AGNIHOTRI JYOTSNA (2000). New Reproductive Technologies, Women's Health and Autonomy. New Delhi., Sage Publications, pp. 621 to 622.





೬. CHENNESH ANUPAMA (2001). Indigenous knowledge systems used for health of people in Shikaripur Taluk, Shimoga District with special reference to women and children. Unpublished Doctoral thesis submitted to the University of Agricultural Sciences, Dharwad for the award of Ph.D. in Human Development.

೭. SAHELI (1991). Women talk: Contraception, Safety and our health. New Delhi, Saheli Collective.

# ಮಹಿಳೆ ಮತ್ತು ನ್ಯಾಯಾಲಯ

-ಸಾರಾ ಅಬೂಬಕರ್

ಮಹಿಳೆಯರಿಗೆ ನ್ಯಾಯವೊದಗಿಸಬೇಕಾಗಿ ಬಂದಾಗ ಪುರುಷರು ಕೆಲವೊಮ್ಮೆ ಎಷ್ಟೊಂದು ಪಕ್ಷಪಾತಿಗಳಾಗಿ ವರ್ತಿಸುತ್ತಾರೆ ಎಂಬುದಕ್ಕೆ ಒಂದು ಉದಾಹರಣೆ ನೀಡುತ್ತೇನೆ.

ಇಡೀ ದೇಶದಲ್ಲಿ ಧರ್ಮಕ್ಕನುಸಾರವಾಗಿ ವ್ಯಕ್ತಿ ನಿಯಮಯವಂತೆ ಕೇರಳದ ಕ್ರಿಶ್ಚಿಯನ್ನರಿಗೆ ತಮ್ಮದೇ ಆದ ವ್ಯಕ್ತಿ ನಿಯಮವಿದೆ. ತಿರುವಾಂಕೂರು ಕ್ರಿಶ್ಚಿಯನ್ ಉತ್ತರಾಧಿಕಾರ ನಿಯಮದ ಪ್ರಕಾರ ತಂದೆತಾಯಿಗಳ ಆಸ್ತಿಯಲ್ಲಿ ಮಗಳಿಗೆ ಮನೆಯ ನಾಲ್ಕನೇ ಒಂದು ಭಾಗ ಅಥವಾ ೫,೦೦೦ ರೂಪಾಯಿ ಯಾವುದು ಕಮ್ಮಿಯೋ ಅದು ಮಾತ್ರ ದೊರೆಯುತ್ತದೆ.

ಕೇರಳದ ಮುವಾಟ್ಟು ಪುಷ ಎಂಬಲ್ಲಿ ಮರಿಯಕುಟ್ಟಿ ಥಾಮಸ್ ಎಂಬ ೬೮ ವರ್ಷದ ವೃದ್ಧೆಯೊಬ್ಬರಿದ್ದಾರೆ. ಈಕೆಯ ತಂದೆಯ ಮರಣಾನಂತರ ಈಕೆ ತನ್ನ ತಾಯಿ ಮತ್ತು ಇತರ ಸೋದರ ಸೋದರಿಯರೊಡನೆ ಅವಿಭಕ್ತ ಕುಟುಂಬದಲ್ಲಿ ವಾಸಿಸುತ್ತಿದ್ದರು. ಪ್ರಾಥಮಿಕ ಶಾಲಾ ಅಧ್ಯಾಪಕಿಯಾಗಿ ಅವಿವಾಹಿತೆಯಾಗಿದ್ದ ಈಕೆ ತನ್ನ ಸಂಬಳವನ್ನು ಇತರರಿಗಾಗಿ ಖರ್ಚು ಮಾಡಲು ಹಿಂಜರಿಯಲಿಲ್ಲ. ಕುಟುಂಬದ ಆಸ್ತಿಯ ಉತ್ಪನ್ನವು ಇದ್ದುದರಿಂದ ಸುಖವಾಗಿಯೇ ಇದ್ದರು. ಈಕೆಗಾಗಲಿ ಇವರ ತಾಯಿಗಾಗಲಿ ಈ ಉತ್ತರಾಧಿಕಾರ ನಿಯಮದ ಕುರಿತು ಯಾವುದೇ ತಿಳುವಳಿಕೆಯಂಬುದು ಇರಲಿಲ್ಲ ಮರಣಾನಂತರವೂ ಈಕೆ ಅದೇ ಕುಟುಂಬದಲ್ಲಿ ವಾಸಿಸುತ್ತಿದ್ದರು.

ನಾಲ್ಕು ವರ್ಷಗಳ ಹಿಂದೆಯಷ್ಟೇ ಈಕೆಗೆ ತನ್ನ ಸ್ಥಾನದ ಅರಿವಾದುದು, ಮುದುಕಿ ಯಾಗುತ್ತಿದ್ದ ಈಕೆ ತನ್ನ ಸಹೋದರರು ಮತ್ತು ಅವರ ಪತ್ನಿಯರಿಗೆ ಹೊರೆಯಾಗ ತೊಡಗಿದ್ದರು. ಆಸ್ತಿಯಲ್ಲಿ ತನ್ನ ಪಾಲು ಕೇವಲ ೫,೦೦೦ ರೂಪಾಯಿಗಳೆಂದು ಆಕೆಗೆ ಮನದಟ್ಟಾಗತೊಡಗಿತು. ಆಕೆಯ ಸಹೋದರರು, ಮನೆ ಬಿಟ್ಟು ಹೋಗಬೇಕೆಂದು ಆಕೆಯನ್ನು ಒತ್ತಾಯಿಸತೊಡಗಿದ್ದರು.

ಮನೆ ಬಿಟ್ಟು ಹೋಗುವುದಲ್ಲದೆ ಆಕೆಗೆ ಬೇರೆ ದಾರಿ ಇರಲಿಲ್ಲ, ಬ್ಯಾಂಕಿನಿಂದ ಸಾಲ ಪಡೆದುದರೊಡನೆ ಸ್ವಂತ ಉಳಿತಾಯವನ್ನೂ ಸೇರಿಸಿ ಚೂರು ಜಾಗ ಕೊಂಡು ಮನೆ ಕಟ್ಟಿ ಒಂದು ದನ, ಒಂದು ಆಡು ಮತ್ತು ಕೆಲವು ಕೋಳಿಗಳನ್ನು ಕೊಂಡುಕೊಂಡು ತನ್ನ ೬೫ನೇ ವರ್ಷ ಪ್ರಾಯದಲ್ಲಿ ಹೊಸ ಬದುಕನ್ನಾರಂಭಿಸಿದರು.

ಹೊಸ ಬದುಕಿನಲ್ಲಿನ ದೈಹಿಕ ಶ್ರಮಕ್ಕಿಂತಲೂ ಮಾನಸಿಕ ನೋವು ಆಕೆಯನ್ನು ಹಣ್ಣು ಮಾಡತೊಡಗಿತು. ಇಷ್ಟು ವರ್ಷಗಳವರೆಗೂ ಮನೆಯವರಿಗೆಲ್ಲ ಹಿರಿಯಳಾಗಿ ಗೌರವಿಸಲ್ಪಡುತ್ತಿದ್ದಾಕೆಗೆ, ತನ್ನದೆಲ್ಲವನ್ನೂ ಈ ಕುಟುಂಬಕ್ಕಾಗಿ ಅರ್ಪಿಸಿದಾಕೆಗೆ ನಷ್ಟವಾದ ಈ ಕೃತಘ್ನತೆಯನ್ನು ಸುಲಭವಾಗಿ ಅರಗಿಸಿಕೊಳ್ಳಲಾಗಲಿಲ್ಲ, ಆಕೆಯ ಮನದಾಳದಲ್ಲಿ ಹೊಸ ಯೋಜನೆಯೊಂದು ರೂಪುಗೊಳ್ಳತೊಡಗಿತ್ತು. ಇತರ ಸೀರಿಯನ್ ಕ್ರಿಶ್ಚಿಯನ್ ಮಹಿಳೆಯರಾದರೂ ಈ ನಿಯಮದಿಂದ ಮುಕ್ತರಾಗಬೇಕು, ಈ ತಿರುವಾಂಕೂರು ಉತ್ತರಾಧಿಕಾರ ನಿಯಮವನ್ನು ಬದಲಾಯಿಸಲೇಬೇಕು ಎಂದು ಚಿಂತಿಸತೊಡಗಿದಳು.

ಅಂತಹ ಒಂದು ದಿನವೂ ಆಕೆಯ ಪಾಲಿಗೆ ಬಂದೇ ಬಂತು. ತಿರುವಾಂಕೂರು ಕ್ರಿಶ್ಚಿಯನ್, ಉತ್ತರಾಧಿಕಾರ ನಿಯಮವೆಂಬುದು ಸಮಾನತೆಯ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆಯೆಂದು ಇನ್ನೋರ್ವ ಕ್ರಿಶ್ಚಿಯನ್ ಮಹಿಳೆ ಮೇರಿ ರೋಯಿ ಎಂಬಾಕೆ ಶ್ರೇಷ್ಠ ನ್ಯಾಯಾಲಯದಲ್ಲಿ ದೂರು ಸಲ್ಲಿಸಿದ್ದಳು. ಈಕೆ ಇತ್ತೀಚೆಗೆ ಬೂಕರ್ ಪ್ರಶಸ್ತಿ ಪಡೆದ ಅರುಂಧತಿ ರೋಯಿಯ ತಾಯಿ. ಇದನ್ನು ಪತ್ರಿಕೆಯಲ್ಲಿ ಓದಿದ ಮರಿಯಕುಟ್ಟಿ, ಕೋಟ್ಟಯಂಗೆ ಧಾವಿಸಿ ಮೇರಿ ರೋಯನ್ನು ಭೇಟಿಯಾದಳು. ಆಗ ಅಲ್ಲಿಗೆ ಬಂದಿದ್ದ ಇಂದಿರಾ ಜೈಸಿಂಗ್ ಎಂಬ ಮುಂಬಯಿಯ ನ್ಯಾಯವಾದಿಗಳು ಮರಿಯಕುಟ್ಟಿಯ ಅಹವಾಲನ್ನು ಕೇಳಿ ಆಕೆಗಾಗಿ ಉಚಿತವಾಗಿ ಸೇವೆ ಮಾಡುವ ಆಶ್ವಾಸನೆ ನೀಡಿದರು. ಶ್ರೇಷ್ಠ ನ್ಯಾಯಾಲಯದಲ್ಲಿ ಈ ಮಹಿಳೆಯರಿಗೆ ನ್ಯಾಯ ದೊರೆಯಿತು. ಭಾರತೀಯ ಉತ್ತರಾಧಿಕಾರ ನಿಯಮದ ಪ್ರಕಾರ ಈ ಮಹಿಳೆಯರಿಗೆ ಪಾರಂಪರವಾದ ಆಸ್ತಿಯಲ್ಲಿ ಸಮಪಾಲು ನೀಡಬೇಕೆಂದು ಶ್ರೇಷ್ಠ ನ್ಯಾಯಾಲಯ ವಿಧಿಸಿತು.

ನ್ಯಾಯಾಲಯವೇನೋ ನ್ಯಾಯ ನೀಡಿತು. ಆದರೆ ಸಮಾಜ ಇವನ್ನೆಲ್ಲ ಸುಲಭದಲ್ಲಿ ಒಪ್ಪಿಕೊಳ್ಳುತ್ತದೆಯೇ? ತಮ್ಮ ವ್ಯಕ್ತಿ ನಿಯಮದಲ್ಲಿ ಹಸ್ತಕ್ಷೇಪವೆಂಬ ವಿರೋಧ ಅಲ್ಲಲ್ಲಿ ಕೇಳಿ ಬಂದಿತು. ಆದರೆ ಮುಸ್ಲಿಮರಂತೆ ಭಾರತೀಯ ನಾಗರಿಕ ಸಂಹಿತೆ ಅಥವಾ ದಂಡಸಂಹಿತೆಯಿಂದ ತಮ್ಮನ್ನು ಹೊರಗಿಡಬೇಕೆಂಬ ಕೂಗನ್ನೇನೂ ಈ ಜನರು ಎಬ್ಬಿಸಲಿಲ್ಲ. ಅಲ್ಪ ಸ್ವಲ್ಪ ವಿರೋಧ ವ್ಯಕ್ತವಾಗಿ ಅಲ್ಲಿಗೆ ತಣ್ಣಗಾಯಿತು.

ಸುಪ್ರೀಂಕೋರ್ಟು ವಿಧಿಸಿದಂತೆ ತನಗೆ ಪಾಲು ಬರಬೇಕು ತಾನೇ ಈಗ ಮರಿಯಕುಟ್ಟಿ ಅದಕ್ಕಾಗಿ ಹೋರಾಡತೊಡಗಿದಳು. ಉಚಿತ ಕಾನೂನು ನೆರವಿನ ಸಹಕಾರ ಕೋರಿದಳು. ಇಂತಹ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಥಮಿಕ ಹಂತದಲ್ಲಿ ಮಧ್ಯವರ್ತಿಗಳ ಮೂಲಕ ಪ್ರಯತ್ನಿಸಬೇಕೆಂಬ ಸಲಹೆಯಂತೆ ನಿವೃತ್ತ ನ್ಯಾಯಮೂರ್ತಿಗಳೊಬ್ಬರ ಮುಂದೆ ರಾಜಿ ಪಂಚಾಯ್ತಿ ಪ್ರಾರಂಭವಾಯಿತು. ಈ ಪ್ರಶೋತ್ತರಗಳನ್ನು ಕೆಳಗೆ ಕೊಟ್ಟಿದ್ದೇನೆ.

“ಪ್ರಶ್ನೆ : ನಿಮಗೆಷ್ಟು ಪ್ರಾಯವಾಗಿದೆ?”

“ಉತ್ತರ : ೭೦ ವರ್ಷ”

“ನೀವೆಷ್ಟು ವರ್ಷ ಬದುಕುತ್ತೀರಿ ಎಂಬುದನ್ನು ಹೇಳಲು ನಿಮ್ಮಿಂದ ಸಾಧ್ಯವೇ?”

“ದೈವೇಚ್ಛೆ ಇದ್ದರೆ ನನಗಿಂತ ಮೊದಲು ನೀವೇ ಹೋಗಬಹುದು!”



“ನೀವು ಉಚಿತ ಕಾನೂನು ನೆರವಿಗೆಂದು ಇಲ್ಲಿಗೆ ಬಂದಿದ್ದೀರಿ. ನಿಮಗೊಂದು ಮನೆಯಿದೆ. ನಿವೃತ್ತಿ ವೇತನವಿದೆ. ನೀವು ಶುಚಿಯಾದ ಬಟ್ಟೆ ತೊಟ್ಟಿದ್ದೀರಿ. ನಾವು ಬಡವರಲ್ಲಿ ಬಡವರ ಸೇವೆ ಮಾಡಲು ಇಲ್ಲಿದ್ದೇವೆ.”

“ತಮ್ಮಿಂದ ಉಚಿತ ಕಾನೂನು ನೆರವು ಪಡೆಯಲು ನಾನು ತಮ್ಮ ಮುಂದೆ ಚಿಂದಿ ಬಟ್ಟೆಯುಟ್ಟು ಬರಬೇಕೇ? ನಾನು ಭಿಕ್ಷುಕಳಲ್ಲ. ಹೀಗಂದಿದ್ದಕ್ಕೆ ಕ್ಷಮಿಸಿ ಇಂತಹ ದಾವೆಯನ್ನೆತ್ತಿಕೊಂಡು ನ್ಯಾಯಾಲಯಕ್ಕೆ ಬರುವ ಭಿಕ್ಷುಕಿಯೋರ್ವಳನ್ನು ಕಂಡುಹಿಡಿಯಲು ನಿಮಗೆ ಕಷ್ಟವಾಗುತ್ತದೆ.”

“ನೀವು ತರಬೇತಿ ಪಡೆದ ಓರ್ವ ಪ್ರಾಥಮಿಕ ಉಪಾಧ್ಯಾಯಿನಿಯಾಗಿದ್ದೀರಿ. ನೀವು ಕೋರ್ಟಿಗೆ ಹೋಗುವ ಬದಲು ಮಕ್ಕಳಿಗೆ ಟ್ಯೂಷನ್ ಕೊಡುವ ಕೆಲಸ ಮಾಡಬಹುದಲ್ಲ?”

“ನನ್ನ ವೃತ್ತಿಯಲ್ಲಿ ನನ್ನಿಂದ ಸಾಧ್ಯವಿದ್ದಷ್ಟು ಸೇವೆ ಸಲ್ಲಿಸಿದ್ದೇನೆ. ಈಗ ನನ್ನ ಕೈ ಕಾಲುಗಳಲ್ಲಿ ನೀರು ತುಂಬಿಕೊಂಡಿದ್ದನ್ನು ನೀವೇ ನೋಡುತ್ತಿದ್ದೀರಿ. ನಾನು ಇನ್ನೆಷ್ಟು ಕಾಲ ಕೆಲಸಮಾಡಬೇಕೆಂದು ನೀವು ಅಪೇಕ್ಷಿಸುತ್ತೀರಿ.?”

“ಇಂತಹ ರಾಜಿ ಪಂಚಾಯ್ತಿಯಲ್ಲಿ ಎರಡೂ ಪಕ್ಷಗಳೂ ಕೊಡು, ಕೊಳ್ಳುವಿಕೆಗೆ ಸಿದ್ಧರಾಗಿರಬೇಕು. ಇದಕ್ಕೆ ನಿಮ್ಮ ಒಪ್ಪಿಗೆಯಿದೆಯೇ?”

“ಖಂಡಿತ. ನನ್ನ ಸಹೋದರರು ನನ್ನ ಸ್ವಂತ ರಕ್ತ ಬಾಂಧವ್ಯ ಹೊಂದಿದವರು ನನ್ನ ಶತ್ರುಗಳಲ್ಲ.”

“ನೀವು ಬಹಳ ದೊಡ್ಡ ತ್ಯಾಗಕ್ಕೆ ಸಿದ್ಧರಾಗಬೇಕು. ಅವುಗಳಲ್ಲಿ ೧. ಕುಟುಂಬದ ಆಸ್ತಿಯಿಂದ ಈಗಾಗಲೇ ಸುಮಾರು ೬ ಲಕ್ಷ ರೂಪಾಯಿ ಬೆಲೆಯ ಮರಗಳನ್ನು ಕಡಿದು ಮಾರಾಟ ಮಾಡಲಾಗಿದೆ. ಅದರಲ್ಲಿ ನೀವು ಪಾಲು ಕೇಳಬಾರದು. ೨. ಕುಟುಂಬ ಪಾರಂಪರದ ಮನೆಯನ್ನು ಕೆಡವಲಾಗಿದೆ. ಅದರ ಬೆಲೆಯಲ್ಲೂ ಪಾಲು ಕೇಳಬಾರದು. ೩. ಹೆಣ್ಣು ಮಕ್ಕಳಿಗೆ ಪಾಲು ಬರಬಹುದಾದ ಇತರ ಚರಸೊತ್ತುಗಳೂ ಯಾವುದೂ ಇಲ್ಲ”

“ಇವೂಗಳಾವುವೂ ಇಲ್ಲವಾದರೆ ಬರೇ ಖಾಲಿ ಸ್ಥಳ ಮಾತ್ರ ಉಳಿಯುತ್ತದೆ. ಇದಕ್ಕೆ ನಾನು ಸಿದ್ಧಳಿಲ್ಲ, ನಾನು ಶ್ರೇಷ್ಠ ನ್ಯಾಯಾಲಯದಲ್ಲಿ ದೂರು ಸಲ್ಲಿಸಿದ್ದನ್ನು ಪತ್ರಿಕೆಯಲ್ಲಿ ಓದಿದ ನನ್ನ ಸಹೋದರರು ಬೇಗನೇ ಎಲ್ಲವನ್ನೂ ಪಾಲು ಮಾಡಿಕೊಂಡು ಮಾರಬಹುದಾದುದನ್ನು ಮಾರಿದ್ದಾರೆ, ನೀವೇಕೆ, ಅವರೊಡನೆ ಏನನ್ನಾದರೂ ತ್ಯಾಗ ಮಾರಲು ಕೇಳಿಕೊಂಡಿಲ್ಲ? ನನ್ನಂತೆಯೇ ಅವರೂ ಕೂಡಾ ಈ ಆಸ್ತಿಯನ್ನು ಬಹಳ ವರ್ಷಗಳವರೆಗೆ ಅನುಭವಿಸಿದ್ದಾರೆ.”

“ತಿರುವಾಂಕೂರು ಕೊಚ್ಚಿ ಮಹಿಳೆಯರಲ್ಲಿ ನೀವೋರ್ವ ನಾಯಕಿಯಾಗಿದ್ದೀರಿ. ನೀವು ಬಹಳ ದೊಡ್ಡ ತ್ಯಾಗಕ್ಕೂ ಸಿದ್ಧರಾಗಿದ್ದೀರಿ ಎಂದು ನೀವು ಅವರಿಗೆ ತೋರಿಸಬೇಕಾಗಿದೆ.”



“ನಾನು ನ್ಯಾಯವಾದ ತ್ಯಾಗಕ್ಕೆ ಸಿದ್ಧಳಾಗಿಯೇ ಇದ್ದೇನೆ. ಆದರೆ ನಾನು ಸಮಾನ ಹಕ್ಕುಗಳಿಗಾಗಿ ಹೋರಾಡಿದ್ದೇನೆಂಬುದನ್ನು ಮರೆಯಬೇಡಿ. ನಾನು ಅಲ್ಪಾಂಶವನ್ನು ಒಪ್ಪಿಕೊಳ್ಳಬೇಕೆಂದು ನೀವು ನನ್ನನ್ನು ಒತ್ತಾಯಿಸುವಂತಿಲ್ಲ. ಈ ಇಡೀ ರಾಜ್ಯದ ಮಹಿಳೆಯರು ನನ್ನ ಮೊಕದ್ದಮೆಯನ್ನು ಅವಲೋಕಿಸುತ್ತಿದ್ದಾರೆ. ನಾನು ಸಮಾನತೆಗಾಗಿ ಹೋರಾಡಿದೆ ಮತ್ತು ಸಮಾನತೆಯೆಂಬುದು ಮಾರಲ್ಪಡುವುದಿಲ್ಲವೆಂಬುದನ್ನು ನಾನು ಅವರಿಗೆ ತೋರಿಸಿ ಕೊಡಬೇಕಾಗಿದೆ.”

ರಾಜಿ ಪಂಚಾಯ್ತಿಯ ಅಧ್ಯಕ್ಷ ಸ್ಥಾನ ವಹಿಸಿದ ನಿವೃತ್ತ ನ್ಯಾಯದೀಶರು ಆಕೆಗೆ ಒಂದೂವರೆ ಲಕ್ಷ ರೂಪಾಯಿ ಕೊಡಬೇಕೆಂದು ಸಲಹೆ ನೀಡಿದರು. ಆದರೆ ಆಕೆಯ ಸಹೋದರರು ಇದಕ್ಕೂ ಒಪ್ಪಲಿಲ್ಲ. ಮಹಿಳೆಯರು ಅಷ್ಟೊಂದು ಬೆಲೆ ಬಾಳುವುದಿಲ್ಲ ವಲ್ಲ? ಮರಿಯ ಕುಟ್ಟಿಯೂ ಇದಕ್ಕೊಪ್ಪಲಿಲ್ಲ. ಸಹೋದರರಿಗೆ ದೊರತಷ್ಟೇ ತನಗೂ ಬರಬೇಕೆಂಬುದು ಆಕೆಯ ವಾದವಾಗಿತ್ತು. ಸಹೋದರರ ಒಬ್ಬೊಬ್ಬರ ಪಾಲು ಐದಾರು ರೂಪಾಯಿಗಳು

ಕೆಲವು ಮಹಿಳೆಯರು ಪುರುಷರಿಗಿಂತಲೂ ಗಟ್ಟಿ ಹಠವಾದಿಗಳಾಗಿರುತ್ತಾರೆ ಎಂಬುದು ನಿವೃತ್ತ ನ್ಯಾಯಾಧೀಶರ ಟೀಕೆ.

ಯಾವ ಒಮ್ಮತಕ್ಕೂ ಬಾರದ ಮೇರಿಕುಟ್ಟಿ ಆಸ್ತಿಯ ಪಾಲಿಗಾಗಿ ಎರ್ನಾಕುಲಂ ಜಿಲ್ಲಾ ನ್ಯಾಯಾಲಯದಲ್ಲಿ ದಾವೆ ಹೂಡಿದರು. ೧೯೮೬ ಸೆಪ್ಟೆಂಬರ್ ತಿಂಗಳ ಕೊನೆಯ ವಾರದಲ್ಲಿ ಈ ಮೊಕದ್ದಮೆಯ ವಿಚಾರಣೆ ಪ್ರಾರಂಭವಾಯಿತು. ಆದರೆ ಆಕೆಯ ವಕೀಲರು ಕೋರ್ಟಿನಲ್ಲಿ ಕಾಣಿಸಿಕೊಳ್ಳಲೂ ಇಲ್ಲ; ತಮ್ಮ ಕಿರಿಯ ವಕೀಲರಿಗೆ ಈ ಕುರಿತು ವಾದಿಸಲು ಆದೇಶ ನೀಡಲೂ ಇಲ್ಲ ಅಥವಾ ಕೇಸು ಮುಂದಕ್ಕೆ ಹಾಕಬೇಕೆಂದು ಕೇಳಿಕೊಳ್ಳಲೂ ಇಲ್ಲ.

ಆಕೆಯ ಪರವಾಗಿ ವಾದಿಸುವವರ ಅನುಪಸ್ಥಿತಿಯಿಂದಾಗಿ ಈ ಮೊಕದ್ದಮೆ ವಾದಿಗಳಿಲ್ಲವೆಂಬ ನೆಲೆಯಲ್ಲಿ ಏಕಪಕ್ಷೀಯವಾಗಿ ತೀರ್ಮಾನವಾದರೂ ಆಶ್ಚರ್ಯಪಡಬೇಕಾಗಿಲ್ಲ, ಅಲ್ಲವೇ?

ನನ್ನೊಡನೆ ಒಬ್ಬರಂದರು, 'ತಂದೆತಾಯಿಗಳು ಅನಾರೋಗ್ಯ ಪೀಡಿತರಾದಾಗ ಹೆಣ್ಣು ಮಕ್ಕಳು ಅವರ ಸೇವೆ ಮಾಡಬೇಕು' ಎಂದು.

“ಓ... ಹೌದೇ ಹಾಗಾದರೆ ಇನ್ನು ಮುಂದೆ ತಂದೆತಾಯಿಗಳ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಎರಡು ಪಾಲು ಗಂಡು ಮಕ್ಕಳಿಗೆ ಒಂದು ಪಾಲು ಎಂದಾಗಲಿ” ನಾನಂದೆ. ಒಡನೆಯೇ ಅವರು ಕೆರಳಿ ನುಡಿದರು. ಅದು ಹೇಗಾಗುತ್ತದೆ? ಅದು ಶರಿಯತ್ ನಿಯಮ ಅದನ್ನು ಬದಲಾಯಿಸುವಂತಿಲ್ಲ!”

“ಅಂದರೆ ಆಸ್ತಿಯಲ್ಲಿ ಪಾಲು ಶರಿಯತ್ ನಿಯಮದಂತಾಗಬೇಕು. ತಂದೆತಾಯಿಗಳ ಸೇವೆ ಮಾಡುವುದು ಸಮಾಜದ ನಿಯಮದಂತಾಗಬೇಕು. ಒಟ್ಟಾರೆ ಗಂಡಸರಿಗೆ ಯಾವ ರೀತಿಯಲ್ಲೂ ನಷ್ಟ ತೊಂದರೆಯಾಗದಿದ್ದರಾಯಿತು. ಅಲ್ಲವೇ?” ನಾನಂದೆ. “ಹೆಣ್ಣು



ಮಕ್ಕಳಿಗೆ, ತಂದೆತಾಯಿಗಳ ಸೇವೆ ಮಾಡಲು ಯಾರೂ ಕಲಿಸಬೇಕಾಗಿಲ್ಲ, ಅದು ಅವರ ಸೌಕರ್ಯವನ್ನಲಂಬಿಸಿದೆ. ತಮ್ಮ ಎಲ್ಲ ಅಸೌಕರ್ಯಗಳ ನಡುವೆಯೂ ತಂದೆತಾಯಿಗಳಿಗೆ ನೆರವಾಗಲು ಹೆಣ್ಣು ಮಕ್ಕಳು ಧಾವಿಸುತ್ತಾರೆ. ಆದರೆ ಗಂಡುಮಕ್ಕಳಿಗೆ ಈ ಮಾತು ಅಷ್ಟೊಂದು ಅನ್ವಯಿಸುವುದಿಲ್ಲ” ಎಂದೂ ಸೇರಿಸಿದೆ.

ಮಹಿಳೆಯರು ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆಹೋದರೆ ಕೇಳಿಬರುವ ಮಾತುಗಳನ್ನು ನೋಡಿ.

ಶ್ಯಾಮಲಾ ಭಂಡಾರಿಗೆ ಅನ್ಯಾಯವಾದದ್ದು ಹೌದು. ಆದರೆ ಆಕೆ ಕೋರ್ಟಿಗೆ ಹೋದದ್ದು ತಪ್ಪು.

ಸಾರಾ ಅಬೂಬಕ್ಕರ್‌ಗೆ ಕಿರುಕುಳ ಕೊಟ್ಟು, ಅವಮಾನ ಮಾಡಿದ್ದು ಹೌದು. ಆದರೆ ಆಕೆ ಪುರುಷರ ವಿರುದ್ಧ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಹೂಡಬಾರದಿತ್ತು!

ಮಥುರಾ ಎಂಬ ಸ್ತ್ರೀಯ ಮೇಲೆ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರವೆಸಗಲ್ಪಟ್ಟು ಆಕೆ ನ್ಯಾಯಕ್ಕಾಗಿ ಎಂಟು ವರ್ಷಗಳವರೆಗೆ ಹೋರಾಡಿದರೂ ನ್ಯಾಯ ದೊರೆಯಲಿಲ್ಲ ವೆಂಬುದು ಎಲ್ಲರಿಗೂ ತಿಳಿದ ವಿಷಯ.

ಮಹಿಳಾ ವೈದ್ಯೆಯೋರ್ವಳು ಪುರುಷ ವೈದ್ಯನೊಬ್ಬನನ್ನು ಪತಿಯಾಗಿ ಪಡೆಯಲು ಆತನಿಗೆ ಐದು ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು. ಆಕೆಯೂ ಆತನಂತೆಯೇ ದುಡಿದು ಸಂಪಾದಿಸುತ್ತಿಲ್ಲವೇ ಯಾಕೆ ಈ ರೀತಿ

ಗಂಡನನ್ನು ಕ್ರಯಕ್ಕೆ ಕೊಳ್ಳಬೇಕು ಎಂದು ನಾನು ಕೇಳಿದಾಗ ದೊರೆತ ಉತ್ತರ, “ಆತನೆಷ್ಟಾದರೂ ಗಂಡಸಲ್ಲವೇ” ಎಂಬುದು.

ಎಂದಿನವರೆಗೆ ಮಹಿಳೆ ಜಾಗೃತಳಾಗುವುದಿಲ್ಲವೊ ಅಂದಿನವರೆಗೆ ಹೆಣ್ಣು ಗರ್ಭಕೋಶದಿಂದ ಗೋರಿಯವರೆಗೆ ಈ ರೀತಿಯ ತಾರತಮ್ಮಯಕ್ಕೊಳಗಾಗುತ್ತಲೇ ಇರುತ್ತಾಳಲ್ಲವೇ?

# ವಿಜ್ಞಾನ - ಮಹಿಳೆ

- ಚೂಡಾಮಣಿ ತಿಗಡಿ

'ಜ್ಞಾನದ ಉದ್ಯಾನದಲ್ಲಿ ವಿಹರಿಸುವವನಿಗೆ ಕಷ್ಟಗಳು ಮರಳಿನಲ್ಲಿ ಸುರಿದ ನೀರಿನಂತಾಗುತ್ತವೆ' ಎಂಬ ಪೋಲಿಷ್ ನಾಣ್ಣುಡಿ ಮನೋಜ್ಞವಾಗಿದೆ. ಕವಿ ಸುಂದರವೆಂದು ಹಾಡಿದ, ಭಕ್ತ ಭಗವಂತನ ಲೀಲೆಯಂದು ಬಣ್ಣಿಸಿದ ಪ್ರಕೃತಿ ವೈಚಿತ್ರವನ್ನು ವಿಜ್ಞಾನಿ ಕ್ರಮಬದ್ಧ ಜ್ಞಾನವೆಂದು ವರ್ಣಿಸುತ್ತಾನೆ. ಎಲ್ಲದರ ಉದ್ದೇಶವೂ ಸತ್ಯಾನ್ವೇಷಣೆಯೇ, ಒಂದರದು ಭಾವನಾ ಪ್ರಧಾನ ಮಾರ್ಗವಾದರೆ ಇನ್ನೊಂದರದು ಬುದ್ಧಿ ಪ್ರಧಾನ ಮಾರ್ಗ ಎರಡೂ ಮಾರ್ಗಗಳು ಸತ್ಯದಲ್ಲಿ ಸೌಂದರವನ್ನು, ಆನಂದವನ್ನು ಕಾಣಬಯಸುತ್ತವೆ.

ವಿಶ್ವಕಾರದ ಪ್ರತಿರಚನೆಯನ್ನು ತರ್ಕ ಜಿಜ್ಞಾಸೆಯ ಮೂಲಕ ವಿಶದೀ ಕರಿಸುವ ಜ್ಞಾನಭಾಗವನ್ನು ವಿಜ್ಞಾನವೆನ್ನಬಹುದು. ಪ್ರಕೃತಿ ಕಾವ್ಯಗಳು ಸೂಕ್ಷ್ಮವೂ ಜಟಿಲವೂ ಆದದ್ದು. ಅದನ್ನು ಬಿಡಿಸಿ ವಿವರಿಸುವದು ಚಕ್ರವ್ಯೂಹವನ್ನು ಬೇಧಿಸಿದಂತೆ ಕಠಿಣವಾದದ್ದು. ವಿಜ್ಞಾನಿ ಜ್ಞಾನದ ಅನ್ವೇಷಣೆಯಲ್ಲಿ ತಪನಿಲ್ಲುತ್ತಾನೆ. ಭವಿಷ್ಯದ ಫಲವನ್ನು ಕಲ್ಪಿಸಿಕೊಳ್ಳದೆ ಶ್ರಮಿಸುತ್ತಾನೆ.

ಸುಮಾರು ಮೂರು ಶತಮಾನಗಳ ಹಿಂದೆ, ಇಂದಿನ ಆಧುನಿಕ ವಿಜ್ಞಾನ ಮಾನವ ಜೀವನದಲ್ಲಿ ಪ್ರಕಾಶಿಸತೊಡಗಿತು. ಅಂದಿನಿಂದ ಇಂದಿನವರೆಗೆ ಅದು ಅನೇಕ ಅದ್ಭುತಗಳನ್ನು ಸಾಧಿಸಿದೆ. ಜೀವನದ ನಾನಾ ರಂಗಗಳಿಂದ ವ್ಯವಸಾಯ, ಉದ್ದಿಮೆ, ಆರೋಗ್ಯ, ಶಸ್ತ್ರಚಿಕಿತ್ಸೆ, ವಾರ್ತಾಪ್ರಸಾರ ಮತ್ತು ಪ್ರಯಾಣ ಸೌಕರ್ಯಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ವಿಜ್ಞಾನವು ಪ್ರಕೃತಿ ಚಮತ್ಕಾರಗಳನ್ನು ವಿಶ್ಲೇಷಿಸಿ, ಅದನ್ನು ಮಾನವಸೇವೆಗೆ ಅಣಿ ಮಾಡಿದೆ, ಕುರುಡನಿಗೆ ಕಣ್ಣನ್ನು, ಕಿವುಡನಿಗೆ ಕಿವಿಯನ್ನು ಮತ್ತು ಮೂಕನಿಗೆ ಬಾಯನ್ನು, ವಿಜ್ಞಾನದಿಂದ ದೊರಕಿಸಿಕೊಟ್ಟಿದೆ ಎಂದರೆ ಅತಿಶಯೋಕ್ತಿ ಯಾಗಲಾರದು. ವಿಜ್ಞಾನ, ಪ್ರಕೃತಿಯ ಚಮತ್ಕಾರಗಳನ್ನು ಮಾಯೆಯೆಂದು, ಪ್ರಕೃತಿ ರಹಸ್ಯವನ್ನು ಭೇದಿಸಬಲ್ಲ ಜ್ಞಾನವನ್ನು ಯಕ್ಷಣಿವಿದ್ಯೆಯೆಂದು ನಂಬುವದಿಲ್ಲ. ವಿಶ್ವರೂಪವನ್ನು ವಿಚಾರಮಯವೂ, ತರ್ಕಬದ್ಧವೂ ಮತ್ತು ಸರ್ವ ಸಮ್ಮತವೂ ಆದ ರೀತಿಯಲ್ಲಿ ವಿವರಿಸಬಹುದೆಂದು ನಂಬುತ್ತದೆ. ಪ್ರಕೃತಿ ವೈಚಿತ್ರಗಳು ಎಷ್ಟೇ ಆಶ್ಚರ್ಯಕರವಿರಲಿ, ಅವುಗಳು ಅಸಂಬದ್ಧವಲ್ಲ ಮತ್ತು ಅಡ್ಡಾದಿಡ್ಡಿಯಲ್ಲವೆಂದು ಖಚಿತವಾದ ನಂಬಿಕೆಯಿದೆ. ಪ್ರಕೃತಿಯ ಚಮತ್ಕಾರಗಳು ತಮ್ಮ ರೌದ್ರತೆಯಿಂದ ಮಾನವನ, ಭಯಭಕ್ತಿಯನ್ನು ಪ್ರಥಮವಾಗಿ ಮೂಡಿಸಿದವು. ಅನಂತರ ಅವನ ಕುತೂಹಲವನ್ನು

ಕೆರಳಿಸಿ, ಒಂದೊಂದಾಗಿ ತಮ್ಮ ರಹಸ್ಯದಳಗಳನ್ನು ತೆರೆದು, ವಿರಾಟ್ ಸ್ವರೂಪದ ದರ್ಶನವನ್ನು ಸಾಧ್ಯಮಾಡಿಸಿದೆ. ಹಾಗಾದರೆ ವಿಜ್ಞಾನವು ಜೀವನದ ಎಲ್ಲ ಸಮಸ್ಯೆಗಳಿಗೆ ಉತ್ತರ ಕೊಡಬಲ್ಲದೇ? 'ಹೀಗೇಕೆ?' ಎಂಬ ಕುತೂಹಲವನ್ನು ಸಂಪೂರ್ಣವಾಗಿ ತಣಿಸಬಲ್ಲದೇ? ಜೀವನದ ಅನೇಕ ಸಮಸ್ಯೆಗಳ ಉತ್ತರ ಒಂದು ಮಾರ್ಗದಲ್ಲಿ, ಒಂದು ಶಿಸ್ತಿನಲ್ಲಿ ಅಸಾಧ್ಯವಿರಬಹುದು. ಆದರೆ ಬುದ್ಧಿಪ್ರಧಾನವಾದ ವಿಜ್ಞಾನ ಮಾರ್ಗ ಜೀವನದ ಅನೇಕ ಚಮತ್ಕೃತಿಗಳನ್ನು ತೆರೆದು ತೋರಿಸುವಲ್ಲಿ ಕೃತಕೃತ್ಯವಾಗಿದೆ. ವಿಜ್ಞಾನದ ಮುನ್ನೆಡೆ ಮನಸ್ಸಿನ ವೈಜ್ಞಾನಿಕ ಮನೋವೃತ್ತಿಯ ಆನಂದದ ಮೇಲೆ ಅವಲಂಬಿಸಿದೆ.

ವೈಜ್ಞಾನಿಕ ಮನೋವೃತ್ತಿಯೆಂದರೆ, ವಿಜ್ಞಾನ ಪದವಿಗಳನ್ನು ಪಡೆಯುವದೆಂದು ಮಾತ್ರ ಎಂದಿಗೂ ಅರ್ಥವಲ್ಲ. ಅದೊಂದು ಬುದ್ಧಿಯನ್ನು ತಿದ್ದುವ ಶಿಕ್ಷಣ ವಿಧಾನ; ಅದೊಂದು ವಿವೇಚನಾ ಸಾಮರ್ಥ್ಯವನ್ನು ಹರಿತ ಮಾಡುವ ಶಿಸ್ತು ಮತ್ತು ಅದು ಜೀವನಕ್ಕೆ ಜ್ಞಾನದ ಊರುಗೋಲು, ವೈಜ್ಞಾನಿಕ ಮನೋಧರ್ಮ, ಅತಿರೇಕ ಭಾವನೆಯ ಪ್ರಾಮುಖ್ಯತೆಯನ್ನು ತಡೆಹಿಡಿದು ಬುದ್ಧಿಗೆ ಪ್ರಾಧಾನ್ಯವನ್ನು ಕೊಡುತ್ತದೆ. ಅಂತಹ ಒಂದು ಮನೋಧರ್ಮ ನಿಷ್ಪಕ್ಷಪಾತ ದೃಷ್ಟಿಯನ್ನು, ನಿರ್ವಿಕಾರ ವಿವೇಚನಾ ಶಕ್ತಿ ಯನ್ನು ಬೆಳೆಸುತ್ತದೆ. ಸತ್ಯದ ಅನ್ವೇಷಣೆಯಲ್ಲಿ, ಜ್ಞಾನದ ಬೊಕ್ಕಸವನ್ನು ತೆರೆಯುವಾಗ ವಿಜ್ಞಾನ ಇಂತಹ ಮನೋಧರ್ಮವನ್ನು ಬಳಸುತ್ತದೆ. ಪ್ರತಿಯೊಂದು ಕೃತಿಯನ್ನು ತರ್ಕ ಜಿಜ್ಞಾಸೆ ವಿಮರ್ಶೆಗಳ ಮನೆಯಲ್ಲಿ ಕರಗಿಸಿ, ಆಗ ಹೊಸ ಸತ್ಯ ಎದ್ದು ಕಂಡರೆ, ಹಳೆಯ ನಂಬಿಕೆ ರೂಢಿಗಳನ್ನು ಲೀಲಾ ಜಾಲವಾಗಿ ಬಿಟ್ಟುಕೊಡುತ್ತದೆ. ವಿಜ್ಞಾನ ಮಾರ್ಗದಲ್ಲಿ ಕಲ್ಪನೆಗಿಂತ ತರ್ಕ ಮನ್ನಿತ, ಸರ್ವಸಮ್ಮತ ವಾದಕ್ಕೆ ಹೆಚ್ಚು ಬೆಲೆ. ಇದೊಂದು ಕಠಿಣವೆನಿಸಿದರೂ ಪ್ರಿಯವಾದ ಪಥ, ಇಂತಹ ಒಂದು ಶಿಸ್ತು ಕ್ರಮ ಕೇವಲ ಕೆಲವು ಸುಖೋಪಕರಣಗಳ ಸಂಶೋಧನೆಗಾಗಿ ಮೆಚ್ಚಿದ ಮಾರ್ಗವಲ್ಲ. ಈ ಶಿಸ್ತು ಜೀವನದ ನಾನಾ ಸಮಸ್ಯೆಗಳಿಗೆ ಅಪ್ಯಾಯಮಾನ ಹಾದಿಯಾಗಬಲ್ಲದು, ಜೀವನದ ಅನೇಕ ಸಮಸ್ಯೆಗಳ ಉತ್ತರಕ್ಕೆ ವಿಜ್ಞಾನದ ವಿಚಾರಮಾರ್ಗವೊಂದೇ ದಾರಿಯೆಂದು ನಾನೆಂದಿಗೂ ಭಾವಿಸಲಾರೆ. ಜೀವನವೊಂದು ಮಿತಿಗಳ ಸಮಸ್ಯೆಯೆಂದು ನನ್ನ ಭಾವನೆ. ಈ ಮಿತಿಯನ್ನು ಅರಿಯಲು ಪ್ರತಿ ವ್ಯಕ್ತಿ ತನ್ನ ಜ್ಞಾನ-ಭಾವಗಳ ಸಂಮಿಶ್ರ ವಿಧಾನದಲ್ಲಿ ಶ್ರಮಿಸಬೇಕಾಗುತ್ತದೆ. ಜೀವನದ ಪಯಣದಲ್ಲಿ ಎಲ್ಲವೂ ಬಯಲು ಎಲ್ಲವೂ ಅಪರಿಚಿತ, ಆದುದರಿಂದಲೇ ನಾವು ಮೊದಲು ಸಾಗಿದವರ ಹೆಜ್ಜೆ ಗುರುತುಗಳನ್ನು ಹುಡುಕಾಡುವದು, ಜಾಡು ಸಿಕ್ಕಿದರೆ ಮಾತ್ರ ಸಾಲದು, ಜಾಡನ್ನು ತುಳಿದವರ ಅಂತರ್ಯವನ ಬೆಳೆಸಿಕೊಳ್ಳಬೇಕು. ಅದಕ್ಕೆ ಪ್ರತಿಯೊಬ್ಬರೂ ಶ್ರಮಿಸಬೇಕು, ತಪವೆಸಗ ಬೇಕು, ನಂತರ ಸಾಧಿಸಬೇಕು. ಈ ದಿಶೆಯಲ್ಲಿ ಭಕ್ತಿ-ಭಾವದೊಡನೆ ತರ್ಕ ಜ್ಞಾನದ ಮಿಲನ ಸಹಕಾರಿಯಾಗಬಲ್ಲದು. ಸತ್ಯ-ಆನಂದಗಳ ಶೋಧನೆಯಲ್ಲಿ ವೈಜ್ಞಾನಿಕ ಮನೋಧರ್ಮವು ಮಧುರ ಸಹಾಯ ನೀಡಬಲ್ಲದು.

ವಿಜ್ಞಾನದಲ್ಲಿ, ವಿಷಯಕ್ಕೆ ಇರುವ ಮಹತ್ವ ವ್ಯಕ್ತಿಗಿಲ್ಲ. ವ್ಯಕ್ತಿಯ ಲಿಂಗ ಬೇಧಕ್ಕಂತೂ ಯಾವ ಸ್ಥಾನವೂ ಇಲ್ಲ. ಹಾಗಾದರೆ ವಿಜ್ಞಾನ-ಮಹಿಳೆ ಇವರಿಬ್ಬರ ಮಧ್ಯದ

ಸಂಬಂಧವೇನು? ಪ್ರಸಿದ್ಧ ವಿಜ್ಞಾನಿ ಪಿಯರನ ಡೈರಿಯಲ್ಲಿ ಕಂಡುಬಂದ ಮಾತುಗಳಿವು- "ಸ್ತ್ರೀಯರು ಸಾಮಾನ್ಯ ಬದುಕನ್ನು ಹೆಚ್ಚು ಪ್ರೀತಿಸುತ್ತಾರೆ. ಅವರಲ್ಲಿ ಮೇಧಾವಿತನ ಅಪರೂಪ, ಸರ್ವಸ್ವವನ್ನು ಬಾಳಿನ ಹಿರಿಯ ಕೃತಿಗಾಗಿ ಮೀಸಲಿಟ್ಟು ಅನುದಿನದ ಬದುಕಿನಿಂದ ದೂರವಾಗಬೇಕು, ಎಂದಾಗ ಪುರುಷರು ವನಿತೆಯೊರಡನೆ ಅಕ್ಷರಶಃ ಹೋರಾಡಬೇಕಾಗುತ್ತದೆ. ಯುವತಿ ತನ್ನ ಪ್ರಣಯಕ್ಕಾಗಿ ಪ್ರಪಂಚದ ಅತ್ಯಂತ ಹಿರಿಯ ಪ್ರತಿಭೆಯನ್ನು ತ್ಯಜಿಸಬಲ್ಲಳು", ಇಂತಹ ಕಹಿ ಭಾವನೆಯ ಕಾರಣಗಳೇನು? ಇದರ ಸತ್ಯವೇನು? ಇದು ಪುರುಷನ ನಿರಾಶೆ ಅಥವಾ ತನ್ನದೇ ಶ್ರೇಷ್ಠ ಮಾರ್ಗವೆಂಬ ಅಹಂಭಾವದಿಂದ ಮೂಡಿದ ವಿಚಾರಗಳೇ ಅಥವಾ ಸ್ತ್ರೀಯರ ಸುಖ ವಿಲಾಸ ಪ್ರಿಯ ಜೀವನದಿಂದ ಪ್ರತಿಫಲವಾಗಿ ಮೂಡಿದ ವಿಚಾರಗಳೇ? ಕೆಲವು ಪ್ರತಿಭಾವಂತ ಮಹಿಳೆಯರ ಉದಾಹರಣೆಯನ್ನು ಹೇಳಿ ಮೇಲಿನ ವಿಚಾರಗಳು ಸಂಕುಚಿತವೆಂದು ಟೀಕಿಸಬಹುದು. ಆದರೆ ಸ್ತ್ರೀಯರ ಸಾಮಾನ್ಯ ಮನೋಭಾವವನ್ನು ಅವಲೋಕಿಸಿ ಹೇಳುವುದಾದರೆ, ಸ್ತ್ರೀಯಾದವಳಿಗೆ ತನ್ನ ಗೃಹ ಸೌಭಾಗ್ಯ ಮತ್ತು ಅದರಲ್ಲಿ ತಾನು ಅಧಿದೇವತೆಯಾಗಬೇಕೆಂಬ ಹಂಬಲಕ್ಕಿಂತ ಹಿರಿದಾದ ಹಂಬಲವಿರುವದು ಬಹಳ ಅಪರೂಪ, ಇದರಲ್ಲಿ ತಪ್ಪೇನು? ತಪ್ಪಿಲ್ಲ, ಸಾಮಾನ್ಯವಾಗಿ ಸ್ತ್ರೀಯರ ಜೀವನದ ಗುರಿ ಇದೊಂದನ್ನು ಬಿಟ್ಟು ಬೇರೊಂದಿಲ್ಲ ಎಂಬ ಮಿತಿಯ ಬಗ್ಗೆ ನಾವು ಚರ್ಚಿಸುತ್ತಿದ್ದೇವೆ. ಆಕೆ ತನ್ನ ಭಾವನೆಗಳ ಮಿತಿಮೀರಿದ ಓಟಕ್ಕೆ ತಡೆ ಹಾಕಬಯಸಿದರೆ, ಅಂಧಶ್ರದ್ಧೆಗಳ ಅಂಜಿಕೆಯನ್ನು ತ್ಯಜಿಸಬೇಕಾದರೆ, ಎಲ್ಲಕ್ಕಿಂತ ಜೀವನದಲ್ಲಿ ಒದಗಿದ ಆಕಸ್ಮಿಕಗಳನ್ನು ಸ್ವಧೈರ್ಯದಿಂದ ಎದುರಿಸಬೇಕಾದರೆ, ಮಹಿಳೆ ತನ್ನ ಮನೋಭಾವದಲ್ಲಿ ಬುದ್ಧಿ ಶಿಕ್ಷಣಕ್ಕೆ ಪ್ರಧಾನ್ಯ ಕೊಡಬೇಕು. ಅವಳ ಜೀವನ ದೃಷ್ಟಿ ಬರೇ ಭಾವುಕವಾಗದೇ, ಪ್ರಕೃತಿ ರಹಸ್ಯ ಬೇಧಿಸಹೊರಟ ವಿಜ್ಞಾನಿಯ ವೈಜ್ಞಾನಿಕ ದೃಷ್ಟಿಯ ಅಂಶದಿಂದ ಕೂಡಿರಬೇಕು ಇಂತಹ ಶಿಕ್ಷಣ ಸಾಧಿಸಿದ ಮಹಿಳೆ ತನ್ನ ವ್ಯಕ್ತಿತ್ವದ ಆಸರೆಯ ಬಗ್ಗೆ ಧೈರ್ಯ ಹೊಂದಬಲ್ಲಳು. ಸ್ತ್ರೀಯರು, ತಮ್ಮ ದೈನಂದಿನ ಕಾರ್ಯವನ್ನು ಬಿಟ್ಟು, ತಿಳಿಯುವ ವಿಷಯಗಳೇ ಇಲ್ಲ, ಕಲಿಯುವ ಜ್ಞಾನವೇ ಇಲ್ಲವೆಂಬ ಮನೋವೃತ್ತಿಯನ್ನು ರೂಢಿಸಿಕೊಂಡರೆ, ಆಕೆ ತನ್ನ ರಾಗ-ಭಾವ ಸಮ್ರಾಜ್ಯದಲ್ಲಿ ಸಂಪೂರ್ಣ ಮುಳುಗಿ, ಜ್ಞಾನದೀವಿಗೆ ಹಚ್ಚದಿದ್ದರೆ, ಕೊನೆಗೆ ಆಕೆಯ ಪಾಲಿಗೆ ಸಿಗುವದು ಅಂಧಃಕಾರ, ಅಜ್ಞಾನ, ನನ್ನ ದೇಶದ ಮಹಿಳೆಯರ ಎಲ್ಲ ಕೇಡಿಗೂ, ಅವರಲ್ಲಿ ಜ್ಞಾನದಾಹ ಕಮರಿ ಹೋಗಿರುವದೇ ಕಾರಣವೆಂದು ನನ್ನ ಮತ. ವ್ಯಕ್ತಿಯಲ್ಲಿ ವಿಷಯಗಳ ಬಗ್ಗೆ ಚಿಂತೆ ಕುಗ್ಗಬೇಕಾದರೆ, ವಿಶೇಷ ಜ್ಞಾನದ ಬಗ್ಗೆ ಚಿಂತನೆ ಮಾಡಿ ಬರಬೇಕು. ಇಂತಹ ಮನೋಭಾವನೆಯನ್ನು ನಾನು ವೈಜ್ಞಾನಿಕ ಮನೋಧರ್ಮವೆಂದು ಕರೆದಿದ್ದೇನೆ. ಸ್ತ್ರೀಯರಲ್ಲಿ ಜ್ಞಾನದ ಕುಡಿ ಮೊಳಕೆಯೊಡೆದರೆ ಮಾತ್ರ ಅವರ ಜೀವನ ಆನಂದಮಯವೂ ಅರ್ಥಪೂರ್ಣವೂ ಆಗಬಲ್ಲದು. ಇಲ್ಲದಿದ್ದಲ್ಲಿ ಜೀವನ ಸುಖದ ಚಟವಾಗಿ ದುಃಖಪೂರ್ಣವಾಗುತ್ತದೆ.

ತಾನು ಪ್ರೀತಿಸುವ ವಸ್ತು ಇಲ್ಲವಾದಾಗ, ತನ್ನ ಸಂಪೂರ್ಣ ಆಸರೆಯಾದ ಪತಿ ದುಷ್ಟನಾದಾಗ ಅಥವಾ ಸತ್ತಾಗ, ಹೆಣ್ಣಿನ ಬಾಳು ಕಣ್ಣೀರು: ಇಂತಹ ಸಮಸ್ಯೆಗೆ ವಿಜ್ಞಾನ

ಯಾವ ಮದ್ದನ್ನು ಕಂಡುಹಿಡಿದಿದೆ ಎಂದು, ನೀವು ನನ್ನನ್ನು ಛೇಡಿಸಬಹುದು. ಈ ಸಮಸ್ಯೆಗಳು ಕ್ಷಣದಲ್ಲಿ ಮಾಯವಾಗುವ ಸಮಸ್ಯೆಗಳಲ್ಲವೆಂದೇ, ನನ್ನ ವಾದ. ಅವುಗಳನ್ನು ಎದುರಿಸಲು ಪ್ರತಿ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ವಿವೇಚನಾಶಕ್ತಿಯಿಂದ ಬೆಳೆಸಿಕೊಳ್ಳಬೇಕಾಗುತ್ತದೆ. ವ್ಯಕ್ತಿತ್ವ ವಿಕಸನೆಗೆ ಜ್ಞಾನಾರ್ಜನೆ ಅತ್ಯವಶ್ಯಕ, ಈ ಜ್ಞಾನ ಸಂಪಾದನೆಯ ಹಂಬಲವನ್ನೇ ನಾನು ವೈಜ್ಞಾನಿಕ ಮನೋಭಾವವೆಂದು ಕರೆಯುತ್ತೇನೆ. ಬೆರಳು ಮಡಿಚಿ ಲೆಕ್ಕ ಮಾಡುವಷ್ಟು ಜ್ಞಾನ, ಹೆಣ್ಣಿಗೆ ಸಾಕು' ಎಂಬ ಮನೋಭಾವ ನಮ್ಮ ಸಮಾಜದಲ್ಲಿ ಇಂದಿಗೂ ಇದೆ.

ಮಹಿಳೆ ತನ್ನ ಗೃಹಿಣೀ ಜೀವನದಲ್ಲಿ, ಗೃಹಕಾರಗಳ ಮಧ್ಯೆ ಜ್ಞಾನಾರ್ಜನೆ ಮಾಡಲು ಹೆಚ್ಚು ಶ್ರಮಿಸಬೇಕಾಗುತ್ತದೆ. ಅಡ್ಡಿ-ಆತಂಕಗಳಿಲ್ಲದೆ ಜ್ಞಾನ ಚಿಂತನೆಯಲ್ಲಿ ಮುಳುಗುವದು ಅವಳ ಪಾತ್ರದಲ್ಲಿ ಸುಲಭವಲ್ಲ. ಮೇಡಂ ಕ್ಯೂರಿಯವರು, ತದೇಕ ಚಿತ್ತದಿಂದ ವ್ಯಾಸಂಗ ಮಾಡುತ್ತಿದ್ದಾಗ, ಅವರ ಎರಡು ವರ್ಷದ ಪುಟ್ಟ ಮಗಳು ತಾಯಿಯನ್ನು ಕರೆಯುತ್ತಿದ್ದಳು. ಮಗುವಿನ ಕರೆಗೆ "ಓಗೊಡದೆ ವ್ಯಾಸಂಗ ಮುಂದುವರೆಸುವದು ತಾಯಿ ಮೇರಿಗೆ ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ತಂದೆ ಪಿಯರ "ನೀನು ಮಗುವನ್ನು ಸುಮ್ಮನೆ ಅತಿಶಯವಾಗಿ ಪ್ರೀತಿ ಮಾಡುತ್ತಿ" ಎಂದು ಆಕ್ಷೇಪಿಸಿದಾಗ ಮೇರಿ ನಸುನಗುತ್ತಿದ್ದಳು. ಪಿಯರ ಮೊದಲು ವಿಜ್ಞಾನಿ, ಅನಂತರ ತಂದೆ. ಆದರೆ ಮೇರಿ ಪ್ರಥಮವಾಗಿ ತಾಯಿ, ಅನಂತರ ವಿಜ್ಞಾನಿ. ಇದು ಪ್ರಕೃತಿಯ ವರ ಪ್ರಧಾನದಿಂದ ಬಂದ ಬೇಧ, ಇದನ್ನು ಮೀರಿ ನಡೆಯುವದು ಅಸಹಜ, ಆದ್ದರಿಂದ ಮೇಧಾವಿನಿಯಾದ ಮಹಿಳೆ ಕೂಡ ಹೆಚ್ಚಿನ ಜ್ಞಾನ ಪ್ರಗತಿ ಸಾಧಿಸಲು ಹೆಚ್ಚಿನ ಶ್ರಮ ಪಡಬೇಕಾಗುತ್ತದೆ. ಬಹುಶಃ ಇದರಿಂದಲೇ ಮಹಿಳೆಯರಲ್ಲಿ ವಿಶೇಷ ಜ್ಞಾನಾರ್ಜನೆಯ ಹಂಬಲ ಅಪರೂಪವಿರಬಹುದು. ಸ್ತ್ರೀಯರು ವಿವೇಚನೆಯನ್ನು, ವಿಚಾರಶಕ್ತಿಯನ್ನು, ಜ್ಞಾನಸಂಗ್ರಹಣೆಯನ್ನು ಮತ್ತು ವ್ಯಕ್ತಿತ್ವ ವಿಕಾಸನೆಯನ್ನು ಪೂರ್ಣವಾಗಿ ಬಿಟ್ಟುಬಿಡಬೇಕೆಂಬ ಅರ್ಥ ಎಲ್ಲ ವಿನಯ ವಿಧೇಯತೆಗಳ ತೆರೆಯ ಹಿಂದೆ, ದೈವ-ಭಕ್ತಿಗಳ ಮರೆಯಲ್ಲಿ ಸ್ತ್ರೀಯರು ಆಸೆಬುರುಕರು, ಮೂಢ ನಂಬಿಕೆಗಳ ದಾಸರೂ ಆಗಬೇಕಾಗಿಲ್ಲ. ಯಾರಾದರೂ ಸುಖವನ್ನು ಸುಲಭವಾಗಿ ದಕ್ಕಿಸಿಕೊಳ್ಳಲು ಹೊರಟರೆ, ಅವರಿಗೆ ಅತ್ತು-ಕರೆಯುವದು ಅನಿವಾರವಾಗುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳ ಬೇಕು. ಮಹಿಳೆಯರಿಗೆ ಭಕ್ತಿಯಲ್ಲಿ, ದೈವದ ಹಿರಿಮೆಯಲ್ಲಿ ಅಚಲ ನಂಬಿಕೆ, ಈ ಶ್ರದ್ಧೆ ಅವರಿಗೆ ಜೀವನದಲ್ಲಿ ಧೈರ್ಯ ತುಂಬುತ್ತದೆ ಎಂಬುದು ಸತ್ಯ. ಅದರೊಡನೆ ಅವರು ಜ್ಞಾನ ವಿಚಾರ ವಿವೇಚನೆಗಳ ಶ್ರದ್ಧೆಯನ್ನು ಅಳವಡಿಸಿ ಕೊಂಡರೆ ಮಹಿಳೆಯು ತಾಯಿಯಾಗಿ ತನ್ನ ಮಕ್ಕಳ ಮನೋಭಾವದ ಮೇಲೆ ಪ್ರಭಾವ ಬೀರಬಲ್ಲಳು. ತನ್ನ ವ್ಯಕ್ತಿತ್ವವನ್ನು ಬೆಳಗಿಸಿಕೊಳ್ಳಬಲ್ಲಳು, ಕಾಣದ ಶಕ್ತಿಯೊಂದು ಪ್ರತಿ ವ್ಯಕ್ತಿಯ ಭವಿಷ್ಯ ಜೀವನವನ್ನು ರೂಪಿಸುತ್ತಿದೆ. ಅದರಲ್ಲಿ ವ್ಯಕ್ತಿಯ ಬುದ್ಧಿ ಚಾತುರ್ಯ-ಭಾವನೆಗೆ ಯಾವ ಬೆಲೆಯ ಇಲ್ಲವೆಂದು ವಾದಿಸಬಹುದು. ಅದೇನೇ ಇರಲಿ, ನಮ್ಮ ಪಾಲಿನ ಪಾತ್ರವನ್ನು ಸಮಂಜಸವಾಗಿ ವಹಿಸೋಣ, ಭವಿಷ್ಯದ ಫಲವನ್ನು ಕಲ್ಪಿಸಿಕೊಂಡು ತತ್ಕಾಲಿಕದಲ್ಲಿ ನಿರುತ್ಸಾಹಿಗಳಾಗುವದು ಬೇಡ. ನಮ್ಮ ಪಾಲಿನ ಕರ್ತವ್ಯವನ್ನು ಮೆಚ್ಚುವಂತೆ ಪಾಲಿಸಿದಾಗ, ಕಾಣದ ಶಕ್ತಿ ಕುರುಡಾಗಿ ವರ್ತಿಸುವದೆಂದು ನಾನು ಭಾವಿಸಲಾರೆ.

ಜಗತ್ತಿನ ಸಮಸ್ಯೆಗಳಿಗೆ ವೈಜ್ಞಾನಿಕ ಮನೋಧರ್ಮ ಪೂರ್ಣ ಉತ್ತರವೇನು? ಎಂದು ಕೇಳಬಹುದು. ಇದೊಂದೇ ಮಾರ್ಗವಲ್ಲ, ಇದು ಪೂರ್ಣ ಶೋಧವಾಗದ ಹಾದಿ ಎಂದು ಉತ್ತರಿಸಬಹುದು. ಆದರೆ ವಿಜ್ಞಾನ ಮತ್ತು ಅದು ಅನುಸರಿಸುವ ಬುದ್ಧಿ ಪ್ರಧಾನ ಜ್ಞಾನಮಾರ್ಗ, ಜಗತ್ತಿಗೆ ಅಣಕು ದೀಪವನ್ನು ನೀಡಿಲ್ಲ. ಅದು ದೇದೀಪ್ಯ ಪ್ರಕಾಶವನ್ನು ತೋರಿದೆ. ಹಾಗಾದರೆ ಪ್ರಕಾಶದ ಜಾಡು ಹಿಡಿದು ದಾರಿ ಸಾಗುವದು ಬುದ್ಧಿವಂತ ಲಕ್ಷಣವೆಂದು ಎಲ್ಲರೂ ಒಪ್ಪಿಕೊಳ್ಳಬಹುದಲ್ಲ.

# ಅವಳ ಭಾಷೆ

- ಡಾ. ಕೆ.ಆರ್.ಸಿದ್ಧಗಂಗಮ್ಮ

ಭಾಷೆಯೆಂಬುದು ವ್ಯಕ್ತಿಗತವಾದುದು. ಆದರೆ ವ್ಯಕ್ತಿಗತ ಭಾಷೆಯು ರೂಪುಗೊಳ್ಳುವುದು ಸಮುದಾಯದ ಮೂಲಕವೇ ಸಮುದಾಯದ ಸಾಮಾಜಿಕ ರಚನೆಗಳು, ಭಾಷೆಯ ಒಳಗೆ ಮೇಲೆ ಇದ್ದೇ ಇರುತ್ತದೆ. ಸಮುದಾಯದ ಆಲೋಚನಾ ಕ್ರಮಗಳು ಬಹುಪಾಲು ಪುರುಷ ಕೇಂದ್ರಿತವೆಂಬುದು ಎಲ್ಲರಿಗೂ ಗೊತ್ತಿರುವಂತಹುದೆ. ಈ ಪುರುಷಕೇಂದ್ರಿತ ಆಲೋಚನಾ ಕ್ರಮಗಳನ್ನೇ ತಮ್ಮ ಆಲೋಚನೆ ಚಿಂತನೆಗಳೆಂದು ಹೆಣ್ಣು ಮಕ್ಕಳು ಆಲೋಚಿಸುವ ರೀತಿಯನ್ನು ಬಹುಪಾಲು ಬದುಕಿನಲ್ಲಿ ನೋಡಲು ಸಾಧ್ಯ. ಆದರೆ ಈ ಆಲೋಚನಾ ಕ್ರಮಗಳಾಚೆ ಹೆಣ್ಣು ತನ್ನ ಅಸ್ಮಿತೆಯನ್ನು ಹುಡುಕಿಕೊಂಡು ಅಭಿವ್ಯಕ್ತಿಸಲು ಹೊರಟ ಮಾಧ್ಯಮವೇ ಅವಳ ಭಾಷೆ.

ಈ ಭಾಷೆಯಲ್ಲಿ ಮೌನ, ಹಠ, ಸ್ವಾಭಿಮಾನ, ಛಲ, ನಿಟ್ಟುಸಿರು, ಕಣ್ಣೀರು, ಸಿಟ್ಟು, ಸಂತಾಪ ಗಳೆಂಬ ಅಕ್ಷರಗಳಿವೆ. ಇಂತಹ ಅನೇಕ ಅಕ್ಷರಗಳಿಂದ ಜೋಡಿಸಿದ ಶಬ್ದಗಳು ಅವಳ ಭಾಷೆಯಲ್ಲಿ ಆಕಾರ ತಳೆದು ಮಾತನಾಡುತ್ತವೆ. ಅದನ್ನು ಅವನಿಗೆ ಕೇಳಿಸಬೇಕೆಂಬ ಹಠದಲ್ಲಿ, ಪ್ರಯತ್ನದಲ್ಲಿ ಸೋತು ಸುಣ್ಣಾಗುತ್ತಾಳೆ, ಕೆಲವು ಬಾರಿ ಗೆಲ್ಲುತ್ತಾಳೆ. ಗೆದ್ದ ಕ್ಷಣಗಳನ್ನು ಹಿಡಿಯುವ ಸಂಭ್ರಮ ಇಂದಿನ ಈ ಪ್ರಬಂಧದ ಉದ್ದೇಶ. ಆದರೆ ಸೋತ ಅನುಭವದ ಕ್ಷಣಗಳು ಇಲ್ಲಿವೆ, ಅವನಿಗೆ ಅವಳ ಮಾತು ಎಷ್ಟೋ ಬಾರಿ ಕೇಳುವುದಿಲ್ಲ, ಅವ ಅವಳ ಕಡೆ ನೋಡುವುದೇ ಇಲ್ಲ ಹಾಗಿದ್ದರೂ ಅವನ ಸರ್ಟಿಪಿಕೆಟ ಆದರೂ ತನಗೇಕೆ ಎನ್ನುತ್ತಲೇ ಅವಳು ಮಾತಡುತ್ತಾ ಹೋದಳು. ಅವಳ ಭಾಷೆ ಬದಲಾಗುತ್ತಾ, ಬೆಳೆಯುತ್ತಾ, ಸ್ವೀಕರಣದಿಂದ ಉಬ್ಬುತ್ತ, ಹಿಗ್ಗುತ್ತಾ ಸಾಗುತ್ತಲೆ ಇದೆ. ಈ ನದಿಯ ಏರು, ಇಳುವು, ನುಲಿತ, ಹರಹುಗಳು ಖಂಡಿತವಾಗಿಯೂ ಪುರುಷ ಭಾಷೆಗಿಂತ ಭಿನ್ನ.

ಹಾಡು ಕೋಗಿಲೆಯ ಭಾಷೆಯಂತೆ

ಪರಿಮಳ ಹೂವಿನ ಭಾಷೆಯಂತೆ

ಬೆಳಕು ಬೆಂಕಿಯ ಭಾಷೆ

ಮರ್ಮರವೆ ಗಾಳಿಯ ಭಾಷೆ

ಹಗಲಿರುಳೆ ಭೂಮಿಯ ಭಾಷೆ

ಬೆಳದಿಂಗಳು ಚಂದಿರನ ಭಾಷೆ (ಪು.೨೭.ದರುಶನ. ಸ. ನಾಗಭೂಷಣ)

ಹಾಗೇಯೇ 'ಆಸೆಯೇ ಬದುಕಿನ ಭಾಷೆ ' (ಸವಿತಾ ನಾಗಭೂಷಣ) ಎಂದವರು ನಮ್ಮ ಕವಿಯತ್ರಿಯರು.

ಮಹಿಳಾ ಕಾವ್ಯದ ಚರಿತ್ರೆಯಲ್ಲಿ ಬೆಳಗೆರೆ ಜಾನಕಮ್ಮ, ಸರಸ್ವತಿ ಗೌಡರ್ ಇವರೆಲ್ಲ ಮೊದಲ ಪುಟದ ನಮ್ಮ ಕವಿಯಿತ್ರಿಯರು. ಲಿಂಗ ತಾರತಮ್ಯದ ನೀತಿಯ ಬಗ್ಗೆ ಅವರ ಪ್ರಶ್ನೆಗಳು ಹುಟ್ಟಿ ಬೆಳೆ ದಿವೆ. ಕಟು ವಾಸ್ತವದ ಬದುಕಿನ ಈ ಪ್ರಶ್ನೆಗಳ ಅಭಿವ್ಯಕ್ತಿಗೆ ಅವರು ಬಳಸಿದ ಭಾಷೆ ಪ್ರಾರ್ಥನೆಯ ರೂಪದಲಿದ್ದ

ಆದರೆ ೭೦ ರ ದಶಕದಲ್ಲಿ ಮಹಿಳಾ ಭಾಷೆ ಪಡೆದ ರೂಪ ಭಿನ್ನವಾದುದು.

ಚ. ಸರ್ವಮಂಗಳ ಅವರ ಬಹಳ ಪ್ರಸಿದ್ಧವಾದ ಕವಿತೆ “ಅವನು ಬಸವ'.ಇಲ್ಲಿಯ ಭಾಷೆಯನ್ನು ಗಮನಿಸಿ.

ಬಸವ ಅಪ್ಪನೊಂದಿಗೆ ಮಾಡುವ

ತೋಟದ ಕೆಲಸ

ಕಮಲ ಅಮ್ಮನೊಂದಿಗೆ ಮಾಡುವಳು

ಅಡಿಗೆ ಕೆಲಸ

ಕಮಲ ಒಲೆ ಊದುವಳು

ಕುಳಿತು

ಬಸವ ಗಿಡಕ್ಕೆ ನೀರು ಹೊಯ್ಯುವ

ನಿಂತು.

ಕಮಲ ಕುಳಿತು ಮಾಡುವುದನ್ನೂ

ನಿಂತು ಮಾಡುವ ಬಸವ

ಬಸವ ಚೆಣ್ಣೆದಾಂಡು ಆಡುವ

ತಲೆ ಎತ್ತೋ ಹುಡುಗ

ಕಮಲ ಕುಂಟೆಬಿಲ್ಲೆ ಆಡುವ

ತಲೆ ತಗೋ ಹುಡುಗಿ

ಬಸವನಿಗೆ ಕೋಡಿದ್ದರೇನು?

ಅರಳಿದ ಕಮಲಗಳ ಮುಂದೆ ಜಿನುಗಿ

ಸೋರುವುದಿಲ್ಲವೇ ಬಿಗುಮಾನ ? (ಪು. ೧೧. ಅಮ್ಮನಗುಡ್ಡ)

ಇಲ್ಲಿಯ ಸರಳ ನೇರ ಅಭಿವ್ಯಕ್ತಿ ಕವಿತೆಯ ಆಶಯವನ್ನು ಪೂರ್ಣ ಮಟ್ಟದಲ್ಲಿ ಸಂವಹನ ಮಾಡುತ್ತದೆ. ಆಶಯಕ್ಕೂ ಅಭಿವ್ಯಕ್ತಿಗೂ ಅನನ್ಯ ಸಂಬಂಧ ಇವರ ಭಾಷೆಯ ವಿಶೇಷ .

ಹೆಣ್ಣು ಮಕ್ಕಳ ಆಸೆಗಳನ್ನು ಕಟುವಾಸ್ತವ ಜಗತ್ತು ತಡೆದು ನಿಲ್ಲಿಸಿದ ಸಂದರ್ಭಗಳಲ್ಲಿ ಮಹಿಳೆಯರು ಯಾಕೆ ಹೀಗೆ ಎಂದು ಕೇಳುತ್ತಾ ಹೋದರು. ಚಿಂತನೆಯ ಜಾಡಿಗೆ ಪ್ರಶ್ನೆಗಳು ಜಾರಿದ ಸಂದರ್ಭದಲ್ಲಿ ಭಾಷೆಗೊಂದು ಮೊನಚು ಸಿಕ್ಕಿತು. ಅಂತಹ ಸಂದರ್ಭಗಳಲ್ಲಿ ಸವಿತಾ ನಾಗಭೂಷಣ 'ಲೋಕದಲ್ಲಿ ಪುಟ್ಟಿದ ಬಳಿಕ' ಕವಿತೆಯಲ್ಲಿ ಹೀಗೆನ್ನುತ್ತಾರೆ.



ಸೀರೆಸುತ್ತಿಕೊಳ್ಳುವಾಗ ದ್ರೌಪದಿ

ಉಂಗುರ ಎತ್ತಿಕೊಳ್ಳುವಾಗ ಶಕುಂತಲೆ

ಒಲೆ ಹೊತ್ತಿಕೊಳ್ಳುವಾಗ ಸೀತೆ

ಯಾಕೆ ? ಯಾಕೆ ? ನೆನಪಾಗಬೇಕು

ಕೆರೆಯ ಏರಿಯ ಮೇಲೆ ಭಾಗೀರಥಿ

ಎಡವಿದ ಕಲ್ಲುಗಳಲಿ ಒಬ್ಬೊಬ್ಬಳೂ ಮಹಾಸತಿ

ಯಾಕೆ, ಯಾಕೆ ಕಾಣಬೇಕು ?

..............

ನಡುವೆ ಸುಳಿವಾತ್ಮ

ಗಂಡೂ ಅಲ್ಲ, ಹೆಣ್ಣೂ ಅಲ್ಲ

ಯಾವುದಕ್ಕು ಪ್ರಮಾಣಿಸಿ ನೋಡಬೇಕು

ಮೊಲೆ, ಮುಡಿ, ಉಡಿ

ಹೊತ್ತು ತಿರುಗಿದಮೇಲೆ ಅನಿಸಿದ್ದು

ಕಷ್ಟ ಕಳೆಯಬೇಕು.

(ದರುಶನ, ಸವಿತಾ ನಾಗಭೂಷಣ)

ಅವಳ ಭಾಷೆಯಲ್ಲಿ ಸೀರೆ, ಉಂಗುರ, ಒಲೆ, ಏರಿ, ಕಲ್ಲುಗಳು ನಿರ್ಜೀವ ವಸ್ತುಗಳೆ ? ದೌಪದಿ, ಶಕುಂತಲೆ, ಸೀತೆ, ಭಾಗೀರಥಿಯರು ಕೇವಲ ಪುರಾಣ ಪಾತ್ರಗಳ ? ಶಬ್ದಗಳಿಗೆ ಜೀವ ತುಂಬುವ ಶಕ್ತಿ ಪ್ರತಿಭಾವಂತ ಕವಿಗಳಿಗೆ ಸಾದ್ಯ ನಮ್ಮ ಕವಿಯತ್ರಿಯರು ಇತಿಹಾಸ, ಪುರಾಣ, ಜನಪದಗಳನ್ನೆಲ್ಲ ಮರು ಮೌಲ್ಯ ಮಾಪನ ಮಾಡಿ ವರ್ತಮಾನಕ್ಕೆ ತಂದಿದ್ದಾರೆ. ಆಗ ಅವರ ಭಾಷೆಯಲ್ಲಿ 'ಅಮೃತಮತಿಯ ಸ್ವಗತಗಳು' (ಎಚ್ .ಎಲ್. ಪುಷ್ಪಾ) ಕೇಳಿ ಬರುತ್ತವೆ. 'ಕರುಣಾಳು ರಾಘವನಲ್ಲಿ ತಪ್ಪಿಲ್ಲ'

ಎನ್ನುವ ವಿನ್ನಿ ಮಾಂಡಲ ಪ್ರತಿಭಾ ನಂದಕುಮಾರರ ಧ್ವನಿಯಾಗುತ್ತಾಳೆ.

ಊರಿಳೆ ಹಸಿರು ಹಾವಾಗಿ ವಿನಯಾರಲ್ಲಿ ಕಾಣಿಸಿಕೊಳ್ಳುತ್ತಾಳೆ.

ಭಂಡ ಗಂಡನಿಗೆ ಬೇಸರಿಸಿದ

ನೀನೊಮ್ಮೆ ಉಟ್ಟು ಎಸೆದ ಸೀರೆಯನ್ನೇ ಎಷ್ಟೋಂದು ಸಡಗರದಿ,

ಸುತ್ತಿಕೊಂಡಿದ್ದೇನೆ ಬಲ್ಲೆಯಾ ಎಂದು ಅಕ್ಕನಲ್ಲಿ ಪ್ರೇಮ ತಾಶಿಲ್ದಾರ ಕೇಳುತ್ತಾರೆ.

ಅಕ್ಕನದಂತು ದೊಡ್ಡ ಆಕರ್ಷಣೆ. ನಮ್ಮ ಕವಯತ್ರಿಯರಿಗೆ

ಇವರ ಕಾವ್ಯಗಳಲ್ಲಿ ವಿಷ್ಣು ಕೃಷ್ಣ, ಬ್ರಹ್ಮ ಇವರು ಬಹಳ ಭೇಟಿಯಾಗದಿದ್ದರೂ ಶಿವನನ್ನಂತು ಬಹಳ ಚಂದವಾಗಿ ಹಿಡಿದಿಟ್ಟಿದ್ದಾರೆ ನಮ್ಮ ನಾರಿಯರು.

ವೈದೇಹಿ ಅವರು 'ಶಿವನ ಮೀಸುವ ಹಾಡು' ಕವಿತೆಯಲ್ಲಿ ಗೌರಿ ಶಿವನನ್ನು ಶುಭ್ರ ಸ್ನಾನಕ್ಕೆ ಕರೆದೊಯ್ಯುವಾಗ ಮುಗಿಯಿತೇ ಬೇಟೆ ? ಎಂದು ಮೂಜಗದಲ್ಲಿ ಅಡ್ಡಾಡುವ ಗಂಡನನ್ನು ಚುಚ್ಚುತ್ತ ಕಂಬನಿ ತುಂಬುತ್ತಾಳೆ. ಕಂಬನಿಯ ಬಿಸಿಗೆ ಶಿವ ಬೆಚ್ಚಿದಾಗ ನನ್ನನೇನೆಂದುಕೊಂಡೆ ? ನಿನ್ನ ಬಿಟ್ಟರೆ ಶುದ್ಧ ಬೈರಾಗಿ ಎಂದ ಮಾತಿಗೆ 'ಶಿವನೆ

ನಾನೆಷ್ಟನೆಯ ನಾರಿ ಎನ್ನುತ್ತಾಳೆ ? ಆದ್ರ್ಯ ಗರ್ವದ ಹುಡುಗಿ ಗೌರಿ, 'ಜಾತ್ರೆ ಯಲ್ಲಿ ಕಂಡ ಶಿವ'ನ ಚಿತ್ರ ಸವಿತಾ ನಾಗಭೂಷಣ ಅವರದು.

ಹಾಗೆಯೇ ಕೆ, ಷರೀಫರ 'ತಾಜ್‌ಮಹಲ್', ಸುಕನ್ಯ ಮಾರುತಿಯವರ 'ಗುಂಭಗಳು ಶೈಲಜಾ ಉಡಚಣ ಅವರ' ಇಬ್ರಾಹಿಮ್ ರೋಜಾ', ಕವಿತೆಗಳಲ್ಲಿ ಐತಿಹಾಸಿಕ ಕಟ್ಟಡಗಳು ವರ್ತಮಾನದ ಭಾವನೆಗಳ ಬೆಳಕಿನಲ್ಲಿ ತೊಯ್ದಿಸಿಕೊಳ್ಳುತ್ತವೆ.

ಇತಿಹಾಸ ಪುರಾಣಗಳು ಅವಳ ಭಾಷೆಯಲ್ಲಿ ವಿಭಿನ್ನ ಸ್ವರಗಳನ್ನು ಹೊರಡಿಸುತ್ತವೆ.

ಐತಿಹಾಸಿಕ ಸ್ಮಾರಕಗಳು ಮತ್ತು ಇಮಾನತ್‌ಗಳು ಮಹಿಳಾ ಕಾವ್ಯದಲ್ಲಿ ಮರುಸಂಕಥನ ಗೊಳ್ಳುತ್ತವೆ ಎಂದು ರಾಮಲಿಂಗಪ್ಪ ಬೇಗೂರರು ಸರಿಯಾಗಿಯೇ ಗುರಿತಿಸಿದ್ದಾರೆ.

ಇಲ್ಲಿಯ ನೇರ ಸರಳ ನಿರೂಪಣೆಯ ಭಾಷೆ ಗಮನಾರ್ಹ.

ಅಕ್ಕ, ಗೌರಿ, ದೌಪದಿ, ಸೀತೆ, ಶಕುಂತಲೆ, ಊರ್ಮಿಳೆಯರ ಮುಖಾಂತರ ನಮ್ಮ ಮಹಿಳಾ ಕಾವ್ಯ ಜನಸಾಮಾನ್ಯನ ಬಳಿ ಸಾಗಿದೆ. ಈ ಭಾಷೆ ನಮ್ಮ ಹೆಮ್ಮೆಯಾಗಿದೆ.

ಅಡುಗೆ ಮನೆಯೇ ಪ್ರಪಂಚ, ಅಡುಗೆಯೇ ಸರ್ವಸ್ವ, ಅಡುಗೆ ಮನೆಯ ಸಾಹಿತ್ಯ ಎಂದವರಿಗೆ ಅಡುಗೆಮನೆಯ ಪರಿಭಾಷೆ ಎಷ್ಟು ಶಕ್ತವಾದುದು ಎಂಬುದನ್ನು ಅಭಿವ್ಯಕ್ತಿಸಿ ತೋರಿಸಿದವರು ನಾರಿಯರು. ನಾರಿಯರು ರೂಪಿಸಿದ ಈ ಕಾವ್ಯ ಮಿಮಾಂಸೆ, ಬದುಕಿನ ಮಿಮಾಂಸೆಯು ಹೌದು. ಈ ಸಂದರ್ಭದಲ್ಲಿ ಇಂಗ್ಲೀಷ್-ವಿಂಗ್ಲೀಷ್ ಸಿನಿಮಾವನ್ನು ನೆನಪಿಸ ಬಯಸುತ್ತೇನೆ. ನಮ್ಮ ಎಲ್ಲರ ಮನೆಯಲ್ಲೂ ಇಂತಹ ಶ್ರೀದೇವಿಯರು ಇದ್ದಾರೆ. ಬದುಕು ಪ್ರಾಮಾಣಿಕವಾದಾಗ, ಭಾವನೆ ತೀವ್ರವಾದಾಗ ಭಾಷೆ ಹರಳು ಗಟ್ಟುತ್ತದೆ. ಬದುಕೇ ಭಾಷೆಯಾಗುತ್ತದೆ. ವೈದೇಹಿಯವರು ತಿಳಿಸಾರು ಎಂಬ ಕವನದಲ್ಲಿ ನನಗೆ ಪದ್ಯ ಬರೆಯಲು ಬರುವುದಿಲ್ಲ ಆದರೆ ತಿಳಿಸಾರು ಮಾಡುವುದು ಗೊತ್ತು ಎಂದು ಸೆಡ್ಡು ಹೊಡೆಯುತ್ತಾರೆ. ದಿನಗಳೆರೆಡನ್ನೂ ದಾಟಿಯೂ ಚೂರು ಮುಕ್ಕಾಗದೆ, ಹಳಸದೆ, ಗಮಾಡಿಸುವ ತಿಳಿಸಾರಿನ ಹದ ಕಾವ್ಯದ ಹದಕ್ಕಿಂತ ಭಿನ್ನವಲ್ಲ ಎಂಬ ಸಾರ್ವತಿಕ ಸತ್ಯದ ಅರಿವು ಇಲ್ಲಿದೆ.

'ಹಿದಕವರೆ' ಕವಿತೆಯಲ್ಲಿ ಲಲಿತ ಸಿದ್ದಬಸವಯ್ಯ ನವರ ಆಶಯವೂ ಬದುಕಿನ ಮಿಮಾಂಸೆ ಯಾಗಿದೆ. ಗ್ಯಾಸ್, ಸ್ಟವ್, ಪಾತ್ರೆ, ಕುಕ್ಕರ್ ಗಳು ಬದಲಾದರೂ ಅದರೊಳಗಿನ ಕಾವು, ಯಾವತ್ತಿಗು ಉರಿಯುತ್ತಿದೆ ಎನ್ನುವ ಕವಿತಾ ರೈ, 'ಕೋಸಂಬರಿ'ಯಲ್ಲಿ ಬದುಕನ್ನು ಹಿಡಿದಿಟ್ಟ ಚಂದ್ರಮತಿ ಸೋಂದ, ರೂಪ ಹಾಸನ್ ರವರ 'ವಿಸ್ಮಯ' ಕವಿತೆಗಳಲ್ಲಿ ಅಡುಗೆ ಮನೆಯ ಒಳಗೆ ಇಡೀ ಬದುಕೇ ಹಿಡಿದಿಡಲಾಗಿದೆ. ಈ ಅಡುಗೆ ಮನೆಯ ಕಾವ್ಯ ಮಿಮಾಂಸೆ ಗಂಡಸಿಗೆಲ್ಲಿ ಬರಬೇಕು ? ಇಂತಹ ಅಡುಗೆಮನೆಯಲ್ಲೇ ತನ್ನ

ಬಹುಪಾಲು ಆಯುಷ್ಯ ಕಳೆದ, ಕಳೆಯುತ್ತಿರುವ ಹೆಣ್ಣುಗಳಿಗೆ ಅಲ್ಲೊಂದು ಬೆಳಕಿನ ಕೋಲಿನ ಮೂಲಕ ಇಳಿದ ಭಾಷೆಯೊಂದು ಕಂಡುಬರುತ್ತದೆ.

ಪ್ರತಿಭಾ ನಂದಕುಮಾರ ಅವರು 'ಅಡುಗೆ ಮಾಡುತ್ತೇನೆ ೨' ಎಂಬ ಕವಿತೆಯಲ್ಲಿ ಅಡುಗೆ ಮಾಡುವುದೆಂದರೆ ಬಹಳ ಇಷ್ಟನನಗೆ

ಹೊರದಾರಿ ಅದು ನನ್ನೆಲ್ಲ ಆಕ್ರೋಶಗಳಿಗೆ ತೊಳೆದು ಸಿಪ್ಪೆಸುಲಿದು, ಕತ್ತರಿಸಿ, ಜಜ್ಜಿ, ಕುಟ್ಟಿ, ಹುರಿದು, ಅರೆದು, ರುಬ್ಬಿ, ನುರಿದು, ಬಾಡಿಸಿ,

ಬೇಯಿಸಿ, ಹಿಚಕಿ, ಮಸೆದು, ಕೊಟ್ಟಿ, ಕಲಸಿ,

ಗಸಗಸನೆ ಕಡೆದು, ಎತ್ತಿಹಾಕಿದರೆ ತಟ್ಟೆಗೆ

ರುಚಿ ರುಚಿ ಅಂತ ತಿನ್ನುತ್ತಾರೆ.!

(ಮುನ್ನುಡಿ- ಬೆನ್ನುಡಿಗಳ ನಡುವೆ ಪುಟ ೪೪೯)

ಈ ಭಾಷೆಯಲ್ಲಿ ನೋಡಿ ೧೫ ಕ್ರಿಯಾಪದಗಳನ್ನು ಒಂದು ವಾಕ್ಯದಲ್ಲಿ ಪೋಣಿಸಿದ ಬಗೆ ಅನನ್ಯ. ಇಲ್ಲಿ ಒಂದು ಕಡೆ ಸಾಂಪ್ರದಾಯಿಕ ಅಡುಗೆಯ ಮೀಮಾಂಸೆ ಇದ್ದರೆ ಇನ್ನೊಂದು ಕಡೆ ೨೧ ನೇ ಶತಮಾನದ ಬದುಕಿನ ಮೀಮಾಂಸೆಯು ಅಡುಗೆ ಮನೆಯ ರೂಪದಲ್ಲಿ ಕಂಡ ಈ ಬಗೆಯಂತೂ ಇದುವರೆಗೂ ಎಲ್ಲೂ ದಾಖಲಾಗದ್ದು

ಗ್ಯಾಸ, ಕುಕ್ಕರ, ಮಿಕ್ಸರ್, ಡ್ರೈಂಡರ್, ಟೋಸ್ಟರ್, ಗ್ರೇಟರ್, ಹೀಟರ್,

ಪೀಲರ್, ವಾಷರ್, ಗೃಹಿಣಿಯೇ ಪ್ರಧಾನ ಕಂಸ್ಯೂಮರ್. ನಿನ್ನೆ

ಅಂಗಡಿಯಲ್ಲಿ ಇಂದು ಮನೆಯಲ್ಲಿ ನಾಳೆ?

ಕ್ಲಿದ್ದುರೈಸ್, ದಾಲು, ಪ್ಯಾಕ್ ಮಾಡಿದ ಎಲ್ಲ ಪುಡಿ ಸಿಡಿ ಹಿಟ್ಟು ಪಟ್ಟು ಬೆಂದ

ಬೇಯಿಸಿದ, ಹುರಿದ, ಕರಿದ, ಕುಟ್ಟಿದ ನೂರೆಂಟು ಪ್ಯಾಕೆಟ್

ಎಲ್ಲಾ ಇನ್ಸಸ್ಟೆಂಟ್ ನೀರು ಬೇರೆಸಿದರೆ ಸಾಕು, ಬರೀ ಬಿಸಿ ಮಾಡಿದರೆ ಸಾಕು

ಬರೀ ಕತ್ತರಿಸಿದರೆ ಸಾಕು, ಸುಮ್ಮನೆ ತಿಂದರೆ ಸಾಕು.

೧೦ ನಾಮಪದಗಳ ಒಂದು ವಾಕ್ಯದಲ್ಲಿ ಜಾಗತೀಕರಣದ ದೊಡ್ಡ ಮೀಮಾಂಸೆಯನ್ನೇ ಪ್ರತಿಭಾ ಬಿಚ್ಚಿಟ್ಟಿದ್ದಾರೆ. ಅಡುಗೆ ಮನೆಯೆಂಬುದು ಮನೆಯ ಒಂದು ಭಾಗ ಅಲ್ಲ ಜಗತ್ತೇ ಅಡುಗೆ ಮನೆಯಾಗಿದೆ. ಈ ಭಾಷೆ ನಮ್ಮ ನಾರಿಯರದು

ಹೆಚ್ಚು ಮಕ್ಕಳು ತಮ್ಮ ಕಾವ್ಯಗಳಲ್ಲಿ ಇನ್ನೊಂದು ವಿಶೇಷ ಭಾಷೆಯನ್ನು ಬಳಸುತ್ತಾರೆ. ಅದು ಎಲ್ಲರಿಗೂ ಮುಟ್ಟುವ, ತಟ್ಟವ ಐಂದ್ರಿಕ ಅನುಭವದ ದೇಹಭಾಷೆ. ಈ ಭಾಷೆಯನ್ನು ಬಳಸುವಲ್ಲಿ ನಮ್ಮ ಅಕ್ಕ ಮೊದಲಿಗಳು. ತನ್ನ ಚನ್ನಮಲ್ಲಿ ಕಾರ್ಜುನನೊಂದಗಿನ ಸಂಬಂಧವನ್ನು ಹೇಳುವಾಗ ತನ್ನ ಚನ್ನ ಅಪ್ಪಿದರೆ 'ಅಸ್ಥಿಗಳು ನುಗ್ಗುನುಗ್ಗಾಗಬೇಕು' ಎಂದು ಬಯಸುತ್ತಾಳೆ. ನಮ್ಮ ಹೊಸಗನ್ನಡ ಮಹಿಳಾ ಕಾವ್ಯಗಳಲ್ಲೂ ಅಂತಹ ಅಪರೂಪದ ಕ್ಷಣಗಳು ಇವೆ. ಮೊಲೆ, ಮುಡಿ, ಉಡಿ, ಗಳು ಮಾತನಾಡುತ್ತವೆ.



ನಿನ್ನ ಒಳ್ಳೆಯತನವನ್ನು ಟಂಕಿಸಲು ನನ್ನ ಒಡಲನ್ನೇ ಆಯ್ಕೆಮಾಡಿಕೊಂಡ ದೇವನಿಗೆ ಲಲಿತಾ ಸಿದ್ದಬಸವಯ್ಯಾ 'ಧನ್ಯವಾದಗಳನ್ನು' [ಕಬ್ಬೆನೆಲ] ಹೇಳುತ್ತಾರೆ. ಅಮೇರಿಕಾ ನಮ್ಮ ಮೇಲೆ ಮಾಡುವ ದಾಳಿಯನ್ನು ಹೇಳುವಾಗ [ವಿನಯಾ ಹೀಗೆನ್ನುತ್ತಾರೆ.]

ಅಮೇರಿಕಾಕ್ಕೆ ದೇಹಗಳ ಮೇಲೆ ದ್ವೇಷವಿಲ್ಲ

ಅದರ ತಕಲಾರಿರುವುದೆಲ್ಲ ಮೆದುಳಿನ ಮೇಲೆ

ಅಮೇರಿಕಾ ನಾಜೂಕು ಶಸ್ತ್ರಕ್ರಿಯೆ ನಡೆಸಿ

ಗರ್ಭಕೋಶ ಗರ್ಭನಾಳ ಎಲ್ಲ ಹಾಗೆ ಬಿಟ್ಟು

ಎರಡು ಟಿಬ್ಬಿಗಳಲ್ಲಿ ಸಂತಾನಹರಣ ಶಸ್ತ್ರಕ್ರಿಯೆ

ನಡೆಯುತ್ತದಲ್ಲ ಹಾಗೆ ಸಲೀಸು~ ಎಂದಿದ್ದಾರೆ ವಿನಯ

"ಅರ್ಧನಾರೀಶ್ವರ" - ಎಂದು ಕ್ರೇಡಿಟ್ ತೆಗೆದುಕೊಳ್ಳುವ ಗಂಡಿಗೆ ಪ್ರತಿಭಾ ಹೇಳುತ್ತಾರೆ.

ನಾಚಿಕೆಯಾಗಬೇಕು ಜೀವಕ್ಕೆ

ಅರ್ಧ ಕ್ರೆಡಿಟ್ ತೆಗೆದುಕೊಳ್ಳುವುದಕ್ಕೆ

ಹೆಣ್ಣನದ ಸೂಚನೆಯ ಒಂದು ಸ್ತನ ಧರಿಸಿಬಿಟ್ಟರೆ ಆಯಿತೇ ಲಿಂಗಕ್ಕೆ

ಅರೆ ಬಸಿರು ತಡೆಯಬಹುದೇ ಪೂರ್ಣ ಗರ್ಭದ ಹೊರೆ

ಇಡೀ ದೇಹವೇ ತಡೆಯಲಾಗದು

ಪಾರ್ಶ್ವಕ್ಕೆ ಸಾಕೇ ಪ್ರಣಯ ಬೇಗೆ ?

ದೇಹವೆಂಬುದು ಬರೀ ವೈಚಾರಿಕತೆಯ ಸೂಚಕವಷ್ಟೇ ಅಲ್ಲ ವಾಸ್ತವಿಕತೆಯ ಬಿಸಿಯಲ್ಲಿ ಹರಳುಗಟ್ಟುತ್ತದೆ. ಲಲಿತಾಸಿದ್ಧಬಸವಯ್ಯ [೨೦೦೪-ಕಬ್ಬೆನೆಲ] 'ನಿಯತ್ತು ಕವಿತೆಯಲ್ಲಿ ಹಸಿದ ಒಡಲಿನ ಹಸಿ ಹಸಿಯಾದ ಚಿತ್ರವನ್ನು ಕೆತ್ತಿದ್ದಾರೆ.

ಇತತ ಜರುಗಬ್ಯಾಡ, ಮಗು ಮಲಗೈತೆ

ಅತ್ತೂ ಅತ್ತೂ ಈಗಿನ್ನ ಹಂಗೆ ಕಣ್ಣು ಮುಚ್ಚೆತೆ

ತೋ, ಬಿಡುಎದೆ, ನಂದಿನ್ನಾ ಕುಡಿಯೋ ಮಗು

ಕಿರುಚಬ್ಯಾಡ, ಬೇಕಾದ್ರಿರು, ಬ್ಯಾಡ್ದಿದ್ರೆ ಎದ್ದೋಗು

ಏನೆಂದೆ, ಉಪಾಸ ಬೀಳೀಯೇ ಬೋಸುಡಿ ಅಂದಾ

ಹೊಸದಲ್ಲ. ಕಂಡಿದ್ದೀನಿ ಹೋಗು ಹುಟ್ಟಿದಾಗಿನಿಂದ

ಜಂಬೂ ಸವಾರಿ ತೋರಿಸ್ತಾರ, ನಿನ್ನಿಪ್ಪತ್ತು ರೂಪಾಯ

ಹಾಲಿನ ಪುಡಿ ಅರ್ಧಡಬ್ಬ ಬರಲ್ಲ ನನ್ನ ಮಗೀಗೆ......

ಹಸಿದ ಒಡಲ, 'ಹಸಿವು' ಎಂಬ ಸತ್ಯದ ಅನಾವರಣಕ್ಕೆ ಬಳಸಿದ ಈ ಭಾಷೆ ಭಾವ ಸಂವಹನಕ್ಕೆ ಸಮರ್ಥವಾಗಿದೆ. ದೇಹದ ಭಾಷೆಯನ್ನು ಮಹಿಳಾ ಕಾವ್ಯದಲ್ಲಿ ವಾಸ್ತವತೆಯ ನಿಜದ ಅಭಿವ್ಯಕ್ತಿಗೆ ವೈಚಾರಿಕತೆಯ ನೆಲೆಗೆ ಜೊತೆಗೆ ಭಾವಲೋಕದ ಸೌಂದರ್ಯದ ಅಭಿವ್ಯಕ್ತಿಗೂ ಸಮರ್ಥವಾಗಿ ಬಳಸಬಲ್ಲವರು ನಮ್ಮ ನಾರಿಯರು.

ಪ್ರೇಮದಂತಹ ಸುಕೋಮಲ ಭಾವದ ಅಭಿವ್ಯಕ್ತಿಗೆ ಮುಕ್ತಾಯಕ್ಕನವರು ಬಳಸಿದ ಭಾಷೆ ಮತ್ತೆ ಮತ್ತೆ ಮೆಲುಕು ಹಾಕುವಂತಹದು ಉದಾರಹರಣೆಗೆ

೧] ನನ್ನ ಕಣ್ಣ ಕಪ್ಪಿನಿಂದಲೇ

ಕವನ ಬರೆಯವೆನೆಂದು

ನಿನ್ನ ಕಣ್ಣನ್ನು ನನ್ನ ಕಣ್ಣಲ್ಲಿ ನೆಟ್ಟಾಗ

ಪ್ರತಿಬಿಂಬ ಪ್ರತಿಬಿಂಬ ಕಂಡಾಗ

ಕವನವಂತೂ ಎಲ್ಲೋ ಜಾರಿ ಹೋಗಿ

ಕಾಡಿಗೆ ಮಾತ್ರ ತುಂಟನೆಗೆ ನಕ್ಕಿತು .

೨] ಮೊದಲ ಬಾರಿಗೆ ನಿನ್ನ ಮುತ್ತುಗಳು ಮೌನವಾಗಿ ನನ್ನ

ಮೈತುಂಬ ಹೆಸರ ಬರೆಯುವಾಗ

ಆ ನಿಶ್ಯಬ್ಧತೆಯಲ್ಲಿ ಮೌನವೂ

ಹಾಡತೊಡಗಿತ್ತು

[ನಾನು ಮತ್ತು ಅವನು ಪುಟ -೪೨]

ಇತ್ತೀಚೀನ ಮಹಿಳಾ ಕಾವ್ಯದ ಬೆಳವಣಿಗೆಯನ್ನು ಗುರುತಿಸುವಾಗ ಬಿ.ಎನ್. ಸುಮಿತ್ರಾ ಬಾಯಿಯವರು ದೇಸೀ ಸ್ತ್ರೀ ಸಂಸ್ಕೃತಿಯ ಸ್ವಂತ ಪರಂಪರೆಯ ಹುಡುಕಾಟದ ಕಡೆಗೆ ಸಾಗಿದೆ ಎನ್ನುತ್ತಾರೆ. ಅಮ್ಮ ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಮಹಿಳಾ ಕಾವ್ಯದಲ್ಲಿ ಗುರುತಿಸಿಬಹುದೆನ್ನುತ್ತಾರೆ. ಅದಕ್ಕೆ ಸೇರ್ಪಡೆಯಾಗಿ ಇನ್ನೊಂದು ಮಾತು .

ಒಂದು ಕಾಲಕ್ಕೆ 'ಅಮ್ಮ ಅಜ್ಜಿಯರು' ಪರಂಪರೆಯ ಬಿಗಿ ಹಿಡಿತದ ಸಂಕೇತಗಳು “ಅಮ್ಮ ಜಾಗ ಬಿಡೆ ನಾನು ಮುಂದೋಗಬೇಕು' ಎಂದರು ನಮ್ಮ ಕವಿಗಳು “ಅಮ್ಮಾ ಸಾಕು ಮಾಡಿ ನಿನ್ನ ಪುರಾಣ ಆಲದ ಮರದ ನೆರಳಲ್ಲಿ ಬೆಳೆದು ಮಾಸಿದ ಗೋಡೆಗಳ ನಡುವೆ ಬಚ್ಚಿಡಬೇಕೆ ನನ್ನದೆಯ ಗೂಡು' ಎಂದವರು ಈಗ ಗೋದತ್ತೆಯ ಬದುಕಿನ ಕ್ರಮವನ್ನು ಅರ್ಥೈಸಿಕೊಳ್ಳುತ್ತಾ ಹೊರಟಿದ್ದಾರೆ . [ಗೋದತ್ತೆ ಮತ್ತು ಬೆಳ್ಳಿ ನಾಣ್ಯ - ಸರ್ವಮಂಗಳ]

ಬದುಕು ಬಗೆಯಬಾರದು ಮಗಳೇ ಅದರ

ಒಳಹೋಗಬೇಕು, ಬಗೆದರೇನೆ ಇಬ್ಭಾಗ ಅಷ್ಟೆ,

ಬತ್ತಿ ಹೊಸಯುತ್ತಲೇ ಹೆಣೆದುಕೊಳ್ಳುತ್ತಿದ್ದ ಅಜ್ಜಿಯನ್ನು ತಿಳಿವಿಗೆ ತರುತ್ತಿದ್ದಾರೆ.

ಶಶಿಕಲಾ ವೀರಯ್ಯಾ ಸ್ವಾಮಿಯವರ 'ಆಹ್ವಾನ' ಕವಿತೆಯು ಹೆಣ್ಣಿನ ಮಹತ್ವ ಎಲ್ಲ ಕಾಲಕ್ಕೂ ನಿಲ್ಲಬಲ್ಲುದೆಂಬ ಸತ್ಯದ ಕಡೆ ಇದೆ. ಬದುಕಿನ ಎಲ್ಲ ಕಷ್ಟಗಳಿಗೂ ಎದೆಯೊಡ್ಡಿ ಎಲ್ಲ ರೂಪಾಂರತಗಳು ಗಟ್ಟಿಯಾದ ಆಕಾರವಾಗಿ ಮತ್ತೆ ಮತ್ತೆ ನೀರುಣಿಸುವ ಹೆಣ್ಣಿನ ಶಕ್ತಿಯನ್ನು ಗೌರವಿಸಿದ್ದಾರೆ.

ಕೊಡುವ ನೀಡುವ ಸಲುಹುವ ಕಾಪಾಡುವ ಶಕ್ತಿಗಳು ಹೆಣ್ಣಿನ ಗುಣಗಳೆಂದು ಅವು ದೌರ್ಬಲ್ಯಕ್ಕೆ ದಾರಿ ಎಂದು ತಿರಸ್ಕಾರಕ್ಕೆ ಒಳಗಾಗಿದ್ದು, ಬದಲಾಗಿ ಈಗ ಅದೇ



ಸಾಮರಸ್ಯದ ಸುಂದರ ಬದುಕಿಗೆ ಬೇಕಾದ ಶಕ್ತಿಯೆನ್ನುವುದರ ಕಡೆ ಮಹಿಳಾ ಕಾವ್ಯ ಚಲಿಸುತ್ತಿದೆ. ಇದರೊಳಗೆ ಮಹಿಳೆಯರು ತಮ್ಮ ಅಸ್ಮಿತೆಗಾಗಿ ಪ್ರಯತ್ನಿಸುತ್ತಿದ್ದಾರೆ. ಮಹಿಳೆಯರ ಗ್ರಹಿಕೆ, ಓದು, ಬರಹಗಳನ್ನು ಸಮಾಜ ಸಂಸ್ಕೃತಿಗಳು ಎಷ್ಟೇ ಅವ್ಯಕ್ತವಾಗಿ ನಿಯಂತ್ರಿಸಿದರೂ ತನ್ನ "ಸ್ಪೇಸ" ನ್ನು ಆಕೆ ಹುಡುಕಿ ಕೊಳ್ಳುತ್ತಿದ್ದಾಳೆ. ಹುಡುಕಿ ಗೆದ್ದು ತನ್ನ ವ್ಯಾನಿಟಿ ಬ್ಯಾಗಿನಲ್ಲಿ ಕಾಪಿಟ್ಟಿದ್ದಾಳೆ. ಮತ್ತು ಜೋರಾಗಿ ವೈದೇಹಿಯತೆ ಹೇಳಬಲ್ಲಳು. "ಇಣುಕಬಾರದು ಚೀಲದೊಳಗನು" ಕಾಪುರುಷರೆ ವ್ಯಾನಿಟಿಬ್ಯಾಗಿನಲ್ಲಿ ಇಣುಕಿದಾಗ ನಿಮಗೆ ಸಿಗುವುದು ಒಣಗಿದ ಹೂದಳ, ವಿಳಾಸವಿಲ್ಲದ ಲಕೋಟೆ, ಹುಣಸಿಪಿಕ್ಕೆ, ನವಿಲುಗರಿ, ದಾರದ ಹುಂಡೆ ಮುಂತಾದವು. ಇವುಗಳೊಂದಿಗೆ ಮಾತನಾಡಿದರೆ ನಿಮಗೆ ಇವು ತಿಳಿಯುವುದೇ ಇಲ್ಲ ಅವೇ ನಮ್ಮ ಬದುಕಿನ ಅಪೂರ್ವ ಕ್ಷಣಗಳು- ಎಂದು ಮಹಿಳೆ ಉಪಮೆ ರೂಪಕಗಳಾಚೆ ನಿಂತು ಆಸ್ಮಿತೆಯನ್ನು ಪ್ರತಿಷ್ಠಾಪಿಸುತ್ತಿದ್ದಾಳೆ. ಜೊತೆಗೆ ಆ ದಾರಿ ನನ್ನದು, ನೀವು ಬರುವುದಾದರೆ ಬನ್ನಿ ಎಂದು ಧೈರ್ಯ, ಸ್ಥೈರ್ಯದ ಭಾಷೆಯಲ್ಲಿ ಹೇಮಾ ಪಟ್ಟಣಶೆಟ್ಟಿಯವರ "ಆಹ್ವಾನ' ಕವಿತೆಯಂತೆ ಆಹ್ವಾನ ನೀಡುತ್ತಾಳೆ.

ನನ್ನ ಭಾಷೆಗೆ ನಿನಗ ತಿಳಿಯುತ್ತಿಲ್ಲ ಎಂದು ನೊಂದವಳು

ನನಗೆ ಆಕಾರವಿಲ್ಲ

ನಿನಗೆ ನೋಟವಿಲ್ಲ

ಕಾಣಿಸುವುದು ಹೇಗೆ?

ನನಗೆ ಭಾಷೆಯಿಲ್ಲ

ನಿನಗೆ ಕಿವಿಯಿಲ್ಲ

ಮಾತಾಡುವುದು ಹೇಗೆ? ಎಂದವರು ಈಗ ತಮ್ಮ ಭಾಷೆಯನ್ನು ಕಟ್ಟಿಕೊಂಡಿದ್ದಾರೆ. ಅದು ಬೆಳೆಯುತ್ತಲೇ ಇದೆ ಬೆಳದು ನಿಂತು ಮಾಗಿದ ಅವರ ಬದುಕಿನ ಅನುಭವದಂತೆ ಭಾಷೆಯು ಸುಪುಷ್ಟವಾಗುತ್ತಿದೆ. ಇಂದಿನ ತಾಂತ್ರಿಕ ಜಗತ್ತನ್ನು ತನ್ನೊಳಗಾಗಿಸಿಕೊಂಡು ಬದುಕಿನ ಆಶಯಕ್ಕೆ ಪೂರಕವಾಗಿ ಭಾಷೆಯನ್ನು ಬೆಳೆಸಿಕೊಂಡಿದ್ದಾರೆ. ಮಹತ್ವದ ಕವಿತೆಯೊಂದನ್ನು ಉಲ್ಲೇಖಿಸುತ್ತ ಮಹಿಳಾ ಕಾವ್ಯ ಸಾಧಿಸಿದ ಯಶಸ್ಸನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಸಾರ್ಥಕ ಸಂಬಂಧಗಳಲ್ಲ ಇರುವುದು ಸಾರ್ಥಕ ಘಳಿಗೆಗಳು ಎಂಬ ಸತ್ಯದ ಅರಿವು ಇಲ್ಲಿದೆ ಎಂಬ ಹೆಚ್.ಎಸ್. ಆರ್. ಮುನ್ನುಡಿಯಲ್ಲಿ ಗುರುತಿಸಿರುವ ಈ ಪದ್ಯದ ಮೋಬೈಲ್ ಭಾಷೆಯನ್ನು ಗಮನಿಸಿ.

ಈ ಮಾರ್ಗವು ಚಾಲನೆಯಲ್ಲಿಲ್ಲ

ಸದಾ ತೆರವಾಗಿದ್ದ ಮಾರ್ಗದಲ್ಲಿ ಅಡೆ ತಡೆ

ಈಗ ಮಾರ್ಗವು ಕಾರ ನಿರತವಾಗಿದೆ.

ದಯವಿಟ್ಟು ಸ್ವಲ್ಪ ಸಮಯದ ನಂತರ ಪ್ರಯತ್ನಿಸಿ

ಸ್ವಲ್ಪ ಸಮಯದ ನಂತರ ಪ್ರಯತ್ನಿಸಿದರೆ

ಮಾರ್ಗವು ಸಧ್ಯಕ್ಕೆ ಸೇವೆಯಲ್ಲಿರುತ್ತಿರಲಿಲ್ಲ

................................................................

ಹಾಗೆ ಸದಾ ಸೇವೆಯಲ್ಲಿರುವ ಬಗ್ಗೆ

ನಮ್ಮ ನಡುವೆ ಕರಾರೇನೂ ಆಗಿರಲಿಲ್ಲ - ಎನ್ನುತ್ತಾರೆ ಪ್ರತಿಭ ಇದನ್ನು ಕರಾರುಗಳಿಲ್ಲದ ಸಾಮಾಜಿಕವಾಗಿ ಒಪ್ಪಿತವೋ ಪ್ರಶ್ನಾವೋ ಆಗಿರಬಹುದಾದ ಸಂಬಂಧವೊಂದು, ಬದುಕನ್ನು ಬೆಳಗಿದ, ಅರಸಿದ ಘಳಿಗೆಯೇ ಅಂತಿಮವಾಗಿ ಪ್ರತಿಭಾಷೆ ಮುಖ್ಯ ಎನ್ನುತ್ತಾರೆ. ಎಂ.ಎಸ್. ಆಶಾದೇವಿ, ನನಗಿಲ್ಲ ಮುಖ್ಯವಾಗಿದ್ದು, “ಆಶಯ ಮತ್ತು ಅಭಿವ್ಯಕ್ತಿ” ಎರಡರ ಅವಿಭಾವವದ ಸಂಬಂಧ ಮೊಬೈಲ್ ಭಾಷೆಯಲ್ಲಿ ಒಡಮೂಡಿದ ಬಗೆಯಲ್ಲಿ.

# ವಿಜ್ಞಾನದಲ್ಲಿ ಮಹಿಳೆ

- ಗೀತಾ ಮಂಜ

೧. ವಿಜ್ಞಾನ ಎಂದರೇನು?

೨. ತಂತ್ರಜ್ಞಾನ ಎಂದರೇನು?

೩. ಸಾಮಾನ್ಯ ಮಹಿಳೆಯರಲ್ಲಿ ಸಾಮಾನ್ಯ ವಿಜ್ಞಾನ.

೪. ವಿಜ್ಞಾನದ ಪ್ರಗತಿಯ ಹಾದಿಯಲ್ಲಿ ಮಹಿಳೆಯರ ಗಮನಾರ್ಹ ಪ್ರವೇಶ.

೫. ಇಂದು ವಿಜ್ಞಾನದ ಕ್ಷೇತ್ರದಲ್ಲಿ ಮಹಿಳೆಯರು ಎದುರಿಸುವ ಸಮಸ್ಯೆಗಳು,

೬. ವಿಜ್ಞಾನದ ಕ್ಷೇತ್ರಕ್ಕೆ ಹೊಸ ಆವಿಷ್ಕಾರಗಳನ್ನು ನೀಡಿದ ಶ್ರೇಷ್ಠ ಮಹಿಳೆಯರು. (ಅಂತಾರಾಷ್ಟ್ರೀಯ ಮತ್ತು ಭಾರತೀಯ)

೭ ಮಹಿಳೆಯರನ್ನು ಪ್ರೋತ್ಸಾಹಿಸಲು ವಿಜ್ಞಾನ - ತಂತ್ರಜ್ಞಾನದ ಕ್ಷೇತ್ರದಲ್ಲಿ ಲಭ್ಯವಿರುವ ಕೆಲವು ವಿಶೇಷ ಸವಲತ್ತುಗಳು.

೧. ವಿಜ್ಞಾನದಲ್ಲಿ ಮಹಿಳೆ (ಪ್ರಸ್ತಾವನೆ)

(ನಾವು ಭಗವಂತನನ್ನು ಸ್ಮರಿಸುವಾಗ 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ, ನೀ ದೇಹದೊಳಗೊ ನಿನ್ನೊಳು ದೇಹವೋ' ಎಂದು ಅಚ್ಚರಿ ವ್ಯಕ್ತಪಡಿಸುತ್ತೇವೆ. ಹೀಗೆಯೇ 'ವಿಜ್ಞಾನದಲ್ಲಿ ಮಹಿಳೆ' ಎನ್ನುವಾಗ, 'ವಿಜ್ಞಾನದಲ್ಲಿ ಮಹಿಳೆಯೇ, ಮಹಿಳೆಯಲ್ಲೇ ವಿಜ್ಞಾನವಿದೆಯೋ' ಎಂಬ ಸೂಕ್ಷ್ಮ ಸಂಶಯ ಉದ್ಭವಿಸುತ್ತದೆ.)

ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಮಿಂಚುತ್ತಿದ್ದಾರೆ. ವೈದ್ಯೆಯರು, ಇಂಜಿನಿಯರುಗಳು, ವಕೀಲರು, ಅಧ್ಯಾಪಿಕೆಯರು, ಔದ್ಯೋಗಿಕ- ವ್ಯವಹಾರಿಗಳು, ಮಾಧ್ಯಮ-ವರದಿಗಾರ್ತಿಯರು, ರಾಜಕಾರಿಣಿಯರು, ವೈಜ್ಞಾನಿಕೆಯರು - ಹೀಗೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ಸಲ್ಲಿಸುತ್ತಾ ದೇಶವನ್ನು ಮುನ್ನಡೆಸುವ ಕ್ಷಮತೆಯನ್ನು ಸಾಧಿಸಿ ತೋರಿಸುತ್ತಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲೂ ಸರಿಸಮಾನರಾಗಿ ನಮ್ಮ ದೇಶವನ್ನು ಪ್ರತಿನಿಧಿಸುತ್ತಿದ್ದಾರೆ. ವಿಶೇಷವಾಗಿ, ಜ್ಞಾನವಂತ ಮಹಿಳೆಯರು ಒಂದು ಸುದೃಢ ದೇಶವನ್ನು ಅಭಿವೃದ್ಧಿ ಪಡಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಾರೆ. ಏಕೆಂದರೆ ಅವರ ಚಿಂತನೆಗಳು, ದೇಶದ ಸಮಸ್ಯೆಗಳನ್ನು ಅಭಿವೃದ್ಧಿ ಪಡಿಸುವಲ್ಲಿ

ಮಹತ್ತರ ಪಾತ್ರವನ್ನು ವಹಿಸುತ್ತವೆ. ಅವರ ಚಿಂತನೆಗಳು, ದೇಶದ ಸಮಸ್ಯೆಗಳನ್ನು ಅರಿತುಕೊಳ್ಳುವ ದೃಷ್ಟಿಕೋನ, ಕೆಲಸ ಮಾಡುವ ಕ್ರಮಬದ್ಧತೆ, ಕೈಗೊಳ್ಳುವ ಮಹತ್ವಯುತವಾದ ರಚನಾತ್ಮಕ ಕ್ರಮಗಳು ಇವೆಲ್ಲವೂ ಅವರ ಸಂಸಾರ, ಸಮಾಜ ಹಾಗೂ ದೇಶವನ್ನು ವೇಗವಾಗಿ ಅಭಿವೃದ್ಧಿಯ ಕಡೆಗೆ ಕೊಂಡೊಯ್ಯುತ್ತವೆ. ಹೀಗಾಗಿ ಮಹಿಳೆಗೆ ಜೀವನದ ಮುನ್ನಡೆಯಲ್ಲಿ ದೇಶವನ್ನು ಅಭಿವೃದ್ಧಿಗೊಳಿಸುವ ಅಪಾರ ಅವಕಾಶಗಳು ಕಾದುಕೊಂಡಿರುತ್ತವೆ. ಅವುಗಳಲ್ಲಿ ಒಂದು ವಿಜ್ಞಾನದ ಕ್ಷೇತ್ರ

೧. ವಿಜ್ಞಾನ ಎಂದರೇನು?

ಸರಳವಾಗಿ ಉತ್ತರಿಸುವುದಾದರೆ, ಪ್ರಕೃತಿಯಲ್ಲಿ ಅಡಗಿರುವ ಸತ್ಯವನ್ನು ಅರಿಯುವುದೇ ವಿಜ್ಞಾನ, ಪ್ರಕೃತಿಯಲ್ಲಿ ರಹಸ್ಯವಾಗಿರುವ ಸಜೀವ ಹಾಗೂ ನಿರ್ಜಿವ ತತ್ವಗಳ ಬಗ್ಗೆ ಜ್ಞಾನವನ್ನು ಹೊಂದುವ ವ್ಯವಸ್ಥಿತ ವಿಧಾನವೇ ವಿಜ್ಞಾನ, ಈ ವ್ಯವಸ್ಥಿತ ವಿಧಾನದಲ್ಲಿ ಅನುಸರಿಸುವ ಮಾರ್ಗಗಳು ಹಾಗೂ ಲಭ್ಯವಾಗುವ ಫಲಿತಾಂಶವು, ವಿಜ್ಞಾನವು ಬೆಳೆಯಲು ಸಹಕಾರಿಯಾಗುವ ಅಂಶಗಳಾಗಿವೆ. ಯಾವುದೇ ಒಂದು ತತ್ವದ ರಹಸ್ಯವು ಪರೀಕ್ಷೆ, ಪ್ರಯೋಗ, ಶೋಧನೆಗೆ ಒಳಗಾದ ನಂತರವೇ ನಿಷ್ಕರ್ಷೆಯ ರೂಪದಲ್ಲಿ ಹೊರ ಬೀಳುತ್ತದೆ. ವಿಜ್ಞಾನವು ವಿಶಾಲ ವೃಕ್ಷವಿದ್ದಂತೆ. ಇದರ ಶಾಖೆಗಳು ಅಸಂಖ್ಯಾತ, ಖಗೋಳ ಶಾಸ್ತ್ರ, ಭೌತ ಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಶಾಸ್ತ್ರ, ಭೂ ವಿಜ್ಞಾನ, ಜಲ ವಿಜ್ಞಾನ, ಜೀವವಿಜ್ಞಾನ, ಸಸ್ಯ ವಿಜ್ಞಾನ ಇತ್ಯಾದಿಗಳು, ಇನ್ನೂ ಇವೆಲ್ಲವುಗಳಿಗೆ ಉಪಶಾಖೆಗಳು ಇನ್ನಷ್ಟು ಇದ್ದು, ವಿಜ್ಞಾನ ಎಂಬುದು ಜ್ಞಾನದ ನಿಘಂಟೇ ಆಗಿದೆ. ಆದರೆ, ಇವೆಲ್ಲವುದರ ಮೂಲ ಮಾತ್ರ ಪಂಚತತ್ವಗಳ ಮೇಲೆ, ಆಧಾರಿತವಾಗಿರುವ ಪ್ರಕೃತಿಯೇ ಆಗಿದೆ.

೨. ತಂತ್ರಜ್ಞಾನ ಎಂದರೇನು?

ತಮ್ಮ ಪರಿಸರವನ್ನು ಸುಗಮಗೊಳಿಸಲು, ಮಾನವರು ವಿಜ್ಞಾನದ ಮೂಲಕ ಅಳವಡಿಸಿಕೊಳ್ಳುವ ವಿವಿಧ ಉಪಕರಣ ಹಾಗೂ ಯಂತ್ರ ಸಾಧನಗಳನ್ನು ಯಶಸ್ವಿಯಾಗಿ ಉಪಯೋಗಿಸಲು ಅಗತ್ಯವಿರುವ ಜ್ಞಾನವು ತಂತ್ರಜ್ಞಾನದಲ್ಲಿ ಅಡಕವಾಗಿದೆ. ಇದು ಆಧುನಿಕತೆಯ ಜೊತೆಗಿನ ಸಂಧಾನದ ಪ್ರತಿಬಿಂಬವೆನ್ನಬಹುದು. ತಂತ್ರಜ್ಞಾನ ನಮ್ಮ ಜೀವನವು ಸುಲಭ ಹಾಗೂ ಆರಾಮದಾಯಕವಾಗಿರಲು ಅನೇಕ ರೀತಿಯ ಉಪಕರಣಗಳನ್ನು ಯಂತ್ರ ವ್ಯವಸ್ಥೆಗಳನ್ನು ಕೊಡುಗೆಯಾಗಿ ನೀಡಿದೆ. ನಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಅನೇಕ ರೀತಿಯ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತೇವೆ. ಇದರಿಂದಾಗಿ ಸಂಪರ್ಕ ಸಾಧನಗಳು ಅಭಿವೃದ್ಧಿ ಹೊಂದಿವೆ. ತಂತ್ರಜ್ಞಾನವು ಉತ್ತಮ ದರ್ಜೆಯ ಹಾಗೂ ಅಧಿಕ ಪ್ರಮಾಣದ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಲು ಸಹಕಾರಿಯಾಗಿದೆ. ತಂತ್ರಜ್ಞಾನದ ಫಲಸ್ವರೂಪದಿಂದಾಗಿ ನಾವು ಹೆಚ್ಚು ಆರಾಮದಾಯಕ

ಹಾಗೂ ಅಧಿಕ ವೇಗವಾಗಿ ಪ್ರಯಾಣಿಸಿ, ಗುರಿ ತಲುಪಬಹುದಾಗಿದೆ. ಅಲ್ಲದೆ, ವಿವಿಧ ಆಕಾರಗಳಲ್ಲಿ, ಸುಂದರ ಹಾಗೂ ಸುವಿಧಾಪೂರ್ಣ ಕಟ್ಟಡಗಳನ್ನು ಕಡಿಮೆ ವೆಚ್ಚದಲ್ಲಿ ನಿರ್ಮಿಸಬಹುದಾಗಿದೆ. ತಂತ್ರಜ್ಞಾನವನ್ನು, ವಿಶ್ವವಿದ್ಯಾಲಯಗಳಲ್ಲಿ ಬೋಧನೆಯ ಮೂಲಕ, ಪ್ರಯೋಗಗಳನ್ನು ಶಾಲೆಗಳಲ್ಲಿ ವಿವಿಧ ಪರೀಕ್ಷೆಗಳ ಮೂಲಕ ಹಾಗೂ ಕಂಪನಿಗಳಲ್ಲಿ ನಿರ್ದಿಷ್ಟ ವಸ್ತುವಿನ ತಯಾರಿಕೆಯ ಮೂಲಕ ಉಪಯೋಗಕ್ಕೆ ಬಿಡುಗಡೆ ಮಾಡಲಾಗುತ್ತದೆ. ವಿಜ್ಞಾನ ಹಾಗೂ ತಂತ್ರಜ್ಞಾನ ಒಂದರ ಬೆಳವಣಿಗೆ ಇನ್ನೊಂದು ಪೂರಕ. ಇವುಗಳ ಸಮನ್ವಯದಿಂದಾಗಿ ನಾವು ಇಂದು ಬಾಹ್ಯಾಕಾಶವನ್ನು ಅಭ್ಯಸಿಸುವುದು ಸಾಧ್ಯವಾಗಿದೆ. ಪ್ರನಾಳಿಕಾ ಶಿಶುವನ್ನು ಸೃಷ್ಟಿಸಲು ಸಾಧ್ಯವಾಗಿದೆ. ಕಂಪ್ಯೂಟರ್ ಯುಗವನ್ನು ಸ್ಥಾಪಿಸಲು ಸಾಧ್ಯವಾಗಿದೆ.

೩. ಸಾಮಾನ್ಯ ಮಹಿಳೆಯರಲ್ಲಿ ಸಾಮಾನ್ಯ ವಿಜ್ಞಾನ

ಸಾಮಾನ್ಯ ಮಹಿಳೆಯರಲ್ಲಿ ಸಾಮಾನ್ಯ ವಿಜ್ಞಾನದ ಜ್ಞಾನವು ಕಾಲಕ್ಕೆ ತಕ್ಕಂತೆ ಬದಲಾದುದು ಕಂಡುಬರುತ್ತದೆ. ವಿಜ್ಞಾನದಲ್ಲಿ ಮಹಿಳೆಯನ್ನು ಗುರುತಿಸುವಾಗ, ಪ್ರಕೃತಿಯಲ್ಲಿರುವ ವಿಜ್ಞಾನವನ್ನು ಮೊದಲು ಭೇದಿಸಲು ಪ್ರಾರಂಭಿಸಿದ್ದು, ಮುಂದೆ ತಂತ್ರಜ್ಞಾನವನ್ನು ಅಳವಡಿಸಲು ಪ್ರಾರಂಭಿಸಿದ್ದು, ಮಹಿಳೆಯರೇ ಇರಬಹುದು ಎಂದೆನಿಸುವುದು ಸಹಜ. “ಅವಶ್ಯಕತೆಯು ಅನ್ವೇಷಣೆಯ ತಾಯಿಯಾಗಿದೆ” ಎಂಬ ಆಂಗ್ಲ ಗಾದೆಯಂತೆ ದೈನಂದಿನ ಚಟುವಟಿಕೆಗಳಿಗೆ ಬೇಕಾಗುವ ಅವಶ್ಯಕತೆಗಳ ಲೋಪವು ಮಹಿಳೆಯರಿಗೆ ಮೊದಲು ಕಂಡು ಬರುತ್ತದೆ. ಪರಿಣಾಮವಾಗಿ ಸುಲಭ ಸಾಧನಗಳ ಅನ್ವೇಷಣೆಯನ್ನು ಆಕೆಯೇ ಕೈಗೊಳ್ಳುತ್ತಾಳೆ. 'ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು' ಎಂಬಂತೆ ಮನೆಯಲ್ಲೇ ಮೊದಲನೆಯ ಪ್ರಯೋಗಶಾಲೆ ತೆರೆದುಕೊಳ್ಳುತ್ತದೆ. ಅದೂ ಅಡುಗೆ ಮನೆಯಿಂದಲೇ, ತಿನ್ನುವ ಆಹಾರದೊಂದಿಗೆ ಕುಡಿಯುವ ಪಾನೀಯದೊಂದಿಗೆ ವೈಜ್ಞಾನಿಕ ಅನ್ವೇಷಣೆ ಪ್ರಾರಂಭವಾಗುತ್ತದೆ ಎಂದರೂ ತಪ್ಪಾಗದು. ಏಕೆಂದರೆ ಆಹಾರ ಎನ್ನುವುದು ನಮ್ಮ ಮೂಲಭೂತ ಅವಶ್ಯಕತೆಗಳಲ್ಲಿ ಒಂದು.

ಸಾಮಾನ್ಯ ಮಹಿಳೆಯರು ಅದರಲ್ಲೂ ಗೃಹಿಣಿಯರು ತಮ್ಮ ಮನೆಯಲ್ಲಿ ತಯಾರಿಸುವ ಅಡುಗೆಯಲ್ಲಿ ಬಳಸುವ ಪರಿಕರಗಳ ಗುಣ-ಸ್ವಾದ-ಸತ್ವಗಳ ಬಗ್ಗೆ ಜ್ಞಾನವನ್ನು ಹೊಂದಿರುತ್ತಾರೆ. ಏಕೆಂದರೆ ಈ ಬಗ್ಗೆ ಅವರು ಸಂಶೋಧನೆಯನ್ನು ನಡೆಸಿ, ನಿಷ್ಕರ್ಷೆಯನ್ನೂ ಮಾಡಿರುತ್ತಾರೆ. ಉದಾಹರಣೆಗೆ ಬಾಳೇಕಾಯಿ, ಆಲೂಗಡ್ಡೆ, ಗೆಣಸಿನಂತಹ ತರಕಾರಿಗಳ ಗುಣದ ಬಗ್ಗೆ, ಹುಣಿಸೆ ಹಣ್ಣು, ಲಿಂಬೆ ಹಣ್ಣು, ಖರ್ಜೂರ, ಹಾಗಲಕಾಯಿಗಳ ಸ್ವಾದದ ಬಗ್ಗೆ, ಬ್ರಾಹ್ಮಿ, ಅಗಸೆ, ಕರಿಬೇವು, ಮೆಂತೆ ಸೊಪ್ಪು, ಕೊತ್ತಂಬರಿಯಂತಹ ತನ್ನ ಹಿತ್ತಲಲ್ಲೇ ಬೆಳೆದ ಸೊಪ್ಪು - ತರಕಾರಿಗಳ ಸತ್ವದ ಬಗ್ಗೆ

-

ಸಂಪೂರ್ಣ ಜ್ಞಾನ ಅವರಲ್ಲಿರುತ್ತದೆ. ಶುಂಠಿ, ಕರಿಮೆಣಸು, ಜೀರಿಗೆ, ಇಂಗು, ಹಳದಿ ಮುಂತಾದ ಮಸಾಲೆಗಳ ಔಷಧೀಯ ಗುಣಗಳ ಬಗ್ಗೆಯೂ ಸಾಕಷ್ಟು ಜ್ಞಾನವನ್ನು ಹೊಂದಿರುತ್ತಾರೆ. ದಿನ ಬಳಕೆಯ ಲೋಹಗಳ ರಾಸಾಯನಿಕ ಗುಣಗಳ ಒಂದು ಮಂಜೂಷವೇ ಅವರಲ್ಲಿರುತ್ತದೆ. ಕಬ್ಬಿಣದ ಆಯುಧಗಳಿಗೆ ಎಣ್ಣೆ ಪದರು ಸವರಿ ತುಕ್ಕು ಹಿಡಿಯುವುದನ್ನು ತಪ್ಪಿಸುವ ವಿಧಾನ, ತಾಮ್ರದ ಪಾತ್ರೆಯಲ್ಲಿ ಮುನ್ನಾದಿನ ತುಂಬಿಟ್ಟ ನೀರನ್ನು ಮರುದಿನ ಮುಂಜಾನೆ ಆರೋಗ್ಯ ಲಾಭಕ್ಕಾಗಿ ಕುಡಿಯುವ ಕ್ರಮ, ಹಿತ್ತಾಳೆಯ, ತಾಮ್ರದ ಪಾತ್ರೆಗಳನ್ನು ಹುಳಿ ಹಾಕಿ ತೊಳೆದರೆ ಬೆಳಗುವುದೆಂಬ ತತ್ವ ಯಾವ ಮಹಿಳೆಗೆ ತಾನೆ ತಿಳಿದಿಲ್ಲ!

ಧಾನ್ಯ ಅರೆದು ಹಿಟ್ಟೋ ತರಿಯೋ ಮಾಡುವ ಬೀಸುವ ಕಲ್ಲಿನ ತತ್ವ, ಬಟ್ಟೆ ಹೊಲಿಯುವ ಯಂತ್ರದ ಚಕ್ರದ ತಂತ್ರ, ಮಕ್ಕಳಿಗೆ ಆಟವಾಡಲು ತಯಾರಿಸುವ ಗಾಳೀ ಪಟದ ಹಿಂದಿರುವ ಭೌತಶಾಸ್ತ್ರದ ವಿಜ್ಞಾನ ತಿಳಿಯದಿರುವ ಮಹಿಳೆಯರೇ ಇಲ್ಲವೆನ್ನಬಹುದು. ಉಪ್ಪು ಅಥವಾ ಸಕ್ಕರೆಯ ದ್ರಾವಣದಲ್ಲಿ ನಿರ್ದಿಷ್ಟ ಹಣ್ಣು ತರಕಾರಿಗಳನ್ನು ಕೆಡದಂತೆ ಕಾಯ್ದಿರಿಸುವುದು, ಉಪ್ಪಿನಕಾಯಿ ತಯಾರಿಸಿಡುವುದು, ಧಾನ್ಯಗಳ ಹಿಟ್ಟು, ತರಕಾರಿಗಳಿಂದ ಹಪ್ಪಳ, ಸಂಡಿಗೆ ಒಣಗಿಸಿ, ತೇವಾಂಶ ತಾಗದಂತೆ ಬಂದೋಬಸ್ತ್ ಮಾಡಿ ಮುಚ್ಚಿಡುವುದು, ಹಣ್ಣುಗಳ ರಸದಿಂದ ವಿವಿಧ ಪಾನೀಯಗಳನ್ನು ತಯಾರಿಸಿ ಇಡುವಂತಹ ತಂತ್ರಜ್ಞಾನವು ಸಾಮಾನ್ಯ ಮಹಿಳೆಯರಿಗೆ ಕರತಲಾಮಲಕ, ಇದೇ ತಂತ್ರಜ್ಞಾನವು ವಿಕಸಿತಗೊಂಡು ಇಂದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯಲು ಕಾರಣವಾಗಿದೆ. ಅಲ್ಲದೆ ಲಕ್ಷಾಂತರ ಕಾರ್ಮಿಕರಿಗೆ ನೌಕರಿ ಒದಗಿಸಿದ ಸಂಪನ್ಮೂಲವಾಗಿದೆ. ಇದು ಮಹಿಳೆಯ ಅನುಭವದ ಸಂಶೋಧನೆ. ಇದಕ್ಕೆ ಆಕೆಗೆ ಯಾವುದೋ ಪದವಿಗಳಾಗಲೀ ಡಾಕ್ಟರೇಟ್ ಆಗಲೀ ಬೇಕಾಗಿರುವುದಿಲ್ಲ, ಆದಿಕಾಲದಿಂದ ಆಧುನಿಕ ಕಾಲದವರೆಗೂ ಸಂಶೋಧನೆಯು ಮಹಿಳೆಯ ಜೊತೆಯಲ್ಲೇ ಮುಂದುವರಿದಿದೆ. ಜ್ಞಾನವು ಮಹಿಳೆಯರಿಗೆ ಪ್ರಕೃತಿದತ್ತವಾದುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಇಂತಹ ಜ್ಞಾನವು ಮಹಿಳೆಯರಲ್ಲಿ ಮಾತ್ರ ಕಾಣಸಿಗುವುದು. ಪುರುಷರಲ್ಲಿ ಕಡಿಮೆ ಎನ್ನಬಹುದು, ವಿಶೇಷತೆಯೆಂದರೆ ಕಾಲ ಬದಲಾದಂತೆ, ಆಧುನಿಕತೆಯ ಜೊತೆಯಲ್ಲಿ ತನ್ನ ಸಂಶೋಧನೆಯಲ್ಲೂ ಪ್ರಗತಿಯನ್ನು ತಂದುಕೊಂಡ ಮಹಿಳೆ ಯಾವುದೇ ಕ್ಷೇತ್ರವೂ ಉಳಿಯದಂತೆ ವಿಶಾಲವಾಗಿ ಅಭಿವೃದ್ಧಿ ಹೊಂದಿದ್ದಾಳೆ.

೪. ವಿಜ್ಞಾನದ ಪ್ರಗತಿಯ ಹಾದಿಯಲ್ಲಿ ಮಹಿಳೆಯ ಗಮನಾರ್ಹ ಪ್ರವೇಶ

ನಾಗರಿಕತೆಯ ಪ್ರಾರಂಭಿಕ ಕಾಲದಲ್ಲಿ ಮುಸುಕಿನ ಒಳಗೇ ಇದ್ದ ವಿಜ್ಞಾನವು ಆಧುನಿಕ ಕಾಲದಲ್ಲಿ ತಂತ್ರಜ್ಞಾನದಿಂದಾಗಿ ಗಮನಾರ್ಹ ಪ್ರಗತಿಯನ್ನು ಕಂಡಿತು. ಧಾತು

ಶಾಸ್ತ್ರ, ಕೃಷಿ, ಸಮುದ್ರಯಾನ ಹಾಗೂ ಇತರ ಸಂಪರ್ಕ ಸಾಧನ ಕ್ಷೇತ್ರದಲ್ಲಿ ಪ್ರಯೋಗಾತ್ಮಕ ಮುನ್ನಡೆ ಸಾಧಿಸಿತು. ಖಗೋಳ ಶಾಸ್ತ್ರದಲ್ಲಿ ಸಂಶೋಧನೆಗಳೂ ನಡೆದು, ವರ್ಷ, ೧೨ ತಿಂಗಳು, ವಾರ, ೭ ದಿನ, ೨೪ ಗಂಟೆ, ನಿಮಿಷ, ಸೆಕೆಂಡುಗಳ ವಿಭಜನೆಯನ್ನು ಸೃಷ್ಟಿಸಲಾಯಿತು. ಚಲಿಸುವ ಚಕ್ರಗಳು, ಕಂಚಿನ ಹಾಳೆಗಳು, ಅದುರಿನಿಂದ ಕಬ್ಬಿಣವನ್ನು ತೆಗೆಯುವ ವಿಧಾನಗಳು ಹುಟ್ಟು ಕಂಡರೆ, ಅಕ್ಷರಮಾಲೆಯ ಉದಯವೂ ತಂತ್ರಜ್ಞಾನಕ್ಕೆ ಇನ್ನೊಂದು ಮೆಟ್ಟಿಲಾಯಿತು, ಇವಿಷ್ಟೂ ಸಂಶೋಧನೆಗಳು ಕ್ರಿ.ಪೂ. ೩೦೦೦ ದಿಂದ ಕ್ರಿ.ಪೂ. ೧೧೦೦ ರ ನಡುವೆ ನಡೆಯಿತು. ಇಲ್ಲೆಲ್ಲೂ ನಮಗೆ ಮಹಿಳೆಯರ ಹೆಸರು ವಿಜ್ಞಾನದ ಕ್ಷೇತ್ರದಲ್ಲಿ ಕಂಡು ಬರುವುದಿಲ್ಲ. ಭಾರತದ ಉಜ್ಜಯಿನಿಯಲ್ಲಿ ಬ್ರಹ್ಮಗುಪ್ತನು (೫೯೮-೬೭೦) ಶೂನ್ಯವನ್ನು ವಿಜ್ಞಾನ ಲೋಕಕ್ಕೆ ಕೊಡುಗೆಯಾಗಿ ಇತ್ತನು. ಮುಂದೆಯೂ ಒಂದನೆಯ ಶತಮಾನದಿಂದ ಹನ್ನೆರಡನೇ ಶತಮಾನದವರೆಗೆ ಸಂಶೋಧನೆಗಳೇನೋ ಅನೇಕ ನಡೆದು, ತಂತ್ರಜ್ಞಾನವೂ ಸಾಕಷ್ಟು ಬೆಳೆದರೂ ಮಹಿಳೆಯರು ಗಣನೀಯವಾಗಿ ಏನೂ ಮಾಡಲಿಲ್ಲ. ಆದರೆ ಹನ್ನೆರಡನೇ ಶತಮಾನದಿಂದ ಮುಂದೆ ಮಹಿಳೆಯರ ಆಗಮನವಾಗಿ ವಿಶೇಷ ಆವಿಷ್ಕಾರಗಳು ವಿಜ್ಞಾನ ಕ್ಷೇತ್ರಕ್ಕೆ ದೊರೆಯಿತು.

ಹನ್ನೆರಡನೆ ಶತಮಾನದಲ್ಲಿ ಮೊತ್ತಮೊದಲನೆಯದಾಗಿ ಖಗೋಳ ಹಾಗೂ ಗಣಿತ ವಿಜ್ಞಾನ ಪ್ರವೀಣೆ “ಲೀಲಾವತಿ'ಯನ್ನು ಸ್ಮರಿಸಬಹುದು. ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದ ಭಾಸ್ಕರಚಾರ್ಯ (೧೧೧೪-೧೧೮೫) ಎಂಬ ಮೇಧಾವಿ ಗಣಿತಜ್ಞ ಹಾಗೂ ಖಗೋಳ ಶಾಸ್ತ್ರಜ್ಞನ ಮಗಳಾಗಿ ಜನಿಸಿದ ಲೀಲಾವತಿಗೆ ಜಾತಕದಲ್ಲಿ ಮಾಂಗಲ್ಯ ದೋಷವಿರುವುದನ್ನು ಭಾಸ್ಕರಾಚಾರ್ಯ ಕಂಡು ಹಿಡಿದಿದ್ದನು. ಆದುದರಿಂದ ಅದನ್ನು ತಪ್ಪಿಸಿ, ತನ್ನ ಮಗಳು ದೀರ್ಘ ಸುಮಂಗಲಿಯಾಗಿ ಬಾಳಲೆಂದು ಆಕೆಗೆ ಬಾಲ್ಯವಿವಾಹ ಮಾಡಲು ನಿಶ್ಚಿಸಿ, ನಿರ್ದಿಷ್ಟ ದಿನದಲ್ಲಿ ಶುಭ ಮುಹೂರ್ತ ಹುಡುಕಿ, ಮದುವೆ ಮಾಡಲು ಕುಳಿತಿದ್ದನು. ಆತ ಆ ಶುಭ ಮುಹೂರ್ತದ ಘಳಿಗೆ ತಿಳಿಯಲು, ಒಂದು ಪಾತ್ರೆಯಲ್ಲಿ ನೀರಿರಿಸಿ, ಅದರ ಮೇಲೆ ಚಿಕ್ಕ ಲೋಟೆಯನ್ನು ತೇಲಿಬಿಟ್ಟನು. ಆ ಲೋಟೆಯ ತಳದಲ್ಲಿ ಚಿಕ್ಕ ರಂಧ್ರವೊಂದನ್ನು ಕೊರೆದು, ಅದರ ಮೂಲಕ ನೀರು ಕ್ರಮೇಣ ಮೇಲೇರಿ, ನಿಗದಿತ ಮುಹೂರ್ತದಲ್ಲಿ ಆ ಲೋಟೆಯು ಮುಳುಗುವಲ್ಲಿ ತನ್ನ ಮಗಳಿಗೆ ಮಾಂಗಲ್ಯ ಧಾರಣೆಯಾಗುವಂತೆ ವ್ಯವಸ್ಥೆಯನ್ನು ಕಲ್ಪಿಸಿದ್ದನು. ಆದರೆ ದುರದೃಷ್ಟವಶಾತ್, ಮದುವಣಗಿತ್ತಿಯಾಗಿ ಶೃಂಗರಿಸಿಕೊಂಡಿದ್ದ ಎಳೆಯ ಬಾಲೆ ಲೀಲಾವತಿಯು ತನ್ನ ಕುತೂಹಲವನ್ನು ತಾಳಲಾರದೆ ಚಮತ್ಕಾರಿ ವೇಳಾಪಾತ್ರೆಯಲ್ಲಿ ನೀರು ತುಂಬುವುದನ್ನು ನೋಡಲು ಬಗ್ಗಿದಾಗ, ಆಕೆಯ ಆಭರಣದಿಂದ ಒಂದು ಮುತ್ತು ಜಾರಿ, ಲೋಟೆಯೊಳಗೆ ಬಿದ್ದು ರಂಧ್ರವನ್ನು ಮುಚ್ಚಿಬಿಟ್ಟಿತ್ತು. ಇದನ್ನು ಯಾರೂ ಗಮನಿಸದೆ ಹೋದುದರಿಂದ ಶುಭ ಮುಹೂರ್ತದಲ್ಲಿ ಲೋಟೆಯು ಮುಳುಗದೆ ಹೋಯಿತು: ಶುಭಘಳಿಗೆ ಮೀರಿ ಹೋಯಿತು. ತನ್ನ ಮಗಳಿಗೆ ಇನ್ನೆಂದಿಗೂ ಮಾಂಗಲ್ಯ ಯೋಗ ಇಲ್ಲವೆಂದು ತಿಳಿದಿದ್ದ

ಭಾಸ್ಕರಾಚಾರ್ಯನು ಕುಸಿದು ಹೋದನು. ಅತೀವ ನಿರಾಶೆಯನ್ನು ಹೊಂದಿದ್ದ ಆತ, ಮಗಳ ಮನಸ್ಸನ್ನು ವ್ಯಸ್ಥವಾಗಿಡಲು ವಿಜ್ಞಾನದ ಅಭ್ಯಾಸವೇ ಯೋಗ್ಯ ಮಾರ್ಗ ಎಂಬ ಮಹತ್ತರ ತೀರ್ಮಾನ ಕೈಗೊಂಡು ಆಕೆಗೆ ಖಗೋಳ ಶಾಸ್ತ್ರ ಹಾಗೂ ಗಣಿತ ಶಾಸ್ತ್ರವನ್ನು ಬೋಧಿಸತೊಡಗಿದನು. ಸ್ತ್ರೀಯರ ಬಗೆಗಿನ ಆತನ ಈ ನಿಲುವು, ಸ್ತ್ರೀಯರ ಸ್ಥಾನ - ಮಾನಕ್ಕೆ ಹೊಸ ಜಗತ್ತಿನ ಬಾಗಿಲನ್ನು ತೆರೆಯಿತು. ಮುಂದೆ ಲೀಲಾವತಿ ಪ್ರವೀಣೆಯಾಗಿ ೧೧೫೦ನೇ ಇಸವಿಯಲ್ಲಿ ಸಿದ್ಧಾಂತ ಶಿರೋಮಣಿ, ಲೀಲಾವತಿ, ಬೀಜಗಣಿತ, ಗೋಲಾಧ್ಯಾಯ, ಗ್ರಹಗತ ಎಂಬ ೫ ಗ್ರಂಥಗಳನ್ನು ರಚಿಸುವ ತನ್ನ ತಂದೆಯೊಂದಿಗೆ ಮಹತ್ವದ ಪಾತ್ರ ವಹಿಸಿದಳು. ಸಂಸ್ಕೃತದಲ್ಲಿ ಬರೆದಿದ್ದ ಈ ಪುಸ್ತಕಗಳು ೧೮೧೬ರಲ್ಲಿ ಆಂಗ್ಲ ಭಾಷೆಗೆ ತರ್ಜುಮೆಗೊಂಡವು. ಇಲ್ಲಿ ಲೀಲಾವತಿಯು ಜೀವನದ ವೈವಿಧ್ಯತೆಗಾಗಿ ವಿಜ್ಞಾನವನ್ನು ಅಭ್ಯಸಿಸಿದರೂ ಕ್ರಮೇಣ ಅದು ಆಕೆಗೆ ವೃತ್ತಿಯಾದುದನ್ನು ನಾವು ಕಾಣಬಹುದು. ಈ ಉದಾಹರಣೆ ಮುಂದೆ ಅನೇಕ ಉನ್ನತ ಮಟ್ಟದ ಮಹಿಳಾ ವಿಜ್ಞಾನಿಗಳಿಗೆ ಮಾದರಿಯಾಯಿತು.

ಹದಿನೆಂಟು ಹಾಗೂ ಹತ್ತೊಂಬತ್ತನೆಯ ಶತಮಾನದಲ್ಲಿ ಮಹಿಳೆಯರು ವಿಜ್ಞಾನವನ್ನು ವೃತ್ತಿಯಾಗಿ ಆರಿಸಿಕೊಂಡದ್ದು ಕಂಡುಬರುತ್ತದೆ. ಮೇರಿ ಸೂಮರ್‌ವಿಲ್ಲೆ (೧೭೮೦-೧೮೭೨) ಎಂಬಾಕೆ ಯಾವುದೇ ವಿಶ್ವವಿದ್ಯಾಲಯದಲ್ಲಿ ಶಾಕ್ತ ವಿದ್ಯಾಭ್ಯಾಸ ಹೊಂದಿರದಿದ್ದರೂ, ಸ್ವ ಅಧ್ಯಯನದಿಂದ ಖಗೋಳ ಶಾಸ್ತ್ರದ ಕುರಿತು ಆಂಗ್ಲ ಭಾಷೆಯಲ್ಲಿ ಬರೆದ ಪುಸ್ತಕವು ಮುಂದೆ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಯಿತು. ಈಕೆಯ ಪತಿ ಈಕೆಗೆ ಪ್ರೋತ್ಸಾಹವನ್ನು ತುಂಬಿ ಸಹಕರಿಸಿರುವುದೇ ಈಕೆಯ ಯಶಸ್ಸಿಗೆ ಕಾರಣ ಎನ್ನಬಹುದು. ಈ ಮೇಲಿನ ಎರಡೂ ಉದಾಹರಣೆ ಗಳಿಂದ ಕಂಡು ಬರುವುದೇನೆಂದರೆ ಮಹಿಳೆಯನ್ನು ಶೋಷಣೆಗೆ ಒಳಪಡಿಸದೆ ಪ್ರೋತ್ಸಾಹ ನೀಡಿದರೆ ಆಕೆ ಉನ್ನತ ಮಟ್ಟದ ಯಶಸ್ಸನ್ನು ಸಾಧಿಸಬಲ್ಲಳು. ಇದೇ ರೀತಿ ೧೭೮೪ನೇ ಇಸವಿಯಲ್ಲಿ ಫ್ರಾನ್ಸ್‌ನ ಎಲಿಜಬೆತ್ ಥೈಬಲ್ ಎಂಬಾಕೆ ಬಿಸಿ ಗಾಳಿ ತುಂಬಿದ ಬಲೂನಿನಲ್ಲಿ ಹಾರಾಡಿ ದಾಖಲೆ ಸ್ಥಾಪಿಸಿದಳು. ಸೋಫಿಯಾ ಕೊವೆಲೆವ್‌ಸ್ಕಿ (೧೮೫೦-೧೮೯೧) ಎಂಬ ರಷ್ಯಾ ದೇಶದ ಮಹಿಳೆಯು ಸಂಘರ್ಷಪೂರ್ಣವಾಗಿದ್ದ ತನ್ನ ಜೀವನವನ್ನು ಮರೆಯಲು, ಜರ್ಮನಿಯಲ್ಲಿ ಗಣಿತ ಹಾಗೂ ಭೌತಶಾಸ್ತ್ರವನ್ನು ಅಭ್ಯಸಿಸಿ ಮೊತ್ತಮೊದಲ ಮಹಿಳಾ ಪ್ರೊಫೆಸರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಮುಂದೆ ೧೯೧೦ರಲ್ಲಿ ಮೇಡಂ ಥೆರೀಸ್ ಪೆಲ್ಟಿಯರ್ ಎಂಬಾಕೆ ವಿಮಾನದಲ್ಲಿ ಹಾರಾಡಿದ ಮೊದಲ ಮಹಿಳಾ ವಿಜ್ಞಾನಿ ಎನಿಸಿಕೊಂಡರು.

ಹದಿನೇಳು, ಹದಿನೆಂಟು ಹಾಗೂ ಹತ್ತೊಂಬತ್ತನೆಯ ಶತಮಾನಗಳಲ್ಲಿ ಮಹಿಳೆಯರಿಗೆ ಉನ್ನತ ಅಭ್ಯಾಸಕ್ಕಾಗಿ ಇಂದಿನಂತೆ ವಿಶೇಷ ಸೌಲಭ್ಯಗಳಿರಲಿಲ್ಲ.

ಸಂಶೋಧನೆ ನಡೆಸಲು ಈಗಿನಂತೆ ಪ್ರಯೋಗಶಾಲೆಗಳಿರಲಿಲ್ಲ, ಪ್ರೋತ್ಸಾಹವೂ ದೊರೆಯುತ್ತಿರಲಿಲ್ಲ. ಆದರೂ ಮೇರಿ ಸೊಮರ್‌ವಿಲ್ಲೆ, ಸೋಫಿಯಾ ಕೊವೆಲೆವ್‌ಸ್ಕಿ ಯಂತವರು ಬಹಳ ಸಂಘರ್ಷದೊಂದಿಗೆ ತಮ್ಮ ಗುರಿಯನ್ನು ತಲುಪಿದವರು. ಆದರೆ ೨೦ನೆಯ ಶತಮಾನದಲ್ಲಿ ಅನೇಕ ಮಹಿಳಾ ವಿಜ್ಞಾನಿಗಳು ಗಮನಾರ್ಹ ಕೊಡುಗೆಗಳನ್ನು ವಿಜ್ಞಾನ - ತಂತ್ರಜ್ಞಾನ ಕ್ಷೇತ್ರಕ್ಕೆ ನೀಡಿದರು.

೫. ಇಂದು ವಿಜ್ಞಾನದ ಕ್ಷೇತ್ರದಲ್ಲಿ ಮಹಿಳೆಯರು ಎದುರಿಸುವ ಸಮಸ್ಯೆಗಳು

ನಮ್ಮ ದೇಶದಲ್ಲಿ ಮಹಿಳೆಯರ ಜನಸಂಖ್ಯೆ ಒಟ್ಟು ಜನಸಂಖ್ಯೆಯ ಶೇಕಡಾ ೪೮ರಷ್ಟಿದೆ. ಈ ಸಂಖ್ಯೆಗೆ ನಮ್ಮದೇ ದೇಶದಲ್ಲಿರುವ ಮಹಿಳಾ ವಿಜ್ಞಾನಿಗಳ ಸಂಖ್ಯೆಯನ್ನು ಹೋಲಿಸಿದರೆ ಅದು ಅತಿ ಅಲ್ಪ ಪ್ರಮಾಣದ್ದಾಗಿದೆ. ಅಂತೆಯೇ ಉದ್ಯೋಗಸ್ಥ ಮಹಿಳೆಯರ ಸಂಖ್ಯೆಗೂ ವಿಜ್ಞಾನ ಕ್ಷೇತ್ರದಲ್ಲಿರುವ ಮಹಿಳೆಯರ ಸಂಖ್ಯೆಗೂ ಗಮನಾರ್ಹ ಅಂತರವಿದೆ. ಕಾರಣವೇನು? ಮಹಿಳೆ ಸಶಕಳಲ್ಲವೆ?

ಇದಕ್ಕೆ ನಮ್ಮ ಸಮಾಜದ ಚೌಕಟ್ಟು ಮಹಿಳೆಯರನ್ನು ಕೇವಲ ಮಗಳು, ಪತ್ನಿ ಮತ್ತು ತಾಯಿಯ ರೂಪದಲ್ಲಿ ಬಂಧಿಸಿಡಲು ಪ್ರಯತ್ನಿಸಿರುವುದು ಮೊದಲ ಕಾರಣವೆನ್ನಬಹುದು. ಹೆಣ್ಣುಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡದಿರುವುದು, ಆಕೆಯ ಉನ್ನತ ಅಭ್ಯಾಸಕ್ಕೆ ಹಣ ಖರ್ಚು ಮಾಡುವುದು ವ್ಯರ್ಥ ಎಂದು ತಿಳಿಯುವುದು, ಉನ್ನತ ಅಭ್ಯಾಸಕ್ಕೆ ಪ್ರವೇಶವಾಗುವಾಗ ಉತ್ತಮ ಅಂಕಗಳಿದ್ದಾಗ್ಯೂ ಒತ್ತಾಯಪೂರ್ವಕವಾಗಿ ವಾಣಿಜ್ಯ ಶಾಸ್ತ್ರ, ಗೃಹ ವಿಜ್ಞಾನ, ಸಮಾಜ ಶಾಸ್ತ್ರ ಅಥವಾ ಇನ್ನಾವುದೋ ಕಲೆಗೆ ಸಂಬಂಧ ಪಟ್ಟ ಕ್ಷೇತ್ರವನ್ನು ಆಯ್ದುಕೊಳ್ಳುವಂತೆ ನಿರ್ಬಂಧ ಹೇರಿ, ವಿಜ್ಞಾನ ಕ್ಷೇತ್ರವನ್ನು ಅರಿಯುವ ಕುತೂಹಲಕ್ಕೆ ಪ್ರೋತ್ಸಾಹ ನೀಡದಿರುವುದು ಇತರ ಕಾರಣಗಳಾಗಿರುತ್ತವೆ. ಇದಕ್ಕೆ ನೀಡುವ ಕಾರಣ ಕ್ಷುಲ್ಲಕ : 'ವಿಜ್ಞಾನದ ವಿಷಯಗಳನ್ನು ಕಲಿಯಲು ಹೆಚ್ಚು ಸಮಯವನ್ನು ಮೀಸಲಾಗಿಡಬೇಕು. ಇತರ ವಿಷಯಗಳಿಗೆ ಕಡಿಮೆ ಸಮಯ ಸಾಕು'. ಇದು ಹೆಣ್ಣು ಮಕ್ಕಳ ಬಗ್ಗೆ ಇರುವ ಧೋರಣೆ. ಹಾಗಿದ್ದಲ್ಲಿ ಸಮಯ ಉಳಿಸಿ ಆಕೆಯಿಂದ ನಮ್ಮ ಸಮಾಜ ನಿರೀಕ್ಷಿಸುವುದಾದರೂ ಏನು? ಕೇವಲ ಗೃಹವಾರ್ತೆಯ ಕೆಲಸ ಕಾರ್ಯಗಳನ್ನು ನೀಡದೆ, ತನ್ನ ಮಗಳನ್ನು ಪ್ರೋತ್ಸಾಹಿಸಿದ ಭಾಸ್ಕರಾಚಾರ್ಯ ಬಹಳ ಉನ್ನತ ಸ್ಥಾನಕ್ಕೇರುತ್ತಾನೆ.

ನಮ್ಮ ದೇಶದಲ್ಲಿ ೧೯೨೭ನೇ ಇಸವಿ ಜನವರಿ ೫ರಂದು ಪೂನಾದಲ್ಲಿ ಮೊತ್ತ ಮೊದಲನೆಯ ಮಹಿಳಾ ಸಮಾವೇಶ ನಡೆಯಿತು. ಅದರಲ್ಲಿ ಪರದೆ ಪದ್ಧತಿ, ಬಾಲ್ಯವಿವಾಹದ ಬಗ್ಗೆ ಚರ್ಚಿಸಿದುದಲ್ಲದೆ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳ ಸಮನಾಗಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವ ಠರಾವು ಮಂಜೂರು ಮಾಡಲಾಯಿತು. ಆ ಸಮಾವೇಶ ನಡೆದು ೮೦ನೇ ವರ್ಷ ಕಾಲಿಟ್ಟಿದೆಯಾದರೂ ಇಂದು ಗ್ರಾಮೀಣ ಪ್ರದೇಶದ 'ಮಹಿಳಾ

ಶಿಕ್ಷಣದ ಸ್ಥಿತಿಗತಿ ಏನು? ನಮ್ಮ ದೇಶದಲ್ಲಿ ಎಷ್ಟು ಜನ ಮಹಿಳೆಯರು ಉನ್ನತ ಹುದ್ದೆಯನ್ನು ಅಲಂಕರಿಸಿದ್ದಾರೆ?

ನಮ್ಮ ಶಾಲೆಗಳಲ್ಲಿ ಮಕ್ಕಳು ಓದುವ ಪಠ್ಯ ಪುಸ್ತಕಗಳಲ್ಲಿ ಹಾಗೂ ಇತರ ಮಾಧ್ಯಮಗಳಲ್ಲಿ ಪುರುಷರನ್ನೇ ಸಾಧನೆಗೈದ ಶ್ರೇಷ್ಠ ವೈದ್ಯರು, ಇಂಜಿನಿಯರ್‌ಗಳು, ವಿಜ್ಞಾನಿಗಳು ಎಂದು ಚಿತ್ರಿಸಲಾಗುತ್ತದೆ. ಮಹಿಳೆಯರನ್ನು ಉತ್ತಮ ತಾಯಂದಿರು, ಗೃಹಿಣಿಯರು ಅಥವಾ ದಾದಿಯರು ಎಂದೇ ಅಭಿಪ್ರಾಯ ಮೂಡಿಸಲಾಗುತ್ತದೆ. ಇದು ಮಕ್ಕಳ ಮೇಲೆ ಬಹಳ ಪರಿಣಾಮ ಬೀರುತ್ತದೆ. ವಿಶೇಷವಾಗಿ ಹೆಣ್ಣು ಮಕ್ಕಳಲ್ಲಿ ಕೀಳರಿಮೆಯನ್ನುಂಟುಮಾಡಿ, ತಮ್ಮ ಸ್ಥಾನವು ಅಷ್ಟರಲ್ಲೇ ಸೀಮಿತವೇನೋ ಎಂಬ ಭಾವನೆ ಬಲವಾಗಿ ಬೇರೂರುತ್ತದೆ. ಹಾಗಾಗಿ ವಿಜ್ಞಾನ ಕ್ಷೇತ್ರದಲ್ಲಿ ಅಭಿರುಚಿ ಇದ್ದರೂ ಮನೋಬಲದ ಕೊರತೆಯಿಂದಾಗಿ ಆಕೆ ಮುನ್ನುಗ್ಗಲ ಹಿಂಜರಿಯುತ್ತಾಳೆ. ಒಂದು ಅಂಕಿ ಅಂಶದ ಪ್ರಕಾರ ನಮ್ಮ ದೇಶದಲ್ಲಿ ೧೯೮೧ರಲ್ಲಿ ಕೇವಲ ೨೮% ರಷ್ಟು ಹೆಣ್ಣುಮಕ್ಕಳು ಪದವಿಪೂರ್ವ ವಿದ್ಯಾಭ್ಯಾಸ ಮಾಡಿದ್ದರೆ, ೧೯೯೧- ೨೦೦೦ ದವರೆಗೆ ೩೪%, ೩೭% ದವರೆಗೆ ಮಾತ್ರ ಏರಿದೆ. ೧೯೮೯ರಲ್ಲಿ ೨೯ ಸ್ನಾತಕೋತ್ತರ ವಿದ್ಯಾಭ್ಯಾಸ ಮಾಡಿದ್ದರೆ, ೨೦೦೦ನೇ ಇಸವಿಯಲ್ಲಿ ೩೮% ರಷ್ಟು ಸ್ನಾತಕೋತ್ತರ ವಿದ್ಯಾಭ್ಯಾಸ ಮಾಡಿದ್ದಾರೆ. ಈ ಅವಧಿಯಲ್ಲಿ ಡಾಕ್ಟರೇಟು ಮಾಡಿದವರ ಅಂಕಿ ಅಂಶ ದೊರಕಿಲ್ಲ. ನಾವು ಈ ಅಂಕಿ ಅಂಶವನ್ನು ಯುನೈಟೆಡ್ ಕಿಂಗ್‌ಡಮ್‌ನೊಂದಿಗೆ ಹೋಲಿಸಿ ನೋಡೋಣ: ೨೦೦೦ನೇ ಇಸವಿಯಲ್ಲಿ ಅಲ್ಲಿ ರಾಸಾಯನ ಶಾಸ್ತ್ರದಲ್ಲಿ ೪೦% ಹಾಗೂ ಜೀವವಿಜ್ಞಾನದಲ್ಲಿ ೬೦% ರಷ್ಟು ಹೆಣ್ಣು ಮಕ್ಕಳು ಪದವಿ ಪಡೆದಿದ್ದಾರೆ. ಇದೇ ವಿಷಯದಲ್ಲಿ ಡಾಕ್ಟರೇಟು ಪಡೆದ ಸ್ತ್ರೀಯರು ಕ್ರಮಶಃ ೩೧ ಹಾಗೂ ೪೮%ದಷ್ಟಿದ್ದಾರೆ. ಇನ್ನೊಂದು ಗಮನಾರ್ಹ ಅಂಶವೆಂದರೆ ಇತ್ತೀಚೆಗೆ ನಮ್ಮ ದೇಶದಲ್ಲಿ ಭೌತ ಶಾಸ್ತ್ರ, ರಾಸಾಯನ ಶಾಸ್ತ್ರ ಗಣಿತ ಶಾಸ್ತ್ರದಲ್ಲಿ ಸಂಶೋಧನೆಯನ್ನು ಆಯ್ಕೆ ಮಾಡಿಕೊಳ್ಳುವ ಹೆಣ್ಣು ಮಕ್ಕಳಿಗಿಂತಲೂ ಜೀವಶಾಸ್ತ್ರದಲ್ಲಿ ಸಂಶೋಧನೆಯನ್ನು ನಡೆಸಲು ಆಸಕ್ತಿ ತೋರುವವರು ಅಧಿಕವಾಗಿದ್ದಾರೆ. ಸಮಾಧಾನಕರ ವಿಷಯವೆಂದರೆ ಜೀವ ವಿಜ್ಞಾನ ಅಭ್ಯಸಿಸುವವರಲ್ಲಿ ಇಂದು ೮೦% ದಷ್ಟು ಹೆಣ್ಣು ಮಕ್ಕಳೇ ಇದ್ದಾರೆ. ಇನ್ನು ೧೫-೨೦ ವರ್ಷಗಳಲ್ಲಿ ನಮ್ಮ ವಿಶ್ವವಿದ್ಯಾಲಯ, ಪ್ರಯೋಗಕೇಂದ್ರಗಳಲ್ಲಿ ವಿಭಾಗದ ಮುಖ್ಯಸ್ಥರಾಗಿ ಮಹಿಳೆಯರೇ ಕಂಡು ಬಂದರೆ ಆಶ್ಚರ್ಯವೇನಿಲ್ಲ.

ಹದಿನೆಂಟು-ಹತ್ತೊಂಬತ್ತನೆಯ ಶತಮಾನದಿಂದಲೂ ಮಹಿಳೆಯರು ವಿಜ್ಞಾನತಂತ್ರಜ್ಞಾನ ಕ್ಷೇತ್ರಕ್ಕೆ ತಮ್ಮ ಕೊಡುಗೆಯನ್ನು ನೀಡುತ್ತಾ ಬಂದಿದ್ದಾರೆ. ವಿಜ್ಞಾನ ತಂತ್ರಜ್ಞಾನ ಕ್ರಾಂತಿಯಲ್ಲಿ ಸಮಾನ ಜವಾಬ್ದಾರಿಗಳನ್ನು ಪುರುಷನೊಂದಿಗೆ ಹಂಚಿಕೊಂಡಿದ್ದಾರೆ. ಆದರೂ ಯಾವಾಗಲೂ ಮಹಿಳೆಗೆ ಅವಕಾಶಗಳನ್ನು ಒದಗಿಸುವಲ್ಲಿ

ತಾರತಮ್ಯ ನಡೆಯುತ್ತಲೇ ಬಂದಿದೆ. 'ಫ್ರೆಂಚ್ ಅಕಾಡೆಮಿ ಆಫ್ ಸೈನ್ಸ್'ನಲ್ಲಿ 'ಮಹಿಳೆ' ಎಂಬ ಕಾರಣಕ್ಕಾಗಿ ಚುನಾವಣೆಯಲ್ಲಿ ಮೇಡಂ ಮೇರಿ ಕ್ಯೂರಿಯನ್ನು ಚುನಾಯಿಸಿರಲಿಲ್ಲ. "ದಿ ಅಕಾಡೆಮಿಕ್ ಡೇಸ್ ಸಾಯನ್ಸಸ್ ಆಫ್ ಪ್ಯಾರಿಸ್" ಮತ್ತು "ದಿ ರಾಯಲ್ ಸೊಸಾಯಿಟಿ ಆಫ್ ಲಂಡನ್ನ ಸಭೆಗಳಿಗೆ ಸ್ತ್ರೀಯರಿಗೆ ಪ್ರವೇಶವಿರಲಿಲ್ಲ. "ದಿ ಅಕಾಡೆಮಿಕ್ ಡೇಸ್ ಸಾಯನ್ಸಸ್ ಆಫ್ ಪ್ಯಾರಿಸ್" ಸಂಸ್ಥೆಯು ೧೬೬೬ರಲ್ಲಿ ಸ್ಥಾಪನೆಗೊಂಡಿದ್ದರೂ ಪ್ರಥಮ ಮಹಿಳಾ ಸದಸ್ಯೆಯನ್ನು ನೇಮಿಸಿಕೊಂಡದ್ದು ಮಾತ್ರ ೧೯೬೨ರಲ್ಲಿ. ಆದರೆ ಪ್ರಥಮ ಮಹಿಳಾ ಸದಸ್ಯೆಯನ್ನು ನೇಮಿಸಿಕೊಂಡದ್ದು ೧೯೪೫ರಲ್ಲಿ, ಅಂದರೆ ೨೮೩ ವರ್ಷಗಳ ನಂತರ, ನಮ್ಮ ದೇಶದಲ್ಲಿ "ವಿಶ್ವವಿದ್ಯಾಲಯ ಅನುದಾನ ಆಯೋಗ"ವು ೧೯೫೩ರಲ್ಲಿ ಪ್ರಾರಂಭವಾಗಿದ್ದರೂ ಪ್ರಥಮ ಮಹಿಳಾ ಅಧ್ಯಕ್ಷರನ್ನು ಆರಿಸಿದ್ದು ೧೯೮೧ರಲ್ಲಿ, ಶ್ರೀಮತಿ ಡಾ, ಮಾಧುರಿ ಶಾಹರವರೇ ಈ ಅದೃಷ್ಟವಂತರು. ಅಂದರೆ ೨೮ ವರ್ಷಗಳ ನಂತರ, ಎರಡನೆಯ ಅಧ್ಯಕ್ಷೆಯಾಗಿ ಡಾ. ಅರ್ಮೈತಿ ದೇಸಾಯಿಯವರು ೧೯೯೪ರಲ್ಲಿ ಆಯ್ಕೆಯಾದರು. ಇದುವರೆಗಿನ ಒಟ್ಟು ೧೫ ಜನ ಅಧ್ಯಕ್ಷರಲ್ಲಿ ಕೇವಲ ಇಬ್ಬರು ಮಾತ್ರ ಮಹಿಳೆಯರು. ಅಂದರೆ ೧೪% ಕ್ಕಿಂತಲೂ ಕಡಿಮೆ. ನಮ್ಮ ದೇಶದ ವೈಜ್ಞಾನಿಕ ಸಂಸ್ಥೆಗಳಲ್ಲಿ ಕೇವಲ ೩೦%ರಷ್ಟು ಮಾತ್ರ ಮಹಿಳೆಯರಿದ್ದಾರೆ. ೭೦% ರಷ್ಟು ಪುರುಷರು. ಆದರೆ ಸಲಹಾಕಾರರ ಸಮಿತಿಯಲ್ಲಿ ಮಹಿಳಾ ಪ್ರತಿನಿಧಿಗಳು ನಗಣ್ಯ ಸಂಖ್ಯೆಯಲ್ಲಿದ್ದಾರೆ. ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಮ್ಯುನಾಲಜಿಯ ವರದಿ ಪ್ರಕಾರ ವಿಜ್ಞಾನಕ್ಕೆ ಸಂಬಂಧಿಸಿದ ೩೮ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಲೇಖನಗಳಲ್ಲಿ ೮೫.೭% ರಷ್ಟು ಪುರುಷರ ಲೇಖನಗಳೇ ಆಗಿವೆ. ಕೇವಲ ೧೪.೩% ಮಹಿಳೆಯರದ್ದು, ನಮ್ಮ ದೇಶದ ಸಂಶೋಧನಾ ಸಂಸ್ಥೆಗಳಲ್ಲಿ ಹಾಗೂ ಪ್ರಮುಖ ವಿದ್ಯಾಲಯಗಳಲ್ಲಿ ಇರುವ ಮಹಿಳಾ ಪರಿಣತರ ಅಂಕಿ ಅಂಶಗಳನ್ನು ನೋಡೋಣ. ೨೦೦೫ ಮಾರ್ಚ್ ತಿಂಗಳ 'ಕರೆಂಟ್ ಸಾಯನ್ಸ್' ಸಂಪುಟದ ಪ್ರಕಾರ ಈ ಕೆಳಗಿನಂತಿದೆ:

ಅನುಸಂಧಾನ ಸಂಸ್ಥೆಗಳ ಸಲಹಾಕಾರ ಸಮಿತಿಗಳಲ್ಲಿ ಮಹಿಳೆಯರ ಅನುಪಾತ

| ಅನುದಾನದ ಮೂಲ | ಸಂಸ್ಥೆ | ಪುರುಷರು | ಮಹಿಳೆಯರು |
|---|---|---|---|
| ಡಿಬಿಟಿ | ಡಿಬಿಟಿ | ೧೩ (೯೨%) | ೨ (೮%) |
| ಡಿ ಬಿ ಟಿ | ಎನ್ ಐ ಐ | ೧೮ (೯೫%) | ೧ (೫%) |
| ಸಿ ಎಸ್ ಐ ಆರ್ | ಸಿ ಡಿ ಆರ್ ಐ | ೧೧ (೯೨%) | ೧ (೮%) |
| ಸಿ ಎಸ್ ಐ ಆರ್ | ಸಿ ಸಿ ಎಂ ಬಿ | ೧೦ (೧೦೦%) | ೦ |
| ಸಿ ಎಸ್ ಐ ಆರ್ | ಎನ್ ಐ ಎನ್ | ೨೦ (೮೭%) | ೩ (೧೩%) |
| ಸಿ ಎಸ್ ಐ ಆರ್ | ಎನ್‌ಇ ಸಿ ಇ ಡಿ | ೧೫ (೭೯%) | ೪ (೨೧%) |

ಸೂಚಿ :

೧. ಸಿ ಎಸ್ ಐ ಆರ್ : ಕೌನ್ಸಿಲ್ ಫಾರ್ ಸೈಂಟಿಫಿಕ್ ಆಂಡ್ ಇಂಡಸ್ಟ್ರಿಯಲ್ ರಿಸರ್ಚ್

೨. ಡಿ ಆರ್ ಡಿ ಓ : ಡಿಫೆನ್ಸ್ ಆಂಡ್ ಡವಲಪ್‌ಮೆಂಟ್ ಆರ್ಗನೈಸೇಶನ್

೩. ಡಿ ಎ ಇ : ಡಿಪಾರ್ಟ್‌ಮೆಂಟ್ ಆಫ್ ಆಟಾಮಿಕ್ ಎನರ್ಜಿ

೪. ಡಿ ಬಿ ಟಿ : ಡಿಪಾರ್ಟ್ ಮೆಂಟ್ ಆಫ್ ಬಯೋ ಟೆಕ್ನಾಲಜಿ

೫. ಡಿ ಎಸ್ ಟಿ : ಡಿಪಾರ್ಟ್‌ಮೆಂಟ್ ಆಫ್ ಸಾಯನ್ಸ್ ಆಂಡ್ ಟೆಕ್ನಾಲಜಿ

೬. ಐ ಸಿ ಎಂ ಆರ್ : ಇಂಡಿಯನ್ ಕೌನ್ಸಿಲ್ ಫಾರ್ ಮೆಡಿಕಲ್ ರಿಸರ್ಚ್

೭. ಸಿ ಡಿ ಆರ್ ಐ : ಸೆಂಟ್ರಲ್ ಡ್ರಗ್ ರಿಸರ್ಚ್ ಇನ್ಸಿಟ್ಯೂಟ್, ಲಕ್ನೋ

೮. ಸಿ ಸಿ ಎಂ ಬಿ : ಸೆಂಟ್ರಲ್ ಫಾರ್ ಸೆಲ್ಯೂಲರ್ ಆಂಡ್ ಮೊಲಿಕ್ಯೂಲ ಬಯೋಲಜಿ, ಹೈದರಾಬಾದ್

೯. ಎ ಸಿ ಟಿ ಆರ್ ಇ ಸಿ: ಅಡ್ವಾನ್ಸ್ ಸೆಂಟರ್ ಫಾರ್ ಟ್ರೇಟ್‌ಮೆಂಟ್ ಅಂಡ್ ಎಜ್ಯುಕೇಶನ್ ಇನ್ ಕ್ಯಾನ್ಸರ್, ನವಿ ಮುಂಬಯಿ

೧೦. ಎನ್. ಐ. ಐ. : ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಮ್ಯೂನೋಲಜಿ,

ನವದೆಹಲಿ.

೧೧. ಎನ್ ಸಿ ಸಿ ಎಸ್ : ನ್ಯಾಷನಲ್ ಸೆಂಟರ್ ಫಾರ್ ಸೆಲ್ ಸಾಯನ್ಸಸ್, ಪೂನಾ

೧೨. ಎನ್ ಐ ಎನ್ : ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಷನ್, ಹೈದರಾಬಾದ್

೧೩. ಎನ್ ಐ ಸಿ ಇ ಡಿ : ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕೊಲೆರಾ ಎಂಡ್ ಎಂಟರಿಕ್ ಡಿಸೀಸಸ್, ಕಲ್ಕತ್ತ

ಕೇಂದ್ರ ಸರಕಾರ ಅನುದಾನಿತ ಸಂಸ್ಥೆಗಳಲ್ಲಿ ಮಹಿಳಾ ವಿಜ್ಞಾನಿಗಳ ಅನುಪಾತ

| ಅನುದಾನದ ಮೂಲ | ಸಂಸ್ಥೆ | ಪುರುಷರು (%) | ಮಹಿಳೆಯರು (%) |
|---|---|---|---|
| ಡಿ ಆರ್ ಡಿ ಒ | ೫೨ ಕೇಂದ್ರಗಳು | ೬೦೮೭ (೮೬.೫) | ೬೪೮ (೧೩.೫) |
| ಸಿ ಎಸ್ ಐ ಆರ್ | ಸಿಡಿ ಆರ್ಐ ಲಕ್ನೋ | ೧೪೭ (೭೬೨) | ೪೬ (೨೩೮) |
| ಡಿ ಎ ಇ | ಎಸಿಟಿಆರ್ಇಸಿ- ಮುಂಬೈ | ೧೫ (೪೫.೫) | ೧೮ (೫೪.೫) |
| ಡಿ ಬಿ ಟಿ | ಎನ್ ಐ ಐ | ೨೯ (೭೬.೩) | ೯ (೨೩.೭) |
| ಡಿ ಬಿ ಟಿ | ಎನ್ ಸಿ ಎಸ್ | ೨೦ (೮೦.೦) | ೫ (೨೦.೫) |
| ಡಿ ಎಸ್ ಟಿ | ಬೋಸ್ಇನ್ಸ್ಟಿಟ್ಯೂಟ್, ಕಲ್ಕತ್ತ | ೨೭ (೬೯.೨) | ೧೪ (೨೩.೦) |
| ಡಿ ಎಸ್ ಟಿ | ಅಘಾರ್ಕ ಇನ್ಸ್ಟಿಟ್ಯೂಟ್, ಪೂನಾ | ೨೭ (೬೯.೨) | ೧೨ (೩೦.೮) |
| ಐ ಸಿ ಎಂ ಆರ್ | ಎನ್ ಐ ಎನ್ | ೩೩ (೬೮.೮) | ೧೫ (೩೧.೨) |
| ಐ ಸಿ ಎಂ ಆರ್ | ಎನ್ ಐ ಸಿ ಇಡಿ | ೨೬ (೭೮.೮) | ೭(೨೧.೨) |

ಮುಖ್ಯ ವಿಶ್ವವಿದ್ಯಾಲಯ - ಜೀವಶಾಸ್ತ್ರ ವಿಭಾಗದ ಮಹಿಳಾ ಉಪನ್ಯಾಸಕರ ಅನುಪಾತ

| ವಿಶ್ವವಿದ್ಯಾಲಯ | ಉಪನ್ಯಾಸಕರು | ಪುರುಷರು (%) | ಮಹಿಳೆಯರು (%) |
|---|---|---|---|
| ಇಂಡಿಯನ್ ಇನ್ಸ್‌ಸ್ಟಿಟ್ಯೂಟ್ ಆಫ್ ಸಾಯನ್ಸ್ | ೬೩ | ೫೧ (೮೧.೦) | ೧೨ (೧೯.೦) |
| ಜವಾಹರಲಲ್ ನೆಹರೂ ಯೂನಿವರ್ಸಿಟಿ | ೫೦ | ೩೯ (೭೮.೦) | ೧೧ (೨೨.೦) |
| ಡೆಲ್ಲಿ ಯೂನಿವರ್ಸಿಟಿ | ೬೩ | ೫೭ (೯೦.೫) | ೬ (೯.೫) |
| ಯೂನಿವರ್ಸಿಟಿ ಆಫ್ ಹೈದರಾಬಾದ್ | ೨೯ | ೨೪ (೮೨.೮) | ೫ (೧೭.೨) |

ಮಹಿಳೆಯರ ಹಿನ್ನಡೆಗೆ ಇನ್ನೊಂದು ಪ್ರಬಲವಾದ ಕಾರಣವೆಂದರೆ ಸಾಂಸಾರಿಕ ಜೀವನ ೨೨-೨೩ರ ವಯಸ್ಸಿಗೆ ಸ್ನಾತಕೋತ್ತರ ಪದವಿ ಪಡೆದ ಹೆಣ್ಣು ಮಗಳು, ಡಾಕ್ಟರೇಟ್ ಮುಗಿಸುವಾಗ ೨೬-೨೭ ವಯಸ್ಸಿನವಳಾಗಿರುತ್ತಾಳೆ, ಈ ವಯಸ್ಸಿಗೆ ನಮ್ಮ ದೇಶದಲ್ಲಿ ಮದುವೆ ಮಾಡಿ, ಸಂಸಾರ ಹೂಡುವ ಪದ್ಧತಿ. ಒಬ್ಬ ವ್ಯಕ್ತಿ ಸಾಧಾರಣವಾಗಿ ೨೭ರಿಂದ ೩೨ ಅಥವಾ ೩೫ ವರ್ಷದ ವಯಸ್ಸಿನ ಅವಧಿಯಲ್ಲಿ ತನ್ನ ಉದ್ಯೋಗ / ವೃತ್ತಿಯ ದಿಶೆಯನ್ನು ನಿಶ್ಚಿಸುವ ಕಾಲ. ಇದು ಜೀವನದ ಉನ್ನತ ಹಾಗೂ ಪ್ರಾಮುಖ್ಯ ಕಾಲ. ವಿದೇಶಗಳಲ್ಲಿ ೩೦-೩೨ರ ವಯಸ್ಸಿನಲ್ಲಿ ತಮ್ಮ ಉದ್ಯೋಗ, ಸಂಶೋಧನೆ ನಿಶ್ಚಲ ನೆಲೆ ಕಂಡುಕೊಂಡ ನಂತರ ಸ್ತ್ರೀಯರು ಮದುವೆ ಮಾಡಿಕೊಳ್ಳುತ್ತಾರೆ. ಅಲ್ಲಿ ಮಹಿಳೆಗೆ ಸ್ವಾತಂತ್ರ್ಯವಿರುತ್ತದೆ. ಹಾಗಾಗಿ ಸಂಶೋಧನೆ - ಸಂಸಾರ ಎರಡೂ ಸಮಭಾರದಲ್ಲಿರುತ್ತದೆ. ಪುರುಷರು ಸಮನಾದ ಜವಾಬ್ದಾರಿಯನ್ನು ಮಕ್ಕಳ ಪಾಲನೆ- ಪೋಷಣೆಯಲ್ಲಿಯೂ ಹಂಚಿಕೊಳ್ಳುತ್ತಾರೆ. ಆದರೆ ನಮ್ಮ ದೇಶದಲ್ಲಿ, ಹೆಣ್ಣು ಮಕ್ಕಳು ಸ್ನಾತಕೋತ್ತರ ಪದವಿಯ ನಂತರ, ಸಂಶೋಧನೆಗೆ ತೊಡಗುವ ಕಾಲದಲ್ಲಿ ಆಕೆಗೆ ಮದುವೆ ಮಾಡಲಾಗುತ್ತದೆ. ಮುಂದೆ ಒಂದೆರಡು ವರ್ಷಗಳಲ್ಲಿ ಆಕೆಯ ಸಂಸಾರ ಬೆಳೆಯದಿದ್ದಲ್ಲಿ ಆಕೆಯನ್ನು ದೋಷಿ ಎಂಬ ದೃಷ್ಟಿಯಿಂದ ನೋಡಲಾಗುತ್ತದೆ. ಅಲ್ಲದೆ ಮಕ್ಕಳ ಪಾಲನೆ ಪೋಷಣೆಯ ಸಂಪೂರ್ಣ ಜವಾಬ್ದಾರಿಯು ಸ್ತ್ರೀಯರ ಮೇಲಿರುವುದರಿಂದ ಆಕೆ ತನ್ನ ಸಂಶೋಧನಾ ಕಾರ್ಯ ಅಥವಾ ಉದ್ಯೋಗದಿಂದ ತತ್ಕಾಲ ದೂರವಿರಬೇಕಾಗುತ್ತದೆ. ಸಾಂಸಾರಿಕ ಜೀವನ ಹಾಗೂ ಸಂಶೋಧನಾ ವೃತ್ತಿಯ ನಡುವೆ ಆಕೆ ನಲುಗಬೇಕಾಗುತ್ತದೆ. ಒಂದು ಅನಿವಾರ್ಯ, ಇನ್ನೊಂದು ಅಭಿರುಚಿ.

ಹೀಗೆ ಪ್ರತಿಯೊಬ್ಬ ಮಹಿಳೆಯರು ಸರಾಸರಿ ಎರಡು ಮಕ್ಕಳಿಗೆ ಜನ್ಮವಿತ್ತರೂ ಆಕೆ ತನ್ನ ಉದ್ಯೋಗ ಕ್ಷೇತ್ರದಲ್ಲಿ ಪುರುಷ ಸಹೋದ್ಯೋಗಿಗಿಂತ ಎರಡೂವರೆ ವರ್ಷಗಳ ಕಾಲ ಹಿಂದೆ ಬೀಳುತ್ತಾಳೆ. ಇದರಿಂದಾಗಿ ಆಕೆಯ ಕಾರ್ಯಕ್ಷಮತೆ ಕುಗ್ಗುವುದಲ್ಲದೆ, ಸ್ಥಾನ, ಬಡ್ತಿ ಮುಂತಾದ ಅಭಿವೃದ್ಧಿಪರ ಪ್ರಗತಿಗೆ ಧಕ್ಕೆಯುಂಟಾಗಿ ಮನೋಬಲ ಕುಸಿಯುತ್ತದೆ. ಅನೇಕ ಅವಕಾಶಗಳೂ ಆಕೆಯ ಕೈ ತಪ್ಪಿ ಹೋಗುತ್ತದೆ. ಇದರಿಂದಾಗಿ ಸಂಶೋಧನೆಯ ಕ್ಷೇತ್ರವನ್ನು ಕೈಗೆತ್ತಿಕೊಳ್ಳುವ ಮಹಿಳೆಯರು ಹಿಂದೇಟು ಹೊಡೆಯುವ ಸಂದರ್ಭಗಳು ಹೆಚ್ಚು. ಈ ರೀತಿ ಪ್ರತಿಭೆ ಇದ್ದಾಗ್ಯೂ ಮಹಿಳೆ ಹಿಂದುಳಿದು, ದೇಶಕ್ಕೆ ದೊರೆಯಬಹು ದಾದ ಓರ್ವ ಉತ್ತಮ ವಿಜ್ಞಾನಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ನಮ್ಮ ದೇಶದಲ್ಲಿ ಮಹಿಳೆಯರ ಪ್ರತಿಭೆಯನ್ನು ತಕ್ಕುದಾಗಿ ಗುರುತಿಸುತ್ತಿಲ್ಲ. ಗೌರವ- ಪುರಸ್ಕಾರಗಳಿ ಗಾಗಲೀ, ಬಹುಮಾನಗಳಿಗಾಗಲೀ, ವಿದ್ಯಾರ್ಥಿ ವೇತನಗಳಿಗಾಗಲೀ, ಮಹಿಳೆಯರ ಹೆಸರನ್ನು ಸಾಕಷ್ಟು ಶಿಫಾರಸ್ಸು ಮಾಡಲಾಗುತ್ತಿಲ್ಲ. ಈ ಕೆಳಗಿನ ಕೋಷ್ಟಕವನ್ನು ನೋಡಿದರೆ ಮಹಿಳೆಯರಿಗೆ ಎಷ್ಟು ಮಟ್ಟಿಗೆ ಪುರಸ್ಕಾರಗಳಿಗೆ ಅವಕಾಶಗಳು ದೊರೆಯುತ್ತವೆ ಎಂದು ತಿಳಿಯಬಹುದು.

ಜೀವಶಾಸ್ತ್ರಕ್ಕೆ ಮಹಿಳೆಯರಿಗೆ ದೊರೆತ ಪುರಸ್ಕಾರಗಳ ಅನುಪಾತ

| ಪ್ರಶಸ್ತಿ | ವರ್ಷ | ಒಟ್ಟು ಪ್ರಶಸ್ತಿ | ಪುರುಷರಿಗೆ | ಮಹಿಳೆಯರಿಗೆ |
|---|---|---|---|---|
| ಭಟ್ನಾಗರ್ (ಒಟ್ಟು) | ೧೯೫೮-೨೦೦೪ | ೨೮೭ | ೩೭೯ (೯೭.೯೩%) | ೮ (೨.೦೭%) |
| ಭಟ್ನಾಗರ್ (ಒಟ್ಟು) | ೧೯೯೪-೨೦೦೪ | ೧೦೭ | ೧೦೬ (೯೯.೦೬%) | ೧ (೦.೯೪%) |
| ಭಟ್ನಾಗರ್ (ಬಯೋಲಜಿ) | ೧೯೫೮-೨೦೦೪ | ೬೮ | ೬೬ (೯೭.೦೬%) | ೨ (೨.೯೪%) |
| ಭಟ್ನಾಗರ್ (ಬಯೋಲಜಿ) | ೧೯೯೪-೨೦೦೪ | ೧೯ | ೧೯ (೧೦೦%) | ೦ |
| ನ್ಯಾಶನಲ್ (ಬಯೋ ಸಾಯನ್ಸಸ್) | ೧೯೯೯-೨೦೦೩ | ೨೪ | ೨೨(೯೧.೬೭%) | ೨(೮.೩೩%) |

೬. ವಿಜ್ಞಾನದ ಕ್ಷೇತ್ರಕ್ಕೆ ಹೊಸ ಅವಿಷ್ಕಾರಗಳನ್ನು ನೀಡಿದ ಶ್ರೇಷ್ಠ ಮಹಿಳೆಯರು (ಅಂತಾರಾಷ್ಟ್ರೀಯ ಹಾಗೂ ಭಾರತೀಯರು)

ಬಹಳಷ್ಟು ಹಿನ್ನಡೆಗಳಿದ್ದರೂ ಮಹಿಳೆಯರು ಉನ್ನತ ಮಟ್ಟದ ಆವಿಷ್ಕಾರಗಳನ್ನು ವಿಜ್ಞಾನಕ್ಕೆ ಕೊಡುಗೆಯಾಗಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ೧೫ ಮಹಿಳೆಯರು ಇದುವರೆಗೆ ನೊಬೆಲ್ ಪುರಸ್ಕಾರದ ಗೌರವಕ್ಕೆ ಪಾತ್ರರಾಗಿದ್ದಾರೆ. ಇದರಲ್ಲಿ ಎರಡು ಭೌತಶಾಸ್ತ್ರಕ್ಕೆ ಮೂರು ರಸಾಯನ ಶಾಸ್ತ್ರಕ್ಕೆ ಹಾಗೂ ಏಳು ಶರೀರ ಶಾಸ್ತ್ರ ಮತ್ತು ವೈದ್ಯಕೀಯ ಆವಿಷ್ಕಾರಗಳಿಗೆ ನೀಡಲಾಗಿದೆ. ಇದು ಅತ್ಯಲ್ಪ ಪ್ರಮಾಣವಾಗಿದೆ ಎನ್ನುವುದು ಈ ಕೆಳಗಿನ ಕೋಷ್ಟಕವನ್ನು ನೋಡಿದರೆ ತಿಳಿಯುತ್ತದೆ.

ನೋಬೆಲ್ ಪುರಸ್ಕೃತ ಮಹಿಳೆಯರ ಅನುಪಾತ

| ವಿಷಯ | ಒಟ್ಟು ಪ್ರಶಸ್ತಿ | ಪುರುಷರಿಗೆ | ಮಹಿಳೆಯರಿಗೆ |
|---|---|---|---|
| ಭೌತಶಾಸ್ತ್ರ | ೧೭೭ | ೧೭೫ (೯೮.೮೭%) | ೨ (೧.೧೩%) |
| ರಸಾಯನಶಾಸ್ತ್ರ | ೧೪೯ | ೧೪೬ (೯೭.೯೯%) | ೩ (೨.೦೧%) |
| ಶರೀರ ಶಾಸ್ತ್ರ ಹಾಗೂ ವೈದ್ಯಕೀಯ | ೧೮೪ | ೧೭೭(೯೬.೨೦%) | ೭(೩.೮೦%) |

ಇಲ್ಲಿ ಸ್ತ್ರೀಯರ ಅನುಪಾತವನ್ನು ಗಮನಿಸಿದಾಗ ಸ್ತ್ರೀಯರ ಬಗ್ಗೆ ಇಡೀ ವಿಶ್ವದಲ್ಲೇ ಇರುವ ಧೋರಣೆಯು ನಮಗೆ ಅಘಾತವಾಗುವಂತಹುದು.

ನೊಬೆಲ್ ಪುರಸ್ಕೃತ ಮಹಿಳೆಯರ ಸೂಕ್ಷ್ಮ ಪರಿಚಯವನ್ನು ಮಾಡಿಕೊಳ್ಳೋಣ

ಮೇಡಂ ಮೇರಿ ಕ್ಯೂರಿ ಅಥವಾ ಮಾರಿಯಾ ಸೊಡೋವ್ ಸ್ಕಾ ಕ್ಯೂರಿಯ ಹೆಸರು ವಿಜ್ಞಾನ ಕ್ಷೇತ್ರದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಲು ಯೋಗ್ಯವಾದುದು. ಆಧುನಿಕ ವಿಜ್ಞಾನ ಯುಗದ ಪ್ರಥಮ ಪ್ರಸಿದ್ಧ ಮಹಿಳಾ ವಿಜ್ಞಾನಿ, "ಆಧುನಿಕ ಭೌತಶಾಸ್ತ್ರದ ತಾಯಿ" ಎಂದೇ ಪ್ರಸಿದ್ಧಳಾದ ಈ ಸಂಶೋಧಕಿ ಕ್ಷ-ಕಿರಣಗಳ ಪ್ರಭಾವದ ಪರಿಣಾಮವನ್ನು ಜಗತ್ತಿಗೆ ಪರಿಚಯಿಸಿದವರು. ತನ್ನ ಪತಿ ಪೀರಿ ಕ್ಯೂರಿಯೊಂದಿಗೆ ಪೊಲೋನಿಯಂ ಮತ್ತು ರೇಡಿಯಂನ್ನು ಕಂಡು ಹಿಡಿದು ಕ್ಷ-ಕಿರಣಗಳ ಮತ್ತು ಬೀಟಾ ಕಿರಣಗಳ ಕ್ಷಮತೆಯ ಮೇಲೆ ಆವಿಷ್ಕಾರ ನಡೆಸಿದವರು. ಯುರೋಪ್ ದೇಶಗಳಲ್ಲಿ ವಿಜ್ಞಾನದ ಸಂಶೋಧನೆಗೆ ಡಾಕ್ಟರೇಟ್ ಪಡೆದ ಮೊದಲ ಮಹಿಳೆ, ಎರಡು ಬಾರಿ ಎರಡು ವಿಷಯಗಳಿಗೆ ನೊಬೆಲ್ ಪುರಸ್ಕಾರ ಪಡೆದ ಏಕೈಕ ಮಹಿಳೆ, ೧೯೦೩ ನೇ ಇಸವಿಯಲ್ಲಿ ಮೇರಿ ಕ್ಯೂರಿ ಹಾಗೂ ಆಕೆಯ ಪತಿ ಪೀರಿ ಕ್ಯೂರಿಗೆ ಜಂಟಿಯಾಗಿ ಭೌತ ಶಾಸ್ತ್ರಕ್ಕೆ ಪುರಸ್ಕಾರ ದೊರಕಿದರೆ ೧೯೧೧ರಲ್ಲಿ ಮೇರಿ ಕ್ಯೂರಿಗೆ ರಸಾಯನ ಶಾಸ್ತ್ರಕ್ಕೆ ನೊಬೆಲ್ ದೊರೆಯಿತು. ಮುಂದೆ ೧೯೩೫ರಲ್ಲಿ ಪುತ್ರಿ ಐರೀನ್ ಜೊಲಿಯೋಟ್ ಕ್ಯೂರಿಗೆ ಮೇರಿ ಕ್ಯೂರಿಯ ಮಾರ್ಗದರ್ಶನದಲ್ಲಿ ನಡೆಸಿದ ರಸಾಯನ ಶಾಸ್ತ್ರದ ಸಂಶೋಧನೆಗೆ ಆಕೆಯ ಪತಿ ಫೆಡ್ರಿಕ್ ಜೋಲಿಯೋಟ್‌ನೊಂದಿಗೆ ಜಂಟಿಯಾಗಿ ನೋಬೆಲ್ ಪುರಸ್ಕಾರ ದೊರೆಯಿತು. ಈ ಮಧ್ಯೆ ಕೂರಿ ದಂಪತಿಗಳು ೧೯೦೩ರಲ್ಲಿ ತಮ್ಮ ಎರಡನೆಯ ಸಂತಾನವನ್ನು ಕಳೆದುಕೊಂಡಿದ್ದರು. ೧೯೦೬ರಲ್ಲಿ ಪೀರಿ ಕ್ಯೂರಿ ರಸ್ತೆ ಅಪಘಾತದಲ್ಲಿ ನಿಧನ ಹೊಂದಿದರು. ಈ ಸಮಯದಲ್ಲಿ ತನಗೆ ನೀಡಿದ ರಾಷ್ಟ್ರೀಯ ಪಿಂಚಣಿಯನ್ನು

-

ಮೇರಿ ಕ್ಯೂರಿ ತಿರಸ್ಕರಿಸಿದರು. ಆದರೆ ಪತಿಯ ವೃತ್ತಿ ಸ್ಥಾನವನ್ನು ಸ್ವೀಕರಿಸಿದರು. ಪಾರ್ಸಾದಲ್ಲಿ ಮೇರಿ ಕ್ಯೂರಿಯು ಡೈರೆಕ್ಟರ್ ಆಫ್ ಇನ್‌ಸ್ಟಿಟ್ಯೂಟ್ ಆಫ್ ರೇಡಿಯೋ ಆಕ್ಟಿವಿಟಿ ಆಗಿ ನೇಮಕಗೊಂಡರು.

ಮೊದಲನೆಯ ವಿಶ್ವಯುದ್ಧದ ಸಮಯದಲ್ಲಿ ಮೇರಿ ಕ್ಯೂರಿ ತನ್ನ ನೊಬೆಲ್ ಪುರಸ್ಕಾರದ ಧನ ರಾಶಿಯನ್ನು ಯುದ್ಧದಲ್ಲಿ ಗಾಯಗೊಂಡವರ ವೈದ್ಯಕೀಯ ನೆರವಿಗಾಗಿ ಎಕ್ಸ್‌ರೇ ಉಪಕರಣಗಳನ್ನೊಳಗೊಂಡ ಸಂಚಾರಿ ಆಸ್ಪತ್ರೆಗಳನ್ನು ಸುಸಜ್ಜಿತ ಆಂಬ್ಯುಲೆನ್ಸ್‌ಗಳ ಮೂಲಕ ಒದಗಿಸಲು ವಿನಿಯೋಗಿಸಿದರು. ಅಲ್ಲದೆ ೨೦೦ ಕ್ಷ-ಕಿರಣ ಸ್ಥಿರ ಕೇಂದ್ರಗಳನ್ನು ಫ್ರಾನ್ಸ್ ಹಾಗೂ ಬೆಲ್ಜಿಯಂ ದೇಶಗಳಲ್ಲಿ ಸ್ಥಾಪಿಸಿದರು. ಇಷ್ಟಿದ್ದರೂ ೧೯೧೧ರಲ್ಲಿ ಈಕೆ 'ಮಹಿಳೆ' ಎನ್ನುವ ಕಾರಣಕ್ಕಾಗಿ 'ಫ್ರೆಂಚ್ ಎಕಾಡೆಮಿ ಆಫ್ ಸಾಯನ್ಸ್'ನಲ್ಲಿ ಈಕೆಯನ್ನು ಚುನಾವಣೆಯಲ್ಲಿ ಆರಿಸಲಿಲ್ಲ. ಇದರಿಂದ ನೊಂದ ಮೇರಿಕ್ಯೂರಿ ಮುಂದೆ ಹತ್ತು ವರ್ಷಗಳವರೆಗೆ ಯಾವುದೇ ಸಂಶೋಧನೆಯನ್ನು ಅಕಾಡೆಮಿಯು ಪ್ರಕಟಿಸಕೂಡದು ಎಂಬ ನಿರ್ಬಂಧ ಹೇರಿದರು.

ನಿರಂತರವಾಗಿ ಕ್ಷ-ಕಿರಣಗಳೊಂದಿಗೆ ಸಂಶೋಧನೆ ನಡೆಸಿದುದರ ಪರಿಣಾಮ ವಾಗಿ ೧೯೨೦ರಲ್ಲಿ ಅನೇಕ ಬಾರಿ ಕಣ್ಣಿನ ಶಸ್ತ್ರಚಿಕಿತ್ಸೆಗೆ ಒಳಪಡಬೇಕಾಯಿತು. ೧೯೩೪ರಲ್ಲಿ ಕ್ಯಾನ್ಸರ್ ರೋಗಕ್ಕೆ ತುತ್ತಾಗಿ ಮೇರಿ ಕ್ಯೂರಿಯು ಇಹಲೋಕವನ್ನು ತ್ಯಜಿಸಿದರು. ವಿಜ್ಞಾನ ಕ್ಷೇತ್ರಕ್ಕೆ ತುಂಬಲಾಗದ ನಷ್ಟವಿದು.

ಎಲ್ಲ ಅಡೆತಡೆಗಳ ನಡುವೆಯೂ ಸಿಡಿದು ನಿಂತು, “Where there is a will, there is a way” ಎಂಬ ಮಾತನ್ನು ಸಾಧಿಸಿ, ಮಹಿಳೆಯರ ಆತ್ಮವಿಶ್ವಾಸವನ್ನು ಎತ್ತಿಹಿಡಿದವರು. ಮೇರಿಕ್ಯೂರಿ, ಜಗತ್ತಿಗೆ ಒಂದು ಸಂದೇಶವನ್ನು ಬಿಟ್ಟು ಹೋಗಿದ್ದಾರೆ: “ನಮ್ಮಲ್ಲಿ ಪ್ರತಿಯೊಬ್ಬರೂ ಸ್ವಯಂ ಅಭಿವೃದ್ಧಿಗಾಗಿ ಕರ್ತವ್ಯವನ್ನು ಮಾಡಬೇಕು. ಆದರೆ ಅದೇ ಸಮಯದಲ್ಲಿ ಎಲ್ಲಾ ಮಾನವ ಜನಾಂಗದ ಜವಾಬ್ದಾರಿಯನ್ನು ಹಂಚಿಕೊಳ್ಳಬೇಕು. ಮುಖ್ಯವಾಗಿ ಯಾರಿಗೆ ನಮ್ಮ ಸಹಾಯದ ಅಗತ್ಯವಿರುವುದೋ ಅಂತಹವರಿಗಾಗಿ ನಮ್ಮ ಸೇವೆಯನ್ನು ಮೀಸಲಿಡಬೇಕು”. ತನ್ನ ಜೀವಿತ ಕಾಲದಲ್ಲಿ ಹದಿನೈದು ಚಿನ್ನದ ಪದಕಗಳನ್ನು ಹತ್ತೊಂಬತ್ತು ಡಿಗ್ರಿಗಳನ್ನು ಈಕೆ ಪಡೆದಿದ್ದರೆಂದರೆ ಆಶ್ಚರ್ಯ ಪಡಬೇಕಾಗಿಲ್ಲ. ೧೯೯೫ನೇ ಇಸವಿಯಲ್ಲಿ ಫ್ರಾನ್ಸ್ ದೇಶದ ಅತ್ಯುತ್ಕೃಷ್ಟ ಗೌರವದ ಕುರುಹಾಗಿ ಮೇರಿ ಕ್ಯೂರಿ ಹಾಗೂ ಪೀರಿ ಕ್ಯೂರಿಯವರ ಚಿತಾಭಸ್ಮವನ್ನು ಫ್ರಾನ್ಸ್ ಸರಕಾರವು ಪ್ಯಾರಿಸ್‌ನ ಪ್ಯಾಂಥೆಯೊಲ್‌ಗೆ ಕಳುಹಿಸಿಕೊಟ್ಟಿತು. ಇನ್ನೊಮ್ಮೆ ಮೇರಿ ಕ್ಯೂರಿ ಈ ಮರಣೋತ್ತರ ಗೌರವಕ್ಕೆ ಪಾತ್ರಳಾದ ಏಕೈಕ ಮಹಿಳೆ ಎನಿಸಿಕೊಂಡರು.

ಭಾರತದಲ್ಲಿ ಪ್ರೋತ್ಸಾಹವು ನಿರುತ್ಸಾಹದಾಯಕವಾಗಿದ್ದರೂ ಇತ್ತೀಚೆಗೆ ವಿಜ್ಞಾನ ಕ್ಷೇತ್ರದಲ್ಲಿ ಗಮನಾರ್ಹ ಸಂಶೋಧನೆಗಳನ್ನು ನಡೆಸಿ, ಖ್ಯಾತಿವೆತ್ತ ಮಹಿಳೆಯರು

ಅನೇಕರಿದ್ದಾರೆ. ಭಾರತದ ಮಹಿಳೆಯರ 'ವಿಜ್ಞಾನದ ಜನನಿ' ಎನ್ನಲಾದ ಲೀಲಾವತಿಯ ಬಗ್ಗೆ ಈಗಾಗಲೇ ಅರಿತಿದ್ದೇವೆ.

೧. ಡಾ. ವಿ. ಶಾಂತ

ಮೊತ್ತಮೊದಲು ಹೆಸರಿಸಬಹುದಾದ ಮಹಿಳೆ ಡಾ. ವಿ. ಶಾಂತಾರವರು. ಚೆನ್ನೈಯ ಕ್ಯಾನ್ಸರ್ ಇನ್ಸಿಟ್ಯೂಟ್‌ನಲ್ಲಿ ಅಧ್ಯಕ್ಷರಾಗಿರುವ ಈಕೆಗೆ ಇತ್ತೀಚೆಗೆ ರಾಮೋನ್ ಮೆಗಸೆಸ್ಸೆ ಪುರಸ್ಕಾರವಿತ್ತು ಗೌರವಿಸಲಾಯಿತು. ಕ್ಯಾನ್ಸರ್ ಇನ್ಸಿಟ್ಯೂಟ್‌ನಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಒಳಗೊಂಡ ರೇಡಿಯೇಷನ್ ಆಂಕೊಲಜಿ (Radiation Oncology Dept) ವಿಭಾಗವನ್ನು ಭಾರತದಲ್ಲಿ ಪ್ರಥಮ ಬಾರಿಗೆ ಸ್ಥಾಪಿಸಿದ ಖ್ಯಾತಿ ಇವರದ್ದು. ಅಲ್ಲದೆ ಈಕೆ ಇಲ್ಲಿ ಮಕ್ಕಳ ಕ್ಯಾನ್ಸರ್ ಚಿಕಿತ್ಸೆಗಾಗಿ ಆಂಕೋಲೊಜಿ ವಿಭಾಗವನ್ನು ಸ್ಥಾಪಿಸಿದ್ದಾರೆ.

೨. ಡಾ. ಇಂದಿರಾ ಹಿಂದೂಜಾ

ಡಾ. ಇಂದಿರಾ ಹಿಂದೂಜಾರವರು ವೈದ್ಯಕೀಯ ಕ್ಷೇತ್ರದಲ್ಲಿ ಚಮತ್ಕಾರವನ್ನು ತೋರಿಸಿದವರು. ೧೯೮೬ರಲ್ಲಿ ಭಾರತದಲ್ಲಿ ಮೊತ್ತಮೊದಲ ಪ್ರನಾಳಿಕಾ ಶಿಶುವನ್ನು ಸೃಷ್ಟಿಸಿದವರು, ಸ್ತ್ರೀ ಪುರುಷರ ಅಂಡಾಣುಗಳನ್ನು ಪ್ರನಾಳಿಕೆಯಲ್ಲಿ ಸೇರಿಸಿ, ಸೂಕ್ಷ್ಮ ದರ್ಶಕದಲ್ಲಿ ಪರೀಕ್ಷೆಗಳಿಗೆ ಒಳಪಡಿಸಿ, ಯೋಗ್ಯವೆನಿಸಿದ ಅಂಡಾಣುವನ್ನು ತಾಯಿಯ ಗರ್ಭಕೋಶದಲ್ಲಿ ಅಳವಡಿಸಿ, ಪಡೆದ ಶಿಶುವೆ ಪ್ರನಾಳಿಕಾ ಶಿಶು, ಮೂರು ವರ್ಷಗಳ ಕಾಲ ಸತತವಾಗಿ ನಡೆಸಿದ ಸಂಶೋಧನೆಯ ಫಲ ಸ್ವರೂಪವೇ 'ಹರ್ಷ' ಎಂಬ ಮಗುವಿನ ಜನನ.

೩. ಶಕುಂತಲಾ ದೇವಿ

೧೯೩೯ರಲ್ಲಿ ಕರ್ನಾಟಕದಲ್ಲಿ ಜನಿಸಿದ ಶ್ರೀಮತಿ ಶಕುಂತಲಾ ದೇವಿಯವರನ್ನು ನಾವೆಲ್ಲರೂ 'ಮಾನವ ಕಂಪ್ಯೂಟರ್' ಎಂದೇ ಅರಿತಿದ್ದೇವೆ. ಈ ಗಣಿತಜ್ಞೆಯ ಯಾವುದೇ ಯಂತ್ರದ ಸಹಾಯವಿಲ್ಲದೆ ಲೀಲಾಜಾಲವಾಗಿ ಗಣಿತದ ಸಮಸ್ಯೆಗಳನ್ನು ಬಿಡಿಸುವ ಪ್ರತಿಭೆಯು ಅದ್ಭುತವಾದುದು. ೧೯೮೦ನೆಯ ಇಸವಿಯಲ್ಲಿ ೧೩ ಅಂಕೆಗಳಿರುವ ಎರಡು ಸಂಖ್ಯೆಗಳನ್ನು ಗುಣಿಸಿ, ಕೇವಲ ೨೮ ಸೆಕೆಂಡುಗಳಲ್ಲಿ ಉತ್ತರಿಸಿ, ಇಡೀ ವಿಶ್ವದಲ್ಲೇ ಪ್ರಖ್ಯಾತರಾದವರು. ಇತ್ತೀಚೆಗೆ ಜ್ಯೋತಿಷ್ಯಶಾಸ್ತ್ರದಲ್ಲೂ ಈಕೆ ಪಾರಂಗತರಾಗಿದ್ದಾರೆ.

೪. ಕಲ್ಪನಾ ಚಾವ್ಲಾ

ಅಮೇರಿಕದ (NASA)ದಲ್ಲಿ ತರಬೇತು ಪಡೆದಿದ್ದ ಗಗನಯಾತ್ರಿ ಶ್ರೀಮತಿ ಕಲ್ಪನಾ ಚಾವ್ಲಾ ಅಪ್ಪಟ ಭಾರತೀಯರು, ೨೯೬೨ ಅರ್ಜಿಗಳಲ್ಲಿ, ಕೊಲಂಬಿಯಾ ನೌಕೆಯಲ್ಲಿ ಗಗನಯಾತ್ರೆ ಕೈಗೊಳ್ಳಲು ಆರಿಸಿ ಬಂದಾಕೆ ಈಕೆ. ೪೧ರ ಹರೆಯದ ಕಲ್ಪನಾ ಚಾವ್ಲಾ ೨೦೦೩ ಫೆಬ್ರವರಿ ೧ ರಂದು ೧೬ ದಿನಗಳ ಯಾತ್ರೆಯ ನಂತರ

## ನೋಬೆಲ್ ಪುರಸ್ಕಾರಕ್ಕೆ ಪಾತ್ರರಾದ ಇತರ ಮಹಿಳೆಯರು

| ವಿಷಯ | ಕ್ರ.ಸಂ. | ಹೆಸರು | ವರ್ಷ | ರಾಷ್ಟ್ರದ ಹೆಸರು | ಅವಿಷ್ಕಾರ |
|---|---|---|---|---|---|
| ಭೌತಶಾಸ್ತ್ರ | ೧ | ಮೇರಿ ಸ್ಕ್ಲೊಡೋವ್‌ಸ್ಕ ಕ್ಯೂರಿ | ೧೯೦೩ | ಫ್ರಾನ್ಸ್ | ರಿಸರ್ಚ್ ಇನ್ ರೇಡಿಯೇಶನ್ & ಫಿನೋಮಿನ |
| ಭೌತಶಾಸ್ತ್ರ | ೨ | ಮಾರಿಯ ಗೊಯಪರ್ಟ್ ಮೆಯರ್ | ೧೯೬೩ | ಅಮೇರಿಕ | ನ್ಯೂಕ್ಲಿಯರ್ ಶೆಲ್ ಸ್ಟಕ್ಚರ್ |
| ರಸಾಯನಶಾಸ್ತ್ರ | ೧ | ಮೇರಿ ಸ್ಕ್ಲೊಡೋವ್‌ಸ್ಕ ಕ್ಯೂರಿ | ೧೯೧೧ | ಫ್ರಾನ್ಸ್ | ರೇಡಿಯಂ & ಪೊಲೋನಿಯಂ |
| ರಸಾಯನಶಾಸ್ತ್ರ | ೨ | ಐರೀನ್ ಜೊಲಿಯಟ್ ಕ್ಯೂರಿ | ೧೯೩೫ | ಫ್ರಾನ್ಸ್ | ಸಿಂಥಸೈಸಿಂಗ್ ರೇಡಿಯೋ ಆಕ್ಟಿವ್ ಎಲಿಮೆಂಟ್ಸ್ |
| ರಸಾಯನಶಾಸ್ತ್ರ | ೩ | ದೊರೊತಿ ಕ್ರೊವ್‌ಫುಟ್ ಹೊಡ್ಗ್‌ಕಿನ್ | ೧೯೬೪ | ಬ್ರಿಟನ್ | ಎಕ್ಸರೆ ಪ್ರೊಸಿಜರ್ಸ್ ಟು ಸ್ಟಡಿ ನ್ಯಾಚುರಲ್ ಸಬ್‌ಸ್ಟೆನ್ಸಸ್ |
| ಶರೀರ ಶಾಸ್ತ್ರ ಹಾಗೂ ವೈದ್ಯಕೀಯ | ೧ | ಗೆರ್‌ಟಿ ಥೆರೆಸ ಕೊರಿ | ೧೯೪೭ | ಯುಎಸ್‌ಎ | ಸ್ಟಡಿ ಆಫ್ ದಿ ಕೆಟಲಿಸ್ಟಿಕ್ ಕನ್‌ವರ್ಶನ್ ಆಫ್ ಗ್ಲೈಕೋಜನ್ |
| ಶರೀರ ಶಾಸ್ತ್ರ ಹಾಗೂ ವೈದ್ಯಕೀಯ | ೨ | ರೊಸಲಿನ್ ಸುಸ್‌ಮಾನ್ ಯಾಲೋ | ೧೯೭೭ | ಯುಎಸ್‌ಎ | ರೇಡಿಯೋ ಇಮ್ಯುನೋಸ್ಸೇ ಇನ್ ಇನ್‌ವೇಸ್ಟಿಗೇಟ್ ಮೆಡಿಸಿನ್ |
| ಶರೀರ ಶಾಸ್ತ್ರ ಹಾಗೂ ವೈದ್ಯಕೀಯ | ೩ | ಬಾರ್‌ಬರ ಮೆಕ್ ಕ್ಲಿನ್‌ಟೊಕ್ | ೧೯೮೩ | ಯುಎಸ್‌ಎ | ಜೆನೆಟಿಕ್ ಎಲಿಮೆಂಟ್ಸ್ |
| ಶರೀರ ಶಾಸ್ತ್ರ ಹಾಗೂ ವೈದ್ಯಕೀಯ | ೪ | ರೀಟಾ ಲೆವಿ ಮೊಂಟಾಲ್‌ಸಿನಿ | ೧೯೮೬ | ರೋಮ್ | ಸೆಲ್ ಗ್ರೋತ್ |
| ಶರೀರ ಶಾಸ್ತ್ರ ಹಾಗೂ ವೈದ್ಯಕೀಯ | ೫ | ಕ್ರಿಸ್ಟೀನ್ ನಸ್ಲೀನ್ | ೧೯೯೫ | ಜರ್ಮನಿ | ಜೆನೆಟಿಕ್ ಕಂಟ್ರೋಲ್ ಆಫ್ ಅರ್ಲಿ ಎಂಬ್ರಿಯೋನಿಕ್ ಡೆವಲಪ್‌ಮೆಂಟ್ |
| ಶರೀರ ಶಾಸ್ತ್ರ ಹಾಗೂ ವೈದ್ಯಕೀಯ | ೬ | ಗೆರ್‌ಟ್ರೂಡ್ ಎಲಿಯೋನ್ | ೧೯೯೮ | ಯುಎಸ್‌ಎ | ಪ್ರಿನ್ಸಿಪಲ್ಸ್ ಆಫ್ ಡ್ರಗ್ ಟ್ರೀಟ್‌ಮೆಂಟ್ |
| ಶರೀರ ಶಾಸ್ತ್ರ ಹಾಗೂ ವೈದ್ಯಕೀಯ | ೭ | ಲಿಂಡ್ ಬಿ ಬೊಕ್ | ೨೦೦೪ | ಯುಎಸ್‌ಎ | ಓಡರ್ ರೆಸಿಪ್ಟರ್ಸ್ ಆಫ್ ದಿ ಒಲ್‌ಫೆಕ್ಟರಿ ಸಿಸ್ಟಮ್ |

ಫ್ಲೋರಿಡಾದಲ್ಲಿ ಇಳಿಯುವುದಕ್ಕೆ ಸ್ವಲ್ಪ ಮೊದಲು ಗಂಟೆಗೆ ೨೦,೦೦೦ ಕಿ.ಮೀ. ವೇಗದಲ್ಲಿ ಚಲಿಸುತ್ತಿದ್ದ ಕೊಲಂಬಿಯಾ ನೌಕೆಯು ಅಪಘಾತಕ್ಕೆ ತುತ್ತಾಗಿ ಅಗ್ನಿವಶವಾದಾಗ, ನೌಕೆಯಲ್ಲಿದ್ದ ಇತರ ೬ ಯಾತ್ರಿಗಳೊಂದಿಗೆ ದುರಂತಕ್ಕೆ ಬಲಿಯಾದರು. [ಇಲ್ಲಿ ಇನ್ನೊಬ್ಬ ಅಂತಾರಾಷ್ಟ್ರೀಯ ಖ್ಯಾತಿಯ ಮಹಿಳಾ ಕಮಾಂಡರ್ ಐರೀನ್ ಕೊಲಿನ್ಸ್ ಬಾಹ್ಯಾಕಾಶ ನೌಕೆ 'ಡಿಸ್ಕವರಿ'ಯ ನೇತೃತ್ವವನ್ನು ವಹಿಸಿ, ೨೦೦೫ರ ಜುಲೈ ೨೬ರಿಂದ ಆಗಸ್ಟ್ ಹತ್ತರ ತನಕ ನಲ್ವತ್ತನಾಲ್ಕು ದಿನಗಳ ತನಕ ಯಶಸ್ವಿ ಹಾರಾಟ ನಡೆಸಿದುದನ್ನು ಸ್ಮರಿಸಬಹುದು. ಬಾಹ್ಯಾಕಾಶ ನೌಕೆಯನ್ನು ಕ್ಯಾಲಿಫೋರ್ನಿಯಾದ ಎಡ್ವರ್ಡ್ ಏರ್‌ಫೋರ್ಸ್ ಬೇಸ್‌ನಲ್ಲಿ ಯಶಸ್ವಿಯಾಗಿ ಇಳಿಸಿರುತ್ತಾರೆ. ಇದೇ ಕೊಲಂಬಿಯಾದ ನಂತರ ಹಾರಿದ ಮೊದಲ ನೌಕೆ.

೫. ಡಾ. ಕಿರಣ್ ಮಜುಂದಾರ್

ಭಾರತದಲ್ಲಿ ಬಯೋಟೆಕ್ನಾಲಜಿಯ ಕ್ರಾಂತಿಯನ್ನು ಹಬ್ಬಿಸಿದ ಖ್ಯಾತಿಗೆ ಪಾತ್ರರಾದವರು ಕರ್ನಾಟಕದವರೇ ಆದ ಡಾ. ಕಿರಣ್ ಮಜುಂದಾರ್ ಶಾಹರವರು, ಬಯೋಕಾನ್ ಇಂಡಿಯಾ ಕಾರ್ಪೊರೇಷನ್‌ನ ಮುಖ್ಯ ನಿರ್ವಹಣಾ ಅಧಿಕಾರಿಯಾಗಿ ರುವ ಈಕೆ ವಿಶ್ವದಲ್ಲಿಯೇ ಕೈಗಾರಿಕೆಯ ಬೆಳವಣಿಗೆಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಈಕೆಯ ಸಾಧನೆಯನ್ನು ಗುರುತಿಸಿ ೧೯೮೯ರಲ್ಲಿ ಭಾರತ ಸರಕಾರವು ಈಕೆಗೆ ಪದ್ಮಶ್ರೀ ಪದವಿಯನ್ನಿತ್ತು ಗೌರವಿಸಿದೆ.

೬. ಮಾಧುರಿ ಮಾಡೂ

ಸುಮಾರು ೪೦ ವರ್ಷಗಳ ಹಿಂದೆ ಭಾರತೀಯ ಮಹಿಳೆಯರ ಅಡುಗೆ ಮನೆಗೆ ಒಂದು ಅಮೂಲ್ಯ ಕೊಡುಗೆಯನ್ನಿತ್ತವರು ಶ್ರೀಮತಿ ಮಾಧುರಿ ಮಾಡೂರ್, 'ಸುಮಿತ್' ಮಿಕ್ಸಿಯ ಹೆಸರು ಕೇಳದ ಮಹಿಳೆಯರು ನಮ್ಮಲ್ಲಿಲ್ಲ. ಅಡುಗೆ ಮನೆಯಲ್ಲಿ ಮಹಿಳೆಯರಿಗೆ ಕೆಲಸ ಸುಲಭವಾಗುವಂತೆ ರುಬ್ಬುವ, ಪುಡಿಮಾಡುವ, ಹಣ್ಣಿನ ರಸ ತೆಗೆಯುವ ಯಂತ್ರವೊಂದನ್ನು ಆವಿಷ್ಕರಿಸಿದರು. ತಮ್ಮ ಇಂಜಿನಿಯರ್ ಪತಿಯ ಮಾರ್ಗದರ್ಶನದೊಂದಿಗೆ ಸಾಮಾನ್ಯ ಮಹಿಳೆಗೆ ಅತಿ ಉಪಯೋಗಿ ಉಪಕರಣವನ್ನು ಕೊಡುಗೆಯಾಗಿತ್ತವರು.

೭. ಏರ್ -ವೈಸ್ - ಮಾರ್ಶಲ್ ಡಾ, ಪದ್ಮಾ ಬಂದೋಪಾಧ್ಯಾಯ (ರಿಟೈರ್ಡ್)

ವೃತ್ತಿಯಲ್ಲಿ ವೈದ್ಯೆಯಾಗಿರುವ ಶ್ರೀಮತಿ ಪದ್ಮಾ ಬಂದೋಪಾಧ್ಯಾಯ ಏರ್- ವೈಸ್-ಮಾರ್ಶಲ್ ಪದವಿಗೇರಿದ ವಿಶ್ವದ ಪ್ರಥಮ ಮಹಿಳೆ ೧೯೬೮ನೇ ಇಸವಿಯಲ್ಲಿ ಭಾರತೀಯ ವಾಯು ಸೇನೆಗೆ ಸೇರಿದ ಮೊದಲ ಮಹಿಳಾ ವೈಮಾನಿಕ ವೈದ್ಯಕೀಯ ಪರಿಣಿತೆ, ಉತ್ತರ ಧ್ರುವದ ಬಗ್ಗೆ ಸಂಶೋಧನೆ ನಡೆಸಿದ ಮೊದಲ ಮಹಿಳೆ, ರಾಷ್ಟ್ರಾಧ್ಯಕ್ಷರಿಗೆ

ಗೌರವ ಶಸ್ತ್ರ ಚಿಕಿತ್ಸಕರಾಗಿ ನಿಯುಕ್ತಿಸಲ್ಪಟ್ಟ ಮೊದಲ ಮಹಿಳೆ, ಸೇವಾ ಮೆಡಲ್ ಹಾಗೂ ಅತಿ ವಿಶಿಷ್ಟ ಸೇವಾ ಮೆಡಲ್‌ಗಳಿಂದ ಪುರಸ್ಕರಿಸಲ್ಪಟ್ಟ ಈಕೆ ೨೦೦೨ರಲ್ಲಿ ಏರ್-ವೈಸ್-ಮಾರ್ಶಲ್ ಆದರು, ನಂತರ ಏರ್ ಹೆಡ್ ಕ್ವಾರ್ಟ್ರನಲ್ಲಿ ಡೈರೆಕ್ಟರ್ ಜನರಲ್ ಆಫ್ ಮೆಡಿಕಲ್ ಸರ್ವಿಸಸ್ ಆಗಿದ್ದು ೨೦೦೪ನೇ ಅಕ್ಟೋಬರ್ ಒಂದರಂದು ಸೇವೆಯಿಂದ ನಿವೃತ್ತರಾದರು.

೮. ಲೆಫ್ಟಿನೆಂಟ್ ಜನರಲ್ ಶ್ರೀಮತಿ ಪುನೀತ್ ಅರೋರ

ವೃತ್ತಿಯಲ್ಲಿ ವೈದ್ಯೆಯಾಗಿರುವ ಡಾ. ಪುನೀತ್ ಅರೋರ ಭೂಸೇನೆಯಲ್ಲಿ ಲೆಫ್ಟಿನೆಂಟ್ ಜನರಲ್ ಆದ ಮೊತ್ತ ಮೊದಲ ಮಹಿಳೆ, ೧೯೬೮ನೇ ಇಸವಿಯಲ್ಲಿ ಲೆಫ್ಟಿನೆಂಟ್ ಆಗಿ ಸೇನೆಗೆ ಸೇರಿದ ಈಕೆ ಸೇವಾ ಮೆಡಲ್, ಅತಿ ವಿಶಿಷ್ಟ ಸೇವಾ ಮೆಡಲ್ ಸೇರಿದಂತೆ ಹದಿನೈದು ಮೆಡಲ್‌ಗಳನ್ನು ತಮ್ಮ ಅವಿಶ್ರಾಂತ ಸೇವೆಗೆ ಪಡೆದವರು. ಸೇನೆಯ ಆಸ್ಪತ್ರೆಯಲ್ಲಿ ಗೈನಾಕೋಲಜಿ ಎಂಡೋಸ್ಕೋಪಿ (Gynacology Endoscopy) ಹಾಗೂ ಆಂಕೋಲಜಿ (Oncology) ವಿಭಾಗ ಏರ್ಪಡಿಸಿದುದು ಆಕೆಯ ಮಹತ್ವದ ಸಾಧನೆ ಹಾಗೂ ಈ ಕಾರ್ಯಕ್ಕಾಗಿ ಈಕೆಗೆ ಸೇವಾ ಮೆಡಲ್ ಇತ್ತು ಗೌರವಿಸಲಾಗಿದೆ. ಲೆಫ್ಟಿನೆಂಟ್ ಪುನೀತ್ ಅರೋರ ಅವರನ್ನು ವೈಸ್ ಅಡ್ಮಿರಲ್ ಬ್ಯಾಂಕಿನೊಂದಿಗೆ ನೌಕಾ ಸೇನೆಯ 'ಡೈರೆಕ್ಟರ್ ಜನರಲ್ ಆಫ್ ಮೆಡಿಕಲ್ ಸರ್ವಿಸಸ್ ಆಗಿ ೨೦೦೫ರ ಜೂನ್ ೨೦ರಂದು ನೇಮಿಸಲಾಗಿದೆ.

೭. ಮಹಿಳೆಯರನ್ನು ಪ್ರೋತ್ಸಾಹಿಸಲು ವಿಜ್ಞಾನ - ತಂತ್ರಜ್ಞಾನ ಕ್ಷೇತ್ರದಲ್ಲಿ ಲಭ್ಯವಿರುವ ಕೆಲವು ವಿಶೇಷ ಸವಲತ್ತುಗಳು:

ಇಡೀ ವಿಶ್ವದಲ್ಲೇ ವಿಜ್ಞಾನ ಅತಿ ವೇಗದಲ್ಲಿ ಬೆಳೆಯುತ್ತಿದೆ. ಸ್ವಾತಂತ್ರಾನಂತರ ಭಾರತದಲ್ಲಿ ವಿಜ್ಞಾನದ ಬೆಳವಣಿಗೆ ಅತಿ ವೇಗದಲ್ಲಿ ಆಗಿದೆ. ಮಹಿಳೆಯರು ತಮಗೆ ದೊರಕಿದ ಅವಕಾಶಗಳಲ್ಲೆಲ್ಲ ವಿಜ್ಞಾನದ ಬೆಳವಣಿಗೆಗೆ ವಿಶೇಷ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ವಿವಿಧ ಸಂಶೋಧನಾ ಕೇಂದ್ರಗಳು, ಸರಕಾರಿ ವಿಭಾಗಗಳು ಮಹಿಳೆಯರನ್ನು ಪ್ರೋತ್ಸಾಹಿಸಲು ಅನೇಕ ಸೌಲಭ್ಯಗಳನ್ನು ಘೋಷಿಸಿವೆ. ವಿದ್ಯಾರ್ಥಿ ವೇತನಗಳನ್ನು, ಫೆಲೋಷಿಪ್‌ಗಳನ್ನು ಮಹಿಳೆಯರಿಗಾಗಿ ಮೀಸಲಾಗಿಡಲಾಗಿದೆ.

೧. ಇಂಡಿಯನ್ ನ್ಯಾಷನಲ್ ಸಾಯನ್ಸ್ ಎಕಾಡೆಮಿಯು ಹೆಣ್ಣು ಮಕ್ಕಳು ವಿಜ್ಞಾನ ಕ್ಷೇತ್ರದಲ್ಲಿ ಮುಂದುವರಿಯಲು ಪ್ರೋತ್ಸಾಹಿಸುವಂತೆ ಸರಕಾರಕ್ಕೆ ಈ ಕೆಲವು ಸಲಹೆಗಳನ್ನು ಶಿಫಾರಸ್ಸು ಮಾಡಿದೆ. ಸರಕಾರಿ ಶಾಲೆಗಳಲ್ಲಿ ಓದುವ ಹೆಣ್ಣು ಮಕ್ಕಳಿಗೆ ಪ್ರಶಂಸಾರ್ಹ ವಿಶೇಷ ವಿದ್ಯಾರ್ಥಿ ವೇತನ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ಪಟ್ಟಣಗಳಿಗೆ ಬರುವ ಬಡ ಹೆಣ್ಣು ಮಕ್ಕಳಿಗೆ ಸಹಾಯಕ ಪ್ರಯಾಣ ಭತ್ಯೆ, ಉತ್ತಮ

ಪ್ರಯೋಗ ಶಾಲೆಗಳಲ್ಲಿ ಬೇಸಿಗೆ ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡಲು, ಹೆಣ್ಣು ಮಕ್ಕಳಿಗೆ ವಿಶೇಷವಾಗಿ ಸರಕಾರಿ ಶಾಲೆಗಳಿಂದ ಹಾಗೂ ಚಿಕ್ಕ ಪಟ್ಟಣಗಳಿಂದ ಬರುವ ಹೆಣ್ಣು ಮಕ್ಕಳಿಗೆ ಅವಕಾಶ ನೀಡುವುದು, ಕಾಲೇಜುಗಳಲ್ಲಿ ವಿಜ್ಞಾನವನ್ನು ಬೋಧಿಸುವ ಅಧ್ಯಾಪಿಕೆಯರಿಗೆ ಸಂಶೋಧನಾ ಪ್ರಾಜೆಕ್ಟ್‌ಗಳಲ್ಲಿ ಅಭ್ಯಾಸ ಮಾಡುವವರಿಗೆ ಅವಕಾಶ ನೀಡುವುದು ಹಾಗೂ ಪಿ.ಎಚ್.ಡಿ. ಮಾಡಲಿಚ್ಛಿಸುವವರಿಗೆ ವೇತನದೊಂದಿಗೆ ರಜೆ ನೀಡುವುದು, ಶ್ರೇಷ್ಠ ಮಹಿಳಾ ವಿಜ್ಞಾನಿಗಳಿಗೆ ವಿವಿಧ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಮುಖಾಮುಖಿ, ಉಪನ್ಯಾಸಗಳನ್ನು ನೀಡಲು, ಫೆಲೋಶಿಪ್ ನೀಡುವುದು, ಮಹಿಳಾ ವಿಜ್ಞಾನಿಗಳು ವೈಜ್ಞಾನಿಕ ಸಮ್ಮೇಳನದಲ್ಲಿ ಭಾಗವಹಿಸಲು, ವಿವಿಧ ಸಮಿತಿಗಳಲ್ಲಿ ನೇಮಕಾತಿಗೊಳ್ಳಲು ಅವಕಾಶ ಕಲ್ಪಿಸಿಕೊಡುವ ಉದ್ದೇಶಕ್ಕಾಗಿ ಅವರ ಪೂರ್ಣ ವಿವರಗಳುಳ್ಳ ವೆಬ್‌ಸೈಟ್ ಹಾಗೂ ಕೈಪಿಡಿಯನ್ನು ನಿರ್ಮಿಸುವುದು, ಕಾರಣಾಂತರಗಳಿಂದ ಕೈಬಿಟ್ಟ ವೃತ್ತಿ ಪನಃ ಹಿಂತಿರುಗುವಂತೆ ಮಹಿಳಾ ವಿಜ್ಞಾನಿಗಳಿಗೆ ಆಕರ್ಷಣೀಯ ಅವಕಾಶಗಳನ್ನು ಕಲ್ಪಿಸುವುದು, ಮಹಿಳಾ ವಿಜ್ಞಾನಿಗಳ ಜೀವನ ಚರಿತ್ರೆಯನ್ನು ದಾಖಲಿಸುವುದು ಹಾಗೂ ಹೆಣ್ಣು ಮಕ್ಕಳಿಗೆ ಪ್ರಾಮುಖ್ಯತೆ ನೀಡುವ ಕಾರ್ಯಕ್ರಮಗಳನ್ನು ಶಾಲೆಗಳೂ ಸೇರಿದಂತೆ ಎಲ್ಲ ಸಂಸ್ಥೆಗಳಲ್ಲೂ ಜಾರಿಗೆ ತರುವುದು.

೧. ವಿಶ್ವವಿದ್ಯಾಲಯ ಅನುದಾನ ಆಯೋಗ

ವಿಶ್ವವಿದ್ಯಾಲಯ ಅನುದಾನ ಆಯೋಗವು ಯಾವುದೇ ದಂಪತಿಗಳಿಗೆ ಏಕೈಕ ಹೆಣ್ಣು ಸಂತಾನವಿದ್ದಲ್ಲಿ, ಅಂತಹ ಯೋಗ್ಯ ಹೆಣ್ಣು ಮಕ್ಕಳಿಗೆ ಸ್ನಾತಕೋತ್ತರ ಪದವಿಯ ವಿದ್ಯಾಭ್ಯಾಸಕ್ಕಾಗಿ "ಸ್ನಾತಕೋತ್ತರ ಇಂದಿರಾಗಾಂಧಿ ವಿದ್ಯಾರ್ಥಿ ವೇತನ"ವನ್ನು ನೀಡುತ್ತಿದೆ. ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯ ಅಥವಾ ಸ್ನಾತಕೋತ್ತರ ಕಾಲೇಜುಗಳಲ್ಲಿ ಪ್ರವೇಶವನ್ನು ಪಡೆಯಬಹುದಾಗಿದೆ. ೧೨೦೦ ಮಹಿಳಾ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿ ವೇತನವು ದೊರೆಯುವ ಸೌಲಭ್ಯವಿದೆ. ಬೋಧನಾ ಶುಲ್ಕದ ವಿನಾಯಿತಿಯೊಂದಿಗೆ ಪ್ರತಿ ತಿಂಗಳೂ ರೂ. ೨೦೦೦/-ಯನ್ನು ಎರಡು ವರ್ಷಗಳವರೆಗೆ ಅರ್ಹ ವಿದ್ಯಾರ್ಥಿಗಳಿಗೆ ಪಡೆದುಕೊಳ್ಳಲು ಅವಕಾಶವಿದೆ.

ನಮ್ಮ ದೇಶದ ಹೆಣ್ಣು ಮಕ್ಕಳಿಗೆ ಅವಕಾಶಗಳು ದೊರೆತಲ್ಲಿ, ಜವಾಬ್ದಾರಿಯುತವಾಗಿ ಈ ದೇಶದ ವಿಜ್ಞಾನ - ತಂತ್ರಜ್ಞಾನದ ಅಭಿವೃದ್ಧಿಗೆ ಉನ್ನತ ಮಟ್ಟದ ಸೇವೆ ಸಲ್ಲಿಸುವುದರಲ್ಲಿ ಸಂಶಯವಿಲ್ಲ. ನಮ್ಮಲ್ಲಿ ಸಾಕಷ್ಟು ಪ್ರತಿಭೆಗಳು ವಿದೇಶಕ್ಕೆ ಪಲಾಯನ ಗೈಯುವ ಸಾಧ್ಯತೆಗಳಿವೆ. ತಮ್ಮ ಭಕ್ತಿಯ ಬಗ್ಗೆಯೂ ಯೋಚಿಸದೆ, ಕರ್ತವ್ಯ ನಿಷ್ಠೆಯನ್ನು ಅನುಸರಿಸುವ ಮಹಿಳೆಯರಿಗೆ ಹೆಚ್ಚಿನ ಪ್ರೋತ್ಸಾಹದ ಅಗತ್ಯವಿದೆ. ಆರಕ್ಷಣೆಯ ಹೆಸರಿನಲ್ಲಿ ಮಹಿಳೆಯನ್ನು ಶೋಷಣೆಗೊಳಪಡಿಸದೆ ಸಮಾನ ಅವಕಾಶಗಳನ್ನು ಇತ್ತು ಮುಕ್ತ ವಾತಾವರಣವನ್ನು

ಕಲ್ಪಿಸಬೇಕು. ವಿಜ್ಞಾನತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸುವುದರ ಮೂಲಕ ದೇಶವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸರ್ವ ಶ್ರೇಷ್ಠತೆಯತ್ತ ಕೊಂಡೊಯ್ಯುವ ಸೃಜನಶೀಲತೆ ಮಹಿಳೆಯರಲ್ಲಿದೆ.

೨. ಇಂಡಿಯನ್ ಕೌನ್ಸಿಲ್ ಫಾರ್ ಎಗ್ರಿಕಲ್ಚರಲ್ ರಿಸರ್ಚ್ (ICAR) ಎಂಬ ಮಂಡಳಿಯು ವಿತರಿಸುವ ೧೭ ಪ್ರಶಸ್ತಿಗಳಲ್ಲಿ ಒಂದು ಪ್ರಶಸ್ತಿಯನ್ನು ಮಹಿಳೆಯರಿಗೆ ಮೀಸಲಾಗಿಟ್ಟಿದೆ. ಮಹಿಳಾ ಕೃಷಿ ವೈಜ್ಞಾನಿಕರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಹಾಗೂ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಮಹಿಳೆಯರ ಕೊಡುಗೆಯನ್ನು ಗೌರವಿಸಲು 'ಪಂಜಾಬ್ ರಾವ್ ದೇಶ್‌ಮುಖ್ ಮಹಿಳಾ ಕೃಷಿ ವೈಜ್ಞಾನಿಕ ಪ್ರಶಸ್ತಿ'ಯನ್ನು (P.D.Deshmukh woman Agricultural Scientist Award) ೧೯೯೫ರಲ್ಲಿ ಘೋಷಿಸಲಾಗಿದೆ. ಪ್ರತಿ ವರ್ಷವೂ ರೂ, ೫೦,೦೦೦/- ಗಳನ್ನೊಳಗೊಂಡ ಈ ಪ್ರಶಸ್ತಿಯನ್ನು ಇಬ್ಬರು ಅರ್ಹ ಮಹಿಳಾ ವಿಜ್ಞಾನಿಗಳಿಗೆ ನೀಡಲಾಗುತ್ತದೆ. (ICAR) ಐ.ಸಿ.ಎ.ಆರ್. ಅಡಿಯಲ್ಲಿ ಕೆಲಸ ಮಾಡುವ ಹಾಗೂ ಯಾವುದೇ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳನ್ನು ನಡೆಸುವ ಮಹಿಳಾ ವಿಜ್ಞಾನಿಗಳು ಇದಕ್ಕೆ ಅರ್ಹರಾಗಿರುತ್ತಾರೆ.

೩. ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯವು ಇಲಾಖೆಯು "ಮಹಿಳಾ ವೈಜ್ಞಾನಿಕ್ ಪ್ರೋತ್ಸಾಹಕಿ ಪ್ರಕೋಷ್ಠ" ಎಂಬ ಶೀರ್ಷಿಕೆಯಡಿಯಲ್ಲಿ ಪ್ರತಿ ವರ್ಷವೂ, ಯಾವುದೇ ಒಂದು ವಿದ್ಯಾ ಸಂಸ್ಥೆ ಅಥವಾ ಸಂಶೋಧನಾ ಸಂಸ್ಥೆಯ ಮೂಲಕ ಬರುವ ವಿಜ್ಞಾನ ಕ್ಷೇತ್ರದಲ್ಲಿರುವ ಸ್ನಾತಕೋತ್ತರ ಪದವಿ ಪಡೆದ ಹಾಗೂ ಕಾರಣಾಂತರಗಳಿಂದ ಕೈ ಬಿಟ್ಟಿದ್ದ ಸಂಶೋಧನೆಯನ್ನು ಮುಂದುವರಿಸಲಿಚ್ಚಿಸುವ ಮಹಿಳೆಯರಿಗೆ ಮೂರು ವರ್ಷಗಳ ಅವಧಿಯವರೆಗೆ ಈ ಫೆಲೋಶಿಪ್‌ನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ನೀಡುತ್ತದೆ. ಮೊದಲನೆಯ ಹಂತದಲ್ಲಿ ತಿಂಗಳಿಗೆ ರೂ. ೧೫,೦೦೦/- ಗಳ ಅನುದಾನವಲ್ಲದೆ ಎರಡು ಮತ್ತು ಮೂರನೆಯ ಹಂತದಲ್ಲಿ ತಿಂಗಳಿಗೆ ರೂ. ೧೦,೦೦೦/- ವನ್ನು ಎರಡು ವರ್ಷಗಳವರೆಗೆ ನೀಡಲಾಗುತ್ತದೆ.

ಇದೇ ಇಲಾಖೆಯು ಸ್ನಾತಕೋತ್ತರ ಹಾಗೂ ಡಾಕ್ಟರೇಟು ಪದವಿಗಳನ್ನು ಪಡೆದ ಮಹಿಳಾ ವೈಜ್ಞಾನಿಕರಾಗಿ ವಿವಿಧ ಪ್ರಾಜೆಕ್ಟ್‌ಗಳನ್ನು ೨೦೦೫ನೇ ಇಸವಿಯಲ್ಲಿ ಮೀಸಲಿರಿಸಿದೆ. ಶರೀರ ವಿಜ್ಞಾನ, ರಾಸಾಯನ ವಿಜ್ಞಾನ, ಗಣಿತ ವಿಜ್ಞಾನ, ಜೀವ ವಿಜ್ಞಾನ, ಭೂ ವಿಜ್ಞಾನ, ವಾತಾವರಣ (ವಾಯು) ವಿಜ್ಞಾನ ಇಂಜಿನಿಯರಿಂಗ್ ವಿಜ್ಞಾನಗಳ ವಿವಿಧ ಪ್ರಾಜೆಕ್ಟ್‌ಗಳನ್ನು ವಿವಿಧ ವಯೋಮಿತಿಗಳವರಿಗೆ ವರ್ಗೀಕರಿಸಲಾಗಿದೆ. ಇವುಗಳಲ್ಲಿ ಅತಿ ಹೆಚ್ಚಿನ ಪ್ರಾಜೆಕ್ಟ್‌ಗಳು ೩೫-೪೫ ವಯಸ್ಸಿನ ಗುಂಪಿನವರಿಗೆ ದೊರಕಿಕೊಳ್ಳುವಂತೆ ನೋಡಿಕೊಳ್ಳಲಾಗಿದೆ. ಇಷ್ಟಲ್ಲದೆ ಮಹಿಳೆಯರಿಂದ ನಡೆಸಲ್ಪಡುವ ಸಂಶೋಧನೆಗಳಿಗೆ ಹಣಕಾಸು (Funding) ವ್ಯವಸ್ಥೆಯನ್ನೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ನೀಡುತ್ತಿದೆ.

೪. ಬಯೋಟೆಕ್ನಾಲಜಿ ಇಲಾಖೆಯು (Department of Biotechnology) ವರಿಷ್ಠ ಮಹಿಳಾ ವಿಜ್ಞಾನಿಗಳ ಬಯೋ ಟೆಕ್ನಾಲಜಿ ಸಂಬಂಧಿಸಿದ, ಸಮಾಜಕ್ಕೆ ಪ್ರಯೋಜನಕಾರಿಯಾಗುವ ಶ್ರೇಷ್ಠ ಸಂಶೋಧನಾ ಕಾರ್ಯಗಳಿಗೆ ಒಂದು ಲಕ್ಷ ರೂಪಾಯಿ, ಚಿನ್ನದ ಪದಕ ಹಾಗೂ ಪ್ರಶಂಸಾ ಪತ್ರವನ್ನೊಳಗೊಂಡ ಪುರಸ್ಕಾರವನ್ನು ಮೀಸಲಾಗಿರಿಸಿದೆ. ಇದೇ ರೀತಿಯ ಇನ್ನೊಂದು ರೂ. ೫೦,೦೦೦/- ಚಿನ್ನದ ಪದಕ ಹಾಗೂ ಪ್ರಶಂಸಾ ಪತ್ರವನ್ನೊಳಗೊಂಡ ಪ್ರಶಸ್ತಿಯನ್ನು ಯುವ ಮಹಿಳಾ ವಿಜ್ಞಾನಿಗೆ ನೀಡಲಾಗುತ್ತಿದೆ.

ನಮ್ಮ ದೇಶದ ಹೆಣ್ಣು ಮಕ್ಕಳಿಗೆ ಅವಕಾಶಗಳು ದೊರೆತಲ್ಲಿ ಜವಾಬ್ದಾರಿಯುತವಾಗಿ ದೇಶದ ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಗೆ ಉನ್ನತ ಮಟ್ಟದ ಸೇವೆ ಸಲ್ಲಿಸುವಲ್ಲಿ ಸಂಶಯವಿಲ್ಲ. ನಮ್ಮಲ್ಲಿ ಸಾಕಷ್ಟು ಪ್ರತಿಭಾವಂತರಿದ್ದಾರೆ. ತಮ್ಮ ಭದ್ರತೆಯ ಬಗ್ಗೆಯೂ ಯೋಚಿಸದೆ ಕರ್ತವ್ಯ ನಿಷ್ಠೆಯನ್ನು ಅನುಸರಿಸುವ ಮಹಿಳೆಯರಿಗೆ ಹೆಚ್ಚಿನ ಪ್ರೋತ್ಸಾಹದ ಅಗತ್ಯವಿದೆ. ಆರಕ್ಷಣೆಯ ಹೆಸರಿನಲ್ಲಿ ಮಹಿಳೆಯರನ್ನು ಶೋಷಣೆಗೊಳಪಡಿಸದೆ ಸಮಾನ ಅವಕಾಶಗಳನ್ನು ಇತ್ತು ಮುಕ್ತ ವಾತಾವರಣವನ್ನು ಕಲ್ಪಿಸಬೇಕು. ವಿಜ್ಞಾನ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸುವುದರ ಮೂಲಕ ದೇಶವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸರ್ವ ಶ್ರೇಷ್ಠತೆಯತ್ತ ಕೊಂಡೊಯ್ಯುವ ಸೃಜನಶೀಲತೆ ಮಹಿಳೆಯರಲ್ಲಿದೆ.

ಗ್ರಂಥ ಋಣ :

೧. ವಿನೀತಾ ಬಾಲ್ (೨೦೦೫) ಕರೆಂಟ್ ಸಾಯನ್ಸ್ (೮೮) ೮೭೭

೨. ಡಿಎಸ್‌ಟಿ (೨೦೦೪) ಕರೆಂಟ್ ಸಾಯನ್ಸ್ (೮೭) ೮೩೧

೩. ಭಾಸ್ಕರಾಚಾರ್ಯ http:/www.groups.des.st

೪. ಸಾಯನ್ಸ್ ಎಂಡ್ ಟೆಕ್ನಾಲಜಿ : http:/www.answers.com

೫. ಐ ಎನ್ ಎಸ್ ಎ (೨೦೦೫) ಕರೆಂಟ್ ಸಾಯನ್ಸ್ (೮೮) ೧೩೯೧

# ಸ್ತ್ರೀಭ್ರೂಣ ಹತ್ಯೆ ಮತ್ತು ತಂತ್ರಜ್ಞಾನ

- ನೇಮಿಚಂದ್ರ

ಸ್ತ್ರೀಭ್ರೂಣ ಹತ್ಯೆ ಮತ್ತು ತಂತ್ರಜ್ಞಾನವನ್ನು ಕುರಿತು ಹೇಳುವ ಮೊದಲು ಎರಡು ಪ್ರಸಂಗಗಳನ್ನು ಉಲ್ಲೇಖಿಸಲು ಇಷ್ಟ ಪಡುತ್ತೇನೆ.

ಇಪ್ಪತ್ತನೇ ಶತಮಾನದ ಆದಿಭಾಗ, ಮೇರಿ ಕ್ಯೂರಿ ತನ್ನ ಜೀವಿತ ಕಾಲದಲ್ಲಿಯೇ ದಂತ ಕಥೆಯಾಗಿದ್ದಳು. ಯಾವ ಸುವ್ಯವಸ್ಥಿತ ಪ್ರಯೋಗಶಾಲೆಯೂ ಇಲ್ಲದೆ, ಕನಿಷ್ಠ ಸೌಕರ್ಯಗಳಿಲ್ಲದೆ, ಮುರುಕು ಮರದ ಕೊಟ್ಟಿಗೆಯಲ್ಲಿ ಆಕೆ 'ರೇಡಿಯಂ' ಕಂಡು ಹಿಡಿದಳು, ವಿಜ್ಞಾನ ಚರಿತ್ರೆಯಲ್ಲಿಯೇ ಕಡು ಕಷ್ಟದ ಶೋಧನೆ ಇದಾಗಿತ್ತು. ನಾಲ್ಕು ವರ್ಷಗಳ ಪರಿಶ್ರಮದ ಕೊನೆಗೆ, ಟನ್ನುಗಟ್ಟಲೆ ಪಿಚ್ ಬ್ಲೆಂಡ್ ಅದುರನ್ನು ಸಂಸ್ಕರಿಸಿದ ಮೇಲೆ ಒಂದು ಚಿಟಕಿಯಷ್ಟು, ೦.೧ ಗ್ರಾಂನಷ್ಟು ರೇಡಿಯಂ ಅನ್ನು ಶುದ್ಧ ರೂಪದಲ್ಲಿ ಬೇರ್ಪಡಿಸಿದ್ದಳು. ರೇಡಿಯಂ ವಿಜ್ಞಾನದ ಮೂಲಭೂತ ನಂಬಿಕೆಗಳನ್ನೇ ಬದಲಿಸಿತ್ತು. ವಿಕಿರಣಶೀಲತೆಯ ಹೊಸ ಪ್ರಭೇದಕ್ಕೆ ಹುಟ್ಟು ಕೊಟ್ಟಿತು. ರೇಡಿಯಂ ಅತ್ಯಧಿಕ ಉಪಯೋಗದ ವಸ್ತುವಾಯಿತು. ದಿನದಿನವೂ ಹೊಸ ಹೊಸ ಉಪಯೋಗಗಳು ಹೊರಬಿದ್ದು, ರೇಡಿಯಂನ ಬೇಡಿಕೆಯೇರಿ, ರೇಡಿಯಂ ಕಾರ್ಖಾನೆಯೊಂದು ಜನ್ಮ ಪಡೆಯಿತು. ರೇಡಿಯಂನ ಕಣ ಕಣಕ್ಕೆ ಚಿನ್ನದ ಬೆಲೆಯಿತ್ತು. ಈ ಕ್ಷಣ ರೇಡಿಯಂನನ್ನು ಪೇಟೆಂಟ್ ಮಾಡಿ ಕ್ಷಣದಲ್ಲಿ ಕೋಟ್ಯಾಧೀಶ್ವರಳಾಗಬಲ್ಲ ಸಾಧ್ಯತೆಯಿತ್ತು. ಆದರ ಮೇರಿ 'ಪೇಟೆಂಟ್ ಮಾಡುವುದು ವೈಜ್ಞಾನಿಕ ಪ್ರವೃತ್ತಿಗೆ ವಿರುದ್ಧವಾದದ್ದು. ವಿಜ್ಞಾನಿ ತನ್ನ ಸಂಶೋಧನೆಯ ಫಲವನ್ನು ಮುಚ್ಚು ಮರೆಯಿಲ್ಲದೆ ಪ್ರಕಟಿಸಬೇಕು. ರೇಡಿಯಂನನ್ನು ಕ್ಯಾನ್ಸರ್ ಚಿಕಿತ್ಸೆಗೆ ಬಳಸಲಾಗುತ್ತಿದೆ. ರೇಡಿಯಂ ಮಾನವ ಸೇವೆಗೆ ಮೀಸಲು' ಎಂದು ಹೇಳಿ, ಅಷ್ಟೈಶ್ವರ್ಯವನ್ನು ತಿರಸ್ಕರಿಸಿ, ತನ್ನ ರೇಡಿಯಂನನ್ನು ಮಾನವ ಸೇವೆಗೆ ಮುಡಿಪಿಟ್ಟಳು.

'ಯುರೇನಿಯಂ ವಿದಲನ'ವನ್ನು ಮೊಟ್ಟ ಮೊದಲಿಗೆ ವಿವರಿಸಿದ ವಿಜ್ಞಾನಿ ಜರ್ಮನಿಯ ಲೀ ಮೇಟ್ನರ್, ಬರ್ಲಿನನಲ್ಲಿ ಭೌತವಿಜ್ಞಾನಿ ಲೀ ಮೇಟ್ಟ ಹಾಗೂ ರಸಾಯನಶಾಸ್ತ್ರಜ್ಞ ಆಟೋ ಹಾನ್, ನಾಲ್ಕು ವರ್ಷಗಳ ಸಂಶೋಧನೆಯ ಅಂಚಿಗೆ ಯುರೇನಿಯಂ ವಿದಲನವನ್ನು ಕಂಡು ಹಿಡಿದರು. ಯಹೂದಿಯಾದ ಲೀ ಮೇಟ್ಟಿ ನಾಜಿ ಭಯದಲ್ಲಿ ತಾನು ಮುವತ್ತು ವರ್ಷಗಳಿಂದ ನೆಲೆಸಿದ್ದ ಬರ್ಲಿನನ್ನು, ತನ್ನ ಸಂಶೋಧನೆಯನ್ನು ಬಿಟ್ಟು, ಜೀವ ಉಳಿಸಿಕೊಳ್ಳಲು ಜರ್ಮನಿ ಯಿಂದ ಹೊರಗೆ

ಓಡಬೇಕಾಯಿತು. ಬದುಕು ಅಸ್ತವ್ಯಸ್ತವಾದ ಈ ಸಂದರ್ಭದಲ್ಲಿ, ಅವರ ಜೊತೆ ಜೊತೆಯ ಸಂಶೋಧನೆಯನ್ನು ಆಟೋ ಹಾನ್ ತನ್ನ ಹೆಸರಿನಲ್ಲಿ ಪ್ರಕಟಿಸುತ್ತಿದ್ದ ಸಂದರ್ಭದಲ್ಲಿ ಎರಡನೇ ಮಹಾಯುದ್ಧ ಆರಂಭವಾಯಿತು, ಮೇಟ್ನ ಅಧ್ಯಯನ ತಿಳಿಸಿದ ಅಗಾಧ ಪರಮಾಣುವಿನ ಶಕ್ತಿಯನ್ನು ವಿಧ್ವಂಸಕ ಆಸ್ತವಾಗಿ ಪರಿವರ್ತಿಸಲು ಸ್ಪರ್ಧೆಯೇ ನಡೆಯಿತು. ಅಮೆರಿಕ ಅಣ್ವಸ್ತ್ರ ತಯಾರಿಕೆಯ 'ಮ್ಯಾನಹ್ಯಾಟನ್ ಯೋಜನೆ'ಯಲ್ಲಿ ಕೆಲಸ ಮಾಡಲು ಲೀ ಮೇಟ್ನರಳನ್ನು ಆಹ್ವಾನಿಸಿತು. ಮೇಟ್ನರ್ 'ತಾನೆಂದೂ ಇಂಥಾ ಅಗಾಧ ಶಕ್ತಿಯ ವಿಧ್ವಂಸಕ ಉಪಯೋಗದ ಪರವಿಲ್ಲ' ಎಂದು ಹೇಳಿ, ವಿಜ್ಞಾನದ ಉಪಯೋಗವನ್ನು ವಿಧ್ವಂಸಕ ಕೆಲಸಕ್ಕೆ ಬಳಸುವುದನ್ನು ವಿರೋಧಿಸಿದಳು. ಅಣ್ವಸ್ತ್ರ ತಯಾರಿಕೆಯಲ್ಲಿ ಭಾಗಿಯಾಗಲು ನಿರಾಕರಿಸಿದಳು.

* * *

ಮೇಲಿನ ಎರಡು ಉದಾಹರಣೆಗಳೂ, ಮಾನವತಾವಾದಿ ವಿಜ್ಞಾನಿಗಳು ಕೈಗೊಂಡ ನಿಲುವನ್ನು ತಿಳಿಸುತ್ತವೆ. ಮೇರಿ ಕ್ಯೂರಿ ಅಗಾಧ ಹಣದ ಸಾಧ್ಯತೆಯನ್ನು ತಳ್ಳಿ ಹಾಕಿ, ರೇಡಿಯಂನನ್ನು ಮಾನವಸೇವೆಗೆ ಸಮರ್ಪಿಸಿದಳು, ಲೀ ಮೇಟ್ನರ್ ವಿಜ್ಞಾನದ ದುರುಪಯೋಗದಲ್ಲಿ ಭಾಗಿಯಾಗಲು ನಿರಾಕರಿಸಿದಳು. ಇಂದು ನಮ್ಮಲ್ಲಿ ಇಂತಹ ಮಾನವತಾವಾದಿ ವಿಜ್ಞಾನಿಗಳ ಕೊರತೆ ಇದೆ.

ಯಾವುದೇ ವಿಜ್ಞಾನ, ತಂತ್ರಜ್ಞಾನ ತನ್ನಲ್ಲಿ ಅಪಾರ ಶಕ್ತಿಯನ್ನು, ಸಾಧ್ಯತೆಗಳನ್ನು ಅಡಗಿಸಿಕೊಂಡಿರುತ್ತದೆ. ಅದರ ಉಪಯೋಗ, ದುರುಪಯೋಗ ಎರಡರ ಸಾಧ್ಯತೆಯೂ ಸಮಾಜದ ಮೇಲೆ ತೀವ್ರ ಪರಿಣಾಮವನ್ನು ಬೀರಬಲ್ಲದು. ಸದುದ್ದೇಶ ಪ್ರೇರಿತವಾದ ವೈಜ್ಞಾನಿಕ ಸಂಶೋಧನೆಗಳೂ ದುರ್ಬಳಕೆಯಾಗಬಲ್ಲವು ಎನ್ನುವುದಕ್ಕೆ ಭ್ರೂಣ ಲಿಂಗ ಪತ್ತೆಗೆ ಕಂಡು ಹಿಡಿದ ತಂತ್ರಜ್ಞಾನಗಳೇ ಸಾಕ್ಷಿಯಾಗಿವೆ. ಮಾನವೀಯತೆ ಇಲ್ಲದ ವಿಜ್ಞಾನ ತಂತ್ರಜ್ಞಾನ ಅತ್ಯಂತ ಅಪಾಯಕಾರಿ. ಇಂದಿನ ಕೊಳ್ಳುಬಾಕ ಸಂಸ್ಕೃತಿಯಲ್ಲಿ ಲಾಭಕೋರತನವೇ ಮೂಲಮಂತ್ರವಾದ ಪರಿಸರದಲ್ಲಿ ಮೇರಿ ಕ್ಯೂರಿ, ಲೀ ಮೇಟ್ನರರಂತಹ ಮಾನವತಾವಾದಿ ವಿಜ್ಞಾನಿಗಳು ಸಿಗುವುದು ಅಪರೂಪವಾಗಿದ್ದಾರೆ. ಹಾಗೆಂದೇ ಜೀವ ಉಳಿಸುವ ಶಪಥ ತೆಗೆದುಕೊಂಡು ವೈದ್ಯರು, ತಂತ್ರಜ್ಞರು ಹಣದ ದುರಾಸೆಯಲ್ಲಿ ಸ್ತ್ರೀ ಭ್ರೂಣ ಹತ್ಯೆಯಲ್ಲಿ ಭಾಗಿಯಾಗುತ್ತಿದ್ದಾರೆ. ಲಾಭವೇ ಉದ್ದೇಶವಾಗಿ, ಮುಂದುವರೆದ ದೇಶಗಳು 'ಗಂಡು' ಹುಟ್ಟಿಸುವ ತಂತ್ರಜ್ಞಾನದತ್ತ ಭರದಿಂದ ಸಂಶೋಧನೆ ನಡೆಸುತ್ತಿವೆ.

ಹದಿನಾರು ವರ್ಷಗಳ ಹಿಂದಿನ ಮಾತು. ಬೆಂಗಳೂರಿನಲ್ಲಿ ವಾಸಿಸುತ್ತಿದ್ದರೂ, ತವರೂರಾದ ಮೈಸೂರಿನ ಡಾ. ಕವಲಗೋಡ್ ಅವರ ಬಳಿಗೆ ಪ್ರತಿ ತಿಂಗಳೂ ಹೋಗಿ ನಾನು ತೋರಿಸಿ ಕೊಳ್ಳುತ್ತಿದ್ದೆ. ಅವರೆಂದೂ ನನಗೆ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ಹೇಳಿರಲಿಲ್ಲ. ತುರ್ತು ಸಮಯಕ್ಕೆ ಇರಲಿ ಎಂದು, ಬೆಂಗಳೂರಿನ

ಓರ್ವ ವೈದ್ಯರ ಬಳಿಗೆ ಒಮ್ಮೆ ಹೋದೆ. ತಕ್ಷಣ ಆಕೆ ಅಲ್ಟಾಸೌಂಡ್ ಸ್ಕ್ಯಾನಿಂಗ್ ಬೇಕೆಂದರು. ಸ್ವತಃ ಮಾಡಿ, “ಎಂತಹ ಮಗು ಎಂದು ಹೇಳಲೆ?' ಎಂದು ನಗೆಯಾಡಿದರು. “ಅಗತ್ಯವಿಲ್ಲ, ಹೆರಿಗೆಯವರೆಗೂ ಕುತೂಹಲ ಉಳಿದಿರಲಿ' ಎಂದು ಹೇಳಿ ಹೊರಬಂದರೂ, ನನಗೆ ಈಕೆ ಸ್ಕ್ಯಾನಿಂಗ್ ಮಾಡಿಸಿದ್ದೇಕೆ, ಭ್ರೂಣದ ಲಿಂಗವನ್ನು ತಿಳಿಸಲು ಆತುರ ವ್ಯಕ್ತಪಡಿಸಿದ್ದೇಕೆ ಎಂದು ಅರ್ಥವಾಗಿರಲಿಲ್ಲ.

ಹೆರಿಗೆಗೆ ಇನ್ನೂ ಹದಿನೈದು ದಿನಗಳಿವೆ ಎನ್ನುವಾಗಲೆ, ನೋವು ಆರಂಭವಾಗಿತ್ತು. ಕಾರ್ಖಾನೆಯಿಂದ ಧಾವಿಸಿ ಮನೆಗೆ ಬಂದದ್ದೇ, ತವರಿಗೆ ಹೋಗುವ ವ್ಯವಧಾನವೇ ಇಲ್ಲದ ಕಾರಣ, ಮನೆಯ ಹಿಂಭಾಗದಲ್ಲೇ ಇದ್ದ ಸಣ್ಣ ನರ್ಸಿಂಗ್ ಹೋಂ'ಗೆ ಹೋಗಿ ಸೇರಿಕೊಂಡೆ, ಮತ್ತೆರಡು ಗಂಟೆಗಳಲ್ಲಿ ಹೆರಿಗೆಯಾಗಿತ್ತು, ಹೆಣ್ಣು ಕೂಸು. ಜನರಲ್ ವಾರ್ಡಿನಲ್ಲಿ ಮಲಗಿದಂತೆ, ಸ್ವಸ್ಥ ಮಗುವನ್ನು ಹೆತ್ತ ಸಂಭ್ರಮದಲ್ಲಿದ್ದೆ. ನನ್ನವರಾಗಲೆ, ಸಿಹಿ ಡಬ್ಬಿ ತಂದು ಆಸ್ಪತ್ರೆಯ ತುಂಬಾ ಹಂಚಿ ಬಿಟ್ಟಿದ್ದರು. ಆಚೆ ಮಂಚದಲ್ಲಿ ಮಲಗಿದ, ಚೊಚ್ಚಲ ಹೆಣ್ಣು ಹೆತ್ತ ಆ ಹೆಂಗಸಿಗೆ 'ಹೆಣ್ಣು ಹೆತ್ತಿರುವಾಗ ಸಿಹಿ ಹಂಚುವ ಸಂಭ್ರಮವೇನು' ಎಂದು ಅರ್ಥವಾಗಿರಲಿಲ್ಲ. ಮರು ದಿನ ಜೋಲು ಮುಖ ಹಾಕಿಕೊಂಡ ಆಕೆಯ ಗಂಡ ಮತ್ತು ಅತ್ತೆಯನ್ನು ನೋಡಿದ್ದೆ. ಮೊದಲ ಮಗು ಕೂಡಾ ಹೆಣಾಗಬಾರದೆಂದು ಬಯಸುವ ಇವರೆಂತಹ ವಿದ್ಯಾವಂತರು ಎಂದು ನನಗೆ ಅಚ್ಚರಿಯಾಗಿತ್ತು. ಬೆಂಗಳೂರು ನಗರದಲ್ಲಿ, ಮಧ್ಯಮ ವರ್ಗದ ವಿದ್ಯಾವಂತ ಕುಟುಂಬದಲ್ಲಿ ಕಂಡ ಈ ದೃಶ್ಯ ಮುಂದೆ ಅನೇಕ ಬಾರಿ, ಅನೇಕ ಕಡೆಗಳಲ್ಲಿ ನನ್ನ ಕಣ್ಣೆದುರು ಪುನರಾವರ್ತನೆಗೊಂಡಿತ್ತು. ನಮ್ಮ ರಾಜ್ಯದ ಹಳ್ಳಿಗಾಡುಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಬೆಂಗಳೂರು ಪಟ್ಟಣದಲ್ಲಿ ಸ್ತ್ರೀ ಭ್ರೂಣ ಹತ್ಯೆಗಳು ನಡೆಯುತ್ತವೆ ಎಂದರೆ ಅಚ್ಚರಿಯಾಗುತ್ತದೆ. ಬೆಂಗಳೂರಿನಂತಹ ಆಧುನಿಕ ನಗರದಲ್ಲಿ, ಭಾರತದ 'ಸಿಲಿಕಾನ್ ಕಣಿವೆ' ಎಂದು ಸಂಭ್ರಮಿಸುವ ತಾಣದಲ್ಲಿ, ವಾಯುಯಾನ, ಅಂತರಿಕ್ಷ ವಿಜ್ಞಾನದ ತವರೂರು ಎಂದು ಸಾರುವ ಪಟ್ಟಣದಲ್ಲಿ, ಹೆಣ್ಣು ಮಕ್ಕಳು ಹಗಲು-ಇರುಳು ಎನ್ನದೆ ದುಡಿಯುವ, ಎಲ್ಲ ರಂಗಗಳಲ್ಲಿ ಮುನ್ನುಗ್ಗುತ್ತಿರುವ ಈ ಸಮಯದಲ್ಲಿ, ಸ್ತ್ರೀಭ್ರೂಣ ಹತ್ಯೆಗಳು ತಡೆಯಿಲ್ಲದೆ, ತೀವ್ರಗತಿಯಿಂದ ಏರುತ್ತಿರುವುದು ವಿಪರ್ಯಾಸವಲ್ಲವೆ? ಬೆಂಗಳೂರು ನಗರ ಮತ್ತು ಜಿಲ್ಲೆಯ ಮಹಿಳಾ ಸಾಕ್ಷರತೆ ಶೇಕಡ ೭೯ರಷ್ಟಿದ್ದು, ರಾಜ್ಯದಲ್ಲೇ ಅತ್ಯಧಿಕವಾಗಿದೆ. ಹೀಗಿದ್ದೂ ಬೆಂಗಳೂರು ನಗರದಲ್ಲಿಯೂ 'ಹೆಣ್ಣು ಮಗು ಬೇಡೆನ್ನುವ ಸ್ಥಿತಿವಂತ, ವಿದ್ಯಾವಂತ ಜನರಿದ್ದಾರೆ.

ಇಂದು ಬೆಂಗಳೂರಿನ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳ ಮೇಲೆ ಹಾಕುತ್ತಿರುವ ಲಿಂಗಪತ್ತೆ ಆರೋಪದ ಕೇಸುಗಳು ದಿನದಿಂದ ದಿನಕ್ಕೆ ಏರುತ್ತಿವೆ. ಇಡೀ ಕರ್ನಾಟಕಕ್ಕೆ ಹೋಲಿಸಿ ದರೆ, ಬೆಂಗಳೂರಿನ ನರ್ಸಿಂಗ್ ಹೋಂಗಳು 'ಕೊಲೆಗಡುಕ ಪಟ್ಟಿಯ' ಮೇಲ್ಪಂಕ್ತಿಯಲ್ಲಿವೆ. ಪ್ರತಿ ತಿಂಗಳು ಬೆಂಗಳೂರಿನಲ್ಲಿ ಮೂರು ಕೇಸುಗಳಾದರೂ ಲಿಂಗಪತ್ತೆ ಅಪರಾಧದ ಮೇರೆಗೆ ದಾಖಲಾಗುತ್ತಿವೆ. ರಾಜ್ಯದಲ್ಲಿ ಸ್ತ್ರೀಭ್ರೂಣ ಹತ್ಯೆಯ

ಸಂಖ್ಯೆ ಎಷ್ಟು ಆತಂಕ ಹುಟ್ಟು ಹಾಕುತ್ತಿದೆಯೆಂದರೆ, ಸರಕಾರ ಕೂಡಾ ಎಚ್ಚೆತ್ತು ಅಲ್ಟ್ರಾಸೌಂಡ್ ಯಂತ್ರಗಳ ತಯಾರಕರಿಗೆ, ತಮ್ಮ ಗಿರಾಕಿಗಳ ಹೆಸರುಗಳು ಪಟ್ಟಿ ನೀಡಲು ಕೇಳಿದೆ. ಲೈಸೆನ್ಸ್ ಇಲ್ಲದೆ ನಡೆಸುತ್ತಿರುವ ನೂರಾರು ಕ್ಲಿನಿಕ್‌ಗಳಲ್ಲಿ ನಡೆಯುತ್ತಿರುವ ಭ್ರೂಣ ಲಿಂಗಪತ್ತೆಯನ್ನು ತಡೆಗಟ್ಟುವ ಪ್ರಯತ್ನಗಳು ನಡೆಯುತ್ತಿವೆ.

ಅಸಮಾನತೆಯ ಸೂಜಿಮೊನೆಯ ಮೇಲೆ ಡೋಲಾಯಮಾನವಾದ ಸಮಾಜದಲ್ಲಿ, ವಿಜ್ಞಾನತಂತ್ರಜ್ಞಾನದ ನವ ಸಂಶೋಧನೆಗಳು, ಅಭಿವೃದ್ಧಿಗಳು, ಹೆಣ್ಣನ್ನು ಮತ್ತಷ್ಟು ಶೋಷಿಸುವ ಅಸ್ತ್ರಗಳಾಗಿವೆ.

ತಂತ್ರಜ್ಞಾನದ ದುರ್ಬಳಕೆ

ವಿಜ್ಞಾನ ರಂಗಕ್ಕೂ ಸ್ತ್ರೀವಾದಿ ದೃಷ್ಟಿಕೋನ ಮತ್ತು ಲಿಂಗ ಸೂಕ್ಷ್ಮತೆಯ (gender sensitivity) ಅಗತ್ಯವಿದೆ. ವಿಜ್ಞಾನ-ತಂತ್ರಜ್ಞಾನ ಬಳಕೆಯಾಗುತ್ತಿರುವ ರೀತಿ, ಎಂಥಾ ತಂತ್ರಜ್ಞಾನ ನಮಗೆ ಬೇಕು, ಪುರುಷರಿಗೆ ಅನುಕೂಲಕರವಾದ ತಂತ್ರಜ್ಞಾನ ಮಹಿಳೆಯರಿಗೆ ಅನುಕೂಲವಿದೆಯೇ, ತಂತ್ರಜ್ಞಾನದಿಂದ ಮಹಿಳೆಯರ ಜೀವನದ ಮೇಲಾಗುತ್ತಿರುವ ಪ್ರಭಾವ, ತನ್ನ ಬದುಕಿಗೆ ಮಾರಕವಾದ ತಂತ್ರಜ್ಞಾನವನ್ನು ಮಹಿಳೆ ನಿಯಂತ್ರಿಸುವ ಬಗೆ ಇವೆಲ್ಲವುಗಳ ಅಗಾಧ ಚಿಂತನೆಯ ಅಗತ್ಯವಿದೆ.

ಕಾರಣ, ನಿರ್ಲಿಪ್ತ ಎನ್ನುವ ವಿಜ್ಞಾನ ಕೂಡಾ ಸಾಮಾಜಿಕ ಅಗತ್ಯಗಳ, ನಂಬಿಕೆಗಳ ದಿಕ್ಕಿನಲ್ಲಿಯೇ ಬೆಳೆಯುತ್ತದೆ. ಸಾಮಾಜಿಕ ಅಂಶಗಳು ವಿಜ್ಞಾನ-ತಂತ್ರಜ್ಞಾನದ ಹಾದಿಯುನ್ನು ರೂಪಿಸುತ್ತವೆ. ಪಿತೃಪ್ರಧಾನ ಸಮಾಜದಲ್ಲಿ ವಿಜ್ಞಾನದ ಅಳವಡಿಕೆಗಳು ಮಹಿಳಾ ಶೋಷಣೆಯ ಅಸ್ತ್ರವಾಗಬಲ್ಲವು. ಕೊಳ್ಳುಬಾಕ, ಲಾಭಕೋರಕ ಸಮಾಜಗಳು ಮಾನವೀಯತೆಯನ್ನು ಮರೆತು, ತಂತ್ರಜ್ಞಾನದ ನೇರ ದುರುಪಯೋಗಕ್ಕೆ ಕಾರಣವಾಗುತ್ತವೆ.

ಭಾರತದಲ್ಲಿ ೧೯೭೫ರಲ್ಲಿ 'ಆಲ್ ಇಂಡಿಯಾ ಇನಸ್ಟಿಟ್ಯೂಟ್ ಆಫ್ ಮೆಡಿಕಲ್ ಸಯನ್ಸ್ ಮೂಲಕ 'ಆಮ್ನಿಯೋ ಸಿಂಟೆಸಿಸ್' ಪರಿಚಯವಾಯಿತು. ವೈದ್ಯರು ಗರ್ಭವತಿ ಮಹಿಳೆಯ ಹೊಟ್ಟೆಗೆ ಒಂದು ಉದ್ದನೆಯ ಟೊಳ್ಳಾದ ಸೂಜಿಯನ್ನು ಚುಚ್ಚಿ, ಆಕೆಯ ಗರ್ಭಕೋಶದ ಒಳಗೆ, ಭ್ರೂಣದ ಸುತ್ತಲು ಇರುವ ಆಮ್ನಿಯಾಟಿಕ್ ದ್ರವವನ್ನು ಹೊರಗೆ ತೆಗೆದು, ಅದನ್ನು ಪರಿಶೀಲಿಸುವ ಕ್ರಮ ಇದು. ಇದರಿಂದ ಭ್ರೂಣಕ್ಕೆ ಸೋಂಕು ತಾಗುವ, ಗಾಯವಾಗುವ ಸ್ವಲ್ಪ ಮಟ್ಟಿನ ಸಾಧ್ಯತೆಯೂ ಇತ್ತು. ಭ್ರೂಣಾವಸ್ಥೆಯಲ್ಲಿ ವಂಶವಾಹಿಯಲ್ಲಿಯ ಕೊರತೆಗಳನ್ನು, ನ್ಯೂನತೆಗಳನ್ನು, ಅನುವಂಶಿಕ ರೋಗಗಳನ್ನು ಪತ್ತೆ ಮಾಡಲು ಬಂದ 'ಆಮ್ನಿಯೋಸಿಂಟಸಿಸ್' ತಂತ್ರ, ಬಲು ಶೀಘ್ರವಾಗಿ ಕೇವಲ ಭ್ರೂಣ ಲಿಂಗ ಪತ್ತೆಗೆ, ತಂದನಂತರದ ಹೆಣ್ಣು ಭ್ರೂಣ ಹತ್ಯೆಗೆ ದುರ್ಬಳಕೆಯಾಯಿತು.

ಎಪ್ಪತ್ತರ ದಶಕದ ಕೊನೆಯಲ್ಲಿ ಜನಸಾಮಾನ್ಯರಿಗೆ ಲಭ್ಯವಾದ ಈ ತಂತ್ರಜ್ಞಾನ, ಕೇವಲ ಐದು ವರ್ಷಗಳಲ್ಲಿ (೧೯೭೮ರಿಂದ ೧೯೮೩) ೭೮,೦೦೦ ಸ್ತ್ರೀ ಭ್ರೂಣಗಳ

ಹತ್ಯೆಗೆ ಕಾರಣವಾಯಿತು. ಇದೇ ಅವಧಿಯಲ್ಲಿ ಪ್ರತಿವರ್ಷವೂ ಹುಟ್ಟಿದ ಹನ್ನೆರಡು ಮಿಲಿಯ ಹೆಣ್ಣು ಮಕ್ಕಳಲ್ಲಿ, ಹದಿನೈದರ ವಯಸ್ಸನ್ನು ಮುಟ್ಟಿದ್ದು ಕೇವಲ ಒಂಬತ್ತು ಮಿಲಿಯ ಹೆಣ್ಣು ಮಕ್ಕಳು, ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶುವಿನ ಹತ್ಯೆ, ಹೆಣ್ಣು ಮಗುವಿನತ್ತ ನಿರ್ಲಕ್ಷ್ಯ, ಇವೆಲ್ಲವೂ ಆ ಆಘಾತಕಾರಿ ಅಂಕಿಸಂಖ್ಯೆಗಳಿಗೆ ಕಾರಣ.

ನಂತರ ಆಮ್ನಿಯೋಸಿಂಟೆಸಿಸ್ ಅನ್ನು ಅನುವಂಶಿಕವಾಗಿ ಬರುವ ರೋಗಗಳ ಕೇಸುಗಳಲ್ಲಿ ಮಾತ್ರ ಬಳಸಬೇಕೆಂಬ ನಿಯಮವನ್ನು ತಂದರೂ, ಇದು ಕೇವಲ ಸರಕಾರಿ ಸಂಸ್ಥೆಗಳಿಗೆ ಅನ್ವಯವಾಗಿತ್ತು. ಈ ತಾಂತ್ರಿಕತೆಯನ್ನು ಲಾಭಕೋರತನಕ್ಕೆ ಬಳಸಿಕೊಳ್ಳಲು ಖಾಸಗಿ ಕ್ಲಿನಿಕ್‌ಗಳು ರಾತ್ರೋರಾತ್ರಿ ಮೊಳಕೆ ಒಡೆದವು. ವಿಪರ್ಯಾಸವೆಂದರೆ, ಕುಡಿಯುವ ನೀರಿನಂತಹ ಮೂಲಭೂತ ಅಗತ್ಯವೂ ಇಲ್ಲದ ತಾಣಗಳಲ್ಲೂ ಆಮ್ನಿಯೋಸಿಂಟೆಸಿಸ್ ಕೇಂದ್ರಗಳು ಬಾಗಿಲು ತೆರೆದು ಕುಳಿತವು. ರೈತರು ದುಬಾರಿ ಬಡ್ಡಿದರದಲ್ಲಿ ಸಾಲ ತೆಗೆದುಕೊಂಡು ಈ ಪರೀಕ್ಷೆ ಮಾಡಿಸಿ ಕೊಳ್ಳುತ್ತಿದ್ದರು. ಇಂದು ಐನೂರು ಕೊಟ್ಟು ನಾಳೆ ಐದು ಸಾವಿರ ಉಳಿಸಿ' ಎಂದು ನಿರ್ಲಜ್ಜೆಯಿಂದ ಘೋಷಿಸಿದ ಜಾಹಿರಾತುಗಳು ಅಬ್ಬರಿಸಿದ್ದು ಇದೇ ಅವಧಿಯಲ್ಲಿ.

ಎಂಬತ್ತು ಮತ್ತು ತೊಂಬತ್ತರ ದಶಕಗಳಲ್ಲಿ ವೈದ್ಯ ತಂತ್ರಜ್ಞಾನದ ಅಭಿವೃದ್ಧಿಗಳು ಭ್ರೂಣ ಲಿಂಗ ಪತ್ತೆಯ ತಾಂತ್ರಿಕತೆಯನ್ನು ಸುಲಭವಾಗಿಸಿದವು. ತೊಂಬತ್ತರ ದಶಕದ ಆರಂಭದಿಂದ ಭ್ರೂಣಲಿಂಗ ಪತ್ತೆಗೆ 'ಅಲ್ಟ್ರಾಸೋನೋಗ್ರಫಿ' ಅತ್ಯಧಿಕವಾಗಿ ಉಪಯೋಗಿಸುತ್ತಿರುವ ತಂತ್ರಜ್ಞಾನವಾಗಿದೆ. ಮುಖ್ಯವಾಗಿ ಚುಚ್ಚದೆ ಕೊಯ್ಯದೆ ಲಿಂಗಪತ್ತೆ ಮಾಡಬಹುದಾದ ಈ ಸುಲಭ ತಂತ್ರಕ್ಕೆ, ಪ್ರಯೋಗಶಾಲೆಯ ಅಗತ್ಯವೇ ಇಲ್ಲ. ಅಲ್ಟ್ರಾ ಸೋನೋಗ್ರಫಿಯಲ್ಲಿ ೨೦,೦೦೦ ಕ್ಕಿಂತಲೂ ಅಧಿಕ ಆವೃತ್ತಿಯ ಶ್ರವಣಾತೀತ ತರಂಗಗಳನ್ನು ಮಾನವ ದೇಹದ ಮೇಲೆ ಹಾಯಿಸುತ್ತಾರೆ. ಇವು ಒಳಹೊಕ್ಕಾಗ ಅಂಗಾಂಗಗಳಿಂದ ಪ್ರತಿಫಲನಗೊಳ್ಳುತ್ತವೆ. ಈ ಪ್ರತಿಫಲನಗೊಂಡ ತರಂಗಗಳನ್ನು ಸಂವೇದಕಗಳು ಗ್ರಹಿಸಿ, ವಿದ್ಯುತ್ ಸಂಕೇತಗಳಾಗಿ ಅವನ್ನು ಪರಿವರ್ತಿಸಿ ಕಂಪ್ಯೂಟರಿಗೆ ಉಣಿಸುತ್ತವೆ. ಕಂಪ್ಯೂಟರುಗಳು ಈ ಮಾಹಿತಿಯನ್ನು ವಿಶೇಷ ರೀತಿಯಲ್ಲಿ ಸಂಸ್ಕರಿಸಿ ಪಟಲದ ಮೇಲೆ ಚಿತ್ರವನ್ನು ಮೂಡಿಸುತ್ತವೆ. ದೇಹದಲ್ಲಿ ಎಲ್ಲಿಯಾದರೂ ತಡೆ ಇದ್ದರೆ ಸ್ಪಷ್ಟವಾಗಿ ಎತ್ತಿ ತೋರಿಸುವ ಈ ತಂತ್ರಜ್ಞಾನ, ಮೂತ್ರಪಿಂಡದಲ್ಲಿಯ ಕಲ್ಲು ಮುಂತಾದ ರೋಗಗಳ ಪತ್ತೆಗೆ ಬಲು ಉಪಯೋಗಿ, ಆದರೆ ಇದನ್ನು ಇಂದು ಯಥೇಚ್ಛವಾಗಿ ಬಳಸುತ್ತಿರುವುದು, ಗರ್ಭದಲ್ಲಿರುವ ಭ್ರೂಣದ ಲಿಂಗಪತ್ತೆಗೆ.

೧೯೯೧ರ ಆರ್ಥಿಕ ಉದಾರೀಕರಣದ ನೀತಿ, ಭಾರತದ 'ಅಲ್ಟ್ರಾಸೌಂಡ್' ಮಾರುಕಟ್ಟೆಗೆ ಬಹುರಾಷ್ಟ್ರೀಯ ಕಂಪನಿಗಳು ಲಗ್ಗೆ ಇಡಲು ಕಾರಣವಾಯಿತು. ಇಂದು ಅನೇಕ ಕಂಪನಿಗಳು ಅಲ್ಟ್ರಾಸೌಂಡ್ ಯಂತ್ರವನ್ನು ಭಾರತದಲ್ಲಿಯೇ ತಯಾರಿಸತೊಡಗಿವೆ. ಇಲ್ಲಿಯೂ ಮಾರುಕಟ್ಟೆಯ ಪೈಪೋಟಿ, ಅಗ್ಗದ ಬೆಲೆಗೆ, ಸುಲಭವಾಗಿ ದೊರೆಯುವ,

ಎಲ್ಲಿಗೆ ಬೇಕಾದರೂ ಹೊತ್ತೊಯ್ಯಬಲ್ಲ ಯಂತ್ರ ಮಾದರಿಗಳ ವಿಕಾಸಕ್ಕೆ ದಾರಿಯಾಗಿದೆ. ವೈದ್ಯರು ಈ ಯಂತ್ರಗಳನ್ನು ರೋಗಿಗಳ ಮನೆಗೆ ಹೊತ್ತೊಯ್ದು, ಲಿಂಗಪತ್ತೆಯ ಸಲಹೆ ನೀಡತೊಡಗಿದ್ದಾರೆ! ಸುಲಭಕ್ಕೆ ಸಿಗುವ ಸಾಲದ ವ್ಯವಸ್ಥೆಯಿಂದಾಗಿ, ಇಂತಹ 'ಲಿಂಗಪತ್ತೆ ಕೇಂದ್ರ'ಗಳು ಅಣಬೆಗಳಂತೆ ಪುಟಿದೆದ್ದಿವೆ.

ಮುಂದುವರೆದ 'ಗಂಡು' ಹುಟ್ಟಿಸುವ ಸಂಶೋಧನೆ

ಯಾವುದೇ ವಿಜ್ಞಾನ ತಂತ್ರಜ್ಞಾನ ತನ್ನೊಳಗೆ ಅನೇಕ ಸಾಧ್ಯತೆಗಳನ್ನು ಅಡಗಿಸಿಕೊಂಡಿರುತ್ತದೆ. ವಂಶವಾಹಿಯನ್ನು ಕುರಿತಾದ ಸಂಶೋಧನೆ ಆಗಬಹುದು, ಪರಮಮಾಣುವಿನ ಸಂಶೋಧನೆಯಾಗಬಹುದು. ಅದರ ಉಪಯೋಗ ದುರುಪಯೋಗ ಎರಡರ ಸಾಧ್ಯತೆಯೂ ಗಮನಾರ್ಹವಾದದ್ದು. ಉದಾಹರಣೆಗೆ ಪ್ರಣಾಳ ಶಿಶು ಕುರಿತಂತಹ ಸಂಶೋಧನೆಯನ್ನೇ ತೆಗೆದುಕೊಳ್ಳೋಣ, ಪ್ರಣಾಳ ಶಿಶು ಗಂಭೀರ ತರಹದ ಅನುವಂಶಿಕ ಕಾಯಿಲೆಗಳನ್ನು ಪ್ರಣಾಳ ಸ್ಥಿತಿಯಲ್ಲಿ ಸರಿಪಡಿಸುವ ಸಾಧ್ಯತೆಯಾಗಿ, ಆರೋಗ್ಯಕರ ಸಂತತಿಯ ಉದ್ದೇಶದಿಂದ ಬಂದದ್ದು. ಆದರೆ 'ಪ್ರಣಾಳ ಶಿಶು' ತಂತ್ರದ ದುರುಪಯೋಗ ನಡೆಯಿತು. ಇನ್-ವಿಟ್ರೋ ಗರ್ಭದಾನದಿಂದ ಬೇಕಾದ ಲಿಂಗದ ಮಗುವನ್ನು ಆಯ್ದುಕೊಳ್ಳುವ ಸಾಧ್ಯತೆ ಬಂದಿತು. ಭಾರತದಂತಹ ದೇಶಗಳಲ್ಲಿ ಗಂಡು ಮಕ್ಕಳಿಗೆ ನೀಡಿರುವ ಅತಿ ಪ್ರಾಮುಖ್ಯ ಈ ತಂತ್ರದ ನೇರ ದುರಪಯೋಗಕ್ಕೆ ಕಾರಣ ವಾಯಿತು.

'ಗಂಡು ಹುಟ್ಟಿಸುವ' ತಂತ್ರಜ್ಞಾನದತ್ತ ಮುಂದುವರೆದ ದೇಶಗಳಲ್ಲಿ, ಬಹಳಷ್ಟು ವರ್ಷಗಳಿಂದ ಸಂಶೋಧನೆಗಳು ನಡೆಯುತ್ತಾ ಬಂದಿವೆ. ಅಮೇರಿಕೆಯ ರೋನಾಲ್ಡ್ ಎರಿಕ್ಸನ್ ಎಂಬ ಸಂತಾನೋತ್ಪನ್ನ ಶರೀರ ಶಾಸ್ತ್ರಜ್ಞ ಗರ್ಭಧಾರಣೆಗೆ ಮೊದಲೇ ಗಂಡು ಮಗುವನ್ನು ಆಯ್ದುಕೊಳ್ಳಬಹುದಾದಂತಹ ವೈಜ್ಞಾನಿಕ ತಂತ್ರವನ್ನು ಕುರಿತು ಕಂಡು ಹಿಡಿದು 'ಗಮೆಟ್ರಿಕ್ ಲಿಮಿಟೆಡ್' ಕಂಪನಿಯ ಹೆಸರಲ್ಲಿ, ಹದಿನೆಂಟು ವರ್ಷಗಳ ಹಿಂದೆಯೇ ಪೇಟೆಂಟ್ ಮಾಡಿದ ವರದಿಗಳಿವೆ. ಜಪಾನಿನಲ್ಲಿ ಡಾ. ರಿಹಾಚಿ ಇಜುಕಾ ಎಂಬಾತ ಶೇಕಡ ೮೫ರಷ್ಟು ಯಶಸ್ವಿಯಾದ ಗಂಡು ಹೆರುವ ತಂತ್ರವನ್ನು ಪ್ರಚಾರ ಮಾಡಿದ. ಬೇಕಾದ ಲಿಂಗದ ಮಗು ಪಡೆಯುವ ತಂತ್ರವನ್ನು ಅನುವಂಶಿಕ ರೋಗಗಳ ಪರಿಹಾರಕ್ಕಾಗಿ ಕಂಡು ಹಿಡಿದರೂ, ಜಪಾನಿನಲ್ಲಾಗದೆ ಇಪ್ಪತ್ತು ವರ್ಷಗಳ ಹಿಂದೆಯೇ ಉಪಯೋಗಕ್ಕೆ ಬಂದ ಈ ತಂತ್ರ ಹೆಣ್ಣು ಭ್ರೂಣದ ಸಾಧ್ಯತೆಯನ್ನೇ ತೆಗೆದು ಹಾಕುತ್ತದೆ. ಇದು ಸೆಂಟ್ರಿಫ್ಯೂಜನಲ್ಲಿ ವೀರ್ಯದಲ್ಲಿಯ 'ಎಕ್ಸ್' ಮತ್ತು 'ವೈ' ವರ್ಣತಂತು ಗಳನ್ನು ಬೇರ್ಪಡಿಸುವ ತಂತ್ರ.

ತಂತ್ರಜ್ಞಾನದ ಮುಂದುವರಿಕೆ ಇಲ್ಲಿಗೇ ನಿಂತಿಲ್ಲ. ಇಂದು ಅಮೆರಿಕದಲ್ಲಿ, 'ಫ್ಲ ಸೈಟೋಮೆಟ್ರಿಕ್' (flow cytometric) ಸಲಕರಣೆಯಲ್ಲಿ 'ಎಕ್ಸ್' ಮತ್ತು 'ವೈ' ವೀರ್ಯಾಣುಗಳನ್ನು ಸಮರ್ಥವಾಗಿ ಬೇರ್ಪಡಿಸಬಹುದಿದೆ. ಈ ತಂತ್ರಜ್ಞಾನದ ಬಗ್ಗೆ ವಿಶೇಷ ಸಂಶೋಧನೆ ಮತ್ತು ಪ್ರಯೋಗಗಳ ನಡೆಯುತ್ತಿವೆ. ಇದರಿಂದ ಬೇಕಾದ

ಲಿಂಗದ ಮಗುವನ್ನು ಪಡೆಯುವ ನೇರ ಸಾಧ್ಯತೆ ಇದೆ. 'ಫ್ಲೋ ಸೈಟೋಮೆಟ್ರಿ' ಬಹಳಷ್ಟು ನಿಖರವಾಗಿ 'ಎಕ್ಸ್' ಮತ್ತು 'ವೈ' ವೀರ್ಯಾಣುಗಳನ್ನು ಬೇರ್ಪಡಿಸುವ ಸಲಕರಣೆಯಾಗಿದೆ. ಈ ತಂತ್ರದಲ್ಲಿ ವೀರ್ಯಾಣುಗಳಿಗೆ ವಿಶೇಷವಾಗಿ ಬಣ್ಣ ಕೊಡುತ್ತಾರೆ. ನಂತರ, ಲೇಸರ್ ಕಿರಣಗಳನ್ನು ಈ ಬಣ್ಣ ಬರಿಸಿದ ವೀರ್ಯಾಣುಗಳ ಮೂಲಕ ಹಾಯಿಸುತ್ತಾರೆ. ಶೇಕಡ ೨.೮ರಷ್ಟು ಭಾರವಿರುತ್ತದೆ. ಹಾಗಾಗಿ ಹಾಯ್ದ ಲೇಸರ್ ಕಿರಣ, ಭಾರವಾದ 'ಎಕ್ಸ್' ವೀರ್ಯಾಣವನ್ನು, ಹಗುರವಾದ 'ವೈ' ವೀರ್ಯಾಣುವಿನಿಂದ ಬೇರ್ಪಡಿಸುತ್ತದೆ. ಅದಾಗಲೆ ಈ ತಂತ್ರವನ್ನು, ಮೊಲ ಮತ್ತು ಅನೇಕ ಪ್ರಾಣಿಗಳ ಮೇಲೆ ಪ್ರಯೋಗ ಮಾಡಿದ್ದಾರೆ. ೧೯೯೫ರಲ್ಲಿಯೇ ಮನುಷ್ಯರ ಮೇಲೆ ಪ್ರಯೋಗ ನಡೆಸಿದ ವರದಿಗಳಿವೆ. ಅಮೆರಿಕದ ಕೃಷಿ ವಿಭಾಗ (United States Department ofAgriculture - USDA) ಫ್ಲೋ ಸೈಟೋಮೆಟ್ರಿ ವಿಂಗಡಣೆಯ ವಿಧಾನಕ್ಕೆ ಪೇಟೆಂಟ್ ಪಡೆದಿದೆ. ವರ್ಜಿನಿಯಾದ 'ದಿ ಜೆನೆಟಿಕ್ಸ್ ಅಂಡ್ ಐ.ವಿ.ಎಫ್. ಸಂಸ್ಥೆ'ಗೆ ಈ ತಂತ್ರದ ಸುರಕ್ಷಿತ ಹಾಗೂ ಸಮರ್ಥ ಉಪಯೋಗವನ್ನು ಕುರಿತು ಅಧ್ಯಯನ ಮಾಡಲು ಲೈಸೆನ್ಸ್ ಕೊಟ್ಟಿದೆ. ೧೯೯೮ರಲ್ಲಿ ನಡೆದ ಸಂಶೋಧನೆಯ ಫಲಿತಾಂಶಗಳು ಸ್ತ್ರೀಲಿಂಗ ಆಯ್ಕೆಯಲ್ಲಿ ಈ ತಂತ್ರ, ಶೇಕಡ ೯೨೯ ರಷ್ಟು ಯಶಸ್ವಿಯಾಗಿದ್ದನ್ನು, ಪುರುಷಲಿಂಗ ಆಯ್ಕೆಯಲ್ಲಿ ಶೇಕಡ ೭೨ರ ಯಶಸ್ವಿಯಾದದ್ದನ್ನು ತೋರಿಸಿವೆ. ಹೆಚ್ಚಿನ ಸಂಶೋಧನೆಯ ಹಂತದಲ್ಲಿರುವ ಈ ತಂತ್ರಜ್ಞಾನ ಈಗ 'ಪುರುಷಲಿಂಗ ಆಯ್ಕೆ'ಯ ಯಶಸ್ಸನ್ನು ಹೆಚ್ಚಿಸುವತ್ತ ಮುಂದುವರೆದಿದೆ, ವೀರ್ಯಾಣುಗಳನ್ನು ಬಣ್ಣದಲ್ಲಿ ತೋಯಿಸುವುದರಿಂದ ಮತ್ತು ಲೇಸರ್ ಕಿರಣವನ್ನು ಅವುಗಳ ಮೂಲಕ ಹಾಯಿಸುವುದರಿಂದ, ಹುಟ್ಟುವ ಮಕ್ಕಳ ಮೇಲೆ ಯಾವ ಪರಿಣಾಮವಾಗಬಲ್ಲದು ಎಂದು ಇನ್ನೂ ಸ್ಪಷ್ಟವಾಗಿ ತಿಳಿದು ಬಂದಿಲ್ಲ, ಬಹಳಷ್ಟು ಮನುಷ್ಯರ ಮೇಲಿನ ಪ್ರಯೋಗಗಳ ನಂತರವಷ್ಟೇ ಇದನ್ನು ಸಾಬೀತು ಮಾಡಲು ಸಾಧ್ಯ.

ಗಮನಿಸಬೇಕಾದದ್ದು, ಅಮೆರಿಕದಂತಹ ದೇಶದಲ್ಲೂ ದಂಪತಿಗಳು ಮೊದಲ ಮಗು ಗಂಡಾಗಲಿ ಎಂದು ಬಯಸುತ್ತಾರೆ. 'ಬೇಕಾದ ಲಿಂಗದ ಮಗುವನ್ನು ಪಡೆಯುವುದು ತಮ್ಮ ವೈಯುಕ್ತಿಕ ಆಯ್ಕೆ ಮತ್ತು ಹಕ್ಕು' ಎಂದು ತಿಳಿಯುತ್ತಾರೆ. ವೈಯಕ್ತಿಕ ಆಯ್ಕೆ, ಸಾರ್ವತ್ರಿಕ ಒಳಿತಿಗೆ ವಿರುದ್ಧವಿದ್ದಾಗ ಅದಕ್ಕೆ ಖಂಡಿತಾ ಅವಕಾಶವಿರಬಾರದು. ಯಾವ ಸಮಾಜದಲ್ಲಿ ಗಂಡು ಹೆಣ್ಣಿನ ನಡುವೆ ಸಮಾನತೆ ಇದೆಯೋ, ಯಾವ ಸಂಸ್ಕೃತಿಯಲ್ಲಿ ಒಂದು ಲಿಂಗದ ಮಗುವಿಗೆ ವಿಪರೀತದ ಪ್ರಾಮುಖ್ಯವಿಲ್ಲವೋ, ಅಂತಹ ಸಮಾಜದಲ್ಲಿ ಇಂತಹ ತಂತ್ರಜ್ಞಾನಗಳು ಮಾರಕವಾಗದೆ ಉಳಿಯಬಲ್ಲವು, ಅಂತಹ ಸಮಾಜದಲ್ಲಿ ಈ ಬಗೆಯ 'ಗರ್ಭಧಾರಣೆಗೆ ಮೊದಲೆ ಭ್ರೂಣ ಲಿಂಗ ಆಯ್ಕೆ'ಯ ಅವಕಾಶ, ದಂಪತಿಗಳಿಗೆ ತಮ್ಮ ಕುಟುಂಬದೊಳಗೆ ಲಿಂಗ ವೈವಿಧ್ಯತೆಯನ್ನು ಉಳಿಸಿಕೊಳ್ಳುವ ಸಾಧ್ಯತೆಯನ್ನು ನೀಡಬಲ್ಲದು. ಉದಾಹರಣೆಗೆ ಮೊದಲನ ಮಗು ಗಂಡಾಗಿದ್ದಾರೆ,

ದಂಪತಿಗಳು ಈ ತಂತ್ರವನ್ನು ಬಳಸಿ, ಎರಡನೆಯದನ್ನು ಹೆಣ್ಣಾಗಿ ಮಾಡಿಕೊಳ್ಳಬಲ್ಲರು. ಹಾಗೆಯೇ ಮೊದಲನೆಯದು ಹೆಣ್ಣಾಗಿದ್ದರೆ, ಎರಡನೆಯದನ್ನು ಗಂಡಾಗಿ ಪಡೆಯಬಲ್ಲರು.

ಆದರೆ ಭಾರತದಂತಹ ಸಮಾಜದಲ್ಲಿ ಲಿಂಗ ತಾರತಮ್ಯ ವಿಪರೀತವಿರುವಾಗ ಗಂಡು ಮಗುವಿನ ತೀವ್ರ ಮೋಹ, ಗಂಡಿಗಿರುವ ಆಸ್ತಿಹಕ್ಕು, ವರದಕ್ಷಿಣೆಯ ಆಮಿಷ, ಗಂಡು ಮಗುವಿನಿಂದಲೇ 'ಪಿಂಡ ಪ್ರದಾನವಾಗಿ ತಮಗೆ ಸ್ವರ್ಗದ ಬಾಗಿಲು ತೆರೆಯುತ್ತದೆ' ಎಂಬ ನಂಬಿಕೆ-ಇವೆಲ್ಲವೂ ಇಂತಹ ತಂತ್ರಜ್ಞಾನ ನಮ್ಮ ದೇಶಕ್ಕೆ ಪ್ರವೇಶ ಪಡೆದರೆ, ಬಲು ಅಪಾಯಕಾರಿ ಎಂದು ಸ್ಪಷ್ಟ ಪಡಿಸುತ್ತವೆ. 'ಯಾರು ಈ ತಂತ್ರವನ್ನು ಬಳಸಿ ಮಕ್ಕಳನ್ನು ಮಾಡಿಕೊಂಡರು? ಯಾರಿಲ್ಲ?' ಎಂಬುದು ಕೂಡಾ ತಿಳಿಯುವುದಿಲ್ಲ. ಇಂದೇನೋ, ಭ್ರೂಣ ಲಿಂಗಪತ್ತೆ ತದನಂತರದ ಗರ್ಭಪಾತದ ರೇಜಿಗೆ, ಇವುಗಳು ಉಳಿಸುವ ಪುರಾವೆಗಳಿಂದ ಅಪರಾಧದ ಪತ್ತೆ ಸಾಧ್ಯವಾಗುತ್ತಿದೆ. ಏನೊಂದೂ ಸೂಚನೆ, ಪುರಾವೆ ಉಳಿಸದೆ, ಫಲಿಸುವ ಮೊದಲ, ಗರ್ಭ ಧರಿಸುವ ಮೊದಲೆ, 'ಹೆಣ್ಣನ್ನು ಇಲ್ಲ'ವಾಗಿಸುವ ಹೊಸ ತಂತ್ರ ಭಾರತದ ಮಟ್ಟಿಗೆ ಬಲು ಅಪಾಯಕಾರಿ, ಅಮೆರಿಕದಲ್ಲಿ ಬಲು ಬೇಗನೆ ಜನಸಾಮಾನ್ಯರ ಕೈಗೆ ಎಟಕಲಿರುವ ತಂತ್ರಜ್ಞಾನದ ಮುಂದಾಲೋಚನೆ ಇಲ್ಲದೆ, ಈ ತಂತ್ರವನ್ನು ಯಾವ ನಿರ್ಬಂಧನವಿಲ್ಲದ ಆಮದು ಮಾಡಿಕೊಂಡು, ಬಹುರಾಷ್ಟ್ರೀಯ ಕಂಪನಿಗಳು 'ಅಲ್ಟ್ರಾ ಸೌಂಡ್' ಯಂತ್ರಗಳಂತೆಯೇ, 'ಗ್ಲೋ ಸೈಟೋಮೆಟ್ರಿಕ್' ಯಂತ್ರಗಳನ್ನು ಭಾರತಕ್ಕೆ ತಂದು ತುಂಬುವ ಕಾಲ ದೂರವಿರುವುದಿಲ್ಲ. ಇತ್ತೀಚಿನ ಕ್ಲೋನಿಂಗ್ ಪ್ರಯೋಗಗಳು, ಬರೀ ಗಂಡು ಮಕ್ಕಳ ಕೋನಿಂಗಗೆ ಮುಂದೊಂದು ದಿನ ಮೆಟ್ಟಿ ನಿಂತರೆ ಅಚ್ಚರಿ ಪಡಬೇಕಿಲ್ಲ.

ಲಾಭವೇ ಮುಖ್ಯವಾದಾಗ, ಮಾರಾಟವೇ ಹುನ್ನಾರವಾದಾಗ, ಸಾಮಾಜಿಕ ಕಳಕಳಿ ಇಲ್ಲದೆ ವ್ಯಾಪಾರಿ ಮನೋಭಾವ, ಭಾರತದ ಮಹಿಳೆಯ ಮಟ್ಟಿಗೆ ಬಲು ಭಯಂಕರ ಭವಿಷ್ಯವನ್ನು ತೋರಿಸುತ್ತದೆ. ಅಲ್ಟ್ರಾಸೌಂಡ್ ಯಂತ್ರಗಳ ಹಾವಳಿಯಿಂದಾಗಲಿ, ವೇಗವಾಗಿ ಇಳಿಮುಖ ವಾಗುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆ, ಇಂತಹ ಹೊಸ ತಂತ್ರಜ್ಞಾನದಿಂದ ಪಾತಾಳಕ್ಕಿಳಿಯುವ ಸಾಧ್ಯತೆ ಇದೆ. ಲಿಂಗಪತ್ತೆಯ ಹೊಸ ಹೊಸ ತಂತ್ರಜ್ಞಾನಗಳು ಭಾರತದ ಮಾರುಕಟ್ಟೆಗೆ ಪ್ರವೇಶಿಸದಂತೆ ಕ್ರಮ ತೆಗೆದುಕೊಳ್ಳುವ ವರ್ತು ಅಗತ್ಯವಿದೆ.

ಜನಸಂಖ್ಯಾ ನಿಯಂತ್ರಣವೊಂದೇ ಉದ್ದೇಶವಾಗಿ ಆರಂಭದಲ್ಲಿ ಪ್ರೋತ್ಸಾಹ ಪಡದ ತಂತ್ರಗಳು ಸಮಾಜಕ್ಕೆ ಮಾರಕವಾದದ್ದನ್ನು ನೋಡಿದ್ದೇವ ನೈತಿಕ ತಳಹದಿ ಇಲ್ಲದ ಸಮಾನತೆಯ ಸ್ವಸ್ಥ ಸಮಾಜವನ್ನು ಕಟ್ಟುವ ದೂರದೃಷ್ಟಿ ಇಲ್ಲದೆ ತೆಗೆದುಕೊಳ್ಳುವ ನಿರ್ಣಯಗಳು ಮಾರಕವಾಗಬಲ್ಲವು. ಲಿಂಗ ಸೂಕ್ಷ್ಮತೆಯಿಲ್ಲದ ತಂತ್ರಜ್ಞಾನದ ಸಂಶೋಧನೆ ನಡೆಸುವ ವಿಜ್ಞಾನಿಗಳು, ಅದನ್ನು ಬಳಸುವವೈದ್ಯರು, ತಂತ್ರಜ್ಞರು, ಎಲ್ಲರೂ ಈ ಅಪರಾಧದಲ್ಲಿ ಭಾಗಿಗಳು.

ಲಿಂಗ ಪ್ರಮಾಣದಲ್ಲಿ ಅಸಮತೋಲನ

ಜಗತ್ತಿನಾದ್ಯಂತದ ಲಿಂಗ ಪ್ರಮಾಣವನ್ನು (Sex ratio) ಹೋಲಿಸಿ ನೋಡಿದರೆ, ದೇಶ ದೇಶಗಳ ನಡುವೆ ವ್ಯತ್ಯಾಸಗಳು ಎದ್ದು ಕಾಣುತ್ತವೆ. ಒಂದೇ ದೇಶದಲ್ಲಿ ಬೇರೆ ಬೇರೆ ಭಾಗಗಳಲ್ಲಿಯೂ ವ್ಯತ್ಯಾಸಗಳನ್ನು ಕಾಣುತ್ತೇವೆ. ಆಯಾ ದೇಶಗಳ ಭಾಗಗಳ, ಹೆಣ್ಣು-ಗಂಡುಗಳ ಪ್ರಮಾಣ, ಆಯಾ ತಾಣದ ಸ್ತ್ರೀ-ಪುರುಷ ಸಮಾನತೆಯ ಮಾಪಕದಂತಿದೆ ಅಂದರೆ, ಆಯಾ ನೆಲದ ಹೆಣ್ಣು ಮಕ್ಕಳ ಸಂಖ್ಯೆಗೂ, ಅಲ್ಲಿಯ ಲಿಂಗ ನೀತಿಗೂ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯತ್ಯಾಸಗಳಿಗೂ, ನೇರ ಸಂಬಂಧವಿದೆ.

೧೯೦೧ರಲ್ಲಿ ಭಾರತದಲ್ಲಿ ಪ್ರತಿ ಸಾವಿರ ಗಂಡಸರಿಗೆ, ೯೨ ಹೆಂಗಸರಿದ್ದರು. ಇದೇ ಸಂಖ್ಯೆ ೧೯೭೧ರಲ್ಲಿ ೯೩೦ ಇಳಿದು ಹೋಯಿತು. ೧೯೮೧ರಲ್ಲಿ ಸ್ವಲ್ಪ ಮೇಲೇರಿ ೯೩೬ಕ್ಕೆ ತಲುಪಿದ್ದರೆ, ಭ್ರೂಣಲಿಂಗ ಪತ್ತೆ ಕ್ಲಿನಿಕಗಳ ಹಾವಳಿ, ೧೯೯೧ರ ಹೊತ್ತಿಗೆ ಈ ಸಂಖ್ಯೆಯನ್ನು ೯೨೯ ಕ್ಕೆ ಜಗ್ಗಿತು.

ಕೆಳಗಿನ ಟೇಬಲ್ ನೋಡಿ, ಮೂರನೆ ಜಗತ್ತಿನ ಹತ್ತು ರಾಷ್ಟ್ರಗಳಲ್ಲಿ ಹೆಣ್ಣು ಮಕ್ಕಳ ಸಾವಿನ ಸಂಖ್ಯೆಯನ್ನು ಇದು ನಮೂದಿಸುತ್ತದೆ.

ಸತ್ತ ಪ್ರತಿ ನೂರು ಗಂಡುಮಕ್ಕಳಿಗೆ, ಸತ್ತ ಹೆಣ್ಣು ಮಕ್ಕಳ ಸಂಖ್ಯೆ

| ದೇಶ | ಒಂದು ವರ್ಷಕ್ಕಿಂತ ಕೆಳಗಿನ ಹೆಣ್ಣುಮಕ್ಕಳು | ಒಂದರಿಂದ ನಾಲ್ಕರವರೆಗಿನ ಹೆಣ್ಣುಮಕ್ಕಳು |
|---|---|---|
| ಭಾರತ | ೧೦೯ | ೩೦೦ |
| ಬಾಂಗ್ಲಾದೇಶ | ೯೩ | ೧೧೨ |
| ಈಜಿಪ್ಟ್ | ೧೦೦ | ೧೨೨ |
| ನೇಪಾಳ | ೯೭ | ೧೧೦ |
| ಪೆರು | ೮೯ | ೧೦೨ |
| ಪಾಕಿಸ್ತಾನ | ೮೯ | ೧೨೬ |
| ದಕ್ಷಿಣ ಕೊರಿಯ | ೮೬ | ೧೦೫ |
| ಈಕ್ವೆಡರ್ | ೮೯ | ೧೦೫ |

ಮೇಲಿನ ಅಂಕಿಸಂಖ್ಯೆಗಳನ್ನು ಗಮನಿಸಿದರೆ, ವೈಜ್ಞಾನಿಕವಾಗಿ, ತಾಂತ್ರಿಕವಾಗಿ, ಆರ್ಥಿಕವಾಗಿ ಪ್ರಬಲವಾಗುತ್ತಿರುವ ಭಾರತದಂತಹ ದೇಶದಲ್ಲಿ ಸತ್ತ ಪ್ರತಿ ನೂರು ಗಂಡು ಮಕ್ಕಳಿಗೆ, ಮುನ್ನೂರರಷ್ಟು ಹೆಣ್ಣು ಮಕ್ಕಳು ಸಾಯುತ್ತಿವೆ ಎಂಬ ನಾಚಿಕೆಗೇಡಿನ ಸತ್ಯ ಎದ್ದು ಕಾಣುತ್ತದೆ. ಬಗಲಿನ ಬಡತನದ ಬಾಂಗ್ಲಾದೇಶ, ಪಾಕಿಸ್ತಾನಗಳಲ್ಲಿ,ಇವೇ ಸಂಖ್ಯೆಯನ್ನು ಗಮನಿಸಿ, ಬಾಂಗ್ಲಾದೇಶದಲ್ಲಿ ಸತ್ತ ಪ್ರತಿ ನೂರು ಗಂಡು ಮಕ್ಕಳ ಸಂಖ್ಯೆಗೆ, ಸತ್ತ ಹೆಣ್ಣು ಮಕ್ಕಳ ಸಂಖ್ಯೆ ೧೦೨ ಮಾತ್ರ ಪಾಕಿಸ್ತಾನದಲ್ಲಿ ಈ ಸಂಖ್ಯೆ



೧೨೮. ಈ ಪ್ರಮಾಣಗಳು ಅಷ್ಟೊಂದು ಆಘಾತಕಾರಿಯಾಗಿಲ್ಲ. ಆದರೆ ಭಾರತದಲ್ಲಿ ೩೦೦ರಷ್ಟು ಅತ್ಯಧಿಕ ಸಂಖ್ಯೆಯ ಹೆಣ್ಣು ಮಕ್ಕಳ ಸಾವಿಗೆ ಕಾರಣವೇನು? ಪಿತೃಪ್ರಧಾನತೆ, ಸ್ತ್ರೀಯರ ಶೋಷಣೆ, ಅಸಮಾನತೆ, ನಮ್ಮ ದೇಶದಲ್ಲಿ ಹೆಚ್ಚಿದೆಯೆ? ಸುಲಭವಾಗಿ ದೊರಕುತ್ತಿರುವ ಲಿಂಗಪತ್ತೆಯ ತಂತ್ರಜ್ಞಾನ ಅದಾಗಲೆ ಹುಟ್ಟುವ ಹೆಣ್ಣು ಮಕ್ಕಳ ಸಂಖ್ಯೆಯನ್ನೇ ಇಳಿಮುಖವಾಗಿಸಿರುವಾಗ, ಹುಟ್ಟಿದ ಮೇಲೂ ಹೆಣ್ಣು ಮಕ್ಕಳು ಇಷ್ಟು ಸಂಖ್ಯೆಯಲ್ಲಿ ಏಕೆ ಸಾಯುತ್ತಿದ್ದಾರೆ?

ಪೆರು, ಈಕ್ವೆಡರನಂತಹ ಬಡ ದೇಶಗಳಲ್ಲಿ, ಪ್ರಜಾಪ್ರಭುತ್ವವನ್ನೂ ಗಟ್ಟಿಯಾಗಿ ನೆಲೆಯೂರದೆ ಯಾದವೀ ಕಲಹಗಳಲ್ಲಿ ತೊಳಲಾಡಿ ಮೇಲೆದ್ದ ದೇಶಗಳಲ್ಲೂ, ಲಿಂಗ ತಾರತಮ್ಯತೆ ಬಹುಶಃ ಭಾರತದಷ್ಟು ಹೆಚ್ಚಿಲ್ಲ ಎನಿಸುತ್ತದೆ. ಅಲ್ಲಿಯ ಹೆಣ್ಣು ಮಕ್ಕಳ ಸಾವಿನ ಸಂಖ್ಯೆ, ಹೆಚ್ಚು ಕಡಿಮೆ ಗಂಡು ಮಕ್ಕಳಷ್ಟೇ ಇರುವುದರಿಂದ ನಾವು ಗಮನಿಸಬೇಕು.

ಇವೆಲ್ಲವೂ ನಮ್ಮ ಸಮಾಜದಲ್ಲಿಯ ಮೂಲಭೂತ ಕೊರತೆಯತ್ತ ನಮ್ಮ ಕಣ್ಣನ್ನು ತೆರೆಸಬೇಕಿದೆ. ಹುಟ್ಟಿದ ಹೆಣ್ಣು ಮಕ್ಕಳ ಬಾಲ್ಯಾವಸ್ಥೆಯಲ್ಲಿ ಏಕೆ ಇಷ್ಟು ಸಂಖ್ಯೆಯಲ್ಲಿ ಸಾಯುತ್ತಿವೆ ಎಂಬತ್ತ ಗಮನ ಹರಿಯಬೇಕಿದೆ. ಒಂದು ಹೆಣ್ಣು ಶಿಶುಹತ್ಯೆ ಯಥೇಚ್ಛವಾಗಿ ನಡೆಯುತ್ತಿದೆ, ಮತ್ತೊಂದು ಹೆಣ್ಣು ಮಕ್ಕಳಿಗೆ ಆಹಾರದ ಕೊರತೆಯಿದೆ, ಅವರ ಆರೋಗ್ಯದ ನಿರ್ಲಕ್ಷ್ಯವಿದೆ. ಗಂಡು ಮಗುವಿನತ್ತ ವಿಪರೀತದ ವ್ಯಾಮೋಹವಿಲ್ಲದ ಪಾಶ್ಚಾತ್ಯ ದೇಶಗಳಲ್ಲಿ, ಪ್ರತಿ ನೂರು ಹೆಣ್ಣು ಮಕ್ಕಳಿಗೆ ೧೦೫.೫ ಗಂಡು ಮಕ್ಕಳಿರುವುದನ್ನು ಕಾಣುತ್ತೇವೆ. ಇದು ಬಹುಶಃ ಜೀವಶಾಸ್ತ್ರೀಯವಾಗಿ ಕಾಣಿಸಿಕೊಳ್ಳುವ ಸಣ್ಣ ಅಸಮತೋಲನ, ಜೀವಶಾಸ್ತ್ರೀಯವಾಗಿ ನೋಡಿದರೆ, ಹುಟ್ಟಿದ ಮೇಲೆ, ಗಂಡು ಕೂಸಿಗಿಂತ ಹೆಣ್ಣು ಕೂಸಿಗೆ ಬದುಕುಳಿಯುವ ಸಾಧ್ಯತೆ ಹೆಚ್ಚಾಗಿದೆ. ಮೂಲತಃ ಗಂಡು ಮಕ್ಕಳಲ್ಲಿ ಉಸಿರಾಟದ ತೊಂದರೆ (Respiratory Distress Syndrome) ಹೆಚ್ಚು ಕಾಣಿಸಿಕೊಳ್ಳುತ್ತದೆ. ಗಂಡು ಕೂಸಿನ ಬಾಲ್ಯದಲ್ಲಿ ಬದುಕುಳಿಯುವ ಕಡಮೆ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡೇ, ಬಹುಶಃ ಪ್ರಕೃತಿ ಒಂದಿಷ್ಟು ಹೆಚ್ಚು ಸಂಖ್ಯೆಯಲ್ಲಿ ಗಂಡು

ಮಕ್ಕಳನ್ನು ಹುಟ್ಟಿಸಿ ಸಮತೋಲನವನ್ನು ಕಾಯ್ದುಕೊಂಡಿರಬೇಕು. ಬೆಳೆದಂತೆ, ಗಂಡು ಮತ್ತು ಹೆಣ್ಣು ಮಕ್ಕಳ ಸಂಖ್ಯೆ ಸಮಾನವಾಗುವ ಪೂರ್ವಯೋಜನೆ ಪ್ರಕೃತಿಯಲ್ಲಿದೆ. ಲಿಂಗ ತಾರತಮ್ಯವಿಲ್ಲದ ಜಗತ್ತಿನಲ್ಲಿ, ಒಂದಿಷ್ಟು ಹೆಚ್ಚು ಸಂಖ್ಯೆಯಲ್ಲಿ ಹುಟ್ಟುವ ಗಂಡು ಮಕ್ಕಳು, ದೃಢವಾಗಿ ಬದುಕುಳಿಯಬಲ್ಲ ಹೆಣ್ಣು ಮಕ್ಕಳು, ಬೆಳೆದಂತೆ ಸಮಸಂಖ್ಯೆಯನ್ನು ತಲುಪುತ್ತವೆ.

ಮತ್ತೊಂದು ವಿಷಯವನ್ನೂ ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗಿದೆ. ಮಹಿಳೆಯರು ದೀರ್ಘಾಯುಷಿಗಳೆಂಬುದು ತಿಳಿದ ವಿಷಯ. ಪಾಶ್ಚಾತ್ಯ ದೇಶಗಳ ಅಂಕಿ ಸಂಖ್ಯೆಯ ಪ್ರಕಾರ ಹೆಣ್ಣು ಗಂಡಿಗಿಂತ ಸರಾಸರಿ ೯ ವರ್ಷ ಹೆಚ್ಚು ಬದಕುತ್ತಾಳೆ. ವಿಶ್ವದ ಎಲ್ಲಾ ಮೂಲೆಗಳಲ್ಲೂ ಹೆಣ್ಣು ಗಂಡಿಗಿಂತ ಹೆಚ್ಚು ಕಾಲ ಬದುಕುತ್ತಿದ್ದಾಳೆ. ಬದುಕಿನ ಓಟದಲ್ಲಿ



ಸರ್ವ ಅನುಕೂಲಗಳನ್ನು ಪಡೆದುಕೊಂಡ ಗಂಡು, ಸಾವಿನ ಬಾಗಿಲಲ್ಲಿ ಎಡವಿ ಮುಗ್ಗರಿಸುವುದೇಕೆ ಎಂದು ವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು ಸಾಕಷ್ಟು ಚಿಂತಿಸಿದ್ದಾರೆ. ಮೇಲೆ ತಿಳಿಸಿದಂತೆ, ಗರ್ಭ ತಳೆಯುವ ಹೆಣ್ಣು ಭ್ರೂಣಗಳಿಗಿಂತ ಗಂಡು ಭ್ರೂಣಗಳ ಸಂಖ್ಯೆಯೇ ಹೆಚ್ಚು. ಆದರೆ ಸಹಜ ಗರ್ಭಪಾತದಲ್ಲಿ ಹಾಗೂ ಹುಟ್ಟಿನ ಸಮಯದಲ್ಲಿ ಗಂಡು ಭ್ರೂಣಗಳೇ ಹೆಚ್ಚು ಸಾವನ್ನಪ್ಪುತ್ತವೆ. ವಿಜ್ಞಾನಿಗಳು, ವಂಶವಾಹಿ ತಜ್ಞರು ಈ ಅಸಮಾನತೆಯನ್ನು ವಿವರಿಸಲು ಪ್ರಯತ್ನಿಸಿದ್ದಾರೆ. ಸಸ್ತನಿ ಪ್ರಾಣಿಗಳಲ್ಲಿ ಹೆಣ್ಣು ಎರಡು 'ಎಕ್ಸ್' ವರ್ಣತಂತುಗಳನ್ನು ಪಡೆದಿದ್ದರೆ ಗಂಡು ಕೇವಲ ಒಂದು 'ಎಕ್ಸ್' ವರ್ಣತಂತುವನ್ನು ಪಡೆದಿರುತ್ತಾನೆ. ಹೆಣ್ಣಿನಲ್ಲಿ ಒಂದು 'ಎಕ್ಸ್' ವರ್ಣತಂತುವಿಗೆ ಏನಾದರೂ ಆಪತ್ತು ಒದಗಿದರೂ ಚಿಂತೆ ಇಲ್ಲ, ಕಾರಣ ಇನ್ನೊಂದು ವರ್ಣ ತುಂತು ಆಕೆಯಲ್ಲಿದೆ. ಆದರೆ ಗಂಡಿನಲ್ಲಿ ಇಂಥಾ ಹೆಚ್ಚುವರಿ 'ಎಕ್ಸ್' ವರ್ಣತಂತು ಇಲ್ಲ. ಹಾಗೆಂದೇ 'ಎಕ್ಸ್' ವರ್ಣತಂತುವಿನ ಲೋಪದಿಂದ ಬರುವ ಹೀಮೋಫಿಲಿಯಾದಂತಹ ಭಯಂಕರ ರೋಗಗಳಿಗೆ ಗಂಡು ಮುಖ್ಯವಾಗಿ ಗುರಿಯಾಗುತ್ತಾನೆ. ಎಲ್ಲಿಯೊ 'ಎಕ್ಸ್' ವರ್ಣತಂತುವಿನ ಲೋಪ ಅತ್ಯಂತ ಸೂಕ್ಷ್ಮವಾಗಿ ರೋಗಗಳಿಗೆ ಕಾರಣವಾಗಿದೆ ಎಂದು ವಿಜ್ಞಾನಿಗಳು ಅನುಮಾನ ಪಡುತ್ತಾರೆ. ಪ್ರಕೃತಿ ಹೆಣ್ಣನ್ನು ಇಷ್ಟು ಗಟ್ಟಿಗಿತ್ತಿಯನ್ನಾಗಿ ಸೃಷ್ಟಿಸಿದರೂ, ಆಕೆಯ ಸಂಖ್ಯೆ ಮನುಷ್ಯ ಪ್ರಯತ್ನದಲ್ಲಿ ಕುಗ್ಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕು.

ಪ್ರಾಂತೀಯ ಲಿಂಗ ಪ್ರಮಾಣ

ನಮ್ಮ ದೇಶದ ಬೇರೆ ಬೇರೆ ಭಾಗಗಳಲ್ಲಿಯ ಲಿಂಗ ಪ್ರಮಾಣವನ್ನು ಗಮನಿಸೋಣ. ಕೆಳನ ಟೇಬಲನಲ್ಲಿ ಇಪ್ಪತ್ತನೇ ಶತಮಾನದ ಎಂಟು ದಶಕಗಳ ಲಿಂಗ ಪ್ರಮಾಣವನ್ನು ನೀಡಲಾಗಿದೆ.

ಜನಗಣತಿಯ ವರ್ಷಗಳು

| | ೧೯೦೧ | ೧೧ | ೨೧ | ೩೧ | ೪೧ | ೫೧ | ೬೧ | ೭೧ | ೮೧ |
|---|---|---|---|---|---|---|---|---|---|
| ಭಾರತ | ೯೭೨ | ೯೬೪ | ೯೫೫ | ೯೫೦ | ೯೪೫ | ೯೪೬ | ೯೪೧ | ೯೩೦ | ೯೩೬ |
| ಬೆಂಗಾಲ್ | ೯೪೫ | ೯೨೫ | ೯೦೫ | ೮೯೦ | ೮೫೨ | ೮೬೫ | ೮೨೮ | ೮೯೧ | ೯೧೧ |
| ಬಿಹಾರ್ | ೧೦೫೪ | ೧೦೪೪ | ೧೦೧೬ | ೯೯೪ | ೯೯೬ | ೯೯೦ | ೯೯೪ | ೯೫೪ | ೯೪೭ |
| ಕೇರಳ | ೧೦೦೪ | ೧೦೦೮ | ೧೦೧೧ | ೧೦೨೨ | ೧೦೨೭ | ೧೦೨೮ | ೧೦೨೨ | ೧೦೧೬ | ೧೦೩೪ |
| ಮೈಸೂರು | ೯೮೩ | ೯೮೧ | ೯೬೯ | ೯೬೫ | ೯೬೦ | ೯೬೬ | ೯೫೯ | ೯೫೭ | ೯೬೩ |
| ಪಂಜಾಬ್ | ೮೩೨ | ೭೮೦ | ೭೯೯ | ೮೧೫ | ೮೩೬ | ೮೪೪ | ೮೫೪ | ೯೬೫ | ೮೮೬ |

೧೯೦೧ರ ಆರಂಭದಲ್ಲಿ ಬಿಹಾರದಲ್ಲಿ ಪ್ರತಿ ಒಂದು ಸಾವಿರ ಗಂಡಸಿರಿಗೆ ೧೦೫೪ ಜನ ಹೆಂಗಸರಿದ್ದರು, ಅದೇ ಕೇರಳದಲ್ಲಿ ೧೦೦೪ ಹೆಂಗಸರು ಮಾತ್ರವಿದ್ದರು. ಆದರೆ ಸ್ತ್ರೀ ಪ್ರಧಾನ ಮತ್ತು ಮಾತೃಪ್ರಧಾನ ಸಂಸ್ಕೃತಿಯ ಹಿನ್ನಲೆಯ ಕೇರಳದಲ್ಲಿ

ಹೆಣ್ಣು ಮಕ್ಕಳ ಸಂಖ್ಯೆ ಏರುತ್ತಲೇ ಹೋಗಿ, ೧೯೮೧ರ ಹೊತ್ತಿಗೆ ಅದು ೧೦೩೪ನ್ನು ಮುಟ್ಟಿತು. ಅದೇ ಬಿಹಾರದಲ್ಲಿ ೧೦೫೪ರಷ್ಟು ಹೆಚ್ಚಿದ್ದ ಹೆಂಗಸರ ಸಂಖ್ಯೆ ಸತತವಾಗಿ ಇಳಿಯುತ್ತಾ ಬಂದು, ಇದೇ ಅವಧಿಯಲ್ಲಿ ೯೪೭ಕ್ಕೆ ತಲುಪಿತು. ಒಂದು ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ, ಸಾಮಾಜಿಕ ಸಮಾನತೆ, ಆರ್ಥಿಕ ಸ್ವಾವಲಂಬನೆ, ಆಸ್ತಿ ಹಕ್ಕು, ಇವೆಲ್ಲವೂ ಹೆಣ್ಣು ಮಕ್ಕಳ ಸಂಖ್ಯೆಯ ಮೇಲೆ ನೇರ ಪರಿಣಾಮ ಬೀರುವುದನ್ನು ಇಲ್ಲಿ ಕಾಣಬಹುದು.

ಬಿಹಾರ, ಕೇರಳದಲ್ಲಿ ಸಾವಿರ ಸಂಖ್ಯೆಯನ್ನು ಮೀರಿ ಹೆಣ್ಣು ಮಕ್ಕಳಿರುವ ಕಾಲದಲ್ಲೂ, ಶತಮಾನದ ಆರಂಭದಲ್ಲಿಯೂ, ಪಂಜಾಬಿನಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕೇವಲ ೮೩೨ ಇತ್ತು! ಇದೇ ಸಂಖ್ಯೆ ಮುಂದಿನ ಎರಡು ದಶಕದಲ್ಲಿ ಮತ್ತಷ್ಟು ಕುಸಿದು ೭೮೦ಕ್ಕೆ ಇಳಿದಿದೆ. ಪಂಜಾಬ್ ಮತ್ತು ಹರಿಯಾಣಗಳಲ್ಲಿ ತೀವ್ರತರದ ಪಿತೃಪ್ರಧಾನತೆಯನ್ನು ಇಂದಿಗೂ ನಾವು ಗಮನಿಸಬಹುದು. ಬಾಲ್ಯ ವಿವಾಹ, ಹೆಣ್ಣು ಕೂಸುಗಳ ಹತ್ಯೆ, ವರದಕ್ಷಿಣೆಯ ಪಿಡುಗು, ಬಹುಪತ್ನಿತ್ವ - ಇವೆಲ್ಲವನ್ನೂ ಪಂಜಾಬ್ ಮತ್ತು ಹರಿಯಾಣದ ಮಹಿಳೆಯರು ಬಹು ಕಾಲದಿಂದ ಅನುಭವಿ ಸುತ್ತಾ ಬಂದಿದ್ದಾರೆ. ಆದರೂ ಪಂಜಾಬಿನಲ್ಲಿ ನಂತರದ ದಶಕದಲ್ಲಿ ಸಣ್ಣ ಪ್ರಮಾಣದಲ್ಲಿ ಹೆಂಗಸರ ಸಂಖ್ಯೆ, ಧಿಡೀರನೆ ಇಳಿದು ಹೋಯಿತು. ೧೯೯೧ರಲ್ಲಿ ಆರು ವರ್ಷಕ್ಕಿಂತ ಕಡಮ ವಯಸ್ಸಿನ ಹೆಣ್ಣು ಮಕ್ಕಳ ಸಂಖ್ಯೆ (ಪ್ರತಿ ಸಾವಿರ ಗಂಡು ಮಕ್ಕಳ ಸಂಖ್ಯೆಗೆ ಹೋಲಿಸಿದರ) ೮೭೫ಕ್ಕೆ ಇಳಿಯಿತು, ೨೦೦೧ರಲ್ಲಿ ಈ ಸಂಖ್ಯೆ ೭೯೩ರಷ್ಟು ಪಾತಾಳವನ್ನು ತಲುಪಿತು. ಈ ದಶಕಗಳಲ್ಲಿ ಎಲ್ಲೆಂದರಲ್ಲಿ ಮೇಲೆದ್ದು ಬಳಕೆಗೆ ಬಂದ ಲಿಂಗಪತ್ತೆ ಕ್ಲಿನಿಕಗಳು ಈ ದುರಂತಕ್ಕೆ ನೇರ ಕಾರಣ ಎಂದರೆ ಅವಸರದ ನಿರ್ಣಯವಾಗದು. ಹೆಚ್ಚು ಹೆಚ್ಚು ವರದಕ್ಷಿಣೆ ನೀಡುವ ಸಮಾಜಗಳಲ್ಲಿ 'ಮಹಿಳೆಯ ಸ್ಥಾನಮಾನ ಕುಗ್ಗಿ ಹೋಗಿ, ಅಲ್ಲಿ ಬೆಂಗಸರ ಸಂಖ್ಯೆ ಇಳಿಮುಖವಾಗುತ್ತದೆ ಎಂಬುದಕ್ಕೆ ಚಂಚಾಬ್ ಒಂದು ಸ್ಪಷ್ಟ ನಿದರ್ಶನವಾಗಿದೆ.

ಬಹು ಮುಖ್ಯವಾಗಿ ಗಮನಿಸಬೇಕಾದದ್ದು, ಪಂಜಾಬಿನ ಚಾಟ್ ಸಮುದಾಯದಲ್ಲಿ ಹೆಂಗಸರಿಗೆ ಹೊಲನೆಲ ಭೂ ಮಾಲಿಕತ್ವದ ಪ್ರಶ್ನೆಯೇ ಇಲ್ಲ. ಅದೇ ಕೇರಳದಲ್ಲಿ ಇದೆ, ಮಹಿಳೆಯರ ಹಕ್ಕಾಗಿದೆ. ಪಂಜಾಬಿನಲ್ಲಿ ಹೆಚ್ಚೇನಾದರೂ ಆಸ್ತಿಹಕ್ಕಿಗೆ ಒತ್ತಾಯಿಸಿದರೆ, ಅವಳ ಕೊಲೆಯಾಗುವ ಸಾಧ್ಯತೆಯೇ ಹೆಚ್ಚು. ವರದಕ್ಷಿಣೆ ಕೂಡಾ ಇಲ್ಲಿ ಕೇವಲ ಮದುವೆಗೆ ಸೀಮಿತವಾಗಿಲ್ಲ, ಮದುವೆಯ ನಂತರವೂ ಹೆಣ್ಣಿನ ಕುಟುಂಬದಿಂದ ಗಂಡಿನ ಕುಟುಂಬಕ್ಕೆ ಹಣ, ಹರಿಯುತ್ತಲೇ ಹೋಗುತ್ತದೆ. ಹೆಣ್ಣು 'ಪರಾಯ ಧನ್' ಎನ್ನುವ ಭಾವನೆ ಗಟ್ಟಿಯಾಗಿ ತಳವೂ, ಆಕೆ ತವರಿನಲ್ಲಿ ಅನಪೇಕ್ಷಿತ ತಾತ್ಕಾಲಿಕ ಅತಿಥಿಯಾಗಿ ಉಳಿದಿದ್ದಾಳೆ.

ಭಾರತದಲ್ಲಿ ಹೆಣ್ಣು ಮಕ್ಕಳನ್ನು ಕುರಿತಂತೆ ಚಾರಿತ್ರಿಕವಾಗಿ, ಲಿಂಗ ತಾರತಮ್ಯವನ್ನು ತೊರದೆ ಇರುವ ರಾಜ್ಯ ಕೇರಳ ಒಂದೇ. ಕಳೆದ ಶತಮಾನದುದ್ದಕ್ಕೂ ಕೇರಳದಲ್ಲಿ

ಹೆಣ್ಣು ಮಕ್ಕಳ ಸಂಖ್ಯೆ ಗಂಡಸರಿಗಿಂತ ಹೆಚ್ಚಾಗಿದೆ. ಇಲ್ಲಿ ಉಳಿದೆಲ್ಲ ಭಾಗಗಳಿಗಿಂತ ಹೆಚ್ಚು ಸ್ತ್ರೀಯರು ಶಿಕ್ಷಿತರಾಗಿದ್ದಾರೆ, ಇವರಿಗೆ ಸಂತಾನ ನಿಯಂತ್ರಣದ ಅರಿವಿದೆ. ಕೇರಳದಲ್ಲಿ ಹೆಣ್ಣು ಮಕ್ಕಳ ವಿವಾಹದ ವಯಸ್ಸು ಇತರ ಸ್ಥಳಗಳಿಗಿಂತ ಹೆಚ್ಚಿದೆ.

ಕಳೆದ ಐದು ದಶಕಗಳಲ್ಲಿ ನಮ್ಮ ಭಾರತದಲ್ಲಿ ಆರು ವರ್ಷದ ಒಳಗಿನ ಮಕ್ಕಳಲ್ಲಿ ಲಿಂಗ ಪ್ರಮಾಣವನ್ನು ಗಮನಿಸೋಣ. ಕೆಳಗಿನ ಟೇಬಲ್ ನೋಡಿ:

| ವರ್ಷ | ಆರು ವರ್ಷದ ಒಳಗಿನ ಮಕ್ಕಳಲ್ಲಿ ಸೆಕ್ಸ್ ರೇಷಿಯೋ |
|---|---|
| 1961 | 976 |
| 1971 | 964 |
| 1981 | 962 |
| 1991 | 945 |
| 2001 | 927 |

ಮೇಲಿನ ಅಂಕಿ ಸಂಖ್ಯೆಗಳನ್ನು ನೋಡಿದರೆ, ಎಂಬತ್ತರ ದಶಕದಲ್ಲಿ, ಆಮ್ನಿಯೊಸಿಂಟೆಸಿಸ್ ತಂತ್ರಜ್ಞಾನ ಭಾರತಕ್ಕೆ ಒದಗಿಬಂದ ದಶಕದಲ್ಲಿ, ಹೆಣ್ಣು ಮಕ್ಕಳ ಸಂಖ್ಯೆ ತೀವ್ರತರವಾಗಿ ಇಳಿಮುಖವಾಗಿರುವುದನ್ನು ಕಾಣುತ್ತೇವೆ. ಪಂಜಾಬ್, ಹರಿಯಾಣ, ದಿಲ್ಲಿಗಳಲ್ಲಿ ಖಾಸಗಿ ಭ್ರೂಣ ಲಿಂಗ ಪತ್ತೆಯ ಕ್ಲಿನಿಕ್‌ಗಳು ಮೊಟ್ಟಮೊದಲಿಗೆ ಸ್ಥಾಪನೆಯಾಗಿ, ೧೯೭೦ರ ದಶಕದ ಕೊನೆಯ ವೇಳೆಗೆ ಬಲು ಜನಪ್ರಿಯವಾದವು, ಅದರಲ್ಲು ಹಳ್ಳಿಗಾಡುಗಳಿಗಿಂತ, ಅವಿದ್ಯಾವಂತರಿಗಿಂತಲೂ, ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ, ವಿದ್ಯಾವಂತರು ಇದನ್ನು ಹೆಚ್ಚು ಬಳಸಿದರು. ನಮ್ಮ ಶಿಕ್ಷಣ ಪದ್ಧತಿ ಹೆಣ್ಣನ್ನು ಕುರಿತು ಇರುವ ಸಾಮಾಜಿಕ ಅಸಮಾನತೆಯನ್ನು ತೊಡೆಯಲು ನಿರುಪಯೋಗವಾಗಿದೆ ಮತ್ತು ಸಾಮಾಜಿಕ ಬದಲಾವಣೆಯನ್ನು ತರಲು ಅಸಮರ್ಥವಾಗಿದೆ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ.

೧೯೯೦ರ ದಶಕದ ಆರಂಭದಲ್ಲಿ ಭಾರತದ ಬಹುತೇಕ ಭಾಗಗಳಲ್ಲಿ ಲಿಂಗಪತ್ತೆ ಕ್ಲಿನಿಕಗಳು ತೆರೆದಿದ್ದವು. ಅಲ್ಟ್ರಾಸೌಂಡನಂತಹ ಸುಲಭ ತಂತ್ರಗಳು ಹಳ್ಳಿ ಹಳ್ಳಿಗೂ ಒದಗಿ ಬಂದವು. ೯೦ರ ದಶಕದವರೆಗೂ, ಭ್ರೂಣಲಿಂಗ ಪತ್ತೆಯ ತಂತ್ರಜ್ಞಾನ ಬಲು ದುಬಾರಿಯಾಗಿತ್ತು. ಆದರೆ ಮಾರುಕಟ್ಟೆಯ ಪೈಪೋಟಿಯಲ್ಲಿ ಲಿಂಗಪತ್ತೆಯ ಬೆಲೆ ೫೦೦ರೂ.ಗೆ, ಕೆಲವೆಡೆ ೧೦೦ರೂ.ಗೂ ಇಳಿದು, ತಂತ್ರಜ್ಞಾನದ ವಿಪರೀತದ ದುರುಪಯೋಗಕ್ಕೆ ಕಾರಣವಾಯಿತು.

ಈ ದಶಕದಲ್ಲಿ ನಮ್ಮ ದೇಶದ ಹೆಣ್ಣು ಮಕ್ಕಳ ಸಂಖ್ಯೆ ತೀವ್ರವಾಗಿ ಇಳಿದಿರುವುದನ್ನು ಮೇಲಿನ ಟೇಬಲಿನಲ್ಲಿ ನಾವು ಗಮನಿಸಬಹುದು.

ಆತಂಕದ ವಿಷಯವೆಂದರೆ, ದಕ್ಷಿಣ ಭಾರತದಲ್ಲಿ ಚಾರಿತ್ರಿಕವಾಗಿ ನೋಡಿದರೆ, ಮಹಿಳೆಯರ ಸ್ಥಾನಮಾನ ಉತ್ತಮವಿತ್ತು. ೧೯೮೫-೮೭ರ ಸುಮಾರಿಗೆ ದಕ್ಷಿಣ ಭಾರತದಲ್ಲಿ



ಹೆಚ್ಚು ಕಡಿಮೆ ಎಲ್ಲಿಯೂ ಭ್ರೂಣ ಲಿಂಗ ಪತ್ತೆ ಕ್ಲಿನಿಕಗಳಿರಲಿಲ್ಲ. ಆದರೆ ಇಲ್ಲಿಯೂ ಲಿಂಗ ಪತ್ತೆಯ ಕ್ಲಿನಿಕಗಳು ಆರಂಭವಾದೊಡನೆ, ಸ್ತ್ರೀಭ್ರೂಣ ಹತ್ಯೆ ಜನಪ್ರಿಯವಾಯಿತು. ಕಳೆದ ದಶಕದಲ್ಲಿ ಕರ್ನಾಟಕ, ತಮಿಳು ನಾಡು, ಅಂಧ್ರಪ್ರದೇಶಗಳಲ್ಲಿ ಲಿಂಗಪತ್ತೆಯ ಕ್ಲಿನಿಕಗಳು ಗಲ್ಲಿಗಲ್ಲಿಗಳಲ್ಲಿ ಎದ್ದು ನಿಂತಿವೆ.

ಕಾರ್ಯಗತವಾಗದ ಕಾನೂನು

೧೯೮೨ರಷ್ಟು ಹಿಂದೆ, ಮುಂಬಯಿ ನಗರವೊಂದರಲ್ಲಿಯೇ ೧೦ ಭೂಣಲಿಂಗ ಪತ್ತೆಯ ಕ್ಲಿನಿಕಗಳಿದ್ದವು. ಈ ಸಂಖ್ಯೆ ೧೯೮೭ರ ಹೊತ್ತಿಗೆ ೨೪೮ಕ್ಕೆ ಏರಿತು.

೧೯೭೮-೮೩ರ ನಡುವೆ ಭಾರತದಲ್ಲಿ ಸುಮಾರು ೭೮,೦೦೦ ಭ್ರೂಣ ಹತ್ಯೆಗಳು ಲಿಂಗ ಪರೀಕ್ಷೆಯ ನಂತರ ಆದವು. ಬೊಂಬಾಯಿಯಂತಹ ಪಟ್ಟಣ ಪ್ರದೇಶಗಳಲ್ಲಿ ನಡೆಸಲಾದ ೮,೦೦೦ ಭ್ರೂಣಹತ್ಯೆಯಲ್ಲಿ, ೭,೯೯೯ ಹೆಣ್ಣು ಭ್ರೂಣಗಳ ಹತ್ಯೆಯಾಗಿತ್ತು. ಒಂದು ಭ್ರೂಣಹತ್ಯೆ ಗಂಡಂದು ತಿಳಿಯದ ಮಾಡಿದ್ದಾಗಿತ್ತು! ಪರಿಸ್ಥಿತಿ ಇಂತಹ ವಿಪರೀತಕ್ಕೆ ಹೋದಾಗ ಸ್ತ್ರೀವಾದಿಗಳು ಅಂದು ಬಳಸುತ್ತಿದ್ದ ಆಮ್ನಿಯೋಸಿಂಟೆಸಿಸ್ ವಿಧಾನದ ದುರುಪಯೋಗದ ವಿರುದ್ಧ ವ್ಯವಸ್ಥಿತವಾಗಿ ಪ್ರತಿಭಟಿಸಿದರು. ೧೯೮೪ರಲ್ಲಿ 'ಫೋರಮ್ ಎಗೆನಸ್ಟ್ ಸೆಕ್ಸ್ ಪ್ರಿಸಲೆಕ್ಷನ್' ಸ್ಥಾಪನೆಯಾಯಿತು. ಇದರ ಪರಿಣಾಮವಾಗಿ ಮಹಾರಾಷ್ಟ್ರ ವಿಧಾನಸಭೆಯಲ್ಲಿ ೧೯೮೮ರಲ್ಲಿ ಲಿಂಗ ಪತ್ತೆ ತಂತ್ರಜ್ಞಾನದ ದುರುಪಯೋಗವನ್ನು ನಿಷೇಧಿಸಿದ ಮಸೂದೆ ಅಂಗೀಕಾರವಾಯಿತು. ಈ ಮಸೂದೆಯಿಂದ ಲಿಂಗಪತ್ತೆಯ ಸಂಖ್ಯೆಗಳು ಕಡಿಮೆಯಾಗಲಿಲ್ಲ, ಭೂಗತವಾದವು, ಕಾನೂನಿನ ನಿಷೇಧ ಮೊದಲ ಅಗತ್ಯ. ಆದರೆ ಕಾನೂನನ್ನು ಕಟ್ಟುನಿಟ್ಟಾಗಿ ಅಳವಡಿಸದಿದ್ದರೆ, ಎಂತಹ ಕಾನೂನು ಕೂಡಾ ಹಲ್ಲಿಲ್ಲದ ಹುಲಿಯಾಗುತ್ತದೆ, ಯಾರನ್ನೂ ಹೆದರಿಸುವುದಿಲ್ಲ. ಈ ಮಸೂದೆ ಜಾರಿಗೆ ಬಂದ ಒಂದು ದಶಕದಲ್ಲಿ, ಒಬ್ಬನೇ ಒಬ್ಬ ವೈದ್ಯನನ್ನೂ, ಕಾನೂನು ಮುರಿದ ಕಾರಣಕ್ಕೆ ಹಿಡಿದು ಶಿಕ್ಷಿಸಿದ್ದಿಲ್ಲ. ಕಾರ್ಯಗತವಾಗದ ಕಾನೂನುಗಳಿಂದ ಮಹಿಳೆಗೆ ಲಾಭವಾಗುವುದಿಲ್ಲ.

ಮುಂದೆ ಹೆಣ್ಣು ಭ್ರೂಣ ಹತ್ಯೆಗೆ ಸಂಬಂಧಿಸಿದಂತೆ, ಸುಪ್ರೀಂ ಕೋರ್ಟ್ ನೀಡಿದ ಆದೇಶ ದಿಂದಾಗಿ ಕೇಂದ್ರ ಸರಕಾರವು ೧೯೯೪ರ 'ಜನನ ಪೂರ್ವ ಪರೀಕ್ಷೆ' (ನಿಯಂತ್ರಣ ಮತ್ತು ಅಪಬಳಕೆಯ ತಡೆ) ಕಾಯಿದೆಯನ್ನು ತಿದ್ದುಪಡಿ ಮಾಡಿತು, ಇದೇ ಕಾಯಿದೆ ೧೯೯೬ರಲ್ಲಿ ಜಾರಿಗೆ ಬಂದಿತು. ದೇಶದಲ್ಲಿ ಇರುವ ಎಲ್ಲಾ ಅಲ್ಟ್ರಾಸೌಂಡ್ ಕ್ಲಿನಿಕ್‌ಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಬೇಕೆಂಬುದು ಸರ್ಕಾರದ ಕ್ರಮವಾಯಿತು. ಭ್ರೂಣದ ಲಿಂಗವನ್ನು ಪರೀಕ್ಷಿಸುವುದನ್ನೇ ಅಪರಾಧವೆಂದು ಪರಿಗಣಿಸುವ ಈ ಕಾಯಿದೆ, ಇಂತಹ ಕೃತ್ಯದಲ್ಲಿ ತೊಡಗಿರುವ ವೈದ್ಯರಿಗೆ, ತಂತ್ರಜ್ಞರಿಗೆ ಮತ್ತು ಭ್ರೂಣ ಲಿಂಗ ಪರೀಕ್ಷೆಗೆ ಒತ್ತಾಯಿಸಿದ ಕುಟುಂಬಗಳಿಗೆ ಒಳಗಾದ ತಾಯಿಗೆ ಶಿಕ್ಷೆ ವಿಧಿಸಬಹುದಾಗಿದೆ. ಹತ್ತು



ಸಾವಿರದಿಂದ, ಐವತ್ತು ಸಾವಿರದವರಗೆ ದಂಡ ಮತ್ತು ಮೂರರಿಂದ ಐದು ವರ್ಷಗಳ ಸೆರೆಮನೆ ವಾಸವು ಈ ಅಪರಾಧಕ್ಕೆ ವಿಧಿಸಿರುವ ಶಿಕ್ಷೆಯಾಗಿದೆ. ಆದರೆ ಈ ಕಾನೂನನ್ನು ಸಮರ್ಪಕವಾಗಿ ಬಳಸಲ್ಪಡದೆ, ಲಿಂಗ ಪತ್ತೆ ಮತ್ತು ಹೆಣ್ಣು ಭ್ರೂಣ ಹತ್ಯೆಯ ಪ್ರಕರಣಗಳು ಮುಂದುವರೆಯುತ್ತಲೇ ಸಾಗಿವೆ.

ಉದಾಹರಣೆಗೆ ಸುರಿಂದರ್ ಕೌರ್ ಪ್ರಕರಣವನ್ನು ತೆಗೆದುಕೊಳ್ಳೋಣ.

ಬಲಿಯಾದವರಿಗೇ ಬರ

೨೧ನೇ ಶತಮಾನದ ಆಧುನಿಕ ನಗರ ಚಂಡೀಘರ್, ಚಂಡೀಘರನಿಂದ ಕೇವಲ ೫೦ ಕಿ.ಮಿ. ದೂರದಲ್ಲಿದೆ ಪಂಜಾಬಿನ ಸಣ್ಣ ಹಳ್ಳಿ 'ಕಾಲೆ ಮಾಜ್ರಾ' ಈ ಹಳ್ಳಿ ಫತೇಗ ಸಾಹಿಬ್ ಡಿಸ್ಟ್ರಿಕ್ಸಿನಲ್ಲಿದೆ. ಇಡೀ ದೇಶದಲ್ಲಿಯೇ ಎಳೆಯ ಹೆಣ್ಣು ಮಕ್ಕಳು ಪ್ರಮಾಣ ಅತ್ಯಂತ ಕನಿಷ್ಟ ವಿರುವುದು ಈ ಸ್ಥಳದಲ್ಲಿ, ಕಾಲೆ ಮಾಜ್ರಾ ಹಳ್ಳಿಯ ಗುರುಮೀತ್ ಸಿಂಗನ ಹೆಂಡತಿ ಸುರಿಂದರ್ ಕೌರ್ ಮತ್ತು ನಾದಿನಿ ದೇವೆಂದರ್ ಕೌರ್ ಅವರನ್ನು ಪೊಲೀಸರು ಹೆಣ್ಣು ಭ್ರೂಣ ಹತ್ಯೆಯ ಅಪಾದನೆಯ ಮೇಲೆ ಬಂಧಿಸಿದ್ದಾರೆ. ಇವರನ್ನು ಇಂಡಿಯನ್ ಪೀನಲ್ ಕೋಡ್, ೧೮೬೦, ಸೆಕ್ಷನ್ ೩೧೨ ಮತ್ತು ೨೧೦ ಅಡಿ ಬಂಧಿಸಿದ್ದಾರೆ. ಆದರೆ ೧೯೯೪ರ 'ಜನನ ಪೂರ್ವ ಪರೀಕ್ಷೆಯ ನಿಯಂತ್ರಣ ಮತ್ತು ಅಪಬಳಕೆಯ ಕಾಯಿದೆಯನ್ನು ಇಲ್ಲಿ ಬಳಸಿಲ್ಲ. ೨೦೦೧ರ ಡಿಸೆಂಬರ್ ತನಕ ಪಂಜಾಬಿನಲ್ಲಿ ಒಂದೇ ಒಂದು ಅಲ್ಟ್ರಾಸೌಂಡ್ ಕ್ಲಿನಿಕ್ ಮೇಲೂ ಕೇಸು ದಾಖಲಾಗಿದ್ದಿಲ್ಲ. ಇಂತಹ ನಿಷ್ಕ್ರಿಯತೆ, ಎಂತಹ ಒಳ್ಳೆಯ ಕಾನೂನನ್ನೂ ಕೆಲಸಕ್ಕೆ ಬಾರದಾಗಿ ಮಾಡುತ್ತದೆ. ಸುರಿಂದ ಕೌರಗೆ ಗರ್ಭಪಾತ ಮಾಡಿದ ಸ್ಟಾಫ್ ನರ್ಸ್ ಅನ್ನು ೧೯೭೧ ಎಂ.ಟಿ.ಪಿ. (Medical Termination of Pregnanacy) ಕಾಯಿದೆಯ ಅಡಿ ಬುಕ್ ಮಾಡಿದ್ದಾರೆ. ಈ ಕ್ರಿಯೆಯಲ್ಲಿ ಭಾಗಿಯಾದ ಭ್ರೂಣ

ಲಿಂಗಪತ್ತೆ ಕ್ಲಿನಿಕ್ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಲಿಂಗಪತ್ತೆ ಮಾಡಿ ಹೇಳಿದ ವೈದ್ಯರ ಮೇಲೆ ಕೂಡಾ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ.

ಸುರಿಂದ ಕೌರಳ ಮೊದಲ ಮಗು ಹೆಣ್ಣಾಗಿತ್ತು. ನಾಲ್ಕು ತಿಂಗಳು ದಾಟಿ ಕೆಲವು ದಿನಗಳಾಗಿದ್ದಾಗ ಸುರಿಂದರ್ ಕೌರ್ ಅಲ್ಟ್ರಾಸೌಂಡ್ ಸ್ಕ್ಯಾನ್ ಮಾಡಿಸಿಕೊಂಡಳು. ಇಂತಹ ಸ್ಕ್ಯಾನಿಂಗ್‌ಗೆ ಸಾಧಾರಣವಾಗಿ ೩೦೦ ರೂಪಾಯಿ ಬೆಲೆ, ಭ್ರೂ ಕೈಗಳಲ್ಲಿ ಸಾ ನೀಳ ಕಾರಣ ಇದೆ ಸ್ಕ್ಯಾನಿಂಗ್‌ಗೆ ೧೨೦೦ ರೂಪಾಯಿ ತೆಗೆದುಕೊಂಡಿದ್ದರು. ದಾರಿಯೊಬ್ಬಳು ಸುರಿಂದರ್‌ಗೆ, ಮನೆಯಲ್ಲಿಯೇ ಗರ್ಭಪಾತ ಮಾಡಿಸಿದ್ದಳು. ಭ್ರೂಣವನ್ನು ತಮ್ಮ ಅಂಗಳದಲ್ಲಿಯೇ ಹೂತಿದ್ದರು. ಮತ್ತೊಬ್ಬ ದಾದಿಯಿಂದ ವಿಷಯ ತಿಳಿದು, ಭ್ರೂಣವನ್ನು ಅಗೆದು ತೆಗೆದು ಪರೀಕ್ಷಿಸಿ, ಪೊಲೀಸರು ಸುರಿಂದ ಕೌರಳನ್ನು ಬಂಧನಕ್ಕೆ ಒಳಪಡಿಸಿದರು. 'ಬೇಲ್' ಮೇಲೆ ಹೊರಬಿದ್ದ ಈಕೆಯನ್ನು ಪತ್ರಕರ್ತರು ಭೇಟಿಯಾದಾಗ,



ಉತ್ತರಗಳೆಲ್ಲವೂ ಮನೆಯ ಗಂಡಸರಿಂದಲೇ ಬಂದದ್ದು. 'ಹಳ್ಳಿಯ ಸಮುದಾಯ ಗಂಡು ಮಕ್ಕಳು ಇರುವುದೇ ಒಳ್ಳೆಯದು' ಎಂದು ವಾದಿಸುತ್ತದೆ. ಇಲ್ಲಿ ವರದಕ್ಷಿಣೆ ಈಚಿನ ದಿನಗಳಲ್ಲಿ ಆಗಾಧ ಪಿಡುಗಾಗಿ ಮಧ್ಯಮ ಆದಾಯದ ಕುಟುಂಬಗಳಿಗೂ ಸಾಂಕ್ರಾಮಿಕವಾಗಿ ಹಬ್ಬಿದೆ. ಹಿಂದೆಲ್ಲ ಹುಡುಗನ ಕಡೆಯವರು ಸೈಕಲ್ಲು ಕೇಳುತ್ತಿದ್ದರೆ, ಈಗ ಮೋಟಾರು ಸೈಕಲ್ಲು, ಕಾರು, ಹುಡುಗಿಗೆ ಮತ್ತು ಅತ್ತೆಗೂ ಚಿನ್ನದ ಒಡವೆ ಮಾಡಿಸಿ ಹಾಕಬೇಕೆಂದು ಕೇಳುತ್ತಾರೆ, ಹಣವಂತರು ಕೊಂಡಿದ್ದೆಲ್ಲವನ್ನೂ, ಮಾಡಿದ್ದೆಲ್ಲವನ್ನೂ ಉಳಿದ ವರ್ಗದವರೂ ಅನುಕರಿಸಲು ಹವಣಿಸುತ್ತಾರೆ,

ಉತ್ತಮ ಕಾನೂನುಗಳಿದ್ದರೂ, ಅವುಗಳ ಅಳವಡಿಕೆಯಾಗದೆ ಉಳಿದಿರುವುದಕ್ಕೆ ಸುಂದರ್ ಕೌರಳ ಕೇಸು ಒಂದು ಉತ್ತಮ ಉದಾಹರಣೆ. ಬಲಿಯಾದವರಿಗೇ ಬರೆ ಹಾಕುವಂತೆ, ಸುರಿಂದರಳನ್ನು ಬಂಧಿಸುವ ಬದಲು, ಭ್ರೂಣ ಲಿಂಗಪತ್ತೆ ಕೇಂದ್ರಗಳ ಮೇಲೆ ಪೋಲಿಸರು ಚಾವಟಿ ಬೀಸಬೇಕಿತ್ತು. ಭ್ರೂಣ ಲಿಂಗಪತ್ತೆ ಮಾಡಿ ತಿಳಿಸಿದ ವೈದ್ಯರನ್ನು, ತಂತ್ರಜ್ಞರನ್ನು ಮೊದಲು ಬಂಧಿಸಬೇಕಿತ್ತು.

ಪ್ರತಿ ವರ್ಷ ೫೦ ಲಕ್ಷ ಸ್ತ್ರೀ ಭ್ರೂಣಹತ್ಯೆ!

ವೈದ್ಯ ಜಗತ್ತು, ಅಲ್ಟ್ರಾ ಸೋನೋಗ್ರಫಿಯನ್ನು, ಹಣ ದೋಚಿಕೊಳ್ಳುವ ಲಾಭಕೋರಕ ಸಲಕರಣೆಯಾಗಿ ಬಳಸಿಕೊಳ್ಳುತ್ತಿದೆ. ಲಿಂಗಪತ್ತೆ, ಕಾನೂನು ಬಾಹಿರವಾದ ಸ್ತ್ರೀಭ್ರೂಣ ಹತ್ಯೆಗೆ ಕಾರಣವಾಗಿದೆ. ಒಂದು ಅಂದಾಜಿನ ಪ್ರಕಾರ, ಪ್ರತಿ ವರ್ಷ ನಮ್ಮ ದೇಶದಲ್ಲಿ ೫೦ ಲಕ್ಷ ಸ್ತ್ರೀ ಭ್ರೂಣ ಹತ್ಯೆಗಳು ಜರುಗುತ್ತಿವೆ. ಸರಕಾರಿ ಲೆಕ್ಕದ ಪ್ರಕಾರ

ಈ ಸಂಖ್ಯೆ-೨೦ ಲಕ್ಷ. ಇಂತಹ ಅಗಾಧ ಸಂಖ್ಯೆಯಲ್ಲಿ ಆಗುತ್ತಿರುವ ಸ್ತ್ರೀ ಭ್ರೂಣಗಳ ಹತ್ಯೆ, ಸಾಮಾಜಿಕ ಅಸಮತೋಲನದ ದೇಶವನ್ನು ದೂಡುತ್ತಿದೆ. ಮುಂದುವರೆದ ದೇಶಗಳಲ್ಲಿ ನಡೆಯುತ್ತಿರುವ ಮತ್ತಷ್ಟ ಲಿಂಗಭೇದ ನೀತಿಯ ಸಂಶೋಧನೆಗಳು, ಯಶಸ್ವೀ 'ಗಂಡು ಹುಟ್ಟಿಸುವ' ಯಂತ್ರಗಳ ರೂಪದಲ್ಲಿ ಭಾರತಕ್ಕೆ ಲಗ್ಗೆ ಇಟ್ಟು, ಸ್ತ್ರೀಲಿಂಗ ನಿರ್ಮೂಲನೆಗೆ ಸುಲಭ ಮಾರ್ಗವಾಗಬಲ್ಲವು. ದುರ್ಬಳಕೆಯ ವಿಪರೀತದ ಸಾಧ್ಯತೆ ಇರುವ ತಂತ್ರಜ್ಞಾನವನ್ನು ಬರಮಾಡಿಕೊಳ್ಳದಂತೆ ನಿಷೇಧಿಸುವರು ಅಗತ್ಯವಾದರೂ, ಕೇವಲ ಕಾನೂನು, ನಿಷೇಧಗಳಿಂದ ಪರಿಹಾರವಾಗುವ ಸಮಸ್ಯೆ ಇದಲ್ಲ.

ತಂತ್ರಜ್ಞಾನದ ದುರುಪಯೋಗದ ತಡೆ ಬಲು ಸಂಕೀರ್ಣವಾಗಿದೆ. ಕಾನೂನುಗಳು ಅಗತ್ಯವಾದರೂ, ಕೇವಲ ಕಾನೂನುಗಳು ದುರುಪಯೋಗವನ್ನು ನಿಲ್ಲಿಸಲಾರವು ಮತ್ತಷ್ಟು ಹೊಸ ಹೊಸ ತಂತ್ರಜ್ಞಾನಗಳು ಬಂಡಂತೆ, ಅವುಗಳನ್ನು ನಿಯಂತ್ರಿಸುವುದು ಕಾನೂನಿನ ಅಡಿಗೆ ತರುವುದು ಮತ್ತಷ್ಟು ಕಷ್ಟವಾಗುತ್ತದೆ. ಒಟ್ಟು ಸಮುದಾಯ ಚಿಂತನೆಯಲ್ಲಿ ಬದಲಾವಣೆಯಾಗಬೇಕು. ಸ್ತ್ರೀಯರ ಸ್ಥಾನಮಾನದಲ್ಲಿ ಗಮನಾರ್ಹ ಸುಧಾರಣೆಯಾಗಬೇಕು. ಹೆಣ್ಣು ಮಗುವಿಗೆ ಆಸ್ತಿಯ ಹಕ್ಕು ದೊರೆಯಬೇಕು. 'ಹೆಣ್ಣು



ಮಗು ಬೇಕು' ಎನ್ನುವಂತಹ ಪರಿಸರ ಸೃಷ್ಟಿಯಾಗಬೇಕು. ಅಂತಹ ಪರಿಸರದಲ್ಲಿ, ಲಿಂಗಭೇದದ ತಂತ್ರಜ್ಞಾನ ನಿರುಪಯೋಗವಾಗಿ, ಯಾರೂ ಬಳಸದಂತಹ ವಾತಾವರಣ ಮೂಡಬಲ್ಲದು. ಹೆಣ್ಣು ಮಕ್ಕಳ ನಿರ್ಲಕ್ಷ್ಯದತ್ತ ಗಮನ ಸೆಳೆದು ಲಿಂಗ ಸಮಾನತೆಯತ್ತ ಹೆಜ್ಜೆ ಹಾಕುವ ಕ್ರಮಗಳು ಮಾತ್ರ ಈ ಪಿಡುಗಿಗೆ ಶಾಶ್ವತ ಪರಿಹಾರವನ್ನು ಒದಗಿಸಬಲ್ಲವು.

ವರದಕ್ಷಿಣೆ ನಿರ್ಮೂಲನ

ಸಮಾಜದಲ್ಲಿ ವರದಕ್ಷಿಣೆಯ ಪಿಡುಗನ್ನು ನಿರ್ಮೂಲನ ಮಾಡುವುದು ಮೊದಲ ಅಗತ್ಯ. ಪ್ರತಿ ಒಂದೂವರೆ ಗಂಟೆಗೊಂದು ವರದಕ್ಷಿಣೆ ಸಾವು ಸಂಭವಿಸುತ್ತಿದೆ. ಇಂದು ನಮ್ಮ ಸಾಮಾಜಿಕ ಪರಿಸರ ಹೇಗಿದೆ ಎಂದರೆ, ಹೆಣ್ಣು ಮಕ್ಕಳು ಹುಟ್ಟುತ್ತಿದ್ದಂತೆಯೇ ತಾವು ತಮ್ಮ ತಂದೆಗೆ ಹೊರೆ ಎಂಬ ಕೀಳರಿಮೆಯಿಂದಲೇ ಬೆಳೆಯುತ್ತಾ ಹೋಗುತ್ತಾರೆ. ೧೯೮೮ರಲ್ಲಿ ಕಾಲ್ಪುರದಲ್ಲಿ ೧೮, ೨೦, ೨೨ ವಯಸ್ಸಿನ ಮೂವರು ಎಳೆಯ ಸೋದರಿಯರು ಒಟ್ಟಿಗೆ ನೇಣು ಹಾಕಿಕೊಂಡದ್ದನ್ನು ನಾವು ಮರೆಯಲು ಸಾಧ್ಯವಿದೆಯೇ? ಕೊಳ್ಳುಬಾಕ ಸಂಸ್ಕೃತಿ ಯಾವ ಮಟ್ಟಕ್ಕೆ ವರದಕ್ಷಿಣೆಯ ಪಿಡುಗನ್ನು ಭೂತಾಕಾರವಾಗಿಸಿದೆ ಎಂಬುದನ್ನು ಇಡೀ ದೇಶ, ನಿಶಾಳ ಕೇಸಿನಲ್ಲಿ ಕಣ್ಣಾರೆ ಕಂಡಿತು. ವಿದ್ಯಾವಂತಳಾದ, ಇಂಜಿನಿಯರ್ ಆಗಿ ದುಡಿಯುವ ಹುಡುಗಿ ನಿಶಾ, ತನ್ನ ತಂದೆ ಟಿವಿ, ಫ್ರಿಜ್, ಬಟ್ಟೆ ಒಗೆಯುವ

ಯಂತ್ರ ಸಕಲವನ್ನೂ, ಒಂದೊಂದು ಸಟ್ ಅಲ್ಲ, ಎರಡೆರಡು ಸೆಟ್‌ಗಳಾಗಿ ಕೊಡಲು ಪೇರಿಸಿಟ್ಟ ತನ್ನ ವರದಕ್ಷಿಣೆಯ ಎದುರು ಕುಳಿತ ಚಿತ್ರ ಮಾಧ್ಯಮಗಳಲ್ಲಿ ಬಿತ್ತರವಾಗಿದೆ. ಇಷ್ಟಿದ್ದೂ ಸಾಲದೆಂದ ಆಸೆಬುರುಕ ಗಂಡನ್ನು ಕಡೆಗಾದರೂ ಧಿಕ್ಕರಿಸುವ ಧೈರ್ಯ ತೋರಿಸಿದ ನಿಶಾ, ವರದಕ್ಷಿಣೆಯ ಪಿಡುಗನ್ನಷ್ಟೆ ಪ್ರತಿಬಿಂಬಿಸಲಿಲ್ಲ, ನಮ್ಮ ವಿದ್ಯಾಭ್ಯಾಸದ ಕ್ರಮದತ್ತಲೂ ಬೆಳಕು ಚೆಲ್ಲಿದಳು. ನಮ್ಮ ಶಿಕ್ಷಣ ಕ್ರಮ, ಹೆಣ್ಣು ಮಕ್ಕಳನ್ನು ವೈದ್ಯರನ್ನಾಗಿಸುತ್ತದೆ, ಇಂಜಿನಿಯರುಗಳನ್ನಾಗಿ ಮಾಡುತ್ತದೆ, ಆದರೆ ಅವರನ್ನು ಸಮಾನರನ್ನಾಗಿಸದೆ, ಅವರಲ್ಲಿ ಆತ್ಮಸ್ಥೈರ್ಯವನ್ನು, ಸಮಾನ ತತ್ವವನ್ನು, ಜೀವನ ಮೌಲ್ಯವನ್ನು ತುಂಬುವಲ್ಲಿ ಎಷ್ಟು ಅಸಮರ್ಥವಾಗಿದೆ ಎನ್ನುವುದು ನಿಶಾಳ ಕೇಸಿನಲ್ಲಿ ಸ್ಪಷ್ಟವಾಗಿ ತೆರೆದುಕೊಂಡಿತು.

ಹೆಣ್ಣು ಮಕ್ಕಳನ್ನು ಬದುಕಿಗೆ ತಯಾರಿಸದೆ, ಮದುವೆಗೆ ತಯಾರಿಸುವ ಲಿಂಗ ತಾರತಮ್ಯ ನೀತಿ ಬದಲಾಗಬೇಕು. ಇಂದು ಹೊರನೋಟಕ್ಕೆ ಹೆಣ್ಣು ಮಕ್ಕಳ ಉಡುಗೆ, ತೊಡುಗೆ, ನಡಿಗೆಯಲ್ಲಿ ಅಗಾಧ ಬದಲಾವಣೆ ಕಾಣುತ್ತಿರಬಹುದು. ನಿನ್ನೆ ಮೊನ್ನೆಯವರೆಗೂ ತಮ್ಮ ಹೆಣ್ಣು ಮಕ್ಕಳಿಗೆ ಸ್ಕರ್ಟ್ ಹಾಕಲೂ ಅನುಮತಿ ನೀಡದಿದ್ದ ತಂದೆ ತಾಯಿಯರು, ಇಂದು ಈಜು ಉಡುಪಿನಲ್ಲಿ ವೇದಿಕೆ ಏರಿ ಸೌಂದರ್ಯರಾಣಿ ಯರಾಗಲು, ರೂಪದರ್ಶಿಯರಾಗಲು ದಬ್ಬುತ್ತಿದ್ದಾರೆ. ತುಂಡು ಬಟ್ಟೆಯಲ್ಲಿ 'ಐಟಂ ಬಾಂಬ್' ಸ್ಪರ್ಧೆಗೆ ನುಗ್ಗುವ ಹೆಣ್ಣು ಮಕ್ಕಳ ಸಂಖ್ಯೆಯನ್ನು ನೋಡಿದರೆ, ಭಾರತ ಬಲು ಮುಂದವರೆದಿದೆ ಎಂಬ ಭ್ರಮೆ ಬರಲು ಸಾಧ್ಯ. ಆದರೆ ಆಧುನಿಕ ಉಡುಪಿನೊಳಗೂ, ಪೂರ್ವಾಗ್ರಹ ಪೀಡಿತ ಮನಸ್ಸುಗಳೇ ಮುಂದುವರೆದಿರುವುದನ್ನ ಗಮನಿಸಬೇಕು.

## ಸ್ತ್ರೀಭ್ರೂಣ ಹತ್ಯೆ ಮತ್ತು ತಂತ್ರಜ್ಞಾನ ೧೪೧

ಇತ್ತೀಚೆಗೆ ದಿಲ್ಲಿಯಲ್ಲಿ ನನ್ನ ಪರಿಚಿತ ಕಿರಿಯ ಮಹಿಳಾ ಇಂಜಿನಿಯರ್ ಒಬ್ಬಳ ಭೇಟಿಯಾಯಿತು. ದಿನವೂ ತನ್ನ ಕಾರ್ಖಾನೆಗೆ ಸಮವಸ್ತ್ರ ಧರಿಸಿ ಹೋಗುವ ಈ ಹುಡುಗಿ ತೀರಾ ಸಾಮಾನ್ಯವಾಗಿ ಕಾಣುತ್ತಿದ್ದಳು. ಓದಿನಲ್ಲಿ ಬಲು ಚುರುಕಿದ್ದ ಬುದ್ಧಿವಂತ ಹುಡುಗಿ, ಹುದ್ದೆಯಲ್ಲಿ ಸರಸರ ಮೇಲೇರುತ್ತಿದ್ದಾಳೆ. ಹೊರ ಊರಿನಲ್ಲಿ ಆಕೆ, ತೋಳಿಲ್ಲದ ಬಿಗಿಯಾದ ಟಿ-ಶರ್ಟ್ ಹಾಕಿ, ಕೊರಳಿಗೊಂದು ಜಾಲರಿಯ ಸ್ಕಾರ್ಫ್ ಸುತ್ತಿ, ಮಾಸಲು ಜೀನ್ಸಿನಲ್ಲಿ ಎಲ್ಲಿಲ್ಲದ ಆತ್ಮವಿಶ್ವಾಸ ದಿಂದ ಹೊರಬಿದ್ದಾಗ ನನಗೆ ಆಕೆಯ ಗುರುತೇ ಸಿಗಲಿಲ್ಲ. ಅತ್ಯಾಧುನಿಕ ಉಡುಪಿನ ಈ ಹುಡುಗಿಯ ವಿಚಾರಗಳೂ ಅತ್ಯಾಧುನಿಕವಾಗಿರುತ್ತವೆ ಎಂದು ಭಾವಿಸಿದ್ದರೆ ಅಚ್ಚರಿಯಲ್ಲ. ಮಾತಿನ ನಡುವೆ, ಆಕೆಯ ಅಪ್ಪ ಅಮ್ಮ ಹುಡುಗನನ್ನು ಹುಡುಕುತ್ತಿರುವುದು ತಿಳಿದು ಬಂತು. 'ನಮ್ಮದೇ ಜಾತಿಯ ಹುಡುಗನಾಗಬೇಕು, ಮೊದಲು ಜಾತಕ ಕೂಡಬೇಕು, ಅದಾದ ನಂತರವೇ, ಮುಂದಿನ ಮಾತು' ಎಂದಾಗಲೂ ಅಷ್ಟು ಅಚ್ಚರಿ ಆಗಲಿಲ್ಲ. ಅಪ್ಪ ಅಮ್ಮ ಹುಡುಕುವಾಗ ತಮ್ಮದೇ ಹಿನ್ನೆಲೆಯ ಹುಡುಗನನ್ನು ಹುಡುಕುವುದು ಸಹಜ. 'ಜಾತಕವನ್ನು ಕೂಡಿಸಿಕೊಳ್ಳಲಿ ಬಿಡು,

ಆದರೆ ವರದಕ್ಷಿಣೆ ಕೊಡೋದಿಲ್ಲ ತಾನೇ' ಎಂದ ನನ್ನ ಪ್ರಶ್ನೆಗೆ ಆಕೆಯ ಉತ್ತರ ಅಚ್ಚರಿ ಹುಟ್ಟಿಸಿತು 'ಅದೂ ಇದ್ದೇ ಇರುತ್ತಲ್ಲ' ಎಂದಳು ಈ ಹುಡುಗಿ! ಸ್ವತಃ ಓದಿ, ದುಡಿಯುತ್ತಿರುವ ಈ ಹುಡುಗಿಗೆ "ಅದ್ದೂರಿ ಮದುವೆ, ಎಂದ ಮೇಲೆ, ಹೆಣ್ಣಿನ ಕಡೆಯವರು ವರದಕ್ಷಿಣೆ ಕೊಡುವುದು' ಅತ್ಯಂತ ಸಹಜವಾಗಿ ಈಕೆಗೆ ಕಂಡಂತಿತ್ತು. ಈಕೆಯ ಆಧುನಿಕತೆಯೆಲ್ಲ ಉಡುಪಿಗಷ್ಟೇ ಮೀಸಲಾಗಿತ್ತು. ಇಂತಹ ಪರಿಸರದಲ್ಲಿ ಬೆಳೆದ ಹೆಣ್ಣ 'ತಾನು ಹೊರೆ' ಎಂದೇ ನಂಬುತ್ತಾಳೆ, 'ಹೊರೆಯಾಗಿಯೇ ಮುಂದುವರೆಯುತ್ತಾಳೆ. ಇಂತಹ ವಿಚಾರಗಳು ಮೂಲಭೂತವಾಗಿ ಬದಲಾಗದೆ, ಕೇವಲ ಓದು ವಿದ್ಯೆ, ಡಿಗ್ರಿ, ಕೆಲಸ, ಹಣದಿಂದ ಸಾಮಾಜಿಕ ಬದಲಾವಣೆ ಸಾಧ್ಯವಾಗುವುದಿಲ್ಲ, ಸ್ತ್ರೀ ಭ್ರೂಣ ಹತ್ಯೆಗಳು ನಿಲ್ಲುವುದಿಲ್ಲ.

ಕಂಪ್ಯೂಟರ್ ಯುಗದಲ್ಲೂ ಈ ನೆವದಲ್ಲಿ 'ಪುತ್ರ ಕಾಮೇಷ್ಠಿ' ಯಾಗ ನಡೆದದ್ದನ್ನು ನಾವು ನೋಡಿದ್ದೇವೆ. ಲಿಂಗತಾರತಮ್ಯವನ್ನು ಉತ್ತೇಜಿಸುವ ಸಂಪ್ರದಾಯಗಳನ್ನು ಪ್ರಜ್ಞಾಪೂರ್ವಕವಾಗಿ ಕೈ ಬಿಡಬೇಕಾಗಿದೆ. ಮದುವೆಯ ಸಂದರ್ಭದಲ್ಲಿ ಗಂಡು ಹೆತ್ತವಳಿಗೆ ಮಾಡುವ ಸನ್ಮಾನಗಳು, ಮೂರು ತಲೆಮಾರುಗಳಲ್ಲಿ ಮೊದಲ ಮಗು ಗಂಡಾದರೆ ಸಂಭ್ರಮಿಸಿ ಮಾಡುವ ಕನಕಾಭಿಶೇಕಗಳು, ಲಿಂಗ ತಾರತಮ್ಯವನ್ನು ಮೆರೆಸುತ್ತವೆ. ಇಂತಹ ಆಚರಣೆಗಳು ನಿಲ್ಲಬೇಕು. ಅತ್ಯಂತ ವೈಯಕ್ತಿಕ ನೆಲೆಯಲ್ಲಿ ಕ್ರಾಂತಿಯಾಗಬೇಕು, ಅದು ಸಾರ್ವತ್ರಿಕದೆಡೆಗೆ ಸಾಗಬೇಕು.

ಸುತ್ತಲು ಸಮಾಜದಲ್ಲಿ ಕಣ್ಣು ಹಾಯಿಸಿ ನೋಡಿದರೆ, ಹೆಣ್ಣು ಮಗು ಆಸರೆಯಾಗಿದ್ದಾಳೆ. ಆಧಾರವಾಗಿದ್ದಾಳೆ. ಇಡೀ ಕುಟುಂಬವನ್ನು ಸಂಭಾಳಿಸುತ್ತಿದ್ದಾಳೆ. ಎಲ್ಲ ರಂಗಗಳಿಗೂ ಇಂದು ಮಹಿಳೆ ನುಗ್ಗಿ, ತನ್ನ ಸಾಮರ್ಥ್ಯವನ್ನು ಮೆರೆದಿದ್ದಾಳೆ. ಹೀಗಿದ್ದೂ ಹೆಣ್ಣು ಮಕ್ಕಳ ಸಂಖ್ಯೆ ಇಳಿದು ಹೋಗುತ್ತಿದೆ.

ವಿತಂಡವಾದಗಳು

೧೯೭೫ರಲ್ಲಿ 'ಇಂಡಿಯನ್ ಮೆಡಿಕಲ್ ರಿಸರ್ಚ್' ಅಮ್ನಿಯೋಸಿಂಟೆಸಿಸ್ ತಂತ್ರಜ್ಞಾನ ಗಂಡುಮಗುವಿಗಾಗಿ ಹೆರುತ್ತಲೇ ಹೋಗುವ ಹೆಂಗಸರಿಗೆ ಅನುಕೂಲ ಎಂದು ವಾದಿಸಿತು. ಮಾರುಕಟ್ಟೆಯ 'ಸಪ್ಲೆ ಅಂಡ್ ಡಿಮಾಂಡ್' ತರ್ಕವನ್ನು ಹೆಣ್ಣಿಗೂ ಬಳಸಿ ಅನೇಕ ಅರ್ಥಶಾಸ್ತ್ರಜ್ಞರು 'ಹೆಣ್ಣಿನ ಸಂಖ್ಯೆ ಇಳಿಮುಖವಾದರೆ, ಸಮಾಜದಲ್ಲಿ ಆಕೆಗೆ ಬೇಡಿಕೆ ಹೆಚ್ಚಿ, ಆಕೆಯ ಸ್ಥಾನಮಾನಗಳು ಹೆಚ್ಚುತ್ತವೆ' ಎಂದು ವಾದಿಸಿದರು. ಹೆಣ್ಣನ್ನು ಮಾರುಕಟ್ಟೆಯ ಸರಕಾಗಿ ಕಾಣುವ ಈ ಕೊಳ್ಳುಬಾಕ ದೃಷ್ಟಿಕೋನವೇ ಎಷ್ಟು, ಅನಾಹುತದ್ದೆಂದು ಯೋಚಿಸಿ. ಇಳಿಯುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆಯಿಂದಾಗಿ ಹೆಣ್ಣು ಮಗು ಬಹುಪತ್ನಿತ್ವ, ವೇಶ್ಯಾವಾಟಿಕೆ, ಗುಂಪು ಅತ್ಯಾಚಾರ ಎಲ್ಲಕ್ಕೂ ಬಲಿಯಾಗಬಲ್ಲಳು,ಚೀನಾ ದೇಶ ೧೯೭೯ ರಲ್ಲಿ, ಜನಸಂಖ್ಯಾ ನಿಯಂತ್ರಣದ ದೃಷ್ಟಿಯಲ್ಲಿ “ಕುಟುಂಬಕ್ಕೆ ಒಂದೇ ಮಗು' ಕಾನೂನನ್ನು ತಂದೆ ಮೇಲೆ, ಮಿಲಿಯಗಟ್ಟಲೆ ಹೆಣ್ಣುಮಕ್ಕಳು 'ಕಳೆದು ಹೋದದ್ದು ೧೯೯೦ರ ದಶಕದ ಆರಂಭದಲ್ಲಿ ಸ್ಪಷ್ಟವಾಗಿ ಕಣ್ಣಿಗೆ ರಾಚಿತು. ಸ್ತ್ರೀಭ್ರೂಣ ಹತ್ಯೆ ಇದಕ್ಕೆ ಮುಖ್ಯ ಕಾರಣವಾಗಿತ್ತು. ಚೀನಾದ ಒಂದು ಅಂದಾಜಿನ ಪ್ರಕಾರ ಆ ದೇಶದಲ್ಲಿ ೨೦೨೦ರ ಹೊತ್ತಿಗೆ ೪೦ ಮಿಲಿಯ ಅವಿವಾಹಿತ ಗಂಡಸರಿರುತ್ತಾರೆ. ಭಾರತ ಇದಕ್ಕೆ ಹೊರತಲ್ಲ. ಒಂದು ಸಮಾಜದಲ್ಲಿ ಅವಿವಾಹಿತ ಗಂಡಸರ ಸಂಖ್ಯೆ ಹೆಚ್ಚಿದರೆ ಆಗಬಹುದಾದ ಅನಾಹುತಗಳನ್ನು ಊಹಿಸಿಕೊಳ್ಳಿ. ಆ ಸಮಾಜ ಎಷ್ಟು ಅಪಾಯಕಾರಿ, ಆತಂಕಕಾರಿ ಯಾಗಬಲ್ಲದು ಗಮನಿಸಿ, ಲೈಂಗಿಕ ಶೋಷಣೆ, ವೇಶ್ಯಾವಾಟಿಕೆ ಯಥೇಚ್ಛವಾಗುತ್ತದೆ. ದಿಲ್ಲಿಯಲ್ಲಿ ತೀವ್ರವಾಗಿ ಏರಿದ ಲೈಂಗಿಕ ಅಪರಾಧಗಳಿಗೆ, ಅಸಮಾನ ಲಿಂಗ ಪ್ರಮಾಣವೇ ಕಾರಣ ಎಂದು ಊಹೆ ಇದೆ.

ಜನ ಜಾಗೃತಿ

ಒಟ್ಟಿನಲ್ಲಿ ಹೇಳುವುದಾದರೆ, ಒಂದು ಸಮಾಜದಲ್ಲಿ ಹೆಣ್ಣು ಮಕ್ಕಳ ಪ್ರಮಾಣ, ಆ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನದ ಸಂಕೇತವೇ ಆಗಿದೆ. ಇಂದು ಜೀವಶಾಸ್ತ್ರೀಯ ಕಾರಣಗಳಿಗಿಂತ ಸಾಮಾಜಿಕ ಕಾರಣಗಳು ಹೆಣ್ಣು ಮಕ್ಕಳ ಸಂಖ್ಯೆಯ ಇಳಿಮುಖಕ್ಕೆ ಕಾರಣವಾಗಿರುವುದು ಸ್ಪಷ್ಟವಾಗಿದೆ. ಸ್ತ್ರೀಭ್ರೂಣ ಹತ್ಯೆ, ಹೆಣ್ಣು ಕೂಸುಗಳ ಹತ್ಯೆ, ಹೆಣ್ಣು ಮಕ್ಕಳಿಗೆ ಸರಿಯಾದ ಆಹಾರ, ಪೌಷ್ಟಿಕಾಂಶಗಳು ದೊರೆಯದೆ ಆಗುವ ಸಾವು, ಹೆಣ್ಣಿನ ಮೇಲಿನ ದೌರ್ಜನ್ಯ ಇವೆಲ್ಲವೂ ಒಂದು ಸಮಾಜದಲ್ಲಿ ಹೆಣ್ಣು ಮಕ್ಕಳ ಸಂಖ್ಯೆಯ ಇಳಿಮುಖಕ್ಕೆ ಕಾರಣವಾಗುತ್ತವೆ. ಚಾರಿತ್ರಿಕವಾಗಿ ಇಳಿಮುಖವಾಗುತ್ತಲೇ ಬಂದಿದ್ದ ಹೆಣ್ಣು ಮಕ್ಕಳ ಸಂಖ್ಯೆ, ಕಳೆದ ದಶಕಗಳಲ್ಲಿ ತಾಂತ್ರಿಕತೆಯ ಲಾಭದಲ್ಲಿ ಅತಿ ವೇಗದಿಂದ ಇಳಿದಿರುವುದನ್ನು ನೋಡಿದ್ದೇವೆ. ಸಮಾಜದಲ್ಲಿ ಸ್ತ್ರೀಯರನ್ನು ಕುರಿತ ಪೂರ್ವಾಗ್ರಹ ದೃಷ್ಟಿಕೋನ ಸರಿಪಡದೆ, ಈ ಏರುಪೇರು ಕೇವಲ ಕಾನೂನಿನಿಂದ ಸರಿ ಪಡುವುದಿಲ್ಲ.

ಇಂತಹ ಬದಲಾವಣೆಗೆ ಬೃಹತ್ ಪ್ರಮಾಣದಲ್ಲಿ ಜನ ಜಾಗೃತಿಯ ಕೆಲಸ ನಡೆಯಬೇಕಿದೆ. ಮಹಿಳಾ ಸಾಕ್ಷರತೆಗೆ ಒತ್ತು ಬೇಕು, ಆದರೆ ಕೇವಲ ಸಾಕ್ಷರತೆಯಿಂದ



ಹೆಚ್ಚು ಬದಲಾವಣೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿ ಸ್ತ್ರೀ ಸಮಾನತೆಯನ್ನು, ಹಿಂದಿನ ಸಮಾಜದ ಪಿಡುಗುಗಳಾದ ಬಾಲ್ಯ ವಿವಾಹ, ವರದಕ್ಷಿಣೆ, ಸ್ತ್ರೀ ಭ್ರೂಣ ಹತ್ಯೆ, ಇವುಗಳ ಪರಿಚಯ, ಪರಿಣಾಮ, ಪರಿಹಾರಗಳು ಎಳೆಯ ತರಗತಿಯಲ್ಲಿಯ ಪಾಠಗಳಿದ್ದು, ಮಕ್ಕಳನ್ನು ಚಿಂತನಶೀಲರನ್ನಾಗಿ ಮಾಡುವ ಯತ್ನಗಳು ಬೇಕು. ಬಾಲ್ಯ ವಿವಾಹದ ಪಿಡುಗನ್ನು ವಿವರಿಸುವ ಭಾಂಬ್ರಿ ದೇವಿಯ ಕತೆಯನ್ನು ಪ್ರೌಢಶಾಲೆಯ ಪಠ್ಯದಲ್ಲಿ ಸೇರಿಸಿರುವ ಪ್ರಯತ್ನಗಳನ್ನು ನಾವಾಗಲೇ ಕಾಣುತ್ತಿದ್ದೇವೆ. ಆದರೆ ಈ ಪ್ರಯತ್ನ ಪ್ರಜ್ಞಾಪೂರ್ವವಾಗಿ ದೊಡ್ಡ ಪ್ರಮಾಣದಲ್ಲಿ ನಡೆಯ ಬೇಕಿದೆ ನಮ್ಮ ಮಕ್ಕಳು ಓದುವ ಪಠ್ಯಗಳು ಲಿಂಗಸೂಕ್ಷ್ಮತೆಯಿಂದ ಕೂಡಿವೆಯೇ ಎಂಬುದನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು.

ಶಾಲೆಯಲ್ಲಿಯೇ ಮಹಿಳಾ ಹಕ್ಕುಗಳ ಬಗ್ಗೆ ತಿಳಿಸಬೇಕು, ಮಹಿಳಾ ಸಾಧಕಿಯರ ಪರಿಚಯಿಸುವ ಪಠ್ಯಗಳಿದ್ದು, ಹೆಣ್ಣು ಮಕ್ಕಳಿಗೆ 'ರೋಲ್ ಮಾಡಲ್' ದೊರೆಯುವಂತಿರಬೇಕು. ಕೊಳ್ಳುಬಾಕ ಮಾಧ್ಯಮಗಳಲ್ಲಿ ಸದಾ ಬಿತ್ತರಿಸುವ 'ಗ್ಲಾಮರ್' ಜಗತ್ತಿನ ಕಂದರಗಳ ಬಗ್ಗೆ ಎಚ್ಚರಿಕೆಗಳು ಬೇಕು.

ಲಿಂಗ ಅಸಮಾನತೆ ಮತ್ತು ಇಳಿದು ಹೋಗಿರುವ ಹೆಣ್ಣು ಮಕ್ಕಳ ಸಂಖ್ಯೆ ಭಾರತದ ಬಹು ದೊಡ್ಡ ಸಾಮಾಜಿಕ ಸೋಲುಗಳು ಎಂದು ಗುರುತಿಸಬೇಕು. ಎಲ್ಲ ರಂಗಗಳಲ್ಲೂ, ಲಿಂಗ ಸೂಕ್ಷ್ಮತೆ, ಲಿಂಗ ಸಮಾನತೆಯ (gender sensitivity and gender equality) ಬಗ್ಗೆ ತಿಳಿಸುವಂತಹ ಕೆಲವು ಕಾರ್ಯಕ್ರಮಗಳನ್ನು ಕಡ್ಡಾಯ ಮಾಡುವ ಅಗತ್ಯವೂ ಇದೆ. ಅದರಲ್ಲೂ ವೈದ್ಯರಂಗದಲ್ಲಿ ಇದರ ಹೆಚ್ಚು ಪ್ರಚಾರ ಬೇಕು. ವೈದ್ಯರು, ತಂತ್ರಜ್ಞರು, ಇದೇ ಲಿಂಗತಾರತಮ್ಯದ ಅಸಮಾನ ಸಮಾಜದ ಭಾಗವಾದ ಕಾರಣ, ಯಾವುದೇ ಅಳುಕು ಇಲ್ಲದೆ, ಆತ್ಮ ಪ್ರಜ್ಞೆಯೂ ಕಾಡದೆ ಹೆಣ್ಣು ಭ್ರೂಣ ಹತ್ಯೆಗೆ ತೊಡಗಿರುವುದನ್ನು ನೋಡಿದ್ದೇವೆ. ಇಂದು ನಮ್ಮ ಕಾರ್ಖಾನೆಗಳಲ್ಲಿ, ಕೆಲಸದ ತಾಣಗಳಲ್ಲಿ, ಗುಣಮಟ್ಟಕ್ಕೊಂದು ವಾರ (quality week), ಸುರಕ್ಷಣೆಗೊಂದು ವಾರ (Safety week) ಎಂದೆಲ್ಲ ಆಚರಿಸುವುದನ್ನು ನೋಡುತ್ತೇವೆ. ಹಾಗೆಯೇ “ಲಿಂಗ ಸೂಕ್ಷ್ಮತೆಗೊಂದು ವಾರ' ಎಂದು ಆಚರಿಸುವುದು ಉತ್ತಮ. ಪ್ರಜ್ಞಾಪೂರ್ವಕ ವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಲಿಂಗ ತಾರತಮ್ಯದಲ್ಲಿ ತೊಡಗಿರುವ ಜನತೆಯನ್ನು ಎಚ್ಚರಿಸುವಂತಹ ಕಾರ್ಯಕ್ರಮಗಳು ಬೇಕಿವೆ.

-

ಶಿಕ್ಷಣ ಆರ್ಥಿಕ, ಸಾಮಾಜಿಕ, ರಾಜಕೀಯ ಈ ಎಲ್ಲ ರಂಗದಲ್ಲಿರುವ ಲಿಂಗ ತಾರತಮ್ಯ ನಿವಾರಣೆಯಾದಾಗ ಮಾತ್ರ ಮಹಿಳೆಯರ ಸ್ಥಾನಮಾನವನ್ನು ಉತ್ತಮಗೊಳ್ಳಿಸಬಲ್ಲದು. ಸಮಾನತೆಯ ಬುನಾದಿಯ ಮೇಲೆ ನಿಂತ ಸಮಾಜದಲ್ಲಿ ಸ್ತ್ರೀ ಭ್ರೂಣ ಹತ್ಯೆಗಳು ನಡೆಯಲಾರವು.

## ರೈತ ಚಳವಳಿ

- ಚುಕ್ಕಿ ನಂಜುಂಡಸ್ವಾಮಿ

ಕೃಷಿ ಮತ್ತು ಕೃಷಿಕರ ಬದುಕಿನ ಬಗ್ಗೆ ಹೊಸದಾಗಿ ಏನೂ ನಿಮಗೆ ಹೇಳಬೇಕಾಗಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಅದಕ್ಕೆ ಕಾರಣ ಬಹಳಷ್ಟು ಜನ ಅರಿವಿರುವವರೇ ಇಲ್ಲಿ ಬಂದು ಸೇರಿರುವುದು. ಅದರ ಜೊತೆಗೆ ಜಾಸ್ತಿ ಶಿಕ್ಷಿತವರ್ಗವೇ ಇಲ್ಲಿ ಕಾಣಿಸುತ್ತಿದೆ. ಆದ್ದರಿಂದ ಎಷ್ಟರಮಟ್ಟಿಗೆ ಗ್ರಾಮೀಣ ಜನರ ಬದುಕಿನ ಬಗ್ಗೆ, ಕೃಷಿಕರ ಬಗ್ಗೆ ತಿಳಿಕೊಂಡಿದ್ದೇವೆ? ಅವರ ಜೊತೆಗೆ ಇದ್ದು ಅವರ ಸಮಸ್ಯೆಗಳಿಗೆ ನಾವು ಪರಿಹಾರ ಕಂಡುಕೊಳ್ಳುವಲ್ಲಿ ನಮ್ಮ ಪಾತ್ರ ಏನು? ಎನ್ನುವ ಪ್ರಶ್ನೆಯು ಇಲ್ಲಿ ಪ್ರಸ್ತುತ. ಈ ವಿಷಯವನ್ನೇ ಕೇಂದ್ರೀಕರಿಸಿ ಇವತ್ತು ಮಾತನಾಡಲು ಇಷ್ಟಪಡುತ್ತೇನೆ. ಸ್ವತಂತ್ರ ಬಂದು ಅರುವತ್ತು ವರ್ಷಗಳಾದರೂ ಕೃಷಿಕನ ಬದುಕು ಹದಗೆಡುತ್ತಲೇ ಇದೆ. ಸಾಲವಿಲ್ಲದ ಕೃಷಿಕ ಈ ಭೂಮಿಯ ಮೇಲೆ ಇಲ್ಲವೇ ಇಲ್ಲ. ಉತ್ಪಾದನೆ ಜಾಸ್ತಿ ಮಾಡ್ತಾನೆ ಇದಾನೆ. ಅದರ ಜೊತೆಗೆ ಸಾಲ ಜಾಸ್ತಿ ಆಗ್ತಾನೆ ಇದೆ. ಸಾಲದ ಜೊತೆಗೆ ಆತ್ಮಹತ್ಯೆಯ ಹಾದಿ ಹಿಡಿಯುವಂತಹ ಪರಿಸ್ಥಿತಿ ಬಂದಿದೆ. ಕೃಷಿಕ ಒಬ್ಬನೇ ಆತ್ಮಹತ್ಯೆ ಮಾಡಿಕೊಳ್ಳುತ್ತಾ ಇರುವುದು. ಕೈಗಾರಿಕೆಯಲ್ಲಿ ಕೆಲಸ ಮಾಡುವಂಥ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿಲ್ಲ. ಶಿಕ್ಷಿತ ವರ್ಗದಲ್ಲಿ ಒಬ್ಬರು ಆತ್ಮಹತ್ಯೆ ಮಾಡಿಕೊಳ್ಳುತ್ತಾ ಇರಬಹುದು. ಆದರೆ ಆ ಸಮುದಾಯಕ್ಕೆ ತಗಲಿರುವ ಸಮಸ್ಯೆಯನ್ನು ಎದುರಿಸಲಿಕ್ಕೆ ಆಗದೇ ಇರುವಂತಹ ಪರಿಸ್ಥಿತಿಗೆ ತಲುಪಿ, ತನ್ನ ಮರ್ಯಾದೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಬೇರೆ ಯಾವ ವರ್ಗದಲ್ಲೂ ನಡೆಯುತ್ತಿಲ್ಲ.

೧೯೯೫ನೇ ಇಸವಿಯಿಂದೀಚೆಗೆ ಸರ್ಕಾರದ ಅಂಕಿ ಅಂಶಗಳ ಪ್ರಕಾರ ರಿಜಿಸ್ಟರ್ಡ್ ಡೆತ್ ನೊಂದಾವಣಿ ಆಗಿರುವ ಆತ್ಮಹತ್ಯೆಗಳು ೨ ಲಕ್ಷ. ಅದರಲ್ಲಿ ಮಹಿಳೆಯರನ್ನು ರೈತರೆಂದು ಗಣನೆಗೆ ತೆಗೆದುಕೊಂಡಿಲ್ಲ. ಏಕೆಂದರೆ ಅವರ ಹೆಸರಿನಲ್ಲಿ ಭೂಮಿಯಿಲ್ಲ. ಭೂಮಿ ಇರುವವರು ಮಾತ್ರ ರೈತರು. ಮಕ್ಕಳ ಜೊತೆಗೆ ಇಡೀ ಕುಟುಂಬಕ್ಕೆ ಕುಟುಂಬವೇ ಆತ್ಮಹತ್ಯೆ ಮಾಡಿಕೊಳ್ಳುತ್ತಾ ಇದೆ. ವಿದರ್ಭದಲ್ಲಿ, ಆಂಧ್ರಪ್ರದೇಶದಲ್ಲಿ ನಮ್ಮ ರಾಜ್ಯದ ಕೊಪ್ಪಳ ಜಿಲ್ಲೆ, ರಾಯಚೂರು ಜಿಲ್ಲೆ, ಇಲ್ಲಿ ಹೋದಾಗ ನಮಗೆ ಅದರ ಬಗ್ಗೆ ಗೊತ್ತಾಗುತ್ತದೆ. ಇದಕ್ಕೆ ಶಿಕ್ಷಿತ ವರ್ಗವಾದ ನಾವು

ಯಾವ ರೀತಿ ಸ್ಪಂದಿಸುತ್ತಿದ್ದೇವೆ? ರೈತರು ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನೆಗಾಗಿ ಬೆಂಗಳೂರಿಗೆ ಬಂದಾಗ ವಾರಿನ ಶಿಕ್ಷಿತವರ್ಗ,



ಮಧ್ಯಮವರ್ಗ ನಮಗೂ ಅದಕ್ಕೂ ಸಂಬಂಧವಿಲ್ಲ ಎನ್ನುವ ರೀತಿ ವ್ಯವಹರಿಸುತ್ತಾರೆ. ಅನ್ನ ಬೆಳೆಯೋದಕ್ಕೆ ರೈತ ಬೇಕು. ಊಟ ಮಾಡದೇ ಇರುವವರು ಯಾರು ಇಲ್ಲ. ನಾನು ಊಟ ಮಾಡುವುದಿಲ್ಲ. ನನಗೂ ರೈತನಿಗೂ ಸಂಬಂಧವಿಲ್ಲ ಎನ್ನುವವರು ಯಾರಾದರೂ ಇದ್ದೀರಾ? ಊಟ ಮಾಡದೇ ಇರುವವರು ಯಾರೂ ಇಲ್ಲ. ಅನ್ನ ತಿನ್ನದೇ ಇರುವವರು ಯಾರೂ ಇಲ್ಲ. ಆದರೆ ಅನ್ನ ಬೆಳೆದ ರೈತ ಏನಾಗುತ್ತಿದ್ದಾನೆ ಅನ್ನುವುದನ್ನು ಕೇಳುವಂತಹ ಸೂಕ್ಷ್ಮತೆಯನ್ನು ನಾವು ಕಳೆದುಕೊಂಡುಬಿಟ್ಟಿದ್ದೇವೆ.

ಕರ್ನಾಟಕ ರೈತ ಚಳವಳಿಗೆ ಈಗಾಗಲೇ ೩೩ ವರ್ಷಗಳಾದವು. ನೂರಾರು ರೈತರ ಹತ್ಯೆಯ ಮೇಲೆ, ಗುಂಡೇಟಿಗೆ ಬಲಿಯಾದ ರೈತರ ಹತ್ಯೆಯ ಮೇಲೆ ಕಟ್ಟಿದ್ದು ಈ ರೈತ ಚಳವಳಿ, ರೈತ ಚಳವಳಿ ಕಟ್ಟಿದ್ದಾಗ ಒಂದೇ ಒಂದು ಘೋಷಣೆ ಇದ್ದಿದ್ದು - 'ನಮ್ಮ ಆತ್ಮಗೌರವದ ರಕ್ಷಣೆಗಾಗಿ' ಅಂತ. ತಹಸೀಲ್ದಾರನ ಅಥವಾ ಡಿ.ಸಿ.ಯ ಆಫೀಸಿಗೆ ಹೋದರೆ ರೈತ ಕೈಕಟ್ಟಿ ನಿಲ್ಲಬೇಕಾಗುತ್ತದೆ. ಬನ್ನಿ ನೀವೂ ಕುಳಿತುಕೊಳ್ಳಿ. ನೀವು ಕೂಡ ನಮಗೆ ಅನ್ನ ಹಾಕುವಂಥ ಅನ್ನದಾತ ಅನ್ನುವ ಒಂದು ಕನಿಷ್ಠ ಮರ್ಯಾದೆ ಕೂಡ ಇರಲಿಲ್ಲ. ಆ ಸ್ಥಾನದಲ್ಲಿದ್ದ ಒಂದು ಪ್ರಾಣಿಯ ರೀತಿ ಬದುಕುತ್ತಿದ್ದ ಒಬ್ಬ ರೈತನನ್ನು, ರೈತ ಸಮುದಾಯವನ್ನು ಸಂಘಟನೆಗೆ ಒಳಪಡಿಸಿ, ಅವರಿಗೆ ಶಿಕ್ಷಣ ಕೊಡುತ್ತಾ ಅರಿವು ಮೂಡಿಸುತ್ತಾ ಅವರ ಹಕ್ಕುಗಳ ಬಗ್ಗೆ ಹೇಳಿಕೊಡುತ್ತಾ ಕಟ್ಟಿದಂತಹ ಚಳುವಳಿ ಕರ್ನಾಟಕದ ರೈತ ಚಳುವಳಿ. ೩೩ ವರ್ಷಗಳ ದೀರ್ಘಕಾಲದ ಚಳುವಳಿಯಲ್ಲಿ ಏರುಪೇರುಗಳು ಎಲ್ಲ ಚಳುವಳಿಗಳಲ್ಲೂ ಇರುತ್ತವೆ. ಆ ಏರು ಪೇರುಗಳನ್ನು ಕರ್ನಾಟಕದ ರೈತ ಚಳುವಳಿ ಕೂಡ ಎದುರಿಸುತ್ತಿದೆ. ಅದರ ಜೊತೆಗೆ ಬಹಳಷ್ಟು ಸವಾಲುಗಳನ್ನು ಎದುರಿಸುತ್ತಾ ಇವೆ. ಗ್ರಾಮೀಣ ಪ್ರದೇಶದಲ್ಲಿ ರೈತರು, ಕೂಲಿ ಕಾರ್ಮಿಕರು ಎದುರಿಸುತ್ತಿರುವಂತಹ ಪರಿಸ್ಥಿತಿ ಶೋಚನೀಯ. ಅವನ್ನವನ್ನು ಬೆಳೆಯುತ್ತಿರುವ ರೈತನಿಗೆ ಅನ್ನವಿಲ್ಲ. ಝಾರ್ಖಂಡ್, ಛತ್ತೀಸ್‌ಗಢ್‌ಗಳಲ್ಲಿ ಹಸಿವಿನಿಂದ ಸಾಯುತ್ತಿರುವ ಅನ್ನದಾತರ ಸಂಖ್ಯೆ ದಿನೇ ದಿನೇ ಎಷ್ಟರಮಟ್ಟಿಗೆ ಏರುತ್ತಿದೆಯೆಂದರೆ ಆ ವಿಚಿತ್ರವನ್ನು ಅರ್ಥಮಾಡಿಕೊಳ್ಳಲು ಆಗುತ್ತಿಲ್ಲ.

ಯಾಕೆ ಹೀಗೆ ಆಗುತ್ತಿದೆ ? ನಮಗೆಲ್ಲ ಗೊತ್ತು ದೇಶದ ಬೆನ್ನೆಲುವು ರೈತ ಎಂದು. ಗಾಂಧೀಜಿ ಹೇಳಿದರು ಭಾರತ ಇರೋದೇ ಹಳ್ಳಿಗಳಲ್ಲಿ ಅಂತ. ಆದರೆ ಆ ಹಳ್ಳಿಗಳು ಏನಾಗಿದಾವೆ ಇವತ್ತು ? ರೈತ ಏನಾಗಿದ್ದಾನೆ ? ಕನಿಷ್ಠ ಒಂದು ವೈಜ್ಞಾನಿಕ ಬೆಲೆ ನೀತಿ ಕೂಡ ರೂಪಸಲಿಕ್ಕೆ ಸಾಧ್ಯವಾಗಿಲ್ಲ. ಎಲ್ಲ ಸರ್ಕಾರಗಳು ಬಂದವು. ಎಲ್ಲ ರಾಜಕೀಯ ಪಕ್ಷಗಳು ಬಂದು ಆಳಿದವು. ವೈಜ್ಞಾನಿಕ ಬೆಲೆ ನೀತಿಯೊಂದು ರೂಪುಗೊಂಡಿದ್ದರೆ ಯಾವ ರೈತನೂ

ಸಾಲಗಾರನಾಗುತ್ತಿರಲಿಲ್ಲ. ಯಾವ ರೈತನಿಗೂ ಸಬ್ಸಿಡಿ ಬೇಕಾಗುತ್ತಿರಲಿಲ್ಲ. ಆದರೆ ಅದ್ಯಾವುದನ್ನೂ ಮಾಡಲಿಲ್ಲ. ರೈತನ ಮಾರುಕಟ್ಟೆಯೊಂದೇ ಇವತ್ತು ಬೈಯರ್ಸ್



ಮಾರುಕಟ್ಟೆ ಕೊಂಡುಕೊಳ್ಳುವವನ ಮಾರುಕಟ್ಟೆ ಯಾರು ದಲ್ಲಾಳಿ ಕೊಂಡುಕೊಳ್ಳುತ್ತಾನೋ ಅವನು ಅದರ ಬೆಲೆಯನ್ನು ನಿಗದಿ ಮಾಡುತ್ತಾನೆ. ನೀವು ಒಂದು ಬೆಂಕಿಪಟ್ಟಣ ತೆಗೆದುಕೊಂಡರೆ, ಕಾಲಿಗೆ ಹಾಕಿಕೊಳ್ಳುವ ಚಪ್ಪಲಿ ತೆಗೆದುಕೊಂಡರೆ ಬಾಟಾ ಕಂಪನಿ ಅದರ ಮೇಲೆ ಬರೆದಿರುತ್ತದೆ. ೯೯ ರೂ. ೯೯ ಪೈಸೆ ಅಂತ. ಬಹಳ ನಿಖರವಾಗಿ ಬರೆದು ನಿಮಗೆ ಮಾರುತ್ತೆ. ಆದರೆ ನಾವು ತರಕಾರಿ ತೆಗೆದುಕೊಳ್ಳುವಾಗ ಚೌಕಾಸಿ ಮಾಡುತ್ತೇವೆ. ರೈತ ಅವನು ಕಷ್ಟಪಟ್ಟು ಬೆಳೆದು ಮಾರುತ್ತಿರುತ್ತಾನೆ. ದಲ್ಲಾಳಿಗಳಿಗೆ ಮಾನದಂಡವೇ ಇಲ್ಲ.

ಈ ದೇಶದ ಭವಿಷ್ಯ ಎಷ್ಟು ಕರಾಳವಾಗಿ ಕಾಣಿಸುತ್ತಿದೆ. ಬ್ರಿಟೀಷರು ಹೊಕ್ಕುಹೋದ ಎಲ್ಲ ಕಾನೂನುಗಳು ಇನ್ನೂ ಮುಂದುವರೆಯುತ್ತಿವೆ. ಹೆಸರಷ್ಟೇ ಹೊಸದು ಅದಕ್ಕೆ. ಅಭಿವೃದ್ಧಿ, ಪಂಚವಾರ್ಷಿಕ ಯೋಜನೆಗಳು ಇತ್ಯಾದಿ ಹೆಸರುಗಳು ಮಾತ್ರ ಬೇರೆ. ಕಾನೂನುಗಳೆಲ್ಲ ಒಂದೇ, ಯಾವ ದೇಶದಲ್ಲೂ ಇಲ್ಲ ಇಂಥ ಕಾನೂನುಗಳು, ಈ ದೇಶದಲ್ಲಿ ಮೂರು ಬಳಕೆದಾರರ ಸೂಚ್ಯಂಕವಿದೆ. ಇದನ್ನೇ ಇಂಗ್ಲೀಷಿನಲ್ಲಿ ಕನ್ಸೂಮರ್ ಪ್ರೈಸ್ ಇಂಡಸ್ಟ್ರೀಸ್ ಎನ್ನುತ್ತೇವೆ. ಎಲ್ಲ ದೇಶದಲ್ಲಿ ಇದು ಒಂದೇ ಇರುವುದು ನಮ್ಮ ದೇಶದಲ್ಲಿ ಮೂರು ಇವೆ. ಒಂದು ಅಗ್ಸನ್ ನಾನ್ ಮ್ಯಾನ್ಯುಯನ್, ಇನ್ನೊಂದು ಇಂಡಸ್ಟ್ರಿಯಲ್ ವರ್ಕರ್ ಅಂತ, ಮೂರನೆಯದು ಅಗ್ರಿಕಲ್ಚರ್ ವರ್ಕರ್ ಅಂತ. ರೈತರು, ರೈತ ಕಾರ್ಮಿಕರು ಮೂರನೆಯ ದರ್ಜೆ ಪ್ರಜೆಗಳು ಈ ದೇಶದಲ್ಲಿ, ಯಾವುದೇ ಶ್ರಮವಿಲ್ಲದೆ ನಗರಗಳಲ್ಲಿ ಕೆಲಸ ಮಾಡುವವನು ಮೊದಲನೇ ದರ್ಜೆಯವನು. ಅವನಿಗೆ ಶ್ರಮವಿಲ್ಲವೋ ಅಥವಾ ದೇಹವೋ ಇಲ್ಲವೋ! ನಾನ್ ಮ್ಯಾನ್ಯುಯಲ್ ಅದು.

ಈ ಮೂರನೆಯ ಸೂಚ್ಯಂಕದ ಆಧಾರದ ಮೇಲೆ ಈ ಕೃಷಿಕಾರ್ಮಿಕರ ಮತ್ತು ರೈತರ ವೇತನ (ಕೂಲಿ) ಮತ್ತು ಬೆಲೆ ನಿಗದಿಯಾಗುತ್ತದೆ. ಇದು ನಮ್ಮ ದೇಶದವರು ಖಂಡಿತ ಮಾಡಿದ್ದಲ್ಲ. ಬ್ರಿಟಿಷರು ಮಾಡಿ ಬಿಟ್ಟು ಹೋದದ್ದನ್ನು ಹೊಸ ನಾಮಕರಣದ ಜೊತೆಗೆ ನಮ್ಮ ಮನಮೋಹನ ಸಿಂಗ್ ಅವರು, ಅಹ್ಲುವಾಲಿಯಾ ಅವರು ಕೊಡುತ್ತಾ ಇದ್ದಾರೆ. ಇದರ ಪ್ರಕಾರ ನಮ್ಮ ಕೇಂದ್ರ ಸರ್ಕಾರದ ಕಮಿಷನ್ ಆನ್ ಅಗ್ರಿಕಲ್ಚರಲ್ ಕಾಸ್ಟ್ ಅಂಡ್ ಪ್ರೈಸಸ್ ಬೆಂಬಲ ಬೆಲೆಯನ್ನು ಘೋಷಣೆ ಮಾಡುತ್ತದೆ.

ಪ್ರತಿವರ್ಷ ಈ ಸಿ.ಎ.ಸಿ.ಪಿ. ಬೆಂಬಲ ಬೆಲೆಯ ಘೋಷಣೆ ಮಾಡುತ್ತದೆ. ಆ ಬೆಂಬಲ ಬೆಲೆಯನ್ನು ಯಾವ ಆಧಾರದ ಮೇಲೆ ಘೋಷಿಸುತ್ತದೆ ? ಯಾವ ಆಧಾರದ ಮೇಲೆ ಲೆಕ್ಕ ಹಾಕುತ್ತದೆ? ನಮ್ಮ ರೈತರ ಪ್ರಕಾರ ಒಂದು ಎಕರೆಗೆ ತಗಲುವ ಖರ್ಚು ಸಿ.ಎ.ಸಿ.ಪಿ. ಪ್ರಕಾರ ಎರಡೂವರೆ ಎಕರೆಗೆ ತಗಲುತ್ತದೆ. ರೈತನ ಮೇಲೆ ಮೊದಲನೆಯ

ಮೋಸ ಇಲ್ಲಿಂದಲೇ ಶುರುವಾಗುವುದು. ಅವನು ಬೆಳೆದಿರುವ ಬೆಲೆಯ ಖರ್ಚು ಬರಲಿಲ್ಲವೆಂದಾದರೆ ಲಾಭದ ಮಾತೆಲ್ಲಿ? ಸಾಲಗಾರನಾಗುವುದು ಇಲ್ಲಿಂದಲೇ, ಈ ಸಾಲದ ಬಾಧೆಯಿಂದ ರೈತರ ಆತ್ಮಹತ್ಯೆ, ಯಾರದು ಸಾಲ? ರೈತರದ್ದಲ್ಲ ಸಾಲ. ಯಾತಕ್ಕೋಸ್ಕರ ಸಾಲ ಮಾಡಿದ್ದು? ಯಾವುದಾದರೂ ಫೈವ್ ಸ್ಟಾರ್ ಹೋಟೇಲಿಗೆ



ಹೋಗಿ ಊಟ ಮಾಡಲಿಕ್ಕಾ? ಮೈ ತುಂಬಾ ಒಡವೆ ಹಾಕಿಕೊಂಡು ಮೆರೆಯಲಿಕ್ಕಾ? ಯಾವ ಐಷಾರಾಮಿ ಜೀವನಕ್ಕಾಗಿ ಸಾಲ ಮಾಡಿದ್ದು? ಈ ದೇಶಕ್ಕೆ ಅನ್ನ ಬೆಳೆಯಲು ಸಾಲ ಮಾಡಿದ್ದು, ಸರ್ಕಾರದಿಂದ ಕೊಡುತ್ತಿದ್ದ ಎಲ್ಲ ಸಬ್ಸಿಡಿಗಳನ್ನು W.T.O.ಹೇರಿದಂತಹ ಎಲ್ಲ ಕಾನೂನುಗಳಿಗೆ ತಲೆಬಾಗಿಕೊಂಡು ತೆಗೆದುಹಾಕಿದರು. ಯಾವುದೇ ಸಹಾಯಧನ ಇಲ್ಲ. ಇವತ್ತು ವ್ಯವಸ್ಥಿತವಾಗಿ ಈ ಭೂಮಿಯ ಮೇಲೆ ರೈತ ಉಳಿಯಬಾರದು. ಈ ಭೂಮಿಯನ್ನು ಕಬಳಿಸಿಕೊಂಡು ಕಂಪನಿಗೆ ಹಸ್ತಾಂತರ ಮಾಡಬೇಕು ಅನ್ನುವ ಒಂದೇ ಒಂದು ಉದ್ದೇಶ ಈ ಸರಕಾರದ್ದು.

ನಮ್ಮ ಕೈಯಿಂದ ಬೀಜ ಕಿತ್ತುಕೊಂಡರು. ನೀರಿನ ಖಾಸಗೀಕರಣವಾಗುತ್ತಿದೆ. ಮೊನ್ನೆ ಯಾವುದೊ ಒಂದು ಟಿ.ವಿ. ಇಂಟರ್‌ವ್ಯೂ ನೋಡುತ್ತಾ ಇದ್ದೆವು. ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು ಬರಬೇಕು ಎನ್ನುವ ಆಮಂತ್ರಣ ಏನು ಕೊಟ್ಟಿದೆ ಈ ಸರ್ಕಾರ ಆ ಬಗ್ಗೆ ಆ ಕಾರ್ಯಕ್ರಮ ಇತ್ತು. ನಮ್ಮ ದೇಶದ ಭಾರತೀ ರೀಟೈಲರ್ ಎನ್ನುವ ಒಂದು ಕಂಪನಿಯಿದೆ. ಭೂಸ್ವಾಧೀನ ಮಸೂದೆಯ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಚರ್ಚೆಗೆ ಬರುತ್ತಿದೆ. ಅದಕ್ಕೆ ಪಾರ್ಲಿಮೆಂಟರಿ ಸ್ಟಾಡಿಂಗ್ ಕಮಿಟಿ ಒಂದಷ್ಟು ಸಲಹೆಗಳನ್ನು ಕೊಟ್ಟಿತ್ತು. ನೀವು ಎಲ್ಲಿ ಭೂಸ್ವಾಧೀನ ಮಾಡಿಕೊಳ್ಳುತ್ತಿರೋ ಅಲ್ಲಿ ೮೦% ಭೂಮಿಯನ್ನು ಕಳೆದುಕೊಳ್ಳುವವರ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕು ಎಂದು. ಆದರೆ ಅದರ ಬಗ್ಗೆ ನಮ್ಮ ಇದೇ ದೇಶದ ಬಂಡವಾಳ ಶಾಹಿಗಳು ಅವರು ಬಿಳಿಯರಲ್ಲ ಇಲ್ಲಿ ಹುಟ್ಟಿದವರು – 'Capitalisnis the only way forward' ಬಂಡವಾಳವಾದವೊಂದೇ ನಮ್ಮ ಭವಿಷ್ಯ' ಎಂದು ಹೇಳುತ್ತಾರೆ. ದುಡ್ಡಿರುವವರು ಮಾತ್ರ ಬದುಕಬೇಕು. ದುಡ್ಡಿಲ್ಲದವರ ಸರ್ವನಾಶವಾಗಬೇಕು.

ಇದೆಲ್ಲದರ ಮಧ್ಯೆ ಈ ಚಳವಳಿ ಇಂದಿಗೂ ಬದುಕಿದೆ ಎನ್ನುವುದೇ ಒಂದು ಹೆಮ್ಮೆ

ಸುದ್ದಿಗಳನ್ನು ಓದುವ ಕಾರಣ ನಿಮ್ಮಲ್ಲಿ ಬಹಳಷ್ಟು ಜನಕ್ಕೆ ರೈತ ಚಳವಳಿಯ ಬಗ್ಗೆ ತಿಳಿದೇ ಇರುತ್ತದೆ. ಎಲ್ಲದರ ಮಧ್ಯೆ ಇವತ್ತಿನ ಪೀಳಿಗೆಯ ಯಾವ ಯುವಕರೂ ಒಕ್ಕಲುತನದಲ್ಲಿ ಉಳಿಯಬೇಕು ಎಂದು ಇಷ್ಟಪಡುತ್ತಿಲ್ಲ. ಇಷ್ಟು ಸಂಖ್ಯೆಯ ಯುವಜನತೆಯನ್ನು ಕುರಿತು ಮಾತನಾಡುವುದೇ ಕಷ್ಟ, ಇನ್ನು ಕೃಷಿಯಿಲ್ಲವೆಂದರೆ ಭೂಮಿಯಿಲ್ಲ, ಅನ್ನವಿಲ್ಲ. ಯಾವುದೂ ಉಳಿಯುವುದಿಲ್ಲ. ನೋಟುಗಳನ್ನಂತು ತಿನ್ನಕ್ಕೆ ಸಾಧ್ಯವಿಲ್ಲ ಅಲ್ವ? ಎಷ್ಟೇ ದುಡ್ಡು ಸಂಪಾದನೆ ಮಾಡಿದರೂ ನೋಟುಗಳನ್ನು ತಿನ್ನಲು ಸಾಧ್ಯವಿಲ್ಲ. ಆರೋಗ್ಯಕರವಾದ ಅನ್ನ ಬೆಳೆಯುವ ಮತ್ತು ಸ್ವಾವಲಂಬಿ ಕೃಷಿ

ಮಾಡುವ ದಿಕ್ಕಿಗೆ ನಾವೆಲ್ಲ ಹೋಗಬೇಕು. ಗ್ರಾಹಕರಾಗಿರುವವರೂ ಕೂಡ ರೈತನ ಶ್ರಮವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅವನಿಗೆ ದಕ್ಕಬೇಕಾದಂತಹ ಸ್ಥಾನಮಾನಗಳನ್ನು, ಗೌರವಗಳನ್ನು ಕೊಡುವಂಥ ಸೂಕ್ಷತೆಯನ್ನು ಬೆಳೆಸಿಕೊಳ್ಳಬೇಕು. ನಾವು ನೇರ ಕಾರ್ಯಕ್ರಮದಲ್ಲಿ ನಂಬಿಕೆಯಿರುವವರು. ಗಾಂಧೀಜಿಯವರು ನಾಗರಿಕ ಅಸಹಕಾರದ ಬಗ್ಗೆ ಹೇಳಿದ್ದರು, ನಾವು ಬೆಳೆದು ನಮ್ಮಲ್ಲಿ ಇಟ್ಟುಕೊಂಡರೆ ನಗರದಲ್ಲಿರುವವರು ಏನೂ ಮಾಡಲು ಆಗುವುದಿಲ್ಲ. ನಾವು ಬೆಳೆದು ಮಾರಲಿಲ್ಲವೆಂದರೆ ಏನು ಮಾಡುತ್ತಾರೆ



ಅವರು ? ಮುಖ್ಯಮಂತ್ರಿಗೆ ಬೆಳಗ್ಗಿನ ಕಾಫಿ ಕುಡಿಯಲಿಕ್ಕೂ ಆಗುವುದಿಲ್ಲ. ಆ ಮಟ್ಟಕ್ಕೆ ಚಳವಳಿಯನ್ನು ಬೆಳೆಸಬೇಕು ಅಂತ ನಾವೆಲ್ಲ ಪ್ರಯತ್ನ ಮಾಡುತ್ತಿದ್ದೇವೆ. ಪುನಃ ಸ್ವಾಭಿಮಾನವನ್ನು ರೈತ ಸಮುದಾಯದ ಒಳಗೆ ತರಬೇಕು ಎಂದು ಬಹಳ ಪ್ರಯತ್ನ ಮಾಡುತ್ತಿದ್ದೇವೆ. ಈಗ ಹೊಸ ಪೀಳಿಗೆಯ ಸಂಘಟನೆ ಮಾಡುವಂಥ ದೊಡ್ಡ ಅವಶ್ಯಕತೆ ಇದೆ. ಇವತ್ತು ಅದರ ಜೊತೆಗೆ ಈ ರೀತಿ ಪ್ರಗತಿಪರ ಆಲೋಚನೆಗಳನ್ನು ಇಟ್ಟುಕೊಂಡಿರುವಂತಹ ಆಳ್ವಾಸ್ ಶಿಕ್ಷಣ ಸಂಸ್ಥೆ ಮತ್ತು ದೇಶದ ಎಲ್ಲ ಇತರ ಶಿಕ್ಷಣ ಸಂಸ್ಥೆಗಳು ಕೈಜೋಡಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

# ನೃತ್ಯಕಲೆ

- ಅನುರಾಧಾ ಉಭಯಕ

ನೃತ್ಯಕಲೆಯು ಕಲೆಗಳಲ್ಲಿ ಪರಿಪೂರ್ಣತೆಯ ಘಟ್ಟ ಮುಟ್ಟಿ, ಪ್ರಾಚೀನ ಪರಂಪರೆಯ ಭವ್ಯ ನೆಳಲಿನಲ್ಲಿ ಪ್ರತಿಕ್ಷಣ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿರುವ ದೈವಿಕ ಕಲೆ. ಆಯಾ ದೇಶದ ಸಂಸ್ಕೃತಿಯ, ಸಮಾಜದ ಪರಿಷ್ಕೃತ ರುಚಿಯ ರಸಸಿದ್ಧಿಯಾಗಿ ಮನಸಂತೃಪ್ತಿ ಸಂತೋಷ ಕೊಡುವ ಲಲಿತಕಲೆ.

ಭಾರತದ ಸಂಸ್ಕೃತಿ ಪರಂಪರೆ ವಿಶ್ವಖ್ಯಾತಿ ಪಡೆದಿದೆ. ಭಾರತೀಯ ನೃತ್ಯ ಕಲೆ ಸುಮಾರು ಎರಡು ಮೂರು ಸಾವಿರ ವರ್ಷಗಳ ಚರಿತ್ರೆಯನ್ನು ಹೊಂದಿ ರಾಜಿಸುತ್ತಿದೆ. ವೇದಗಳ ಕಾಲದಿಂದ ಇಂದಿನವರೆಗೂ ಭರತನು ಸಾರಿದ ಭರತನಾಟ್ಯ ಭಾರತದಲ್ಲಿನ ಜನತೆಯ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿದೆ. ಬ್ರಹ್ಮದೇವನು ದೇವತೆಗಳ ಆನಂದಕ್ಕಾಗಿ ಋಗ್ವದದಿಂದ ಶಬ್ದಗಳನ್ನೂ ಸಾಮವೇದದಿಂದ ಸಂಗೀತವನ್ನೂ ಯಜುರ್ವೇದದಿಂದ ಅಭಿನಯವನ್ನೂ ಅಥರ್ವಣ ವೇದದಿಂದ ರಸಗಳನ್ನೂ ಆರಿಸಿ, ನಾಟ್ಯ ವೇದವನ್ನು ಸೃಷ್ಟಿಸಿದನೆಂದು ನಾಟ್ಯ ಶಾಸ್ತ್ರದಲ್ಲಿ ಹೇಳಿದೆ. ಭರತಮುನಿ ಇವನ್ನು ಕ್ರೋಢೀಕರಿಸಿ ನಾಟ್ಯ ಶಾಸ್ತ್ರವನ್ನು ರಚಿಸಿದನು. ಆದುದರಿಂದಲೇ ಭರತ ನಾಟ್ಯಕ್ಕೆ ಆಧ್ಯಾತ್ಮಿಕ ಹಿನ್ನೆಲೆ ಇದೆ ಎನ್ನಬಹುದು.

ಆದರೆ ಭಾರತೀಯ ನೃತ್ಯಗಳ ದುರ್ದೈವದ ಅಧ್ಯಾಯ ಎನ್ನಬಹುದಾದ ಬ್ರಿಟಿಷರ ಆಳ್ವಿಕೆಯಲ್ಲಿ ಪರಂಪರಾನುಗತ ಭರತ ನಾಟ್ಯಕಲೆ ಹತ್ತು ಹಲವಾರು ರೂಪದಗಳಲ್ಲಿ ವಿಕೃತಿ ಅಥವಾ ವಿರೂಪಗೊಂಡು, ತನ್ನ ಮೂಲ ಸೌಂದರ್ಯವನ್ನು ಕಳೆದುಕೊಳ್ಳಲಾರಂಭಿಸಿತು. ಆದರೆ ವಿಂಧ್ಯ ಪರ್ವತಗಳ ದಕ್ಷಿಣದಲ್ಲಿ, ಪರಕೀಯರ ಹಾವಳಿಯು ಕಡಿಮೆ ಇದ್ದುದರಿಂದಲೂ ಇಲ್ಲಿಯ ಅರಸರುಗಳು ದಂಡೆತ್ತಿ ಬಂದವರನ್ನು ತಡೆದುದರಿಂದಲೂ ಅಷ್ಟೊಂದು ಮಾರ್ಪಾಟನ್ನು ಕಾಣದೆ ತನ್ನ ಪೂರ್ವರೂಪವನ್ನೇ ಉಳಿಸಿಕೊಂಡಿತ್ತು. ಹೊಯ್ಸಳ ರಾಜರ ಪಾಂಡ್ಯ, ಚೋಳ, ರಾಷ್ಟ್ರಕೂಟ ರಾಜವಂಶದವರೂ ನೃತ್ಯ ಕಲೆಯ ಆಶ್ರಯದಾತರಾದರು. ಅವರು ಕಲೆಗಿತ್ತ ಜಾಗೃತ ಆಸಕ್ತಿಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು. ಆದರೂ ಕಲೆಗಿದ್ದ ಕಲಂಕ ಇದ್ದೇ ಇತ್ತು. ಅಂದರೆ ಕಲೆಯ ದೇವದಾಸಿಯರ ಕೈಯಲ್ಲಿ ಅಧೋಗತಿ ಕಂಡಿತು, ಒಮ್ಮೆ ದೇವಸ್ಥಾನಗಳಲ್ಲಿ ಭಕ್ತಿಯುತವಾಗಿ ದೈವಕ್ಕೆ ಅರ್ಪಿತವಾಗಿದ್ದ ಶ್ರೇಷ್ಠವಾದ ನೃತ್ಯ ಕಲೆ ಆಮೇಲೆ ಇಂದ್ರಿಯಾಸಕ್ತ ಅರಸುಗಳ ಆಹ್ಲಾದಕ್ಕೋಸ್ಕರ ಉಪಯೋಗವಾಯಿತು. ಕ್ರಮೇಣ ಗುಲಾಮತ್ವದ ದಿನಗಳು ಮುಗಿದು ಭಾರತಕ್ಕೆ ಸ್ವಾತಂತ್ರ ಬಂದ ಮೇಲೆ ನೃತ್ಯ ಕಲೆಯು ಭಾರತದಲ್ಲಿ ಪುನಃ ಮೆರೆಯುವ ಕಾಲವು ಉದಯಿಸಿತು.

ಕ್ರಮೇಣ ನಾಟ್ಯಕಲೆ ನಮ್ಮ ಕನ್ನಡನಾಡಿನಲ್ಲಿ ಬೆಳೆದು ವಿಕಸನಗೊಳ್ಳುವುದಕ್ಕೆ ಜನಾದರಣೆ ಮತ್ತು ರಾಜಾದರಣೆ ಕೂಡ ಪ್ರಮುಖವಾಗಿ ನೆರವು ನೀಡಿದವು. ಕೈದಾಳ, ಬೇಲೂರು, ಹಳೇಬೀಡು, ಸೋಮನಾಥಪುರಗಳಲ್ಲಿ ಹೃದಯಂಗಮವಾಗಿ ಶಿಲೆಯಲ್ಲಿ ಬಣ್ಣಿಸಲಾಗಿರುವ ನೃತ್ಯ ಭಂಗಿಗಳು ಇಲ್ಲಿನ ಜನತೆಯ ರಸಿಕಶ್ರೀಯ ವೈಭವವನ್ನು ನಿರೂಪಿಸುತ್ತವೆ. ಸಕಲ ನೃತ್ಯ ವಿಧಾನಗಳಿಗೆ ಸಂಕೇತ ಪ್ರಧಾನವಾದ ಅರ್ಥವು ಮುದ್ರೆಗಳಿಂದ ಬರುತ್ತದೆ. ದೇವಸ್ಥಾನಗಳ ಪ್ರಾಕಾರಗಳನ್ನು ಅಲಂಕರಿಸುವ ಸೂಕ್ಷ್ಮಾತಿಸೂಕ್ಷ್ಮ ಕೆತ್ತನೆಯ ಕುಸುರಿ ಕೆಲಸಗಳಲ್ಲಿ ಶಾಸ್ತ್ರನಿಷ್ಠ ಪರಂಪರೆಯ ಸಾಕ್ಷ್ಯ ಕಾಣಬರುತ್ತದೆ. ನಟರಾಜನ ನೃತ್ಯ ವಿಗ್ರಹ ಭಾರತೀಯ ದರ್ಶನಶಾಸ್ತ್ರದ ಶಿಲ್ಪಿಗಿರಬೇಕಾದ ಜ್ಞಾನದ ಪರಿಚಯ ಮಾಡಿಸಿಕೊಡುತ್ತದೆ. ಪರಮ ಸತ್ಯದ ಪಂಚಕ್ರಿಯೆಗಳು ಮತ್ತು ಮಾಯಾ ಜಗತ್ತಿನ ನಿರೂಪಣೆಯಾದ ನಟರಾಜ ವಿಗ್ರಹಕ್ಕೆ ಬಲಗೈಯ ಡಮರುಗ ಸೃಷ್ಟಿಯನ್ನೂ ಎಡಗೈಯ ಅಗ್ನಿ ಲಯವನ್ನೂ ಅಭಯ ಹಸ್ತ ಭರವಸೆಯ ಸ್ಥಿತಿಯನ್ನೂ ಅತೀಂದ್ರಿಯವೂ ಸುಂದರವೂ ಆದ ಮನೋಹರ ಲಾಸ್ಯಭಂಗಿ ಮಾಯೆಯನ್ನೂ ಒತ್ತಿದ ಬಲಗಾಲು ದುಷ್ಟ ನಿಗ್ರಹ, ಶಿಷ್ಟ ಪರಿಪಾಲಕ ಸ್ಥಿತಿಯನ್ನೂ ಎತ್ತಿದ ಎಡಗಾಲು ಮೋಕ್ಷವನ್ನೂ ಹಾರಾಡುತ್ತಿರುವ ಗುಂಗುರು ಕೂದಲು ಜೀವನದ ಚಲನೆಯನ್ನೂ ಸುತ್ತು ಗೊಂಡಿರುವ ಸರ್ಪಗಳು ಅಧರ್ಮಬಂಧನ ಹಾಗೂ ನಿಸ್ಸಹಾಯತೆಯನ್ನೂ ಬಲಗಿವಿಯ ಲೋಲಕ ಮತ್ತು ಎಡಗಿವಿಯ ಬೆಂಡೋಲೆ ಜೀವನ ಚಕ್ರದಲ್ಲಿ ಮಿಲನವಾಗಿರುವ ಪುರುಷ ಪ್ರಕೃತಿ ಸಂಬಂಧವನ್ನೂ ಹರಿಯುವ ಗಂಗೆ ಬಾಳಿನ ಅನಂತ ಪ್ರವಾಹವನ್ನೂ ಅರ್ಧಚಂದ್ರ ಜೀವನದಲ್ಲಿದ್ದ ಧರ್ಮ, ಜ್ಞಾನ, ಸುಂದರತೆಯನ್ನೂ ಸೂಚಿಸುತ್ತವೆ. ಈ ವಿಗ್ರಹ ಭಾರತೀಯ, ಸಂಸ್ಕೃತಿಯ ಒಂದು ಸಂಯೋಜನೆ, ಅಭಿನಯ ಮತ್ತು ನೃತ್ಯ ಭಂಗಿಗ ರೊಂದಿಗೆ ಜ್ಞಾನ ಮತ್ತು ಆಧ್ಯಾತ್ಮಿಕತೆಯ ಮಧುರ ಮಿಲನ ಭರತನಾಟ್ಯದಲ್ಲಿ ಆಗಿವೆ.

ಅಭಿನಯದಲ್ಲಿ ನಾಲ್ಕು ವಿಧಗಳಿವೆ: ಆಂಗಿಕ, ವಾಚಿಕ, ಆಹಾರ ಮತ್ತು ಸಾತ್ವಿಕ, ಆಂಗಿಕಾಭಿನಯವೆಂದರೆ ನರ್ತಕ-ನರ್ತಕಿಯರು ಅಂಗಾಂಗಗಳ ಸಹಾಯದಿಂದ ಮಾಡುವ ಅಭಿನಯ, ಹಾಗೆಯೇ ವಾಚಿಕಾಭಿನಯವೆಂದರೆ ಮಾತುಗಳ ಸಹಾಯದಿಂದ, ಆಹಾರಾಭಿನಯವೆಂದರೆ ಉಡುಪು ವೇಷಭೂಷಣಗಳ ಸಹಾಯದಿಂದ, ಸಾತ್ವಿಕಾಭಿನಯವೆಂದರೆ ಆಂತರಿಕ ಭಾವನೆಗಳಿಂದ ದೇಹದಲ್ಲಿ ತನ್ನಷ್ಟಕ್ಕೆ ಉಂಟಾಗುವಂತಹ ಬದಲಾವಣೆಗಳಿಂದ ಆಗುವ ಆಭಿನಯವಾಗಿರುತ್ತವೆ. ಇವಲ್ಲದೆ ನಾಟ್ಯ ಕಲೆಯು ನೃತ್ಯ, ನೃತ್ಯ, ನಾಟ್ಯ ಎಂಬ ಮೂರು ಭಾಗಗಳಿಂದ ಕೂಡಿದೆ. ಸಂಗೀತದ ಹಿನ್ನೆಲೆಯಲ್ಲಿ ಸಮ್ಮಿಳಿತವಾಗಿ, ತಾಳಬದ್ಧವಾದ ಸರಳ ಸ್ವಷ್ಟ ನರ್ತನವೇ ನೃತ್ಯ, ಸ್ಪಷ್ಟವಾದ ಹಸ್ತಮುದ್ರೆಗಳಿಂದ ಒಂದು ವಿಷಯವನ್ನು ಅಭಿನಯದೊಂದಿಗೆ ನಿರೂಪಿಸುವುದೇ ನೃತ್ಯ ಮಾತುಗಳಿಂದ, ಸಂಗೀತದಿಂದ ಒಂದು ಕಥೆಯನ್ನೇ ನಿರೂಪಿಸುವುದಕ್ಕೆ 'ನಾಟ್ಯ ಎನ್ನುತ್ತಾರೆ. ಭರತ ನಾಟ್ಯದಲ್ಲಿ ಚೈತನ್ಯಭರಿತ ಚಲನೆ ಗಳಿಗೆ 'ತಾಂಡವ' ಎಂದೂ

ಲಾಸ್ಯಭರಿತ ಲಲಿತ ಚಲನೆಗಳಿಗೆ 'ಲಾಸ್ಯ' ಎಂದೂ ಅನ್ನುತ್ತಾರೆ. ಈ ಕಲೆಯಲ್ಲಿ ಚಾರಿ, ಮಂಡಲ, ಸಂಚಾರಿ ಇತ್ಯಾದಿ ಶಾಸ್ತ್ರ ವಿಭಾಗದ ಲಕ್ಷಣಗಳಿವೆ. ಅಲ್ಲದೆ ಅಭಂಗ, ಸನಭಂಗ, ಅತಿಭಂಗ ಮತ್ತು ತ್ರಿಭಂಗ ಎಂಬ ನಾಲ್ಕು ವಿಧಗಳ ಭಂಗಿಗಳಿವೆ. ಭರತನಾಟ್ಯ ಕಲೆಯು ಒಂದು ಅಮೋಘ ಶಾಸ್ತ್ರಬದ್ಧವಾದ ಲಲಿತ ಕಲೆ. ಯಾವುದೇ ರೀತಿಯ ಅಭಿನಯವಿರಲಿ, ಅದು ಒಮ್ಮೆ ನೃತ್ಯಗಾರ್ತಿಯ ಅನುಭವದೊಡನೆ ಅಭ್ಯಸ್ಥವಾಗಿದ್ದಲ್ಲಿ ರಸಿಕರಿಗೆ ಪ್ರದರ್ಶನದಿಂದ ದೊರಕುವ ಆತ್ಮಾಹ್ಲಾದ ವಿವರಣ ದೂರ. ಈ ಆನುಭವ ಪಡೆಯಲು ನೃತ್ಯ ಕಲಾವಿದರು ಕಲೆಯಲ್ಲಿ ತನ್ಮಯತೆ ಪಡೆಯಬೇಕಾಗುತ್ತದೆ. ಸಮಗ್ರ ದೃಷ್ಟಿಯಿಂದ ನೋಡಿದರೆ ಅಭಿನಯವೇ ಆವಾಹಿತ್ಯದ ಜೀವಾಳವಾಗಿದೆ. ಅಭಿನಯವೇ ನಾಟ್ಯಕ್ಕೆ ಕಳೆಯನ್ನು ಕೊಡುತ್ತದೆ. ಅಭಿನಯವೇ ನೃತ್ಯಕ್ಕೆ ಒಂದು ವಿಧವಾದ ಅಂದ, ಆನಂದ ಮತ್ತು ಸ್ಫೂರ್ತಿಯನ್ನು ಕೊಡಲು ಕಾರಣವಾಗಿದೆ. ಆದರೆ ಸಾಮಾನ್ಯವಾಗಿ ಪ್ರದರ್ಶಿತಗೊಳ್ಳುವ ಹಲವು ನಾಟ್ಯ ಪ್ರದರ್ಶನಗಳಲ್ಲಿ ಅಭಿನಯವು ಕೇವಲ ಗಿಳಿಪಾಠದಂತೆ ಇರುತ್ತದೆ. ಚಿಕ್ಕ ಮಕ್ಕಳು ಎಂದೂ ಶೃಂಗಾರ ರಸದ ಅಭಿವ್ಯಕ್ತನೆಯನ್ನು ಸಮರ್ಪಕವಾಗಿ ಅಭಿನಯಿಸಲಾರರು. ಜೀವನದ ಕಹಿ-ಸಿಹಿ ಅನುಭವಗಳನ್ನು ಧೈರ್ಯವಾಗಿ ಎದುರಿಸಿ ಬಂದ ನೃತ್ಯಗಾರರು ಮಾತ್ರ ಅದನ್ನು ಯೋಗ್ಯ ರೀತಿಯಲ್ಲಿ ಅಭಿನಯಿಸಲು ಶಕ್ಯರು, ಅಭಿನಯ ಮಾಡುವಾಗ ಶಿರೋಭೇದ ದೃಷ್ಟಿ ಭೇದಗಳ ಅರಿವು ಚೆನ್ನಾಗಿರಬೇಕು, ಅಭಿನಯದಲ್ಲಿ ಶೃಂಗಾರ ಭಾವ ಆಧಾರಿತ ಭಕ್ತಿರಸಪೂರ್ವಕ ಮತ್ತು ವರ್ಣನಾ ಸಂಬಂಧಿತ ಅಭಿನಯ ಕಲೆ ಇದೆ, ಭರತನಾಟ್ಯದಲ್ಲಿ ಕಥಾವಸ್ತುವು ನವರಸಭರಿತವಾಗಿರುತ್ತದೆ. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ, ಅದ್ಭುತ, ಶಾಂತ- ಹೀಗೆ ಒಂಭತ್ತು ರಸಗಳಿವೆ, ರಸಗಳು ಭಾವಗಳಿಂದ ಉತ್ಪನ್ನವಾಗುತ್ತದೆಯಲ್ಲದೆ ಭಾವವು ರಸದಿಂದಲ್ಲ. ರಸವು ವಿಭಾವ, ಅನುಭಾವ ಮತ್ತು ವ್ಯಭಿಚಾರಿ ಭಾವಗಳ ಸಂಯೋಗವಾಗಿದೆ. ಒಂಭತ್ತು ಸ್ಥಾಯಿ ಭಾವಗಳಿಂದ ನವರಸಗಳು ಉಗಮಗೊಂಡಿವೆ. ಈ ಮೂಲ ಸ್ಥಾಯೀ ಭಾವಗಳನ್ನು ಅವಲಂಬಿಸಿ 'ವಿಭಾವ'ಗಳು ಹೊರ ಹೊಮ್ಮಿವೆ. ಈ ರಸಗಳು ಉತ್ಪತ್ತಿಯಾದ ಮೇಲೆ ಇವುಗಳಿಗೆ ವ್ಯಕ್ತ ಪಡುವ ಭಾವಗಳು 'ಅನುಭಾವಗಳು. ಇವುಗಳನ್ನು ಬಹಿರಂಗವಾಗಿ ತೋರ್ಪಡಿಸುವ ಚರ್ಯೆಗಳು 'ವ್ಯಭಿಚಾರಿ' ಅಥವಾ 'ಸಂಚಾರಿ' ಭಾವಗಳು.

ನೃತ್ಯ ಕಲಾವಿದರು ಅನುಪಮ ಯಶಸ್ಸು ಮತ್ತು ಅಸಾಧಾರಣ ಸಿದ್ಧಿ ಪಡೆದಿರುವುದು ಶೃಂಗಾರರಸ ಅಭಿನಯದಲ್ಲಿ ಎಂದರೆ ಉತ್ಪ್ರೇಕ್ಷೆಯಾಗಲಾರದು. ಮಾನವನ ಮಾನಸಿಕ ಪ್ರಪಂಚದ ಹತ್ತು ಹಲವಾರು ವೈವಿಧ್ಯಗಳ ವೈಚಿತ್ರ್ಯಗಳನ್ನು ವ್ಯಕ್ತಪಡಿಸಲು ಈ ಮಾಧ್ಯಮ ಬಹುಮಟ್ಟಿಗೆ ನೆರವಾಗುತ್ತದೆ. ಶೃಂಗಾರ ರಸವು ದೈವಿಕ, ಭಾವ್ಯ, ಉದಾತ್ತ, ಸರಸ, ಕಾಮುಕ, ಐಹಿಕ ವಿಲಾಸಿಕ, ಅಸಭ್ಯ ಈ ರೀತಿಗಳಿಂದ ಕೂಡಿದೆ. ಯೋಗ್ಯವಾಗಿದ್ದು ನೃತ್ಯ ಕಲಾವಿದರ ಅತ್ಯಂತ ಪ್ರೀತಿಯ ವಿಷಯವಾಗಿದೆ.

ಧಾರ್ಮಿಕ ಅಂಗವಾಗಿ 'ನೃತ್ಯಂ-ಗೀತ-ಪಾದ್ಯಂ' ಎಂಬುದಾಗಿ ಅರ್ಪಿತಗೊಳ್ಳುತ್ತಿದ್ದ ನಾಟ್ಯ ಸೇವೆ ದೇವದಾಸಿಯರಿಂದ ಆಗುತ್ತಿತ್ತು. ಈ ನಾಟ್ಯ ಸೇವೆ ಹೊಯ್ಸಳರ ಕಾಲದಲ್ಲಿ

ಕರ್ನಾಟಕದ ವಿಜಯನಗರದ ರಾಜರ ಆಶ್ರಯದಲ್ಲಿ ಶೃಂಗಾರ ಪ್ರಮುಖವಾಗಿ ರಾಜಿಸತೊಡಗಿತು. ಆದರೆ ಅಷ್ಟೇ ವರ್ಚಸ್ಸಿನಿಂದ ದಕ್ಷಿಣ ಭಾರತದಲ್ಲಿ ಭೂಮಂಡಲಾಧೀಶರಾಗಿದ್ದ ತಿರುವಾಂಕೂರು ಮತ್ತು ತಂಜಾವೂರು ಪ್ರಾಂತ್ಯದ ಅರಸರು ಕೂಡ ಭರತನಾಟ್ಯ ಕಲೆಯ ಬಗ್ಗೆ ಅಪಾರ, ಅಭಿಮಾನ ತೋರಿದರು. ಭಕ್ತಿ ಭಾವದ ಮೇಲೆ ತಮಿಳರಸರು ಹೆಚ್ಚಿನ ಆಸ್ಥೆ ವಹಿಸಿದುದರಿಂದ, ಪ್ರಾಯಶಃ ವರ್ಣಗಳು, ತಿಲ್ಲಾನಗಳು, ಮತ್ತು ಶಬ್ದಂಗಳು ಕನ್ನಡ ಮೂಲವನ್ನು ಅನುಸರಿಸದೆ ಮಿಕ್ಕ ದಕ್ಷಿಣ ಭಾಷೆಯ ಕೃತಿ, ಸಂಸ್ಕೃತಿಯನ್ನು ಅನುಸರಿಸಿದವು. ಕನ್ನಡ ಭಾಷೆಯಲ್ಲಿ ಪದಗಳನ್ನು ಅಭಿನಯಿಸುತ್ತಾರಾದರೂ, ನಮ್ಮ ನಾಡಿನ, ಪ್ರಚಾರದಲ್ಲಿ ಕನ್ನಡ ಭಾಷೆಯ ವರ್ಣಗಳು ರೂಢಿಗೆ ಬಂದಿಲ್ಲ. ಕನ್ನಡ ನಾಡಿನ ನಾಟ್ಯ ಸಂಪ್ರದಾಯ ಬಹಳ ಕಾಲದಿಂದ ದೇವದಾಸಿಯರ ಮಡಿಲಲ್ಲಿ ಉಳಿದು, ಬೆಳೆದು ಬಂದಿದೆ. ಇದರ ಪರಂಪರೆ ಕೂಡ ವಿಜಯನಗರ ಸಾಮ್ರಾಜ್ಯದ ಉನ್ನತಿ ಅವನತಿಯ ಜೊತೆ ಸಂಲಗ್ನಗೊಂಡು, ವಿಜಯನಗರದ ಅಧೋಗತಿಯ ನಂತರ ನಮ್ಮಲ್ಲಿನ ಅನೇಕ ನಾಟ್ಯ ಕಲಾವಿದರು, ಪಂಡಿತರು ಮತ್ತು ನಾಟ್ಯಾಚಾರರು ತಂಜಾವೂರು ನಾಯಕರ ಆಶ್ರಯ ಪಡೆದರು. ಒಂದು ಚಾರಿತ್ರಿಕ ಆಧಾರದ ಪ್ರಕಾರ ಕ್ರಿ. ಶ. ೧೫೬೧ ರಿಂದ ಕ್ರಿ. ಶ. ೧೬೧೪ ರ ವರೆಗೆ ರಾಜ್ಯದ ನಾಳಿದ ಅಚ್ಯುತ ನಾಯಕನೆಂಬ ಅರಸನೊಬ್ಬನು ಸುಮಾರು ೫೦೦ ನೃತ್ಯ ವೃತ್ತಿ ಕಲಾವಿದರಿಗೆ ವಸತಿಯನ್ನೂ ಜೀವನಾಧಾರಕ್ಕೆಂದು ಜಮೀನನ್ನೂ ಒದಗಿಸಿದನೆಂದು ತಿಳಿದುಬರುತ್ತದೆ.

ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನೃತ್ಯ ಕಲೆಗೆ ಒಳ್ಳೆಯ ಪ್ರೋತ್ಸಾಹ ದೊರಕಿತು. ಕ್ರಿ. ಶ. ೧೮೬೦ ರಿಂದ ಕ್ರಿ.ಶ. ೧೮೮೧ ರವರೆಗೆ ಕಲೆಗೆ ಉತ್ತೇಜನ ತುಸು ಕಡಿಮೆಯಾಗಿತ್ತೆನಿಸಿದರೂ ದಿ| ಚಾಮರಾಜ ಒಡೆಯರು ಪಟ್ಟಕ್ಕೆ ಬಂದ ಮೇಲೆ ಪುನಃ ಸಂಗೀತ ನೃತ್ಯ ಕಲೆಗಳಿಗೆ ರಾಜಾಶ್ರಯ ದೊರಕಿತು. ಸ್ವತಃ ತಾವೇ ಕಲಾವಿದರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಈ ಬೆಂಬಲ ಉನ್ನತ ರೀತಿಯಲ್ಲಿತ್ತು. ಮಹಾರಾಜರುಗಳು ನೋಡಲು ಯೋಗ್ಯತೆ ಪಡೆದ ಪ್ರತಿಭಾವಂತ ನರ್ತಕಿಯರನ್ನೇ ರಾಜ ದರಬಾರುಗಳಿಗೆ ಕರೆತಂದು ಪ್ರದರ್ಶನ ಏರ್ಪಡಿಸುತ್ತಿದ್ದ ಕಾರಣ ನೃತ್ಯ ಕಲೆಯ ಅಂತಸ್ತು ಉಚ್ಚಮಟ್ಟದಲ್ಲಿಯೇ ಇತ್ತು, ಆ ದಿನದ ಅನೇಕ ಮಂದಿ ನಾಟ್ಯಕಲಾಭ್ಯಾಸಿಗಳಲ್ಲಿ ಕಲಾ ಸರಸ್ವತಿಯ ಅನುಷ್ಠಾನ, ಆವಾಹನೆ, ಆರಾಧನೆಗಳು ಬಲವಾಗಿರದೆ ಅವರ ಕಲಾವಂತಿಕೆಯಲ್ಲಿ ಸೌಜನ್ಯದ ಮಿರುಗು ಮರೆಯಾಗಿ ಆಡಂಬರ ಮೆರೆದಾಡತೊಡಗಿತು. ಆದರೆ ಕಳೆದ ಶತಮಾನದಲ್ಲಿ ಮೈಸೂರು ರಾಜ್ಯದಲ್ಲಿ ಭರತನಾಟ್ಯ ಸಂಪ್ರದಾಯ ಪೀಠ ಪಾವಿತ್ರತೆಯ ದೃಷ್ಟಿಯಿಂದಲೋ ಏನೋ, ಅಕಳಂಕವಾಗಿದ್ದಿತೆಂದು ತಿಳಿದು ಬಂದಿದೆ.

ಮೈಸೂರು, ಬೆಂಗಳೂರು, ಮುಳಬಾಗಿಲು, ಕಡೂರು, ಟಿ. ನರಸಿಪುರ ಮುಂತಾದ ಸ್ಥಳಗಳಲ್ಲಿ ಸಾಂಪ್ರದಾಯಿಕ ಭರತನಾಟ್ಯ ವಿದ್ಯೆಯಲ್ಲಿ ಸಾಕಷ್ಟು ಪ್ರಾವಿಣ್ಯ ಪಡೆದು

ಹೆಸರುವಾಸಿಯಾದ ದೇವದಾಸೀ ಪಂಗಡದವರು ದೇವಸ್ಥಾನಗಳ ಆಶ್ರಯ ಪಡೆದು ಜೀವಿಸುತ್ತಿದ್ದರು. ಈ ದೇವದಾಸೀ ಪಂಗಡದವರಿಗೆ, ಸ್ಥಳೀಯ ಶ್ರೀಮಂತರಿಂದಲೂ ಜಮೀನುದಾರರಿಂದಲೂ ಮತ್ತು ಕಲೋಪಾಸಕರಿಂದಲೂ ಪ್ರೋತ್ಸಾಹ ಸಿಗುತ್ತಿತ್ತು. ಅವರಿಗೆ ಭರತ ನಾಟ್ಯ ಕಲೆಯ ಸಾಂಪ್ರದಾಯಿಕ ಕಲಾರಾಧನೆಗೆ ಸಾಕಷ್ಟು ಪ್ರೋತ್ಸಾಹದ ಜೊತೆಗೆ ಅಭ್ಯಾಸ ಮತ್ತು ಸಂಗೀತ ಕಲೆಯ ಪಾಠವೂ ಆಗುತ್ತಿದ್ದ ಕಾರಣ, ಈ ಕಲಾವಿದೆಯ ಪ್ರಜ್ಞಾಶಾಲೀ ಪಂಗಡಕ್ಕೆ ಸೇರಿದವರೆಂದೆನಿಸಿಕೊಳ್ಳುತ್ತಿದ್ದರು. ನಿತ್ಯ ಸುಮಂಗಲಿಯರಾದ ಈ ದೇವದಾಸಿಯರು ಬಾರದೆ ಯಾವ ಮದುವೆ ಸಮಾರಂಭವೂ ಜರುಗುತ್ತಿರಲಿಲ್ಲ. ಮಂಗಳ ಸೂತ್ರ ಕಟ್ಟುವ ಶಾಸ್ತ್ರ ಈ ನಿತ್ಯ ಸುಮಂಗಲಿಯರಿಂದಲೇ ಆಗುತ್ತಿದ್ದುದರಿಂದ ಅವರ ಬರುವಿಕೆಗೆ ಸಂಭ್ರಮದ ಆಹ್ವಾನವಿತ್ತು. ಈ ದೇವದಾಸೀ ಪಂಗಡದ ಪ್ರಭಾವ ಸಮಾಜದ ಎಲ್ಲ ವರ್ಗಗಳ ಮೇಲೂ ಬಿದ್ದಿತ್ತು. ಅಂತೆಯೇ ಕಲೆಯ ರಸಾಸ್ವಾದ ವಿದ್ವಜ್ಜನರಿಂದ ರಸಿಕ ರಾಜಭೂಪಾಲರಿಂದ ಕೆಳಗಿಳಿದು ಆರ್ಥಿಕ ವ್ಯವಹಾರಸ್ಥ ಮನರಂಜನಾಪ್ರಿಯರವರೆಗೆ ತಲುಪಿತು. ನಾಟ್ಯದ ದೈವಿಕ ಭಾವನೆ ದಿನ ಕಳೆದಂತೆ ಮಾನವೀಯ ಷಡ್ವೈರಿಗಳಿಗೆ ಬಲಿಯಾಗಿ, ಒಂದು ಅನಾಮಿಕ ಕಳಂಕ ಕಲಾವಿದರ ಅದರಲ್ಲೂ ಹೆಚ್ಚಾಗಿ ಕಲಾವಿದೆಯರನ್ನಂಟಿತು. ಆದರೂ ಕಲಾವಲಂಬಿಗಳಾಗಿ ಜೀವನದ ಮರೆ ಹೊಕ್ಕವರಿಗೆ ಕಲೆಯೇ ಕಾಯಕವೆಂದೆನ್ನುವ ಗೀಳಿದ್ದ ಶಿಷ್ಯವೃಂದಕ್ಕೆ ಮೈಸೂರು, ಮುಳಬಾಗಿಲು, ಕಡೂರು ಮುಂತಾದ ಕಡೆಗಳಲ್ಲಿ ನೆಲಸಿದ್ದ ದೇವದಾಸೀ ಪಂಗಡಗಳೇ ಗುರುಕುಲಗಳಾಗಿ ಕಂಡುಬಂದವು. ಹತ್ತೊಂಭತ್ತನೆಯ ಶತಮಾನದ ಅಂತ್ಯದವರೆಗೆ ಮೈಸೂರು ಸಂಸ್ಥಾನದ ಮುಖ್ಯ ಪಟ್ಟಣಗಳಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಅನೇಕ ದೇವದಾಸಿಯರೂ ಅವರ ನೃತ್ಯ ಗುರುಗಳೂ ಕಲೆಯನ್ನು ಕಾಪಾಡಿಕೊಂಡು ಬಂದರು. ತಿರುಮಲ ಕೂಡಲ ನರಸೀಪುರ, ಚಿಂತಾಮಣಿ ಹತ್ತಿರದ ಹೂವಡಿ ಮುಂತಾದ ಸ್ಥಳಗಳಲ್ಲಿ ಸುಮಾರು ೨೦೦ ವೃತ್ತಿ ಕಲಾವಿದ ದೇವದಾಸಿಯರೂ ಮತ್ತು ಅದೇ ಸಂಕುಲದಲ್ಲಿ 'ನಟುವನಾ'ಗಳಲ್ಲದೆ ಸಂಸ್ಕೃತ ಪಂಡಿತರಾದ ಕೆಲವು ಬ್ರಾಹ್ಮಣರು ಈ ಕಲೆಯ ಕೌಶಲವನ್ನು ಶಾಸ್ತ್ರೋಕ್ತವಾಗಿ ಈ ದೇವದಾಸೀ ವೃಂದಕ್ಕೆ ಹೇಳಿಕೊಡುವ ಪದ್ಧತಿಯಿತ್ತು. ಈ ಸಾಲಿಗೆ ಸೇರಿದ ಒಬ್ಬ ಮಹನೀಯರು ಮುಳಬಾಗಿಲಿನ ಪನಕೇಸರಿ ವೆಂಕಟಸುಬ್ಬ ಭಟ್ಟರು. ಶ್ರೀಯುತರು ೧೯ನೇ ಶತಮಾನದ ಅಂತ್ಯದಲ್ಲಿ ಶ್ರೇಷ್ಠ ನೃತ್ಯ ಗುರುಗಳೆಂದೆನಿಸಿ ವಿಶೇಷ ಗೌರವ ಪಡೆದಿದ್ದರು.

ಕರ್ನಾಟಕದ ರಾಜ ಮಹಾರಾಜರುಗಳು ತಮ್ಮ ಅರಮನೆಗಳಲ್ಲಿ ಕೊಟ್ಟ ಪ್ರೋತ್ಸಾಹದಿಂದಾಗಿ ನಮ್ಮಲ್ಲಿನ ಭರತನಾಟ್ಯ ಕಲೆ ತನ್ನ ವಿಶಿಷ್ಟ ರೂಪವನ್ನು ಉಳಿಸಿಕೊಂಡು ಬಂದಿತು. ಪನಕೇಸರಿ ವೆಂಕಟಸುಬ್ಬ ಭಟ್ಟರ ಶಿಷ್ಯರೂ ಈ ವೇಳೆಗೆ ಸಾಕಷ್ಟು ಪ್ರೌಢಿಮೆಯನ್ನು ಸಾಧಿಸಿ ಭರತನಾಟ್ಯವನ್ನು ನಾಡು ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಕಲೆಗಳಲ್ಲಿ ಒಂದನ್ನಾಗಿ ಮಾಡಿದ್ದರು. ಆ ಕಾಲದಲ್ಲಿ ಈ ಕಲೆಯಲ್ಲಿ ಧುರೀಣರಾಗಿದ್ದವರೆಂದರೆ ಕವಿಸ್ವರ ಗಿರಿಯಪ್ಪ, ಮತ್ತು ಕಾಸಿಗುರು. ಆನಂತರ ಅಮೃತಪ್ಪ, ಅಪ್ಪಯ್ಯ, ದಾಸಪ್ಪ ಮೊದಲಾದ ವಿದ್ವಾಂಸರು, ಮುಮ್ಮಡಿ ಕೃಷ್ಣರಾಜ ಅರಸರ ಆಶ್ರಯದಲ್ಲಿ ಅಸಾಧಾರಣ

ಸಾಧನೆಯನ್ನು ಮಾಡಿದರು, ನಯ-ವಿನಯ, ಸೂಕ್ಷ್ಮ, ಕುಸುರಿನ ಕಲಾವಂತಿಕೆಗೆ ಹೆಸರಾಗಿ ಕಲೆಗಾಗಿಯೇ ಜೀವನವನ್ನು ಮುಡಿಪಾ ಇಟ್ಟಿದ್ದ ದಾಸಪ್ಪನವರ ಕೀರ್ತಿವಂತ ಕುವರಿ, ನಾಟ್ಯ ಸರಸ್ವತಿ ಜಟ್ಟ ತಾಯಮ್ಮನವರು, ಹೆಸರು ಹೇಳುವ ಕಲಾವಿದೆ.

ಜಟ್ಟಿ ತಾಯಮ್ಮನವರು ಸುಬ್ಬರಾಯಪ್ಪನವರಿಂದ 'ದೃಶ್ಯ' ವಿಭಾಗವನ್ನು ಅಭ್ಯಸಿಸಿ, ಆ ಮೇಲೆ ಕವಿಸ್ವರ ಗಿರಿಯಪ್ಪ ಮತ್ತು ಚಂದ್ರಶೇಖರ ಶಾಸ್ತ್ರಿಯವರಿಂದ 'ಅಭಿನಯ'ವನ್ನು ಕಲಿತರು. 'ಅಭಿನವ ಕಾಳಿದಾಸ' ಎಂದು ಪ್ರಖ್ಯಾತಿ ಪಡೆದಿದ್ದ ವಿದ್ವಾನ್ ಕರಿಬಸಪ್ಪ ಶಾಸ್ತ್ರಿಗಳೂ ಜಟ್ಟ ತಾಯಮ್ಮನವರಿಗೆ ಪಾಠ ಹೇಳಿದ್ದಾರೆ. ಈ ಕಲಾವಿದೆಗೆ ನೂರಾರು ಪದಗಳೂ ಜಾವಳಿಗಳೂ, ಶ್ಲೋಕಗಳೂ ಕರತಲಾಮಲಕ, ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿ ಅಚ್ಚರಿಗೊಳ್ಳುವಷ್ಟು ಪ್ರಾವೀಣ್ಯ, ಈ ಶತಮಾನದ ಆದಿಯಲ್ಲಿ ನೃತ್ಯ ಕಲೆಯಲ್ಲಿ ಅಸಾಮಾನ್ಯ ಕೀರ್ತಿ ಪಡೆದವರು ಶ್ರೀ ಜಟ್ಟಿ ತಾಯಮ್ಮನವರು. ಮೈಸೂರು ಸಿಂಹಾಸನವನ್ನು ಆಲಂಕರಿಸಿದ್ದ ಕಲಾ ವಿಭೂಷಣ ಶ್ರೀ ಜಯಚಾಮರಾಜ ಒಡೆಯರವರಿಂದ ಅತ್ಯಂತ ಗೌರವವನ್ನು ಪಡೆದ ಕಲಾವಿದೆಯರಾಗಿದ್ದರು. 'ನಾಟ್ಯ ಸರಸ್ವತಿ' ಎಂಬ ಅನುಪಮ ಬಿರುದನ್ನು ಪಡೆದು ಕಸಿನ ವಿದ್ವನ್ಮಣಿಗಳ ಹೊಗಳಿಕೆಗೆ, ಅಭಿಮಾನಕ್ಕೆ ಪಾತ್ರರಾಗಿ, ಎಂಬತ್ತೆರಡು ವರ್ಷಗಳ ತುಂಬು ಜೀವನ ನಡೆಸಿ, ಜೀವನದ ಉದ್ದಕ್ಕೂ ಸಂತೃಪ್ತಿಯಿಂದ ಕಲಾ ಸೇವೆ ಮಾಡಿದರು ಶ್ರೀಮತಿ ಪುಟ್ಟತಾಯಮ್ಮನವರು.

ನಾಟ್ಯ ಸರಸ್ವತಿ ಜಟ್ಟಿ ತಾಯಮ್ಮನವರ ಶಿಷ್ಯಂದಿರಾದ ಶ್ರೀಮತಿ ವೆಂಕಟಲಕ್ಷ್ಮಮ್ಮನವರು ಸುಮಾರು ಎರಡು ದಶಕಗಳ ಕಾಲ ಅನವರತ ನೃತ್ಯ ಕಲೆಯನ್ನು ಅಭ್ಯಸಿಸಿ ಕಲಾ ಸೇನೆಯನ್ನು ಇಂದಿಗೂ ಮಾಡುತ್ತಲಿದ್ದಾರೆ. ಮೈಸೂರಿನ ಸಂಗೀತ ಮತ್ತು ನೃತ್ಯ ಕಾಲೇಜಿನಲ್ಲಿ ಮುಖ್ಯ ಪ್ರಾಧ್ಯಾಪಕರಾಗಿ ಅನೇಕ ಮಂದಿ ಕಲಾವಿದರಿಗೆ ಮಾತೃಸ್ವರೂಪಿಣಿಯಾಗಿ ರಾಜಿಸಿದರು. ವೆಂಕಟಲಕ್ಷಮ್ಮನವರ ವಿದಾತೃಷೆ, ನಾಟ್ಯದ ಬಗ್ಗೆ ಅವರಿ ವಿರುವ ಗೌರವ ಭಾವನೆ, ಶ್ರದ್ಧೆ ಸಾಧನೆಯಿಂದಾಗಿ ಅವರು ನೃತ್ಯಲೋಕದ ನಕ್ಷತ್ರವಾಗಿ ಮೆರೆಯುತ್ತಲಿದ್ದಾರೆ. ಶ್ರೀಮತಿ ಅವರು ತಮ್ಮ ಕಲೆಯಲ್ಲಿ ಪರಿಪೂರ್ಣ ಸಿದ್ಧಿಯನ್ನು ಸಿದ್ದಿಯನ್ನು ಸಾಧಿಸಲೋಸುಗ ತತ್ಸಂಬಂಧೀ ಕಲೆಗಳಲ್ಲಿದೆ. ನಿಷ್ಣಾತ ವಿದ್ವಾಂಸರಲ್ಲಿಗೆ ಹೋಗಿ ಶಿಷ್ಯ ವೃತ್ತಿಯನ್ನು ಕೈಗೊಂಡಿದ್ದು, ಆದು ಅವರ ಹಿರಿಮೆಯನ್ನು ಸಾರುತ್ತದೆ. ವೆಂಕಟಲಕ್ಷ್ಮಮ್ಮನವರ ಕಲಾಸಿದ್ಧಿಗೆ ತಲೆದೂಗಿದ ಕಲಾ ಪ್ರೋತ್ಸಾಹಕ ಮೈಸೂರಿನ ಅರಸೊತ್ತಿಗೆಯವರು ಇವರನ್ನು ತಮ್ಮ 'ಆಸ್ಥಾನ ವಿದುಷಿ'ಯನ್ನಾಗಿ ನೇಮಕ ಮಾಡಿಕೊಂಡರು. ನೃತ್ಯ ಕಲೆಗೆ ಇವರು ಸಲ್ಲಿಸಿರುವ ಸೇವೆ ಅಪಾರ. ಆಧುನಿಕ ಮೈಸೂರು ಸಂಪ್ರದಾಯದ ಭರತನಾಟ್ಯ ಕಲೆಯ ಪರಂಪರೆಗೆ ಶ್ರೀಮತಿ ವೆಂಕಟಲಕ್ಷ್ಮಮ್ಮನವರು ಆದಿಶಕ್ತಿಯಾಗಿದ್ದಾರೆ. ಶ್ರೀಮತಿಯವರಿಗೆ ಕೇಂದ್ರ ಸರಕಾರದ ಬಿರುದೂ ಸಿಕ್ಕಿದೆ. ಈಗ ಅವರು ಕೈಗೊಂಡ ಕಾರವೆಲ್ಲವನ್ನೂ ಅವರ ಮೊಮ್ಮಗಳಾದ ಶ್ರೇಷ್ಠ ನರ್ತಕಿ ಶ್ರೀಮತಿ ಶಕುಂತಲಾ ನಿರ್ವಹಿಸಿಕೊಡುತ್ತಲಿದ್ದಾರೆ.

ಬೆಂಗಳೂರು ನಗರದಲ್ಲಿ ವಿದ್ವಾನ್ ಕೋಲಾರ ಪುಟ್ಟಪ್ಪನವರು ಪ್ರಖ್ಯಾತ ನಾಟ್ಯ ಗುರುಗಳಾಗಿ ನಾಗರತ್ನ ಮತ್ತು ವರಾಲು ಇವರನ್ನು ತರಬೇತು ಮಾಡಿ ಶ್ರೇಷ್ಠ ಅಭಿನಯ

ಕಲಾವಿದೆಯರನ್ನಾಗಿ ಮಾಡಿದರು. ರಾಜಾಶ್ರಯವನ್ನು ಪಡೆದ ಇನ್ನೊಬ್ಬ ಉತ್ತಮ ಕಲಾವಿದೆ ಚಂದ್ರವದನನ್ನು, ಭಾವಾಭಿನಯದಲ್ಲಿ ಆ ಕಾಲಕ್ಕೆ ಈಕೆಯನ್ನು ಸರಿಗಟ್ಟುವವರಿರಲ್ಲವೆಂದು ಪ್ರತೀತಿ. ನೃತ್ಯ ಕಲೆಯಲ್ಲಿಯಷ್ಟೇ ಅಲ್ಲ ಸಂಗೀತ ಶಾಸ್ತ್ರದಲ್ಲಿಯೂ ಈಕೆ ಪ್ರವಿಣೆ, ವಿಖ್ಯಾತ ನಾಟ್ಯ ಗುರುಗಳಾಗಿದ್ದ ಅಮೃತಪ್ಪ ಮತ್ತು ಆಪ್ಪಯಪ್ಪನವರಿಂದ ಪಾಠವನ್ನು ಕಲಿತೆ ಪುಟ್ಟದೇವಮ್ಮ ಮತ್ತು ಆಕೆಯ ಮಗಳು ಜಕ್ಕದೇವಮ್ಮ ಕೂಡ ಆ ರ ನ ನೆಯ ಪ್ರೋತ್ಸಾಹ ಪಡೆದ ನೃತ್ಯ ಕಲಾವಿದೆಯರು.

ನಾಟ್ಯ ಸರಸ್ವತಿ ಜಟ್ಟಿ ತಾಯಮ್ಮನವರ ಕಲಾ- ಗರಡಿಯಲ್ಲಿ ತರಬೇತಿ ಪಡೆದವರಲ್ಲಿ ಪ್ರಮುಖರೆಂದರೆ ಶ್ರೀಮತಿ ಎಸ್. ಸುಂದರಮ್ಮನವರು. ಶ್ರೀಮತಿಯವರು. ಹುಟ್ಟಿದ್ದು ಸಂಗೀತಾಗರವಾದ ಮೈಸೂರಿನಲ್ಲಿರುವ ಒಂದು ಸಂಗೀತ ಕಲಾವಿದರೆ ಮನೆಯಲ್ಲಿಯೇ. ಬಾಲ್ಯದಿಂದಲೂ ಸುಂದರಮ್ಮನವರಿಗೆ ನೃತ್ಯ ಕಲೆಯತ್ತ ಅಸಾಧಾರಣ ಒಲವು ಅಂತೆಯೇ ಇವರ ಕಲಾ ಶಿಕ್ಷಣ ಏಳನೆಯ ವಯಸ್ಸಿನಲ್ಲಿ ಆರಂಭವಾಗಿ ಸತತವಾಗಿಯೂ ಸಮಗ್ರವಾಗಿಯೂ ನಡೆಯಿತು. ವಿದ್ವನ್ಮಣಿಗಳಾದ ಶ್ರೀ ಲಕ್ಷ್ಮೀ ದಾಸರ ಮತ್ತು ಶ್ರೀ ಎಂ. ಎಲ್. ಶಿವರಾಮಯ್ಯನವರ ಸಂಗೀತ ತರಬೇತಿಯೊಡನೆ ಈ ಪುಟ್ಟ ಹುಟ್ಟು ಕಲಾವಿದೆಯ ನೃತ್ಯಾಭಾಸ ಜರುಗಿತು. ಶ್ರೀಮತಿ ಸುಂದರಮ್ಮನವರು ಪ್ರಪ್ರಥಮವಾಗಿ ರಂಗಭೂಮಿಯನ್ನು ಪ್ರವೇಶಿಸಿ ಸಂಗ್ರದ ಬದ್ಧವಾದ ನೃತ್ಯ ಪ್ರದರ್ಶನ ಮಾಡಿ, ನೆರೆದಿದ್ದ ವಿದ್ವಜ್ಜನ ರಸಿಕರನ ಬೆಬ್ಬೆರಗಾಗಿಸಿದ್ದು ನಂಜನಗೂಡಿನಲ್ಲಿ, ವೈಭವೋಪೇತವಾಗಿ ಜರುಗಿದ ಲಲಿತಕಲಾ ಮಹಾ ಸಮ್ಮೇಳನದಲ್ಲಿ. ಆ ಸಂದರ್ಭದಲ್ಲಿ ಈ ಚೆಲುವು ಬಲೆಗೆ ರಜತ ಪದಕವೂ - ಯೋಗ್ಯತಾನಿರ್ಣಯ ಪತ್ರಿಕೆಯೂ ದೊರೆತವು.

ಹನ್ನೊಂದು ವರ್ಷ ವಯಸ್ಸು ಆಗ ಸುಂದರಮ್ಮನವರಿಗೆ, ಆಗ ಆರಂಭವಾದ ಪ್ರಶಸ್ತಿ ಕೀರ್ತಿಮಾಲೆ ಒಂದಾದ ಮೇಲೊಂದರಂತೆ ಶ್ರೀಮತಿಯವರಿಗೆ ಲಭ್ಯವಾಗುತ್ತ ಬಂದಿದೆ. ೧೯೪೮ ರಲ್ಲಿ ಮೈಸೂರು ನಗರದಲ್ಲಿ ನಡೆದ ಅಖಿಲ ಭಾರತ ವಿದ್ಯಾ ಸಮ್ಮೇಳನದಲ್ಲಿ ಈಕೆ ಗಳಿಸಿದ ಸುವರ್ಣ ಪದಕ ಮತ್ತು ಪ್ರಶಸ್ತಿ ಪತ್ರ ಉಲ್ಲೇಖನಾರ್ಹ. ೧೯೫೧ ರಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿನ ಮಹಾನಡಾವಳಿಯಲ್ಲಿ ವಿದ್ವತ್ ಪ್ರದರ್ಶನ ಮಾಡಿ ಮನ್ನಣೆಯನ್ನೂ ಖಿಲ್ಲತ್ತುಗಳನ್ನೂ ಗಳಿಸಿದುದು ಗಮನಾರ್ಹ. ಅದರ ಮಾರನೆಯ ವರ್ಷ ಸುಂದರಮ್ಮನವರಿಗೆ ರಾಜ ಮನ್ನಣೆ ದೊರೆತು ಅವರು ಮೈಸೂರು ಆಸ್ಥಾನ ವಿದುಷಿಯಾದರು. ಶ್ರೀಮತಿ ಸುಂದರಮ್ಮನವರು 'ಮುಧುರ ಕಲಾ ಮಂದಿರ' ಎಂಬ ನೃತ್ಯ ಶಾಲೆಯನ್ನು ಸ್ಥಾಪಿಸಿ ಅಲ್ಲಿ ಪರಂಪರೆಯನ್ನು ಹೆಮ್ಮೆಯಿಂದ ಮುಂದುವರಿಸುತ್ತಿದ್ದಾರೆ. ಈಗ ಮೈಸೂರು ನಗರದ 'ಸರಸ್ವತಿ ಶಿಶು ವಿದ್ಯಾಲಯ'ದಲ್ಲಿಯ 'ಕಸ್ತೂರಿ ಬಾ ಕಲಾ ವಿದ್ಯಾಲಯ'ದಲ್ಲಿಯೂ ನೃತ್ಯ ಶಿಕ್ಷಕಿಯಾಗಿ ಕಲಾ ಸೇವೆ ನಡೆಸುತ್ತಿದ್ದಾರೆ.

ಕಲೆ ರಕ್ತಗತವಾಗಿ ಬಂದರೆ ಸಾಧನೆ ಸುಲಭವಾಗಿ ಪ್ರಾವೀಣ್ಯ, ಶೀಘ್ರವಾಗಿ ಲಭಿಸುತ್ತದೆಂಬುದು ಒಂದು ತಜ್ಞ ಅಭಿಮತ, ಈ ತತ್ವ ಕನ್ನಡದ ಹೆಮ್ಮೆಯ ನೃತ್ಯಗಾರ್ತಿ ಶ್ರೀಮತಿ ಎಂ. ಜೇಜಮ್ಮನವರಿಗೆ ಅನ್ವರ್ಥವಾಗಿ ಅನ್ವಯಿಸುತ್ತದೆ. ನೃತ್ಯ ಕಲೆಯಲ್ಲಿ



ಗಮನೀಯ ಸಾಧನೆ ಮಾಡಿದ ಶ್ರೀಮತಿ ಜೇಜಮ್ಮನವರು ಸಂಗೀತ ನೃತ್ಯಗಳಿಗೆ ತವರೆನಿಸಿದ್ದ ಕಲಾವಿಲಾಸಿ ವಂಶದಲ್ಲಿ ೧೮೯೯ ರಲ್ಲಿ ಜನಿಸಿದರು. ಕಳೆದ ತಲೆಮಾರಿನಲ್ಲಿ ಸಂಗೀತ ಲೋಕದಲ್ಲಿ ಪ್ರಚಂಡರೆನಿಸಿಕೊಂಡಿದ್ದ ವಿದ್ವಾನ್ ಶ್ರೀ ಸುಬ್ಬಣ್ಣನವರೂ ಮತ್ತು ನಾಟ್ಯ ರಂಗದಲ್ಲಿ ಅಂದಿಗೆ ಹೇರಳ ಜನ ಪ್ರಿಯತೆಯನ್ನು ಗಳಿಸಿದ್ದ ಶ್ರೀ ಅಮೃತಪ್ಪನವರೂ ಶ್ರೀಮತಿ ಜೇಜಮ್ಮನವರ ಹಿರಿಯರು. ಟಿಪ್ಪು ಸುಲ್ತಾನರ ಕಾಲದಿಂದ ಇತ್ತೀಚಿನವರೆಗೂ ಅಂದರೆ ಸುಮಾರು ೧೫೦ ವರ್ಷಗಳವರೆವಿಗೂ ಮೈಸೂರು ಅರಮನೆಯಲ್ಲಿನ ನೃತ್ಯ ಕ್ಷೇತ್ರದ ಮೀಸಲು ಸ್ಥಾನ ಶ್ರೀಮತಿ ಜೇಜಮ್ಮನವರ ವಂಶೀಕರಿಗೆ, ತಾತಂದಿರಾದ ಶ್ರೀ ಅಮೃತಪ್ಪನವರಿಂದ ಈಕೆಯ ಸಂಗೀತ ಹಾಗೂ ನೃತ್ಯ ಕಲೆಯ ಶಿಕ್ಷಣ ಆರಂಭಗೊಂಡಿತು. ಅನಂತರ ಕಲಾ ಚತುರೆ ಶ್ರೀಮತಿ ಗೌರಮ್ಮನವರಿಂದ ಹೆಚ್ಚಿನ ನೃತ್ಯ ಪಾಠವಾಯಿತು ನೃತ್ಯ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಪ್ರೌಢಿಮೆಯನ್ನು ಸಾಧಿಸಿರುವ ಶ್ರೀಮತಿ ಜೇಜಮ್ಮ ಅವರು ಹಿರಿಯರಿಂದ ತಮಗೆ ಉಡುಗೊರೆಯಾಗಿ ಅನುವಂಶಿಕವಾಗಿ ಬಂದಿರುವ ಸಂಪ್ರದಾಯ ಬದ್ಧ ನಾಟ್ಯ ಕಲೆಯನ್ನು ಶ್ರದ್ಧಾಸಕ್ತಿಗಳಿಂದ ಉಳಿಸಿ, ರೂಢಿಸಿಕೊಂಡು ಬಂದಿದ್ದಾರೆ. ಇಂದಿಗೂ ಶ್ರೀಮತಿಯವರು ಕ್ರಮಬದ್ಧವಾಗಿ, ಭಾವಪೂರ್ಣವಾಗಿ ಭರತ ನಾಟ್ಯ ಪ್ರದರ್ಶನ ಕೊಡಬಲ್ಲರು. ೧೯೨೦ ರಿಂದ ನೃತ್ಯ ಶಿಕ್ಷಕಿಯಾಗಿರುವ ಶ್ರೀಮತಿ - ಜೇಜಮ್ಮನಿಗೆ ವಯಸ್ಸಿನ ಹರಿವೆ ಇಲ್ಲ. ಅಂದಿನ ಆ ಉತ್ಸಾಹ ಇಂದು ಇಮ್ಮಡಿಯಾಗಿದೆ. ಭರತ ನಾಟ್ಯ ಪರಂಪರೆಯ ಪರಿಚಯದಲ್ಲಿ 'ಭರತ ನಾಟ್ಯ ಕಲಾವಿದೆ' ಎಂದು ಬಿರುದು ಗಳಿಸಿರುವ ಶ್ರೀಮತಿ ಚಂದ್ರಕಾಂತಮ್ಮ ವಿಶಿಷ್ಟ ದರ್ಜೆಯ ಕಲಾವಿದೆ. ಮೈಸೂರಿಗೆ ಕೇವಲ ಹದಿನೆಂಟು ಮೈಲುಗಳ ದೂರದಲ್ಲಿರುವ ತಿರುಮಕೂಡಲು ರಾಜ್ಯದ ಕಲಾ ಇತಿಹಾಸದಲ್ಲಿ ಪ್ರಮುಖ ಕ್ಷೇತ್ರ ಕಲೆಯ ನಾನಾ ಮುಖಗಳ ತಾಯ್ತನೆಯಾದ ತಿರುಮಕೂಡಲು ಕರ್ನಾಟಕಕ್ಕೆ ವಿವಿಧ ಕಲೆಗಳ ವ್ಯಾಸ ಪೀಠವಾಗಿದೆ. ಅಲ್ಲಿನ ಖ್ಯಾತ ಸಂಗೀತ ಮನೆತನ ಒಂದರಲ್ಲಿ ಜನ್ಮ ತಳೆದ ಶ್ರೀಮತಿ ಚಂದ್ರಕಾಂತಮ್ಮನವರು ತಮ್ಮ ಕಿಶೋರಾವಸ್ಥೆಯಲ್ಲಿಯೇ ಭರತ ನಾಟ್ಯ ಕಲೆಗೆ ಮನಸೋತು ಕಲಾ ತಪಸ್ಸನ್ನು ಆರಂಭಿಸಿದರು. ಅಂದಿನ ಆ ದಿನಗಳಲ್ಲಿ ಪ್ರಸಿದ್ಧ ನಾಟ್ಯಾಚಾರರೆನಿಸಿದ್ದ ಶ್ರೀ ಆರಣಿ ಶಾಮಣ್ಣನವರ ಸುಪುತ್ರ ವಿದ್ವಾನ್ ಅಪ್ಪಯ್ಯ ಅವರು ಇವರಿಗೆ ಭರತ ನಾಟ್ಯದ ಗುರುಗಳಾದರು. ಮುಂದಣ ದಿನಗಳಲ್ಲಿ ಶ್ರೀಮತಿ ಚಂದ್ರಕಾಂತಮ್ಮನವರು ಮೈಸೂರು ಅರಸರ ಆಸ್ಥಾನ ವಿದ್ವಾನ್ ಆಗಿದ್ದ 'ಕಾಶೀಗುರುಗಳ ಬಳಿ 'ಅಭಿನಯ'ವನ್ನು ಕಲಿತರು. ಕನ್ನಡನಾಡ ಕಲಾಶ್ರೀ ಬಿಡಾರಂ ಕೃಷ್ಣಪ್ಪನವರ ಶಿಷ್ಯರಾದ ಶ್ರೀ ಬಿ.ರಾಚಪ್ಪನವರ ಸಮ್ಮುಖದಲ್ಲಿ ಸಂಗೀತ ಜ್ಞಾನವನ್ನು ಸಂಪಾದಿಸಿಕೊಂಡರು. ತಾಳ ಮತ್ತು ಲಯ ವಿಜ್ಞಾನದಲ್ಲಿ ನಿಷ್ಣಾತರಾಗಿದ್ದ ವಿದ್ವಾನ್

ತಿರುವಯ್ಯಾ ಮತ್ತು ಸಬ್ರಮಣ್ಯ ಅಯ್ಯರ್ ಅವರ ಬಳಿ ಲಯ-ಶಾಸ್ತ್ರದಲ್ಲಿ, ಉನ್ನತ ಶಿಕ್ಷಣ ಪಡೆದು ವಿವಿಧ ರೀತಿಯಿಂದ ತಿಳುವಳಿಕೆಯನ್ನು ಪಡೆದರು, ನಾಲ್ವಡಿ ಕೃಷ್ಣರಾಜ ಅರಸರ 'ಆಸ್ಥಾನ ವಿದುಷಿ'ಯಾಗಿ ಮಾನ್ಯತೆ ಗಳಿಸಿದರು. ಕಲಾರಸಿಕರು ಇವರ ಪ್ರತಿಭೆಗೆ ಮನಸೋತಿದ್ದಾರೆ. ಸಂಸ್ಕೃತ ಶ್ಲೋಕ ಹಾಗೂ ಜಾವಳಿಗಳಲ್ಲಿನ ಇವರ ಧ್ವನಿ



ಮುದ್ರಿಕೆಗಳು ಜನಪ್ರಿಯವಾಗಿವೆ. ಅವರ ಅಭಿನಯ ಅವರ ಕಲಾ ಶ್ರೀಮಂತಿಕೆಗೆ ಜೀವಂತ ಸಾಕ್ಷಿಯಾಗಿದೆ.

ಹಾಗೆಯೇ ಎಪ್ಪತ್ತೈದು ವರ್ಷದ ವೈಣಿಕ ವಿದುಷಿ ನೃತ್ಯ ವಿಶಾರದೆ ಶ್ರೀಮತಿ ಎಂ.ಸುಬ್ಬಮ್ಮನವರು ಶಿಷ್ಯವೃಂದದ ನಡುವೆ ಕುಳಿತು ವೀಣೆಯ ಪಾಠ ಮಾಡುವುದನ್ನು, ನೃತ್ಯದ ಅಡವುಗಳನ್ನು ಚರ್ಚಿಸುವುದನ್ನು ಕಂಡಾಗ ಕನ್ನಡತಿಯ ಮಡಿಲಲ್ಲಿನ ಅಪರೂಪದ ಜೀವರತ್ನ ಒಂದು ಪ್ರಜ್ವಲಿಸುತ್ತಿರುವುದು ಕಾಣಬರುತ್ತದೆ. ಅದರೊಡನೆಯೇ ಕಲೆಗೆ ವಯಸ್ಸಿನ ಬಂಧನವಿಲ್ಲ ಎಂಬ ನಿತ್ಯ ಸತ್ಯದ ಅರಿವೂ ಮೂಡುತ್ತದೆ. ಅಕ್ಕಮ್ಮನೆಂದು ಪರಿಚಿತರಿಂದ ಮತ್ತು ಅವರ ಸಮಕಾಲೀನ ಕಲಾ ರಸಿಕರಿಂದ ಕರೆಸಿಕೊಳ್ಳುವ ಸುಬ್ಬಮ್ಮನವರಿಗೂ ಸಂಗೀತ ಮತ್ತು ನೃತ್ಯ ಕಲೆಗಳು ರಕ್ತಗತವಾಗಿ ಒಲಿದು ಬಂದ ವಿದ್ಯೆ, ಅವರ ಪೂರ್ವಜರು ತಲೆಮಾರುಗಳಿಂದ ಸಂಗೀತ ಮತ್ತು ನೃತ್ಯ ಕಲೆಯ ಕೃಪಾಶ್ರಯದಲ್ಲಿಯೇ ಹುಟ್ಟಿ ಬೆಳೆದು ಬಂದವರು. ಅವರ ನೃತ್ಯ ಶಿಕ್ಷಣವಾದರೋ ಜಟ್ಟಿ ತಾಯಮ್ಮನವರಿಂದಲೇ ಲಭ್ಯವಾಯಿತು.

ವಂಶಾನುಗತ ಪರಂಪರೆ, ಪರಿಣತರಿಂದ ಶಿಕ್ಷಣ ಮತ್ತು ಸತತವಾದ ಅಭ್ಯಾಸ ಇವುಗಳ ತ್ರಿವೇಣೀ ಸಂಗಮದಿಂದ ಪರಿಪೂರ್ಣ ಕಲಾವಿದೆಯಾದ ಶ್ರೀಮತಿ ಸುಬ್ಬಮ್ಮನವರು ನಲವತ್ತು ವರ್ಷಗಳ ಕಾಲ ನಾಲ್ವಡಿ ಕೃಷ್ಣರಾಜ ಪ್ರಭುಗಳ “ಆಸ್ಥಾನ ವಿದೂಷಿ”ಯಾಗಿ ಮೆರೆದರು. ೧೯೩೩ರಲ್ಲಿ ಮದರಾಸಿನ ಸಂಗೀತ ನಾಟಕ ಅಕಾಡೆಮಿ ಶ್ರೀಮತಿಯವರ ಪ್ರತಿಭೆಯನ್ನು ಮನಗಂಡು ಸ್ವರ್ಣ ಪದಕವಿತ್ತು ಗೌರವಿಸಿತು. ಕಲಾಭಿಮಾನಿಗಳೂ ಕಲಾ ಪೋಷಕರೂ ಮತ್ತು ಸ್ವತಃ ಕಲಾವಿದರೂ ಆದ ಮೈಸೂರರಸರು ಶ್ರೀಮತಿಯವರಿಗೆ ಅನೇಕ ಖಿಲ್ಲತ್ತುಗಳನ್ನೂ ಬಹುಮಾನಗಳನ್ನೂ ಇತ್ತು ಗೌರವಿಸಿದರು. ಶ್ರೀಮತಿಯವರ ಇಳಿವಯಸ್ಸು ಅವರ ಉತ್ಸಾಹವನ್ನು ಕುಗ್ಗಿಸಿಲ್ಲ; ಅವರ ನಿಯಮಿತ ಕಾರ್ಯಕ್ರಮ ಮತ್ತು ಕ್ರಮಬದ್ಧ ಜೀವನದಿಂದಾಗಿ ಅವರ ಜ್ಞಾಪಕ ಶಕ್ತಿ, ಆರೋಗ್ಯ ಕುಂದಿಲ್ಲ. ಅವರ ವ್ಯಕ್ತಿತ್ವದ ಒನಪು ಚಿರರಮ್ಯ.

ಅಭಿನಯ ಅಂಶಕ್ಕೆ ಹೆಚ್ಚು ಪ್ರಧಾನತೆಯನ್ನು ಕೊಟ್ಟು ರಂಗ ನಾಟಕಗಳಲ್ಲಿ ನೃತ್ಯವನ್ನು ಸಹಜವಾಗಿಯೇ ಸಂಯೋಜಿಸಿದ ಗರಿಮೆ ಕನ್ನಡ ನಾಡ ರಂಗ ಪರಂಪರೆಯದು, ಅಭಿನಯವನ್ನು ಸಂಭಾಷಣ ರೂಪದಲ್ಲಿನ

ಕಥಾನಕದೊಂದಿಗೆ ಕಲ್ಪಿಸಿದಾಗ ಆಗುವ ದೃಶ್ಯಾನುಭವವೇ ಸುಂದರ, ಅಭಿನಯ ಮತ್ತು ನೃತ್ಯದೊಂದಿಗೆ ರಂಗ-ಗಾಯನವನ್ನೂ ಸಿದ್ಧಿಸಿಕೊಂಡು ಎರಡು ದಶಕಗಳಿಗೂ ಮಿಕ್ಕು ಅದ್ವಿತೀಯಳಾಗಿ ಮೆರೆದ ಅಭಿನಯ ಚತುರೆ ಶ್ರೀಮತಿ ಮಳವಳ್ಳಿ ಸುಂದರಮ್ಮ, ನೃತ್ಯ ಕಲೆಯಲ್ಲಿನ ಒಂದು ಪ್ರಮುಖ ಅಂಗವಾದ ಅಭಿನಯವನ್ನು ಸಿದ್ಧಿಸಿಕೊಂಡು ರಂಗದಾಖಲೆಯನ್ನೇ ನಿರ್ಮಿಸಿದ ಈ ಅಪರೂಪದ ಕನ್ನಡಿತಿ-ಕಲಾವಿದೆ, ಸುಪ್ರಸಿದ್ಧ ಸಂಗೀತಗಾರರಾದ ಮಳವಳ್ಳಿ ಸುಬ್ಬಣ್ಣನವರ ಪುತ್ರಿ, ದಿ||ಕೆ. ವಾಸುದೇವಾಚಾರರ ಮುಖ್ಯ ಶಿಷ್ಯ. ಸಂಗೀತದಲ್ಲಿಯೂ ಅಭಿನಯದಲ್ಲಿಯೂ ಪಾಂಡಿತ್ಯವನ್ನು ಪಡೆದ ಈಕೆಗೆ ಕಲೆ ಒಂದು



ದೈವದತ್ತ ವರ. ಅದು ಜನ್ಮದಿಂದಲೇ ಬಂದದ್ದು. ಪ್ರಾರಂಭದಲ್ಲಿ ಪಿತೃಮುಖೇನ ಸಂಗೀತವನ್ನು ಅಭ್ಯಸಿಸಿದ ಈಕೆ ತನ್ನ ಹತ್ತನೆಯ ವಯಸ್ಸಿನಲ್ಲಿಯೇ ಪಲ್ಲವಿಯನ್ನು ಹಾಡಿ, ಕಲಾಭಿಮಾನಿಗಳನ್ನು ಬೆರಗುಗೊಳಿಸಿದ ಚತುರೆ, ಅದಾದ ಇನ್ನೈದು ವರ್ಷಗಳಲ್ಲಿಯೇ ಈ ಬಾಲಿಕೆ ರಾಜಾಸ್ಥಾನದಲ್ಲಿ ಹಾಡಿ ಅಪಾರ ಮೆಚ್ಚುಗೆ ಗಳಿಸಿದಳು. ಅನಂತರ ಸಂಗೀತ ವಿದ್ವಾಂಸರಾದ ಶ್ರೀ ಕೆ. ವಾಸುದೇವಾಚಾರರಿಂದ ಕೆಲವು ಅಪರೂಪದ ರಾಗಗಳನ್ನೂ ಸಂಚಾರಗಳನ್ನೂ ಕಲಿತ ಈಕೆ, ಅಸಾಧಾರಣವಾದ ಲಯಜ್ಞಾನ, ರಾಗ ವಿನ್ಯಾಸ ಕೌಶಲ್ಯ, ತಾಳದ ವೈವಿಧ್ಯ, ಸ್ವರಪ್ರಸ್ತಾರ ವೈಖರಿ, ಗಮಕ ಧೋರಣೆ ಇವುಗಳಿಂದ ಹೆಸರಾಂತ ಸಂಗೀತಜ್ಞರೂ ತಲೆದೂಗಿಸುವಂತಹ ಪ್ರತಿಭೆಯನ್ನು ಗಳಿಸಿಕೊಂಡ ವಿದುಷಿ. ಈ ಪ್ರತಿಭಾವಂತ ತರುಣಿ ತನ್ನ ಹದಿನಾರನೆಯ ವಯಸ್ಸಿನಲ್ಲಿ ಸುಭದ್ರೆಯ ಪಾತ್ರವನ್ನು ವಹಿಸಿ ರಸಿಕ ಸಮೂಹ ಒಕ್ಕೊರಲಿನಿಂದ ಹೊಗಳಿಸಿಕೊಂಡಿತು. ಅಂದಿನಿಂದ ಸುಮಾರು ನಲ್ವತ್ತು ವರ್ಷಗಳಿಗೂ ಮಿಕ್ಕಿದ ಗಣನೀಯ ಕಲಾ ಆರಾಧನೆ, ನಾಟ್ಯ ಸರಸ್ವತಿಯ ಸೇವೆ ಈ ಅಭಿನಯ ಚತುರೆಯಿಂದ ಸತತವಾಗಿ ಜರುಗುತ್ತಿವೆ.

ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಿಂದ ಮೂಡಿ ಬಂದ ಇನ್ನೊಬ್ಬ ನೃತ್ಯ ತಾರೆ ಶಾಂತಾರಾವ್, ನೃತ್ಯ ಕಲೆಯನ್ನು ಕಲಿಯಬೇಕೆಂದು ಕಲಿಯಲಿಲ್ಲವಂತೆ ಈಕೆ ; ಅದು ತಾನಾಗಿ ಬಂತು ಎಂದು ನಿಗರ್ವಿಯಾಗಿ ಹೇಳಿಕೊಳ್ಳುವ ಈ ನೃತ್ಯಗಾರ್ತಿ ಅಂತರರಾಷ್ಟ್ರೀಯ ಖ್ಯಾತಿ ಪಡೆದ ಕಲಾವಿದೆ. ರಾವ್ ನೃತ್ಯ ಕಲೆಯಲ್ಲಿ ಕಥಕಳಿ ಸಂಪ್ರದಾಯದೆಡೆಗೆ ಹೆಚ್ಚಿನ ಒಲವು ಬೀರಿ, ಆ ಶಾಸ್ತ್ರೀಯ ನೃತ್ಯವನ್ನು ಕಲಿತು ಪ್ರದರ್ಶಿಸಿದ ಪ್ರಪ್ರಥಮ ಮಹಿಳೆ ಎನ್ನಬಹುದು. ಭರತನಾಟ್ಯವನ್ನು ದಿ||ಮೀನಾಕ್ಷಿಸುಂದರಂ ಪಿಳ್ಳೆಯವರಲ್ಲಿ ಕಲಿತು, ಉದಯೋನ್ಮುಖ ಕಲಾವಿದರಿಗೆ ಸ್ಫೂರ್ತಿದಾಯಕ ಮೂರ್ತಿಯಂತೆ ಮೆರೆದು ಕಲಾಸೇವೆ ಮಾಡಿರುವ ಶ್ಲಾಘನೀಯ ಸ್ತ್ರೀ, ಭರತನಾಟ್ಯವು ಲಾಸ್ಯದ ಕಡೆಗೆ ಹೆಚ್ಚು ಗಮನವೀಯುತ್ತದೆ ; ಕಥಕಳಿಯು ತಾಂಡವಕ್ಕೆ ಪ್ರಾಶಸ್ತ್ಯವನ್ನು ಕೊಡುತ್ತದೆ. ಇವೆರಡರಲ್ಲೂ ಅಸಾಧಾರಣ ಆಸಕ್ತಿ ಪಡೆದು ಕಲಾ ಜಗತ್ತಿನಲ್ಲಿ ಅಂದಿನ ಆ ಕಾಲದಲ್ಲಿ ನೃತ್ಯ ಕಲೆಯ ಪುನರೋತ್ಥಾನದ

ಸಮಯದಲ್ಲಿ-ರಸಿಕರಿಗೆ ಭಾರತೀಯ ನೃತ್ಯ ಕಲೆಯ ಜಾಗೃತಿಯನ್ನುಂಟು ಮಾಡಿದ ಶಾಂತಾರಾವ್ ಆಸಾಮಾನ್ಯ ಕೀರ್ತಿ ಪಡೆದರು. ಕಥಕಳಿ ನೃತ್ಯವನ್ನು ಕನ್ನಡಿತಿ ಶಾಂತಾರಾವ್‌ಗೆ, ಕಲಿಸಿಕೊಟ್ಟ ಗುರುಗಳು ಕೇರಳದ ಕಲಾವಿದ ಶ್ರೀ ರಾಮನ್ನಿ ಮೇನನ್. ಆವರು ಕೇರಳದ ಕಲಾಮಂಡಳಿಯಲ್ಲಿ "ಮೋಹಿನೀ ಆಟ್ಟಂ" ಎಂಬ ನೃತ್ಯವನ್ನು ಕಲಿತರು. ಮೊಟ್ಟಮೊದಲು ರಂಗಕ್ಕೆ ಈ "ಮೋಹಿನಿ ಆಟ್ಟಂನ್ನು ತಂದವರೇ ಶಾಂತಾರಾವ್. ಈ ಸಂಪ್ರದಾಯವನ್ನು ಅಳಿಸಿ ಹೋಗುವ ಲಕ್ಷಣಗಳಿದ್ದ ಆ ಹಿಂದಿನ ದಿನಗಳಲ್ಲಿ ಅದನ್ನೆತ್ತಿ, ಕಲಿತುಕೊಂಡು ಪ್ರಸಾರ ಮಾಡಿದ ಶ್ರೇಯಸ್ಸು ನಿಸ್ಸಂದೇಹವಾಗಿ ಶಾಂತಾರಾವ್‌ಗೇ ಸಲ್ಲಬೇಕು. ಜ್ಞಾನಪಿಪಾಸುಗಳ ಹಾದಿ ಇಂತೆನ್ನುವಂತಿಲ್ಲ. ನಿದರ್ಶನವಾಗಿ ಹೇಳುವುದಾದರೆ ಶಾಂತಾರಾಮ್ ಸಿಂಹಳ ದ್ವೀಪಕ್ಕೆ ಹೋಗಿ ಅಲ್ಲಿ ಗುರುವನ್ನು ಆಶ್ರಯಿಸಿ ಕ್ಯಾಂಡಿಯ ನೃತ್ಯವನ್ನೂ ಕಲಿತರು. ಶಿಸ್ತು ಮತ್ತು ಸಂಪ್ರದಾಯಕ್ಕೆ ಶಾಂತಾರಾವ್ ಬಹಳ ಮನ್ನಣೆಯನ್ನು ಕೊಡುತ್ತಾರೆ. ಯಾವುದೇ



ನೃತ್ಯ ಸಂಪ್ರದಾಯವಾಗಲೀ ಅದಕ್ಕೆ ತಕ್ಕ ವೇಷಭೂಷಣ ಉಡುಪು ತೊಡಪುಗಳನ್ನು ಉಪಯೋಗಿಸಿ ಭಾರತೀಯ ಶಾಸ್ತ್ರೀಯ ನೃತ್ಯಕಲೆಗೆ ಒಂದು ಉನ್ನತಮಟ್ಟದ ಸ್ಥಾನವನ್ನು ಕಲ್ಪಿಸಿದ ನೃತ್ಯತಾರೆ ಶಾಂತಾರಾವ್. ದೈವದತ್ತ ಶಾರೀರ ಸಂಪತ್ತು ಮತ್ತು ನಾಟ್ಯಕ್ಕಾಗಿ ಸೃಷ್ಟಿಯಾಗಿರುವ ಮೈಕಟ್ಟು ಈ ಕಲಾವಿದೆಗಿದೆ. ಜಗತ್ತನ್ನೆಲ್ಲ ಸುತ್ತಿ ನಮ್ಮ ಭಾರತೀಯ ನೃತ್ಯ ಕಲೆಯ ಪ್ರಸಾರ ಮಾಡಿದ್ದಾರೆ ಈಕೆ. ನಮ್ಮ ಕಲೆಯನ್ನು ನೋಡಿ ಅಚ್ಚರಿ ಪಡೆದ ಅನೇಕಾನೇಕ ರಸಿಕರು ನಮ್ಮ ಭಾರತೀಯ ನೃತ್ಯ ಸಂಪ್ರದಾಯಕ್ಕೆ ತಲೆತೂಗಿದ್ದಾರೆ. ಶಾಂತಾರಾವ್ ನೃತ್ಯ ಕಲಾವಿದೆ ಮಾತ್ರ ಅಲ್ಲ-ಕರ್ನಾಟಕ ಸಂಗೀತವನ್ನೂ ಅಭ್ಯಾಸ ಮಾಡಿದ್ದಾರೆ. ಚಿತ್ರಕಲೆಯಲ್ಲೂ ಬೇಕಾದಷ್ಟು ಪರಿಶ್ರಮ ಪಡೆದಿದ್ದಾರೆ. ಶಾಂತಾರಾವ್ ತಮ್ಮ ಜೀವನವನ್ನು ನೃತ್ಯಕ್ಕಾಗಿ ಮೀಸಲಿಟ್ಟಿದ್ದಾರೆ. ಇವರನ್ನು "ಲಲಿತಕಲಾ ತಪಸ್ವಿನಿ" ಎಂದು ಧಾರಾಳವಾಗಿ ಹೇಳಬಹುದು.

ಕನ್ನಡ ನಾಡು, ನುಡಿಗೆ, ಸಂಸ್ಕೃತಿಗೆ, ಕಲಾ ಸಂವರ್ಧನೆಗೆ ಜನಪ್ರಿಯವಾಗಿರುವ 'ಕಥಕ್ ನೃತ್ಯ' ಪರಂಪರೆಗೆ ಶ್ರೀಮತಿ ಮಾಯಾರಾವ್ ನಟ ರಾಜನ್ ಅವರ ಕೊಡಿಗೆ ಅಪಾರ. ಕಥಕ್ ನೃತ್ಯ ಕ್ಷೇತ್ರದಲ್ಲಿ ಪ್ರತಿಷ್ಠಿತ ಸಾಧನೆ ಮಾಡಿ, ಈ ಶಾಸ್ತ್ರೀಯ ಕಲಾಪ್ರಕಾರ ವ್ಯವಸ್ಥಿತ ರೀತಿಯಲ್ಲಿ ಬೆಳೆಯಲು ಶ್ರಮಿಸುತ್ತಿರುವ ಕನ್ನಡದ ಹೆಮ್ಮೆಯ ಕುವರಿ ಮಾಯಾ. ಕಥಕ್ ಕಲೆಯಲ್ಲಿ ಈಕೆಯಷ್ಟು ಪರಿಶ್ರಮ ಹೊಂದಿರುವ ದಕ್ಷಿಣ ಭಾರತೀಯರು ವಿರಳ, ದೇಶ-ವಿದೇಶಗಳಲ್ಲಿ ತನ್ನ ಕಲಾ ಪ್ರತಿಭೆಗೆ ಪುರಸ್ಕಾರ ದೊರಕಿಸಿಕೊಂಡಿರುವ ಮಾಯಾ, ನಮ್ಮ ನಾಡಿನ ಕುವರಿ ಎಂಬುದು ಆನಂದಪಡುವ ವಿಷಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿನಿಯಾಗಿದ್ದಾಗಲೇ ನೃತ್ಯರೂಪಕಗಳನ್ನು ಸಂಯೋಜಿಸಿ ಪ್ರದರ್ಶಿಸುತ್ತಿದ್ದ ಮಾಯಾ ಈಗ್ಗೆ ಸುಮಾರು ಮೂವತ್ತು ವರ್ಷಗಳ ಹಿಂದೆಯೇ

"ನಾಟ್ಯ ಸರಸ್ವತಿ" ಎಂಬ ಕಲಾ ಸಂಸ್ಥೆಯನ್ನಾರಂಭಿಸಿ 'ಕಲೆ ಮತ್ತು ಜೀವನ ಮೋಹಿನೀ ಭಸ್ಮಾಸುರ' 'ಸೀತಾಪಹರಣ' ಮೊದಲಾದ ನೃತ್ಯರೂಪಕಗಳನ್ನು ನಿರ್ದೆಶಿಸಿ ಪ್ರದರ್ಶಿಸಿ ರಸಿಕರ ಮೆಚ್ಚುಗೆ ಗಳಿಸಿದರು. ಅಂತರರಾಷ್ಟ್ರೀಯ ಕಾರ್ಮಿಕ ಸಂಘಗಳ ಸಮ್ಮೇಳನ ಒಂದರಲ್ಲಿ ಪ್ರತಿನಿಧಿಗಳ ಸಮ್ಮುಖದಲ್ಲಿ ಉಪನಿಷತ್ತುಗಳ ಆಧಾರದ ಮೇಲೆ 'ಅನ್ನಂ ಬಹು ಕುರ್ವಿತ' ಎಂಬ ಹೆಚ್ಚು ಆಹಾರ ಬೆಳೆ' ಕುರಿತಾದ ನೃತ್ಯ ರೂಪಕವನ್ನು ಪ್ರದರ್ಶಿಸಿ ಇಡೀ ರಾಷ್ಟ್ರದ ಕುತೂಹಲ ಕೆರಳಿಸಿದರು. ಏಕೆಂದರೆ ಸಮಕಾಲೀನ ಸಾಮಾಜಿಕ ವಸ್ತುಗಳನ್ನು ನೃತ್ಯದ ಹಂದರದಲ್ಲಿ ಅಳವಡಿಸಿದ ಮೊದಲ ಪ್ರಯತ್ನ ಇದಾಗಿತ್ತು, ಕಥಕ್ ಸಂಪ್ರದಾಯದಲ್ಲಿ ಹೆಚ್ಚಿನ ತರಬೇತಿಗಾಗಿ ೧೯೫೪ರಲ್ಲಿ ಭಾರತ ಸರಕಾರದ ವಿದ್ಯಾರ್ಥಿವೇತನ ಪಡೆದು ರಾಷ್ಟ್ರಖ್ಯಾತಿ ಗಳಿಸಿದ್ದ ಕಲಾ ಗುರುಗಳಾದ ಶಂಭುಮಹಾರಾಜ್ ಮತ್ತು ಸುಂದರ ಪ್ರಸಾದರಲ್ಲಿ ಶಿಕ್ಷಣ ಪಡೆದರು. ಕಥಕ್ ಕಲೆಯನ್ನು ಪ್ರಗತಿಪಥದಲ್ಲಿ ನಡೆಸುತ್ತಾ, ಅದನ್ನು ತತ್ಕಾಲೀನ ಆಗಿ ಸಮಾಜದ ಅಭಿರುಚಿಗೆ ಸರಿಹೊಂದಿಸಲೆಂದು ತದೇಕಚಿತ್ತರಾಗಿ ಶ್ರಮಿಸುತ್ತಿರುವ ಮಾಯಾ, ಭಾರತದಲ್ಲಿ ನೃತ್ಯ ಸಂಯೋಜನೆ ತಂಪು ಸಂಪ್ರದಾಯ (Choreography) ಬಳಕೆಗೆ ತರಲು ಶ್ರಮಿಸುತ್ತಿರುವ ಆದ್ಯ ಪ್ರವರ್ತಕಿಯರಲ್ಲೊಬ್ಬರಾಗಿದ್ದಾರೆ. ಈಕೆ ೧೯೬೧ರಲ್ಲಿ ನೃತ್ಯರೂಪಕ ಕ್ಷೇತ್ರದಲ್ಲಿ ಮತ್ತೂ



ಹೆಚ್ಚಿನ ಪರಿಶ್ರಮ ಹಾಗೂ ಜ್ಞಾನ ವೃದ್ಧಿಗಾಗಿ ಭಾರತ ಸರಕಾರದ ವಿದ್ಯಾರ್ಥಿ ವೇತನ ಪಡೆದು ಸೋವಿಯಟ್ ರಷ್ಯಾದಲ್ಲಿ ಎರಡು ವರ್ಷ ನೃತ್ಯ-ರೂಪಕ ತಂತ್ರ ವಿಧಾನದಲ್ಲಿ ವಿಶೇಷ ಪ್ರೌಢಿಮೆ ಗಳಿಸಿದರು. ಸೋವಿಯತ್ ರಷ್ಯಾದಲ್ಲಿ ಅತ್ಯಂತ ಜನಪ್ರಿಯಳಾದ ಭಾರತೀಯ ನೃತ್ಯಗಾತಿ ಮಾಯಾ, ರಷ್ಯಾದ ಲಾಟ್‌ವಿಯಾ ಗಣರಾಜ್ಯದ ರಾಜಧಾನಿ ರೀಗಾದಲ್ಲಿ ಒಂದು ನೂರು ವರ್ಷದ ಭವ್ಯ ಪರಂಪರೆ ಹೊತ್ತ ರಂಗಮಂದಿರದ ನೃತ್ಯ-ನಿಯೋಜಕರು, ಮಾಯಾ ಅವರ ನೆರವಿನಿಂದ ಮಹಾಕವಿ ಕಾಳಿದಾಸನ 'ಶಾಕುಂತಲಾ'ವನ್ನು ಪ್ರದರ್ಶಿಸಿದರು. ೧೯೬೨ರಲ್ಲಿ ಹೆಲ್ಸಿಂಕಿಯಲ್ಲಿ ನಡೆದ ವಿಶ್ವಯುವಜನ ಸಮ್ಮೇಳನದ ಅಂಗವಾಗಿ ನಡೆದ ಕಲಾಪ್ರದರ್ಶನದಲ್ಲಿ ಶಾಸ್ತ್ರೀಯ ನೃತ್ಯ ಪ್ರದರ್ಶಿಸಿ ಪ್ರಥಮ ಬಹುಮಾನವಾಗಿ ಸುವರ್ಣ ಪದಕವನ್ನು ಗಳಿಸಿ ಭಾರತಕ್ಕೆ ಕೀರ್ತಿ ತಂದರು. ಈಗ ಶ್ರೀಮತಿ ಮಾಯಾರಾವ್ ದೆಹಲಿಯಲ್ಲಿರುವ 'ನಾಟ್ಯಾ ಸ್ಕೂಲ್ ಆಫ್ ಕಾರಿಯಗ್ರಫಿ (Natya School of Choreography) ಯಲ್ಲಿ ಮುಖ್ಯ ನಿರ್ದೆಶಕಿಯಾಗಿ ಕಲಾ ಸೇವೆ ಸಲ್ಲಿಸುತ್ತಿದ್ದಾರೆ. ನೃತ್ಯ ಕಲಾವಿದರ ಪಂಗಡಗಳೊಂದಿಗೆ ಭಾರತದಾದ್ಯಂತ ನೃತ್ಯ ಪ್ರದರ್ಶನಗಳನ್ನು ನೀಡಿದ್ದಾರೆ. ಭಾರತದ ಅಂತರರಾಜ್ಯಗಳ ಸಾಂಸ್ಕೃತಿಕ ಕಾರಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಭರತನಾಟ್ಯ ಮತ್ತು ಇನ್ನಿತರ ಲಲಿತ ಕಲೆಗಳಲ್ಲಿ ನಿಷ್ಣಾತರಾಗಿ ಅನೇಕ ಪ್ರದಶನಗಳನ್ನಿತ್ತ ಮೇಲೆ ವಿಶ್ವದೆಲ್ಲೆಡೆಯಲ್ಲೂ ಕೇಳಿಬರುವ ಪ್ರಶ್ನೆ-ಈಕೆಯ ಆಥವಾ ಈತನ ಗುರು ಯಾರು ಎಂದು. ಬೆಂಗಳೂರು ನಗರದಲ್ಲಿ ಕೋಲಾರ ಪುಟ್ಟಪ್ಪನವರು ಕ್ರಿ. ಶ. ೧೯೪೫ ರ ವರೆಗೆ ಪ್ರತಿಭಾನ್ವಿತ ಶಿಷ್ಯಂದಿರಿಗೆ ಪಾಠ ಹೇಳಿಕೊಡುತ್ತಿದ್ದರು. ಕೋಲಾರ ಪುಟ್ಟಪ್ಪನವರು ನೃತ್ಯ ಕಲೆಯೇ ಪಾರಂಪರವಾಗಿದ್ದ ಕುಟುಂಬದಲ್ಲಿ ಜನಿಸಿದವರು. ಅವರು ಕಂಚಿ ಹಾಗೂ ಪಂದ ನಲ್ಲೂರಿನಿಂದ ಬಂದ ಕಂಚಿ ಸದಾಶಿವಯ್ಯ ಎಂಬ ನಾಟ್ಯ ಕಲೆಯ ಪಂಡಿತರಿಂದ ಪಾಠವನ್ನು ಕಲಿತವರು. ಕ್ರಿ.ಶ. ೧೯೧೦ ರಿಂದ ಇಪ್ಪತ್ತು ವರ್ಷಗಳ ಕಾಲ ರಾಜಕೀಯ ಅಲ್ಲೋಲ ಕಲ್ಲೋಲ ಮತ್ತು ಸಮಾಜದ ಧಾರ್ಮಿಕ ಅಶಾಂತಿಯ ನಿಮಿತ್ತ ಕಲಾಪ್ರವರ್ಧನೆಗೆ ಗ್ರಹಣ ಹಿಡಿದಂತಾಗಿತ್ತು. ನಾಟ್ಯ ಗುರುಗಳಿಗೆ, ನೃತ್ಯ ಪೀಠಗಳಿಗೆ, ಕಲಾ ವಿದ್ಯಾರ್ಥಿವೃಂದಕ್ಕೆ ಅಪಾರ ಕಷ್ಟ ! ನಿರಗಳು ಎದುರಾದವು. ಆದರೂ ಕೆಲವು ಕಲಾ ಪ್ರೇಮಿಗಳ ಮಾರ್ಗದರ್ಶಕ ಪ್ರಯತ್ನಗಳಿಂದ ಭರತನಾಟ್ಯಕಲೆ ಕರ್ನಾಟಕದಲ್ಲಿ ಜೀವ ಉಳಿಸಿ ಕೊಂಡಿತು, ಕನ್ನಡ ನಾಡಿನ ಕೆಲ ಕಲಾತಪಸ್ವಿಗಳು ಆ ದಿನಗಳಲ್ಲಿ ಕೋಲಾರ ಪುಟ್ಟಪ್ಪನವರಿಂದ ಎಷ್ಟು ಕಲಿಯಬಹುದೋ ಅಷ್ಟನ್ನೂ ಕಲಿತ ಮೇಲೆ ಅವರ ಸಲಹೆಯ ಮೇರೆ ಪಂದನಲ್ಲೂರಿಗೆ ಪಯಣ ಬೆಳೆಯಿಸಿ ವಿದ್ವಾನ್ ಮೀನಾಕ್ಷಿ ಸುಂದರಂ ಪಿಳ್ಳೆಯವರಿಂದ ವೈವಿಧ್ಯಯುಕ್ತ, ಶಾಸ್ತ್ರೋಕ್ತ ರೀತ್ಯ ಭರತನಾಟ್ಯವನ್ನು ಕಲಿತು ಕರ್ನಾಟಕಕ್ಕೆ ಹಿಂದಿರುಗಿ ಕಲಾಪ್ರಚಾರ ಮಾಡಿದ ಕೆಲವೇ ಕಲಾವಿದರಲ್ಲಿ ಅಗ್ರಗಣ್ಯರು ಶ್ರೀ ಯು.ಎಸ್.ಕೃಷ್ಣರಾಯರು ಮತ್ತು ಅವರ ಪತ್ನಿ ಶ್ರೀಮತಿ ಚಂದ್ರಭಾಗಾದೇವಿಯವರು. ಶ್ರೀಮತಿ ಚಂದ್ರಭಾಗಾದೇವಿ ಮತ್ತು ಶ್ರೀ ಯು.ಎಸ್. ಕೃಷ್ಣರಾಯರ ಅನುರೂಪ ದಾಂಪತ್ಯ ಅಪರೂಪ. ಶ್ರೀ ಕೃಷ್ಣರಾಯರು 'ಕಳ್ಳತನ'ದಿಂದ

ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ನಗರ್ತರ ಪೇಟೆಯಲ್ಲಿ ಕೋಲಾರ ಪುಟ್ಟಪ್ಪನವರಿಂದ ನೃತ್ಯಾಭ್ಯಾಸ ಮಾಡಿದುದು ಒಂದು ಸಾಹಸವಾದರೆ, "ಮಗಳನ್ನು ಹೀಗೇಕೆ ಕುಣಿಯಲು ಬಿಟ್ಟಿದ್ದೀರಿ ? ಮದುವೆ ಮಾಡುವ ಯೋಚನೆ ಇಲ್ಲವೇ ?" ಎಂಬ ಸಮಾಜದ ಬೃಹತ್-ಪ್ರಶ್ನೆಯನ್ನು ಎದುರಿಸಿ, ಅದರಿಂದೊದಗಿದ ನೂರು ಪ್ರತ್ಯಕ್ಷ-ಪರೋಕ್ಷ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿ ಕಲೆಗಾಗಿ ಚಂದ್ರಭಾಗಾದೇವಿ ಅಹರ್ನಿಶಿ ದುಡಿದದ್ದು ಮತ್ತೊಂದು ಸಾಹಸ. "ಬದುಕಿನಲ್ಲಿ ವ್ಯಕ್ತಿಯ ಯಾವುದೇ ಆಸೆ ಆಕಾಂಕ್ಷೆಗಳು ಪಕ್ವವಾಗಿ ರೂಪುಗೊಳ್ಳಲು ಪರಿಸರದ ಅಗತ್ಯ ಬಹಳ. ಅಂತೆಯೇ ರಮಾನಂದರಾಯರು ಮತ್ತು ಪಡುಕೋಣೆ ಸೀತಾದೇವಿ (ಇಬ್ಬರೂ ಬರಹಗಾರರು- ನಟರು-ಸಮಾಜ ಸೇವಕರು) ಯವರ ಕಲಾವಂತಿಕೆ, ಸಜ್ಜನಿಕೆಯ ದಾಂಪತ್ಯದಲ್ಲಿ ಮುದ್ದಿನ ಮಗಳಾಗಿ ಬೆಳೆದ ಚಂದ್ರಭಾಗಾದೇವಿಯವರು ಎದುರಾದ ನೂರು ಕಷ್ಟಗಳನ್ನೂ ನುಂಗಿಕೊಂಡು ಕಲೆಗಾಗಿ ಬದುಕನ್ನು ಮೀಸಲಿರಿಸಿ ಅಹರ್ನಿಶಿ ದುಡಿದದ್ದು; ದುಡಿಯುತ್ತಿರುವುದೂ ಸಹ. ಶುದ್ಧ ಭಾವನೆ-ಶುದ್ಧ ಜೀವನ ಅರಿತು ಬದುಕಬಲ್ಲವರಿಗೆ ಸಿದ್ಧಿ ಅಪೂರ್ವವೇನಲ್ಲ. ಜನನಿಜನಕರಲ್ಲಿದ್ದ ಸಾಹಿತ್ಯದ ಆಸ್ಥೆ, ಕನ್ನಡದ ಹೆಸರಾಂತ ಲೇಖಕರು ಮನೆಗೆ ಬಂದು ನಡೆಸುತ್ತಿದ್ದ ಸಾಹಿತ್ಯ, ಸಮಾಜ ಕಲ್ಯಾಣಗಳ ಬಗ್ಗೆ ಮಾತುಕತೆ, ಎಳೆಯ ಹೃದಯದಲ್ಲಿ ಅಕ್ಕರೆ, ಆಸಕ್ತಿಗಳ ಅಂಕುರ, ಕಲೆಯ ಪರಮ ಸತ್ಯವನ್ನು ಲೋಕದಲ್ಲಿ ಬಿತ್ತರಿಸಲು ಶಕ್ಯವಾಯಿತು (ಉತ್ಥಾನ : ಸ್ತ್ರೀ ಖ್ಯಾತ ನೃತ್ಯ : ಕಲಾವಿದೆ ಚಂದ್ರಭಾಗಾದೇವಿ, ಬರೆದವರು : ಸುಚಿತ್ರಾ, ಜುಲೈ ೧೯೭೨) ದಕ್ಷಿಣ ಕನ್ನಡ ಜಿಲ್ಲೆಯ ಬಿಸಿಲಿನಿಂದ ನಗುವ ನೀಲ ಕಡಲು, ಶುಂಠಿಯ ಬೆರಳುಗಳಂತೆ ಯಾವೆಡೆಗೆಂದರೆ ಆನೆಡೆಗೆ ಮೈ ಚಾಚಿರುವ ಘಟ್ಟಶ್ರೇಣಿಗಳು, ಮನಮರೆಸುವ ನಿಸರ್ಗ ಸೌಂದರ್ಯ ದಕ್ಷಿಣ ಕನ್ನಡ ಪ್ರದೇಶಕ್ಕೆ, ಅದಕ್ಕೆ ಪೂರಕದಂತಿರುವ ಜನಜೀವನದ ಆಯಕಟ್ಟು - ಈ ವನಶ್ರೀಯ ನಡುವೆ ಚಂದ್ರಭಾಗಾದೇವಿಯವರ ಹುಟ್ಟು, ಬೆಳವಣಿಗೆ, ಚಿಕ್ಕಂದಿನಲ್ಲಿ ಶ್ರೀ ಶಿವರಾಮ ಕಾರಂತರ "ಶುಭದತ್ತ" ಗೀತೆ ನಾಟಕದಲ್ಲಿ ಪಾತ್ರ ದೊರೆತದ್ದೇ ಚಂದ್ರಭಾಗಾದೇವಿ ಯವರಿಗೆ ನಾಟ್ಯದಲ್ಲಿ ಆಸಕ್ತಿ ಮೂಡಿತು. ಇಂದಿಗೆ ಸುಮಾರು ನಲ್ವತ್ತು ವರ್ಷಗಳ ಹಿಂದೆ ಪುಟ್ಟ ಬಾಲೆಯಾಗಿದ್ದ "ಚಂದ್ರಮ್ಮ" ಪ್ರಯೋಗ ಪ್ರವೀಣ ಶ್ರೀ ಶಿವರಾಮ ಕಾರಂತರ ನಿರ್ದೇಶನದಲ್ಲಿ ನಡೆದ "ಮೇಘ ಮಯೂರ" ನೃತ್ಯದಲ್ಲಿ 'ಮೇಘ'ಪಾತ್ರ ವನ್ನು ವಹಿಸಿದ್ದರು. "...ತೆಳ್ಳಗೆ, ಉದ್ದಕ್ಕಿರುವ ಈ ಮಗು ಹಗುರಾಗಿ, ತೂಗಿ, ಆಡಿ, ಸುಳಿದಾಡಿ, ನಾದಗತಿಗೆ ಕೊನೆದು ನೆಲವನ್ನು ಮೀಟುತ್ತಾ ನವಿಲುಗಳ ನಡುವೆ ತೇಲಿ, ಚಿಮ್ಮಿ, ಮೋಡವನ್ನು ಉಜ್ವಲಗೊಳಿಸುವುದನ್ನೂ ನವಿಲುಗಳ ನೆತ್ತರನ್ನು ಕುದಿಸುವುದನ್ನೂ ಒಮ್ಮೆ ಕಂಡವರು ಸುಲಭವಾಗಿ ಮರೆಯಲಾರರು..." ಎಂದು ಅಂದರು ಕವಿ ಶ್ರೀ ವಿ. ಸೀತಾರಾಮಯ್ಯನವರು, (೧೯೩೪ ರಾಯಚೂರು ಅಧ್ಯಕ್ಷ ಶ್ರೀ ಪಂಜೆ ಮಂಗೇಶರಾಯರು) (ಪ್ರಬುದ್ಧ ಕರ್ನಾಟಕ-ಸಂಪುಟ ೧೬) ಮೈಸೂರು ವಿಶ್ವವಿದ್ಯಾನಿಲಯ (೧೯೩೫). ಆ ಪ್ರತಿಭಾಕರಣ ಇಂದು ಕೃಷ್ಣರಾಯರ ಕಾಯಕದಲ್ಲಿ ಸಂಭ್ರಮವನ್ನು ಕಾಣುತ್ತಿದ್ದಾಳೆ ನಾಟ್ಯಾಚಾರ್ಯೆ ಚಂದ್ರಭಾಗಾದೇವಿ. ನೃತ್ಯಾರಾಧಕರಾದ

ಕೃಷ್ಣರಾವ್-ಚಂದ್ರಭಾಗಾದೇವಿಯವರ ಕಲಾದಾಂಪತ್ಯದಲ್ಲಿ ಅರ್ಧನಾರೀಶ್ವರ ಭಾವನೆಯ ಸಂಪೂರ್ಣತೆ ಇದೆ ಎನ್ನಬಹುದು. "..ಕಂಕುಳಲ್ಲಿ ಮಗುವನ್ನಿಟ್ಟುಕೊಂಡು ಕಲಾಭ್ಯಾಸವನ್ನು ಮುಂದುವರಿಸಿ, ಕಲೆ ಕೇವಲ ದೇವದಾಸಿಗಳ ಸೊತ್ತಲ್ಲ, ಸಂಸಾರವಂದಿಗರೂ, ಗೌರವಸ್ಥ ಕುಟುಂಬಗಳೂ, ಕಲಾಪ್ರದರ್ಶನಗಳನ್ನೀಯುವುದ ರಿಂದ ಮಾನಕ್ಕೇನೂ ಚ್ಯುತಿಯಿಲ್ಲ, ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟವರು ಶ್ರೀಮತಿ ಚಂದ್ರಭಾಗಾದೇವಿಯವರು..." (ಕರ್ಮವೀರ : ೧೬-೬-೧೯೬೯-ನಾ ಕಂಡ ಕಲಾವಿದನ ಪತ್ನಿ, ಶ್ರೀಮತಿ ಚಂದ್ರ ಭಾಗಾದೇವಿ. ಬರೆದವರು : ವಿ.ಜಿ. ಸೀತಾಲಕ್ಷ್ಮಿ) ಜೀವನ, ಸಮಾಜ, ಕಲೆ ಎಲ್ಲವನ್ನೂ ಒಂದಾಗಿ ಕೂಡಿ ಶ್ರಮಿಸುತ್ತಿರುವ ಈ ಕಲಾವಿದರನ್ನು ೧೯೬೫ ರಲ್ಲಿ ಮೈಸೂರು ಸರ್ಕಾರ ಲಂಡನ್ನಿನ "ಏಷ್ಯನ್ ಮೂಸಿಕ್ ಸರ್ಕಲ್ನ ಆಶ್ರಯದಲ್ಲಿ ಸಂಸ್ಕೃತಿ ಪ್ರಚಾರಕ್ಕೆಂದು ಆಯ್ಕೆ ಮಾಡಿತು. ಮೂವತ್ತು ವರ್ಷಗಳಿಗೂ ಮಿಕ್ಕು ನಾಟ್ಯ ಪ್ರದರ್ಶನ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ವಿನೂತನ ಪ್ರಯೋಗಗಳನ್ನು ಅವಿರತವಾಗಿ ಮಾಡಿದ್ದ ಇವರ ಆಯ್ಕೆ ಎಲ್ಲ ವಿಧದಲ್ಲಿಯ ಸೂಕ್ತ ಎಂದು ತೋರಿಸಿಕೊಟ್ಟಿತು. ಈ ಪ್ರವಾಸದ ಅವಧಿ ವರ್ಷದಿಂದ ವರ್ಷಕ್ಕೆ ಜನಪ್ರಿಯತೆಯ ಮಾಪನಕ್ಕೆ ಮಾರುವೋಗಿ ಮುಂದುವರಿಯುತ್ತಾ ಹೋಯಿತು. ಇಂಗ್ಲೆಂಡ್, ಐರ್ಲೆಂಡ್, ಪ.ಜರ್ಮನಿ, ಬೆಲ್ಜಿಯಂ, ಸ್ವಿಟ್ಸರ್ಲೆಂಡ್, ಫ್ರಾನ್ಸ್ ಮೊದಲಾದ ಎಲ್ಲಾ ನಾಗರಿಕತೆಯ ಶಿಖರ ಮುಟ್ಟಿದ್ದ ದೇಶಗಳೆಲ್ಲಕ್ಕೂ ಭರತನಾಟ್ಯದ ಹಿರಿಮೆಯನ್ನೂ ವೈಭವವನ್ನೂ ಪ್ರದರ್ಶನಗಳ ಮೂಲಕ, ಭಾಷಣಗಳ ಮೂಲಕ ಟೆಲಿವಿಶನ್ ಕಾರ್ಯಕ್ರಮಗಳ ಮಾಧ್ಯಮದಿಂದ ಪಾಶ್ಚಾತ್ಯ ರಸಿಕ ಜನಮನವನ್ನು ಸೂರೆಗೊಂಡರು. 'ದೇವಿ'ಯ ಸಾಧನೆ ಒಂದು ಯುಗದ ಸಾಧನೆಯಾಗಿ ಪರಿಣಮಿಸಿತು. 'ದೇವಿ'ಯವರು ಪ್ರದರ್ಶಿಸಿದ "ಮೋಹಿನೀರೂಪ" ನೃತ್ಯ ಜಗತಖ್ಯಾತವಾಯಿತು. ಪಾಶ್ಚಾತ್ಯ ದೇಶಗಳ ಅಂತರರಾಷ್ಟ್ರೀಯ ಅತ್ಯುತ್ತಮ ನೃತ್ಯ ವಿಮರ್ಶಕರು 'ದೇವಿ'ಯನ್ನು ಪಾಶ್ಚಾತ್ಯ ದೇಶಗಳ ಶ್ರೇಷ್ಠ ನೃತ್ಯ ಕಲಾವಿದೆಯರಾದ ಉಲನೋವಾ, ಕರ್ಸಾವಿನಾ ಮತ್ತು ಮಾರ್ಗೋ ಪೊಂಟೇನ್‌ರವರೊಡನೆ ಹೋಲಿಸಿದರು. (೨-೨-೧೯೭೬, ಲಂಡನ್ ಎ.ವಿ. ಕೋಟನ್, "ದಿ ಡೈಲಿ ಟೆಲಿಗ್ರಾಫ್) ಲಂಡನ್‌ನಲ್ಲಿ ಎರಡು ವರ್ಷ ಅವಿಶ್ರಾಂತವಾಗಿ ಕೆಲಸ ಮಾಡಿ ತಮ್ಮ ಪಾಶ್ಚಾತ್ಯ ಶಿಷ್ಯವೃಂದದ ನೆರವಿನಿಂದ "ಬುದ್ಧೋದಯ", "ರಾಣಿ ಶಾಂತಲಾ", "ಗೀತ-ಗೋವಿಂದ" ಮತ್ತು "ಕಾಮದಹನ" ಎಂಬ ನಾಲ್ಕು ನೃತ್ಯ ನಾಟಕಗಳನ್ನು ರಚಿಸಿ ಅಲ್ಲಿನ ರಸಿಕರನ್ನು ಮುಗ್ಧಗೊಳಿಸಿದರು. ಅನಂತರ ಅಮೆರಿಕೆಯಲ್ಲಿ ನಾಲ್ಕು ತಿಂಗಳ ಪ್ರವಾಸ ಕೈಗೊಂಡು ಕಲಾಸೇವೆ ಮಾಡಿದರು. ಅಲ್ಲಿಂದ ಪೂರ್ವದೇಶಗಳ ಸಂದರ್ಶನವನ್ನೂ ಭೂಪ್ರದಕ್ಷಿಣೆಯನ್ನೂ ಮಾಡಿ ಬೆಂಗಳೂರಿಗೆ ಹಿಂತಿರುಗಿದರು. ಭಾರತೀಯ ಸಂಸ್ಕೃತಿಯತ್ತ, ನಾಟ್ಯಕಲೆಯ ಹಿರಿಮೆಯತ್ತ ವಿಶ್ವ ಬೆರಗುಗಣ್ಣುಗಳಿಂದ ನೋಡುವಂತೆ ಮಾಡಿದರು." "....ನೋವು ನಲಿವುಗಳ ಲೋಕ ಸ್ವಭಾವದ ಅನುಕರಣದ ಅಭಿನಯವೇ ನೃತ್ಯ, ಶೃಂಗಾರ, ವೀರ, ಕರುಣ ರಸಗಳೆಲ್ಲವನ್ನೂ ಸೃಷ್ಟಿಸಿ, ಪೋಷಿಸಬೇಕಾದರೆ ಅದರ ಮೂಲಕ ಶ್ರೋತೃಗಳ ಮನಸ್ಸನ್ನೂ ಹಿಡಿದು ಪರಿಶುದ್ಧವಾಗಿಸಬೇಕಾದರೆ ನರ್ತಿಸುವ ನಮಗೆ ಸ್ವಾನುಭವ ಬೇಕು." ಎನ್ನುವ

ಚಂದ್ರಭಾಗಾದೇವಿಯವರ ನೃತ್ಯಾಸಕ್ತಿ, ಪ್ರಯೋಗಶೀಲತೆ, ಭರವಸೆಯು ಶ್ಲಾಘನೀಯ ಮಾತ್ರವಲ್ಲ ಅನುಕರಣೀಯವೂ ಹೌದು..." (ಉತ್ಥಾನ, 'ಸ್ತ್ರೀ' ಬರೆದವರು ಸುಚಿತ್ರಾ). ಈ ನಾಟ್ಯ ದಂಪತಿಗಳು "ಬರವಣಿಗೆಯಲ್ಲೂ ಮುಂದು. ನಾಟ್ಯದಂತೆಯೇ ಬರವಣಿಗೆಯಲ್ಲೂ ಮುಂದು. ನಾಟ್ಯದಂತೆಯೇ ಬರವಣಿಗೆಯಲ್ಲೂ ಪರಿಶ್ರಮಿಸುತ್ತಿರುವುದು ಈ ದಂಪತಿಗಳ ವೈಶಿಷ್ಟ್ಯ ಯು. ಎಸ್. ಕೃಷ್ಣರಾಯರು ನಾಟ್ಯಕ್ಕೆ ಸಂಬಂಧಿಸಿದ 'ಅಭಿನಯ ಕಲೆ' 'ಆಧುನಿಕ ಭಾರತದಲ್ಲಿ ನೃತ್ಯಕಲೆ', 'ಲಾಸ್ಯ ರಂಜನ' ಮುಂತಾದ ಲೇಖನಗಳನ್ನು ಪ್ರಕಟಿಸಿದ್ದಾರೆ. ಚಂದ್ರಭಾಗಾದೇವಿ ತಮ್ಮ ಪತಿ ಬರೆದ ಇಂಗ್ಲೀಷ್ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿರುವುದಲ್ಲದೆ ತಮ್ಮ ವಿದೇಶ ಪ್ರವಾಸದ ಅನುಭವಗಳ ಆಧಾರದ ಮೇಲೆ 'ಗೆಜ್ಜೆಯ ಹೆಜ್ಜೆ ನುಡಿ'ಯನ್ನು ಬರೆದು ಪ್ರಕಟಿಸಿದ್ದಾರೆ. 'ಗೆಜ್ಜೆಯ ಹೆಜ್ಜೆ ನುಡಿ' ಕನ್ನಡ ಪ್ರವಾಸ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದ ಪುಸ್ತಕ. (ನೃತ್ಯಾರಾಧಕ ದಂಪತಿಗಳು, ಕರ್ಮವೀರ, ಬರೆದವರು ಎಚ್.ಎಸ್. ಪಾರ್ವತಿ, ೨೯-೪-೧೯೭೩) ಈ ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರಕಿದೆ. ಶ್ರೀ ಮತ್ತು ಶ್ರೀಮತಿ ಕೃಷ್ಣರಾಯರ ನೃತ್ಯ ಶಾಲೆಯಲ್ಲಿ ಭಾರತೀಯರಲ್ಲದೆ ವಿದೇಶದಿಂದ ಬಂದು ಭರತನಾಟ್ಯವನ್ನು ಕಲಿತುಹೋಗುವವರ ಸಂಖ್ಯೆ ಅಚ್ಚರಿಗೊಳಿಸುತ್ತಿದೆ. ಬೆಂಗಳೂರು ಕೇಂದ್ರದ ಭಾರತೀಯ ವಿದ್ಯಾಭವನದ ನೃತ್ಯಪೀಠದ ಆಡಳಿತವನ್ನು ಈಗ ಚಂದ್ರಭಾಗಾದೇವಿಯವರು ಪತಿಯೊಡನೆ ನಿರ್ವಹಿಸುತ್ತಿದ್ದಾರೆ.

ಖ್ಯಾತ ನೃತ್ಯ ಶಿಕ್ಷಕರಾದ ಶ್ರೀ ಯು.ಎಸ್.ಕೃಷ್ಣರಾಯರು ತಯಾರು ಮಾಡಿದ ಯೋಗ್ಯ ಮತ್ತು ಪ್ರಸಿದ್ಧ ಶಿಷ್ಯ ವೃಂದದಲ್ಲಿ ಕುಮಾರಿ ಸುಧಾರಾಣಿ ತನ್ನ ೧೨ನೇ ವಯಸ್ಸಿನಲ್ಲಿ ಭರತನಾಟ್ಯದ ಮೇಲ್ಮಟ್ಟದ ಹಂತವನ್ನು ತಲುಪಿ ಬೆಂಗಳೂರಿನ ಕಲಾಪ್ರೇಮಿಗಳ ಮುಂದೆ 'ರಂಗಪ್ರವೇಶ'ವನ್ನು ಅಪೂರ್ವ ಕಲಾ ಪ್ರಾವೀಣ್ಯದಿಂದ, ಕನ್ನಡ ನಾಡೆಲ್ಲ ಹತ್ತೂರ್ವಕವಾಗಿ ಹೊಗಳುವಂತೆ ನರ್ತಿಸಿದಳು, ಅಂಗಾಭಿನಯ, ಮುಖಾಭಿನಯ, ಪಾದಾಘಾತಗಳಲ್ಲಿ ತೃಪ್ತಿಕರವಾದ ಹತೋಟಿಯನ್ನಿರಿಸಿಕೊಂಡು ಅಲ್ಪ ಕಾಲದಲ್ಲೇ ಅದ್ಭುತ ಪ್ರಗತಿ ತೋರಿದ ಈ ಕಲಾವಿದೆಗೆ ಮೈಸೂರು ರಾಜ್ಯ ಸರ್ಕಾರದ ವಿದ್ಯಾರ್ಥಿ ವೇತನ ದೊರಕಿ ನೃತ್ಯಾಭ್ಯಾಸ ನಿರಾಯಾಸವಾಗಿ ಮುಂದುವರೆಯಿತು. ಪ್ರಸಿದ್ಧ ಕಲಾ ವಿಮರ್ಶಕರ ಗಮನವನ್ನು ವಿಶೇಷವಾಗಿ ಸೆಳೆಯುತ್ತಿರುವ ಮೈಸೂರಿನ ಕೆಲವೇ ಭರತನಾಟ್ಯ ಕಲಾವಿದೆಯರಲ್ಲಿ ಸುಧಾರಾಣಿ ಒಬ್ಬಳಾದಳು. ಈ ಬಾಲಿಕೆ ಭರತ ನಾಟ್ಯದ ಶಕ್ತಿಪೂರ್ಣವಾದ ಅಡವುಗಳಲ್ಲಿ ಅಡಗಿರುವ ಕೋಮಲತೆಯನ್ನು ಅರಿಯಬಲ್ಲವಳಾಗಿದ್ದಳು. ಅವಳ ಅಭಿನಯ ಎಲ್ಲರನ್ನೂ ಬೆರಗುಗೊಳಿಸುವಂತಿತ್ತು. ವಯಸ್ಸಿಗೆ ಮೀರಿನ ಆಕೆಯ ಪ್ರತಿಭೆ ಇದ್ದ ಕಾರಣ ಸಾಹಿತ್ಯದಲ್ಲಿನ ಭಾವಗಳನ್ನು ಅರಿತು, ಅದರಂತೆ ಅಭಿನಯ ನೀಡಿ, ಆ ನಿಸರ್ಗ ಸಹಜತೆಯ ಪ್ರದರ್ಶನದಿಂದ ಸಭಿಕರಲ್ಲಿ ತಲ್ಲೀನತೆಯನ್ನು ತರುವ ಶಕ್ತಿಯನ್ನು ದೈವದತ್ತವಾಗಿ ಪಡೆದುಕೊಂಡಿದ್ದಳು. ಕ್ರಮೇಣ ಆಕೆಗೆ ಕೇಂದ್ರ ಸರಕಾರದ ವಿದ್ಯಾರ್ಥಿ ವೇತನ ಸಿಕ್ಕಿ ಪಂದನೂರು ಸಂಪ್ರದಾಯವನ್ನು ಗುರು ಕಿಟ್ಟಪ್ಪ ಪಿಳ್ಳೆ ಮುತ್ತಯ್ಯ ಪಿಳ್ಳೆಯವರಿಂದ ಪಡೆದು ಅದ್ವಿತೀಯ

ಕೀರ್ತಿ ಪಡೆದಳು, ಸಾಕ್ಷಾತ್ ರತಿಯಂತೆ ಬೆಳೆಯುತ್ತಿದ್ದ ಈ ತರುಣಿಯ ಮುಖ, ಮೈಕಟ್ಟು, ಬೊಗಸೆ ಕಣ್ಣುಗಳು ನೃತ್ಯಕಲೆಗೆ ಇನ್ನೂ ಹೆಚ್ಚಿನ ಮೆರಗನ್ನು ಕೊಡುತ್ತಿದ್ದವು. ಕುಮಾರಿ ಸುಧಾರಾಣಿ ಒಂದು ವರ್ಷಕಾಲ ಅಮೆರಿಕೆಯಲ್ಲಿ ವಾಸ ಮಾಡಿ ಅಲ್ಲಿನ ಆಧುನಿಕ ನೃತ್ಯ ಸಂಪ್ರದಾಯವನ್ನು ಕಲಿತುಕೊಂಡಿದ್ದಾಳೆ. ಸಕಾಲದಲ್ಲಿ ಮದುವೆಯಾಗಿ ಕುಮಾರಿಯು ಶ್ರೀಮತಿ ಸುಧಾ ರಘುಪತಿ ಆಗಿ ಮದ್ರಾಸಿಗೆ ತೆರಳಿದರೂ ನೃತ್ಯಾಭ್ಯಾಸಕ್ಕೆ ಅಡ್ಡಿ ಆಗಲಿಲ್ಲ. ನೃತ್ಯಕಲೆಯೇ ಆಕೆಯ ಜೀವನದ ಆತ್ಮ ವಿಶ್ವಾಸ ಮತ್ತು ಉಸಿರಾದ ಕಾರಣ ಈಗ ತನ್ನದೇ ಆದ ಒಂದು ನೃತ್ಯ ಶಾಲೆಯನ್ನು ಮದ್ರಾಸಿನಲ್ಲಿ ತೆರೆದು ನೃತ್ಯಾಭ್ಯಾಸವನ್ನೂ ನೃತ್ಯ ಪ್ರದರ್ಶನಗಳನ್ನೂ ಕೊಟ್ಟು ಕಲಾಸೇವೆ ಮಾಡುತ್ತಿರುವುದನ್ನು ಕಂಡರೆ ಕನ್ನಡ ನಾಡಿನ ಈ ಮಹಿಳೆಯ ಸಾಮರ್ಥ್ಯವನ್ನು ವಿದ್ವಜ್ಜನರೆಲ್ಲ ತಲೆದೂಗುವಂತಿದೆ.

ಖ್ಯಾತ ನೃತ್ಯ ಶಿಕ್ಷಕರಾದ ಶ್ರೀ ಯು. ಎಸ್. ಕೃಷ್ಣರಾಯರು ತಯಾರು ಮಾಡಿದ ಮತ್ತೊಬ್ಬಳು ಯೋಗ್ಯ ಮತ್ತು ಹೆಸರುವಾಸಿ ನೃತ್ಯ ಕಲಾವಿದೆ ಶ್ರೀಮತಿ ರಾಧಾ ಶ್ರೀಧರ್, ಕುಮಾರಿ ರಾಧಾ ಕೃಷ್ಣರಾಯರ ನೃತ್ಯ ಪೀಠದಲ್ಲಿ ಕೆಲವು ವರ್ಷಗಳ ತರಬೇತಿ ಪಡೆದು ಕಲೆಗೆ ಬೇಕಾದ ಪರಿಶ್ರಮ, ತ್ಯಾಗ, ಏಕಾಗ್ರತೆ, ತನ್ಮಯತೆ, ಸ್ಫೂರ್ತಿ ಮತ್ತು ಲವಲವಿಕೆ ಪಡೆದಳು, ಗುರುಗಳ ಕೃತ್ಯವೃಂದದೊಡನೆ ಅನೇಕಾನೇಕ ನೃತ್ಯ ಪ್ರದರ್ಶನಗಳನ್ನು ಕೊಟ್ಟು ವಿಶಿಷ್ಟ ಅನುಭವವನ್ನೂ ಪಡೆದಳು. ಆನಂತರ ಮದುವೆಯಾದರೂ ಪತಿಯ ಬೆಂಬಲದಿಂದ ನೃತ್ಯಕಲೆಯ ಸೇವೆ ಮುಂದುವರಿಯಿತು, ಮದುವೆ, ಮಕ್ಕಳು, ಸಂಸಾರ ಈಕೆಯ ನೃತ್ಯಾಸಕ್ತಿಯನ್ನು ಕುಗ್ಗಿಸಲಿಲ್ಲ. ಕಲೆಗಾಗಿ ನೀಡಬೇಕಾದ ಆತ್ಮಾರ್ಪಣೆ ಮತ್ತು ಸೂಕ್ಷ್ಮಜ್ಞಾನ ಆಕೆಗೆ ರಕ್ತಗತವಾಗಿದ್ದ ಕಾರಣ ಶ್ರೀಮತಿ ರಾಧಾ ಶ್ರೀಧರ್ ೧೯೬೮ರಲ್ಲಿ ಶ್ರೀ ವೆಂಕಟೇಶ ನಾಟ್ಯಮಂದಿರ ಎಂಬ ನೃತ್ಯಶಾಲೆಯನ್ನು ಆರಂಭಿಸಿ ತನ್ನ ಮನಸ್ಸಿನಲ್ಲಿ ಅಂತರ್ಗತವಾಗಿ ಹುದುಗಿದ್ದ ನೃತ್ಯ ಕಲೆಯ ಕನಸುಗಳೆಲ್ಲವನ್ನೂ ನನಸಾಗುವಂತೆ ಶ್ರಮಪಟ್ಟರು. ಯಶಸ್ಸು ತಾನಾಗಿಯೇ ದೊರಕಿತು. ಇತ್ತೀಚೆಗೆ ಅವರ ನಾಟ್ಯಮಂದಿರದ ಶಿಷ್ಯವೃಂದವು ರಾಮಾಯಣದ ನೃತ್ಯ ರೂಪಕವನ್ನು ಪ್ರದರ್ಶಿಸಿ ಒಳ್ಳೆಯ ವಿಮರ್ಶೆಗಳನ್ನು ಪಡೆದುದು ಕನ್ನಡ ನಾಡಿನ ಈ ಮಹಿಳೆಗೆ ಆತ್ಮತೃಪ್ತಿ ಕೊಡುವಂತಹ ವಿಷಯ.

ಬೆಂಗಳೂರಿನಲ್ಲಿ ಕ್ರಿ.ಶ.೧೯೪೯ರಲ್ಲಿ ಸ್ಥಾಪಿತವಾದ ಇನ್ನೊಂದು ಪ್ರಖ್ಯಾತ ನೃತ್ಯಪೀಠವು ಶ್ರೀ ಹೆಚ್.ಆರ್.ಕೇಶವಮೂರ್ತಿಯವರ "ಕೇಶವ ನೃತ್ಯಶಾಲಾ". ಇವರ ಮಕ್ಕಳಾದ ಕುಮಾರಿಯರಾದ ವಸಂತಲಕ್ಷ್ಮಿ ಮತ್ತು ಸುಮಿತ್ರಾದೇವಿ ಕರ್ನಾಟಕ ಸರಕಾರ ಏರ್ಪಡಿಸುವ ನೃತ್ಯ ಪರೀಕ್ಷೆಗಳಲ್ಲಿ ವಿದ್ವತ್ ಅಂತಸ್ತಿನಲ್ಲಿ ತೇರ್ಗಡೆ ಹೊಂದಿದ್ದಾರೆ. ಕುಮಾರಿ ವಸಂತಲಕ್ಷ್ಮಿ ೧ಕೇಂದ್ರ ಸರಕಾರದ ವಿದ್ಯಾರ್ಥಿ ವೇತನವನ್ನು ಪಡೆದು ಮದರಾಸಿನ ರುಕ್ಮಿಣೀ ಅರುಂಡೇಲ್ ಆಶ್ರಯದಲ್ಲಿದ್ದ ಅಡ್ಯಾರ್ ನೃತ್ಯಪೀಠದಲ್ಲಿ ಭರತನಾಟ್ಯ ಕಲೆಯಲ್ಲಿ ತರಬೇತಿ ಹೊಂದಿ ಬೆಂಗಳೂರಿಗೆ ಹಿಂತಿರುಗಿದ್ದಾರೆ. ಕೇಶವ ನೃತ್ಯಶಾಲೆ ನೃತ್ಯ ನಾಟಕಗಳನ್ನು ರಚಿಸಲು ಅಗ್ರಗಣ್ಯ ಶಾಲೆಯೆಂದು ಕನ್ನಡಿಗರು ಒಪ್ಪಿದ್ದಾರೆ ಅವರ "ಕೃಷ್ಣ-ತುಲಾಭಾರ" ನೃತ್ಯನಾಟಕ

ಒಂದು ಯಶಸ್ವೀ ಪ್ರಯೋಗ ಕುಮಾರಿ ವಸಂತಲಕ್ಷ್ಮಿ ಅಡ್ಯಾರ್ ಕಲಾವೃಂದದೊಡನೆ ಪಾಶ್ಚಾತ್ಯ ದೇಶಗಳನ್ನು ಸುತ್ತಿ ಕಲಾಸೇವೆ ಮಾಡಿದ್ದಾರೆ. ಆಕೆಯ ನೃತ್ಯ ಶಕ್ತಿಯುತವಾಗಿಯೂ, ಸಂಪ್ರದಾಯಬದ್ಧವಾಗಿಯೂ ಪ್ರೇಕ್ಷಣೀಯವಾಗಿಯೂ ಇದ್ದು ಕಲಾಭಿಮಾನಿಗಳಿಗೆಲ್ಲ ಆನಂದ ಕೊಡುವ ವಿದ್ಯೆಯಾಗಿದೆ. ಕರ್ನಾಟಕ ಸರಕಾರವು ಈ ಇಬ್ಬರು ಸಹೋದರಿಯರನ್ನು ಜಪಾನ್ ದೇಶಕ್ಕೆ ನೃತ್ಯ ರಾಯಭಾರಿಗಳನ್ನಾಗಿ ಕಳುಹಿಸಿದ್ದರು. ಕೇಶವ ನೃತ್ಯಶಾಲೆಯಲ್ಲಿ ಇವರಿಬ್ಬರೂ ನಿರಂತರ ಕಲಾಸೇವೆ ಮಾಡಿ ಶ್ರಮಿಸುತ್ತಿರುವರು.

ಕುಮಾರಿ ವಸಂತಲಕ್ಷ್ಮಿ ಕೇಶವ ನೃತ್ಯಶಾಲೆ ರಚಿಸಿದ “ಮೇಘ ಸಂದೇಶ” “ದಶಾವತಾರ” “ಪಾರ್ವತಿ ಕುರವಂಜಿ” “ಶ್ರೀ ಚನ್ನಕೇಶವ” “ಪುರಂದರ ಕೃಷ್ಣ” “ಪಂಚವಟಿ” ಮುಂತಾದ ನೃತ್ಯನಾಟಕಗಳ ರಚನೆಗಳಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಿ ಅವು ಯಶಸ್ವೀ ನಾಟಕಗಳಾಗುವಂತೆ ಪ್ರಯತ್ನ ಪಟ್ಟಿದ್ದಾರೆ. ಮಕ್ಕಳಿಗಾಗಿ “ತಿರುಕನ ಕನಸು” “ಧೀರ ಬಾಲಕರು” ಎಂಬ ಕೃತ್ಯನಾಟಕಗಳನ್ನೂ ರಚಿಸಿದ್ದಾರೆ. ಈಗ ಕುಮಾರಿ ವಸಂತಲಕ್ಷ್ಮಿ ಬೆಂಗಳೂರಿನ “ಬಾಲಭವನದಲ್ಲಿ ನೃತ್ಯ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಸರಕಾರದ ವಿದ್ಯಾರ್ಥಿ ವೇತನವನ್ನು ಪಡೆದ ಕುಮಾರಿ ಸುಮಿತ್ರಾ ತನ್ನ ತಂದೆಯಿಂದಲೇ ಪಾಠವನ್ನು ಮುಂದುವರಿಸಿ 'ಕೇಶವ ನೃತ್ಯಶಾಲೆ'ಯ ನೂರಾರು ಶಿಷ್ಯ ವೃಂದಕ್ಕೆ ಭರತ ನಾಟ್ಯ ಕಲೆಯನ್ನು ಹೇಳಿಕೊಡುತ್ತಿದ್ದಾರೆ. ಶ್ರೀ ಕೇಶವಮೂರ್ತಿಯವರು ದಿ.ನಟುವನಾ ಗುಂಡಪ್ಪನವರ ಶಿಷ್ಯಂದಿರು.

ದಿ. ಮೀನಾಕ್ಷಿಸುಂದರಂ ಪಿಳ್ಳೆಯವರ ಪುತ್ರರಾದ ಮುತ್ತಯ್ಯ ಪಿಳ್ಳೆ ಮತ್ತು ಮೊಮ್ಮಕ್ಕಳಾದ ವಿದ್ವಾನ್ ಕಿಟ್ಟಪ್ಪ ಪಿಳ್ಳೆ ಪಂದನಲ್ಲೂರು ಇವರು ಭರತನಾಟ್ಯ ಸಂಪ್ರದಾಯವನ್ನು ಕನ್ನಡಿಗರಿಗೆ ಹೇಳಿಕೊಡುವ ಸಲುವಾಗಿ ಬೆಂಗಳೂರಿಗೆ ಬಂದು ಕ್ರಿ.ಶ. ೧೯೬೫ನೇ ಇಸವಿಯಿಂದ ವಾಸವಾಗಿದ್ದಾರೆ. ಕ್ರಿ.ಶ.೧೯೭೨ರಲ್ಲಿ ಬೆಂಗಳೂರಿನಲ್ಲಿ ದಿ. ಮೀನಾಕ್ಷಿಸುಂದರಂ ಪಿಳ್ಳೆಯವರ ಹೆಸರಿನಲ್ಲಿ ಶ್ರೀಮತಿ ಲೀಲಾರಾಮನಾಥನ್‌ರವರ ನೇತೃತ್ವದಲ್ಲಿ ಒಂದು ಭರತನಾಟ್ಯ ಶಾಲೆ ಸ್ಥಾಪಿತವಾಯಿತು. ಶ್ರೀಮತಿ ಲೀಲಾ ರಾಮನಾಥನ್‌ರವರು ಚಿಕ್ಕಂದಿನಿಂದ ನೃತ್ಯ ಕಲೆಯಲ್ಲಿ ಆಸಕ್ತಿ ಪಡೆದವರು. ಹಲವಾರು ನೃತ್ಯಗುರುಗಳನ್ನರಸಿ ನೃತ್ಯ ಕಲೆಯನ್ನು ಕಲಿತುಕೊಂಡರು. ಶ್ರೀ ರಾಮಗೋಪಾಲ ರೊಂದಿಗೆ ನರ್ತಿಸಿ ಅವರ ಮೇಳದೊಡನೆ ಕಲಾಪ್ರಚಾರದಲ್ಲಿ ಭಾಗವಹಿಸಿದರು. ಅನಂತರ ಮೀನಾಕ್ಷಿ ಸುಂದರಂ ಪಿಳ್ಳೆಯವರಲ್ಲೂ ಹೋಗಿ ಭರತನಾಟ್ಯ ಕಲೆಯನ್ನು ಕಲಿತು ತಮ್ಮ ಜೀವನದ ಆಕಾಂಕ್ಷೆಯನ್ನು ತೀರಿಸಿಕೊಂಡರು. ನೃತ್ಯಕಲೆಯ ವಿಷಯವಾಗಿ ಉಪನ್ಯಾಸಗಳನ್ನು ಕೊಟ್ಟು, ಲೇಖನಗಳನ್ನು ಬರೆದು ಕಲಾಸೇವೆ ಮಾಡುತ್ತಲಿದ್ದಾರೆ. ಇತ್ತೀಚೆಗೆ ಅವರ ನಿರ್ದೇಶನದಲ್ಲಿ “ಬುದ್ಧ ಚರಿತ” ಎಂಬ ನೃತ್ಯ-ನಾಟಕ ಪ್ರದರ್ಶಿಸಲಾಯಿತು.

ಅಂತೂ ದೇವದಾಸಿಯರ ಕಲೆ ಅನೇಕಾನೇಕ ಮಾರ್ಪಾಟು ಪಡೆದು ಜನಸಾಮಾನ್ಯರ ಕೈ ಸೇರಿತು. ದೇವರಿಗೆ ಅರ್ಪಿತವಾದ ಕಲೆ-ಜನರ ವಿನೋದಕ್ಕೊಂದು

ಪ್ರೋತ್ಸಾಹ ಪಡೆದು ಅಭಿವೃದ್ಧಿಯಾದ ನೃತ್ಯಕಲೆ ದೇವಾಲಯಗಳನ್ನು ಬಿಟ್ಟು ರಂಗಸ್ಥಳಗಳಲ್ಲಿ ಪುನರುತ್ಥಾನ ಪಡೆದಾಗ ಕಲೆಗೆ ಪುನಃ ದೈವಿಕ ಭಾವ ಬಂದು ಕಲಾಸೇವೆಯೆಂದು ಪ್ರದರ್ಶಿತವಾಯಿತು. ಕಲೆಯಲ್ಲಿ ಸುಶಿಕ್ಷಿತರಿಗೆ ಆಸಕ್ತಿ ಉಂಟಾಯಿತು. ಕಲೆಯ ವಿಷಯದಲ್ಲಿ ಶೋಧನೆ-ಪರಿಶೋಧನೆ ನಡೆಸಿದರು. ಅದರ ಮೂಲ, ಬೆಳೆವಣಿಗೆ, ವೈಶಿಷ್ಟತೆ ಸಂಪ್ರದಾಯ, ಶಾಸ್ತ್ರವನ್ನು ಚೆನ್ನಾಗಿ, ಪಠಿಸಿ, ಅರಿತು, ಕಾಪಾಡಿಕೊಂಡು ಬಂದರು. ಕೆಲವು ಸಂಪ್ರದಾಯಬದ್ಧ ಕಸಬುದಾರ ಕಲಾವಿದೆಯರು ಕಲೆಯ ಶೃಂಗಾರಭಾವಕ್ಕೆ ಪ್ರಾಶಸ್ತ್ಯ ಕೊಡುತ್ತಿರುವಾಗಲೇ ಇನ್ನಿತರ ಸುಶಿಕ್ಷಿತ, ಸುಸಂಸ್ಕೃತ ಕಲಾವಿದೆಯರು ಕಲೆಯ ದೈವಿಕ ಗುಣಗಳನ್ನು ಮೆಚ್ಚಿ ಅದರ ಅಧ್ಯಾತ್ಮಿಕ ಪ್ರದರ್ಶನವನ್ನು ಪ್ರಕಟಿಸಿದರು. ಭರತನಾಟ್ಯ ಕಲೆಯು ವಿವಿಧ ರೂಪಗಳಿಂದ ಬೆಳೆಯಿತು. ಮಣ್ಣು ಮುಚ್ಚಿ ಮಸುಕಾಗಿರುವ ಬಂಗಾರದಂತಿದ್ದ ಭರತನಾಟ್ಯ ಕಲೆಯು ಅಕ್ಕಸಾಲಿಗ ಕೊಡುವ ಮೆರುಗಿನಿಂದ ಬಂಗಾರವು ಫಳ ಫಳನೆ ಮಿರುಗುವಂತೆ ನೂತನ ಕಲಾವಿದರ ಕೈಯಲ್ಲಿ ಒಂದು ಶ್ರೇಷ್ಠ ಸ್ಥಾನ ಪಡೆದು ಲೋಕಪ್ರಸಿದ್ಧಿ ಗಳಿಸಿತು.

ದೇಶದ ದೊಡ್ಡ ದೊಡ್ಡ ನಗರಗಳಲ್ಲೆಲ್ಲಾ ಶಾಸ್ತ್ರೀಯ ನೃತ್ಯ ಕಲೆಯನ್ನು ಹೇಳಿಕೊಡುವ ಪಾಠಶಾಲೆಗಳು ತೆರೆಯಲ್ಪಟ್ಟವು. ಜನರು ಧೈರ್ಯವಾಗಿ ಕಲೆಯನ್ನು ಕಲಿತುಕೊಳ್ಳುವಂತಾಯಿತು. ಶಾಲೆ-ಕಾಲೇಜಿನ, ಇತರ ವಿದ್ಯಾಭ್ಯಾಸದಂತೆಯೇ ನೃತ್ಯ ಕಲೆಯ ಒಂದು ವಿದ್ಯೆಯೆಂದು ಹೆಣ್ಣು ಮಕ್ಕಳು ಕಲಿಯಲು ಆರಂಭಿಸಿದರು. ರಾಜರಿಂದ ಮಾತ್ರ ಪ್ರೋತ್ಸಾಹ ಪಡೆಯುತ್ತಿದ್ದ ಕಲೆಯು ಧನಿಕರಿಂದ ಸಹಾಯವನ್ನು ಪಡೆಯಲು ಆರಂಭಿಸಿತು, ಪ್ರಜಾ ಸರಕಾರವು ಲಲಿತ ಕಲೆಗಳ ವೈಶಿಷ್ಟ್ಯವನ್ನು ಅರಿತು ಅವುಗಳಿಗೆ ಉತ್ತೇಜನ ಕೊಡುವುದಕ್ಕೋಸ್ಕರ ಕೆಲವು ಸನ್ಮಾರ್ಗಗಳನ್ನು ಯೋಜಿಸಿತು. ಇತ್ತೀಚೆಗೆ ನಮ್ಮ ಕರ್ನಾಟಕದಲ್ಲಿ ಕಲೆಗೆ ಒಳ್ಳೆಯ ಪ್ರೋತ್ಸಾಹ ಇದೆ, ಚಿಕ್ಕ ಮಕ್ಕಳು ನೃತ್ಯಾಭ್ಯಾಸ ಆರಂಭಿಸಿದರೂ ಸರಕಾರವು ಅವರ ಕಲೆಗೆ ಉತ್ತೇಜನ ಕೊಡಲು 'ಜೂನಿಯರ್ ಗ್ರೇಡ್' ಪರೀಕ್ಷೆಗಳನ್ನು ಇಟ್ಟು ಪ್ರೋತ್ಸಾಹಿಸುತ್ತಿದೆ. ಅದರಲ್ಲಿ ತೇರ್ಗಡೆಯಾದ ಮೇಲೆ “ಸೀನಿಯರ್' ಪರೀಕ್ಷೆಗೆ ಕಟ್ಟಬಹುದು. ೧೮ ವರ್ಷ ವಯಸ್ಸಾದ ಮೇಲೆ 'ವಿದ್ವತ್' ಪರೀಕ್ಷೆಗೆ ಕಟ್ಟಿ ತೇರ್ಗಡೆಯಾದಲ್ಲಿ ಒಳ್ಳೆಯ ಪ್ರಶಸ್ತಿ ಪತ್ರ ಪಡೆದು ಕಲಾರಂಗದಲ್ಲಿ ಒಂದು ಗಣ್ಯಸ್ಥಾನವನ್ನು ಪಡೆಯಬಹುದು. ಕಲೆಯ ವಿದ್ವತ್ತಿನಿಂದ ಜೀವನೋಪಾಯಕ್ಕೂ ಒಂದು ದಾರಿಯಾಗುತ್ತದೆ. ಇದಕ್ಕೆ ಹೊಂದಿಕೊಂಡು ಬೆಂಗಳೂರು ವಿಶ್ವವಿದ್ಯಾಲಯವೂ ಲಲಿತ ಕಲೆಗಳ ಕಾಲೇಜನ್ನು ಆರಂಭಿಸಿ ಲಲಿತ ಕಲೆಗಳನ್ನು ಕಲಿಯಲು ಆಸ್ಪದ ಕೊಟ್ಟು ಕಲೆಗಾರರು ಪದವೀಧರ ರಾಗಲು ಅನುಕೂಲ ಮಾಡಿಕೊಟ್ಟುದು, ನಿಜವಾಗಿ ಶ್ಲಾಘನೀಯವಾದುದು. ಮೈಸೂರು ನಗರದಲ್ಲಿ ನೃತ್ಯ-ಸಂಗೀತ ಸಂಸ್ಥೆಯನ್ನು ಆರಂಭಿಸಿ, ಆ ಕಾಲೇಜಿನಲ್ಲಿ 'ಡಿಪ್ಲೋಮಾ' ಪತ್ರವನ್ನು ಕೊಡುವ ಏರ್ಪಾಡಾಗಿದೆ. ಭಾರತದ ಪ್ರತಿಯೊಂದು ದೊಡ್ಡ ನಗರಗಳಲ್ಲಿ ಸಂಸ್ಥಾನದ ರಾಜ್ಯ ಸರಕಾರಗಳು ಅಕಾಡೆಮಿಗಳನ್ನು ತೆರೆದು ಲಲಿತ ಕಲೆಗಳಿಗೆ ಪ್ರೋತ್ಸಾಹ ನೀಡುತ್ತಿವೆ. ಪ್ರತಿಭಾವಂತ ಉದಯೋನ್ಮುಖ ಕಲಾವಿದರಿಗೆ ರಾಜ್ಯ ಸರಕಾರವೂ ಕೇಂದ್ರ ಸರಕಾರವೂ ವಿದ್ಯಾರ್ಥಿವೇತನ ಕೊಟ್ಟು

ಅವರ ಆಸೆ ನಿರಾಸೆ ಆಗದಂತೆ ಕೆಲಸ ಮಾಡುತ್ತಿವೆ. ಭಾರತದ ನೃತ್ಯ ಕಲೆಯ ಸಂಶೋಧನೆ ನಡೆಸಿ ಅದನ್ನು ಕೂಲಂಕಷವಾಗಿ ತಿಳಿದುಕೊಳ್ಳುವ ಆಸಕ್ತಿಯನ್ನು ಹೆಚ್ಚಿಸಲು ಪ್ರೋತ್ಸಾಹ ನೀಡುತ್ತಿದೆ. ಸುಶಿಕ್ಷಿತ ನೃತ್ಯ ಕಲಾವಿದರು ನರ್ತಿಸುವುದಲ್ಲದೆ ಕಲೆಯ ಶಾಸ್ತ್ರ ವಿಭಾಗವನ್ನೂ ಅಭ್ಯಾಸಮಾಡಿ ಕಲಾರಂಗದಲ್ಲಿ ಮುತುವರ್ಜಿಯಿಂದ ಕೆಲಸ ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಈ ರೀತಿ ಅಭಿವೃದ್ಧಿಯಾಗುತ್ತಿರುವಾಗ ನಾವು ನೃತ್ಯ ಕಲೆಯ ವಿವಿಧ ರೂಪಗಳನ್ನು ರಂಗಸ್ಥಳದಲ್ಲಿ ಕಾಣುತ್ತಿರುವುದು ಹೊಸತೇನಲ್ಲ. ಈಗ ನಮ್ಮ ಜನ ಭರತನಾಟ್ಯ, ಕಥಕಳಿ, ಕಥಕ್, ಮಣಿಪುರಿ, ಕೂಚಿಪುಡಿ, ಒಡಿಸ್ಸಿ ಮುಂತಾದ ನೃತ್ಯ ವೈವಿಧ್ಯವನ್ನು ಕಲಿಯುತ್ತಿರುವುದು ಸಂತೋಷದ ಸಂಗತಿ. ಕಲೆಗೆ ಒಂದು ವಿಶಾಲ ದೃಷ್ಟಿ ಮನೋಭಾವ ಬಂದು ಅಭಿವೃದ್ಧಿಯು ರಭಸದಿಂದ ಸಾಗುತ್ತಿದೆ.

ಇಂದು ಕರ್ನಾಟಕದಲ್ಲಿ ಅನೇಕ ನಾಟ್ಯಾಚಾರರೂ ನೃತ್ಯ ಕಲೆಯ ವಿದ್ಯಾರ್ಥಿಗಳೂ ಇದ್ದಾರೆ. ಒಳ್ಳೆಯ ಹಾಗೂ ಕೆಟ್ಟ ದರ್ಜೆಯ ನಾಟ್ಯಾಚಾರರೂ ಬಾಳಿ ಬದುಕುತ್ತಾರೆ. ದೇವದಾಸಿ ಮನೆತನಗಳು ಪೂರ್ತಿ ಕಾಣೆಯಾದುವು. ಕುಲೀನ ಮನೆತನದವರೂ ಅದರಲ್ಲೂ ಶ್ರೀಮಂತ ಮನೆತನದವರು ನೃತ್ಯ ಕಲೆಯಲ್ಲಿ ಆಸಕ್ತಿ ಪಡೆದು ತಮ್ಮ ಮಕ್ಕಳ ಕಲೆಯಲ್ಲಿ ಬೆಂಬಲ ನೀಡುತ್ತಿದ್ದಾರೆ. ಅಂದರೆ ನೃತ್ಯ ಕಲೆ ಶ್ರೀಮಂತ ಕಲೆ-ನಾಟ್ಯಾಭ್ಯಾಸ ಯಾವಾಗಲೂ ಖರ್ಚಿನ ಬಾಬು, ನೃತ್ಯ ಇತರ ಲಲಿತ ಕಲೆಗಳನ್ನು ಹೊಂದಿಕೊಂಡಿದೆ: ಸಂಗೀತ, ಶಿಲ್ಪ, ಸಾಹಿತ್ಯ ಇತ್ಯಾದಿ. ಅಲ್ಲದೆ ನೃತ್ಯ ಕಲೆ ಪ್ರೇಕ್ಷಕರು ನೋಡತಕ್ಕ ವಿಷಯವಾದುದರಿಂದ ಜನರ ಬೆಂಬಲ ಬೇಕೆ ಬೇಕು. ಪ್ರದರ್ಶನಗಳಿಗಾಗುವ ಖರ್ಚು ಸಾಮಾನ್ಯರಿಂದ ಸಾಧ್ಯವಾಗುವುದಿಲ್ಲ. ಸಹಾಯಾರ್ಥ ಪ್ರದರ್ಶನಗಳನ್ನು ಕೊಟ್ಟು ಕಲಾವಿದರು ರಂಗಕ್ಕೆ ಬರಬೇಕು.

ಇಷ್ಟು ಅಭಿವೃದ್ಧಿ ನೃತ್ಯರಂಗದಲ್ಲಿ ಕಂಡುಬಂದರೂ ಪುರುಷರು ಏಕೆ ನೃತ್ಯ ಕಲೆಯನ್ನು ಕಲಿಯುತ್ತಿಲ್ಲ? ಅದಕ್ಕೆ ಹಲವಾರು ಕಾರಣಗಳು ; ನೃತ್ಯ ಕಲೆಯಿಂದ ಜೀವನಕ್ಕಾಗಿ ಸಂಪಾದಿಸುವುದು ಕಷ್ಟಸಾಧ್ಯ. ಪಾಠ ಹೇಳಿ ಕೊಟ್ಟು ಸಂಪಾದಿಸಬಹುದಾದರೂ ಆ ಸಂಪಾದನೆ ಶಾಶ್ವತವಲ್ಲ. ಸಂಸಾರದ ಹೊರೆಯನ್ನು ಯೋಚನೆಯಿಲ್ಲದೆ ಹೊರಲು ನೃತ್ಯ ಕಲೆಗೆ ಇರುವ ಬೆಂಬಲ ಸಾಲದು. ಆದರೂ ಇತ್ತೀಚೆಗೆ ಕೆಲವು ಪುರುಷರು ನೃತ್ಯ ಕಲಾರಂಗಕ್ಕೆ ಧೈರ್ಯದಿಂದ ಬಂದು ಕೆಲಸ ಮಾಡುತ್ತಿರುವುದು ಆಶಾಜನಕವಾಗಿದೆ. ಸ್ತ್ರೀ-ಪುರುಷ ಕಲಾವಿದರ ಸಂಖ್ಯೆ ಸಾಕಷ್ಟು ಹೆಚ್ಚಿದಂತೆ ಭವಿಷ್ಯ-ಭವ್ಯವಾಗುವ ಸೂಚನೆ ಇದೆ. ಏಕೆಂದರೆ ನಾಟ್ಯ ಶಾಸ್ತ್ರದ ಒಂದು ಮುಖ್ಯ ಅಂಗವಾದ "ನಾಟ್ಯ" ಎಂಬ ಶಾಖೆಯ ಪ್ರದರ್ಶನಗಳನ್ನು ಕಾಣಬಹುದು. ಈಗ ನಾವು ಕಾಣುವ ನೃತ್ಯ-ನಾಟಕಗಳಲ್ಲಿ ಹಲವು ಸಲ ಸ್ತ್ರೀಯರೇ ಪುರುಷರ ಪಾತ್ರ ಧರಿಸುವುದನ್ನು ಕಾಣುತ್ತೇವೆ. ಕೆಲವು ಜಗತ್ಪಸಿದ್ಧ ನೃತ್ಯಕಲಾ ಸಂಸ್ಥೆಗಳಲ್ಲಿ ಮಾತ್ರ ಸಾಕಷ್ಟು ಪುರುಷ ಕಲಾವಿದರಿದ್ದು ನೃತ್ಯ-ನಾಟಕಗಳನ್ನು ರೂಪಿಸಲು ಒಳ್ಳೆಯ ಅವಕಾಶ-ಅನುಕೂಲತೆಗಳಿವೆ.

ಭಾರತದ ವಿದ್ಯಾ ಇಲಾಖೆಯು ಕ್ರಿ. ಶ. ೧೯೬೦ ರಿಂದ ವಿದ್ಯಾಪ್ರಚಾರದ ಅಂಗವಾಗಿ ವಿದ್ಯಾರ್ಥಿಗಳಿಗೆ ಲಲಿತ ಕಲೆಗಳಲ್ಲೂ ಉತ್ತೇಜನ ಕೊಡುತ್ತಿದೆ. ಆದ್ದರಿಂದ ವಿದ್ಯಾರ್ಥಿ ವರ್ಗಕ್ಕೆ ಲಲಿತ ಕಲೆಗಳಲ್ಲಿ ಒಂದು ತರಹದ ಜಾಗೃತಿ ಉಂಟಾಗಿದೆ. ಆದರೆ ಇದೇ ಜಾಗೃತಿಯು ಸಾಮಾನ್ಯ ವಿದ್ಯಾರ್ಥಿಯೋರ್ವನಲ್ಲಿ ಇದೆಯೇ ? ಇಲ್ಲದಿದ್ದರೆ ಏತಕ್ಕೆ ಇಲ್ಲ ? ಎಂಬ ಪ್ರಶ್ನೆ ಏಳುತ್ತದೆ. ಸಾಮಾನ್ಯ ವಿದ್ಯಾರ್ಥಿಯು ಜಾನಪದ ನೃತ್ಯಗಳಲ್ಲಿ ಪಡೆಯುವ ಆಸಕ್ತಿ, ಸೌಂದರ್ಯೋಪಾಸನೆ ಶಾಸ್ತ್ರೀಯ ನೃತ್ಯಗಳಲ್ಲಿ ಕಾಣಲಾರನು. ವಿದ್ಯಾರ್ಥಿಗೆ ವಿದ್ಯಾಭ್ಯಾಸದ ಜೊತೆಗೆ ಕಲೆಗಳ ವಿಷಯವಾಗಿಯೂ ವಿಶಿಷ್ಟತರವಾದ ಪಾಠವಾಗಬೇಕು; ಶಾಸ್ತ್ರೀಯ ನೃತ್ಯ ಪ್ರದರ್ಶನಗಳನ್ನು ವಿದ್ಯಾರ್ಥಿವರ್ಗಕ್ಕೆ ಜ್ಞಾನೋದಯದ ಸಲುವಾಗಿ ಏರ್ಪಡಿಸಬೇಕು. ನೃತ್ಯ ಕಲೆಯು ಶಾಸ್ತ್ರ ಸಂಬಂಧವಾದ ಕಾರಣ, ಈ ವಿಷಯದಲ್ಲಿ ವಿದ್ಯಾ ಸಂಸ್ಥೆಗಳಲ್ಲಿ ವಿಶೇಷ ಉಪನ್ಯಾಸಗಳನ್ನು ಉಪಾಧ್ಯಾಯರು ಏರ್ಪಡಿಸಬೇಕು. ವಿದ್ಯಾರ್ಥಿಗಳ ಮನಸ್ಸನ್ನು ಈ ವಿಷಯವಾಗಿ ವಿಕಾಸಗೊಳಿಸಿ ಕಲೆಯಲ್ಲಿನ ಅಂದವನ್ನು ಎತ್ತಿ ತೋರಿಸಬೇಕು. ಯುವಕ ಜನಾಂಗದ ಮನಸೆಳೆಯುವಂತಿರಬೇಕು ಈ ಪಾಠ, ವಿದ್ಯಾರ್ಥಿ ಜನಾಂಗವನ್ನು ಶಾಸ್ತ್ರೀಯ ನೃತ್ಯ ಕಲೆಯ ಸೌಂದರ್ಯೋಪಾಸನೆಗೆ ತರಬೇತು ಮಾಡುವುದು ಕಷ್ಟವಾದರೂ ಅಸಾಧ್ಯವಲ್ಲ. ಆಧುನಿಕ ಕಾಲದಲ್ಲಿ ವಿಧ ವಿಧವಾಗಿ ಕಲಾಜ್ಞಾನವನ್ನು ವಿದ್ಯಾರ್ಥಿಯರಿಗೆ ಕೊಡಲು ಸಾಧ್ಯವಿಲ್ಲ. ಉದಯೋನ್ಮುಖ ಯುವಕ ಜನಾಂಗವು ನಮ್ಮ ಕಲೆಗಳನ್ನು ಅರಿತು ಬೆಳೆದರೆ ಕಲೋಪಾಸಕರೂ ಸೌಂದರಜ್ಞಾನವನ್ನು ತಿಳಿದ ಯುವಕ ಜನತೆಯೂ ದಿನೇ ದಿನೇ ಹೆಚ್ಚುವುದರಲ್ಲಿ ಸಂಶಯವಿಲ್ಲ.

ನೃತ್ಯ ಕಲಾವಿದರಿಗೆ ಮಹತ್ವವಾದ ಭವಿಷ್ಯವಿರುವುದೆಂದು ಧೈರ್ಯವಾಗಿ ಹೇಳಬಹುದು. ಆದರೆ ಕಲೆಯಲ್ಲಿ ಅಪಾರ ಆಸಕ್ತಿ, ಎಡಬಿಡದೆ ಪಡುವ ಪರಿಶ್ರಮ, ಏಕಾಗ್ರತೆ, ಕಲೆಯಲ್ಲಿ ಅಳಿಯದೆ ಎಂದೂ ಜೀವಂತವಾಗಿರುವ ಜಾಗೃತಿ, ಕಲೆಯ ಅಂತಸ್ಥನ್ನು ಏರಿಸುವ ಸಾಹಸ ಇವೆಲ್ಲವನ್ನೂ ಪಡೆದುಕೊಂಡಿರಬೇಕು. ನಾವು ದಿನ ದಿನವೂ ಬದಲಾವಣೆಯಾಗುತ್ತಿರುವ ಜಗತ್ತಿನಲ್ಲಿ ಬದುಕಿದ್ದೇವೆ. ಆದ್ದರಿಂದ ಕಲಾವಂತರು ಸುಸಂಸ್ಕೃತರಾಗಿದ್ದು, ವಿಶಾಲ ದೃಷ್ಟಿಯುಳ್ಳವರಾಗಿದ್ದರೆ ಮಾತ್ರ ಕಲೆಯು ಬರೇ ಕಸುಬಾಗಿರದೆ ಲಲಿತ ಕಲೆಯ ಅಂದವಾದ ರೂಪವನ್ನು ಪಡೆದಿರುತ್ತದೆ. ಕಲೆಗಾರನು ತನ್ನ ಕಲೆಯ ಆಡಂಬರದಲ್ಲಿ ಮಾನವೀಯತೆಯನ್ನು ಮರೆಯದಿದ್ದರೆ ಮಾತ್ರ ನೃತ್ಯ ಕಲೆಯ ಮೂಲಕವಾಗಿ ಜೀವನವನ್ನು ಮೇಲ್ಮಟ್ಟದ ಅಂತಸ್ತಿನಲ್ಲಿ ರೂಪಿಸಬಲ್ಲನು.

ಭಾರತದ ಕಲೆಯು ಧಾರ್ಮಿಕ ಸಂಬಂಧವಾಗಿದ್ದರೂ, ಇತ್ತೀಚೆಗೆ ಸಾಮಾಜಿಕ ಕಥಾವಸ್ತುಗಳನ್ನು ಅಳವಡಿಸಿಕೊಂಡು ಪ್ರದರ್ಶಿತವಾಗುತ್ತಿದೆ. ಭಾರತದ ಕಲಾವಿದರು ಕಲೆಗಾಗಿ-ನಾಡಿಗಾಗಿ-ದೇಶಕ್ಕಾಗಿ ಶ್ರಮಿಸುತ್ತಿದ್ದಾರೆ: ಭಾರತದಲ್ಲಿ ಈಗ ಸಾವಿರಾರು ನೃತ್ಯಕಲಾ ಶಿಕ್ಷಣ ಸಂಸ್ಥೆಗಳಿವೆ ; ಸಾವಿರಾರು ನೃತ್ಯ ಕಲಾವಿದರು ತಯಾರಾಗುತ್ತಲೇ ಇದ್ದಾರೆ. ಸಾವಿರಾರು ನೃತ್ಯ ಪ್ರದರ್ಶನಗಳನ್ನು ಕಾಣುತ್ತಿರುತ್ತೇವೆ. ಆದರೆ ಶ್ರೇಷ್ಠ ವರ್ಗಕ್ಕೆ,

ಉನ್ನತ ಶಿಖರ ಮುಟ್ಟಿದ ನೃತ್ಯ ಕಲಾವಿದರು ಬೆರಳಿನಿಂದ ಎಣಿಸುವಷ್ಟೇ ಇದ್ದಾರೆ! ಕಲೆಯನ್ನು ಕಲೆಗಾಗಿ ಕಲಿತುಕೊಳ್ಳುವವರು ತೀರಾ ಕಡಿಮೆ. ಉತ್ತಮ ಕಲಾವಿದರಾಗಲು ಕಲಾವಿದರ ವ್ಯಕ್ತಿತ್ವವೇ ಮುಖ್ಯ - ಬಾಹ್ಯ ಆಡಂಬರವಲ್ಲ, ಆಂತರಿಕ ಸಂಬಂಧವಾದ ಚೇತನ ಶಕ್ತಿ, ಕಲಾಜಾಗೃತಿ-ಆತ್ಮತೃಪ್ತಿ ಇವೆಲ್ಲ ಹೇಳಿಕೊಟ್ಟು ಬರುವಂತಹ ಪಾಠಗಳಲ್ಲ. ಕಲಾವಿದರ ಹೃದಯದಿಂದ ಉದ್ಭವವಾಗಿ ಸಹೃದಯರಿಗೆ ನೀಡತಕ್ಕ ನಿಧಿ. ಆ ಯೋಗ್ಯತೆಯನ್ನು ಪಡೆಯುವುದು ಅಷ್ಟು ಸುಲಭವಾಗಿದ್ದರೆ ಇಂದು ಭಾರತದಲ್ಲಿ ಸಾವಿರಾರು ನೃತ್ಯ ಕಲಾವಿದರು ಉತ್ತಮ ಕಲಾವಿದರೆಂದನಿಸಿ ಕೊಳ್ಳುತ್ತಿದ್ದರು. ಮಾನವನ ಮಾನಸಿಕ ದೌರ್ಬಲ್ಯದಿಂದಾಗಿ ಪ್ರಪಂಚದ ಹಲವಾರು ವಿಷಯಗಳಿಗೆ ಮಾರುಹೋಗುವ ಕಾರಣ ಆ ಶ್ರೇಷ್ಠತೆ ಬರುವುದು ಅಷ್ಟು ಸುಲಭದ ವಿಷಯವಲ್ಲ. ದೈವದತ್ತ ವಾಗಿ ಈ ಸುಗುಣ ಕೆಲವೇ ಕೆಲವು ಕಲಾವಿದರಲ್ಲಿ ಕಂಡು ಬಂದು, ಭಾರತದಲ್ಲಿ ಮಾತ್ರವಲ್ಲದೆ, ವಿಶ್ವದಲ್ಲಿ ಖ್ಯಾತಿಯನ್ನು ಪಡೆಯಬಲ್ಲದು. ಅಂತಹ ಪ್ರಮುಖ, ಪ್ರಚಂಡ ಪ್ರಚೋದಕ ಕಲಾವಿದರ ನಿರಂತರವಾದ ಕಲಾಸೇವೆ ಯಿಂದ ನೃತ್ಯ ಕಲೆಯು ಅಮರವಾಗಿ ಮೆರೆಯುವುದು ಖಂಡಿತ!

## ಕಾಲಾಯ ತಸ್ಯೈ ನಮಃ

- ಮೀನಾ ಸುಬ್ಬರಾವ್

ಕಾಲಚಕ್ರ ಉರುಳುತಿದೆ, ಜನಜೀವನ ಬದಲಾಗಿದೆ. ನಾವು ಕಾಲಕ್ಕೆ ತಕ್ಕಂತೆ ನಡೆಯಬೇಕು, ತಾಳಕ್ಕೆ ತಕ್ಕಂತೆ ಕುಣಿಯಬೇಕು ಎನ್ನುವ ಉಕ್ತಿ ಜೀವನದ ಉಳಿವಿಗೆ ಅತ್ಯವಶ್ಯಕವಾಗಿದೆ. ಆದರೂ ಕಾಡತಾವ ಸವಿನೆನಪುಗಳು. ಈ ನೆನಪುಗಳದು ಒಂದು ಸುಂದರ ಹಂದರ; ಉಲ್ಲಾಸದ ಉತ್ಕಂಠತೆಯನ್ನು ಯಶಸ್ವಿಯಾಗಿ ತರುತ್ತದೆ. ಇದರ ಉತ್ಸಾಹಕ್ಕೆ ಯಾರೂ ಹೊರತಾಗಿಲ್ಲ ಅನ್ನೋ ಸತ್ಯವೇ ಇದರ ಸಂಭವಿಸುವಿಕೆಗೆ ಸಾಧ್ಯವಾಗಿದೆ. ಕುವೆಂಪು ಅವರ ಒಂದು ಗೀತೆ ನೆನಪಿಗೆ ಬರುತ್ತಿದೆ-ಬಾ ಇಲ್ಲಿ ಸಂಭವಿಸು. ಬೇಕಾದಾಗಲೂ ಬೇಡವಾದಾಗಲೂ ಕಾಡುತ್ತವೆ ನೆನಪುಗಳು ಎಂಬುದೊಂದು ವಿಸ್ಮಯವಾಗಿದೆ.

ಒಂದು ವಾರದಿಂದ ಪ್ರವಾಸದಲ್ಲಿದ್ದ ಇವರು ಬಂದ ಕೂಡಲೇ "ಮೇಲ್ ಚೆಕ್ ಮಾಡಿದ್ಯಾ? ಅಂತ ಕೇಳಿದಾಕ್ಷಣ ನನ್ನ ಮನಸ್ಸಿನಾಳದಲ್ಲಿ ಸುರುಳಿಯಾಗಿ ಹುದುಗಿದ್ದ ಸವಿನೆನಪು ಎಳೆಎಳೆಯಾಗಿ ಬಿಚ್ಚಿಕೊಂಡಿತ್ತು. ಬಾಲ್ಯವನ್ನು ಕಳೆದ ಕಡೂರಿನಲ್ಲಿ ಬೆಳಗ್ಗೆ ಏಳು ಘಂಟೆಗೆಲ್ಲ ಎದ್ದು ಪೋಸ್ಟ್ ಆಫೀಸ್ ಹತ್ತಿರನೇ ಹೋಗಿ ಪೋಸ್ಟ್ ಮ್ಯಾನ್ ಹತ್ತಿರ ನಮಗೆ ಬಂದ ಕಾಗದ, ಪತ್ರ, ಟಪಾಲುಗಳನ್ನೆಲ್ಲಾ ತಂದು ಅಣ್ಣನಿಗೆ ಒಪ್ಪಿಸುವುದು ನಮ್ಮ ದಿನಚರಿಯಾಗಿತ್ತು. ಅದರ ಮಜಾನೇ ಬೇರೆ, ನಡೆದು ಹೋದರೂ ಆಯಾಸ ಕಾಣದೇ ಹುಮ್ಮಸ್ಸಿನಿಂದ ಹೋಗಿ ತರುತ್ತಿದ್ದೆವು. ಆ ಪತ್ರಗಳನ್ನು ನೋಡಿದಾಕ್ಷಣ ಆನಂದವೋ ಆನಂದ, ಆ ಸಂತೋಷಕ್ಕೆ ಹಲವಾರು ಕಾರಣಗಳು, ಪೋಸ್ಟ್ ಮ್ಯಾನಿನ ತಮಾಷೆಗಳು ಒಂದಾ, ಎರಡಾ, ಹಲವಾರು 'ಅಜ್ಜಿ, ನಿನ್ ಮಗನ ಕಾಗದ ಇವತ್ ಬಂದಿಲ್ಲ, ನಾಳೆ ಬರತ್ತೆ;', 'ಶೆಟೇ, ಇಲ್ಲಿ ನೋಡಿ. ನಿಮ್ಮ ತಂಗಿ ಮಗಳ ಮದುವೆ ಲಗ್ನ ಪತ್ರಿಕೆ', 'ಸಾರ್, ನಿಮ್ಮ ಮಗಳ ಪರೀಕ್ಷೆ ಫಲಿತಾಂಶ ಬಂದಿರಬೇಕು,' 'ತಾತ ನಿಮಗೆ ಮನಿ ಆರ್ಡರ್ ಹಬ್ಬಕ್ಕೆ ಸರಿಯಾಗಿಬಂದಿದೆ' ...ಇತ್ಯಾದಿ ಹೇಳಿ ಎಲ್ಲರನ್ನೂ ನಗಿಸುತ್ತಿದ್ದ ನಮ್ಮ ಪತ್ರಗಳನ್ನೆಲ್ಲಾ ಕೊಟ್ಟ ಮೇಲೆ ಸೈಕಲ್ ಹತ್ತಿ ಮಿಕ್ಕ ಪತ್ರಗಳನ್ನು ವಿತರಿಸಲು ಸಾಗುತ್ತಿದ್ದ. ಕೆಲವು ಪತ್ರಗಳು ತುಂಬಾ ಖುಷಿಯನ್ನು ತರುತ್ತಿದ್ದವು- ನಮ್ಮ ಅತ್ತೆ ಬೆಂಗಳೂರಿನಿಂದ ಪತ್ರ ಬರೆದು "ಮಕ್ಕಳಿಗೆಲ್ಲ ಶಾಲೆಗೆ ರಜೆ ಬಂದಿದ್ದರೆ ಬೇಸಿಗೆ ರಜಕ್ಕೆ ಬೆಂಗಳೂರಿಗೆ ಕಳಿಸುವುದು" ಎಂದಿದ್ದರೆ, ಅದನ್ನು ನೋಡಿದ ತಕ್ಷಣವೇ ನಮ್ಮ ಕುಣಿತ ಶುರುವಾಗಿರುತ್ತಿತ್ತು, ಇನ್ನು ಹೋಗುವುದಿರಲಿ, ಮದುವೆ, ಮುಂಜಿ ಆಹ್ವಾನ ಪತ್ರಿಕೆಗಳು ನೋಡಿದರೆ,

ಹೋದರೂ ಸರಿ, ಇಲ್ಲದಿದ್ದರೂ ಸರಿ ತುಂಬಾ ಆನಂದವನ್ನು ಕೊಡುತ್ತಿದ್ದವು. ಪತ್ರ ಬಾರದೇ ಇದ್ದರೂ ನಮಗೆಲ್ಲಾ ಮುಂಜಾವಿನ ವಾಯು ವಿಹಾರವಾಗುತ್ತಿತ್ತು. ಹೀಗೆ ನಮ್ಮ ಆರೋಗ್ಯ ಕಾಪಾಡಿಕೊಳ್ಳಲು ಒಂದು ಅವಕಾಶವೂ ಸಿಗುತ್ತಿತ್ತು. ಆದರೆ ಇಲ್ಲಿ, ಪೋಸ್ಟ್ ಮ್ಯಾನ್ ಜೀಪ್ನಲ್ಲಿ ಬಂದು ನಮ್ಮ ಪತ್ರಗಳನ್ನೆಲ್ಲ ಮನೆಗೆ ತಂದು ಕೊಡುವುದರಿಂದ ನಡೆದು ಹೋಗುವ ಅವಕಾಶ ತಪ್ಪಿತು. ಜೊತೆಗೆ ಮನಸ್ಸು ಹಗುರಾಗುವ ಕ್ಷಣಗಳನ್ನೂ ಕಸಿದುಕೊಂಡಿತು. ಮೈಲ್ ಬಾಕ್ಸ್ ತುಂಬಾ ಕೆಲಸಕ್ಕೆ ಬಾರದ (ಜಂಕ್) ಪತ್ರಗಳು ದೊಡ್ಡದೊಡ್ಡ ಲಕೋಟೆಯಲ್ಲಿ ಹೊತ್ತು ತಂದು ರೀಸೈಕಲ್‌ಗೆ ಎಸೆಯಬೇಕು. ಇದು ಒಂದು ಬೇಡವಾದ ಕೆಲಸವಾದಂತಾಗಿದೆ. ಮೈಲ್ ಚೆಕ್ ಮಾಡಲು ಯಾವ ಉತ್ಸಾಹವೂ ಇಲ್ಲ, ಕಾತರವೂ ಇಲ್ಲದಂತಾಗಿದೆ. ಇದರಿಂದಾಗಿ, ಒಂದು ಅಮೂಲ್ಯವಾದ ವಸ್ತುವನ್ನು ಕಳೆದುಕೊಂಡಂತಾಗಿದೆ.

ಮೈಲ್ ಏನ್ ಬಂತು ಅಂತ ಇವರು ಇನ್ನೊಂದು ಸಾರಿ ಕೇಳಿದ ಮೇಲೇ ನಾನು ನೆನಪಿನ ಸುರುಳಿಯಿಂದ ಹೊರಬಂದಿದ್ದು, ಕಾಗದಗಳ ಕಥೆ ಇದಾದರೆ, ಜನರನ್ನು (ಬಂಧು, ಮಿತ್ರರನ್ನು) ಭೇಟಿ ಮಾಡುವ ಪರಿಯೇ ಬದಲಾಗಿದೆ. ಮೊದಲಿನಂತಿಲ್ಲ ಈಗ. ಮೊದಲಾದರೋ, ಪೇಟೆಗೆ, ಮಾರುಕಟ್ಟೆಗೆ, ಎಲ್ಲಿಗೆ ಹೋದರೂ ಅಲ್ಲೇ ಹತ್ತಿರ ಇರುವ ಆತ್ಮೀಯರನ್ನು ನೋಡಿ, ಮಾತಾಡಿಸಿ, ಪರಸ್ಪರ ವಿಚಾರ ವಿನಿಮಯ ಮಾಡಿ, ನಕ್ಕು, ಕಾಫಿ, ಚಹ ಕುಡಿದ ನಂತರವೆ ಅಲ್ಲಿಂದ ಕಾಲ್ತಿಗೆಯುತ್ತಿದ್ದಿದ್ದು, ಕೆಲವೊಮ್ಮೆ ನಾವು ಹೋದ ಉದ್ದೇಶವನ್ನೂ ಸಹ ಮರೆತು ಸ್ನೇಹಿತರೊಡಗೂಡಿ ಸವಿಯಾದ ಸಮಯವನ್ನು ಕಳೆದು ಬಂದದ್ದೂ ಅಚ್ಚರಿಯ ಸಂಗತಿಯಾಗಿರಲಿಲ್ಲ. ಅಮ್ಮನೇ ಎಷ್ಟೋ ಸಾರಿ, “ಅಣ್ಣನಿಗೆ ಕಾಫಿ ಪುಡಿ ತರಲು ಕಳಿಸಿದ್ದೆ, ಒಲೆಯ ಮೇಲೆ ನೀರು ಕುದಿತಾ ಇದೆ, ನೀನೇ ಹೋಗಿ ಅವರ ಕೈಯಿಂದ ಕಾಫಿಪುಡಿ ಇಸ್ಕೊಂಡು ಬಾ. ಯಾರೋ ಸಿಕ್ಕಿರ್ತಾರೆ, ಅದಕ್ಕೆ ಇನ್ನೂ ಬರಲಿಲ್ಲ ಅಂತ ಕಾಣತ್ತೆ” ಅನ್ನುತ್ತಿದ್ದರು. ಇದು ಮಾಮೂಲಿಯ ವಿಷಯವಾಗಿತ್ತು. ಈಗ ಜನ ಮಾತಾಡೋಕೆ ಸಿಗೋದೇ ತುಂಬಾ ಅಪರೂಪ, ಅಪಾಯಿಂಟ್‌ಮೆಂಟ್ ತಗೊಂಡೇ ಆದರೂ, ಒಬ್ಬರ ಮನೆಗೆ ಇನ್ನೊಬ್ಬರು ಕಾಲ್ ಮಾಡಿ ಮಾತಾಡದೇ, ಅನುಮತಿ ಇಲ್ಲದೇ ಹೋಗುವಂತಿಲ್ಲ. ಅಪ್ಪಿತಪ್ಪಿ ಹೋದರೂ ಅವರನ್ನು ಭೇಟಿ ಮಾಡುವಂತಿಲ್ಲ. ಇದು ಸ್ನೇಹಿತರಿಗಷ್ಟೇ ಅಲ್ಲ, ಬಂಧು-ಮಕ್ಕಳಿಗೂ ಅನ್ವಯವಾಗಿದೆ. ನಾವೆಲ್ಲ ಈಗ ಒಂದು ತರಹ ಯಾಂತ್ರಿಕತೆಯ ಜೀವನ ನಡೆಸುತ್ತಿದ್ದೇವೆ ಎಲ್ಲ ವಿಷಯಗಳಲ್ಲೂ ಎಂಬುದು ಒಂದು ವಿಪರ್ಯಾಸವೇ ಸರಿ. ಮನಸ್ಸಿಗೆ ಮುದ ನೀಡಿ, ಮನೋಲ್ಲಾಸ ಪಡೆಯುವಂತಹ ಕ್ಷಣಗಳಿಗೆ ಕಾಲಾವಕಾಶ ಮಾಡಿಕೊಳ್ಳದೇ ಕತ್ತರಿ ಹಾಕಿ, ಮನೋರೋಗವನ್ನು ಬರಮಾಡಿಕೊಂಡು, ಅದರ ನಿವಾರಣೆಗೆ ಮದ್ದನ್ನು ಹುಡುಕುತ್ತಿರುವುದು ಮರಳಗಾಡಿನಲ್ಲಿ ನೀರಿಗೆ ಹುಡುಕುವಂತಾಗಿದೆ. ಇದೊಂದು ಅವನತಿಯ ಬದಲಾವಣೆ ಎಂದರೆ ತಪ್ಪಾಗಲಾರದು ಎಂದು ನನ್ನ ಅನಿಸಿಕೆ.

ಮೊದಲಿನ ಜೀವನ ಒಂದು ಸ್ವಲ್ಪಕ್ಕಾದರೂ ತ್ಯಾಗಮಯವಾಗಿತ್ತು. ಎಲ್ಲರಲ್ಲೂ ಸಹೃದಯತೆ ಮನೆಮಾಡಿತ್ತು. ಆದಲ್ಲಿ, ಉಳ್ಳಲ್ಲಿ, ಸಹಾಯವೆಸಗುವುದು ಸರ್ವೆ ಸಾಮಾನ್ಯವಾಗಿತ್ತು. ಉಪ್ಪು ತಿಂದಲ್ಲಿಗೆ ವಂಚಕತನ ತೋರಿಸುತ್ತಿರಲಿಲ್ಲ. ಹಿರಿಯರು ಇದನ್ನು ಮಾಡಿ ತೋರಿಸಿ ಮಕ್ಕಳಿಗೆ ಕಲಿಸುತ್ತಿದ್ದರು. ಮುಂದಿನ ಪೀಳಿಗೆಗೆ ಕಲಿಸುವ ಯೋಗ್ಯತೆಯನ್ನು ಈಗಿನವರು ಸಂಪೂರ್ಣವಾಗಿ ಪಡೆದಿಲ್ಲ ಎಂಬುದು ಒಂದು ವಿಷಾದಕರವಾದ ಸಂಗತಿಯಾಗಿದೆ.

ಸಂಬಂಧಗಳ ಕೊಂಡಿ ನಿಧಾನವಾಗಿ ಕಳಚಿಕೊಳ್ಳುತ್ತಿದೆ. ಜನರಷ್ಟೇ ಏಕೆ, ತಮ್ಮ ಒಡಹುಟ್ಟಿದ ಸಂಬಂಧಿಗಳನ್ನೂ ಸಹಿಸಿಕೊಳ್ಳುವ ಸೌಜನ್ಯ ಮತ್ತು ಚೈತನ್ಯ ನಮ್ಮೆಲ್ಲರಲ್ಲಿ ಕಾಣೆಯಾಗುತ್ತಿದೆ. ಹುಡುಕಿದರೂ ಸಿಗುವಂತಿಲ್ಲ. ನಮ್ಮ ಕಷ್ಟಗಳನ್ನೆಲ್ಲಾ ಮನಸ್ಸಿನಲ್ಲೇ ಇಟ್ಟು, ಸಾಕಿ, ನೋಡಲು ಆನಂದವಾಗಿದ್ದೇವೆ ಎನ್ನುವ ಅಭಿಪ್ರಾಯವನ್ನು ಬೇರೆಯವರಿಗೆ ಬರಿಸುವುದೇ ಒಂದು ಚಮತ್ಕಾರದ ನಟನೆಯಾಗಿದೆ ಬದುಕಿನಲ್ಲಿ ಸಣ್ಣ ವಿಷಯಗಳಿಗೆ ನೆಂಟರು ಇಷ್ಟರ ಜೊತೆ ಕಾದಾಡಿ ಸಂಬಂಧಗಳಿಗೆ ಕಡಿವಾಣ ಹಾಕುತ್ತಾ, ನಮ್ಮ ದೊಡ್ಡಸ್ತಿಕೆಯನ್ನು ಕಾಪಾಡಿಕೊಳ್ಳುವುದೇ ಮುಖ್ಯ ಎಂದು ತಿಳಿದಿರುವುದು ತಪ್ಪಾಗಿದೆ. ಇದರ ಪರಿಣಾಮ ನೂರಾರು ಕಷ್ಟಗಳನ್ನು ನಮ್ಮಷ್ಟಕ್ಕೆ ನಾವೇ ಬರಮಾಡಿಕೊಂಡಿದ್ದೇವೆ. ಯಾರ ಮುಂದೆಯೂ ಕೈಚಾಚದೇ, ಇರುವಷ್ಟರಲ್ಲೇ ನೆಮ್ಮದಿಯ ಬಾಳನ್ನು ಬದುಕಿದರೆ ಅದು ಸಾರ್ಥಕವಾದ ಬದುಕಲ್ಲವೇ? ಆಗ ಆನಂದವೂ, ಮನಸ್ಸಿಗೆ ನೆಮ್ಮದಿಯೂ ತಾನೇ ತಾನಾಗಿ ಅನುಸರಿಸುತ್ತದೆ. ನಮ್ಮ ಪೂರ್ವಜರು ಹೀಗೆ ಸಾಮಾನ್ಯವಾದ, ಸಂತೋಷದ ನೆಮ್ಮದಿಯ ಬಾಳನ್ನು ಈ ತರಹ ಆಧುನಿಕತೆಯ ಸೌಕರ್ಯ ಇಲ್ಲದಿದ್ದರೂ ಬಾಳಿ ತೋರಿಸಿದವರು. ನಮಗೆ ಈ ಕಾಲದಲ್ಲಿ ಸಿಗುವ ಸೌಕರ್ಯಗಳನ್ನೆಲ್ಲಾ ಉಪಯೋಗಿಸಿ ಸಂತೋಷದ, ನೆಮ್ಮದಿಯ ಜೀವನ ನಡೆಸುವುದು ನಾವಿನ್ನೂ ಕಲಿಯಬೇಕಾಗಿದೆ. ಕಾಲ ಬದಲಾಗಿ, ಸೌಕರ್ಯಗಳು ಬೆಳೆದಿರುವುದನ್ನು ಸದುಪಯೋಗಿಸಿಕೊಂಡು (ಕಾಲಾಯ ತಸ್ಮೈ ನಮಃ ಎಂದು) ಬದುಕು ನಡೆಸುವುದು ಉನ್ನತಿ ಎಂದೆನಿಸಿಕೊಳ್ಳುತ್ತದೆ. ಇಲ್ಲದಿದ್ದರೆ, ಅವನತಿಗೆ ಕಾರಣವಾಗಬಹುದು.

# ಆಧುನಿಕ ಸಮಾಜದಲ್ಲಿ 'ಆಧುನಿಕ' ಮನೋಬೇನೆಗಳು

ಡಾ. ಇಂದಿರಾ ಜೈ ಪ್ರಕಾಶ್

ಈ ಶೀರ್ಷಿಕೆಯನ್ನು ಓದಿದಾಕ್ಷಣ ಎದುರು ನಿಲ್ಲುವ ಮೊದಲ ಪ್ರಶ್ನೆಯೆಂದರೆ "ಮನೋಬೇನೆಯಲ್ಲೂ, ಆಧುನಿಕ, ಪ್ರಾಚೀನ ಎಂದಿದೆಯೇ" ಎನ್ನುವುದು. ಆಧುನಿಕ ಕಲೆ-ಪ್ರಾಚೀನ ಸಂಸ್ಕೃತಿ ಎಂದೆಲ್ಲಾ ಕೇಳಿದ್ದೇವೆ. ಮನೋಬೇನೆಯಲ್ಲೂ ಐತಿಹಾಸಿಕ- ಸಮಕಾಲೀನ, ಪುರಾತನ ಆಧುನಿಕ ಎಂದೆಲ್ಲಾ ವ್ಯತ್ಯಾಸಗಳಿವೆಯೇ ? ಸಾಮಾನ್ಯ ಜನರ ಕಲ್ಪನೆಯಲ್ಲಿ ಮನೋಬೇನೆಯೆಂದರೆ ಗುಣಪಡಿಸಲಾಗದಂತಹ ಮನೋವಿಕೃತಿ. ನಾಲ್ಕು ಜನರ ಮಧ್ಯೆ ಎದ್ದು ತೋರುವ ಬುದ್ಧಿ ವೈಕಲ್ಯ. ಸಾಧಾರಣವಾಗಿ ನಾವು 'ಹುಚ್ಚರು' ಎಂದು ಕರೆಯುವ ಜನ ತಮ್ಮ ಮೈಮೇಲಿನ ಪರಿವೆಯಿಲ್ಲದೆ, ಉದ್ರೇಕಿತರಾಗಿ ವಿಕಾರವಾಗಿ ವರ್ತಿಸಿ ನೋಡುವವರಲ್ಲಿ ಭಯ, ತಿರಸ್ಕಾರ, ಅನುಕಂಪ ಮುಂತಾದ ಭಾವನೆಗಳನ್ನು ಹುಟ್ಟಿಸುತ್ತಾರೆ. ಆದರೆ, ಈ ರೀತಿ ಮನಸ್ಸಿನ ಸ್ತಿಮಿತತೆಯನ್ನು ಕಳೆದುಕೊಂಡು ಸಮಾಜದಲ್ಲಿ ಸಾಮಾನ್ಯರಂತೆ ಬಾಳಲಾಗದವರು ನೂರರಲ್ಲಿ ಒಬ್ಬರೋ ಇಬ್ಬರೋ ಇರಬಹುದು. ಹೀಗೆ 'ಹುಚ್ಚರು' ಎನಿಸಿಕೊಂಡವರನ್ನು ಆಸ್ಪತ್ರೆಯಲ್ಲಿ ಮುಚ್ಚಿಟ್ಟೋ ಇಲ್ಲವೆ ಮನೆಗಳಲ್ಲಿ ಕಟ್ಟಿಹಾಕಿ ಇತರರ ನೆಮ್ಮದಿ ಕೆಡದಂತೆ ನೋಡಿಕೊಳ್ಳುವ ವ್ಯವಸ್ಥೆಯನ್ನು ಸಮಾಜ ಮಾಡಿಕೊಂಡಿದೆ. ಆದರೆ ಮನೋಬೇನೆಯ ವ್ಯಾಖ್ಯೆ ಬಹಳ ವಿಸ್ತೃತವಾಗಿದೆ. ಮೇಲೆ ವರ್ಣಿಸಿರುವುದು ಮನೋವಿಕೃತಿ, ಮಾನಸಿಕ ಅನಾರೋಗ್ಯವೆಂದರೆ ಈ ರೀತಿಯ 'ಹುಚ್ಚು' ಮಾತ್ರವಲ್ಲ, ಮನೋಬೇನೆಗಳು ಅನೇಕ ರೀತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಅವನ್ನು ಗುರುತಿಸುವುದು ಸುಲಭವಲ್ಲ. ಅಸಂತೋಷ, ಮಾನಸಿಕ ತಳಮಳ, ಸದಾ ಕಿರಿ ಕಿರಿ, ಖಿನ್ನತೆ, ಕಾರಣವಿಲ್ಲದ ಆತಂಕ, ಉದ್ವಿಗ್ನತೆ, ಚಡಪಡಿಕೆ, ಗೀಳು, ಚಟ, ಏಕಾಂಗಿತನ, ಅಸಮಾಧಾನ, ಮಾದಕ ವಸ್ತುಗಳ ಮೊರೆ ಹೋಗುವುದು, ಬೇಜವಾಬ್ದಾರಿ ವರ್ತನೆ, ಸಮಾಜ ವಿರೋಧಿ ಚಟುವಟಿಕೆ-ಇವು ಒಂದಲ್ಲ ಒಂದು ರೀತಿಯಲ್ಲಿ ಮಾನಸಿಕ ಅನಾರೋಗ್ಯದ ಲಕ್ಷಣಗಳು.

ಈ ಅರ್ಥದಲ್ಲಿ, ಮನೋಬೇನೆಯುಳ್ಳವರು ನಮ್ಮ-ನಿಮ್ಮತವರು ಗುಂಪಿನಲ್ಲಿ ಎದ್ದುಕಾಣುವಂತಹ ಯಾವ ವೈಕಲ್ಯತೆ ಇಲ್ಲದಿದ್ದರೂ ಮಾನಸಿಕವಾಗಿ ಬಳಲುವಂತಹವರು. ಇವರ ವರ್ತನೆಯಲ್ಲಿ ಮನಸ್ಸಿನ ಅಸಮಾಧಾನ ಕಾಣಿಸಿಕೊಳ್ಳದಿರಬಹುದು. ಇವರು ಯಾವ ವೈದ್ಯರ ನೆರವನ್ನೂ ಕೋರದಿರಬಹುದು. ದೈನಂದಿನ ಚಟುವಟಿಕೆಗಳನ್ನು ನಿಲ್ಲಿಸದಿರಬಹುದು. ಆದರೂ ಕೆಲವೊಂದು ದೌರ್ಬಲ್ಯಗಳಿಂದಾಗಿ ಆತ್ಮ ಸಂತೃಪ್ತಿ ಇಲ್ಲದೆ ಕೊರಗುವವರು ಇಂತಹ ತೊಂದರೆಗಳು ನೀವು ತಿಳಿದಿರುವುದಕ್ಕಿಂತಲೂ ಹೆಚ್ಚು ಸಾಮಾನ್ಯವಾಗಿ ಕಂಡುಬರುತ್ತವೆ. ಮನೆಯನ್ನು ಬಿಟ್ಟು ಶಾಲೆಗೆ ಹೋಗಲು

ಅತಿಯಾಗಿ ಹೆದರುವ ಮಗು, ಬುದ್ಧಿ ಇದ್ದರೂ ಶಿಕ್ಷಣದಲ್ಲಿ ಅನಾಸಕ್ತಿ ಬೆಳೆಸಿಕೊಂಡು ವಿಫಲವಾಗುವ ವಿದ್ಯಾರ್ಥಿ, ಕೀಳರಿಮೆಯಿಂದ ಬಳಲುವ ತರುಣ-ತರುಣಿಯರು, ಬೇಸರ ಹಾಗೂ ಅಸಮಾಧಾನ ಅನುಭವಿಸುವ ಗೃಹಿಣಿ, ಜವಾಬ್ದಾರಿ ಹಾಗೂ ಕಾರ್ಯಭಾರದಿಂದ ರಕ್ತದೊತ್ತಡ ಹೆಚ್ಚಿಸಿಕೊಳ್ಳುವ ಅಧಿಕಾರಿ, ವೈವಾಹಿಕ ಜೀವನದಲ್ಲಿ ಅಸಮರ್ಪಕತೆ ಎದುರಿಸುವ ದಂಪತಿಗಳು ಭ್ರಮನಿರಸನ ಹೊಂದಿದ ಮಧ್ಯವಯಸ್ಕರು, ಮುಪ್ಪಿನ ಭೀತಿಯಿಂದ ಕಂಗಾಲಾದ ವೃದ್ಧರು- ಲ್ಲರೂ ಒಂದು ರೀತಿಯಲ್ಲಿ ಮಾನಸಿಕ ಅಸ್ವಸ್ಥರು.

ಇಂತಹವರನ್ನು ನಾವು ಮನೋರೋಗಿಗಳು ಎಂದು ಕರೆಯದಿರಬಹುದು. ಹಾಗೆಂದ ಮಾತ್ರಕ್ಕೆ ಅವರು ಸಂಪೂರ್ಣವಾಗಿ ಸ್ವಸ್ಥರಾಗಿದ್ದಾರೆ ಎನ್ನಲಾಗುವುದಿಲ್ಲ. ಮಾನಸಿಕ ಆರೋಗ್ಯ ಎಂದರೆ ಖಾಯಿಲೆಯ ಲಕ್ಷಣಗಳಿಲ್ಲದಿರುವುದು ಎಂದಷ್ಟೇ ಅಲ್ಲ. ತನ್ನ ಶಕ್ತಿ ಸಾಮರ್ಥ್ಯಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದು, ಜೀವನದಲ್ಲಿ ನೆಮ್ಮದಿ ಸಾರ್ಥಕತೆಗಳನ್ನು ಅನುಭವಿಸುವುದು, ನಿರಾತಂಕ ಹಾಗೂ ನಿಶ್ಚಿಂತತೆಯಿಂದ ಬಾಳು ನಡೆಸುವುದು, ಸಮಾಜದಲ್ಲಿ ಬೇರೆಯವರ ಹಿತಕ್ಕೆ ಧಕ್ಕೆ ಬಾರದಂತೆ ತನ್ನ ಗುರಿಗಳನ್ನು ಸಾಧಿಸುವುದು, ಸೃಜನಾತ್ಮಕತೆಯನ್ನು ಬೆಳೆಸಿಕೊಳ್ಳುವುದು ಇವೆಲ್ಲಾ ಮಾನಸಿಕ ಆರೋಗ್ಯದ ಲಕ್ಷಣಗಳು, ಮಾನಸಿಕವಾಗಿ ಸ್ವಸ್ಥರಾಗಿರುವ ವ್ಯಕ್ತಿಗಳು ಜೀವನದ ಭಗ್ನತೆ, ಹತಾಶೆಗಳನ್ನು ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳದೆ ಎದುರಿಸಬಲ್ಲರು. ದುಃಖ, ಸಂತಾಪಗಳು ಇವರನ್ನು ಮನೋವಿಕಾರದತ್ತ ನೂಕುವುದಿಲ್ಲ. ಜೀವನದಲ್ಲಿ ನಿರ್ದಿಷ್ಟ ಗುರಿಗಳನ್ನು ರೂಪಿಸಿಕೊಂಡು ಅದಕ್ಕಾಗಿ ಧೃಡ ಮನಸ್ಸಿನಿಂದ ದುಡಿಯಬಲ್ಲವರು ಇವರು. ಸಮಾಜಕ್ಕಾಗಲೀ, ಕುಟುಂಬಕ್ಕಾಗಲೀ ಮಾರಕವಾಗುವಂತೆ ಇವರು ವರ್ತಿಸುವುದಿಲ್ಲ. ಒಟ್ಟಿನಲ್ಲಿ ತಾವೂ ಬೆಳೆಯುತ್ತಾ ಇತರರನ್ನೂ ಬೆಳೆಯಗೊಡುವ ಗುಣಗಳು ಮಾನಸಿಕವಾಗಿ ಸ್ವಸ್ಥರಾಗಿರುವವರಲ್ಲಿ ಕಂಡುಬರುತ್ತದೆ.

ಇದೇ ರೀತಿ ಒಂದು ಸ್ವಸ್ಥ ಸಮಾಜ ತನ್ನ ಎಲ್ಲಾ ಸದಸ್ಯರನ್ನೂ ಉತ್ತಮವಾಗಿ ಪೋಷಿಸಿಕೊಂಡು ಬರುವ ಗುಣ ಹೊಂದಿರುತ್ತದೆ. ಸಾಂಘಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ ಸಾಮೂಹಿಕ ಶಕ್ತಿಯನ್ನು ಅದು ಬೆಳೆಸುತ್ತದೆ. ಜನರ ಸಾಮಾನ್ಯ ಬೇಕು ಬೇಡಗಳನ್ನು ಪೂರೈಸುವುದೇ ಅಲ್ಲದೆ, ಅವರ ಭಾವನಾತ್ಮಕ, ಬೌದ್ಧಿಕ ಬೆಳವಣಿಗೆಯನ್ನೂ ಉತ್ತೇಜಿಸುತ್ತದೆ. ಇಂತಹ ಆರೋಗ್ಯಕರ ಸಮಾಜ ಹಿತವಾದ ಪರಿಸರವನ್ನು ನಿರ್ಮಿಸಿ ತನ್ನ ಸದಸ್ಯರ ಕ್ರಿಯಾಶೀಲತೆ ಹಾಗೂ ಸೃಜನಾತ್ಮಕತೆಯನ್ನು ಪುರಸ್ಕರಿಸುತ್ತದೆ. ಸ್ವಸ್ಥ ಸಮಾಜದಲ್ಲಿ ಸಹಕಾರ ಮನೋಭಾವ ಮಾನವೀಯ ಮೌಲ್ಯಗಳು, ಉದಾತ್ತ ಆದರ್ಶಗಳು ಮನೆ ಮಾಡಿಕೊಳ್ಳುತ್ತವೆ. ಒಂದು ಒಳ್ಳೆಯ ಸಮಾಜದಲ್ಲಿ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಅನಾವಶ್ಯಕ ಅಡ್ಡಿ ಆತಂಕಗಳಿರುವುದಿಲ್ಲ. ಮಾನಸಿಕ, ಸಾಮಾಜಿಕ, ಆರ್ಥಿಕ ಒತ್ತಡಗಳನ್ನೂ ಆದಷ್ಟು ದೂರವಿರಿಸಿ ನೆಮ್ಮದಿ ಹಾಗೂ ನಿರಾತಂಕ ಜೀವನ ಕ್ರಮವನ್ನು ಇಂತಹ ಸಮಾಜ ಬೆಂಬಲಿಸುತ್ತದೆ. 'ಆಧುನಿಕ' ಎಂದು ಕರೆಸಿಕೊಳ್ಳುವ ಇಂದಿನ ಸಮಾಜದಲ್ಲಿ ಈ ರೀತಿಯ ಗುಣಗಳಿವೆಯೇ ಎಂದು ನಾವು ಪರೀಕ್ಷಿಸಬೇಕು.

ಆಧುನಿಕ ಸಮಾಜದ ಲಕ್ಷಣಗಳೇನು ಎಂದು ಇನ್ನು ಗಮನಿಸೋಣ. ನಾವಿಂದು ಭೌತಿಕ, ಜೈವಿಕ, ಔದ್ಯೋಗಿಕ ವಿಜ್ಞಾನಗಳಲ್ಲಿ ಅಗಾಧ ಪ್ರಗತಿ ಸಾಧಿಸಿದ್ದೇವೆ. ಆದರೆ ಮಾನವರ ನಡುವಿನ ಸಂಬಂಧಗಳನ್ನು ಉತ್ತಮಗೊಳಿಸುವಲ್ಲಿ ದೇಶ, ಜಾತಿ, ವರ್ಗಗಳ ನಡುವಿನ ವೈಮನಸ್ಸನ್ನು ಅಳಿಸುವಲ್ಲಿ ವಿಫಲರಾಗಿದ್ದೇವೆ. ಪ್ರಾಜ್ಞರು, ವಿಚಾರವಂತರೆನಿಸಿಕೊಂಡವರು ಈ ಮಾತನ್ನು ಅನೇಕಬಾರಿ ಒತ್ತಿ ಹೇಳಿದ್ದಾರೆ. ಈ ಬಗ್ಗೆ ತೀವ್ರ ಕಳವಳವನ್ನೂ ವ್ಯಕ್ತಪಡಿಸಿದ್ದಾರೆ. ಒಂದು ರೀತಿಯಲ್ಲಿ ಆಧುನಿಕ ಸಮಾಜ ವಿರೋಧಾಭಾಸಗಳ ಆಗರ. ಸಂಪರ್ಕ ಮಾಧ್ಯಮಗಳಲ್ಲಿ ಉಂಟಾಗಿರುವ ಕ್ರಾಂತಿಯಿಂದಾಗಿ ಪ್ರಪಂಚ ಈಗ ಬಹಳ ಚಿಕ್ಕದಾಗಿದೆ. ಯಾವುದೋ ಮೂಲೆಯಲ್ಲಿ ನಡೆಯುವ ವಿದ್ಯಮಾನ ನಮ್ಮ ಮನೆಯ ಬಾಗಿಲನ್ನೂ ಮುಟ್ಟುತ್ತದೆ. ಕುಳಿತಲ್ಲೇ ಭೂಮಿಯ, ಬಾಹ್ಯಾಕಾಶದ ವಿವಿಧ ಚಟುವಟಿಕೆಯನ್ನು ಗಮನಿಸುವ, ಅದಕ್ಕೆ ಸ್ಪಂದಿಸುವ ಹಾಗೂ ಅದರಿಂದ ಪ್ರಭಾವಿತರಾಗುವ ಕಾಲ ಇದು. ಆದರೆ ಪ್ರಪಂಚ ಚಿಕ್ಕದಾದರೂ ಮನಸ್ಸುಗಳು ಹತ್ತಿರವಾಗಿಲ್ಲ. ಇಂದು ಮ್ಯಾಂಚೆಸ್ಟರ್‌ನಲ್ಲಿ ನಡೆಯುವ ಕ್ರೀಡೆಯನ್ನು ಮುದ್ದೇನಹಳ್ಳಿಯಲ್ಲಿ ನೋಡಬಹುದು. ಅಮೇರಿಕೆಯಲ್ಲಿ ಇಂದು ಪ್ರಯೋಗಶಾಲೆಯಲ್ಲಿ ತಯಾರಾದ ಮಾದಕವಸ್ತುವನ್ನು ಬ್ರಿಗೇಡ್ ರೋಡಿನಲ್ಲಿ ನಾಳೆಕೊಳ್ಳಬಹುದು. ಆದರೆ ಮಾನವ ಸಂಬಂಧಗಳು ಮಾತ್ರ ಇನ್ನೂ ಹೆಚ್ಚು ಬಿರುಕುಗೊಂಡಿವೆ. ಆಧುನಿಕ ತಂತ್ರಜ್ಞಾನದ ನಾಗಾಲೋಟದಲ್ಲಿ ಮಾನವೀಯ ಮೌಲ್ಯಗಳು ಸವಕಲಾಗುತ್ತಿವೆ. ನಗರೀಕರಣ, ಔದ್ಯೋಗೀಕರಣಗಳಿಂದಾಗಿ ಜೀವನ ಯಾಂತ್ರಿಕವಾಗುತ್ತಿದೆ. ಪಟ್ಟಣಗಳಿಗೆ ವಲಸೆ ಬರುವವರು ಹೆಚ್ಚಾಗಿ, ಜನಸಂಖ್ಯೆಯ ದಾಳಿಗೆ ಸಿಲುಕಿ ನಗರಗಳೂ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿವೆ. ಇಂತಹ ಮಹಾನಗರಗಳಲ್ಲಿ ವಾಸಿಸುವ ಜನರೂ ಗಡಿಯಾರದ ಮುಳ್ಳಿನ ಜೊತೆ ಓಡುವ, ಯಂತ್ರಗಳ ಜೊತೆ ಮತ್ತೊಂದು ಯಂತ್ರವಾಗುವ, ಹೇಗಾದರೂ ಜೀವನ ಸಾಗಿಸುವ ಗುಂಗಿನಲ್ಲಿರುತ್ತಾರೆ. ಎಲ್ಲೆಲ್ಲೋ ಹೊಗೆ ಉಗುಳುವ ಕಾರ್ಖಾನೆಗಳು, ಒಂದರ ಮೇಲೊಂದು ಬೆಂಕಿಪೊಟ್ಟಣದಂತೆ ಪೇರಿಸಿಟ್ಟ ಚಿಕ್ಕ ಚಿಕ್ಕ ಮನೆಗಳು. ಜನರನ್ನು ಮನೆಯಲ್ಲಿ ಬಂಧಿಸಿಡುವ ಟೆಲಿವಿಶನ್‌ಗಳ ನಡುವೆ ಜೀವನ ಸಾಗುತ್ತದೆ. ಕುಟುಂಬಗಳು ಚಿಕ್ಕವಾದಂತೆ, ವಯೋವೃದ್ಧರನ್ನೂ ಹಾಲು ಹಸುಳೆಗಳನ್ನೂ, ನಿರ್ಬಲರನ್ನೂ ರೋಗಿಗಳನ್ನೂ ನೋಡಿಕೊಳ್ಳಲು ಸಂಘ ಸಂಸ್ಥೆಗಳ ಮೊರೆ ಹೋಗಬೇಕಾಗಿದೆ. ಆಧುನಿಕ ಸಮಾಜ ಗಡಿಬಿಡಿಯ ಸಮಾಜ ಇಲ್ಲಿ ಯಾರಿಗೂ ಯಾವುದಕ್ಕೂ ಸಮಯವಿರದ, ತಾಳ್ಮೆ ಇರದ ಪರಿಸ್ಥಿತಿ. ಉತ್ತಮ ಸಂಬಂಧಗಳನ್ನು ಬೆಳೆಸಿ, ಕೋಮಲವಾದ ಭಾವನೆಗಳಿಗೆ ನೀರೆರೆದು, ಉದಾತ್ತ ಧ್ಯೆಯಗಳನ್ನು ಬಲಪಡಿಸುವ ವ್ಯವಧಾನ ಯಾರಿಗೂ ಇಲ್ಲ. ಹೀಗಾಗಿ ಮಾನವರ ನಡುವಿನ ಸ್ಪರ್ಧೆ, ಹೋರಾಟ, ಕಲುಷಿತ ಸಂಬಂಧಗಳು ದೇಶಗಳ ನಡುವಿನ ಯುದ್ಧ ಕಲಹಗಳಲ್ಲಿ ಮಾರ್ಪಾಟಾಗಿದೆ. ತೀವ್ರವಾಗಿ ಬೆಳೆದು ಜನಸಾಮಾನ್ಯರ ಜೀವನವನ್ನು ಗೊಂದಲಮಯವಾಗಿಸಿದೆ. ಭೂಮಿಯ ಸಂಪನ್ಮೂಲಗಳನ್ನು ವಿವೇಚನೆಯಿಲ್ಲದೆ ಸೂರೆ ಮಾಡಿದ ಇಂದಿನ ಮಾನವ ಪ್ರಕೃತಿಯ ಸಮತೋಲನವನ್ನೇ ಅಲುಗಾಡಿಸಿ ವಿನಾಶದತ್ತ ರಭಸದಿಂದ ಸಾಗಿದ್ದಾನೆ.

ಹೀಗೆ ಪ್ರಕೃತಿಯ, ಸಮಾಜದ ಅಸಮತೋಲನ ಇರುವಂತಹ ಆಧುನಿಕ

ಸಮಾಜದಲ್ಲಿ ಮನುಷ್ಯರ ಮಾನಸಿಕ ಸಮತೋಲನದ ಪಾಡೇನು ? ಮನುಷ್ಯನ ಮನಸ್ಸಿನ ಪರಿಸ್ಥಿತಿ ಅವನ ಸುತ್ತಲಿನ ಪರಿಸರವನ್ನೂ ಅವಲಂಬಿಸಿರುತ್ತದೆ. ಒಬ್ಬ ವ್ಯಕ್ತಿ ವಾಸಿಸುವ ಸ್ಥಳ, ಒಡನಾಡಿಗಳು, ಸಹೋದ್ಯೋಗಿಗಳು, ದಿನನಿತ್ಯದ ಪ್ರಸಂಗಗಳು, ಎದುರಿಸಬೇಕಾದಂತಹ ಸಮಸ್ಯೆಗಳು ಆ ವ್ಯಕ್ತಿಯ ದೈಹಿಕ, ಮಾನಸಿಕ ಆರೋಗ್ಯದ ಮೇಲೆ ಗಾಢವಾದ ಪ್ರಭಾವ ಬೀರುತ್ತವೆ. ಇಂದಿನ ಜನಾಂಗವನ್ನು ಚಿಂತಕರು ಅಣುಬೆಯ ನೆರಳಿನಲ್ಲಿ ಬದುಕುವವರು' ಎನ್ನುತ್ತಾರೆ. ಹಾಗೆಂದರೆ, ಅಣು ಬಾಂಬಿನ ಸ್ಫೋಟದಿಂದಾಗಿ ಈಗಾಗಲೇ ಒಂದು ಮಹಾಪ್ರಳಯವನ್ನೂ, ಜನಾಂಗದ ಕ್ರೂರ ಕೊಲೆಯನ್ನೂ ಕಂಡಿರುವ ಹಾಗೂ ಮುಂದಾಗಬಹುದಾದ ಅಣುಯುದ್ಧದ ಭೀತಿಯಿಂದ ಬಳಲುವ ಜನ ನಾವು. ಒಂದು ನಿಮಿಷದಲ್ಲೇ ಹೊಸಕಿ ಹೋಗಿಬಿಡಬಹುದಾದ, ಯಾವುದೂ ನಿಶ್ಚಿತವಲ್ಲದ ಅನಿಯಂತ್ರಿತ ಬದುಕು ಇಂದಿನದು. ಇದರಿಂದ ಉಂಟಾಗುವ ಮನಃಸ್ಥಿತಿಯಿಂದಾಗಿ ಆಧುನಿಕ ಯುಗವನ್ನು “Age of Anxiety' -ಆತಂಕದ ಯುಗ ಎನ್ನುತ್ತಾರೆ. ಸಮಾಜ ಮನೋವಿಜ್ಞಾನಿಗಳು ಅನೇಕ ರೀತಿಯ ಗೊಂದಲಗಳನ್ನೂ, ತುಮುಲಗಳನ್ನೂ, ಒಳತೋಟಿಗಳನ್ನೂ ವರ್ಣಿಸಿದ್ದಾರೆ. ಇಂದಿನ ಜೀವನದ ಬದಲಾವಣೆಗೆ ಸಮರ್ಪಕವಾಗಿ ಹೊಂದಿಕೊಳ್ಳಲಾಗದೆ ಜನರು ಹೆಚ್ಚು ಹೆಚ್ಚು ಸಂಕ್ಷೋಭೆಗಳಿಗೆ ಒಳಗಾಗುತ್ತಿದ್ದಾರೆ. ಒತ್ತಡಗಳು- ಇವುಗಳಿಂದಾಗಿ ಉಂಟಾಗುವ ದೈಹಿಕ ಮಾನಸಿಕ ತೊಂದರೆಗಳು (ಉದಾ: ಅಲ್ಸರ್, ರಕ್ತದೊತ್ತಡ, ಆತಂಕ), ತೀವ್ರ ಸ್ಪರ್ಧೆಯಿಂದಾಗಿ ಉಂಟಾಗುವ ಅನಿಶ್ಚಿತತೆ, ಭೀತಿ ಹಾಗೂ ಹತಾಶೆಗಳು, ಗುಂಪಿನಲ್ಲಿ ಕರಗಿ ಹೋಗಿ ತನ್ನತನವನ್ನೇ ಕಳೆದುಕೊಳ್ಳುವಂತಹ ಅತಂತ್ರತೆ, ಅನಾಥಪ್ರಜ್ಞೆ ಏಕಾಂಗಿತನ, ಸ್ವಾರ್ಥಪರತೆ, ಸ್ವಚ್ಛಾಚಾರ ಅತಿಯಾದ ಹಿಂಸಾಪ್ರವೃತ್ತಿ, ಕೌಟುಂಬಿಕ-ಸಾಮಾಜಿಕ ಸಂಬಂಧಗಳ ಬಗ್ಗೆ ನಿರ್ಲಕ್ಷ್ಯ, ಸುಲಭಲಭ್ಯವಾದ ಭೋಗ ವಸ್ತುಗಳಲ್ಲಿ ಆಕರ್ಷಣೆ ಸತ್ತಾಗ ಜಿಡ್ಡುಹಿಡಿದ ಮನಸ್ಸನ್ನು ಪುನಃಶ್ಚತನಗೊಳಿಸಲು ಉದ್ರೇಕಕಾರಿ ಕೌತುಕಕಾರಿ ಉದ್ದೀಪಕಳಿಗಾಗಿ ಹುಡುಕಾಟ,ಮಾದಕ ದ್ರವ್ಯಗಳಿಗೆ ದಾಸರಾಗುವುದು, ಸಾಂತ್ವನಕಾರೀ ಮದ್ದುಗಳ ಮೊರೆಹೋಗುವುದು- ಮುಂತಾದುವು ಇಂದಿನ ಮಾನಸಿಕ ಸಮಸ್ಯೆಗಳ ಕೆಲವು ಮುಖುಗಳು.

ಪ್ರಾಯಶಃ ಹಿಂದೆಂದೂ ಸಾಮಾನ್ಯಜನರ ಮಾನಸಿಕ ಆರೋಗ್ಯಕ್ಕೆ ಇಂತಹ ತೀವ್ರ ಅಪಾಯ ಒದಗಿದ್ದಿಲ್ಲ. ಮಾನಸಿಕ ಜಂಜಾಟಗಳೂ, ಸಾಮಾಜಿಕ ಒತ್ತಡಗಳೂ ಇಷ್ಟೊಂದು ಬಿರುಸಾಗಿ ಹಾಗೂ ಸಾಂಕ್ರಾಮಿಕವಾಗಿ ತಮ್ಮ ವಿಷಜಾಲವನ್ನು ಹರಡಿರಲಿಲ್ಲ ಎನ್ನಬೇಕು. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಎಲ್ಲಾ ವರ್ಗದವರನ್ನೂ ಎಲ್ಲಾ ವಯಸ್ಸಿನವರನ್ನೂ ಒತ್ತಡಗಳು ತೊಂದರೆಗೆ ಸಿಲುಕಿಸುತ್ತಿವೆ. ಹಾಲು ಹಸುಳೆಗಳಿಗೂ ತಮ್ಮ ತಾಯ್ತಂದೆಯರ ಜೀವನ ಶೈಲಿಯ ಬಿಸಿ ಶೈಶವದಲ್ಲೇ ತಟ್ಟುತ್ತದೆ. ಇನ್ನೂ ಮಾತು ಕಲಿಯುವ ಮುನ್ನವೇ ಶಾಲೆಗಳಲ್ಲಿ ಎ ಬಿ ಸಿ ಕಲಿಯಬೇಕಾದ, ಬೇರೆ ಮಕ್ಕಳೊಂದಿಗೆ ಸ್ಪರ್ಧಿಸಬೇಕಾದ ಒತ್ತಡ ಪ್ರಾರಂಭವಾಗುತ್ತದೆ. ಒಳ್ಳೆಯ ಮಾರ್ಗದರ್ಶನ ಮತ್ತು ಒಲವಿನ ಪೋಷಣೆ ಸಿಗದಿದ್ದಲ್ಲಿ ಹದಿಹರೆಯದಲ್ಲೇ ಒತ್ತಡಗಳಿಂದಾಗಿ ಮನಸ್ಸು ದಾರಿತಪ್ಪುತ್ತದೆ. ಹಣ, ಅಂತಸ್ತು ಹಾಗೂ ಸುಖ ಸಾಮಗ್ರಿಗಳಿಗೆ ಪ್ರಾಮುಖ್ಯತೆ ಕೊಡುವ ಸಂಸ್ಕೃತಿಯಲ್ಲಿ ನಿತ್ಯವೂ ಹೋರಾಟಕ್ಕೆ ನಾವು ಸಿದ್ಧರಿರಬೇಕಾಗುತ್ತದೆ. ನಿರಾಶೆ, ಭಗ್ನತೆಗಳನ್ನು

ಹೆಜ್ಜೆ ಹೆಜ್ಜೆಗೂ ಎದುರಿಸಬೇಕಾಗುತ್ತದೆ. ಹೀಗಾಗಿ ಮಾನಸಿಕ ಬೇನೆಗಳು ವಿವಿಧ ರೂಪಗಳಲ್ಲಿ ಕಾಣಿಸಿಕೊಂಡು ನೆಮ್ಮದಿ ಕೆಡಿಸುತ್ತವೆ. ಒಂದಲ್ಲ ಒಂದು ರೀತಿಯ ಮನೋದೌರ್ಬಲ್ಯ ವ್ಯಕ್ತಿಗಳನ್ನು ಅಪೂರ್ಣರಾಗಿಸುತ್ತದೆ. ಹಿಂದಿನವರ ಸರಳ ಜೀವನ ಶೈಲಿ, ಸಜ್ಜನಿಕೆ, ಸಹಕಾರ ಮನೋಭಾವ, ಸ್ನೇಹಮಯ ಸಂಸ್ಕೃತಿಗೆ ವಿದಾಯ ಹೇಳಿದ ಆಧುನಿಕ ಸಮಾಜದಲ್ಲಿ ಎಂದಿಗೂ ತೃಪ್ತಿಪಡಿಸಲಾಗದ ಆಸೆಗಳು, ಸಮಾಧಾನ ಪಡಿಸಲಾಗದಂತಹ ಆತಂಕಗಳು, ಸವೆದುಹೋದ ಜೀವನ ಮೌಲ್ಯಗಳು, ಅರ್ಥಹೀನ ಮಾನವೀಯ ಸಂಬಂಧಗಳು, ಸದಾ ನವೀನ ಹಾಗೂ ಉದ್ರೇಕಕಾರಿ ವಸ್ತು- ವಿಷಯಗಳನ್ನು ಬಯಸುವ ಚಾಪಲ್ಯ-ಇವೇ ಆಧುನಿಕ ಮನೋಬೇನೆಗಳು.

ಈ ರೀತಿಯ ವ್ಯಾಪಕ ಅನಾರೋಗ್ಯಕರ ಮನಃಸ್ಥಿತಿಗೆ ಮದ್ದಿಲ್ಲವೇ ? ಮುಂದು ಮುಂದು ಸರಿಯುವ ಗಡಿಯಾರದ ಮುಳ್ಳನ್ನಂತೂ ಹಿಂದೆ ಸರಿಸಲು ಸಾಧ್ಯವಿಲ್ಲ. ಆಧುನಿಕತೆಯತ್ತ ಇಟ್ಟಿರುವ ಹೆಜ್ಜೆಯನ್ನು ಹಿಂದಕ್ಕಿಡಲೂ ಆಗದು. ಹಾಗಿದ್ದಲ್ಲಿ ನಾವು ಈ ರೀತಿಯ ಅತೃಪ್ತಿಕರ, ಅಸಮರ್ಪಕ ಜೀವನ ವಿಧಾನಕ್ಕೆ ಹೊಂದಿಕೊಳ್ಳಬೇಕೆ ? ಇಂಬಿತ್ಯಾದಿ ಪ್ರಶ್ನೆಗಳು ಹುಟ್ಟುವುದು ಸಹಜ. ಆಶಾವಾದಿಗಳನೇಕರು ನಾವು ಆಧುನಿಕ ಸಮಾಜದಲ್ಲಿ ಬೇರೂರಿರುವ ಮನೋಭಾವನೆಗಳ ಬಗ್ಗೆ ನಿರಾಶರಾಗಬೇಕಿಲ್ಲ ಎನ್ನುತ್ತಾರೆ. ಮಾನವರಲ್ಲಿ ಅಗಾಧ ಪ್ರತಿಭೆಯಿದೆ. ಸುಪ್ತವಾದ ಚೈತನ್ಯವಿದೆ-ವಿಷಮ ಪರಿಸ್ಥಿತಿಯಲ್ಲಿ ಮೈ ಕೊಡವಿ ಎದ್ದುನಿಂತು ತನ್ನ ಮೌಲ್ಯಗಳನ್ನು ಪುನರುಜ್ಜೀವನಗೊಳಿಸುವ ಅಪೂರ್ವ ಶಕ್ತಿಯಿದೆ ಎಂದವರ ನಂಬಿಕೆ. ಈಗಾಗಲೇ ಇಂದಿನ ವ್ಯಾಪಾರೀ ಮನೋಭಾವದ ಆಧುನಿಕ ವಿಷವರ್ತುಲದ ಬಗ್ಗೆ ಭ್ರಮನಿರಸನಗೊಂಡು ಅನೇಕರು ಹೊಸ ಜೀವನಕ್ರಮದ ಶೋಧ ಮಾಡುತ್ತಿದ್ದಾರೆ ಎಂದೂ ಕೆಲವರು ವಾದಿಸುತ್ತಾರೆ. ಆಶಾವಾದ ಒಳ್ಳೆಯದೇ. ಆದರೂ ಒಂದು ಜೀವನಕ್ರಮಕ್ಕೆ ಒಗ್ಗಿಹೋದ ಜನರು ಬದಲಾವಣೆಗಳ ಬಗ್ಗೆ ತಟಸ್ಥರಾಗುತ್ತಾರೆ ಎನ್ನುವುದೂ ಗಮನಿಸಬೇಕಾದ ಅಂಶ. ಕಪ್ಪೆಯೊಂದನ್ನು ನೀರಿನಲ್ಲಿ ಹಾಕಿ ನಿಧಾನವಾಗಿ ನೀರಿನ ಉಷ್ಣಾಂಶ ಹೆಚ್ಚಿಸುತ್ತಾ ಬಂದಲ್ಲಿ ಅದು ಯಾವ ವಿರೋಧವನ್ನೂ ವ್ಯಕ್ತಪಡಿಸದೆ ಕುದಿದು ಸಾಯುತ್ತದೆ. ಮಾನವೀಯ ಮೌಲ್ಯಗಳನ್ನೂ ಉಚ್ಚ ಸಂಸ್ಕೃತಿಯನ್ನೂ ಕಡೆಗಣಿಸುತ್ತಾ ಬರುವ ಜನಾಂಗ ಕಡೆಗೊಮ್ಮೆ ತನ್ನ ಮೂಲಭೂತವಾದ ಮನುಷ್ಯ ಗುಣಗಳನ್ನೇ ಮರೆಯಬಹುದು. ಹಿಂಸೆಯನ್ನೇ ಬಿತ್ತಿ, ಅದಕ್ಕೆ ನೀರೆರೆದು, ಬೆಳೆಸಿ ಅದರ ಫಲವನ್ನೇ ಉಣಬಡಿಸುವ ಇಂದಿನ ಸಮಾಜ ನಿಜವಾಗಿ ಎಚ್ಚೆತ್ತು ತನ್ನ ಪ್ರವೃತ್ತಿಗಳನ್ನು ಸುಧಾರಿಸಿಕೊಂಡು ಉತ್ತಮ ಮಾನವರನ್ನು ಉತ್ತಮ ಪರಿಸರದಲ್ಲಿ ವಿಕಸಿಸಲು ಅನುವು ಮಾಡಿಕೊಡುವುದೇ ಎಂಬುದು ಚಿಂತಿಸಬೇಕಾದ ವಿಷಯ.

# ಸ್ತ್ರೀ ಮತ್ತು ಆರ್ಥಿಕ ಸ್ವಾತಂತ್ರ್ಯ : ಸಂಪ್ರದಾಯ ಮತ್ತು ಆಧುನಿಕತೆ

ಡಾ. ಎನ್.ಕೆ. ಲೋಲಾಕ್ಷಿ

"ವನಿತೆಯ ಕೈಯಲ್ಲಿ ವಿತ್ತವು ಸ್ಥಿರವಾಗಿ ನಿಲ್ಲದು" ಎಂದು ವನಿತೆಗೆ ಎಂದೂ ಎತ್ತದ ಅಧಿಕಾರವನ್ನೇ ಕೊಡದೆ ಅವಳ ಅರ್ಹತೆಯನ್ನು ಸಂದೇಹಿಸುವ ಅಗಾಧ ಪುರುಷ ಪ್ರಪಂಚಕ್ಕೆ ತಾವೆಷ್ಟು ಎಲ್ಲಿಗೆ ಸುರಿಯುತ್ತಿರುತ್ತೇವೆಂಬ ಜ್ಞಾನೋದಯವಾಗಿದ್ದಿದ್ದರೆ ಇಂದು ಕೂಡ ಸ್ತ್ರೀಯರು ಕೈಗೊಂಡಿರುವ ಮದ್ಯಪಾನ ವಿರುದ್ಧದ ಹೋರಾಟಗಳು ಬಹುಶಃ ಇರುತ್ತಿರಲಿಲ್ಲವೇನೋ.

ಸ್ತ್ರೀಯನ್ನು ಅವಳ ತಾಯ್ತನ ಹಾಗೂ ಪತ್ನಿತ್ವದ ಚೌಕಟ್ಟಿನೊಳಗೇ ಅನೇಕ ಶತಮಾನಗಳವರೆಗೆ ಬಂಧಿಸಿಟ್ಟ ಭಾರತೀಯ ವ್ಯವಸ್ಥೆ ಅದಕ್ಕೆ ತಕ್ಕುದಾದ ಬೆಲೆಯನ್ನು ತೆರಬೇಕಾದ ಕಾಲ ಸ್ತ್ರೀ ಶಿಕ್ಷಣದ ಜಾರಿಯೊಂದಿಗೇ ಆರಂಭವಾಯಿತು. ತನ್ನ ಗೃಹ ದುಡಿಮೆಯ ನ್ಯಾಯಯುತ ಪ್ರತಿಫಲಕ್ಕಾಗಿ ಮಹಿಳೆ ಬಾಯ್ದೆಗೆಯದಂತೆ ಹಾಕಿದ ಸಾಂಸ್ಕೃತಿಕ ಬಂಧನವನ್ನು ಒಡೆದು ಮಹಿಳೆ ಆರ್ಥಿಕ ಸ್ವಾವಲಂಬನೆಯೆಡೆಗೆ ವಾಲಿದುದು ಸ್ವಾತಂತ್ರ್ಯ ಪೂರ್ವ ಸಂದರ್ಭದ ವಿಶೇಷ ಕ್ರಾಂತಿ ಎನ್ನಬಹುದು. ಸ್ತ್ರೀ ಹೊರಗಿನ ದುಡಿಮೆಗೆ ಉದ್ಯೋಗಕ್ಕೆ- ಆರ್ಥಿಕ ಸುಭದ್ರತೆಗೆ ಹೋರಾಡಲು ಪುರುಷಕೇಂದ್ರ ವ್ಯವಸ್ಥೆಯೇ ಮೂಲಕಾರಣ. ಹೆಣ್ಣಿನ ಒಳದುಡಿಮೆಯನ್ನು ದುಡಿತವೆಂದು ಪರಿಗಣಿಸದೇ ಇದ್ದ ಸ್ಥಿತಿ, ಅದಕ್ಕೆ ತಕ್ಕನಾದ ಪ್ರತಿಫಲವಿಲ್ಲದ, ಸ್ಥಾನವಿಲ್ಲದ, ಆರ್ಥಿಕ ಸುಭದ್ರತೆಯಿಲ್ಲದ ಸಂದರ್ಭದಲ್ಲಿ ಸ್ತ್ರೀಗೆ ಸ್ವಾವಲಂಬನೆ ಅತ್ಯಗತ್ಯವಾಯಿತು. ಗೃಹಕೆಲಸಗಳನ್ನು ಕರ್ತವ್ಯವೆಂಬ ಪಟ್ಟಿಯಲ್ಲಿ ಸೇರಿಸಿ, ತಾನು ಮಾತ್ರ ಹೊರಗಡೆಯ ೭-೮ ಗಂಟೆಯ ದುಡಿತಕ್ಕೆ ಅಧಿಕಾರ, ಹಣ, ಅಂತಸ್ತು, ಗೌರವ, ಸ್ವಾತಂತ್ರ್ಯ ಪಡೆಯುತ್ತಿರುವುದು, ಸ್ತ್ರೀಯರ ಸುಮಾರು ದಿನದ ೧೬ ರಿಂದ ೧೮ ಗಂಟೆಯ ಕೆಲಸಕ್ಕೆ ಯಾವುದೇ ಆರ್ಥಿಕ ಮಾನದಂಡಗಳಿಲ್ಲದೇ ಇರುವುದು (ಪ್ರಸ್ತುತದಲ್ಲೂ ಅದೇ ಸ್ಥಿತಿಯು ಇರುವುದು) ಸ್ತ್ರೀಯರನ್ನು ಗುಲಾಮಗಿರಿಯಲ್ಲಿರಿಸಿತು.

ಹೊರಗಿನ ದುಡಿಮೆ, ದುಡಿಮೆಗೆ ತಕ್ಕ ಪ್ರತಿಫಲ ಅವಳ ಹಕ್ಕು ಹಾಗೂ ಸ್ತ್ರೀ ವಿಮೋಚನೆಯ ಅತ್ಯಂತ ಮೂಲಭೂತ ಅಗತ್ಯ ಆರ್ಥಿಕ ಸ್ವಾವಲಂಬನೆಯೆಂಬುದೆ ಪ್ರಾಯೋಗಿಕ ಸತ್ಯ. ಈ ನಿಟ್ಟಿನಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಿತೆಯರಾದ ಸ್ತ್ರೀಯರು ವೃತ್ತಿನಿರತರಾಗಲು ಹವಣಿಸಿದರು. ಯುರೋಪಿನ ಸ್ತ್ರೀಯರ ಪ್ರಭಾವವು ಇವರ ಮೇಲಾಗಿತ್ತು. ಜೊತೆಗೆ ನಾನೀಗಾಗಲೇ ಚರ್ಚಿಸಿದಂತೆ ಭಾರತೀಯ ಕೌಟುಂಬಿಕ ಪದ್ಧತಿಯು ಕಾರಣವಾಯಿತು. ಹೀಗಾಗಿ ಅನೇಕ ಹೋರಾಟಗಳು ಉದ್ಯೋಗಕ್ಕಾಗಿ

ಆರಂಭಗೊಂಡವು. ಶ್ರೀಮತಿ ಪಣಜೀಕ ಕೃಷ್ಣಾಬಾಯಿ ಎಂಬ ಲೇಖಕಿ 'ಸ್ತ್ರೀಯರು ಮತ್ತು ಆರ್ಥಿಕ ಸ್ವಾತಂತ್ರ್ಯ' (ಜಯಂತಿ, ಮೇ ೧೯೪೦, ಸಂಚಿಕೆ ೯, ಪುಟಸಂಖ್ಯೆ ೫೨೨, ೫೨೩) ಎಂಬ ಲೇಖನದಲ್ಲಿ "ದಾರಿದ್ರದಿಂದ ಪೀಡಿತವಾದ ಈ ದೇಶದಲ್ಲಿ, ಸಂಪತ್ತಿನ ಸಮಭಾಗವು ಸ್ತ್ರೀಯರಿಗೆ ದೊರೆತರೆ, ಸಿರಿವಂತರ ಸ್ತ್ರೀಯರು ಸುಖದಿಂದಿದ್ದು ಸಮಾಜ ಸುಧಾರಣೆಯನ್ನಾದರೂ ಕೈಗೊಳ್ಳುವರು. ಇನ್ನುಳಿದ ಸ್ತ್ರೀಯರಿಗೆ ಸ್ವತಂತ್ರ ರೀತಿಯಿಂದ ದ್ರವ್ಯಾರ್ಜನೆ ಮಾಡುವುದಕ್ಕೆ ಅರ್ಹತೆಯೂ ಅಧಿಕಾರವೂ ಅನುವೂ ದೊರೆತರೆ, ಸಂಸಾರವನ್ನು ಸುಗಮವಾಗಿ ಸಾಗಿಸುವುದಕ್ಕೆ ಸಾಧ್ಯವಾಗುವುದು. ವನಿತೆಯ ಕೈಯಲ್ಲಿ ವಿತ್ತವು ಸ್ಥಿರವಾಗಿ ನಿಲ್ಲದು" ಎಂದು ಅನೇಕರು ಆಕ್ಷೇಪಿಸುವರು. ಅವಳ ಕೈಯಲ್ಲಿ ಎತ್ತದ ಅಧಿಕಾರವನ್ನೆಂದೂ ಕೊಡದೆ, ಅವಳ ಅರ್ಹತೆಯಲ್ಲಿ ಸಂದೇಹವನ್ನು ಕಲ್ಪಿಸುವುದು ತರವಲ್ಲ. "ಸ್ವಾಭಾವಿಕವಾಗಿಯೇ ಔದಾರ್ಯ - ದಯೆಗಳಿಂದ ಕೂಡಿದ ಸ್ತ್ರೀಯು ಶಿಕ್ಷಣವನ್ನು ಪಡೆದವಳಾದರೆ, ಧನದ ಸದುಪಯೋಗವನ್ನೇ ಮಾಡುವಳು. ಪುರುಷರು ದುರ್ವಸನಗಳಲ್ಲಿ ಹಣವನ್ನು ಹಾಳು ಮಾಡುವಾಗ ತಡೆ ಹಾಕುವವರುಂಟೇ? ಆ ತೆರದ ವ್ಯಸನಗಳಾದರೂ ಸ್ತ್ರೀಯರು ಬಿಟ್ಟಿರುವುವೆಂದು ನಾವು ನಂಬಬಹುದಲ್ಲ! ಸ್ತ್ರೀಯರು ತಮ್ಮ ಸ್ವಾತಂತ್ರ್ಯ ಸೂರ್ಯನಿಗೆ ಗ್ರಹಣಹತ್ತಿ ಕವಿದ ಕತ್ತಲೆಯನ್ನು ಕುಗ್ಗಿಸಿ, ಅರುಣೋದಯವನ್ನು ಕಾಣಬೇಕಾದರೆ ಅವರೇ ಶ್ರಮಪಡಬೇಕಾಗಿದೆ. ಹಿಂದೂ ಧರ್ಮಶಾಸ್ತ್ರಗಳಲ್ಲಿಯ ತರ್ಕ - ವಿತರ್ಕಗಳನ್ನು ವಿಚಾರಿಸಿ, ನಿಜವಾದ ಪರಿಸ್ಥಿತಿಯನ್ನು ಬಯಲಿಗೆಳೆಯುವುದು ಒಂದು ಮಾರ್ಗ: ರಜಿಸ್ಟರ್ ಪದ್ಧತಿಯಿಂದ ವಿವಾಹಗಳನ್ನು ಮಾಡಿಕೊಂಡು, ಸಕ್ಸೆಶನ್ ಆಕ್ಟಿನ ಪ್ರಕಾರ ಆರ್ಥಿಕ ಅಧಿಕಾರಗಳನ್ನು ಪಡೆಯುವುದು ಇನ್ನೊಂದು ಮಾರ್ಗ. ಈ ಬಗೆಯ ವಿವಾಹ ಪದ್ಧತಿಯಿಂದ ಇನ್ನಿತರ ಸುಧಾರಣೆಗಳ ಲಾಭವೂ ಸಿಕ್ಕುವುದು. ಸ್ತ್ರೀಯರಲ್ಲಿ ಸಹಜವಾಗಿದ್ದ ಕಲೆಗಳ ಉಪಯೋಗದಿಂದ ಅವರು ಧನಾರ್ಜನೆ ಮಾಡಬೇಕೆಂದರೂ ಶೀಲವೆಂಬ ಶಬ್ದದ ವಿಪರ್ಯಾಸವೂ ಅವರಿಗೆ ತಡೆಹಾಕುವುದು. ಆದುದರಿಂದ ಸ್ತ್ರೀಯರೇ ನೀತಿ, ಶೀಲ, ಆಚಾರ, ವಿಚಾರಗಳ ಸಮಂಜಸವಾದ ಪರ್ಯಾಲೋಚನೆಯನ್ನು ಮಾಡಬೇಕಾಗಿದೆ. ನಿಸರ್ಗವು ಶೀಲದ ದೊಡ್ಡ ಜವಾಬ್ದಾರಿಯನ್ನು ವನಿತೆಯರ ಮೇಲೆ ಹಾಕಿರುವುದು ನಿಜ; ಆದರೆ ಅದನ್ನು ನೀಗಿಸಿಕೊಂಡು ಮಾನವಂತರಾಗಿ ಸ್ವತಂತ್ರವ್ಯಕ್ತಿತ್ವದ ಸವಿಯನ್ನು ಉಂಡು ಬದುಕುವುದಕ್ಕೂ, ಜೀವನವನ್ನು ರಮ್ಯವನ್ನಾಗಿ ಮಾಡುವುದಕ್ಕೂ ಸ್ತ್ರೀಯರೇ ಮುಂದೆ ಬರಬೇಕು" ಎಂದು ಹೇಳುತ್ತಾ, ಭಾರತೀಯ ಸ್ತ್ರೀಯರು ಆರ್ಥಿಕ ಪಾರತಂತ್ರದಲ್ಲಿಯೇ ಬದುಕುವುದಕ್ಕಿಂತ ಶಿಕ್ಷಣ ಕಲಿತು ಧನಸಂಪಾದನೆ ಮಾಡಲು ಕರೆ ಕೊಡುತ್ತಾರೆ. ಸ್ತ್ರೀಗೆ ತಂದೆಯ ಸಂಪತ್ತಿನಲ್ಲಿ ಹಕ್ಕು ಇಲ್ಲದಿರುವುದರಿಂದ, ಪತಿಯಿಂದ ತ್ಯಜಿಸಲ್ಪಟ್ಟರೆ, ವಿಧವೆಯಾದರೆ ಗಂಡನ ಸಂಪತ್ತಿನ ಒಡತಿಯೂ ಆಗದ ಕಾರಣ ಸ್ವ ಸಂಪಾದನೆಯೇ ಮಾರ್ಗವೆಂದು ಸೂಚಿಸುತ್ತಾರೆ. ತನಗಾಗಿಯೇ ನಾಲ್ಕು ಕಾಸು ಬೇಕಾದರೆ ಪತಿಯ ದುಡಿಮೆಯನ್ನು ಅವಲಂಬಿಸಬೇಕಾಗುವುದರಿಂದ ಸ್ತ್ರೀ ಸ್ವತಃ ದ್ರವ್ಯಾರ್ಜನೆ ಮಾಡಲು ಎಚ್ಚರಿಸುತ್ತಾರೆ. ಇವರ ಈ ಎಲ್ಲಾ ಚಿಂತನೆ ಅಂಶಗಳು ಭಾರತೀಯ ಸ್ತ್ರೀಯರ ಆಧುನೀಕರಣಕ್ಕೊಳಗೊಂಡ ಸ್ಥಿತಿಯನ್ನು ಹೇಳುತ್ತವೆ.

ನವಯುಗ ಪತ್ರಿಕೆಯಲ್ಲಿ 'ಅಧ್ಯಾಪಕಿಯರು' (ನವಯುಗ-೧೯೩೭ ಸಂಚಿಕೆ ೨೮, ಸಂಪುಟ-೧೬, ಪುಟ ಸಂಖ್ಯೆ-೧೮.) ಎಂಬ ಲೇಖನ ಬರೆದ 'ಸರೂ' ಎಂಬುವವರು ಮನೆಕೆಲಸದಾಚೆಗೆ ಸ್ತ್ರೀಯು ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳಲು, ಅದರಲ್ಲೂ ಅಧ್ಯಾಪಕಿಯರಾಗಲು (ಉಪಾಧ್ಯಾಯಿನಿ) ಸ್ತ್ರೀಯರೇ ಪುರುಷರಿಗಿಂತ ಹೆಚ್ಚು ಅರ್ಹಳು ಎಂಬುದನ್ನು ಸಮರ್ಥವಾಗಿ ವಿವರಿಸಿದ್ದಾರೆ. “ಹೆಂಗಸರು ಉಪಾಧ್ಯಾಯಿನಿಯರಾಗಬೇಕೇಕೆ” ಎಂದು ಪ್ರಶ್ನಿಸುವವರೂ ಇರುವರು. ನಿರುದ್ಯೋಗವು ಬಹಳವಾಗಿ ಹೆಚ್ಚಿಹೋಗಿರುವ ಕಾಲ-ಮನೆಮಾರು ಮಾರಿಯಾದರೂ ಕಲಿತ ಗಂಡಸರಿಗೆ ಕೆಲಸವಿಲ್ಲ. ಇಂಥಾ ಸಮಯದಲ್ಲಿ 'ಕಲಿಸುವಿಕೆ'ಯೇ ಮೊದಲಾದ ಉದ್ಯೋಗಗಳಲ್ಲಿಯೂ ಹೆಂಗಸರು ಗಂಡಸರೊಡನೆ ಸ್ಪರ್ಧಿಸಹತ್ತಿದರೆ ಮುಂದೇನು ಗತಿ? ಎಂದು ಕೇಳುವವರೂ ಇದ್ದಾರೆ. ಹೆಂಗಸರಿಗೆ ಕೆಲಸವಿಲ್ಲ ಎಂಬ ಮಾತೇ ಇಲ್ಲ. ಮನೆ ಕೆಲಸ ನೋಡಿಕೊಂಡು ಸಂಸಾರ ನಿರ್ವಹಣ ಮಾಡಿಕೊಂಡು ಇದ್ದರಾಯಿತು. ಅದನ್ನು ಬಿಟ್ಟು ಅಧ್ಯಾಪಕತನವೇ ಮೊದಲಾದ ಉದ್ಯೋಗಗಳಲ್ಲಿ ಸ್ತ್ರೀಯರು ಕೈಹಾಕುವುದು ಒಳಿತಲ್ಲ ಎನ್ನುವವರೂ ಇದ್ದಾರೆ. ಇದು ಯಥಾರ್ಥವಾದ ಮಾತೆ? ಸ್ತ್ರೀಯರು ಕಲಿಸುವ ಕೆಲಸಕ್ಕೆ ಕೈಹಾಕಿ ಪುರುಷರಿಗೆ ಅನ್ಯಾಯ ಮಾಡುತ್ತಾರೆಯೆ? ಎಂಬುದನ್ನು ಒಂದಿಷ್ಟು ವಿಚಾರಿಸೋಣ. ಸ್ತ್ರೀಯರು ಉಪಾಧ್ಯಾಯಿನಿಯರಾಗುವ ಅಗತ್ಯವಿಲ್ಲವೆನ್ನುವವರು ಕೊಡುವ ಮೊದಲಿನ ಕಾರಣವೆಂದರೆ ಸಾಕಷ್ಟು ಕಲಿತು ಉದ್ಯೋಗವಿಲ್ಲದೆ ಪುರುಷರೇ ತೊಳಲುತ್ತಿರುವಾಗ ಸ್ತ್ರೀಯರು ಆ ಅಡಚಣೆಯನ್ನು ಮತ್ತಷ್ಟು ಹೆಚ್ಚಿಸುವದೇಕೆ? ಎಂಬುದು. ಇದು ಪುರುಷ ಪಕ್ಷಪಾತಿಗಳ ಅನುಕೂಲ ಶಾಸ್ತ್ರ ಮಾತ್ರ, ಪುರುಷರಂತೆಯೇ ಕಲಿತ ಸ್ತ್ರೀಯರು ಮಾತ್ರ ಉಪಾಧ್ಯಾಯಿನಿಯರಾಗಲು ಸಾಧ್ಯವಿರುವುದರಿಂದ ಪುರುಷರು ಅಧ್ಯಾಪಕರಾಗುವುದು ಉಚಿತ ಸ್ತ್ರೀಯರು ಕಲಿಸುವುದು ಅನುಚಿತವೆಂಬುದರಲ್ಲಿ ನ್ಯಾಯವೇ ಉಳಿಯುವುದಿಲ್ಲ. ಇನ್ನು 'ಸ್ತ್ರೀಯರು ನಿರುದ್ಯೋಗಿಗಳಾಗುವದೆಂದಿಲ್ಲ; ಏನಿಲ್ಲದಿದ್ದರೂ ಅವರಿಗೆ ಮನೆಕೆಲಸವಾದರೂ ಉಂಟಲ್ಲ' ಎನ್ನುವ ವಾದದಲ್ಲಿ ಸ್ತ್ರೀಯರ ಅಭಿವೃದ್ಧಿಯನ್ನು ಹಾರೈಸದ ಮನೋಭಾವವಿದೆ. ಸ್ತ್ರೀಯರಿಗೆ ಮನೆ ಕೆಲಸವೊಂದೇ ಗತಿಯೆನ್ನುವಾಗ ಪುರುಷರಿಗೂ ಅಂತಹ ಕೆಲಸವೇನೂ ಇಲ್ಲವೆಂದಲ್ಲ. ವಿದ್ಯೆ, ಅಭ್ಯಾಸ ಮೊದಲಾದವುಗಳನ್ನು ಉಪಯೋಗಿಸುವ ಹಕ್ಕು ಪುರುಷರಂತೆ ಸ್ತ್ರೀಯರಿಗೂ ಇದ್ದೇ ಇದೆ. ತಾಳ್ಮೆಯು ಸ್ತ್ರೀಯರಲ್ಲಿದೆ. ಅವರು ತಾಳಿಯೇ ಬೆಳುವವರು. ತಾಳ್ಮೆಯು ಅವರ ಹುಟ್ಟುಗುಣ. ಚಿಕ್ಕ ಮಕ್ಕಳ ಪುಂಡಾಟವನ್ನು ಮೃದುವಾಗಿ ನಿವಾರಿಸಿ, ಸಂತೈಸಿ ಅವರೊಡನೆ ಹೊಕ್ಕು, ಬಳಕೆಯಲ್ಲಿದ್ದೇ ಜೀವನದ ಬೆಳಕನ್ನು ತೋರಿಸಬೇಕಾದರೆ ಸ್ತ್ರೀ ಬೋಧಕರೇ ಆಗಬೇಕು. ಆದ್ದರಿಂದ ಈ ಕಾಲದಲ್ಲಿ ಅಧ್ಯಾಪಕಿಯರು ಹೆಚ್ಚಾಗುವ ಅಗತ್ಯವಿದೆ. ಅಕ್ಕಂದಿರಾ! ಸ್ತ್ರೀಯರಲ್ಲಿರುವ ಮಾತೃಪ್ರೇಮ, ಸಹನಾಗುಣ ಮೊದಲಾದ ಅಮೂಲ್ಯ ಗುಣಗಳು ಸಮಾಜದ ಹಿತಕ್ಕೆ ಉಪಯೋಗಿಸಲ್ಪಡಬೇಕಾದರೆ ಅವರಿಗೆ ಅಧ್ಯಾಪಕತನದಂಥ ಉದ್ಯೋಗಗಳು ದೊರಕಬೇಕು. ಇಲ್ಲಿಯವರೆಗೆ ಸ್ತ್ರೀಯ ಗುಣಗಳೆಂದು ಯಾವ್ಯಾವುದನ್ನು ಪುರುಷ ಲೋಕ ಪಟ್ಟಿ ಮಾಡುತ್ತಾ ಬಂದಿತ್ತೋ ಆ ಸಹನೆ, ಮಾತೃ ಹೃದಯ, ಮಮತೆ, ಪ್ರೀತಿ,

ತಾಳ್ಮೆ ಇವುಗಳೇ ಒಬ್ಬ ಅಧ್ಯಾಪಕಿಗೆ ಬೇಕಾದ ಗುಣಗಳೆಂದು, ಅವುಗಳೆಲ್ಲ ಪುರುಷರಲ್ಲಿಲ್ಲದ ಸ್ತ್ರೀಗುಣಗಳಾದ್ದರಿಂದ ಸ್ತ್ರೀಯರೇ ಹೆಚ್ಚು ಯೋಗ್ಯರೆಂದು ತುಂಬಾ ಚತುರತೆಯಿಂದ ಹಕ್ಕನ್ನು ಸ್ಥಾಪಿಸುತ್ತಾ ಬಂದಿದ್ದಾರೆ.

ಒಂದು ಕಡೆ ಸ್ತ್ರೀಯರು ಶಿಕ್ಷಣ, ಆರ್ಥಿಕ ಸ್ವಾತಂತ್ರ್ಯ, ಉದ್ಯೋಗಗಳ ಅವಕಾಶಗಳಿಗಾಗಿ ಹೋರಾಡುತ್ತಿದ್ದರೆ ಅವರನ್ನು ವಿವಾಹದ ಬಂಧನದೊಳಗೆ ರುತ್ತೆ ಬಂಧಿಸುವ ಶಿಕ್ಷಿತ ಪುರುಷವರ್ಗ ಮತ್ತೊಂದೆಡೆ ಕೆಲಸ ಮಾಡುತ್ತಿತ್ತು. ಗೋ.ಮಾ. ಚಿಪಳೂಣಾಕರ ಎಂಬ ಪ್ರಾಧ್ಯಾಪಕರು 'ಸ್ತ್ರೀ ಶಿಕ್ಷಣಾಭಿಮಾನಿಗಳಿಗೆ ಕೆಲ ಎಚ್ಚರಿಕೆಗಳು' (ಜಯಕರ್ನಾಟಕ, ನವೆಂಬರ್ ೧೯೨೮, ಸಂಪುಟ-೨, ಸಂಪುಟ-೭, ಪುಟ ಸಂಖ್ಯೆ-೧೪೩) ಎಂಬ ಬರಹದಲ್ಲಿ ಸ್ತ್ರೀಯರಿಗೆ ವಿವಾಹ ಮತ್ತು ಉದ್ಯೋಗ ಎಂಬ ಆಯ್ಕೆಯನ್ನು ಇಡುತ್ತಾರೆ. ಅಂತೆಯೇ ಸ್ವದೇಶಾಭಿಮಾನಿ ಪತ್ರಿಕೆಯು ಆಧುನಿಕ ಸ್ತ್ರೀಯರ ಸಮಸ್ಯೆಗಳು ಮದುವೆಯೋ ಅಥವಾ ಉದ್ಯೋಗವೋ' ಎಂಬ ದ್ವಂದ್ವವನ್ನು ಸೃಷ್ಟಿ ಮಾಡಿ ಸ್ತ್ರೀಯನ್ನು ಮತ್ತೆ ವಿವಾಹ ಚೌಕಟ್ಟಿನೊಳಗೆ ಬಂಧಿಸಲು ಶ್ರಮಿಸಿದೆ. ಗೋ.ಮಾ.ಚಿಪಳೂಣಕ ಅವರು “ಬಾಳ್ವೆಯ ಬಲು ಬಿಗಿಯಾದುದರಿಂದ ಸ್ತ್ರೀಯರೂ ಶಿಕ್ಷಣ ಸಂಪಾದಿಸಿ ನಾಲ್ಕು ದುಡ್ಡು ದೊರಕಿಸಿದರೆ ಒಳಿತು ಎಂದು ಎನಿಸಲಾರಂಭಿಸಿದೆ. ಯುರೋಪಿನ ಸ್ತ್ರೀಯರು ಪುರುಷರಂತೆ ಎಲ್ಲ ಬಗೆಯಿಂದಲೂ ಆರ್ಥಿಕ ಸ್ವಾತಂತ್ರ್ಯವನ್ನು ದೊರಕಿಸಿದ್ದು ಅದರಿಂದ ಅವರ ಸ್ಥಿತಿಯ ವಿಶೇಷ ಸುಧಾರಿಸಿರುವುದೆಂದು ಕಂಡುಬರುವುದಿಲ್ಲ. ಗಿರಣಿ ಕಚೇರಿ ಮೊದಲಾದ ಗಂಡುಗೆಲಸಗಳಲ್ಲಿ ಹೆಣ್ಣು ಮಕ್ಕಳೂ ಸೇರಿಕೊಂಡರೆ ಅದರಿಂದ ಅವರ ಮೈಮನಗಳ ಮೇಲೆ ದುಷ್ಪರಿಣಾಮಗಳು ಆಗದೆ ಇರಲಾರವು. ಯುರೋಪದಲ್ಲಿ ಸ್ತ್ರೀಯರ ಆರ್ಥಿಕ ಸ್ಥಿತಿಯು ಅವರ ನೈತಿಕ ಅಧಃಪತನಕ್ಕೆ ಕಾರಣವಾಗಿದೆಯೆಂದೂ, ಮಾತೃಪದಕ್ಕೆ ಅನರ್ಹರನ್ನು ಮಾಡುವುದೆಂದು, ಆರ್ಥಿಕ ಸ್ವಾತಂತ್ರ್ಯದ ವಿಚಾರದಲ್ಲಿ ಪುರುಷರ ಅನುಕರಣವನ್ನು ಮಾಡಲಾಗದೆಂದೂ, ಮನೆಕೆಲಸಗಳನ್ನು 'ಕಾಟೇಜ್ ಇಂಡಸ್ಟ್ರಿ' (ಜಯಕರ್ನಾಟಕ, ನವೆಂಬರ್ ೧೯೨೮, ಸಂಪುಟ-೨, ಸಂಪುಟ-೭, ಪುಟ ಸಂಖ್ಯೆ-೧೪೩.) ಮಾಡಿ ಶೀಲ ಸಂರಕ್ಷಿಸಿಕೊಳ್ಳಲು ಎಚ್ಚರಿಸುತ್ತಾರೆ. “ಅವಿವಾಹಿತರಾಗಿರುವ ಸ್ತ್ರೀಯರ ನೌಕರಿಯು ಅವರಿಗೆ ವಿವಾಹೋನ್ಮುಖರಾಗಿ ಮಾಡದೆ ವಿವಾಹ ಪರಾಙ್ಮುಖರನ್ನಾಗಿ ಮಾಡುವುದು. ಒಂದು ವೇಳೆ ಇಂತಹದು ಮದುವೆ ಮಾಡಿಕೊಂಡರೂ ಅವರು ಗಂಡನ ಮನೆ ಮುರಿಯಲಿಕ್ಕೆ - ವಿಭಕ್ತ ಕುಟುಂಬಿಯರನ್ನಾಗಿ ಮಾಡಲಿಕ್ಕೆ ಕಾರಣರಾಗುತ್ತಾರೆ” (ಜಯಕರ್ನಾಟಕ, ನವೆಂಬರ್ ೧೯೨೮, ಸಂಪುಟ- ೨, ಸಂಪುಟ-೭, ಪುಟ ಸಂಖ್ಯೆ ೧೪೩.) ಎಂದು ಚಿಪಳೂಣಾಕರ ಅವರು ೧೯೨೮ರಲ್ಲಿ ಬರೆಯುತ್ತಾರೆ”. ಗೋ.ಮಾ.ಚಿಪಳೂಣಾಕರ ಅವರು ಕರ್ವೆಯವರ ಮಹಿಳಾ ವಿದ್ಯಾಲಯದ ಅಧ್ಯಾಪಕರು, ಅಮೇರಿಕೆಯಲ್ಲಿ ಅಧ್ಯಯನ ಮಾಡಿದವರು ಮತ್ತು ಹೆಣ್ಣಿನ ಶಾರೀರಿಕ ಮಾನಸಿಕ ಸ್ಥಿತಿಗತಿಗಳ ಬಗ್ಗೆ ಅಭ್ಯಾಸ ಮಾಡಿದವರು. ಇಂತಹವರ ಚಿಂತನೆಗಳೇ ಹೆಣ್ಣು-ಗಂಡುಗಳನ್ನು ಸಮನಾಗಿ ಕಾಣದೇ ಒಡೆದು ನೋಡುತ್ತಿವೆ.

ಉನ್ನತ ಶಿಕ್ಷಣ ಪಡೆದ ಅಧ್ಯಾಪಕನ ಚಿಂತನೆಯೇ ಹೀಗಾದರೆ ಸಾಮಾನ್ಯ ಮನುಷ್ಯನ ಪಾಡೇನು? ಹೆಣ್ಣನ್ನು ಪುರುಷ ಪ್ರಧಾನ ಸಮಾಜದಲ್ಲಿ ತನ್ನಿಂದಾದಷ್ಟು



ಗೃಹ ಸಂಕೋಲೆಯ ಬಂಧನದಲ್ಲಿ ಬಂಧಿಸಲು ಬುದ್ಧಿವಂತರ ಗುಂಪೊಂದು ಸಂಚು ಹೂಡುತ್ತಿದ್ದುದು ಇಲ್ಲಿ ಧ್ವನಿತವಾಗಿದೆ. ಮದುವೆ ಮತ್ತು ನೌಕರಿಗಳ ಪರಿಣಾಮವು ಪರಸ್ಪರ ವಿರುದ್ಧವಾಗಿದೆ. ನೌಕರಿ ಮಾಡುವ ತೀರ ಸ್ವಲ್ಪ ಸ್ತ್ರೀಯರು ಮದುವೆಯಾಗುವರು. ಮದುವೆಯಾದ ತೀರ ಸ್ವಲ್ಪ ಹೆಂಗಸರೇ ನೌಕರಿ ಮಾಡುವರು. ನೌಕರಿ ಮಾಡಬೇಕೆಂಬ ಹುಡುಗಿಯರಿಗೆ ೨೫ ವರ್ಷದವರೆಗೆ ಕಲಿಸಬೇಕಾಗುವುದು. ವಯಸ್ಸು ಹೆಚ್ಚಾದಂತೆ ಅವರಲ್ಲಿ ವಿವಾಹದ ಯೋಗ್ಯತೆಯೂ ಸಂತತಿ ಧಾರಣ ಶಕ್ತಿಯೂ ಕಡಿಮೆಯಾಗುವುದು. ಹೆಚ್ಚಿನ ಶಿಕ್ಷಣ ಪಡೆದ ಹೆಂಗಸರು ತಮಗಿಂತ ಕಡಿಮೆ ಕಲಿತವನೊಡನೆ ಮದುವೆಯಾಗಿ ಸುಖದಿಂದ ಸಂಸಾರ ಮಾಡಿದವರು ಬಹಳೇ ಸ್ವಲ್ಪ. ಹೀಗೆ ಮಾಡುವುದು ಹೆಂಗಸರಿಗೆ ಸ್ವಲ್ಪ ಬಿಗಿಯೆನಿಸುತ್ತಿರಬೇಕು ಅಥವಾ ತಮಗಿಂತ ಹೆಚ್ಚಿಗೆ ಕಲಿತ ಹೆಣ್ಣಿನೊಡನೆ ಮದುವೆ ಮಾಡಿಕೊಳ್ಳುವ ಗಂಡಸರಾದರೂ ಕಡಿಮೆಯಿರಬೇಕು. ಒಟ್ಟಿನಲ್ಲಿ ಅವಿವಾಹಿತರಾಗಿರುವ ಸ್ತ್ರೀಯರ ನೌಕರಿಯು ಅವರಿಗೆ ವಿವಾಹೋನ್ಮುಖರನ್ನಾಗಿ ಮಾಡದೆ ವಿವಾಹ ಪರಾಙುಖರನ್ನಾಗಿ ಮಾಡುವುದು". ಹೀಗೆ ಮೂರು ಆಯ್ಕೆಗಳನ್ನು ಇಟ್ಟಿದ್ದರು: ೧. ಶಿಕ್ಷಣ ೨. ವಿವಾಹ ೩. ಉದ್ಯೋಗ, ಈ ಮೂರರಲ್ಲಿ ಒಂದನ್ನು ಆಯ್ದುಕೊಳ್ಳಬೇಕಿತ್ತು. ಅಂದರೆ ವಿವಾಹವೆಂಬುದು ಕಡ್ಡಾಯವಾಗಿದ್ದ ಸಂದರ್ಭದಲ್ಲಿ ಶಿಕ್ಷಣ - ಉದ್ಯೋಗ ನೆನಗುದಿಗೆ ಸರಿಯುತ್ತಿದ್ದವು. ಆದರೆ ಈ ಕ್ರಮ ಪುರುಷರಿಗೆ ಇರದಿದ್ದುದನ್ನು ಗಮನಿಸಿದರೆ ತಾವೇ ನಿರ್ಮಿಸಿಕೊಂಡ ಸ್ವಚ್ಛಂದ ಕಾನೂನುಗಳೊಳಗೆ ತಾವು ಮಾತ್ರ ಸ್ವತಂತ್ರವಾಗಿ ಬದುಕುತ್ತಾ ಹೆಣ್ಣಿಗೆ ವಿವಾಹ, ಕುಟುಂಬ, ಸಂತಾನೋತ್ಪತ್ತಿ, ಪಾಲನೆ, ಪೋಷಣೆಗಳ ಜವಾಬ್ದಾರಿಗಳನ್ನು ಹೇರಿ ನಾಲ್ಕು ಗೋಡೆಯೊಳಗೆ ಬಂಧಿಸಿಡುತ್ತಿದ್ದು, ಅವಳನ್ನು ಶಾಶ್ವತ ನಂಬಿಕಸ್ಥ ಕೆಲಸದಾಳಾಗಿಯೇ (Trustworthy Permanent Servent) ಯಾವುದೇ ಭತ್ಯೆಗಳಿಲ್ಲದೆ ದುಡಿಸಿಕೊಳ್ಳುತ್ತಿದ್ದ ಸಂಚು ಬಯಲಾಗುತ್ತದೆ. ಈ ಸ್ಥಿತಿ ಪ್ರಸ್ತುತದಲ್ಲೂ ಕೂಡ ಹೆಚ್ಚಿಗೆಯೇನು ಬದಲಾಯಿಸಿಲ್ಲ. ಅವಳ ಚಾಕರಿಗೆ ಊಟವೇ ಭತ್ಯೆಯೆನ್ನುವ ಸ್ವಾರ್ಥ ಅನಾಗರಿಕ ಪುರುಷವರ್ಗ ಜೀವಂತವಾಗಿಯೇ ಇದೆ.

ಆಧುನಿಕತೆಯಲ್ಲಿ ಹೆಣ್ಣಿನ ಆಯ್ಕೆ ವಿವಾಹವೋ ಅಥವಾ ಉದ್ಯೋಗವೋ ಎಂಬ ಎರಡು ಆಯ್ಕೆಗಳಲ್ಲಿ ಒಂದನ್ನು ಹೆಣ್ಣಿಗೆ ಆರೋಪಿಸಲಾಗುವ ಈ ಲೇಖನದಲ್ಲಿ "ಭಾರತದಂತೆ ಈಗಿನ ಇಂಗ್ಲೆಂಡಿನ ಸ್ತ್ರೀಯರೂ ಸ್ವಂತ ದುಡಿಮೆಯ 'ಸಂಕಷ್ಟದಿಂದ ಪಾರಾಗಲೋಸುಗವೇ ಹೆಚ್ಚಾಗಿ ವಿವಾಹವನ್ನು ಮಾಡಿಕೊಳ್ಳುವ ವಿಧಾನವೇ ಅಲ್ಲಿ ಹೆಚ್ಚುತ್ತಿದೆ. ಸ್ತ್ರೀಯರಿಗೆ ಗೃಹಿಣಿತ್ವವೇ ಯೋಗ್ಯವಾದುದೆಂಬ ಭಾವನೆಯು ಅಲ್ಲಿ ಹೆಚ್ಚುತ್ತಿದೆ. ಸ್ವಲ್ಪ ಸಮಯದ ತನಕ

ಸ್ತ್ರೀಯರು ಯಾವುದಾದರೊಂದು ಉದ್ಯೋಗ ಮಾಡಿ ಸಂಪಾದನೆ ಮಾಡಲು ಆಕರ್ಷಿತರಾಗುವರಾದರೂ ಹೆಚ್ಚಿನವರು ಪುರುಷರಂತೆ ಎಲ್ಲಾ ತರದ ಉದ್ಯೋಗಗಳಲ್ಲೂ ಯಶಸ್ವಿಯಾಗಿ ಸಂಪಾದನೆಗೆಯ್ಯುವುದು ಕಷ್ಟತರವೆಂದು ಕಂಡುಕೊಂಡಿರುವರು" (ಸ್ವದೇಶಾಭಿಮಾನಿ,ಅಕ್ಟೋಬರ್ ೧೯೪೨, ಸಂಪುಟ-೪೧, ಸಂಚಿಕೆ-೪೨, ಪುಟ ಸಂಖ್ಯೆ-೧) ವಿದೇಶೀಯ ಮಹಿಳೆ ಮತ್ತು ಆ ಸಮಾಜಕ್ಕೆ ಭಾರತೀಯರನ್ನು ಹೋಲಿಸಿ, ಅಲ್ಲಿನ Positive ಬದುಕನ್ನು ಈ ನೆಲದಲ್ಲಿ Negative ಆಗಿಯೇ ಚಿತ್ರಿಸುತ್ತಾ ಅವರನ್ನು ಅನುಸರಿಸದಂತೆ ದಾರಿತಪ್ಪಿಸುವ ಸನಾತನಿಗಳು, ಆ



ಸಂದರ್ಭದಲ್ಲಿ ಈ ಪುರುಷವರ್ಗ ಅನುಸರಿಸುತ್ತಿದ್ದುದು, ದುಂಬಾಲು ಬಿದ್ದದ್ದು ವಿದೇಶೀಯ ಸಂಸ್ಕೃತಿಯನ್ನೇ ಎಂಬುದು ವಿಪರ್ಯಾಸ. ಮಹಿಳೆಯರು ಆರ್ಥಿಕ ಸ್ವಾತಂತ್ರ್ಯ ಪಡೆಯಲು ಬಿಡದಂತೆ ಸಾಂಪ್ರದಾಯಿಕ ಪುರುಷವರ್ಗ ಸದಾಕಾಲ ಕಟ್ಟೆಚ್ಚರದಿಂದ ಹಿಂದಕ್ಕೆಳೆಯುತ್ತಿದ್ದದ್ದು ವಾಸ್ತವಿಕಾಂಶ. ಇದನ್ನು ಸ್ತ್ರೀ ಶಿಕ್ಷಣದ ಸಂದರ್ಭದಲ್ಲೂ ಈಗಾಗಲೇ ಚರ್ಚಿಸಿದ್ದೇನೆ. ಅವಳಿಗೆ ಎಂಥ ಶಿಕ್ಷಣ ಬೇಕೆಂಬ ವಾಗ್ವಾದದಲ್ಲಿ ಗೃಹಕೆಲಸಗಳ, ಧಾರ್ಮಿಕತೆಗೆ ಪೂರಕವಾದ ಶಿಕ್ಷಣ ಕೊಡಲು ಮುಂದಾದರೋ ಹೊರತು ವೃತ್ತಿ, ವ್ಯವಹಾರ ಕಲಿಸುವ ಶಿಕ್ಷಣವನ್ನಲ್ಲ. ತನಗೆ ಪೂರಕವಾದ ಮಾದರಿಯಲ್ಲೇ ಸ್ತ್ರೀಯನ್ನು ಅಚ್ಚುಹಾಕಿಸಿಕೊಳ್ಳಲು ಶ್ರಮಿಸುತ್ತಿದ್ದರು.

ಇಂಥ ಒಳಸಂಚು, ಪ್ರತಿಬಂಧ, ವಿರೋಧಗಳ ನಡುವೆಯೇ ಸ್ತ್ರೀಯರು ಆರ್ಥಿಕ ಸ್ವಾತಂತ್ರ್ಯ ಹಾಗೂ ಉದ್ಯೋಗ ಪಡೆಯುವ ಗೀಳನ್ನು ಅನಿವಾರ್ಯಗೊಳಿಸಿದ ಸ್ಥಿತಿ ಮಹಿಳಾ ಪ್ರಶ್ನೆಯ ರಾಷ್ಟ್ರೀಯವಾದಿ ಚಳವಳಿಯಲ್ಲಿಯೇ ಅಡಕವಾಗಿದೆ. ಅಂದು ಸ್ವಾತಂತ್ರ್ಯದ ಹಲವು ವಿಭಿನ್ನ ಸಮರಗಳಲ್ಲಿ ಕೈದಿಗಳಾದ ಸ್ತ್ರೀ ಕೈದಿಗಳ ರಕ್ಷಣೆಗೆ ಸ್ತ್ರೀಯನ್ನೇ ಪೋಲೀಸರಾಗಿ ನಿಯಮಿಸಿಕೊಳ್ಳುವ ರಕ್ಷಣಾ ಒತ್ತಡ ಸೃಷ್ಟಿಯಾದದ್ದು ಸ್ತ್ರೀಯರಿಗೆ ವರವೇ ಆಯಿತು. ಹಾಗಾಗಿ ಕಾನಪುರ ಮದರಾಸು ಮುಂತಾದ ಕಡೆಗಳಲ್ಲಿ ಸ್ತ್ರೀಯರನ್ನು ಪೊಲೀಸು ವೃತ್ತಿಗೆ ಸೇರ್ಪಡೆಗೊಳಿಸಿ ಕೊಳ್ಳಲಾಯಿತು. ಇದನ್ನು 'ಕಾನಾಪುರದಲ್ಲಿ ಸ್ತ್ರೀಯರು ಪೋಲೀಸರಾದರು' ಎಂಬ ಲೇಖನವು "ಭಾರತದ ಆಧುನಿಕ ಇತಿಹಾಸದಲ್ಲಿ ಸ್ತ್ರೀಯರು ಪೊಲೀಸರಾಗಿ ಕೆಲಸಕ್ಕೆ ಸೇರಿದ್ದು ಇದು ಮೊದಲನೆಯ ಬಾರಿ ಆಗಿದೆ. ಆದ್ದರಿಂದ ಈ ಘಟನೆಯು ಸ್ವರ್ಣಾಕ್ಷರಗಳಲ್ಲಿ ಬರೆದಿಡಲಿಕ್ಕೆ ಯೋಗ್ಯವಾಗಿದೆ" (ಅದೇ, ಜೂನ್ ೧೯೩೮, ಸಂಚಿಕೆ ೨೪, ಸಂಪುಟ ೩೨, ಪುಟ ಸಂಖ್ಯೆ-೧೦) ಎಂದು ಹೆಮ್ಮೆ ಪಡುತ್ತದೆ. ಅಂದು ಇಡೀ ದೇಶದ ದೃಷ್ಟಿ, ಈ ಕಾನಾಪುರ ಸ್ತ್ರೀ ಪೋಲೀಸರನ್ನು ವಿಶೇಷವಾಗಿ ನೋಡುತ್ತಿತ್ತು. ಇದು ಆ ಕಾಲಘಟ್ಟಕ್ಕೆ ಸ್ತ್ರೀ ಆರ್ಥಿಕ ಸ್ವಾವಲಂಬನೆಯ ಕ್ರಾಂತಿಯೇ ಆಗಿದೆ.

# ಜಾಹೀರಾತು ಒಂದು ಭ್ರಮೆ ಮತ್ತು ವಾಸ್ತವ

- ಚಿ.ಆರ್. ನಾಗರತ್ನ

ವಸ್ತು, ವಿಷಯ, ಸಂಶೋಧನೆ, ಮಾಹಿತಿಗಳು ಹೆಚ್ಚು ಜನರಿಗೆ ತಿಳಿಯಬೇಕಾದರೆ ಒಂದೇ ಮಾರ್ಗ, ಅದೇ ಜಾಹೀರಾತಿನ ಮೂಲಕ. ಮೊದಲು ನಮ್ಮೂರಿನ ಟೆಂಟಿನಲ್ಲಿ ಹೊಸ ಚಲನಚಿತ್ರವೊಂದು ಬಂದರೆ ಚಿತ್ರದಲ್ಲಿ, ನಟಿಸಿರುವ ನಾಯಕ, ನಾಯಕಿ, ಪ್ರಮುಖ ಪಾತ್ರಧಾರಿಗಳ ಒಂದು ದೊಡ್ಡ ಚಿತ್ರವನ್ನು ಫಲಕದಂತೆ ಕುದುರೆಗಾಡಿಯ ಎರಡೂ ಹೊರಮೈಮೇಲೆ ನೇತುಹಾಕಿಕೊಂಡು ಒಬ್ಬ ಮನುಷ್ಯ ಗಾಡಿಯೊಳಗೆ ಕುಳಿತು ಧ್ವನಿವರ್ಧಕದ ಮೂಲಕ ಚಲನಚಿತ್ರದ ಹೆಸರನ್ನು ಹೇಳುತ್ತಾ "ಇಂದಿನಿಂದಲೇ ಪ್ರಾರಂಭ, ನೋಡಿರಿ, ಅವಕಾಶ ಕಳೆದುಕೊಳ್ಳಬೇಡಿ" ಎಂದು ಗಂಟಲುಹರಿಯುವಂತೆ ಕೂಗುತ್ತ ಊರಿನ ಎಲ್ಲ ಬೀದಿಗಳಲ್ಲಿ ಸುತ್ತುಹಾಕುತ್ತಿದ್ದರು. ಹುಡುಗರು ಗಾಡಿಯ ಹಿಂದೆ ಗುಂಪಾಗಿ ಓಡುತ್ತ ತಮ್ಮ ನೆಚ್ಚಿನ ನಾಯಕ, ನಾಯಕಿಯರ ಮುಖದರ್ಶನ ಮಾಡಲು ಮುಗಿಬೀಳುತ್ತಿದ್ದರು. ಆಗ ಗಾಡಿಯೊಳಗೆ ಕುಳಿತಿದ್ದವನು ಹತ್ತಾರು ಚೀಟಿಗಳನ್ನು ಹುಡುಗರತ್ತ ಎಸೆಯುತ್ತಿದ್ದನು. ಅವುಗಳು ಬಣ್ಣದ ಕಾಗದದಲ್ಲಿ ಚಲನಚಿತ್ರದ ಬಗ್ಗೆ ಮುದ್ರಿಸಿರುವ ಪ್ರಚಾರದ ಪತ್ರಗಳು, ಹತ್ತಾರು ತಿಂಗಳಿಗೊಮ್ಮೆ 'ಗಣೇಶ' ಮಾರ್ಕಿನ ಬೀಡಿ ಕಂಪನಿಯವರು ಇದೇ ರೀತಿ ಪ್ರಚಾರಕ್ಕೆ ನಮ್ಮೂರಿಗೆ ಬರುತ್ತಿದ್ದುದುಂಟು. ಆಗ ಹುಡುಗರ ಜೊತೆಯಲ್ಲಿ ದೊಡ್ಡವರೂ ವ್ಯಾನಿನ ಹಿಂದೆ ಓಡುತ್ತ ಅವರು ಎಸೆಯುತ್ತಿದ್ದ ಸ್ಯಾಂಪಲ್ ಬೀಡಿಕಟ್ಟುಗಳನ್ನು ಆಯ್ದುಕೊಳ್ಳುತ್ತಿದ್ದರು. ಇದು ಬಾಲ್ಯಕಾಲದಲ್ಲಿ ನೋಡಿದ್ದ ಜಾಹೀರಾತಿನ ಮಾದರಿ,

ದಿನಪತ್ರಿಕೆ, ವಾರಪತ್ರಿಕೆ, ಮಾಸಿಕಗಳಲ್ಲಿ ಹತ್ತಾರು ಮಾರಾಟಗಾರರು ತಮ್ಮ ವಸ್ತುಗಳ ಬಗ್ಗೆ ಬರೆದ ಜಾಹೀರಾತು ವಾಕ್ಯಗಳು ಮುದ್ರಿತವಾಗಿರುತ್ತವೆ. ಜಾಹೀರಾತಿನ ಪ್ರಭಾವ ಜನರ ಮೇಲೆ ಸಕಾರಾತ್ಮಕವಾಗಿ ಇರುತ್ತದೆ.. ಈಗ ಜಾಹೀರಾತು ಕಂಪನಿಗಳೇ ಮಾರುವವರ ಪರವಾಗಿ ಪ್ರಚಾರದ ಕೆಲಸ ವಹಿಸಿಕೊಳ್ಳುತ್ತಿವೆ. ಯಾವುದೇ ವಸ್ತುವಿನ ಬಗ್ಗೆ ಹೆಚ್ಚಾಗಿ ಪ್ರಚಾರವಾಗಬೇಕಾದರೆ ಆಕರ್ಷಣೀಯವಾಗಿ ಜಾಹೀರಾತನ್ನು ಈ ಕಂಪನಿಗಳು ರೂಪಿಸುತ್ತವೆ.

ವಾಣಿಜ್ಯ ಕ್ಷೇತ್ರದಲ್ಲಿ "ಮಾರ್ಕೆಟಿಂಗ್" ಎಂಬ ವಿಶೇಷ ವಿಷಯವನ್ನೇ ಆಯ್ಕೆಮಾಡಿಕೊಂಡು ಅಧ್ಯಯನ ಮಾಡಿ ಅದರಲ್ಲೇ ಪದವಿ ಪಡೆದುಕೊಳ್ಳುವವರಿದ್ದಾರೆ. ಈಗಂತೂ ಪ್ರಸಾರ ಮಾಧ್ಯಮಗಳು ತಂತ್ರಜ್ಞಾನದ ನೆರವಿನಿಂದ ವಿಶ್ವದಾದ್ಯಂತ ಪ್ರಬಲವಾದ ವ್ಯಾಪ್ತಿಯನ್ನು ಹೊಂದಿವೆ. ಹೀಗಾಗಿ ಅವುಗಳ ಮೂಲಕ ಜಾಹೀರಾತುಗಳು ಬರಿಯ ಪತ್ರಿಕೆಗಳಷ್ಟೇ ಅಲ್ಲ, ರೇಡಿಯೋ, ದೂರದರ್ಶನ, ಖಾಸಗಿ ಟಿ.ವಿ. ಚಾನಲ್ಗಳು, ಇಂಟರೆಟ್ ಸಂಪರ್ಕ, ಭಿತ್ತಿಪತ್ರಗಳು ಮುಂತಾದ ಹಲವಾರು ರೀತಿಯಲ್ಲಿ ಆವರಿಸಿಕೊಂಡಿವೆ.

ಈ ಜಾಹೀರಾತುಗಳು ಎಷ್ಟು ಶಕ್ತಿಶಾಲಿಯಾಗಿ ತಮ್ಮ ಕೆಲಸ ಮಾಡುತ್ತಿವೆ ಎಂಬುದಕ್ಕೆ ಪ್ರತ್ಯಕ್ಷ ನಿದರ್ಶನ ಎಲ್ಲರ ಮನೆಯಲ್ಲಿ ಕಾಣಬಹುದು. ಸಣ್ಣಕೂಸೊಂದು ಅಳುತ್ತಿರುವಾಗ ಟಿ.ವಿ.ಯಲ್ಲಿ ಪ್ರಸಾರವಾಗುತ್ತಿರುವ ಒಂದು ಸುಶ್ರಾವ್ಯವಾದ ಜಾಹೀರಾತಿನ ತುಣುಕನ್ನು ನೋಡಿ ಸುಮ್ಮನಾಗುತ್ತದೆ. ಏಕಚಿತ್ತದಿಂದ ಕೊನೆವರೆಗೆ ಅದರ ರಂಗುರಂಗಿನ ಚಿತ್ರವನ್ನು ಗಮನಿಸುತ್ತದೆ. ಆ ಹಾಡು, ಮಾತುಗಳನ್ನು ಆನಂದಿಸುತ್ತದೆ. ಇದಕ್ಕೆ ಕಾರಣ ಜಾಹೀರಾತುದಾರರು ಅಳವಡಿಸಿಕೊಂಡಿರುವ ತಾಂತ್ರಿಕ ಕೌಶಲ, ಪ್ರಚಾರಮಾಡುತ್ತಿರುವ ವಸ್ತುವಿನ ಬಗೆಗೆ ಬಣ್ಣನೆಯ ಮಾತುಗಳು ಹಾಡಿನ ರೂಪದಲ್ಲೋ, ಅಥವ ಒಂದು ದೃಶ್ಯಸಂಭಾಷಣೆಯ ರೂಪದಲ್ಲೂ ಆಕರ್ಷಕವಾಗಿ ಸಿದ್ಧಗೊಳಿಸಲ್ಪಟ್ಟಿರುತ್ತದೆ. ಅಲ್ಲದೆ ಇದು ದಿನದಲ್ಲಿ ಹಲವಾರು ಬಾರಿ ಮರುಪ್ರಸಾರ ಆಗುತ್ತಲೇ ಇರುತ್ತದೆ. ವಸ್ತು, ವಿಷಯ ಏನೇ ಇರಲಿ ಅದಕ್ಕೆ ಸೂಕ್ತವಾಗಿ ಜಾಹೀರಾತನ್ನು ವಿನ್ಯಾಸ ಮಾಡುವುದೇ ಪ್ರಚಾರ ಕಂಪನಿಗಳ ಲಾಭದಾಯಕ ಉದ್ಯಮವಾಗಿ ಬೆಳೆದಿದೆ. ಇಂಥಹ ನೂರಾರು ಸಂಸ್ಥೆಗಳು ಅಸ್ತಿತ್ವದಲ್ಲಿವೆ.

ಜಾಹೀರಾತುಗಳಲ್ಲಿ ವೈವಿಧ್ಯತೆಗಳಿರುತ್ತವೆ. ಶಿಶುಗಳ ಫೀಡಿಂಗ್ ಬಾಟಲ್, ಡೈಪರ್, ಪೌಡರ್, ಕ್ರೀಮ್ಗಳ ಜಾಹೀರಾತುಗಳು ಹತ್ತಾರು ಪ್ರಸಾರವಾಗುತ್ತಿರುತ್ತವೆ. ಹಳ್ಳಿಯಾಗಲಿ, ನಗರವಾಗಲಿ ಇವುಗಳ ಪ್ರಭಾವಕ್ಕೆ ಒಳಗಾಗದವರಿಲ್ಲ. ಇಂತಹ ವಸ್ತುಗಳನ್ನು ತಯಾರಿಸಿ ಒದಗಿಸುವ ಕಂಪನಿಗಳು ವಿಶ್ವದ ಎಲ್ಲ ದೇಶಗಳಲ್ಲಿ ಹರಡಿಕೊಂಡಿವೆ. ಇನ್ನು ಒಂದೇ ರೀತಿಯ ವಸ್ತುಗಳನ್ನು ತಯಾರಿಸಿ ಮಾರುವ ಹಲವಾರು ಸಂಸ್ಥೆಗಳಿರುತ್ತವೆ. ಅವುಗಳಲ್ಲಿ ಪೈಪೋಟಿ ನಡೆಯುತ್ತದೆ. ಗುಣವಿಶೇಷತೆಗಳನ್ನು ಹೇಳಿಕೊಂಡು ನಮ್ಮ ಸಾಮಗ್ರಿಗಳೇ ಇತರರದ್ದಕ್ಕಿಂತ ಉತ್ತಮ ಎಂದು ಜಾಹೀರಾತುಗಳ ಮೂಲಕ ಬೊಬ್ಬೆಹೊಡೆಯುತ್ತವೆ. ಇದರ ಪ್ರಭಾವಕ್ಕೆ ಒಳಗಾಗಿ ಹಿಂದಿನಿಂದ ಬಂದ ಕೆಲವು ಅಭ್ಯಾಸಗಳು ಈಗ ಮಾಯವಾಗಿವೆ. ಉದಾಹರಣೆಗೆ ತಲೆಸ್ನಾನಕ್ಕೆ ಬಳಸುತ್ತಿದ್ದ ಹರಳೆಣ್ಣೆ, ಸೀಗೆಕಾಯಿ ಮಾಯವಾಗಿ ಶಾಂಪೂಗಳು ಬಂದಿವೆ. ಕೂದಲನ್ನು ಓರಣವಾಗಿ ಇರಿಸಿ ಸೊಂಪಾಗಿ ಬೆಳೆಸಲು ಆಂಡ್ ಆಯಿಲ್, ವಿಧವಿಧವಾದ ಹೇರ್ ಆಯಿಲ್ಗಳು, ಚರ್ಮದ ಕಾಂತಿಯನ್ನು ರಕ್ಷಿಸಲು ಹತ್ತಾರು ಕ್ರೀಂಗಳು, ಫ್ರೆಶ್ ಆಗಿರಲು ಹತ್ತಾರು ಹೆಸರಿನ ಟಾಲ್ಕಂ ಪೌಡರ್, ಡಿಯೊಡೊರೆಂಟ್ಗಳು, ಸುಗಂಧದ್ರವ್ಯಗಳು, ಮೇಕಪ್ ಸಾಮಾನುಗಳು, ಸಾಲದ್ದಕ್ಕೆ ಸೌಂದರ್ಯ ವೃದ್ಧಿಗೆ ಬ್ಯೂಟಿಪಾರ್ಲರಗಳು ಎಲ್ಲ ಬೀದಿಗಳಲ್ಲಿ ತಲೆಯೆತ್ತಿವೆ. ಸ್ತ್ರೀ ಪುರುಷರಿಬ್ಬರಿಗೂ ಹಲವು ಆಯುರ್ವೇದಿಕ್ ಕರ್ಮಗಳು, ಮರ್ದನಗಳು ಲಭ್ಯವಾಗುತ್ತಿವೆ. ಹೇರಳವಾಗಿ ಹಣ ಖರ್ಚುಮಾಡಲು ತಯಾರಾಗಿದ್ದವರಿಗೆ ಹಿಂದಿನ ಕಾಲದಲ್ಲಿ ರಾಜಮಹಾರಾಜರುಗಳ ರಾಣಿವಾಸದವರಿಗೆ ದಾಸ ದಾಸಿಯರಿಂದ ದೊರೆಯುತ್ತಿದ್ದ ಎಲ್ಲ ಸೇವೆ, ಸೌಲಭ್ಯಗಳು ಈಗಲೂ ದೊರೆಯಬಲ್ಲವು. ಇವನ್ನೆಲ್ಲ ನಿಮಗೆ ತಿಳಿಸುವುದಕ್ಕೆ ತರಹೇವಾರಿ ಜಾಹೀರಾತು ನೋಡಿರಿ.

ಜಾಹೀರಾತುಗಳಲ್ಲಿ ತಿಂಡಿತಿನಿಸುಗಳ ಬಗ್ಗೆ ನೂರಾರು ಪ್ರಕಟಣೆಗಳು, ಅರಿಶಿನಪುಡಿಯಿಂದ ಪ್ರಾರಂಭವಾಗಿ ಹಲವಾರು ಸಿದ್ಧ ಮಸಾಲೆಗಳು, ಇಡ್ಲಿ, ದೋಸೆ, ಉದ್ದಿನವಡೆ, ಮಾಡುವ ಹಿಟ್ಟುಗಳು, ಪಲಾವ್, ಬಿರಿಯಾನಿ, ಮಟನ್, ಚಿಕನ್, ಫಿಷ್ ತಯಾರಿಕೆಗೆ ವಿಶೇಷ ಪುಡಿಗಳು, ಉಪ್ಪಿನಕಾಯಿ, ತುಪ್ಪ, ಮುಂತಾದ ಪರಿಕರಗಳ ಬಗ್ಗೆ



ಟಿ.ವಿ.ಚಾನಲ್ಗಳಲ್ಲಿ ದಿನವಿಡೀ ಪ್ರಸಾರವಾಗುತ್ತಲೇ ಇರುತ್ತವೆ. ಇವುಗಳನ್ನು ಉಪಯೋಗಿಸುವ ಬಗ್ಗೆ ಅಡಿಗೆಯ ಕಾರ್ಯಕ್ರಮಗಳೂ ಪ್ರಸಾರವಾಗುತ್ತಲೇ ಇರುತ್ತವೆ.

ಒಂದು ಮಾದರಿ ಜಾಹೀರಾತಿನಲ್ಲಿ ಬೆಳಗಿನ ಉಪಾಹಾರದ ಸಮಯದಲ್ಲಿ ಗೃಹಿಣಿ ಮನೆಯ ಸದಸ್ಯರನ್ನು ಕ್ಲಾಸ್‌ಗೆ ಏನು ಬೇಕೆಂದು ಕೇಳುವಳು. ಹಿರಿಯರು, ಪತಿ, ಮಗ ಬೇರೆಬೇರೆಯ ತಿಂಡಿಗಳನ್ನು ಮಾಡಲು ಕೇಳುತ್ತಾರೆ. ಇಡ್ಲಿ, ದೋಸೆ, ಉಪ್ಪಿಟ್ಟು, ಪೂರಿ ಹೀಗೆ. ಆಕೆ ಕೂಡಲೇ ಅಡಿಗೆಮನೆ ಷೆಲ್ಸ್ನಿಂದ ನಾಲ್ಕು ಪಾಕೆಟ್ಗಳನ್ನು ತೆಗೆಯುತ್ತಾಳೆ. ಅವೆಲ್ಲ ಪ್ರಸಿದ್ಧ ಕಂಪನಿಯ ಬ್ರ್ಯಾಂಡ್ಗಳು. ಕೆಲವೇ ನಿಮಿಷದಲ್ಲಿ ನಾಲ್ಕೂ ತಿಂಡಿಗಳನ್ನು ತಯಾರಿಸಿ ಬಡಿಸುತ್ತಾಳೆ. ಎಲ್ಲರೂ ಖುಷಿಯಿಂದ ಸವಿಯುತ್ತಾರೆ. ನೋಡುವವರಿಗೆ ಭ್ರಮೆ ಹುಟ್ಟಿಸುತ್ತದೆ 'ಎಷ್ಟು ಸುಲಭ' ಎಂದು.

ಇನ್ನೊಂದು ಜಾಹೀರಾತಿನಲ್ಲಿ ದೇಹವನ್ನು ದಪ್ಪವಾಗಿಸಲು, ಮತ್ತು ದಪ್ಪವಾದ ದೇಹವನ್ನು ಕೃಶವಾಗಿಸಲು ಒಂದು ಕಂಪನಿಯ ಸಿದ್ಧ ಪೌಡರಗಳ ಬಗ್ಗೆ ತಿಳಿಸುವುದು ಹೀಗೆ, ಸ್ಥೂಲಕಾಯದ ಒಬ್ಬ ಹೆಣ್ಣುಮಗಳು 'ಸ್ಲಿಮ್' ಪ್ರಾಡಕ್ಟನ್ನು ಒಂದು ತಿಂಗಳು ಉಪಯೋಗಿಸಿ ಹತ್ತು ಕೆ.ಜಿ. ತೂಕ ಕಡಿಮೆ ಮಾಡಿಕೊಂಡು ಅಂದವಾಗಿ ಕಾಣುತ್ತಾಳೆ. ಇನ್ನೊಬ್ಬಳು ಅತಿ ತೆಳ್ಳಗಿರುವವಳನ್ನು ನೋಡಲು ಬಂದ ಯಾವ ವರನೂ ಒಪ್ಪುವುದಿಲ್ಲ. ಹೀಗಾಗಿ ಮದುವೆ ಆಗುವುದು ಕಷ್ಟವಾಗಿತ್ತು. ಆಕೆ 'ಗೈನ್' ಪ್ರಾಡಕ್ಟನ್ನು ತಿಂದು ವರ್ಷದೊಳಗೆ ದುಂಡುದುಂಡಾಗಿ ಆಕರ್ಷಕವಾಗಿ ಕಾಣಿಸಿ ಅವಳ ಮದುವೆ ಸುಲಭವಾಗಿ ನೆರವೇರುತ್ತದೆ.

ಜಾಹೀರಾತುಗಳ ಪರಿಣಾಮಗಳನ್ನು ಪರೀಕ್ಷೆ ಮಾಡಿ ಒಪ್ಪುವುದೂ ಬಿಡುವುದೂ ಗ್ರಾಹಕರ ವಿವೇಚನೆಗೆ ಬಿಟ್ಟದ್ದು. ಆದರೆ ಅದರ ತಂತ್ರಗಾರಿಕೆ ಮೆಚ್ಚುವಂತದ್ದು. ತಮ್ಸಪ್' ಎಂಬ ತಂಪು ಪಾನೀಯದ ಜಾಹೀರಾತಿನಲ್ಲಿ ಪ್ರಸಿದ್ಧ ಸಿನಿಮಾ ನಟನೊಬ್ಬ ಅದನ್ನು 'ತೂಫಾನ್' ಎಂದು ಕರೆದು ಹೇಲಿಕಾಪ್ಟರಿಂದ ಬಂದು ಖರೀದಿಸಿ ಅಪ್ಯಾಯಮಾನವಾಗಿ ಕುಡಿಯುತ್ತಾನೆ, ಅತ್ಯಂತ ಕೊಳಕಾದ ಬಿಳಿಬಟ್ಟೆಯೊಂದನ್ನು ಮಹಿಳೆಯೊಬ್ಬಳು ಒಂದು ಬ್ರಾಂಡಿನ ವಾಷಿಂಗ್ ಪೌಡರಿನಿಂದ ಒಂದೇ ಬಾರಿಗೆ ಕೊಕ್ಕರೆ ಗರಿಯಂತೆ ಶುಭ್ರವಾಗಿಸುತ್ತಾಳೆ., ಮಂಡಿ ನೋವಿನಿಂದ ನರಳುತ್ತಿರುವ ವೃದ್ಧರೊಬ್ಬರು 'ಮಿರಾಕುಲ್' ಎಣ್ಣೆ ತಿಕ್ಕಿಕೊಂಡು ವಾಕಿಂಗ್ ಹೋಗುವಷ್ಟು

ಸ್ವಸ್ಥವಾಗಿಬಿಡುತ್ತಾರೆ. ಸಿನಿಮಾನಟನೊಬ್ಬ ತನ್ನ ಬಿಳಿಕೂದಲಿಗೆ ಒಂದು ಕಪ್ಪು ಬಣ್ಣದ ಡೈ ಬಳಿದುಕೊಂಡು ಹತ್ತು ವರ್ಷ ಚಿಕ್ಕವನಾಗಿ ಕಾಣುತ್ತಾನೆ. ಇವು ಕೆಲವು ನಮೂನೆಗಳು ಮಾತ್ರ.

ಜಾಗತೀಕರಣದ ಫಲವಾಗಿ ವಿಶ್ವದ ಯಾವುದೇ ಮೂಲೆಯಿಂದ ನಿಮ್ಮ ಮನೆ ಬಾಗಿಲಿಗೆ ಬೇಕಾದ ವಸ್ತುಗಳನ್ನು ತಂದುಕೊಡುವ ಸಂಸ್ಥೆಗಳು ಅಸ್ಥಿತ್ವಕ್ಕೆ ಬಂದಿವೆ. 'ಅಮೆಜಾನ್' 'ಶಾಪಬ್ಲೂಸ್' 'ಫ್ಲಿಪ್ಕಾರ್ಟ್' 'ಸ್ನಾಪಡೀಲ್ ಮೊದಲಾದುವು. ಇಲ್ಲಿ ನಿಮ್ಮನ್ನು ಆಕರ್ಷಿಸಲು ಸಾವಿರಾರು ವಸ್ತುಗಳ ಆಯ್ಕೆ ನಿಮಗೆ ದೊರೆಯುತ್ತದೆ. 'ಪಾದರಕ್ಷೆ'ಯಿಂದ ಹಿಡಿದು 'ಡೈಮಂಡ್ನೆಕ್ಲಸ್'ವರೆಗೆ ನಂಬಲು ಅಸದಳವಾದ ಬೆಲೆಗೆ ರಿಯಾಯಿತಿಯಲ್ಲಿ ಬೆರಳ ತುದಿಯಲ್ಲಿ ಆರ್ಡರ್ ಮಾಡಿ ತರಿಸಿಕೊಳ್ಳಬಹುದು. ನಿಮಗೆ ತೃಪ್ತಿಯಾಗದಿದ್ದರೆ ನಿಗದಿತ ಅವಧಿಯೊಳಗೆ ಹಿಂದಿರುಗಿಸಿ ಬೇರೆ ಪದಾರ್ಥವನ್ನು ತರಿಸಿಕೊಳ್ಳಬಹುದು. ವಸ್ತುಗಳು ನಿಮ್ಮ ಮನೆಗೆ ವಿತರಣೆಯಾದ ಮೇಲೆ ಹಣ ಪಾವತಿಸುವ



ಸೌಲಭ್ಯವಿರುತ್ತದೆ. ಕೊಳ್ಳುಬಾಕ ಸಂಸ್ಕೃತಿಯ ಈ ಕಾಲದಲ್ಲಿ ಜಾಹೀರಾತುಗಳ ಮೂಲಕ ಮಾರಾಟ ಮಾಡುವವರಿಗೆ ಹಬ್ಬವೋ ಹಬ್ಬ. ಇದರಿಂದ ಗ್ರಾಹಕರಿಗೆ ಸಿಕ್ಕಿದ್ದೆಲ್ಲ ಅತ್ಯುತ್ಕೃಷ್ಟ ಎಂಬ ಭ್ರಮೆಯುಂಟಾಗುವಂತೆ ಮಾಡುತ್ತಾರೆ. ಜಾಹೀರಾತು ಇರುವುದೇ ನಮಗೆ ಚಿತ್ತಭ್ರಮೆ ಉಂಟುಮಾಡುವುದಕ್ಕಾಗಿ. ಈ ಸಂದರ್ಭದಲ್ಲಿ ಸುಮಾರು ಮೂರು ದಶಕಗಳ ಹಿಂದೆ ಪ್ರಸಿದ್ಧ ಪತ್ರಿಕೆಯೊಂದರಲ್ಲಿ ಪ್ರಕಟಣೆಯಾಗಿದ್ದ ಒಂದು ಜಾಹೀರಾತು ನೆನಪಿಗೆ ಬರುತ್ತದೆ. ಜಾಹೀರಾತು ಹೀಗಿತ್ತು "ಸದಾ ತೊಂದರೆ ಕೊಡುವ ಸೊಳ್ಳೆಗಳಿಂದ ನಿಮಗೆ ಖಾಯಂ ಪರಿಹಾರ ಬೇಕೇ? ಹಾಗಿದ್ದರೆ ನಮಗೆ ಬರೆಯಿರಿ. ಪತ್ರದೊಡನೆ ಐವತ್ತು ರೂಗಳನ್ನು ಮನಿಯಾರ್ಡರ್ ಮಾಡಿದ ರಸೀತಿಯನ್ನಿಟ್ಟು ಕಳಿಸಿ, ಸಾವಿರಾರು ಜನರು ಇದರ ಪ್ರಯೋಜನ ಪಡೆದಿದ್ದಾರೆ". ಓದುಗರೊಬ್ಬರು ಆಕರ್ಷಿತರಾಗಿ ಪತ್ರ ದುಡ್ಡು ಕಳಿಸಿದರು. ಆಗಿನ್ನೂ 'ಆಲೌಟ್' 'ಮಾರ್ಟಿನ್ ಮುಂತಾದುವು ಮತ್ತು ಮಸ್ಕಿಟೋ ರೆಪೆಲ್ಲೆಂಟ್ಗಳು ಬಂದಿರಲಿಲ್ಲ. ಹಾಗಾಗಿ ಜಾಹೀರಾತು ಸೂಕ್ತವಾಗಿ ಕಂಡಿತು. ಹದಿನೈದು ದಿನಗಳ ನಂತರ ಅವರಿಗೆ ಒಂದು ಪಾರ್ಸೆಲ್ ಬಂತು. ಖುಷಿಯಾಗಿ ಬಿಚ್ಚಿದರು. ಒಳಗೆ ಎರಡು ಸಣ್ಣಗಾತ್ರದ ಬೆಣಚುಕಲ್ಲುಗಳಿದ್ದುವು ಮತ್ತು ಒಂದು ಪತ್ರವಿತ್ತು. ಅದರಲ್ಲಿ "ಒಂದು ಕಲ್ಲನ್ನು ಎಡಕೈಯಲ್ಲಿ ಹಿಡಿಯಿರಿ, ಸೊಳ್ಳೆಯನ್ನು ಅದರ ಮೇಲೆ ಕುಳ್ಳಿರಿಸಿರಿ, ಬಲಕೈಯಿಂದ ಇನ್ನೊಂದು ಕಲ್ಲನ್ನು ತೆಗೆದುಕೊಂಡು ಸೊಳ್ಳೆಯನ್ನು ಜಜ್ಜಿರಿ" ಎಂದು ಬರೆದಿತ್ತು. ಇದಕ್ಕೇನೆನ್ನಬೇಕು. ಜಾಹೀರಾತು ಪೂರ್ತಿಯಾಗಿ ಸುಳ್ಳಲ್ಲ. ನೂರಕ್ಕೆ ನೂರರಷ್ಟು ಪರಿಹಾರ ಆದರೆ ಸೊಳ್ಳೆಯನ್ನು ಹಿಡಿದು ಕಲ್ಲಿನ ಮೇಲೆ

ಕೂಡಿಸುವುದು ಹೇಗೆ? ಮೋಸಹೋದ ಗ್ರಾಹಕರಿಗೂ ಜಾಹೀರಾತಿನ ತಂತ್ರಗಾರಿಕೆಯ ಬಗ್ಗೆ ಮೆಚ್ಚುಗೆ ಉಂಟಾಗಲೇಬೇಕು.

ಪತ್ರಿಕೆಗಳಲ್ಲಿ ಚಿಕ್ಕದಾದ ವರ್ಗೀಕೃತ ಜಾಹೀರಾತುಗಳೂ ವಾರದಲ್ಲಿ ಕೆಲವು ದಿನಗಳಲ್ಲಿ ಪ್ರಕಟಣೆಯಾಗುತ್ತವೆ. ಯಾರಿಗೋ ತಮ್ಮ ವಾಹನ, ಮನೆ ಮಾರಾಟ ಮಾಡಬೇಕಾಗಿರುತ್ತದೆ, ಇನ್ನಾರಿಗೋ ಮನೆಗೆ ಬಾಡಿಗೆದಾರರು ಬೇಕಾಗಿದ್ದಾರೆ, ನಿಮ್ಮ ಫ್ರಿಜ್, ವಾಷಿಂಗ್ ಮೆಷಿನ್, ಟಿ.ವಿ.ಗಳನ್ನು ಮನೆಬಾಗಿಲಿಗೇ ಬಂದು ದುರಸ್ತಿ ಮಾಡಿಕೊಡುವವರಿದ್ದಾರೆ, ನಿಮ್ಮ ಮನೆಗೇ ಊಟ ತಿಂಡಿಗಳನ್ನು ಸಪ್ಲೈ ಮಾಡುವವರಿದ್ದಾರೆ, ಮುಂತಾದವು. ವೈಯಕ್ತಿಕ ಹಿತಾಸಕ್ತಿಯ ಇಂತಹ ಜಾಹಿರಾತುಗಳು ಯಾವುದೇ ಪ್ರಲೋಭನೆಗಳಿರದೆ ನಿಮಗೆ ಉಪಯುಕ್ತವಾಗಿರುತ್ತವೆ. ಆದರೂ ವಿವೇಚನೆ ನಿಮ್ಮಲ್ಲಿರಲಿ.

ಜಾಹೀರಾತೆಂಬುದು ಒಂದು ಮಾಯಾಲೋಕವನ್ನೇ ನಿಮ್ಮ ಮುಂದೆ ಸೃಷ್ಟಿಸಿಬಿಡಬಲ್ಲಂತ ಅದ್ಭುತ ಮಾಧ್ಯಮ. ಇದು ಬೇಕೋ ಬೇಡವೋ ಎಂಬ ಪ್ರಶ್ನೆ ಅಪ್ರಸ್ತುತ. ಏಕೆಂದರೆ ವಾಣಿಜ್ಯ ಕ್ಷೇತ್ರದಲ್ಲಿ ಇದೊಂದು ಹೊಸ ಸಂಚಲನವನ್ನೇ ಮೂಡಿಸಿದೆ. ನಮ್ಮ ಬದುಕಿನಲ್ಲಿ ಅವಿಭಾಜ್ಯ ಎನಿಸುವಷ್ಟು ಹತ್ತಿರವಾಗಿಬಿಟ್ಟಿದೆ. ಭ್ರಮೆಯೋ ವಾಸ್ತವವೋ ಎಂಬುದು ನಿಮ್ಮ ವಿವೇಚನೆಗೆ ಬಿಟ್ಟಿದ್ದು.

# ಮಹಿಳೆ ಮತ್ತು ಕಾನೂನು

- ಸಮತಾ ದೇಶಮಾನೆ

ಪೀಠಿಕೆ : ಭಾರತದಂತಹ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಮಹಿಳೆಗೆ ಪುರುಷನಷ್ಟೇ ಸರಿಸಮನಾಗಿ ಬದುಕಲು ಆಸ್ತಿ ಹಕ್ಕು ತುಂಬಾ ಅವಶ್ಯಕ. ಪ್ರಸ್ತುತದಲ್ಲಿ ಮಹಿಳೆಯರಿಗೆ ಆಸ್ತಿಯ ಹಕ್ಕು ಬೇಕೇ ಬೇಕಾಗಿದೆ. ಜೀವನದಲ್ಲಿ ಸ್ತ್ರೀಯು ತನ್ನ ಕಾಲ ಮೇಲೆ ನಿಂತು ಪರಾವಲಂಬಿಯಾಗಿರದೆ ಅವಳು ತನ್ನ ಜೀವನದಲ್ಲಿ ಯಶಸ್ವಿಯಾಗಿ ಬಾಳಲು ಆಸ್ತಿ ತುಂಬಾ ಅತ್ಯಗತ್ಯ. ತಂದೆಯ ಆಸ್ತಿಯಲ್ಲಿ ಮಹಿಳೆಯೂ ಸಹ ಸಮಾನ ಭಾಗಸ್ಥಳು ಎಂಬ ಬೇಡಿಕೆಯಲ್ಲಿ ಯಾವ ತಪ್ಪು ಇಲ್ಲ.

ಹಿಂದೂಗಳಲ್ಲಿ ಆಸ್ತಿ ಹಂಚಿಕೆಯ ತೀರ್ಮಾನವನ್ನು ಎರಡು ಪದ್ಧತಿಯ ಆಧಾರದ ಮೇಲೆ ತೀರ್ಮಾನಿಸಲಾಗುತ್ತದೆ.

೧. ಮಿತಾಕ್ಷಾರ ಪದ್ಧತಿ

೨. ದಯಾಭಾಗ ಪದ್ಧತಿ

ಮಿತಾಕ್ಷರ ಪದ್ಧತಿಯನ್ನು ೧೧ನೇ ಶತಮಾನದಲ್ಲಿ ಬರೆಯಲಾಗಿದೆಯಂತೆ. ಇದರ ಪ್ರಕಾರ ಗಂಡ ಸತ್ತಾಗ ಗಂಡನ ಆಸ್ತಿ ಹೆಂಡತಿಗೆ ಸೇರಬೇಕು. ಇಲ್ಲಿ ಗಂಡ ಸತ್ತಾಗ ಹೆಂಡತಿ ೩೨-೩೫ನೇ ವಯಸ್ಸಿನವಳಿದ್ದಾಗ, ಗಂಡಸತ್ತ ನಂತರ ಆಕೆ ಇನ್ನೊಂದು ಮದುವೆಯಾದರೆ ಆ ಗಂಡನ ಆಸ್ತಿ ಅವಳಿಗೆ ಸೇರುತ್ತಿರಲಿಲ್ಲ.

ದಯಾಭಾಗ ಪದ್ಧತಿಯಲ್ಲಿ ಮನೆಯ ಎಲ್ಲರೂ ಒಟ್ಟಿಗೆ ಬಾಳುವುದನ್ನು ಮತ್ತು ಮಹಿಳೆಯ ಆಸ್ತಿಯಲ್ಲಿ ಪಾಲನ್ನು ಹೊಂದುವುದನ್ನು ಕಾಣಬಹುದು. ೧೯೩೭ರ ಹಿಂದೂ ಮಹಿಳೆಯ ಆಸ್ತಿಯ ಹಕ್ಕಿನ ಕಾಯ್ದೆಯು ಹೆಣ್ಣುಮಗಳಿಗೆ ಗಂಡು ಮಗನಷ್ಟೇ ಆಸ್ತಿಯ ಹಕ್ಕನ್ನು ನೀಡಲಾಗಿದೆ.

ಆಸ್ತಿಯಲ್ಲಿ ಎರಡು ವಿಧ

೧. ಸ್ಥಿರಾಸ್ತಿ

೨. ಚರಾಸ್ತಿ

ಸ್ಥಿರಾಸ್ತಿ ಎಂದರೆ ಯಾವುದೇ ರೀತಿಯ ಬದಲಾವಣೆಯಾಗದೆ ಚಲನೆಯಾಗದೆ, ಸ್ಥಿರವಾಗಿರುವುದಕ್ಕೆ ಸ್ಥಿರಾಸ್ತಿ ಎಂದು ಹೆಸರು.

ಉದಾ : ಭೂಮಿ, ಮನೆ ಮುಂತಾದವು

ಯಾಜ್ಞವಲ್ಯನು "ಮಹಿಳೆಯ ಜೀವನವೇ ಒಂದು ಸ್ಥಿರಾಸ್ತಿ" ಎಂದಿದ್ದಾರೆ. ಕಾಲಕಾಲಕ್ಕೆ ಬದಲಾಗುವುದಕ್ಕೆ ಚರಾಸ್ತಿ ಎಂದು ಕರೆಯುತ್ತಾರೆ.

ಉದಾ : ಹಣ

ವೇದಗಳ ಹಿಂದಿನ ದಿನಗಳಲ್ಲಿಯೂ ಮಹಿಳೆಗೆ ಸ್ವಾತಂತ್ರ್ಯವಿರಲಿಲ್ಲ. ಮಹಿಳೆಯು ಸರ್ವಕಾಲಕ್ಕೂ ಪುರುಷನ ಅಧೀನಕ್ಕಿರಬೇಕು ಎಂದು ಆ ಸಮೂಹದಲ್ಲಿ ಬಂಧಿಸಲಾಗಿತ್ತು. ಆದರೆ ಈಗಲೂ ಅಂದರೆ ಸುವರ್ಣ ಸ್ವಾತಂತ್ರ್ಯೋತ್ಸವ ಆಚರಿಸಿದ ನಂತರವೂ ಮಹಿಳೆಯು ಬಂಧನದಲ್ಲಿಯೇ ಇರುವುದನ್ನು ಕಾಣಬಹುದು. ಸಂಪ್ರದಾಯಕ್ಕೆ ಒಳಗಾಗಿರುವರು ಯಾವುದೇ ವಿಷಯವನ್ನು ನೇರವಾಗಿ ತೆಗೆದುಕೊಳ್ಳುವುದಿಲ್ಲ. ಆದರೆ "ನಾ ಸ್ತ್ರೀ ಸ್ವತಂತ್ರ್ಯಮ್ ತಿ" ಎಂಬ ಮಾತನ್ನು ತಳ್ಳಿಹಾಕಿ ಮಹಿಳೆಗೆ ಸ್ವಾತಂತ್ರ್ಯ ನೀಡುವುದು ಅವಶ್ಯಕ.

೧೯೯೪ರಲ್ಲಿ ಭಾರತದಲ್ಲಿ ಹಿನ್ನೆಲೆಯನ್ನು ಕುರಿತು ಅವರಲ್ಲಿ ಮಹಿಳೆಯ ಸ್ಥಾನ- ಮಾನ ಕುರಿತು ಒಂದು ವರದಿ ಇದೆ. ಭಾರತದ ಹಿನ್ನೆಲೆಯಲ್ಲಿ ಸ್ಥಾನ-ಮಾನಕ್ಕೆ ಸುಲಭವಾಗಿ ವ್ಯಾಖ್ಯೆಯೊಂದನ್ನು ಒದಗಿಸಲು ಸಾಧ್ಯವಿಲ್ಲ.

ಸಾಮಾನ್ಯ ಸಂಪ್ರದಾಯಗಳಾದ ಸಮಾನತೆ, ತಾರತಮ್ಯ, ಕಾನೂನು, ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳು, ಅವಲಂಬನೆ ಸ್ವಾತಂತ್ರ್ಯ ಇವುಗಳು ನಮ್ಮ ಜನರ ಎಲ್ಲಾ ವರ್ಗಗಳಿಗೂ ಎಲ್ಲಾ ಕಾಲಕ್ಕೂ ಅನ್ವಯವಾಗುವುದಿಲ್ಲ.

ಭಾರತದ ಸಂವಿಧಾನದ ೧೧ನೇ ವಿಧಿಯ ಪ್ರಕಾರ ಮಹಿಳೆಗೆ ಸಾರ್ವಜನಿಕವಾಗಿ ಉದ್ಯೋಗ, ಹುದ್ದೆಗಳ ಮೀಸಲಾತಿ, ಸಮಾನ ಅವಕಾಶಗಳು ಒದಗಿಸಿಕೊಡಲಾಗಿದೆ. ಭಾರತದ ಸಂವಿಧಾನದ ಪರಿವಿಡಿಯಲ್ಲಿ ಮೂರು ಪದಗಳಿವೆ. ಅವುಗಳೆಂದರೆ ಲಿಂಗಭೇಧವಿಲ್ಲದಿರುವುದು, ಜಾತಿ ಭೇಧವಿಲ್ಲ ಮತ್ತು ಎಲ್ಲರಿಗೂ ಸಮಾನ ಅವಕಾಶ.

೧೯೫೬ರ ಹಿಂದೂ ಉತ್ತರಾಧಿಕಾರಿ ಕಾಯ್ದೆಯು ಮಹಿಳೆಗೂ ಪುರುಷನಷ್ಟೇ ಆಸ್ತಿ ಸಮಾನವಾಗಿ ಕೊಡಬೇಕು. ಅಲ್ಲದೆ ಹಿಂದುಗಳು ಸ್ವತಂತ್ರ್ಯ ಹಾಗೂ ಸ್ವಂತ ಜೀವನವನ್ನು ನಡೆಸಲು ಅನುವು ಮಾಡಿಕೊಡುತ್ತದೆ. ಮತ್ತು ಮಹಿಳೆಗೆ ದಿಟ್ಟ ಹೆಜ್ಜೆಯನ್ನಿಡಲು ಅವಕಾಶ ಮಾಡಿಕೊಡಲಾಗುತ್ತದೆ.

ಮಹಿಳೆ ಈಗ ಕೇವಲ ತನ್ನ ಆಶ್ರಯಕ್ಕಾಗಿ ವಿವಾಹ ಮಾಡಿಕೊಳ್ಳುತ್ತಾಳೆ. ವಿವಾಹವಾಗದೇ ತನ್ನ ಜೀವನವನ್ನು ಸ್ವತಂತ್ರವಾಗಿ ಸಾಗಿಸಬಹುದು. ಆದರೆ ಅದು ಸಾಧ್ಯವಿಲ್ಲ. ನಮ್ಮ ದೇಶದಲ್ಲಿರುವ ಸುಮಾರು ೩೧೦ ದಶಲಕ್ಷ ಮಹಿಳಾ ಕಾರ್ಮಿಕರಲ್ಲಿ ಕೇವಲ ೧೯.೨೪% ಮಾತ್ರ ಸಂಘಟಿತ ಕ್ಷೇತ್ರದಲ್ಲಿರುವುದನ್ನು ಕಾಣಬಹುದು.

ಶೇ. ೭೦% ರಷ್ಟು ಗ್ರಾಮೀಣ ಮಹಿಳೆಯರು ಪುರುಷನಷ್ಟು ಸಮವಾಗಿ ದುಡಿದರೂ ಸಂಬಳದಲ್ಲಿ ಲಿಂಗಭೇದ ತಾರತಮ್ಯದಿಂದ ಅವಳಿಗೆ ಕಡಿಮೆ ಸಂಬಳ ನೀಡುವುದನ್ನು ಕಾಣಬಹುದು. ಸಮಾನ ವೇತನ ಕಾಯ್ದೆ ಜಾರಿಯಲ್ಲಿದ್ದರೂ ಸಹ ಒಂದೇ ರೀತಿಯ



ಕೆಲಸಕ್ಕೆ ಗಂಡಸು ಪಡೆಯುವ ಕೂಲಿಗೆ ಹೋಲಿಸಿದರೆ ೪೦-೬೦% ರಷ್ಟು ಮಾತ್ರ ಪಡೆಯುತ್ತಾಳೆ. ಇಂದು ಜೀವನಕ್ಕಾಗಿ ಆಸ್ತಿಯ ಹಕ್ಕಿಗೆ ಸಂಬಂಧಿಸಿದಂತೆ ೧೫ ಲಕ್ಷ ಮೊಕದ್ದಮೆಗಳು ಕೋರ್ಟಿನಲ್ಲಿದೆ.

ಉಪಸಂಹಾರ : ಒಟ್ಟಿನಲ್ಲಿ ಮಹಿಳೆಯ ಸ್ವಾವಲಂಬನೆಗಾಗಿ ಆಸ್ತಿಯ ಹಕ್ಕು ಬೇಕೇ ಬೇಕು. ಆಸ್ತಿ ಹಕ್ಕಿಗೆ ಸಂಬಂಧಿಸಿದಂತೆ ಇರುವ ಹಲವಾರು ಮೊಕದ್ದಮೆಗಳು ನ್ಯಾಯಯುತವಾಗಿ ತೀರಾನವಾಗಿ ಮಹಿಳೆಗೆ ನ್ಯಾಯ ದೊರಕಬೇಕು. ಅದೇ ರೀತಿ ಗ್ರಾಮೀಣ-ನಗರ ಪ್ರದೇಶದ ಸ್ತ್ರೀಯರಲ್ಲಿ ತಾರತಮ್ಯ ಮನೋಭಾವನೆ ಇರಬಾರದು.

ಸ್ತ್ರೀಯರ ವಿರುದ್ಧ ಹಿಂಸೆ : ಮಾನವನ ಹಿಂಸಾಚಾರಕ್ಕೆ ಸ್ತ್ರೀ-ಪುರುಷನೆಂಬ ಭೇದವಿಲ್ಲದೆ ಮುದುಕರು ಮಕ್ಕಳು ಎಂಬ ವ್ಯತ್ಯಾಸವಿಲ್ಲದೆ ಎಲ್ಲರೂ ಬಲಿಯಾಗಿದ್ದಾರೆ. ಹಾಗೆ ನೋಡುವುದಿದ್ದರೆ ಪುರುಷರಿಗಿಂತಲೂ ಸ್ತ್ರೀಯರೇ ಮಾನವ ಕ್ರೌರ್ಯಕ್ಕೆ ಹಿಂಸೆಗೆ ಬಲಿಯಾದುದು ಹೆಚ್ಚೆನಿಸುವುದು. ಸ್ತ್ರೀ ಸಂಬಂಧವಾದ ಸಾಮಾಜಿಕ ವಿಷಯಗಳ ಹಾಗೂ ಸಮಸ್ಯೆಗಳ ಬಗ್ಗೆ ಶತಶತಮಾನಗಳಿಂದಲೂ ಒಂದು ಬಗೆಯ ಅಸಡ್ಡೆಯಿದ್ದು ಇತ್ತೀಚಿನ ವರ್ಷಗಳಲ್ಲಿ ಮಾತ್ರ ಈ ಕುರಿತು ವಿಶೇಷ ಗಮನವನ್ನು ನೀಡಲಾಗುತ್ತಿದೆ. ಸಾಮಾಜಿಕ ಸಂಶೋಧಕರು, ಸಮಾಜ ವಿಜ್ಞಾನಿಗಳು, ಸರ್ಕಾರಗಳು, ಯೋಜನಾ ಆಯೋಗಗಳು ಸಾಮಾಜಿಕ ಕಾರಕರ್ತರು, ಸಮಾಜ ಕಲ್ಯಾಣ ಇಲಾಖೆಗಳು... ಇವರೆಲ್ಲರೂ ಸ್ತ್ರೀ-ಸಂಬಂಧವಾದ ಸಾಮಾಜಿಕ ವಿಷಯಗಳನ್ನು ಅಧ್ಯಯನ ಮಾಡುವತ್ತ ಇತ್ತೀಚಿನ ದಿನಗಳಲ್ಲಿ ಪ್ರಯತ್ನ ನಡೆಸಿದ್ದಾರೆ. ಆದಾಗ್ಯೂ, ಜಗತ್ತಿನಾದ್ಯಂತ ಸ್ತ್ರೀಯರನ್ನು ಇದೀಗ ಹೆಚ್ಚು-ಹೆಚ್ಚಾಗಿ ಬಾಧಿಸುತ್ತಿರುವ ಹಿಂಸೆಯನ್ನು ಹತ್ತಿಕ್ಕುವ ಬಗ್ಗೆ, ಇಂತಹ ಗಂಭೀರ ಸಮಸ್ಯೆಯನ್ನು ಸಮಗ್ರವಾಗಿ ಅಧ್ಯಯನ ಮಾಡುವ ಬಗ್ಗೆ ಮತ್ತು ಅದಕ್ಕೆ ಸೂಕ್ತ ಪರಿಹಾರ ಕ್ರಮಗಳನ್ನು ಸೂಚಿಸುವ ಬಗ್ಗೆ ವ್ಯವಸ್ಥಿತವಾದ ಪ್ರಯತ್ನಗಳು ನಡೆದಿಲ್ಲವೆಂದು ಹೇಳಬಹುದು. ಜಗತ್ತಿನ ಶೇ. ೫೦% ರಷ್ಟು ಮಂದಿಯನ್ನು ಕಾಡುವ ಇಂತಹ ಸಮಸ್ಯೆಯನ್ನು ವೈಜ್ಞಾನಿಕವಾಗಿ ಅರ್ಥೈಸಿಕೊಂಡು ಅದನ್ನು ಸಮರ್ಥವಾಗಿ ಎದುರಿಸುವ ಪ್ರಯತ್ನಗಳು ಇಂದಿನ ಜಾಗತಿಕ ಅವಶ್ಯಕತೆಗಳಲ್ಲೊಂದು.

ಸ್ತ್ರೀಯರ ವಿರುದ್ಧದ ಹಿಂಸೆ ಸ್ವರೂಪ ಹಾಗೂ ಲಕ್ಷಣಗಳು :

* ಅಪರಾಧಿ ಸ್ವರೂಪದ ಹಿಂಸೆ

Ex: Rape, abduction and murder

* ಮನೆಯೊಳಗಿನ ಅಥವಾ ಕೌಟುಂಬಿಕ ಹಿಂಸೆ

Ex: Dowry deaths, Sexual abuse

* ಸಾಮಾಜಿಕ ಹಿಂಸೆ

Ex : Abortion ಹೆಣ್ಣು ಮಕ್ಕಳ ಮೇಲೆ ಆಸಿಡ್ ಎರಚುವುದು... ಇತ್ಯಾದಿ ಹಿಂಸೆಯ ಅಪರಾಧಿಗಳು

೧. ಮನೋರೋಗಿಗಳಲ್ಲದೇ ಇದ್ದರೂ ಮಾನಸಿಕ ಅಸ್ವಸ್ಥತೆಗೆ ಒಳಗಾದರು

೨. ವಾಸ್ತವಿಕ ಮನೋರೋಗಿಗಳು



೩. ಕೀಳುದರ್ಜೆಯ ಸಾಮಾಜಿಕ ವ್ಯಕ್ತಿತ್ವ ಹೊಂದಿದ ಮಂದಿ

೪. ಮದ್ಯಪಾನದ ವ್ಯಸನಕ್ಕೆ ಒಳಗಾದವರು

೫. ಕೌಟುಂಬಿಕ ಸಂಕಷ್ಟಕ್ಕೆ ಈಡಾದವರು

೬. ಶೈಶಾವಸ್ಥೆಯಲ್ಲಿ ಹಿಂಸೆಗೆ ಬಲಿಯಾದ ಮಂದಿ

೭. ಅನುಮಾನ ಪ್ರವೃತ್ತಿಯ ಹಾಗೂ ಎಲ್ಲದರ ಮೇಲೂ ತಮ್ಮ ಒಡೆತನವಿರಬೇಕೆಂದು

ಬಯಸುವ ಮಂದಿ

ಹಿಂಸೆಗೆ ಬಲಿಪಶುಗಳಾದವರು

* ಅಸಹಾಯಕರು ಹಾಗೂ ಸ್ವಾಭಿಮಾನವಿಲ್ಲದವರು

* ತ್ರಾಸದಾಯಕ ಕೌಟುಂಬಿಕ ಪರಿಸ್ಥಿತಿಗಳಲ್ಲಿರುವವರು

* ವರ್ತನಾ ಸಮಸ್ಯೆಗಳಿಗೆ ಒಳಗಾದವರು

* ಮನೆಯ ಗಂಡಸರು ಮಧ್ಯಪಾನಿಗಳಾಗಿರುವ ಹಿನ್ನೆಲೆಯವರು

*ಮನೋವೈಕಲ್ಯಗಳಿಗೆ ಒಳಗಾದ ಪುರುಷರೊಂದಿಗೆ ಸಹಜೀವನ

ನಡೆಸಬೇಕಾದವರು

ಹಿಂಸೆಯ ನಮೂನೆಗಳು ಅಥವಾ ಪ್ರಕಾರಗಳು

೧) ಹಣದ ಕಾರಣಕ್ಕಾಗಿ ಅಥವಾ ಭೌತಿಕ ಸಂಪತ್ತಿನ ಉದ್ದೇಶದಿಂದ ನಡೆಸುವ ಹಿಂಸೆ

೨) ದುರ್ಬಲರಾದವರ ಮೇಲೆ ದಬ್ಬಾಳಿಕೆ, ದೌರ್ಜನ್ಯ ನಡೆಸುವ ಮಾನಸಿಕ ದೌರ್ಬಲ್ಯದಿಂದ ಸ್ತ್ರೀಯರ ಮೇಲೆ ಆಗುತ್ತಿರುವ ಹಿಂಸೆ ಹಾಗೂ ಆಕ್ರಮಣ

೩) ಕೇವಲ ಮನೋರಂಜನೆಯ 'ಮಜಾ' ಮಾಡುವ, ಪರಪೀಡನೆಯಿಂದ ಮನೋರಂಜನೆ ಪಡೆಯುವ ಪ್ರವೃತ್ತಿಯಿಂದ ಸ್ತ್ರೀಯರ ಮೇಲೆ ಕೌರ ಪ್ರದರ್ಶಿಸುವುದುಂಟು.

೪) ಹಿಂಸೆಗೈಯ್ಯುವವನು ಮನೋವೈಫಲ್ಯ ಅಥವಾ ಹುಚ್ಚಿನಿಂದ ಉಂಟಾಗುವ ಹಿಂಸೆ

೫) ಅತ್ಯಂತ ಧಾರುಣವಾದ, ಸಂಕಷ್ಟದಾಯಕವಾದ ಹಾಗೂ ದುರವಸ್ಥೆಗೆ ಒಳಗಾದ ಕೌಟುಂಬಿಕ ಪರಿಸ್ಥಿತಿಯ ಪರಿಣಾಮವೆಂಬಂತೆ ಸ್ತ್ರೀಯರ ಮೇಲಾಗಿರುವ ಹಲ್ಲೆ ಹಾಗೂ ಹಿಂಸೆ.

೬) ಸ್ವಂತ ಹಿಂಸೆ ಬಲಿಯಾದ ವ್ಯಕ್ತಿಯೇ ಉದ್ದೇಶಪೂರ್ವಕವಾಗಿಯೇ ಅಥವಾ ಅನುದ್ದೇಶಪೂರ್ವಕವಾಗಿಯೋ ಅಥವಾ ವ್ಯಕ್ತಿತ್ವದ ದೋಷದಿಂದಾಗಿಯೋ ತಾನೇ ಸ್ವತಃ ಆಮಂತ್ರಿಸಿಕೊಂಡ ಅಥವಾ ಬರಮಾಡಿಕೊಂಡ ಹಿಂಸೆಗಳು

ಸ್ತ್ರೀಯರ ವಿರುದ್ಧದ ಹಿಂಸೆಯ ಮುಖ್ಯ ರೂಪಗಳು

೧. ಲೈಂಗಿಕ ಅತ್ಯಾಚಾರ : ಸ್ತ್ರೀಯೊರ್ವಳೊಂದಿಗೆ ಅವಳ ಇಚ್ಛೆಗೆ ವಿರುದ್ಧವಾಗಿ

ಹಾಗೂ ಬಲಪ್ರಯೋಗದೊಂದಿಗೆ ನಡೆಸುವ ಸಂಭೋಗ.

ಉದಾ : ೧೯೮೩-೮೪ರ ಅವಧಿಯಲ್ಲಿ ಪ್ರತಿ ೪ ಘಂಟೆಗೆ ೩ ಅತ್ಯಾಚಾರ ಪ್ರಕರಣಗಳು ವರದಿಯಾಗಿದ್ದು ಸುಮಾರು ಪ್ರತಿವರ್ಷ ೭,೫೦೦ ಪ್ರಕರಣಗಳು ದಾಖಲಾಗಿದ್ದವು.

೨) Crime Record Bureau ಸಂಸ್ಥೆಯ ದಾಖಲೆಯಂತೆ ೧೯೯೩-೯೪ ರಲ್ಲಿ ಪ್ರತಿ ೪೭ ನಿಮಿಷಕ್ಕೊಂದರಂತೆ ವರ್ಷಕ್ಕೆ ಸುಮಾರು ೧೧,೧೧೭ ಲೈಂಗಿಕ ಪ್ರಕರಣಗಳು ವರದಿಯಾಗಿವೆ.

ಕೇವಲ ೨ ದಶಕಗಳಲ್ಲಿ (೧೯೭೪-೧೯೯೩) ಅತ್ಯಾಚಾರದ ಪ್ರಕರಣಗಳು ಶೇ. ೪೦೦ ರಷ್ಟು ಹೆಚ್ಚಿದವು.

ಲೈಂಗಿಕ ಅತ್ಯಾಚಾರದ ವಿವಿಧ ರೂಪಗಳು :

* ಕುಟುಂಬದೊಳಗಿನ ಅತ್ಯಾಚಾರ (ರಕ್ತ ಸಂಬಂಧಿಗಳ ಮೇಲೆ ನಡೆಯುವುದು)

* ವರ್ಗ ಹಾಗೂ ಜಾತಿಯ ಪ್ರಾಬಲ್ಯದ ಹಿನ್ನೆಲೆಯ ಅತ್ಯಾಚಾರ

*ಅಪ್ರಾಪ್ತ ವಯಸ್ಕರ ಮೇಲಿನ ಅತ್ಯಾಚಾರ

* ಸಾಮೂಹಿಕ ಅತ್ಯಾಚಾರ (Gang Rape)

*ರಕ್ಷಕರ ಅಧೀನದಲ್ಲಿ ಬಂಧನದಲ್ಲಿರುವಾಗಲೇ ನಡೆಯುವಂತಹ ಅತ್ಯಾಚಾರ

* ಸಾಂದರ್ಭಿಕವಾದ, ಪೂರ್ವ ಯೋಜಿತವಲ್ಲದ ಅತ್ಯಾಚಾರಗಳು

೧೯೮೩ ಅಪರಾಧೀ ಕಾನೂನು ತಿದ್ದುಪಡಿ ಕಾಯ್ದೆಯ ಪ್ರಕಾರ ೧೬ ವರ್ಷಕ್ಕೂ ಕಡಿಮೆ ವಯಸ್ಸಿನ ಹೆಂಗಸೊಂದಿಗೆ ಆಕೆಯ ಒಪ್ಪಿಗೆ ಪಡೆದು / ಇಲ್ಲವೆ ಪಡೆಯದೇ ನಡೆಸುವ ಲೈಂಗಿಕ ವ್ಯವಹಾರವು ಅತ್ಯಾಚಾರವೆನ್ನಿಸಿಕೊಳ್ಳುವುದು.

೨. ಹೆಣ್ಣು ಮಕ್ಕಳ ಹಾಗೂ ಸ್ತ್ರೀಯರ ಅಪಹರಣ :

೧೬ ವರ್ಷಕ್ಕಿಂತಲೂ ಕಿರಿಯಳಾದ ಅಥವಾ ೧೮ ವರ್ಷಕ್ಕೂ ಹಿರಿಯಳಾದ ಹೆಣ್ಣುಮಕ್ಕಳನ್ನು ಆಕೆಯ ಕಾನೂನುಬದ್ಧ ಪಾಲಕರ ಅನುಮತಿ ಇಲ್ಲದೆ ಮೋಸದಿಂದ ಹಾರಿಸಿಕೊಂಡು ಹೋಗುವುದೇ ಅಪಹರಣ (Kidnapping)

“ಪ್ರಬುದ್ಧ ವಯಸ್ಕಳಾದ ಸ್ತ್ರೀಯೊಬ್ಬಳನ್ನು ಆಕೆಯ ಇಚ್ಛೆಗೆ ವಿರುದ್ಧವಾಗಿ ವಿವಾಹವಾಗಲು ಅಥವಾ ಹಠ ಸಂಭೋಗ ನಡೆಸಲು ಮೋಸದಿಂದ ಅಥವಾ ಬಲಾತ್ಕಾರದಿಂದ ಕದ್ದೊಯ್ಯುವುದೇ ಪ್ರಾಪ್ತ ವಯಸ್ಕರಾದ ಸ್ತ್ರೀಯರ ಅಪಹರಣ” (abduction)

* ವಿವಾಹಿತರಿಗಿಂತಲೂ ಅವಿವಾಹಿತ ಕನ್ಯೆಯರೇ ಹೆಚ್ಚಾಗಿ ಅಪಹೃತರಾಗುವುದು

* ಅಪಹೃತರು ಹಾಗೂ ಅಪಹರಣಕಾರರು ಪರಸ್ಪರ ಪರಿಚಿತರಾಗಿರುವ ಸಂಖ್ಯೆಯೇ

ಅಧಿಕವಾಗಿರುವುದು

*ಅಪಹೃತರ ಹಾಗೂ ಅಪಹರಣಕಾರರ ಪರಸ್ಪರ ಸಂಪರ್ಕ ಹಾಗೂ ಪರಿಚಯವು



ಸಾರ್ವಜನಿಕ ಸ್ಥಳಗಳಿಗಿಂತಲೂ ಅವರ ಕುಟುಂಬಗಳಲ್ಲಿ ಇಲ್ಲವೇ ನೆರೆಹೊರೆಯ ಸ್ಥಳಗಳಲ್ಲಿ ಆಗಿರುವುದೇ ಜಾಸ್ತಿ.

*ಹೆಚ್ಚಿನ ಪ್ರಕರಣಗಳಲ್ಲಿ ಒಬ್ಬ ವ್ಯಕ್ತಿ ಮಾತ್ರ ಒಳಗಾಗಿದ್ದು ಅಪಹೃತ ವ್ಯಕ್ತಿಯು ಪ್ರತಿಭಟನೆ ಮಾಡುವುದು ಕಡಿಮೆ.

*ಲೈಂಗಿಕಾಸಕ್ತಿ ಹಾಗೂ ವಿವಾಹ ಇವು ಹೆಚ್ಚಿನ ಪ್ರಕರಣಗಳ ಹಿಂದಿನ ಉದ್ದೇಶವಾಗಿದ್ದು ಆರ್ಥಿಕ ಉದ್ದೇಶವಿರುವ ಪ್ರಕರಣಗಳು ಬಹಳ ಕಡಿಮೆ.

*ಲೈಂಗಿಕ ಆಕ್ರಮಣವು ಹೆಚ್ಚಿನ ಅಪಹರಣದ ಪ್ರಕರಣಗಳಲ್ಲಿ (ಶೇ ಲ೦)ಕಾಣಬಹುದು.

*ಮನೆಗಳಲ್ಲಿ ವಾತ್ಸಲ್ಯ ಹಾಗೂ ಪ್ರೀತಿರಹಿತ ಸಂಬಂಧಗಳು ಹಾಗೂ ಹೆತ್ತವರ ನಿಯಂತ್ರಣವಿಲ್ಲದಿರುವಿಕೆಯ ಸಂದರ್ಭಗಳಲ್ಲಿ ಅಪಹರಣ ಹೆಚ್ಚಾಗಿರುವುದು. ಪರಿಚಿತ ವ್ಯಕ್ತಿಯೊಂದಿಗೆ ಆತನ ಅಪಹರಣ ಕಾವ್ಯದಲ್ಲಿ ಹೆಣ್ಣುಮಕ್ಕಳು ಸಹಭಾಗಿಗಳಾಗಲು ಈ ಅಂಶವೇ ಮುಖ್ಯ ಕಾರಣ.

ಸ್ತ್ರೀಯರ ಅಪಹರಣ ಹಾಗೂ ವೇಶ್ಯಾವೃತ್ತಿಗೆ ಅವರನ್ನು ನೂಕುವುದನ್ನು ತಡೆಗಟ್ಟಲು ಕನ್ಯೆಯರ ಮತ್ತು ಮಹಿಳೆಯರ ಅನೈತಿಕ ವ್ಯವಹಾರ ಪ್ರತಿಬಂಧಕ ಕಾಯ್ದೆ (೧೯೫೬) ಎಂಬ ಕಾಯ್ದೆ ಜಾರಿಯಲ್ಲಿದ್ದರೂ ಸ್ತ್ರೀಯರ ಅಪಹರಣಗಳು ನಡೆಯುತ್ತಿವೆ.

೩. ಕೊಲೆ ಅಥವಾ ನರಹತ್ಯೆ :

ಇದು ಪುರುಷ ಸಂಬಂಧಿತ ಅಪರಾಧವಾಗಿದ್ದು, ಅಪರಾಧದ ಅತ್ಯುಗ್ರ ರೂಪವಾಗಿರುವಂತೆ ಪ್ರತಿವರ್ಷ ಸುಮಾರು ೨೦೦೦ ಮಂದಿ ಕೊಲೆಯಾಗಲ್ಪಡುತ್ತಿದ್ದರೆ ಅವರುಗಳಲ್ಲಿ ಸ್ತ್ರೀಯರ ಪ್ರಮಾಣ ೧೦% ರಿಂದ ೧೫% ಗೂ ಕಡಿಮೆ ಇದೆ.

*ಹೆಚ್ಚಿನ ಕೊಲೆ ಪ್ರಕರಣಗಳಲ್ಲಿ (ಶೇ. ೯೪.೦) ಕೊಲೆ ಪಾತಕಿಗಳು ಹಾಗೂ ಬಲಿಪಶುಗಳು ಒಂದೇ ಕುಟುಂಬಕ್ಕೆ ಸೇರಿದವರುಗಳಾಗಿದ್ದು ಅತೃಪ್ತ ಕೌಟುಂಬಿಕ ಜೀವನವೇ ಇದಕ್ಕೆ ಮೂಲಕಾರಣವೆಂಬುದು ಸ್ಥಿರವಾಗುವುದು.

* ಶೇ. ೮೦ ರಷ್ಟು ಮಂದಿ ಕೊಲೆಪಾತಕಿಗಳು ೨೫ ವರ್ಷದಿಂದ ೪೦ ವರ್ಷಗಳ ನಡುವಿನವರುಗಳಾಗಿದ್ದಾರೆ.

* ಕೊಲೆಯಾದ ಸ್ತ್ರೀಯರುಗಳಲ್ಲಿ ಸುಮಾರು ಅರ್ಧದಷ್ಟು ಮಂದಿ ಪುರುಷ - ಕೊಲೆ ಪಾತಕಿಗಳೊಂದಿಗೆ ಕನಿಷ್ಠ ೫ ವರ್ಷಗಳಿಗೆ ಕಡಿಮೆಯಿಲ್ಲದ ಸಂಪರ್ಕ ಸಂಬಂಧ ಹೊಂದಿದವರುಗಳಾಗಿದ್ದಾರೆ.

* ಕೊಲೆಯಾದ ಸ್ತ್ರೀಯರುಗಳಲ್ಲಿ ಶೇ. ೫೦ ರಷ್ಟು ಮಂದಿ ಮಕ್ಕಳನ್ನು ಪಡೆದವರುಗಳಾಗಿದ್ದಾರೆ.

* ಕೊಲೆಪಾತಕಿಗಳು ಕಡಿಮೆ ಆದಾಯವಿರುವ ಹಾಗೂ ಕೆಳಮಟ್ಟದ ಉದ್ಯೋಗಗಳನ್ನು ಹೊಂದಿರುವ ಪುರುಷರುಗಳಾಗಿರುವುದೇ ಹೆಚ್ಚು.

* ೨/೩ ಭಾಗದಷ್ಟು (ಶೇ. ೬೬) ಕೊಲೆಗಳು ಆಯೋಜಿತವಾಗಿ ಆದರೆ ಕೋಪಕ್ಕೆ ಒಳಗಾದವರಿಂದ ಆಕಸ್ಮಿಕವಾಗಿ ಆಗಿರುವುದು ಕಂಡುಬಂದಿದೆ.

* ३/೪ ಭಾಗದಷ್ಟು ಕೊಲೆಗಳು (೮೦%) ಯಾರ ಸಹಾಯವೂ ಇಲ್ಲದೆ ಮಾಡಲಾಗಿರುತ್ತದೆ.

* ಕುಟುಂಬದೊಳಗಿನ ಕುಲ್ಲುಕ ಕಲಹಗಳು, ಅನೈತಿಕ ಲೈಂಗಿಕ ಸಂಬಂಧಗಳು ಮತ್ತು ಸ್ತ್ರೀಯರ ಅಪರಿಹಾರವಾದ ಹಾಗೂ ಗಂಭೀರ ಸ್ವರೂಪದ ರೋಗಗಳು ಕೊಲೆ ಕೃತ್ಯಗಳ ಹಿಂದಿನ ಪ್ರೇರಕ ಅಂಶಗಳಾಗಿವೆ.

೪. ವರದಕ್ಷಿಣಾ ಸಾವುಗಳು (Dowry Deaths)

೧೯೬೧ ರಷ್ಟು ಹಿಂದೆಯೇ 'ವರದಕ್ಷಿಣೆ ನಿಷೇಧ ಕಾಯ್ದೆ'ಯ ಅನ್ವಯ ವರದಕ್ಷಿಣೆ ಕೊಡುವುದನ್ನು ಹಾಗೂ ಸ್ವೀಕರಿಸುವುದನ್ನು ದಂಡನಾರ್ಹ ಅಪರಾಧವೆಂದು ಪರಿಗಣಿಸಲಾಗಿದ್ದರೂ ಈ ಕಾಯ್ದೆಯನ್ನು ಉಲ್ಲಂಘಿಸಿ ವರದಕ್ಷಿಣೆಯನ್ನು ಕೂಡ ತೆಗೆದುಕೊಳ್ಳುವ ಆಚರಣೆ ಮುಂದುವರಿದಿದೆ.

ಅಂಕಿ ಅಂಶಗಳು :

೧೯೯೦ ರಲ್ಲಿ ೪೧೪೮ ವರದಕ್ಷಿಣಾ ಸಾವುಗಳು

೧೯೯೩ ರಲ್ಲಿ ೪೩೬೬ ವರದಕ್ಷಿಣಾ ಸಾವುಗಳು

೧೯೯೪ ರಲ್ಲಿ ೬೨೦೫ ವರದಕ್ಷಿಣಾ ಸಾವುಗಳು

ವರದಕ್ಷಿಣಾ ಸಾವಿನ ಪ್ರಕರಣಗಳು ಹೆಚ್ಚಾಗಿ ಈ ಅಪರಾಧದ ಬಲಿಪಶುವಾದ ಮಹಿಳೆಯ ಗಂಡನ ಖಾಸಗಿ ಮನೆಯಲ್ಲಿಯೇ ಸಂಭವಿಸುತ್ತಿದ್ದು ಈ ಅಪರಾಧದಲ್ಲಿ ಕುಟುಂಬದ ಇತರ ಸದಸ್ಯರುಗಳ ಸಹಯೋಗವನ್ನು ಕಾಣಬಹುದು.

ಇಂತಹ ಪ್ರಕರಣಗಳಲ್ಲಿ ಸಾವಿಗೀಡಾದ ಹೆಚ್ಚಿನ ತಂದೆ-ತಾಯಿಯರು ಅಂತಹ ಸಾವನ್ನು ಕೊಲೆ ಎಂಬುದಾಗಿಯೂ, ಆಕೆಯ ಗಂಡನ ಮನೆಯವರು ಆತ್ಮಹತ್ಯೆ' ಎಂಬುದಾಗಿಯೂ ಪ್ರತಿಪಾದಿಸಿದ್ದಾರೆ.

ವರದಕ್ಷಿಣೆಗಾಗಿ ವಿವಾಹಿತ ಸ್ತ್ರೀಯನ್ನು ನೇರವಾಗಿ ಸಾಯಿಸುವುದಕ್ಕೂ ಮೊದಲು ಆಕೆಯನ್ನು ಹೆದರಿಸುವ, ಬೆದರಿಸುವ, ಅಪಮಾನಿಸುವ, ದೈಹಿಕವಾಗಿ ದುಡಿಸುವ ಉಪವಾಸ ಕೆಡಹುವ, ಕತ್ತಲ ಕೋಣೆಯಲ್ಲಿ ಕೆಲ ಸಮಯ ಬಂಧಿಯನ್ನಾಗಿರಿಸುವ, ಕಣ್ಣಿಗೆ ಮೆಣಸಿನ ಪುಡಿ ಹಾಕುವ ಹಾಗೂ ಇನ್ನಿತರ ರೀತಿಗಳಲ್ಲಿ ಹಿಂಸಿಸುವ ಪ್ರಯತ್ನ ಮಾಡಿ ದಿಗಿಲು ಹುಟ್ಟಿಸುವುದು ಸಾಮಾನ್ಯವಾಗಿರುತ್ತದೆ.

ವರದಕ್ಷೀಣೆಯ ಸಾವಿಗೆ ಬಲಿಯಾದವರಲ್ಲಿ ಹೆಚ್ಚಿನವರನ್ನು ವಿಷ ಪ್ರಾಶನ ಮಾಡಿಸಿ, ಬಾವಿಗೆ ತಳ್ಳಿ, ವಿದ್ಯುತ್ ಸಂಪರ್ಕ ಕಲ್ಪಿಸಿ, ಬೆಂಕಿ ಹಚ್ಚಿ ಸಾಯಿಸುವುದು, ಕಂಡುಬರುತ್ತದೆ.

ಇಂತಹ ಸಾವಿಗೆ ಒಳಗಾಗುವರಲ್ಲಿ ಶಿಕ್ಷಿತರು ಅಶಿಕ್ಷಿತರೆಂಬ ಬೇಧವಿರುವುದು



ಕಡಿಮೆ. ಶಿಕ್ಷಿತರಾದವರೂ ಕೂಡ ಬಹುದೊಡ್ಡ ಸಂಖ್ಯೆಯಲ್ಲಿ ಈ ದುರಂತಕ್ಕೀಡಾಗುತ್ತಾರೆ.

೫. ಹೆಂಡತಿಗೆ ಹೊಡೆತ (Wife Beating)

ಹೆಂಗಸರ ಮೇಲೆ ಕೈ ಮಾಡುವುದು, ಕೈ ಹಿಡಿದ ಹೆಂಡತಿಯ ಮೇಲೆ ಕೌರ ಪ್ರದರ್ಶಿಸುವುದು, ಹೆಂಡಂದಿರನ್ನು ಹೊಡೆಯುವುದು ಇದೆಲ್ಲವೂ ಬಹುಕಾಲದಿಂದಲೂ ಇದ್ದಿರಬಹುದಾಗಿದ್ದರೂ ಈ ಬಗ್ಗೆ ಇತ್ತೀಚೆಗೆ ಹೆಚ್ಚಿನ ಅಧ್ಯಯನಗಳಾಗತೊಡಗಿವೆ.

* ೨೦ ರಿಂದ ೩೦ ವರ್ಷದ ಒಳಗಿನ ಯುವತಿಯರಾದ ಪತ್ನಿಯರು ತಮ್ಮ ಗಂಡಂದಿರ ದೈಹಿಕ ಹೊಡೆತಕ್ಕೆ ಈಡಾಗುವ ಸಾಧ್ಯತೆ ಹೆಚ್ಚು.

* ನಿರಕ್ಷರಿಗಳಿಂದ ಹಿಡಿದು ಸ್ನಾತಕೋತ್ತರ ಪದವೀಧರೆಯವರೆಗೆ ಪತ್ನಿಯರು ಹೊಡೆತದ ದೌರ್ಜನ್ಯಕ್ಕೊಳಗಾಗುವರು.

*ಆದಾಗ್ಯೂ ಶಿಕ್ಷಣ ಹಾಗೂ ಆದಾಯದ ಮಟ್ಟ ಹೆಚ್ಚಾದಂತೆ ಕುಟುಂಬದಲ್ಲಿ ಸ್ತ್ರೀಯರ ಮೇಲಿ ಹಿಂಸೆ ಪ್ರಮಾಣ ಕಡಿಮೆಯಾಗುವುದು ಕಂಡುಬಂದಿದೆ. ಹೆಚ್ಚಿನ ಸಂದರ್ಭಗಳಲ್ಲಿ ಗಂಡ-ಹೆಂಡಿರ ಲೈಂಗಿಕ ಅಪಹೊಂದಿಗೆ, ಭಾವನಾತ್ಮಕ ಗೊಂದಲಗಳು, ಗಂಡನಾದವನ ತೀರಾ ಅತಿರೇಕದ ಅಹಂಭಾವ, (Cegoism) ಎಲ್ಲವನ್ನು ಮೌನವಾಗಿ ಸಹಿಸಿಕೊಳ್ಳುವ ಹೆಂಡತಿ ಮೃದುಸ್ವಭಾವ-ಇವು ಹೆಂಡತಿ ಹೊಡೆತಕ್ಕೆ ಮುಖ್ಯ ಕಾರಣಗಳಾಗಿರುತ್ತವೆ.

* ಹಿಂಸಾ ಪ್ರವೃತ್ತಿ ಕಲಿತ ವರ್ತನೆಯಾಗಿದ್ದು ತಮ್ಮ ತಂದೆ-ತಾಯಿಗಳು ಹಿಂಸಾಕೃತ್ಯಗಳಲ್ಲಿ ತೊಡಗಿರುವುದನ್ನು ತಮ್ಮ ಬಾಲ್ಯಾವಸ್ಥೆಯಲ್ಲಿ ನೋಡಿದ ಹಾಗೂ ಅದನ್ನು ರೂಢಿಸಿಕೊಂಡ ಗಂಡಸರಲ್ಲಿ ಹಿಂಸೆ ಹೆಚ್ಚಾಗಿರುತ್ತದೆ ಎನ್ನಲಾಗಿದೆ. ಅಂದರೆ ಗಂಡನಾದವನು ಬಾಲ್ಯಾವಸ್ಥೆಯ ಅನುಭವಗಳು ಆತನ ದಾಂಪತ್ಯ ಜೀವನದ ಮೇಲೆ ಪ್ರಭಾವ ಬೀರಲಿವೆ ಎನ್ನಲಾಗಿದೆ.

* ಹೆಂಡತಿ ಹೊಡೆತದಿಂದ ಕುಟುಂಬ ಶಾಂತಿ ಕಲಕುವ, ವೈವಾಹಿಕ ಅಸಾಮರಸ್ಯ ಉಂಟಾಗುವ, ಗಂಡ ಹೆಂಡಿರು ಬೇರ್ಪಡೆಗೊಳ್ಳುವ, ಅವರ ವಿವಾಹ ವಿಚ್ಛೇದನಗೊಳ್ಳುವ ಮಕ್ಕಳ ಸಾಮಾಜೀಕರಣ ಹದಗೆಡುವ, ಅಂತಹ ಕುಟುಂಬವಿರುವ ಸಾಮಾಜಿಕ ಪರಿಸರವು ಕಲುಷಿತಗೊಳ್ಳುವ ದುಷ್ಪರಿಣಾಮಗಳು ಸಾಮಾನ್ಯವಾಗಿ ಕಂಡುಬರುತ್ತವೆ.

೬. ವಿಧವೆಯರ ವಿರುದ್ಧದ ಹಿಂಸೆ :

ಭಾರತೀಯ ಸಾಮಾಜಿಕ ಹಿನ್ನೆಲೆಯಲ್ಲಿ ವಿಧವೆಯರನ್ನು ಕೀಳಾಗಿ ಕಾಳುವುದು, ಅವರನ್ನು ಅಮಂಗಳಕರವಾದ ವ್ಯಕ್ತಿಗಳೆಂದು ಪರಿಗಣಿಸಿ ಎಲ್ಲಾ ಸಾಮಾಜಿಕ ಹಾಗೂ ಧಾರ್ಮಿಕ ಕಾವ್ಯಗಳಲ್ಲಿ ಮೂಲೆಗುಂಪಾಗಿಸುವುದು ಸರ್ವೆಸಾಮಾನ್ಯವಾಗಿದೆ.



೩ ರೀತಿಯ ವಿಧವೆಯರು :

೧) ವಿವಾಹವಾದ ಒಂದೆರಡು ವರ್ಷಗಳಲ್ಲಿಯೇ ಹಾಗೂ ಮಕ್ಕಳಾಗುವ ಮೊದಲೇ ವಿಧವೆಯಾದವರು.

೨) ವಿವಾಹದ ೫-೧೦ ವರ್ಷಗಳ ಅವಧಿಯಲ್ಲಿ ವಿಧವೆಯರಾಗಬೇಕಾಗಿ ಬಂದಿದ್ದು ಒಂದೆರಡು ಮಕ್ಕಳನ್ನು ಹೊಂದಿದ್ದು ಅವುಗಳನ್ನು ಸಾಕಬೇಕಾದ ಹೊಣೆ ಹೊತ್ತವರು.

೩) ೫೦ ವರ್ಷಗಳನ್ನು ದಾಟಿದ ಮೇಲೆ ವಿಧವೆಯರಾಗಿರುವವರು.

* ಹೆಂಡತಿ-ಹೊಡೆತದ ಸಮಸ್ಯೆಯಂತೆ ವಿಧವೆಯರೂ ಕೂಡ ದೈಹಿಕ ಹೊಡೆತ, ಹಿಂಸೆಗೆ, ಅಶ್ಲೀಲವಾದ ಅವಾಚ್ಯ ಶಬ್ದಗಳ ದಾಳಿಗೆ, ಲೈಂಗಿಕ ಪೀಡನೆಗೆ, ಕುಟುಂಬದ ಆಸ್ತಿಯ ಹಕ್ಕಿನ ನಿರಾಕರಣೆಗೆ, ಅವಳ ಚಿಕ್ಕ ಮಕ್ಕಳ ಮೇಲಿನ ಕೌರ ಪ್ರದರ್ಶನಕ್ಕೆ ಮೂಕ ಪ್ರೇಕ್ಷಕರಾಗಿ ನಿಲ್ಲಬೇಕಾದಂತಹ ಅಸಹಾಯಕ ಪರಿಸ್ಥಿತಿಗೆ ಒಳಗಾಗಬೇಕಾಗಿರುವುದು.

* ಮಧ್ಯವಯಸ್ಸಿನ ಹಾಗೂ ವೃದ್ಧ ವಿಧವೆಯರಿಗಿಂತಲೂ ತಾರುಣ್ಯದಲ್ಲಿರುವವರೇ ಹೆಚ್ಚಾಗಿ ಅಪಮಾನಕ್ಕೆ, ಪೀಡನೆಗೆ, ಶೋಷಣೆಗೆ ಹಾಗೂ ಹಿಂಸೆಗೆ ಗುರಿಯಾಗುವರು.

*ಒಮ್ಮಿಂದೊಮ್ಮೆಗೆ ವಿಧವೆಯರಾಗುವ ದೌರ್ಭಾಗ್ಯಕ್ಕೊಳಗಾಗುವ ಸ್ತ್ರೀಯರು ತಮ್ಮ ಗಂಡಂದಿರ ಆಸ್ತಿ-ಪಾಸ್ತಿಯ, ವ್ಯಾಪಾರ-ವ್ಯವಹಾರದ, ಉದ್ಯೋಗ- ಆದಾಯದ ಬಗ್ಗೆ, ತೀರಾ ಮುಗ್ಧರಾಗಿರುವುದೇ

ಅಧಿಕವಾಗಿರುವುದರಿಂದ ಅವರ ಆರ್ಥಿಕ ಶೋಷಣೆಯನ್ನು ಅವರ ಗಂಡನ ಸಂಬಂಧಿಕರೇ ಮಾಡುವ ಸಾಧ್ಯತೆಗಳಿವೆ.

*ವಿಧವೆಯರನ್ನು ಗೋಳಾಡಿಸುವವರಲ್ಲಿ ಆಕೆಯ ಗಂಡನ ಮನೆಯವರದ್ದೇ ಸಿಂಹಪಾಲಿರುತ್ತದೆ.

*ಮಧ್ಯಮವರ್ಗದ ವಿಧವೆಯರು ಆರ್ಥಿಕ ಶೋಷಣೆಗೆ ಒಳಗಾಗುವ ಸಾಧ್ಯತೆ ಅಧಿಕವಾಗಿದ್ದರೆ ಕೆಳವರ್ಗದ ವಿಧವೆಯರು ಲೈಂಗಿಕ ಶೋಷಣೆಗೆ ಒಳಗಾಗುವ ಸಾಧ್ಯತೆ ಜಾಸ್ತಿ.

ವಿಧವೆಯ ಅತ್ತೆ ಹಾಗೂ ನಾದಿನಿಯರು ಒರಟು ಹಾಗೂ ಅಮಾನವೀಯ.

# ಜಾವಳಿಗಳು

ಡಾ. ಟಿ.ಎನ್. ಪದ್ಮಾ

ಕರ್ನಾಟಕ ಸಂಗೀತ ಕ್ಷೇತ್ರವು ಹಲವು ವಿಧದ ರಚನಾಪ್ರಕಾರಗಳನ್ನು ಹೊಂದಿ ಸಂಪದ್ಭರಿತವೂ, ಜನಪ್ರಿಯವೂ ಆಗಿದೆ. ಈ ಎಲ್ಲ ರಚನೆಗಳೂ ತಮ್ಮವೇ ಆದ ಲಕ್ಷಣಗಳಿಂದ, ರೂಪುರೇಷೆಗಳಿಂದ, ಸ್ಥಾನಮಾನಗಳಿಂದ ವಿಶಿಷ್ಟವಾಗಿವೆ. ಇವುಗಳಲ್ಲಿ ಮಡಿವಂತಿಕೆಯ ವಿದ್ವಾಂಸರಿಂದ ಸ್ವಲ್ಪ ದೂರವಾದ "ಜಾವಳಿ" ಎಂಬ ಗೇಯಪ್ರಕಾರವೂ ಒಂದು. "ಜಾವಳಿ" ಎಂಬ ಪದನಿಷ್ಪತ್ತಿಯ ಬಗೆಗೆ ವಿಬುಧರಲ್ಲಿ ಅಭಿಪ್ರಾಯ ಭೇದಗಳಿವೆಯಾದರೂ ಅದರ ಆಕಾರ, ಸ್ವರೂಪ, ವಸ್ತು (Theme) ಗಳ ಬಗೆಗೆ ಏಕಾಭಿಪ್ರಾಯ ಕಾಣಬರುತ್ತದೆ. ಜಾವಳಿ ಎಂಬುದು ಅರಬ್ಬಿಯ "ಜಲಾಲಿ" ಅಥವಾ "ಜೂಲಿ" ಪದದ ರೂಪಾಂತರ ವಿರಬಹುದೆಂದು ಗೋಸ್ವಾಮಿಯವರು ಅಭಿಪ್ರಾಯಪಟ್ಟರೆ "ಚಾವಡಿ" ಎಂಬ ಪದದಿಂದ ಮಾರ್ಪಾಟುಹೊಂದಿದೆ ಯೆಂದು ಪ್ರೊ. ಪಿ. ಸಾಂಬಮೂರ್ತಿಯವರು ಹೇಳುತ್ತಾರೆ. ಹಿಂದೂಸ್ಥಾನೀ ಭಾಷೆಯ ಝೂಂವ್‌ನಾ, ಝೂಂವಲೀ, ಝೂಂವಲೀ ಬಾಜ್ ಮುಂತಾದ ಶಬ್ದಗಳು ಜಾವಳಿಯ ಮೂಲವೆಂದು ಡಾ. ರಾ. ಸತ್ಯನಾರಾಯಣ ಅವರು ಸ್ಪಷ್ಟಪಡಿಸುತ್ತಾರೆ. ಇದೇನೇ ಇದ್ದರೂ ಜಾವಳಿಯು ಕರ್ನಾಟಕ ಸಂಗೀತದ ಸುಂದರ ರಚನಾಪ್ರಕಾರಗಳಲ್ಲಿ ಒಂದು ಎಂಬುದಂತೂ ನಿರ್ವಿವಾದವಾದ ಒಂದು ಅಂಶ.

ಜಾವಳಿಗಳ ವಸ್ತು "ಶೃಂಗಾರ". ಇದು ನಾಯಕನಾಯಕೀಭಾವ, ಮಧುರಭಾವ, ಭಾರಾಭರಭಾವ ಮುಂತಾಗಿಯೂ ಕರೆಯಲ್ಪಟ್ಟಿದೆ. ಕರ್ನಾಟಕದ ಪರಿಭಾಷೆಯಲ್ಲಿ ಇದು "ಲಿಂಗಪತಿ-ಶರಣಸತಿ"; "ಜೀವಸತಿ ದೇವಪತಿ" ಎನಿಸಿದೆ. ಶೃಂಗಾರಭಾವದ ಆರಾಧನೆ ವಿಶಿಷ್ಟವಾಗಿದ್ದು ಹಿಂದೂಧರ್ಮದಲ್ಲೇ ಅಲ್ಲದೆ ಇತರಧರ್ಮಗಳಲ್ಲೂ ಕಾಣಬರುತ್ತದೆ. ದಾಸ್ಯ ವಾತ್ಸಲ್ಯಾದಿ ಭಾವಗಳಿಗಿಂತ ಶೃಂಗಾರಭಾವದಲ್ಲಿ ಆತ್ಮಾರ್ಪಣೆಯ ಪರಾಕಾಷ್ಠೆಯನ್ನು ಕಾಣಬಹುದು. ಆದ್ದರಿಂದಲೇ ಬಹುತೇಕ ಧರ್ಮಗಳು ಶೃಂಗಾರಭಾವದ ಆರಾಧನೆಗೆ ಪ್ರಾಧಾನ್ಯ ನೀಡಿವೆ. ಕ್ರೈಸ್ತಧರ್ಮದಲ್ಲಿ ಚರ್ಚನ್ನು "ವಧು"ವೆಂದೂ, ಕ್ರಿಸ್ತನನ್ನು "ವರ" ನೆಂದೂ ಪರಿಗಣಿಸುತ್ತಾರೆ. ಸಾಲೋಮನ್ ಗೀತೆಯಲ್ಲಿ ಹಾಗೂ ಸಂತಜಾನನ The dark night ನಲ್ಲಿ ಈ ಭಾವದ ಪ್ರಸ್ತಾಪ ಕಾಣಬರುತ್ತದೆ. ಇದರ ಹಿನ್ನೆಲೆಯಲ್ಲಿ ಅಡಗಿರುವ ತತ್ತ್ವವೆಂದರೆ ಸಾಕ್ಷಾತ್ ಭಗವಂತನೊಬ್ಬನೇ "ಪುರುಷ" ಈತ ಪುರುಷರಲ್ಲಿ ಪುರುಷ ಪರಮ ಪುರುಷ, ಜಗತ್ತಿನ ಜೀವಿಗಳೆಲ್ಲರೂ ಸ್ಫೂರ್ತಿಯಲ್ಲಿ "ಸ್ತ್ರೀಯರು" ಎಂಬುದು. ಏಕೆಂದರೆ ಆಳವಾಗಿ ಪ್ರೀತಿಸಬಲ್ಲ ಶಕ್ತಿ ಸ್ತ್ರೀಗೆ ಮಾತ್ರ ಸಾಧ್ಯ

ಎಂಬುದು ಹಿರಿಯರ ಅಭಿಮತ. ಇದೇ ಭಾವದಲ್ಲೇ ಕಾರ್ಡಿನಾಲ್ ನ್ಯೂಮನ್" beño "if the soul is to go to higher spiritual blessedness, it must become a woman however manly thou mayest be among men". ಅಂತೆಯೇ ಜೀವಾತ್ಮರಾದ ಸಕಲಜೀವರೂ ಸ್ಫೂರ್ತಿಯಲ್ಲಿ ಸ್ತ್ರೀಯರಾಗಿ ಪರಮಾತ್ಮವಾದ ವಾಸುದೇವನಲ್ಲಿ ಆತ್ಮಾರ್ಪಣೆಯ ಪರಾಕಾಷ್ಠೆಯಲ್ಲಿ ಸೇರಿದಾಗ ಮಾತ್ರ ಮುಕ್ತಿ ಪ್ರಾಪ್ತಿ ಎಂಬುದು ಆಂತರಿಕಭಾವ ಅಥವಾ ಗೂಢಾರ್ಥ. ಈ ಸಂದರ್ಭದಲ್ಲಿ ಕೆಳಗಿನ ಶ್ಲೋಕವು ಉಲ್ಲೇಖಾರ್ಹ.

ಸ ಏವ ವಾಸುದೇವೋsಸೌ ಸಾಕ್ಷಾತ್ ಪುರುಷ ಉಚ್ಯತೇ।

ಸ್ತ್ರೀಪ್ರಾಯಂ ಇತರತ್ ಸರ್ವಂ ಜಗದ್ಬ್ರಹ್ಮ ಪುರಸ್ಸರಂ॥

ಶೃಂಗಾರಭಾವದ ಭಗವದಾರಾಧನೆ ನೂತನವೇನಲ್ಲ. ಅದು ಪ್ರಾಚೀನವೇ, ನಾರದರು "ಕಾಂತಾಸಕ್ತಿ" ಎಂದು ಕರೆದಿರುವ ಶೃಂಗಾರವವು ಭಾಗವತದ ದಶಮಸ್ಕಂದದಲ್ಲಿ ಸೊಗಸಾಗಿ ಚಿತ್ರಣಗೊಂಡಿದೆ. ಇಲ್ಲಿನ ಕಾಮ-ಪ್ರೇಮಗಳಲ್ಲಿ ಯಾವುದೂ ಕೀಳಲ್ಲ. ವಾಸ್ತವವಾಗಿ ಸಾಧನೆವೊಂದರ ಪಾವಿತ್ರ್ಯ, ಅದರ ಗುರಿಯ ಸ್ವರೂಪದಿಂದ ಮತ್ತು ಅದನ್ನು ನಾವು ಕಾಣುವ ದೃಷ್ಟಿಯಿಂದ ನಿರ್ಧಾರವಾಗುವುದು. ಪುರಾಣದ ಪ್ರಕಾರ ಕಾಮತತ್ವದ ಆಧಾರದಿಂದಲೇ ಋಷಿಗಳ ಅವತಾರವೆನ್ನಲಾದ ಗೋಪಿಯರು ಮುಕ್ತಿ ಪಡೆದರಂತೆ. ನಿಘಂಟಿನಲ್ಲಿ "ಕಾಮ" ಎಂಬ ಪದಕ್ಕೆ ಆಸೆ, ಬಯಕೆ, ಪ್ರೀತಿ ಮುಂತಾದ ಸಮಾನಾರ್ಥಗಳನ್ನು ಕಾಣಬಹುದು. ಶೃಂಗಾರ ಪದಕಪಿತಾ ಪಿತಾಮಹರಾದ ಅನ್ನಮಾಚಾರರಂತೂ "ಕಾಮ" ಎಂಬ ಪದವನ್ನ ಪುನಃ ಪುನಃ ಬಳಸುತ್ತಾರೆ. ಅವರು ತಮ್ಮ ಒಂದು ರಚನೆಯಲ್ಲಿ ಹೀಗೆನ್ನುತ್ತಾರೆ.

"ಕಾಮಕುಡವೈ ಗೋಪಿಕಲ ಬೊಂದ ಬ್ರಿಯಮೈತೇ

ಕಾಮುಕತ್ವಮು ನಾಯಂದು ಗಲದೆಂತೈನ"

ಈ ಮಾತಿನ ಅರ್ಥ ಕಾಮದ ಮೂಲಕ ನೀನು ಗೋಪಿಯರನ್ನು ಸೇರುವುದಾದರೆ ನನ್ನಲ್ಲೂ ಆ ಕಾಮವಿದೆ ಎಂಬುದು. ಆದರೆ ಅವರು ಮತ್ತೊಂದು ಹಂತದಲ್ಲಿ ಕಾಮಕ್ಕೂ, ಕಾಮತತ್ವಕ್ಕೂ ವ್ಯತ್ಯಾಸವನ್ನೂ ಗುರುತಿಸುತ್ತಾರೆ. ಕಾಮವೆಂಬುದು ಪ್ರಾಪಂಚಿಕವಾದರೆ ಕಾಮತತ್ವವು ಪಾರಮಾರ್ಥಿಕವೆಂದು ಅವರು ಹೇಳುತ್ತಾರೆ. ಕಾಮತತ್ತ್ವ ಕಾಮಧೇನುವಿಗೆ ಸಮನಾದುದು. ಅದು ಸರ್ವಾಭೀಷ್ಟಪ್ರದವಾದುದು. ಇಂತಹ ತತ್ತ್ವದ ಮೂಲಕ ತಿರುವೆಂಕಟೇಶನನ್ನು ಸೇರದಿದ್ದರೆ ಜೀವಿಯು ಕಾಮಾಂಧನಾಗಿ ಪ್ರಾಣಿಸಮನೆನಿಸುತ್ತಾನೆ ಎಂಬ ಭಾವದೊಂದಿಗೆ ಅವರು ಹಾಡಿದ್ದಾರೆ.

"ಕಾಮತತ್ವಂಬನೆಡಿ ಕಾಮಧೇನುವು ದನಕು

ವೇಮಾರು ಕೋರಿಕಲ ವೆಲ್ಲಿಗೊಲಿಪೆಡಿದಿ

ಈ ಮೇನು ತಿರುವೇಂಕಟೇಶು ಚೇರಕಪೋಯಿ

ಕಾಮಾಂಧುಡೈ ಮಿಗುಲ ಗತಿಮಾಲೆ ಪ್ರಾಣಿ"



ಶೃಂಗಾರಭಾವದ ಆರಾಧನೆಯ ಮಹತ್ವದಿಂದಾಗಿ ಶ್ರೀಕೃಷ್ಣ ಚೈತನ್ಯರೂ, ಅವರ ಅನುಯಾಯಿಗಳೂ, ಆಳ್ವಾರರೂ ಇದೇ ಹಾದಿಯಲ್ಲಿ ನಡೆದಿದ್ದಾರೆ. ಮೀರಾಬಾಯಿ "ಮೈತೋ ಗಿರಿಧರ್' ಘರ್ ಜಾವೂಂಗಿ" ಎಂಬ ರಚನೆಯಲ್ಲಿ 'ಗಿರಿಧರನೇ ನನ್ನ ಪ್ರಿಯತಮನು. ರಾತ್ರಿಯಾದೊಡನೆ ಅವನಲ್ಲಿಗೆ ಹೋಗಿ ರಮಿಸಿ ಆಟವಾಡಿ, ಬೆಳಗಾದೊಡನೆ ಹಿಂತಿರುಗುತ್ತೇನೆ ಎನ್ನುತ್ತಾಳೆ. ಮಹಾದೇವಿ ಅಕ್ಕ ವಚನವೊಂದರಲ್ಲಿ "ಮಣಿಮಕುಟದ ಫಣಿಕಂಕಣದ ನಗೆಮೊಗದ ಸುಳಿಪಲ್ಲ ಸೊಬಗನ ಕಂಡು ಮನಸೋತೆನವ್ವ", ಇಂತಾಗಿ ಚೆನ್ನಮಲ್ಲಿಕಾರ್ಜುನನೆನ್ನ ಮದುವಣಿಗ ಆನು ಮದುವಣಗಿ ಕೇಳಾತಾಯೆ" ಎಂದು ಹಾಡುತ್ತಾಳೆ. ಕರ್ನಾಟಕ ಸಂಗೀತ ಚರಿತ್ರೆಯಲ್ಲಿ ಇಂತಹ ಶೃಂಗಾರವು ಜಯದೇವನ ಗೀತಗೋವಿಂದದಲ್ಲಿ, ದಾಸವರೇಣ್ಯರ ರಚನೆಗಳಲ್ಲಿ, ಸಂತ ತ್ಯಾಗರಾಜರ ಒಂದೆರಡು ಕೃತಿಗಳಲ್ಲಿ ಮತ್ತು ಅವರದೇ ಆದ "ನೌಕಾಚರಿತ್ರೆ" ಎಂಬ `ಗೀತನಾಟಕ'ದಲ್ಲಿ ಹಾಗೂ ಬಹುತೇಕ ತಾನವರ್ಣ ಹಾಗೂ ಪದವರ್ಣಗಳಲ್ಲಿ ಕಾಣಬಹುದು. ಭಾರತೀಯ ಸಿದ್ಧಾಂತದಲ್ಲಿ ಸೂಚಿಸಿರುವ ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮ, ಅರ್ಥ, ಮೋಕ್ಷಗಳಿಗಿರುವಷ್ಟೇ ಪ್ರಾಧಾನ್ಯವನ್ನು ಕಾಮಕ್ಕೂ ನೀಡಿರುವುದನ್ನು ನಾವಿಲ್ಲಿ ಸ್ಮರಿಸಬಹುದು ಇಲ್ಲಿ ಸೂಚಿತವಾದ ಕಾಮವೂ ಅನ್ನಮಯ್ಯ ಹೇಳುವ ಕಾಮತತ್ತ್ವವೂ ಒಂದೇ ಎಂಬುದನ್ನು ನಾವು ಮನಗಾಣಬೇಕು.

ಶೃಂಗಾರಭಾವ ಪ್ರೀತಿಮೂಲವಾದುದು. ಗೆಳೆಯರ ನಡುವೆ, ಒಡೆಯ ಸೇವಕನ ನಡುವೆ, ಶಿಶು ಮಾತಾಭಾವ-ಇವೆಲ್ಲದರಲ್ಲೂ ಪ್ರೀತಿ ಕಾಣಬರುವುದಾದರೂ ಪತಿಪತ್ನಿಯರ ನಡುವೆ ಕಾಣಬರುವ ಪ್ರೀತಿ ವಿಶಿಷ್ಟವಾದುದು. ಇದೇ 'ಶೃಂಗಾರಭಾವ' ಎಂದು ಗುರುತಿಸಲ್ಪಡುವುದು. ನಾಯಕ ನಾಯಕಿಯರ ಅಗಲಿಕೆ "ವಿಪ್ರಲಂಬ" ಶೃಂಗಾರವಾದರೆ, ಇವರಿಬ್ಬರೂ ಕೂಡುವುದು ಅಥವಾ ಸನಿಹದಲ್ಲಿರುವುದು "ಸಂಭೋಗ ಶೃಂಗಾರ". ವಿಪ್ರಲಂಬದಲ್ಲಿ ನಾಯಕಿಯು ಸಂಶಯ, ಕೋಪ, ಭೀತಿ, ಆತಂಕ, ತಾಪ ಮುಂತಾದ ಹಲವು ಭಾವಗಳನ್ನು ಅನುಭವಿಸಿ ನಾಯಕನನ್ನು ಸೇರುವಲ್ಲಿ ಉತ್ಕಂಠಯಾಗಿರುತ್ತಾಳೆ. ಇದೇ ರೀತಿಯ ಅನುಭವ ನಾಯಕನಲ್ಲೂ ಇರಬಹುದು. ಆದ್ದರಿಂದ ವಿರಹದಲ್ಲಿ ಭಾವ ವೈಶಾಲ್ಯವನ್ನು ಕಾಣಬಹುದು. ಕೆಲವರ ಪ್ರಕಾರ ವಿಪ್ರಲಂಬವಿಲ್ಲದ

ಸಂಭೋಗ ಅಭಿವ್ಯಕ್ತಿ ಅಷ್ಟು ಪರಿಣಾಮಕಾರಿಯಲ್ಲ. ಸಂಭೋಗ ಶೃಂಗಾರದಲ್ಲಾದರೆ ನಾಯಕನಾಯಕಿಯರ ಆಸೆ ನೆರವೇರಿ ಪರಸ್ಪರರಲ್ಲಿ ಅಂತಿಮಗುರಿಯಾದ ಅರ್ಪಣ ಮನೋಭಾವವನ್ನು ಮಾತ್ರ ಗುರುತಿಸಲಾಗುವುದು. ಹೀಗಾಗಿ ಬಹುತೇಕ ಶೃಂಗಾರ ರಚನೆಗಳಲ್ಲಿ ವಿಪಲಂಬ ಶೃಂಗಾರದ ಅಭಿವ್ಯಕ್ತಿಯನ್ನೇ ವಿಶೇಷವಾಗಿ ಕಾಣಲಾಗುವುದು.

ನಾಯಕನಾಯಕಿಯರನ್ನು ಅವರ ಸ್ವಭಾವ, ಚರ್ಯೆ ಹಾಗೂ ಚಿತ್ತವೃತ್ತಿಗಳಿಗನುಸಾರವಾಗಿ ವರ್ಗೀಕರಿಸುವುದುಂಟು ವಿಶೇಷವಾಗಿ ಹೆಸರಿಸಲ್ಪಡುವ ನಾಯಕಿಯರೆಂದರೆ, ವಾಸಿಕಸಜ್ಜಿಕಾ (ಪ್ರಿಯ ಸಮಾಗಮಕ್ಕೆ ಅಲಂಕೃತಳಾಗಿ ಸಿದ್ಧಳಾದವಳು) ವಿರಹೋತ್ಕಂಠಿತ (ನಲ್ಲನ ಬರುವಿಕೆ ತಡವಾದರೆ ಸಂದೇಹಿಸಿ ಉತ್ಕಂಠಳಾದವಳು.) ವಿಪ್ರಲಬ್ಧ (ಪ್ರಿಯನು ಸರಿಯಾದ ಸಮಯಕ್ಕೆ ಬಾರದಿದ್ದಾಗ ಅವಮಾನವಾಯಿತೆಂದು ಕೋಪದಿಂದ ಕುದಿಯುವವಳು.) ಖಂಡಿತಯುವತಿ (ಇನ್ನೊಬ್ಬಳ



ಸಾಮೀಪ್ಯದ ಗುರುತು ಹೊಂದಿದ ನಾಯಕನನ್ನು ಖಂಡಿಸಿ ಮಾತನಾಡುವವಳು.) ಕಲಹಾಂತರಿತ (ಪ್ರಿಯನೊಂದಿಗೆ ಜಗಳವಾಡಿ ನಂತರ ಪಶ್ಚಾತ್ತಾಪದಿಂದ ದುಃಖಿಸುವವಳು) ಪೋಷಿತ ಪತಿಕಾ (ದೂರದೇಶಕ್ಕೆ ಹೋದ ನಲ್ಲನ ವಿರಹದಿಂದ ಬಳಲುವವಳು) ಮುಂತಾದವರು. ಇವರಲ್ಲಿ ಸೌಂದರ್ಯಗರ್ವಿತರೂ, ಕುಲಗರ್ವಿತರೂ, ಯೌವ್ವನ ಗರ್ವಿತರೂ ಇರುವುದುಂಟು. ಇನ್ನು ನಾಯಕರಲ್ಲಿ ಶಠ (ಒಬ್ಬಳಲ್ಲೇ ಪ್ರೀತಿಯಿದ್ದಂತೆ ನಟಿಸುವ, ಆದರೆ ಮತ್ತೊಬ್ಬಳಲ್ಲೂ ಅನುರಕ್ತಿ ಹೊಂದಿದವ.) ದಕ್ಷಿಣ (ಇನ್ನೊಬ್ಬಳಲ್ಲಿ ಅನುರಕ್ತಿ ಇದ್ದರೂ ಮೊದಲನೆಯವಳಲ್ಲೂ ಪ್ರೀತಿ ಇರುವವ) ಅನುಕೂಲ (ಒಬ್ಬಳಲ್ಲೇ ಅನುರಕ್ತನಾದವ) ದೃಷ್ಟ (ಇನ್ನೊಬ್ಬಳ ಅಂಗಸಂಗದ ಗುರುತುಗಳಿದ್ದರೂ ಮೊದಲನೆಯವಳ ಬಳಿ ಧೈ‌ಯ್ಯದಿಂದ ಬರುವಾತ.) ಮುಂತಾದ ವಿಭೇದವುಂಟು. ಈ ನಾಯಕ ನಾಯಕಿಯರಿಗೆ ಆಪ್ತರೂ, ಸಹಾಯಕರೂ ಆಗಿ “ಸಖಿ” ಅಥವಾ “ದೂತಿ” ಅಥವಾ “ಚೇಟಿ” ಇರುತ್ತಾಳೆ. ನಾಯಕ ನಾಯಕಿಯರು ಬೇರ್ಪಟ್ಟು ವಿರಹದ ಸ್ಥಿತಿಯಲ್ಲಿದ್ದಾಗ ನಾಯಕಿಯ ತೊಳಲಾಟವನ್ನು ನಾಯಕನಿಗೂ, ನಾಯಕನ ಭಾವನೆಗಳನ್ನು ನಾಯಕಿಗೂ ತಿಳಿಸುತ್ತಾ ಸಂದೇಶವಾಹಕರಾಗಿ ಕಾರ್ ನಿರ್ವಹಿಸುತ್ತಾ, ಅವರಿಬ್ಬರೂ ಒಂದುಗೂಡುವಲ್ಲಿ ಸಖಿ ಸಹಕರಿಸುತ್ತಾಳೆ. ಇಂತಹ ಸಖಿಯಲ್ಲಿ ನಾಯಕ ನಾಯಕಿಯರಿಬ್ಬರಿಗೂ ಪೂರ್ಣವಿಶ್ವಾಸವಿರುತ್ತದೆ. ಅವರಿಬ್ಬರೂ ಸಖಿಯೊಂದಿಗೆ ಮನಬಿಚ್ಚಿ ಸಮಾಲೋಚನೆ ನಡೆಸುತ್ತಾರೆ. ಸಖಿಯೂ ಸ್ವಾರ್ಥವಿಲ್ಲದೆ ನಿಜ ಅರ್ಥದಲ್ಲಿ ನಾಯಕ ನಾಯಕಿಯರು ಒಂದುಗೂಡಲು ಮಧ್ಯವರ್ತಿಯಾಗುತ್ತಾಳೆ. ಸಖಿಯಲ್ಲಿ ಪೂರ್ಣನಂಬಿಕೆಯುಳ್ಳ ನಾಯಕಿ ಅಥವಾ ನಾಯಕ ತನ್ನ ಸಖಿಯನ್ನು ಅಥವಾ ಸಖನನ್ನು ಕರೆತರುವಂತೆ ಆಜ್ಞಾಪಿಸುವ ಸಖನಲ್ಲಿ ತನಗಿರುವ ಪ್ರೀತಿಯ

ಆಳವನ್ನು ವಿಶದಪಡಿಸುವ, ವಿರಹದ ತೀವ್ರತೆಯನ್ನು ಚಿತ್ರಿಸುವ ಭಾವದ ಹಲವು ರಚನೆಗಳನ್ನು ಕರ್ನಾಟಕ ಸಂಗೀತವು ಹೊಂದಿದೆ. ಬಹಿರ್ನೋಟದಲ್ಲಿ ಇವರು ನಾಯಕ, ನಾಯಕಿ ಮತ್ತು ಸಖಿಯರಾದರೂ ನಿಗೂಢ ಅರ್ಥದಲ್ಲಿ "ಪರಮಾತ್ಮ", "ಜೀವಾತ್ಮ" ಮತ್ತು ಮಾರ್ಗದರ್ಶಿಯಾದ "ಗುರು'ವೇ ಆಗಿರುತ್ತಾರೆ.

ಪ್ರಸ್ತುತ, ಜಾವಳಿಗಳಲ್ಲಿ ನಾಯಕ ನಾಯಕಿಯರ ನಡುವೆ ನಡೆಯಬಹುದಾದ ಪ್ರೇಮಚೇಷ್ಟೆಗಳು ಮತ್ತು ಮನದಾಳದ ಎಲ್ಲ ಭಾವಗಳಿಗೂ ನೇರವಾಗಿ ಮಾತಿನ ಅಭಿವ್ಯಕ್ತಿ ನೀಡಿರುವುದರಿಂದ ಪ್ರೌಢತೆ ಮತ್ತು ಗಾಂಭೀರ ಲೋಪವಿರುವುದೆಂಬುದು ಕೆಲವರ ಅಭಿಮತ. ಆದರೆ ಪಾಂಡಿತ್ಯ ಪ್ರೌಢಿಮೆಯಿಂದ ಕೂಡಿದುದೆನ್ನಲಾದ ಜಯದೇವನ "ಗೀತಗೋವಿಂದ"ದ ಕೆಲವು ಭಾಗಗಳನ್ನು ಆಡುಭಾಷೆಗೆ ಭಾಷಾಂತರಿಸಿದರೆ ಅದು ಕೂಡ ಜಾವಳಿಯ ರೂಪವನ್ನೇ ಹೊಂದುತ್ತದೆಂಬುದನ್ನು ಮನಗಾಣಬಹುದು. ಜಾವಳಿಗಳನ್ನೇ ಇಷ್ಟಪಡುವ ಗುಂಪೊಂದನ್ನು ನಾವು ಕಾಣಬಹುದು. ಇದಕ್ಕೊಂದು ಉದಾಹರಣೆಯಾಗಿ ಚಾಮರಾಜನಗರದ "ವೆಂಕಟಪತಯ್ಯ ನವರನ್ನು ಹೆಸರಿಸಬಹುದು. ಜಾವಳಿಗಳೆಡೆಗೆ ವೆಂಕಟಪತಯ್ಯನವರು ತೋರುತ್ತಿದ್ದ ಒಲವು ಕುರಿತಂತೆ "ನೆನಪುಗಳು" ಪುಸ್ತಕದಲ್ಲಿ ಮೈಸೂರು ಕೆ. ವಾಸುದೇವಚಾರರು ಬರೆದಿದ್ದಾರೆ. ಈ ಭಾಗದ ಸಂಗ್ರಹರೂಪ

ಹೀಗಿದೆ.



ಒಮ್ಮೆ ಆಚಾರರ ಮತ್ತು ವೀಣೆಶೇಷಣ್ಣನವರ ಕಛೇರಿ ವೆಂಕಟಪತಯ್ಯನವರ ಏರ್ಪಾಡಾಗಿದ್ದಿತು. ಮೊದಲದಿನ ಶೇಷಣ್ಣನವರ ಕಛೇರಿ ಮುಗಿಯಿತು. ಮಾರನೇ ದಿನ ಆಚಾರರ ಕಛೇರಿಗೆ ನಿಗದಿಪಡಿಸಿದ ಹಣಕ್ಕಿಂತ ಹೆಚ್ಚು ಸಂಭಾವನೆ ಬರುವ ಉಪಾಯವೊಂದನ್ನು ಶೇಷಣ್ಣನವರು ಆಚಾರರಿಗೆ ತಿಳಿಸಿದರು. ಅದೆಂದರೆ, ಜಮೀಂದಾರರು ಜಾವಳಿ ಪ್ರೇಮಿಗಳು. ಅವರು ಕಛೇರಿಯಲ್ಲಿ ವರ್ಣ, ಕೃತಿ, ಪಲ್ಲವಿ ವಿನ್ಯಾಸ ಇವುಗಳೆಲ್ಲ ಮುಗಿಯುವವರೆಗೆ ಕಾಯಲಾರರು, ಒಂದೆರಡು ಕೀರ್ತನೆಗಳ ವಿನ್ಯಾಸವಾದೊಡನೆ 'ಜಾವಳಿ ಅಪ್ಪಣೆಯಾಗಲಿ ಎನ್ನುತ್ತಾರೆ. ನೀವು ಅವರ ಕೋರಿಕೆಯನ್ನು ಈಡೇರಿಸಿದೊಡನೆ ಸಂಭಾವನೆಯಲ್ಲಿ ಹತ್ತು ರೂಪಾಯಿಗಳು ಅಧಿಕವಾಗುತ್ತದೆ, ಎಂಬುದು, ಕಡೆಯಲ್ಲಿ ಆಚಾರರ ಸಂಭಾವನೆ ಶೇಷಣ್ಣನವರು ಹೇಳಿದ್ದಂತೆಯೇ ಅಧಿಕವಾಗಿದ್ದಿತಂತೆ.

ಜಾವಳಿಗಳ ವಿಷಯದಲ್ಲಿ "ಮೈಸೂರು" ಅಗ್ರಸ್ಥಾನ ಪಡೆದಿದೆ. ಚಾರಿತ್ರಿಕವಾಗಿ ೧೫೬೫ರಲ್ಲಿ ತಾಳೀಕೋಟೆಯುದ್ಧ ನಡೆದ ನಂತರ ವಿಜಯನಗರ ಸಮ್ರಾಜ್ಯವು ಒಡೆದು ಹಲವು ಸಂಸ್ಥಾನಗಳು ತಲೆಯೆತ್ತಿದವು. ಅವುಗಳಲ್ಲಿ ಮೈಸೂರು ಸಂಸ್ಥಾನ ಪ್ರಧಾನವಾದುದು. ಈ ಸಂಸ್ಥಾನವನ್ನು ಆಳಿದವರಲ್ಲಿ ಅನೇಕರು ಸ್ವತಃ ಸಂಗೀತಜ್ಞರೂ, ಇನ್ನು ಕೆಲವರು ಕಲಾರಾಧಕರೂ ಆಗಿ ನಾಡಿನ ಮತ್ತು ಹೊರನಾಡಿನ ಕಲಾವಿದರಿಗೆ ಆಶ್ರಯ

ಮತ್ತು ಪ್ರೋತ್ಸಾಹಗಳನ್ನು ನೀಡಿ ಸಾಂಸ್ಕೃತಿಕ ಪರಂಪರೆಯ ವಾಹಕರಾಗಿ ಮೆರೆದರು. ಹೀಗೆ ಈ ಸಾಲಿನಲ್ಲಿ ಜಾವಳಿ ಎಂಬ ರಚನಾಪ್ರಕಾರಕ್ಕೆ ಸಂಬಂಧಿಸಿದಂತೆ ಪ್ರಧಾನರಾದವರು "ಮುಮ್ಮಡಿ ಕೃಷ್ಣರಾಜ ಒಡೆಯರು". (ಕಾಲ ೧೭೯೪-೧೮೬೮) ಮತ್ತು ೧೮೮೧ರಲ್ಲಿ ಪಟ್ಟಕ್ಕೆ ಬಂದ "ಚಾಮರಾಜ ಒಡೆಯರುಃ ಮುಮ್ಮಡಿಯವರು ತಮ್ಮ ಆರಾಧ್ಯದೈವದ ಅಂಕಿತದಲ್ಲಿ ಎಂದರೆ "ಚಾಮುಂಡಾಂಬಾ" ಮುದ್ರೆಯೊಂದಿಗೆ ಶೃಂಗಾರ ಮತ್ತು ವೈರಾಗ್ಯಭಾವದ ಜಾವಳಿಗಳನ್ನು ರಚಿಸಿದ್ದಾರೆ. ಉದಾಹರಣೆಗೆ "ಮುನಿಸೇತಕೆ ಬೇಗ ನೀ ಬಾರೆ" ಮತ್ತು "ಮಾಡಿ ಮಾಡಿ ಮೂಢನಾದೆ ಆಡಿ ಮಾಡಿ ದುಷ್ಟರೊಡನೆ" ಜಾವಳಿಗಳು. ಇವರು ಜಾವಳಿಗಳನ್ನೇ ಅಲ್ಲದೆ 'ಶ್ರೀತತ್ತ್ವನಿಧಿ', 'ಸ್ವರಚೂಡಾಮಣಿ' ಮುಂತಾದ ಗ್ರಂಥಗಳನ್ನೂ ರಚಿಸಿದ್ದಾರೆ. ಇನ್ನು, ಜಾವಳಿ ಪ್ರಿಯರಾಗಿದ್ದ ಚಾಮರಾಜ ಒಡೆಯರ ಕಾಲ ಜಾವಳಿಗೆ ಸಂಬಂಧಿಸಿದಂತೆ ಒಂದು 'ಪರ್ವಕಾಲ' ಎನಿಸಿದೆ. ಇವರ ಆಸ್ಥಾನಕ್ಕೆ ಆಗಾಗ್ಗೆ ಬರುತ್ತಿದ್ದ ಧರಪುರಿ ಸುಬ್ಬರಾಯರು ರಾಜರಿಗೆ ಜಾವಳಿಗಳೆಡೆ ಇದ್ದ ಆಸಕ್ತಿಯನ್ನು ತಿಳಿದು ಸುಂದರವಾದ ಹಲವು ಜಾವಳಿಗಳನ್ನು ರಚಿಸಿದಂತೆ ಹೇಳುತ್ತಾರೆ. ಅಂತೆಯೇ ತಂಜಾವೂರು ಚತುಷ್ಟಯರಲ್ಲಿ ಒಬ್ಬರಾದ "ಚಿನ್ನಯ್ಯ" ಮಹಾರಾಜರಿಗೆ ಗೌರವದ ಕಾಣಿಕೆಯಾಗಿ ಹನ್ನೆರಡು ಜಾವಳಿಗಳನ್ನು ಅರ್ಪಿಸಿದಂತೆ ತಿಳಿದುಬರುತ್ತದೆ. ಒಟ್ಟಾರೆ ಈ ಅವಧಿಯಲ್ಲಿ ಜಾವಳಿಗಳು ಹೆಚ್ಚು ಜನಪ್ರಿಯವಾದುದು ಚಾರಿತ್ರಿಕ ಅಂಶ.

ಇದೀಗ ಲಭ್ಯವಿರುವ ಜಾವಳಿಗಳಲ್ಲಿ "ಕಪ್ಪಿನಿ ನಂಜುಂಡಲಿಂಗನ ಕನ್ನಡ ಜಾವಳಿಗಳು ಮೊದಲಿನವು. ಈ ಕಾರಣದಿಂದ ಜಾವಳಿಗಳ ಆರಂಭ ಕರ್ನಾಟಕದಲ್ಲಿ ಎಂಬ ಮಾತನ್ನು ನಂಬಬಹುದು. ಕಪ್ಪಿನಿಯ ಜಾವಳಿಗಳು "ನಂಜುಂಡಲಿಂಗ" ಅಂಕಿತದಲ್ಲಿವೆ. ವಾಸ್ತವವಾಗಿ ಶೃಂಗಾರ ಪದಗಳು ಜಾವಳಿಗೆ ಮೂಲಸ್ಥಾನ. "ಪದ"

ಎಂದೊಡನೆ "ಕ್ಷೇತ್ರಯ್ಯ"ನ ಹೆಸರು ಸ್ಫುರಿಸುವುದಾದರೂ ಈತನಿಗಿಂತ ಮುನ್ನವೇ "ಮಧುರೆಯ ಚೊಕ್ಕನಾಥಭೂಪತಿ"ಯ ಆಶ್ರಯದಲ್ಲಿ "ಘನಂ ಸೀನಯ್ಯ"ನು ನೂರಾರು ಪದಗಳನ್ನು ರಚಿಸಿದ್ದಾನೆ. ಪುರಂದರರ ಸಮಕಾಲೀನರಾದ "ಅನ್ನಮಾಚಾರರು" ನೂರಾರು ಶೃಂಗಾರಪದಗಳನ್ನು ರಚಿಸಿದ್ದಾರೆ. ದಾಸರ ರಚನೆಗಳನ್ನೂ 'ಪದ'ಗಳೆಂದು ಗುರುತಿಸುವ ವಾಡಿಕೆ ಹಿಂದೆ ಇದ್ದಿತಾದರೂ ಕ್ರಮೇಣ ಪದವೆಂಬುದು ಪ್ರತ್ಯೇಕ ಅಸ್ತಿತ್ವವುಳ್ಳ ವಿಶಿಷ್ಟ ರಚನಾಪ್ರಕಾರ ಎಂಬ ವಿಭಾಗ ಪಡೆಯಿತು. ಆದಾಗ್ಯೂ ದಾಸವರೇಣ್ಯರ ಎಷ್ಟೋ ರಚನೆಗಳು ಪದ ಅಥವಾ ಜಾವಳಿಗಳ ಶೃಂಗಾರಭಾವವನ್ನೇ ಹೊರಸೂಸುವುದನ್ನು ಖಚಿತವಾಗಿ ನಾವು ಕಾಣಬಹುದು. ಉದಾಹರಣೆಗೆ ಶ್ರೀಪಾದರಾಯರ ಈ ಸಾಲುಗಳು:

"ಒಲ್ಲೆನವ್ವ ನಮ್ಮನಲ್ಲ ಬಾರದಿದ್ದರೆ, ತನು ಹೊರೆಯನೊಲ್ಲೆನವ್ವ ಮುನ್ನ ತಾನಾಡಿದ ಮಾತಮರೆತು ಎನ್ನ ವನದೊಳಗೀಡಾಡಿ ವನಜಾಕ್ಷನು ಪುರದ ವನಿತೆಯರನು ಮೆಚ್ಚಿ ಪೋದ"

ಹೀಗೆಯೇ ವಾದಿರಾಜರ "ಬಾರನೇಕೆ ಮುರಾರಿ, ಮಧುರೆಯ ನಾರಿಯರ ಮೆಚ್ಚಿದನೋ" ಹಾಗೂ ಪುರಂದರರ "ಬೆರೆವುದಿನ್ನೆಂದು ನಾವು ಶ್ರೀಪತಿಯ ಸಂಗ ದೊರೆವುದು ಇನ್ನೆಂದಿಗಮ್ಮಾ" ಸಾಲುಗಳನ್ನು ಗಮನಿಸಬಹುದು.

ಜಾವಳಿ ಕ್ಷೇತ್ರಕ್ಕೆ ಎರಡು "ಆಧಾರಸ್ತಂಭಗಳೆಂದು ಪರಿಗಣಿತರಾದವರು "ತಿರುಪ್ಪನಂದಲ್ ಪಟ್ಟಾಭಿರಾಮಯ್ಯ" ಮತ್ತು "ಧರ್ಮಪುರಿ ಸುಬ್ಬರಾಯರು." ಇವರೇ ಅಲ್ಲದೆ ಅಳಿಯ ಲಿಂಗರಾಜು ಬಸಪ್ಪಶಾಸ್ತ್ರಿ, ಕರೂರು ದಕ್ಷಿಣಾಮೂರ್ತಿ, ವೆಂಕಟಾದ್ರಿಶಾಮರಾಯರು, ಬಳ್ಳಾರಿ ರಾಜಾರಾಯರು, ಹರಪನಹಳ್ಳಿ ರಾಮಾಚಾದ್ಯರು, ಸಂಗೀತಂ ವೆಂಕಟರಮಣಯ್ಯ, ಪಟ್ಲಂಸುಬ್ರಹ್ಮಣ್ಯ ಅಯ್ಯರ್, ರಾಂನಾಡ್ ಶ್ರೀನಿವಾಸ ಅಯ್ಯಂಗಾರ್, ವೀಣಾಕೃಷ್ಣಮಾಚಾರ್, ವಿದ್ಯಲ ನಾರಾಯಣಸ್ವಾಮಿ ಹಾಗೂ ತಟ್ಟೂರು ಸಹೋದರರು ಮುಂತಾದವರೂ ಜಾವಳಿ ಕರ್ತೃಗಳಾಗಿದ್ದಾರೆ.

ಇನ್ನು ಜಾವಳಿಗಳ ಭಾಷೆಯ ಬಗೆಗೆ ಹೇಳುವುದಾದರೆ, "ಶಬ್ದಾರ್ಥ ಸಹಿತ ಕಾವ್ಯಂ" ಎಂಬುದು ಪ್ರಸಿದ್ಧ ಸೂತ್ರ. ಸಂಗೀತಕ್ಕೆ ಸಂಬಂಧಿಸಿದಂತೆ "ಶಬ್ದ" ಎಂಬ ಇಲ್ಲಿನ ಪದಕ್ಕೆ ಸಾಹಿತ್ಯ" ಅಥವಾ "ಮಾತು" ಎಂದು ಅರ್ಥೈಸಬಹುದು. ಸಂಗೀತದಲ್ಲಿ ಈ ಮಾತು ಯಾವ ಭಾಷೆಯದಾಗಿರಬೇಕು ಎಂಬುದು ಜಿಜ್ಞಾಸೆಯ ವಿಷಯವಲ್ಲ. ಆದರೂ ಕೆಲವೊಮ್ಮೆ ಭಾಷ ವ್ಯಾಮೋಹದಿಂದ ಗೊಂದಲಗಳೇರ್ಪಟ್ಟ ಸಂದರ್ಭಗಳೂ ಉಂಟು. ಇದೇನೇ ಇರಲಿ, ಮಾತು ಅಥವಾ ಸಾಹಿತ್ಯದ ಉದ್ದೇಶ ಮನದ ಭಾವಗಳ ಅಭಿವ್ಯಕ್ತಿಯಷ್ಟೆ! ಆದ್ದರಿಂದಲೇ ಕರ್ನಾಟಕ ಸಂಗೀತದ ಅನೇಕ ವಾಗ್ಗೇಯಕಾರರು ತಮ್ಮ ಮಾತೃಭಾಷೆ ಅಥವಾ ನಾಡಭಾಷೆಯೆಂಬ ಸಂಕುಚಿತ ಭಾವವಿಲ್ಲದೆ ಸಂಗೀತಕ್ಕೆ ಒಗ್ಗುವ ಇತರ ಭಾಷೆಗಳನ್ನೂ ರಚನೆಗಳಲ್ಲಿ ಬಳಸಿರುವುದುಂಟು. ಹೀಗಾಗಿ ಉಪಲಬ್ಧ ಜಾವಳಿಗಳಲ್ಲಿ ಅಧಿಕ

ಸಂಖ್ಯೆಯವು ಕನ್ನಡ ಮತ್ತು ತೆಲಗು ಭಾಷೆಗಳಲ್ಲಿವೆ. ಮಣಿಪ್ರವಾಳ'ದ ಜಾವಳಿಗಳೂ ಕೆಲವು ಅಲ್ಲಲ್ಲಿ ಕಾಣಬರುತ್ತವೆ. ಮಣಿಪ್ರವಾಳವೆಂದರೆ ಒಂದೇ ರಚನೆಯಲ್ಲಿ



ಸಾಹಿತ್ಯಾರ್ಥಕ್ಕೆ ಲೋಪಬಾರದಂತೆ ಒಂದಕ್ಕಿಂತ ಹೆಚ್ಚು ಭಾಷೆಗಳ ಪ್ರಯೋಗಮಾಡುವುದು. ಇಂತಹ ಮಣಿಪ್ರವಾಳ ಜಾವಳಿಗೆ ಒಂದು ಉದಾಹರಣೆಯಾಗಿ ಕರೂರು ಶಿವರಾಮಯ್ಯನವರ ಕೆಳಗಿನ ಜಾವಳಿಯನ್ನು ಹೆಸರಿಸಬಹುದು.

"My dear come, ಮರುವಾ ಈ ವೇಳಾ, ಕಾಲಹರಣಂ

For me now ಬೆಳದಿಂಗಳು ಬಿಸಿಲಾಗಿದೆ"

ಸಾಧಾರಣವಾಗಿ ಜಾವಳಿಗಳು ಪಲ್ಲವಿ, ಅನುಪಲ್ಲವಿ, ಚರಣ ಅಥವಾ ಹಲವು ಚರಣಗಳನ್ನು ಹೊಂದಿ ಕೃತಿಯನ್ನೇ ಹೋಲುತ್ತವೆ. ಕೆಲವು ಜಾವಳಿಗಳಲ್ಲಿ ಅನುಪಲ್ಲವಿಯಿಲ್ಲದೆ ಪಲ್ಲವಿ ಮತ್ತು ಚರಣಗಳಷ್ಟೇ ಇರಬಹುದು. ಕೆಲವು ಜಾವಳಿಗಳು ಜತಿ, ಸ್ವರಾಕ್ಷರ ಹಾಗೂ ಸಂಗತಿಗಳನ್ನು ಹೊಂದಿರುತ್ತವೆ. ಜಾವಳಿಗಳು ಬಹುಮಟ್ಟಿಗೆ ಮಧ್ಯಮಕಾಲದಲ್ಲೇ ಇರುವುದಾದರೂ ಅಪರೂಪವಾಗಿ ವಿಳಂಬದ ಜಾವಳಿಗಳನ್ನೂ ಕಾಣಬಹುದು. ಉದಾಹರಣೆಗೆ ಪಟ್ಟಾಭಿರಾಮಯ್ಯನವರ "ಏಮಿ ಮಾಯಮು ಜೇಸಿ ಪೋತಿವೋ" (ಕಾಂಬೋಜಿರಾಗ), ವೆಂಕಟಾದ್ರಿ ಶಾಮರಾಯರ "ಬಾರೋ ಪ್ರಿಯಕರ" ರಚನೆ ಬ್ಯಾಂಡ್ ಟ್ಯೂನ್‌ನಲ್ಲಿದೆ. ಹುಲ್ಲಹಳ್ಳಿ ರಾಮಣ್ಣನವರ "ಬಾರೋ

ಬಾರೋ ಬಾರೋ ಮನೆಗೆ" ತ್ರಿಶ್ರಗತಿಯಲ್ಲಿದೆ. 'ಮಾತಾಡಬಾರದೇನೋ ಎಂದಾರಂಭವಾಗುವ ಜಾವಳಿಯು ಬೇರೆ ಬೇರೆ ಅಂಕಿತಗಳಲ್ಲಿ ಮೂರು-ನಾಲ್ಕು ಮಾದರಿಯಲ್ಲಿ ಲಭ್ಯವಿದೆ. ಒಂದೇ ಮಟ್ಟಿನಲ್ಲಿರುವ "ಎಂತಟಿಕುಲುಕೇ" ಮತ್ತು "ಏಲತಳುಕೇ" ಎಂಬೆರಡು ಜಾವಳಿಗಳನ್ನು ಕಾಣಬಹುದು. ಹಾಗೆಯೇ ಪಟ್ಲಂ ಸುಬ್ರಮಣ್ಯ ಅಯ್ಯರ್ ಅವರ "ಮರಿಯಾದ ತೆಲಿಯಕನೆ" ಜಾವಳಿಗೆ ಅದೇ ರಾಗದಲ್ಲಿ ಕನ್ನಡ ರೂಪಾಂತರವೊಂದಿದೆ.

ಇನ್ನು ಕಡೆಯದಾಗಿ, ಜಾವಳಿಗಳ ರಾಗ ತಾಳಗಳ ಬಗೆಗೆ ಸ್ಥೂಲವಾಗಿ ಹೇಳುವುದಾದರೆ, ಇವು ಸಾಧಾರಣವಾಗಿ ತೋರಿ ಖರಹರಪ್ರಿಯ, ಕಾನಡ, ಅಠಾಣಾ, ಕಾಂಬೋಜಿ, ಸಾವೇರಿ, ದೇಶ್ಯತೋಡಿ, ಬೇಹಾಗ್, ಯಮುನಕಲ್ಯಾಣಿ ಮುಂತಾದ ರಾಗಗಳಲ್ಲಿ ಕಾಣಬರುತ್ತವೆ. ಬಹುಶಃ ಜಾವಳಿಕಾರರ ಪ್ರಿಯರಾಗ ಕಮಾಚ್. ಈ ರಾಗದಲ್ಲಿ ಹೆಚ್ಚು ಜಾವಳಿಗಳಿವೆ. ಹಾಗೆಯೇ ಅಪರೂಪರಾಗವಾದ ಜಿಂಗ್ಲಾ ರಾಗದಲ್ಲೂ ಜಾವಳಿಯಿದೆ. ನಿರ್ದಿಷ್ಟವಾಗಿ ಸ್ವರಸಂಯೋಜನೆಗೊಂಡ ಜಾವಳಿಗಳೇ ಅಲ್ಲದೆ ದಾಸರ ರಚನೆಗಳಿಗಿರುವಂತೆ ರಾಗ-ತಾಳ

ನಿರ್ದೇಶನ ಮಾತ್ರ ಉಳ್ಳ ಜಾವಳಿಗಳೂ ಉಂಟು, ಉದಾಹರಣೆಗೆ ಸಂಗೀತ ವೆಂಕಟರಮಣಯ್ಯನವರ ಜಾವಳಿಗಳು, ಜಾವಳಿಗಳಲ್ಲಿ ರಂಜನೆಯೇ ಪ್ರಧಾನವೆನಿಸಿ ಕೆಲವೊಮ್ಮೆ ಶಾಸ್ತ್ರೀಯತೆಯ ಕಟ್ಟುಪಾಡುಗಳನ್ನು ಇವು ಮೀರಿದಂತಷಿಎ ಕಾಣಬರುವುದುಂಟು ಎಂದರೆ, ರಾಗಗಳ ಲಕ್ಷಣ ರೀತ್ಯಾ ಸಂಚಾರಗಳಿಲ್ಲದೆ ಅನ್ಯರಾಗುವರ ಪ್ರಯೋಗದಲ್ಲಿ ನುಸುಳುವ ಸಾಧ್ಯತೆಯೂ ಉಂಟು. ಬಹುತೇಕ ಚಾವಳಿಗಳು ಆದಿ, ರೂಪಕ, ಛಾಪುತಾಳಗಳಲ್ಲಿ, ಅಪರೂಪದ ಮಿಶ್ರಏಕ ಮುಂತಾದ ತಾಳಗಳಲ್ಲಿ ಕಾಣಬರುತ್ತವೆ. ಅತೀತ, ಅನಾಗತ ಹಾಗೂ ಸಮ ಎಡುಪಿನಲ್ಲಿ ಇವು ಆಳವಟ್ಟಿರುವುದು ಒಟ್ಟಾರೆ ಜಾವಳಿಗಳು ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ, ಅದರಲ್ಲೂ ನಾಟ್ಯಕ್ಷೇತ್ರದಲ್ಲಿ ಮಹತ್ವದ ಸ್ಥಾನ ಪಡೆದಂತಹ ರಚನೆಗಳೆಂಬುದಂತೂ ದಿಟ.

## ಅಗ್ನಿ ಮತ್ತು ಮಳೆ : ಸ್ತ್ರೀ ಅಭಿವ್ಯಕ್ತಿ ನೆಲೆಗಳು

ಜಗದೇವಿ ಕಲಕಟ್ಟಿ

ಮಹಾಭಾರತದ ವನಪರ್ವದ "ಯುವಕ್ರೀತನ ಕಥೆ" ಆಧಾರಿತ ಪೌರಾಣಿಕ ನಾಟಕ ಅಗ್ನಿ ಮತ್ತು ಮಳೆ, ೧೯೯೪ ಇದು ಅಮೇರಿಕೆಯ ಖ್ಯಾತ ನಾಟಕ ತಂಡ ಥಿಟರ್‌ನವರಿಗಾಗಿ ಕಾರ್ನಾಡರು ಈ ನಾಟಕ ರಚಿಸಿದ್ದಾರೆ. 'TheFire and The Rain' ಎಂಬ ಹೆಸರಿನಲ್ಲಿ ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ. ಈ ನಾಟಕದ ಹಿಂದಿ ಅನುವಾದ 'ಅಗ್ನಿ ವರ್ಷ' ಆಗಿದೆ. ಕಾರ್ನಾಡರ ಮಹತ್ವಾಕಾಂಕ್ಷಿ ನಾಟಕದಲ್ಲಿ ಇದು ಕೂಡ ಒಂದಾಗಿದೆ.

ಗಿರೀಶ ಕಾರ್ನಾಡರು ಪ್ರತಿಭಾವಂತ ಕಲಾವಿದರು, ನಾಟಕಕಾರರು. ಅವರ ಅಗ್ನಿ ಮತ್ತು ಮಳೆ ೧೯೯೪ರಲ್ಲಿ ಪ್ರಕಟವಾದ ವಿಶೇಷ ನಾಟಕಗಳಲ್ಲಿ ಒಂದಾಗಿದೆ. ಪೌರಾಣಿಕ ನಾಟಕಗಳಾದ ಹಯವದನ, ಹಿಟ್ಟಿನ ಹುಂಜ, ಯಯಾತಿ ನಾಟಕಗಳಂತೆ ಅಗ್ನಿ ಮತ್ತು ಮಳೆ ನಾಟಕ ಕೂಡ ಪೌರಾಣಿಕ ಕಥಾವಸ್ತು ಹೊಂದಿದ್ದರೂ ವಾಸ್ತವದ ನೆಲೆಯಲ್ಲಿ ಇಲ್ಲಿನ ಪಾತ್ರಗಳನ್ನು ಶೋಧಿಸುತ್ತಾರೆ.

ಈ ನಾಟಕದಲ್ಲಿ ಬರುವ ಎರಡು ಪ್ರಮುಖವಾದ ಸ್ತ್ರೀ ಪಾತ್ರಗಳಿವೆ. ಒಂದು ನಿತ್ತಲೆ ಇನ್ನೊಂದು ವಿಶಾಖೆ. ನಿತ್ತಿಲೆ ಅಧೀನ ಸಂಸ್ಕೃತಿ ಅಂದರೆ ಬುಡಕಟ್ಟು ಸಂಸ್ಕೃತಿಯಿಂದ ಬಂದವಳು, ವಿಶಾಖೆ ವೈದಿಕ ಸಂಸ್ಕೃತಿ ಅಂದರೆ ಪ್ರಧಾನ ಸಂಸ್ಕೃತಿಯ ಪ್ರತಿರೂಪ. ಈ ಎರಡು ಪಾತ್ರಗಳು ಪ್ರಧಾನ ಹಾಗೂ ಅಧೀನ ವರ್ಗಗಳನ್ನು ಪ್ರತಿನಿಧಿಸುತ್ತವೆ. ಮುಖ್ಯವಾಗಿ ನಾಟಕದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿಯ ಸಂಘರ್ಷವಿದೆ. ಪ್ರಧಾನ ಸಂಸ್ಕೃತಿಯಲ್ಲಿ ವಿಶಾಖೆ ಅನುಭವಿಸುವ ತಲ್ಲಣಗಳು ಒಂದು ವಿಧವಾದರೆ ಬುಡಕಟ್ಟು ಸಂಸ್ಕೃತಿಯ ನಿತ್ತಿಲೆ ಅನುಭವಿಸುವ ತಲ್ಲಣಗಳು ಬೇರೆಯೇ ಆಗಿವೆ. ಒಟ್ಟಿನಲ್ಲಿ ಈ ಎರಡು ಪಾತ್ರಗಳು ನೋವು ಅನುಭವಿಸುವ ಪಾತ್ರಗಳಾಗಿವೆ.

ಈ ನಾಟಕದಲ್ಲಿ ಬರುವ ಪುರುಷ ಪಾತ್ರಗಳೆಂದರೆ ರೈಭ್ಯ, ಪರಾವಸು, ಯುವಕೀತ ಮತ್ತು ಅರವಸು. ಈ ನಾಟಕದ ಪ್ರಮುಖ ಪುರುಷ ಪಾತ್ರವಾಗಿ ಕಾಣುವ ಯುವಕ್ರೀತ, ಹತ್ತು ವರ್ಷಗಳ ಕಾಲ ತಪಸ್ಸನ್ನು ಮಾಡಿದವನು. ಆದರೆ ತಪಸ್ಸಿನಿಂದ ಆತನಿಗೆ ತೃಪ್ತಿಯಿಲ್ಲ, ಗೊಂದಲಗಳಿಂದ ಹೊರಗೆ ಬರಲು ಆತನಿಗೆ ಸಾಧ್ಯವಾಗಿಲ್ಲ.

ಸ್ತ್ರೀ ಪಾತ್ರಗಳಲ್ಲಿ ನಿತ್ತಿಲೆ ಈ ನಾಟಕದಲ್ಲಿ ಬರುವ ಪ್ರಮುಖ ಪಾತ್ರ ಗಿರಿಜನ ಸಂಸ್ಕೃತಿಯವಳಾದ ಇವಳು ವೈದಿಕ ಸಂಸ್ಕೃತಿಯ ಜೀವ ವಿರೋಧಿ ನೆಲೆಗಳನ್ನು ಪ್ರಶ್ನಿಸಿದ್ದಾಳೆ. ಪರಾವಸುವಿನ ತಮ್ಮನಾದ ಅರವಸುವನ್ನು ಪ್ರೀತಿಸುವ ನಿತ್ತಲೆ ದಿಟ್ಟ ಹೆಣ್ಣು, ಇಡೀ ನಾಟಕದಲ್ಲಿ ವೈಚಾರಿಕ ನೆಲೆಯಲ್ಲಿ ಕಾರ್ನಾಡರು ಈ ಪಾತ್ರವನ್ನು ಚಿತ್ರಿಸಿದ್ದಾರೆ.



“ಈ ಸವರ್ಣೀಯರಿಗೆ ಬೇಡತಿಯರು ಇಟ್ಟುಕೊಳ್ಳಲಿಕ್ಕೆ ಬೇಕು, ಕಟ್ಟಿಕೊಳ್ಳಲಿಕ್ಕೆ ಬೇಡ” ಎಂದು ನಿತ್ತಿಲೆ ವೈದಿಕ ಸಂಸ್ಕೃತಿಯ ಹುಳುಕುಗಳನ್ನು ಎತ್ತಿತೋರಿಸುತ್ತಾಳೆ. ವೈದಿಕ ಸಂಸ್ಕೃತಿಯ ಪೊಳ್ಳು ಆಚರಣೆಗಳನ್ನು ವಿರೋಧಿಸುತ್ತಾಳೆ. ೧೨ನೇ ಶತಮಾನದ ಶಿವಶರಣರ ವೈದಿಕ ಸಂಸ್ಕೃತಿಯ ಆಚರಣೆಗಳನ್ನು ವಿರೋಧಿಸುತ್ತಾ ದೇಹವನ್ನು ದೇವಾಲಯವಾಗಿರಿಸಿ ಆತ್ಮನಲ್ಲಿ ಪರಮಾತ್ಮನನ್ನು ತೋರಿಸಿ ಕಾಯಕವೇ ಕೈಲಾಸವೆಂದು ನುಡಿದಂತೆ ನಡೆದರು. ವಚನಕಾರ ಅಲ್ಲಮ ಪ್ರಭುವಿನ ವಚನ ಹೆಣ್ಣಿಗಾಗಿ ಸತ್ತಿದ್ದು ಕೋಟಿ ಕೋಟಿ ಹೊನ್ನಿಗಾಗಿ ಸತ್ತಿದ್ದು ಕೋಟಿ ಎಂಬಂತೆ ಈ ನಾಟಕದಲ್ಲಿ ಸಾವು ಸಂಭವಿಸುವುದು ಹೆಣ್ಣಿಗಾಗಿಯೇ.

ಈ ನಾಟಕದಲ್ಲಿ ನಿತ್ತಿಲೆ ೧೬ ವರ್ಷದ ಹುಡುಗಿ, ಚಿಕ್ಕ ವಯಸ್ಸಿನಲ್ಲಿಯೇ ಅವಳಿಗೆ ಎಷ್ಟೊಂದು ವೈಚಾರಿಕತೆ ಇದೆ. ಅವಳು ತಾನು ಅರವಸುಗಾಗಿ ತನ್ನ ಬುಡಕಟ್ಟಿನ ಎಲ್ಲಾ ಬಂಧನಗಳನ್ನು ಬಿಡಿಸಿಕೊಂಡು ಬರುವಷ್ಟು ಗಟ್ಟಿಮನಸ್ಸು, ಅರವಸುವನ್ನು ನಿತ್ತಿಲೆ ಅರ್ಥಮಾಡಿಕೊಂಡಷ್ಟು ಯಾರು ಅವನನ್ನು ಅರಿತುಕೊಂಡಿಲ್ಲ. ಇಲ್ಲಿ ನಿತ್ತಿಲೆ ಅತ್ಯಂತ ಜೀವಂತಿಕೆಯ ಪಾತ್ರ. ಮೇಲುವರ್ಗದ ಅರವಸುವನ್ನು ಪ್ರೀತಿಸುವ ಆಕೆ ಅವನ ಮುಗ್ಧತೆ ಹಾಗೂ ಮಗುವಿನಂಥ ಮನಸ್ಸನ್ನು ಇಷ್ಟಪಡುತ್ತಾಳೆ. ಕಾರಣಾಂತರಗಳಿಂದ ಅರವಸುವಿಗೆ ನಿತ್ತಿಲೆಯನ್ನು ಮದುವೆಯಾಗುವುದು ಆಗುವುದಿಲ್ಲ. ಏಕೆಂದರೆ ಈ ನಾಟಕದ ಎಲ್ಲ ಕ್ರಿಯೆಗಳು ಪೂರ್ವನಿಯೋಜಿತ ಎಂಬಂತೆ ಘಟಿಸಿ ಹೋಗುತ್ತವೆ. ನಿತ್ತಿಲೆಯ ಜೀವನ ಪ್ರೀತಿ ಅನನ್ಯವಾದದ್ದು, ಹಾಗೂ ಅಗಾಧವಾದದ್ದು. ವಿಶಾಖೆಗಿಂತ ತುಂಬ ಗಟ್ಟಿಯಾದ ಪಾತ್ರ ನಿತ್ತಿಲೆಯದು, ಅರವಸುವಿನ ಮೇಲಿನ ಪ್ರೀತಿ ಅಭಿವ್ಯಕ್ತಿಸುವಲ್ಲಿ ಅವಳಿಗೆ ಯಾವ ಅಳುಕು ಅಂಜಿಕೆಯಿರಲಿಲ್ಲ. ಇದ್ದುದನ್ನು ಇದ್ದ ಹಾಗೆ ಮಾತನಾಡುವ ದಿಟ್ಟ ಹೆಣ್ಣು, ನಿತ್ತಿಲೆಗೆ ಯುವಕ್ರೀತನ ದೀರ್ಘಕಾಲದ ತಪಸ್ಸಿನ ಬಗ್ಗೆ ಅಸಮಾಧಾನವಿದೆ. ಅವಳು ಯುವಕ್ರೀತನನ್ನು ಕುರಿತು ನಿನ್ನ ಸಾವು ಯಾವಾಗ ಇದೆ? ಮಳೆ

ಯಾವಾಗ ಬರುತ್ತೆ ಎಂದು ಪ್ರಶ್ನಿಸುತ್ತಾಳೆ. ನಿತ್ತಿಲೆಯು ಎರಡು ಪ್ರಶ್ನೆಗಳಿಗೆ ಯುವಕ್ರೀತನಲ್ಲಿ ಉತ್ತರವಿಲ್ಲ. ಯುವಕೀತನ ವರ್ತನೆಗೆ “ಕೆಲವರ ನೀಚತನಕ್ಕೆ ನಾಯಿ ಕಿರುಬ ನಾಚಬೇಕು” ಎಂದು ಆಕ್ರೋಶ ವ್ಯಕ್ತಪಡಿಸುತ್ತಾಳೆ. ಇದರಿಂದ ಉಗ್ರನಾದ ಯುವಕೀತ ನಿತ್ತಿಲೆಗೆ “ನೀನು ಇನ್ನು ಒಂದು ತಿಂಗಳೊಳಗೆ ಸಾಯುತ್ತೀಯಾ” ಎಂದು ಶಾಪ ನೀಡುತ್ತಾನೆ. ಹಾಗೆಯೇ ನಿತ್ತಿಲೆ ಸತ್ತು ಹೋಗುತ್ತಾಳೆ. ೧೦ ವರ್ಷಗಳ ಕಾಲ ಮಾಡಿದ ತಪಸ್ಸಿನ ಫಲ ವಾಸ್ತವದಲ್ಲಿ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಪ್ರಯೋಜನಕ್ಕೆ ಬಾರದ ಸಿದ್ಧಿ ಸಾಧನೆ ವ್ಯರ್ಥ ಎಂಬುದು ಅವಳ ನಿಲುವು.

ಅರಸುವಿಗೆ ನಿತ್ತಿಲೆ ಸಿಗದಂತೆ ಮಾಡುವುದು ಎಲ್ಲ ಪೂರ್ವನಿಯೋಜಿತ ಎಂಬಂತೆ ತೋರುತ್ತದೆ. ಯುವಕ್ರೀತನ ಸಂಸ್ಕಾರ ಮಾಡಿ ಬರುವಷ್ಟರಲ್ಲಿ ಪಂಚಾಯಿತಿ ಮುಗಿದುಬಿಟ್ಟಿರುತ್ತದೆ. ಪರಾವಸು ತಂದೆ ರೈಭ್ಯನನ್ನು ಕೊಲ್ಲುವುದು ಮತ್ತೆ ಪಿತೃಹತ್ಯೆ ಆರೋಪವನ್ನು ಅರವಸುವಿನ ಮೇಲೆ ಬರುವ ಹಾಗೆ ಮಾಡುವುದು. ದ್ವೇಷ, ಅಸೂಯೆ, ಹಗೆತನ, ಸಂಘರ್ಷ ಅಧಿಕಾರದ ಮೋಹ, ಲಾಲಸೆ, ಸ್ವಾರ್ಥ ಎದ್ದು ಕಾಣುತ್ತದೆ.

ವೈದಿಕ ಸಂಸ್ಕೃತಿ ಅಂದರೆ ಪ್ರಧಾನ ಸಂಸ್ಕೃತಿಯ ಪುರುಷ ಅಹಂಕಾರಕ್ಕೆ ಬಲಿಯಾಗಿ ನಲುಗುವ ಹೆಣ್ಣಾಗಿ ಇಲ್ಲಿ ವಿಶಾಖೆ ಕಾಣಿಸಿಕೊಳ್ಳುತ್ತಾಳೆ. ಗಂಡು ತನ್ನ ಯೋಜಿತ ಕೆಲಸಗಳಿಗೆ ಹೇಗೆ ಹೆಣ್ಣನ್ನು ಬಳಸಿಕೊಳ್ಳುತ್ತಾನೆ ಎಂಬುದನ್ನು ವಿಶಾಖೆಯ



ಪಾತ್ರದಲ್ಲಿ ಕಾಣಬಹುದಾಗಿದೆ. ರೈಭ್ಯ, ಪರಾವಸು, ಯುವಕೀತ ಅವಳನ್ನು ಅಸ್ತವಾಗಿ ಬಳಸಿಕೊಳ್ಳುತ್ತಾರೆ. ಅಧಿಕಾರದ ಲಾಲಸೆಗಾಗಿ ಹೆಣ್ಣನ್ನು ಅಸ್ತವಾಗಿ ಬಳಸಿಕೊಳ್ಳುವುದು ವಿಶಾಖೆಯ ಪಾತ್ರದಲ್ಲಿ ಕಾಣಬಹುದಾಗಿದೆ. ಯಾವ ಪುರುಷನು ತನಗಿಂತ ಮೇಲಾಗಿ ಅಥವಾ ತನ್ನ ಸರಿಸಮಾನವಾಗಿ ಹೆಣ್ಣನ್ನು ನೋಡುವುದಕ್ಕೆ ಇಷ್ಟಪಡುವುದಿಲ್ಲ. ಅವಳು ಯಾವಾಗಲೂ ತನ್ನ ಅಧೀನದಲ್ಲಿಯೇ ಇರಬೇಕು. ಇಲ್ಲಿ ವಿಶಾಖೆಗೆ ಮಾನಸಿಕ ಗೊಂದಲಗಳಿಂದ ಬಿಡಿಸಿಕೊಳ್ಳಲು ಆಗುವುದಿಲ್ಲ. ಅವಳಿಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲ. ಮಹಿಳೆಯ ಮಾನಸಿಕ ತೊಳಲಾಟವನ್ನು ಹಿಡಿದಿಡುವಲ್ಲಿ ಕಾರ್ನಾಡರು ಇಲ್ಲಿ ಯಶಸ್ವಿಯಾಗಿದ್ದಾರೆ.

ತನ್ನ ಸ್ವಾರ್ಥಕ್ಕಾಗಿ ಪರಾವಸು ತನ್ನ ತಂದೆ ರೈಭ್ಯನನ್ನು ಕೊಲ್ಲಲು ವಿಶಾಖೆಯನ್ನು ಬಳಸಿಕೊಳ್ಳುತ್ತಾನೆ. ಯಜ್ಞವನ್ನು ಬಿಟ್ಟು ಹೆಂಡತಿಯನ್ನು ನೋಡಲು ಬಂದವನಂತೆ ಕಂಡರೂ ಆತನ ಉದ್ದೇಶ ಬೇರೆಯದೇ ಆಗಿದೆ. ರೈಭ್ಯನಿಂದ ತಾನು ಅನುಭವಿಸಿದ ನೋವು, ಯಾತನೆ, ಸಂಕಷ್ಟದ ಕುರಿತು ವಿಶಾಖೆ ಗಂಡ ಪರಾವಸುವಿಗೆ ಹೇಳುತ್ತಾಳೆ. ಎಂಬತ್ತು ವರ್ಷದ ರೈತ್ಯ ತನ್ನ ಸೊಸೆಯ ಮೇಲೆ ಅತ್ಯಾಚಾರ ಮಾಡುವುದು ಪುರುಷ ಅಹಂಕಾರ

ದ್ಯೋತಕ. ಇನ್ನೊಂದು ಕಡೆ ತನ್ನ ಪ್ರೇಮಿ ಯುವಕೀತ, ಯಜ್ಞದ ಅಧ್ವರ್ಯುವಾಗಿ ಬಹಳ ವರ್ಷಗಳ ಕಾಲ ದೂರವಾದ ಗಂಡ ಇವೆಲ್ಲದರ ನಡುವೆ ವಿಶಾಖೆ ನಲುಗಿ ಹೋಗುತ್ತಾಳೆ.

"ಶೀಲ ಪಾವಿತ್ರ್ಯತೆ ಚಾರಿತ್ರ್ಯ" ಎಂಬುದು ಹೆಣ್ಣಿಗೆ ಮಾತ್ರ ಸೀಮಿತವೇ? ಆ ಸಂದರ್ಭದಲ್ಲಿ ಗಂಡಿನ ಪಾತ್ರ ಏನು ಇಲ್ಲವೇ ಎಂಬ ಪ್ರಶ್ನೆ ಮೂಡುತ್ತದೆ. ಗಂಡನ ಪರಾವಸು ಪರ್ಜನ್ಯ ಸತ್ರಯಜ್ಞದಲ್ಲಿ ತೊಡಗಿರುವುದರಿಂದ ಒಂದು ಕಡೆ ಮಾವ ರೈಭ್ಯನಿಂದ ಅತ್ಯಾಚಾರ ಇನ್ನೊಂದು ಕಡೆ ಒಂಟಿತನ ಅನುಭವಿಸುತ್ತಾಳೆ. ಇಂತಹ ಸಂದರ್ಭದಲ್ಲೂ ಅವಳಿಗೆ ಯುವಕ್ರೀತನ ಜೊತೆಗಿನ ಸಂಬಂಧ ಹಿತವೆನಿಸುತ್ತದೆ. ರೈಭ್ಯ ಯುವಕ್ರೀತನ ಅಸೂಯೆ, ಮತ್ಸರದ ನಡುವೆ ಯುವಕ್ರೀತನನ್ನು ಉಳಿಸುವ ಪ್ರಯತ್ನ ಮಾಡುತ್ತಾಳೆ.

ಮನುಷ್ಯ ಬಹಳ ಅಪಾಯಕಾರಿ ಪ್ರಾಣಿ. ಅದನ್ನು ರೈಭ್ಯನ ಬಾಯಲ್ಲಿ ಕಾರ್ನಾಡರು ಹೀಗೆ ಹೇಳಿಸುತ್ತಾರೆ. "ಇಲ್ಲಿ ಹೆದರಿಕೆ ಇರೋದು ಕಾಡು ಮೃಗಗಳದಲ್ಲ ಮನುಷ್ಯರದ್ದು" ಮೃಗಗಳಿಗಿಂತ ಕ್ರೂರ ಮನಸ್ಸು ಮನುಷ್ಯನಿಗಿದೆ. ಪ್ರಾಚೀನ ಕಾಲದಿಂದಲೂ ಹೆಣ್ಣನ್ನು ಪಾವಿತ್ರ್ಯ ಮತ್ತು ಪತಿತೆ ಎಂಬ ಮೌಲ್ಯಗಳಲ್ಲಿ ಬಂಧಿಸಿರುವುದನ್ನು ಕಾಣುತ್ತೇವೆ. ಇಲ್ಲಿ ಕಾರ್ನಾಡರು ಹೆಣ್ಣಿನ ಒಳತೋಟಿಯನ್ನು ಸೂಕ್ಷ್ಮವಾಗಿ ತೆರೆದಿಡುತ್ತಾರೆ. ಅನಾದಿ ಕಾಲದಿಂದಲೂ ಹೆಣ್ಣನ್ನು ಎಷ್ಟು ಕೀಳಾಗಿ ಕಾಣುತ್ತಿದ್ದಾರೆಂಬುದನ್ನು ವಿಶಾಖೆ ಪಾತ್ರದಲ್ಲಿ ಚಿತ್ರಿಸುತ್ತಾರೆ. ಹೆಣ್ಣಿನಿಂದ ಈ ಸಮಾಜ ತ್ಯಾಗ, ಪ್ರೀತಿ, ಸಹನೆ, ಕರುಣೆಯನ್ನು ಬಯಸುತ್ತದೆ. ಪುರುಷ ರಾಜಕಾರಣ ಸ್ತ್ರೀ ಶಕ್ತಿಯನ್ನು ಹೇಗೆ ದಮನಗೊಳಿಸುತ್ತದೆ ಎಂಬುದನ್ನು ಈ ಪಾತ್ರದಲ್ಲಿ ಕಾಣಬಹುದಾಗಿದೆ.

ಈ ನಾಟಕವನ್ನು ಗಮನಿಸಿದಾಗ ಇಂದಿಗೂ ಹೆಣ್ಣಿನ ತಲ್ಲಣಗಳು, ಸಂಕಟಗಳು ಜೀವಂತವಾಗಿಯೇ ಇವೆ. ಶತಮಾನಗಳಿಂದಲೂ ನೋವು ಅನುಭವಿಸುತ್ತಿದ್ದಾಳೆ. ಇಲ್ಲಿ ಬರುವ ಸ್ತ್ರೀ ಪಾತ್ರವಾದ ವಿಶಾಖೆ ಯುವಕ್ರೀತನನ್ನು ಪ್ರೀತಿಸಿ ಪರಾವಸುವನ್ನು ಮದುವೆಯಾಗುತ್ತಾಳೆ. ಸುಖ, ಸಂತೋಷ, ಸಂತೃಪ್ತಿ ಮರೀಚಿಕೆಯಾಗುತ್ತದೆ.

ಹಾಗೆಯೇ ಅರವಸುವನ್ನು ಪ್ರೀತಿಸಿ ಬೇರೆಯೊಬ್ಬನನ್ನು ಮದುವೆಯಾಗಿ ದುರಂತದಲ್ಲಿ ಕೊನೆಗೊಳ್ಳುವ ಪಾತ್ರ ನಿತ್ತಿಲೆಯದು. ಹೆಣ್ಣಿಗೆ ನೋವು, ಹಿಂಸೆ, ಅವಮಾನ, ದೌರ್ಜನ್ಯ ಹೊಸದೇನಲ್ಲ. ಇಲ್ಲಿನ ಎರಡು ಪಾತ್ರಗಳು ಅದನ್ನು ಅನುಭವಿಸುತ್ತವೆ. ಪುರುಷನ ಅಹಂಕಾರ, ಕುಟುಂಬ ರಾಜಕಾರಣ ಹೆಣ್ಣಿನ ಬಗೆಗಿನ ಮೋಹೆ ಸಹಜವಾಗಿ ಮೂಡಿಬಂದಿದೆ.

ಹಲವಾರು ವರ್ಷಗಳ ಕಾಲ ಮಳೆ ಬಾರದೆ ಬರ ಬಂದಾಗ ಮಳೆಯನ್ನು ತರಲು ಮಾಡಿದ ದೇವತಾ ಉಪಾಸನೆ ಯಜ್ಞಗಳ ಸುತ್ತ ನಾಟಕ ಹೆಣೆಯಲಾಗಿದೆ. ಇಂದ್ರ ಮೊದಲಾದ ದೇವತೆಗಳನ್ನು ಒಲಿಸಿಕೊಳ್ಳಲು ಎರಡು ವಿಭಿನ್ನ ಸಂಸ್ಕೃತಿಗಳು ನಡೆಸುವ ಕಾರ್ಯಗಳು ಹಾಗೂ ಇದರಲ್ಲಿ ಯಶಸ್ಸು ಪಡೆಯುವ ಸಂಸ್ಕೃತಿ ಇಲ್ಲಿ ಪ್ರಾಮುಖ್ಯತೆ ಪಡೆದಿದೆ. ವರುಣನ ಕೃಪೆಗಾಗಿ ಪ್ರರ್ಜನ್ಯ ಸಯಾಗ ಕೈಕೊಂಡರೆ ಇನ್ನೊಂದು ವರ್ಗದವರು ದೇವತೆಗಳನ್ನು ಉಳಿಸಿಕೊಳ್ಳಲು ಚಾಕ್ಷುಕ ಯಜ್ಞ ಅಂದರೆ ನಾಟಕ ಕೈಗೊಳ್ಳುತ್ತಾರೆ. ಇಲ್ಲಿ ಕೊನೆಗೆ ಮಳೆ ಬರುವುದು ಪರಾವಸುವಿನ ಪರ್ಜನ್ಯ ಯಜ್ಞದಿಂದಲ್ಲ. ಇಂದ್ರ ವಿಜಯ ನಾಟಕದ ನಂತರ ಮಳೆ ಬರುತ್ತದೆ. ಕಾರ್ನಾಡರು ಇಲ್ಲಿ ಜನಪದ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತಾರೆ. ಹತ್ತು ವರ್ಷಗಳಿಂದ ಮಳೆಯಿಲ್ಲದೆ ನೀರಿಲ್ಲದೆ ಹಪಹಪಿಸುತ್ತಿರುವ ಜನರಿಗೆ ನೀರುಬೇಕು. ಪರ್ಜನ್ಯಯಜ್ಞ ಅಥವಾ ಯುವಕ್ರೀತನ ತಪಸ್ಸಲ್ಲ. ಕೊನೆಗೆ ಮಳೆ ಬರುವುದು ಯುವಕ್ರೀತನ ತಪಸ್ಸಿನಿಂದಲ್ಲ. ವೈದಿಕ ಆಚರಣೆಗಳಿಂದ ಪ್ರಾರಂಭವಾದ ನಾಟಕ ಅಂತ್ಯವಾಗುವುದು ಪ್ರತಿ ಸಂಸ್ಕೃತಿಯ ಜಾತಿಗಾರರ ಇಂದ್ರವಿಜಯ ನಾಟಕ ಆಡುವುದರ ಮೂಲಕ ಮಳೆ ಬರುತ್ತದೆ. ಅಂತಿಮವಾಗಿ ಪ್ರಧಾನ ಮತ್ತು ಅಧೀನ ಸಂಸ್ಕೃತಿಯ ಮುಖಾಮುಖಿಯಲ್ಲಿ ತನ್ನತನವನ್ನು ಉಳಿಸಿಕೊಳ್ಳುವುದು ನಾಟಕದ ವೈಶಿಷ್ಟ್ಯತೆಯಾಗಿದೆ. ಕೊನೆಗೆ ಬೇಡಿಕೆ ಇರುವುದು ನಿತ್ತಿಲೆ ಮತ್ತು ಮಳೆ ಇಲ್ಲಿ ಒಂದು ರೀತಿಯ ದ್ವಂದ್ವ ಕಾಣುತ್ತದೆ. ನಿತ್ತಿಲೆ ಬದುಕಿದರೆ ಮಳೆ ಬರಲ್ಲ, ಮಳೆ ಬಂದರೆ ನಿತ್ತಿಲೆ ಸಾಯುತ್ತಾಳೆ. ಅರವಸುವಿಗೆ ನಿತ್ತಿಲೆ ಬೇಕು. ಆದರೂ ಮಳೆಯನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಏಕೆಂದರೆ ದೃಷ್ಟಿಗಿಂತ ಸಮಷ್ಠಿ ದೊಡ್ಡದು, ಹತ್ತು ವರ್ಷಗಳಿಂದ ಮಳೆ ಇಲ್ಲದೇ ತಹತಹಿಸುತ್ತಿರುವ ಜನರಿಗೆ ನೀರು ಬೇರು, ಮಳೆ ಬರುವುದರೊಂದಿಗೆ ನಾಟಕ ಮುಕ್ತಾಯಗೊಳ್ಳುತ್ತದೆ. ಒಂದನ್ನು ಪಡೆಯಬೇಕಾದರೆ ಇನ್ನೊಂದನ್ನು ಕಳೆದುಕೊಳ್ಳಬೇಕಾಗುತ್ತದೆ. ಮಳೆಗಾಗಿ ಅರವಸು ನಿತ್ತಿಲೆಯನ್ನು ಕಳೆದುಕೊಳ್ಳುತ್ತಾನೆ. ನಿತ್ತಿಲೆಯೊಡನೆ ಮೈಮರೆದು ಕುಣಿಯುತ್ತಿರುವಾಗಲೇ ಮಳೆ ಸುರಿಯಲಾರಂಭಿಸುತ್ತದೆ. ಮಳೆಯಾಗುವುದು ಯಾರಿಂದ ಎಂಬ ಪ್ರಶ್ನೆ ಇಲ್ಲಿ ಕಾಡುತ್ತದೆ. ಮಾನವೀಯತೆ ಇಲ್ಲದ ಯಜ್ಞ-ಆಚರಣೆಗಳು ವ್ಯರ್ಥ ಎಂಬ ಭಾವ ಮೂಡುತ್ತದೆ. ನಾಟಕದ ಶೀರ್ಷಿಕೆಯಲ್ಲಿಯೇ ತದ್ವಿರುದ್ಧವಾದ ಅರ್ಥವಿನ್ಯಾಸವಿದೆ. ರಾಗ ದ್ವೇಷಗಳಿಂದ ಋಷಿ ಮುನಿಗಳು ಕೂಡ ಹೊರತಾಗಿಲ್ಲ. ರೈಭ್ಯ, ಯುವಕ್ರೀತ ತಾವು ಸಾಧಿಸಿದ ಸಿದ್ಧಿ ಶಕ್ತಿ ಮಂತ್ರ ತಂತ್ರಗಳನ್ನು ಜನ ಹಿತಕ್ಕಾಗಿ ಬಳಸಿಕೊಳ್ಳದೆ ದುರುಪಯೋಗ ಪಡೆಸಿಕೊಂಡು ದುರಂತ ಅಂತ್ಯ ಪಡೆಯುತ್ತಾರೆ. "ಮಳೆ" ಸಮೃದ್ಧಿಯ ಸಂಕೇತ. ನೀರು ಮನುಷ್ಯನ ಅವಶ್ಯಕತೆಗಳಲ್ಲಿ ಒಂದು, ನಿತ್ತಿಲೆ ಜೀವ ಕೊಡುವುದರ ಮೂಲಕ ಮಳೆ

ತರಿಸುತ್ತಾಳೆ. ನಾಟಕದಲ್ಲಿ ವಿಶಾಖೆ ಹಾಗೂ ನಿತ್ತಿಲೆ ಎರಡು ನಾಟಕದ ಪಾತ್ರಗಳು ಜೀವಪರವಾದ ಪಾತ್ರಗಳಾಗಿವೆ.

## ಜಾಗತೀಕರಣ ಮತ್ತು ಮಹಿಳೆ

- ಎಸ್. ವಿ. ಪ್ರಭಾವತಿ

ಇಡೀ ಜಗತ್ತನ್ನೇ ಮಾಯೆಯಂತೆ ಆವರಿಸಿಕೊಂಡಿರುವ ಜಾಗತೀಕರಣವೆಂಬ ಮಾಯಾಂಗನೆಯ ಸೆರಗಿನಡಿಯಲ್ಲಿ ಇಡೀ ಜಗತ್ತು ನರಳುತ್ತಿದೆ. ಬಿಸಿ ತುಪ್ಪದಂತೆ ನುಂಗಲೂ ಆಗದೇ ಉಗುಳಲೂ ಆಗದೇ ಗಂಟಲು ಸುಡುತ್ತಿರುವ ಇದನ್ನು ನಾವು ಅರಗಿಸಿಕೊಳ್ಳದೇ ವಿಧಿಯಿಲ್ಲವಾಗಿದೆ. ಇದರ ಚರಿತ್ರೆ ವಸಾಹತೀಕರಣದ ಕಾಲಕ್ಕೆ ಹಿಂದೆ ಸರಿಯುತ್ತಿದೆ. ೩೬೦ ವರ್ಷಗಳ ಕಾಲ ವಸಾಹತೀಕರಣದಿಂದ ನರಳಿದ ಭಾರತಕ್ಕೆ ಅದರ ಕಪಿಮುಷ್ಟಿಯಿಂದ ಬಿಡಿಸಿಕೊಳ್ಳುತ್ತಿರುವಾಗಲೇ ನವವಸಾಹತೀಕರಣದ ಪ್ರಭಾವಕ್ಕೆ ಒಳಗಾದುದು ದೇಸೀ ಚಿಂತನೆಯಿಂದ ದೂರ ಸರಿದುದು ಈಗ ಎಲ್ಲರಿಗೂ ಗೊತ್ತಿರುವ ಇತಿಹಾಸ. ಆಗ ಶತ್ರು ಎದುರಿಗೇ ಕಾಣುತ್ತಿದ್ದ ಬ್ರಿಟೀಶ್ ಆಡಳಿತದ ರೂಪದಲ್ಲಿ, ಕತ್ತಿ ಹಿರಿದು ಎದುರೇ ನಿಂತು ಯುದ್ಧ ಮಾಡುವ ಅವಕಾಶವಿತ್ತು. ಸೋತರೂ ಸರಿ ಗೆದ್ದರೂ ಸರಿ ಸೆಣಸಿದ ತೃಪ್ತಿಯಾದರೂ ಇರುತ್ತಿತ್ತು. ಹಾಗೆ ಸೆಣಸುತ್ತಲೇ ಸೋಲುತ್ತಲೇ ಕೊನೆಗೂ ಶತ್ರುವನ್ನು ಭಾರತ ಬಿಟ್ಟು ತೊಲಗಿಸಿದ ಹೆಮ್ಮೆ ನಮ್ಮದಾಯಿತು. ಆದರೆ ಹಾಗೆ ಬಿಟ್ಟು ಹೋಗುವಾಗ ಅವರು ತಮ್ಮ ಶನಿ ಸಂತಾನವಾಗಿ ಇಂಗ್ಲೀಷ್ ಭಾಷೆಯನ್ನು ಬಿಟ್ಟು ಹೋದರು. ಇಡೀ ದೇಶಕ್ಕೆ ಒಂದು ಭಾಷೆಯಿಲ್ಲದ ಕೊರತೆಯೊಂದಿಗೇ ಒಂಬತ್ತು ಸಾವಿರ ವರ್ಷ ಬಾಳಿ ಬದುಕಿದ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ರಾಜ್ಯ ಭಾಷೆಗಳಿಗೆ ಸಾರ್ವಭೌಮತ್ವವನ್ನು ನೀಡುವ ಸುವರ್ಣಾವಕಾಶವಿತ್ತು. ಸಂವಿಧಾನದಲ್ಲಿ ಹಾಗೆ ಬರೆದೂ ಬರೆದರು. ಆದರೆ ನಿಜವಾಗಿ ನಡೆದದ್ದೇ ಬೇರೆ. ಇಡೀ ದೇಶದ ಸಂಪರ್ಕ ಭಾಷೆ ಎಂದು ಇಂಗ್ಲಿಷ್‌ನ್ನು ಬಿಂಬಿಸುತ್ತಲೇ ಈಗ ಹುಟ್ಟುವ ಪ್ರತಿ ಮಗುವೂ ಇಂಗ್ಲೀಷ್ ಕಲಿತರೆ ಮಾತ್ರ ಬದುಕು ಎಂಬ ಭ್ರಮೆಯನ್ನು ಬಿತ್ತಿ ಬೆಳೆಯುತ್ತಿದ್ದೇವೆ. ಯಾವುದೇ ಭಾಷೆಯನ್ನೂ ಕಲಿಯುವುದು ತಪ್ಪಲ್ಲ. ಆದರೆ ಅದಕ್ಕೆ ಗುಲಾಮರಾಗುವುದು ತಪ್ಪು.

೧೯೮೬ರಲ್ಲಿ ಗ್ಯಾಟ್ ಒಪ್ಪಂದ ಪೇಟೆಂಟ್ ಪ್ರಸ್ತಾವ ಮತ್ತು ಡಂಕಲ್ ಪ್ರಸ್ತಾವಗಳಿಗೆ ಭಾರತ ಸರ್ಕಾರ ಸಹಿ ಹಾಕಿದಾಗಲೇ ನಮ್ಮ ದೇಶದ ಆರ್ಥಿಕತೆ ತನ್ನ ಸ್ವಂತಿಕೆಯನ್ನು ಕಳೆದುಕೊಂಡಿತು. ಅಮೆರಿಕವು ತನ್ನ ಕಬಂಧ ಬಾಹುವನ್ನು ಚಾಚಿ, ಭಾರತವೊಂದೇ ಏಕೆ ಈ ಉಪಖಂಡದ ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಗಳನ್ನೂ ಕಬಳಿಸಿತು. ಹೀಗಾಗಿ ಇದು ಅಮೆರಿಕೀಕರಣವೇ ಹೊರತು ಜಾಗತೀಕರಣವಲ್ಲ ಎಂಬ ಮಾತು ಚಾಲ್ತಿಯಲ್ಲಿದೆ. ಇದು ಜಾಗತೀಕರಣವಾಗಿದ್ದರೆ ಜಗತ್ತಿನ ಎಲ್ಲ ಭಾಗಗಳಿಂದಲೂ ಒಳ್ಳೆಯದು

ನಮಗೆ ಹರಿದು ಬರಬೇಕಿತ್ತು. ಫ್ರಾನ್ಸಿನಿಂದ ಭಾಷಾ ಪ್ರೇಮ, ಜಪಾನಿನಿಂದ ಸಮಯ ಪ್ರಜ್ಞೆ ಬರಬೇಕಿತ್ತು. ಹಾಗಾಗಲಿಲ್ಲ. ಅಮೇರಿಕದಲ್ಲಿ ಹಗಲಿಡೀ ಕೆಲಸ ಮಾಡುವ ಕಂಪನಿಯ ಸಹಯೋಗದಲ್ಲಿ ನಮ್ಮ ದೇಶಕ್ಕೆ ಕಂಪನಿಗಳು ಆಳಾಗಿ ದುಡಿಯುತ್ತಾ ಅವರಿಗೆ ಹಗಲಾಗಿ ನಮಗೆ ರಾತ್ರಿಯಾಗುತ್ತಲೇ ಕೆಲಸಕ್ಕೆ ಹೊರಡುತ್ತಾ, ನಮ್ಮ ಪ್ರತಿಭಾವಂತ ಯುವಕ ಯುವತಿಯರಲ್ಲಾ ಈ ದೇಶದ ಸರ್ಕಾರಗಳ ಖರ್ಚಿನಲ್ಲಿ ಡಿಗ್ರಿಗಳನ್ನು ಪಡೆದು ಆ ದೇಶಕ್ಕೆ ಹೋಗಿ ದುಡಿಯುತ್ತಾ ಆ ದೇಶವನ್ನು ಬೆಳೆಸುತ್ತಾ, ಕೆಲಸವೆಂದರೆ ಕಾಲ್ ಸೆಂಟರ್ ಅಥವಾ ಸಾಫ್ಟ್‌ವೇರ್ ಎಂಬಂತಾಗಿ ಎಲ್ಲ ಕಾಲೇಜುಗಳ ಕಲಾ ವಿಭಾಗಗಳನ್ನೂ ಮುಚ್ಚುತ್ತಾ ಸಾಹಿತ್ಯ ಸಂಸ್ಕೃತಿಯಂಥ ಜೀವ ಪೋಷಕ ಅಂಶಗಳಿಂದ ದೂರ ಸರಿಯುತ್ತಾ, ನಾವು ಅಕ್ಷರಶಃ ಗುಲಾಮರಾಗಿದ್ದೇವೆ. ಬ್ಯಾಂಕ್ ನೌಕರರು, ಉಪನ್ಯಾಸಕರು, ವೈದ್ಯರು, ಕುಶಲಕರ್ಮಿಗಳು, ಕಾರ್ಮಿಕರು ಇವರು ಯಾರೂ ದುಡಿಯುವುದೇ ಇಲ್ಲ ಎಂಬ ವಾತಾವರಣ ನಿರ್ಮಾಣವಾಗಿತ್ತು. ಕೆಲವು ದಶಕಗಳ ಹಿಂದೆ ಸದಾ ಕಾಲ ಕ್ರಿಯಾಶೀಲರಾಗಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದ ಪತ್ರಕರ್ತರನ್ನು ಬಿಡಲಿಲ್ಲ. ಇಂದು ರೈತರ ಆತ್ಮಹತ್ಯೆಗಳ ಹಿಂದೆ ನೇರವಾಗಿ ಇರುವುದು ಈ ಜಾಗತೀಕರಣವೇ. ಅವರು ಕೊಟ್ಟ ಬೀಜ, ಅವರು ಕೊಟ್ಟ ಗೊಬ್ಬರ, ನಮ್ಮ ಸರ್ಕಾರಗಳು ಕೊಟ್ಟ ಸಾಲ, ಪ್ರಕೃತಿ ನಿಯಮಕ್ಕೆ ಅನುಗುಣವಾಗಿ ಅತಿವೃಷ್ಟಿ, ಅನಾವೃಷ್ಟಿಗಳ ನಡುವೆಯೂ ಅನ್ನದಾಸರಾಗಿ ಯುಗ ಯುಗಗಳಿಂದ ಬಾಳಿದ ರೈತರು ಈಗ ಬದುಕನ್ನೆದುರಿಸಲಾಗದೇ ಸೋಲುತ್ತಿದ್ದಾರೆ. ಮಕ್ಕಳಿಗೆ ಸರಿಯಾದ ಮಾರ್ಗದರ್ಶನವಿಲ್ಲ. ತಂದೆ ತಾಯಿಗಳಿಗೆ ಅಂಕ ಗಳಿಕೆಯೇ ಮುಖ್ಯ. ಅಂತರ್ಜಾತಿ ಪ್ರೇಮಗಳನ್ನು ಮದುವೆಗಳನ್ನೂ ಪೂರ್ತಿಯಾಗಿ ಜೀರ್ಣಿಸಿಕೊಳ್ಳಲಾಗದ ಸಮಾಜ ಹೀಗಾಗಿ ದಿನ ಬೆಳಗೆದ್ದರೆ ವಿದ್ಯಾರ್ಥಿಗಳ ಪ್ರೇಮಿಗಳ, ಅಧಿಕಾರಿಗಳು ಪೋಲೀಸರ ಆತ್ಮಹತ್ಯೆ, ಯುದ್ಧವೇ ಇಲ್ಲದೇ ಸೈನಿಕರ ಸಾವು. ಇಂಥ ವಿಷಮ ವಾತಾವರಣದಲ್ಲಿ ಜಾಗತೀಕರಣದ ವಿರುದ್ಧವಾಗಿ ಮಾತನಾಡುವ ಹಕ್ಕನ್ನೇ ನಾವು ಕಳೆದುಕೊಂಡಿದ್ದೇನೆ. ಅದಕ್ಕೆ ಬದಲಾಗಿ ಅದು, ಬದುಕಿನ ಯಾವ ಯಾವ ಅಂಗಗಳ ಮೇಲೆ, ಯಾರು ಯಾರ ಮೇಲೆ, ಯಾವ ಯಾವ ರೀತಿ ಪ್ರಭಾವ ಬೀರಿದೆ ಎಂದು ಅರಿತರೆ ಅದಕ್ಕೆ ಪರಿಹಾರವಿದೆಯೆ ಎಂದು ಯೋಚಿಸಿದರೆ ಇಂದಲ್ಲ ನಾಳೆ ಇದರ ಜೊತೆ ಸಹಬಾಳ್ವೆ ಮಾಡುತ್ತಲೇ ಬದುಕನ್ನು ಹಸನು ಮಾಡಿಕೊಳ್ಳುವುದು ಸಾಧ್ಯವಿದೆ, ಸಾಧ್ಯವಾಗಬೇಕು. ಇಲ್ಲವಾದರೆ ನಮಗೆ ಭವಿಷ್ಯವೇ ಇಲ್ಲ. ತೃತೀಯ ಜಗತ್ತಿನ ಮುಂದುವರೆಯುತ್ತಿರುವ ಭಾರತದಂಥ ದೇಶಗಳಲ್ಲಿರುವ ಮಹಿಳೆಯರ ಮೇಲೆ ಇದು ಬೀರಿರುವ ಪ್ರಭಾವವೇನು, ಪರಿಣಾಮವೇನು, ಪರಿಹಾರವೇನು ಎಂದು ಯೋಚಿಸುವುದಕ್ಕೆ ಸೀಮಿತಗೊಳಿಸಿಕೊಳ್ಳಬೇಕಾದ ಅನಿವಾರ್ಯತೆ ಮತ್ತು ಪುಟ ಮಿತಿ ನನಗಿರುವುದರಿಂದ ಈ ಪ್ರಬಂಧಕ್ಕೆ ಈ ಶೀರ್ಷಿಕೆ ಕೊಡಲಾಗಿದೆ. ಜಾಗತೀಕರಣದ ಬಗ್ಗೆ ಹಲವಾರು ಪುಸ್ತಕಗಳೇ ಪ್ರಕಟವಾಗಿರುವ ಈ ಸನ್ನಿವೇಶದಲ್ಲಿ ಇದು ಸಹಜವಾಗಿದೆ.

ಮಹಿಳೆ ಎಂದರೆ ಮುಗಿಯಿತು. ಭಾರತದಲ್ಲೇ ಏಕೆ ಜಗತ್ತಿನ ಎಲ್ಲ ದೇಶಗಳಲ್ಲಿಯೂ ಅವಳು ಎರಡನೇ ದರ್ಜೆ ಪ್ರಜೆ, ಪ್ರಸಿದ್ಧ ಸ್ತ್ರೀವಾದೀ ಫ್ರೆಂಚ್ ಲೇಖಕಿ ಸಿಮನ್-ದ-ಬುವಾ ತಮ್ಮ ಪುಸ್ತಕಕ್ಕೆ 'ದಿ ಸೆಕೆಂಡ್ ಸೆಕ್ಸ್' ಎಂದು ಹೆಸರಿಟ್ಟಿರುವುದು ಈ ಕಾರಣದಿಂದಲೇ.

ಫಸ್ಟ್ ಸೆಕ್ಸ್ ಎಂದರೆ ಗಂಡಸು ಸೆಕೆಂಡ್ ಸೆಕ್ಸ್ ಹೆಂಗಸು ನಮ್ಮ ದೇಶದಲ್ಲಂತೂ, ಸಂಪ್ರದಾಯದ ಭಾರದಲ್ಲಿ ಸ್ಮೃತಿ ಗ್ರಂಥಗಳ ಸಂಕೋಲೆಯಲ್ಲಿ ನರಳುತ್ತಲೇ ಬಂದ ಮಹಿಳೆಗೆ ಒಂದಿಷ್ಟಾದರೂ ಬೆಳಕು ಗಾಳಿ ಸಿಕ್ಕಿದ್ದೇ ಇಪ್ಪತ್ತನೇ ಶತಮಾನದಲ್ಲಿ ಸಾರ್ವತ್ರಿಕ ವಿದ್ಯಾಭ್ಯಾಸವು ಜಾರಿಗೆ ಬಂದ ನಂತರ. ಈಗೇನೋ ಹೆಣ್ಣು ಮಕ್ಕಳನ್ನೂ ಶಾಲೆಗೆ ಕಳಿಸಬೇಕು ಎಂಬ ಜಾಗೃತಿ ಮೂಡಿದೆ. ನಿಜ, ಆದರೆ ವಿದ್ಯಾವಂತರಾದ ಮಾತ್ರಕ್ಕೆ ಮಹಿಳೆಗೆ ಉದ್ಧಾರ ಎಂದು ಸಾರಾ ಸಗಟಾಗಿ ಹೇಳುವಂತಹ ಸ್ಥಿತಿಯಲ್ಲಿ ನಾನಿಲ್ಲ. ೪೫ ವರ್ಷದ ಹಿಂದೆ ಅರುಣಾ ಎಂಬ ನರ್ಸ್ ಒಬ್ಬಳ ಮೇಲೆ ಅತ್ಯಾಚಾರದ ಪ್ರಯತ್ನ ನಡೆಯಿತು. ಆಗ ಅವಳ ಕುತ್ತಿಗೆ ಹಿಸುಕಿದ್ದ ವಾರ್ಡ್‌ಬಾಯ್‌ಗೆ ಶಿಕ್ಷೆಯಾಗಲಿಲ್ಲ. ಅವನು ಚೆನ್ನಾಗೇ ಇದ್ದು ಮುದುಕನಾಗಿದ್ದಾನೆ. ಅವಳು ಮಾತ್ರ ಅಂದು ಕೋಮಾಗೆ ಹೋದವಳು. ಆಸ್ಪತ್ರೆಯ ಹಾಸಿಗೆಯ ಮೇಲೇ ಮಲಗಿ ೪೫ ವರ್ಷ ವಯಸ್ಸಾಗಿ ಮುದುಕಿಯಾಗಿ ಕೊನೆಯುಸಿರೆಳೆದಳು, ನಮ್ಮ ಕೋರ್ಟುಗಳು ಅವಳಿಗೆ ದಯಾಮರಣವನ್ನೂ ದಯಪಾಲಿಸಲಿಲ್ಲ. ತಪ್ಪು ಮಾಡಿದ್ಯಾರು? ಶಿಕ್ಷೆ ಅನುಭವಿಸಿದ್ಯಾರು? ಇದೀಗ 'ನಿರ್ಭಯಾ ಪಕರಣ ಎಂದೇ ಪ್ರಸಿದ್ಧನಾದ ಜ್ಯೋತಿಸಿಂಗ್ ಮತ್ತು ಅವಳ ಗೆಳೆಯನ ಮೇಲೆ ನಡೆದ ಅತ್ಯಾಚಾರ ದೌರ್ಜನ್ಯ ವ್ಯಾಪಕವಾಗಿ ಪ್ರಚಾರವಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಯಿತು. ಆದರೆ ಅಂಥದ್ದೇ ಪ್ರಕರಣಗಳು ದೇಶದೆಲ್ಲೆಡೆ ಇನ್ನಷ್ಟು ವ್ಯಾಪಕವಾಗಿ ನಡೆದವು. ಯಾರಿಗೂ ಶಿಕ್ಷೆಯಾಗಲಿಲ್ಲ. “ಪತ್ರಿಕೆಗಳ ತುಂಬಾ ಬರೀ ಕೊಲೆ ಸುಲಿಗೆ ಕಳ್ಳತನ ಅತ್ಯಾಚಾರದ ಸುದ್ದಿಗಳನ್ನೇ ಓದೀ ಓದೀ ಮಾನಸಿಕವಾಗಿ ವ್ಯಭಿಚಾರಿಗಳೋ ಕಳ್ಳರೋ ಆಗಿ ಬಿಟ್ಟಿರುವ ನಮಗೆ 'ಉಹೆ' ಎಂಬ ಪದ ಎಷ್ಟು ರೋಮಾಂಚಕ!” ಎಂಬ ನನ್ನ ಕವಿತೆಯ ಸಾಲುಗಳು ನೆನಪಾಗುತ್ತಿವೆ. ಮೊದಲೆಲ್ಲಾ “ತಪ್ಪು” ಎನಿಸುತ್ತಿದ್ದ ಭ್ರಷ್ಟಾಚಾರ, ಬೆಲೆ ಏರಿಕೆ, ಮದ್ಯಪಾನ, ಧೂಮಪಾನ ಇವುಗಳು ಇವತ್ತು “ಸಹಜ” ಎನಿಸುವುದಕ್ಕೆ ಕಾರಣ ನಮ್ಮತನವನ್ನು ಕಳೆದುಕೊಂಡು ಜಾಗತೀಕರಣದ ಬಗೆಗೆ ಬಿದ್ದುದರ ಪರಿಣಾಮವೇ ಆಗಿದೆ.

ಅನಾದಿಕಾಲದಿಂದ ಕಲೆ, ಸಾಹಿತ್ಯ, ಸಂಸ್ಕೃತಿಗಳ ಪೋಷಕರು ಮಹಿಳೆಯರೇ. ಅವುಗಳಿಗೆ ಪೆಟ್ಟು ಬಿದ್ದಾಗ ಹೆಣನಕ್ಕೆ ಪೆಟ್ಟು ಬೀಳುವುದು ಸಹಜ. ಜಾಗತೀಕರಣವು ಇಡೀ ಜಗತ್ತಿಗೆ ಒಂದು ಭಾಷೆ (ಇಂಗ್ಲೀಷ್) ಎನ್ನುತ್ತದೆ. ಅದು ಈಗಾಗಲೇ ಜಾರಿಗೆ ಬಂದಿದೆ. ಇಂಗ್ಲಿಷ್‌ನ್ನು ಬದ್ಧ ದ್ವೇಷಿಸುತ್ತಿದ್ದ ಫ್ರಾನ್ಸ್, ಜಪಾನುಗಳು ಅದನ್ನು ಒಪ್ಪಿಕೊಂಡಿವೆ. ಹೀಗಾದಾಗ ಭಾಷೆ ನಶಿಸುತ್ತದೆ. ಭಾಷೆ ನಶಿಸಿದರೆ ಸಂಸ್ಕೃತಿ ನಶಿಸುತ್ತದೆ. ಆಗ ಪ್ರತಿಯೊಂದು ಸಂಸ್ಕೃತಿಯೂ ಹೆಣ್ಣಿಗೆ ಕೊಟ್ಟಿರುವ ಒಳ್ಳೆಯದೋ, ಕೆಟ್ಟದ್ದೂ-ಸ್ಥಾನದಲ್ಲಿ ವ್ಯತ್ಯಾಸವಾಗುತ್ತದೆ. ಆಗ ಹೆಣ್ಣು ಸರಕಾಗುತ್ತಾಳೆ. ಅಂಗಡಿಯಲ್ಲಿ ಇಟ್ಟು ಮಾರಬಹುದಾದ, ದುಡ್ಡು ಕೊಟ್ಟುಕೊಳ್ಳಬಹುದಾದ ಸರಕಾಗುತ್ತಾಳೆ. ಅವಳ ದೇಹ ಮನಸುಗಳು ಮಾರಲ್ಪಡುತ್ತವೆ, ಕೊಳ್ಳಲ್ಪಡುತ್ತವೆ. ಅವಳನ್ನು ಒಂದು ವಸ್ತುವೆಂಬಂತೆ ಪರಿಗಣಿಸಲಾಗುತ್ತದೆ. ಆಗ ಸೂಳೆಯೂ ಸೆಕ್ಸ್ ವರ್ಕರ್ ಆಗುತ್ತಾಳೆ. ಹೆಂಡದಂಗಡಿಯಲ್ಲಿ ಮದ್ಯ ಮಾರಾಟ ಮಾಡುವ ಕೆಲಸ. ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಹುರಿದುಂಬಿಗಳಾಗಿ ಕುಣಿಯುವ ಕೆಲಸಗಳೂ ಸಹಜವಾಗಿಯೇ ತೋರುವಂತೆ, ಬಸ್ ಕಂಡಕ್ಟರ್ ಆದವಳು. ಪೈಲೆಟ್ ಆದವಳು, ಸೈನ್ಯಕ್ಕೂ ಸೇರಿದವಳು ಇದಾಗುವುದರಲ್ಲಿ ತಪ್ಪೇನಿದೆ. ಹೆಣ್ಣುಮಕ್ಕಳು ಓದುವುದು,

ವಿದ್ಯಾವಂತರಾಗುವುದು ಎಷ್ಟು ಸಹಜವೋ ಅಷ್ಟೇ ಸಹಜವಾಗುತ್ತದೆ. ಹಣ ಸಂಪಾದನೆಗಾಗಿ ಅವಳು ಯಾವ ಕೆಲಸವನ್ನಾದರೂ ಮಾಡಬಹುದು. ಬೇರೆ ದೇಶಗಳಲ್ಲಿ ಇದು ಆಗಿದೆ. ನಮ್ಮ ದೇಶದಲ್ಲೂ ಆಗುತ್ತಿದೆ. ಮನಸುಗಳು ಇದನ್ನು ಒಪ್ಪುತ್ತವೆ. ಆಗ ಎಲ್ಲವೂ ಸಲೀಸು, ಇಂಟರ್‌ನೆಟ್ ಯುಗದಲ್ಲಿ ಚಿಕ್ಕ ಮಕ್ಕಳಾಗಿರುವಾಗಲೇ ಬಹುಬೇಗ ಎಲ್ಲ ವಿಷಯಗಳಿಗೂ ತೆರೆದುಕೊಳ್ಳುವ ಮಕ್ಕಳ ಮನಸ್ಸಿನಲ್ಲಿ ನಮ್ಮ ಸಂಸ್ಕೃತಿ ನಮ್ಮ ಭಾಷೆ ಎನ್ನುವ ಪರಿಕಲ್ಪನೆ ಕ್ರಮೇಣ ಸಡಿಲವಾಗುತ್ತದೆ. ಅನಂತರ ಅಳಿಸಿ ಹೋಗುತ್ತದೆ. ಈಗಾಗಲೇ ಈ ಪ್ರಕ್ರಿಯೆ ಪ್ರಾರಂಭವಾಗಿದೆ.

ನಮ್ಮ ದೇಶದಲ್ಲಿ ಮಹಿಳೆಗೆ ಅನಾದಿಕಾಲದಿಂದ ಒಂದು ವಸ್ತ್ರ ಸಂಹಿತೆಯಿದೆ. ಅದು ಇತ್ತೀಚೆಗೆ ವಿವಾದದ ವಿಷಯವೂ ಆಗುತ್ತಿದೆ. ಇಡೀ ದೇಶಕ್ಕೆ ಸೀರೆ ರವಿಕೆ ಕೆಲವು ಆಭರಣಗಳು, ಕೆಲವು ಭಾಗಗಳಲ್ಲಿ ಪೈಜಾಮಾ, ಚೂಡಿದಾರ. ಒಟ್ಟಿನಲ್ಲಿ ಇದ್ದುದರಲ್ಲಿ ಸಭ್ಯತೆ, ಎಲ್ಲ ದೇವಾಲಯಗಳಲ್ಲೂ ಶಿಲಾಬಾಲಿಕೆಯರ ನಗ್ನ ಚಿತ್ರಗಳಿರುವ ವಾತ್ಸಾಯನನ "ಕಾಮ ಸೂತ್ರಕ್ಕೆ ಜನ್ಮ ಕೊಟ್ಟ ಈ ದೇಶದಲ್ಲಿ ಇದೊಂದು ವಿಪರ್ಯಾಸ. ಇದು ಹೇಗೆಂದರೆ "ಎಲ್ಲಿ ನಾರಿಯರು ಪೂಜಿಸಲ್ಪಡುವರೋ ಅಲ್ಲಿ ದೇವತೆಗಳು ವಾಸಿಸುತ್ತಾರೆ" ಎಂದು ಹೇಳಿ ಅದೇ ಉಸಿರಿನಲ್ಲಿ "ಹೆಣ್ಣಿಗೆ ಸ್ವಾತಂತ್ರ್ಯವಿಲ್ಲ" ಎಂದು ಹೇಳಿದಂತೆ ೨೦ನೇ ಶತಮಾನದ ಪ್ರಾರಂಭದಲ್ಲಿ ರಚಿತವಾದ ಬಂಗಾಳಿ ಕಾದಂಬರಿಗಳನ್ನು ಅದರ ಅನುವಾದಗಳನ್ನು ಓದಿದಾಗ ಆಗಿನ ಮಹಿಳೆಯರು ಕೇವಲ ವಿದ್ಯೆಗಾಗಿ ಎದುರಿಸಿದ ಆತಂಕಗಳನ್ನೂ ೨೦ನೇ ಶತಮಾನದ ಕೊನೆಗೆ "ಫೆಮಿನಿಸಂನ ಹಿನ್ನೆಲೆಯಲ್ಲಿ ರಚಿತವಾದ ಕಾದಂಬರಿಗಳಲ್ಲಿ ವಿದ್ಯೆಯನ್ನು ಪರಿಪೂರ್ಣವಾಗಿ ಪಡೆದ ಹೆಣ್ಣು ಅನುಭವಿಸುವ ಆತಂಕಗಳಿಗೂ ಅಂತಹ ವ್ಯತ್ಯಾಸವಿದ್ದಂತೆ ತೋರುವುದಿಲ್ಲ. ತನಗೆ ತಾನೇ ಹೇರಲ್ಪಟ್ಟ ಅಥವಾ ಹೇರಿಕೊಳ್ಳಲ್ಪಟ್ಟ ಒಂದು ವಸ್ತ್ರ ಸಂಹಿತೆಯನ್ನು ಮೊದಲು ಚಲನಚಿತ್ರ ನಟಿಯರು, ನಾಟಕದ ನಟಿಯರು, ಧಾರಾವಾಹಿಯ ನಟಿಯರು, ಕಾರ್ಯಕ್ರಮ ನಿರ್ವಾಹಕಿಯರು ರಿಯಾಲಿಟಿ ಷೋ ನಡೆಸಿಕೊಡುವವರು. ಪಾಲಿಸಿದಂತೆ ಅದೊಂದು ಅಪವಾದವೆಂಬಂತೆ ಭಾವಿತವಾಗುತ್ತಿದ್ದುದು ಈಗ ಅದೊಂದು ಅಲಿಖಿತ ನಿಯಮದಂತೆ ಭಾವಿತವಾಗುತ್ತಿರುವುದರ ಹಿಂದೆ ಜಾಗತೀಕರಣದ ಹುನ್ನಾರವಿದೆ. ಕನ್ನಡದಲ್ಲಿ ಇಂಗ್ಲಿಷ್ ಬಳಸುತ್ತಿದ್ದ ಕಾಲ ಹೋಗಿ ಇಂಗ್ಲಿಷ್‌ನಲ್ಲಿ ಕನ್ನಡ ಬಳಸುವಂತೆ ಮೊದಲು ಮೈಮುಚ್ಚುತ್ತಿದ್ದ ಬಟ್ಟೆ ಈಗ ಮೈ ತೋರಲು ಬಳಕೆಯಾಗುತ್ತಿದೆ. ಜಗತ್ತಿನ ಯಾವ ಮೂಲೆಯಲ್ಲಿ ಏನು ನಡೆದರೂ ಎಲ್ಲಿ ಮೂಲೆಗಳಿಗೂ ಅದೇ ಕ್ಷಣದಲ್ಲಿ ತಲಪುವ ಮಾಯೆಯನ್ನು ಜಾಗತೀಕರಣವು ನಿಜವಾಗಿಸಿದೆ. ಇಂಟರ್‌ನೆಟ್ ಎಂಬ ಮಾಯಾಪೆಟ್ಟಿಗೆಯಲ್ಲಿ ಇಲ್ಲದಿರುವುದೇ ಇಲ್ಲ. ಈ ಮೊದಲು ಟೆಲಿವಿಷನ್ ಬಂದಾಗ ಹಳ್ಳಿ ಹಳ್ಳಿಗಳನ್ನು ತಲುಪಿದಾಗ ಅದರಲ್ಲಿ ಬರುವ ಅದೇನೆಲ್ಲವನ್ನೂ ಚಿಕ್ಕ ಮಕ್ಕಳೂ ಕುಳಿತು ನೋಡುತ್ತಾರಲ್ಲಾ ಎಂದು ನನ್ನಂಥ ಲೇಖಕಿಯರು ಆತಂಕ ಪಟ್ಟಿದ್ದೆವು ಈಗ ಇಂಟರ್‌ನೆಟ್ ಅದರ ಒಂದು ನೂರರಷ್ಟು ಆತಂಕವನ್ನು ಹುಟ್ಟಿಸಿದೆ ಮತ್ತು ಹೊಸಕಿ ಹಾಕಿದೆ. ಈಗ ಇರುವುದು ಹೃದಯಗಳಲ್ಲ ಮನಸುಗಳಲ್ಲಿ, ಭಾವನೆಗಳಲ್ಲಿ ಬರೀ ಮೈಗಳು ಮುಖಗಳು ಇವು ದುಡ್ಡಿಗಾಗಿ ತಮ್ಮನ್ನು ಮಾರಿಕೊಳ್ಳಲು ಸದಾ ಸಿದ್ಧ. ಹಾಗೆ ಮಾಡದಿದ್ದರೆ ಈ

ಬೆಲೆಯೇರಿಕೆಯ ದಿನಗಳಲ್ಲಿ ಹೊಟ್ಟೆಪಾಡು? ಇದೊಂದು ಪ್ರಶ್ನೆ ನಮ್ಮ ಬಾಯನ್ನು ಮುಚ್ಚಿಸಿಬಿಡುತ್ತದೆ.

ಜಾಗತೀಕರಣದ ನೇರ ಪ್ರಭಾವದ ಬಿಸಿಯಲ್ಲಿ ನಾವು ಈಗ ಬೇಯುತ್ತಿದ್ದೇವೆ. ನಾವು ಮಾತ್ರವಲ್ಲ. ಇಡೀ ಪ್ರಪಂಚವೇ ಬೇಯುತ್ತಿದೆ. ಜಾಗತೀಕರಣದಿಂದ ಲಾಭಗಳೂ ಉಂಟು. ಅದನ್ನು ಒಪ್ಪಿಕೊಳ್ಳದೇ ಬೇರೆ ದಾರಿಯಿಲ್ಲ ಎಂಬುದೂ ಸತ್ಯ. ಹೀಗಾಗಿ ಅದನ್ನು ಒಪ್ಪಿಕೊಂಡೂ ಅದರಿಂದ ಬಿಡುಗಡೆ ಹೇಗೆ ಸಾಧ್ಯ ಎಂದು ನಾವು ಈಗಾಗಲೇ ಯೋಚಿಸತೊಡಗಿದ್ದೇವೆ. ಕೆಲವರ ಪ್ರಕಾರ ವೇದ ಉಪನಿಷತ್ತುಗಳ ಕಾಲಕ್ಕೆ ಹೋಗುವುದು. ಆದರೆ ಅದು ಅದಾಗಲೇ ಮೌಢ್ಯಗಳಿಂದ ತುಂಬಿ ಬುದ್ಧ, ಮಹಾವೀರರಂಥವರಿಂದಲೇ ತಿರಸ್ಕೃತವಾಗಿ ಕಾಲದ ಪ್ರವಾಹದಲ್ಲಿ ಅದರ ಮೌಲ್ಯಗಳು ಮಸುಳಿಸಿ ಹೋಗಿವೆ. ವಚನಗಳ ಕಾಲಕ್ಕೆ ಹೋಗುವುದು ಇನ್ನೊಂದು ಪರ್ಯಾಯ. ಆದರೆ ಬಸವಣ್ಣನವರ ಜೀವಿತಾವಧಿಯಲ್ಲಿಯೇ ಅವಸಾನ ಕಂಡ ಅದು ಎಷ್ಟೇ ಸಾರ್ವತ್ರಿಕವಾದರೂ, ಸರ್ವಗ್ರಾಹಿಯಾದರೂ ಸ್ವೀಕಾರ ಯೋಗ್ಯವಲ್ಲ.

ನಮ್ಮ ಸಂವಿಧಾನವೇ ನಮಗೆ ದೇವರು. ಅದು ಅತ್ಯಂತ ಸುಸಂಬದ್ಧವಾಗಿ ಪರಿಷ್ಕೃತವಾಗಿದೆ. ಅದರ ಪ್ರಕಾರ ನಡೆದರೆ ಜಾತಿಭೇದವೂ ಇರಬಾರದು ಭಾಷಾ ಭೇದವೂ ಇರಬಾರದು ಲಿಂಗಭೇದವೂ ಇರಬಾರದು. ಹಾಗೆ ಇದ್ದಿದ್ದರೆ ಜಾಗತೀಕರಣಕ್ಕೆ ನಾವು ಹೆದರಬೇಕಾಗಿರಲಿಲ್ಲ. ಹೆದರುವುದು ಉತ್ತರವೂ ಅಲ್ಲ. ಅದಕ್ಕೆ ತಕ್ಕ ಗಟ್ಟಿಮುಟ್ಟು ಆಳುಗಳಾಗುವಂತೆ ನಮ್ಮ ಮಕ್ಕಳನ್ನು ತಯಾರು ಮಾಡುವುದೇ ಅದಕ್ಕೆ ತಕ್ಕ ಉತ್ತರ, ಪ್ರಾಥಮಿಕ ಹಂತದಲ್ಲಿಯೇ ಇಂಗ್ಲಿಷ್‌ನ್ನು ಒಂದು ಭಾಷೆಯಾಗಿ ಕಲಿಸುವುದು, ಕಂಪ್ಯೂಟರ್ ಶಿಕ್ಷಣವನ್ನು ಕಡ್ಡಾಯ ಮಾಡುವುದು, ಗಂಡು ಹೆಣ್ಣೆಂಬ ಭೇದವಿಲ್ಲದೇ ಒಂದು ಹಂತದವರೆಗೆ ಉಚಿತ ಕಡ್ಡಾಯ ಶಿಕ್ಷಣ. ಎಲ್ಲ ರಂಗಗಳಲ್ಲಿಯೂ ಮಹಿಳೆಗೆ ಸಮಾನ ಅವಕಾಶ - ಇವಿಷ್ಟು ಹೆಚ್ಚು ಕಡಿಮೆ ಜಾರಿಗೆ ಬಂದಿವೆ ಎಂಬ ಸತ್ಯವನ್ನು ನಾವು ಒಪ್ಪಬೇಕು, ಅದರ ಜೊತೆ ಜೊತೆಗೇ ಬಾಲಕಾರ್ಮಿಕ ಸಮಸ್ಯೆ, ಬಾಲ್ಯವಿವಾಹ, ಸತಿಯಂಥ ಅನಿಷ್ಟಗಳ ಮರುಕಳಿಕೆ, ಅತ್ಯಾಚಾರ ಲೈಂಗಿಕ ಕಿರುಕುಳಗಳ ಅವ್ಯಾಹತ ವರದಿ ಇವೂ ಇವೆ. ಜಾಗತೀಕರಣದೊಂದಿಗೇ ಬೆಳೆದು ಬಾಳಿ ನಮ್ಮ ಅಸ್ಮಿತೆಯನ್ನುಳಿಸಿಕೊಳ್ಳುವುದೊಂದೇ ದಾರಿ. ಎಷ್ಟು ಚಿವುಟಿದರೂ ಬೆಳೆಯುವ ಮುಟ್ಟಿದರೆ ಮುನಿಯಂತೆ ಮಹಿಳೆ ಎಂಬ ಅಂತಸ್ಸತ್ವ ಎಷ್ಟು ನಾಶ ಮಾಡಲೆತ್ನಿಸಿದರೂ ಮತ್ತೆ ಮತ್ತೆ "ನವನವ ಉದ್ಧೇಶ ಶಾಲಿನೀ", "ನವನವ ಉಲ್ಲೇಖ ಶಾಲಿನಿ".

# ಮಹಿಳಾ ಹಕ್ಕುಗಳು : ಪರಿಣಾಮಗಳು

-ಗೀತಾ ಕೃಷ್ಣಮೂರ್ತಿ

ಮಹಿಳಾ ಹಕ್ಕುಗಳು ಇಂದು ಬಹುವಾಗಿ ಚರ್ಚೆಗೆ ಒಳಪಡುತ್ತಿರುವ ವಿಷಯ. ಎಲ್ಲ ವೇದಿಕೆಗಳಲ್ಲಿ ಅದರ ಎಲ್ಲ ಆಯಾಮಗಳ ಚರ್ಚೆ ನಡೆಯುತ್ತಲೇ ಇದೆ.

ಮಹಿಳೆಯರಿಗೆ ಹಕ್ಕುಗಳು ದೊರೆತಿರುವುದು ಮತ್ತು ಆರ್ಥಿಕವಾಗಿ ಅವರು ಸ್ವಾವಲಂಬಿಗಳಾಗುತ್ತಿರುವುದೇ ಇಂದಿನ ಎಲ್ಲ ಕೌಟುಂಬಿಕ ಸಮಸ್ಯೆಗಳಿಗೆ ಕಾರಣ ಎಂದು ಸಾರಾಸಗಟಾಗಿ ಸಮಸ್ಯೆಗೆ ಒಂದು ಕಾರಣವನ್ನು ಬೆಟ್ಟು ಮಾಡಿ ಆ ಸಮಸ್ಯೆಗೆ ತಾವು ಯಾವ ರೀತಿಯಲ್ಲಿಯೂ ಕಾರಣವಲ್ಲ ಎಂದು ಘೋಷಿಸುವ ಮತ್ತು ತಮ್ಮನ್ನು ತಾವು ಸಮರ್ಥಿಸಿಕೊಳ್ಳುವ ಪುರುಷ ವರ್ಗದ ಹೇಳಿಕೆಗಳೂ ಧಾರಾಳವಾಗಿ ಹೊರ ಬೀಳುವುದನ್ನು ನೋಡಿದ್ದೇವೆ. ಆದರೆ ಈ ವಿಷಯದ ಬಗ್ಗೆ ಸ್ತ್ರೀ ಪುರುಷರಿಬ್ಬರೂ ಯಾವುದೇ ಪೂರ್ವಾಗ್ರಹಗಳಿಲ್ಲದೆ ವಿಶ್ಲೇಷಣೆ ನಡೆಸುವುದು ಸಮಾಜದ ಆರೋಗ್ಯ, ಬೆಳವಣಿಗೆ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಗತ್ಯ.

ದೀರ್ಘವಾದ ಮತ್ತು ನಿರಂತರ ಹೋರಾಟವಿಲ್ಲದೇ ಯಾವುದೇ ಸಾಮಾಜಿಕ ಬದಲಾವಣೆಯೂ ಉಂಟಾಗಿಲ್ಲ ಎಂಬುದು ಚರಿತ್ರೆಯಿಂದ ತಿಳಿದುಬರುವ ಅಂಶ. ಹಾಗೆಯೇ ಇಂದು ಮಹಿಳೆಯರು ಪಡೆದಿರುವ ಹಕ್ಕುಗಳು ಮತ್ತು ಆರ್ಥಿಕ ಸ್ವಾವಲಂಬನೆಯ ಹಿಂದೆ ಒಂದು ದೀರ್ಘವಾದ ಹೋರಾಟದ ಇತಿಹಾಸವೇ ಇದೆ. ಮಹಿಳೆಯರಿಗೆ ಇರುವ ಹಕ್ಕುಗಳ ಮಹತ್ವ ಮನದಟ್ಟಾಗಬೇಕಾದರೆ ಅದನ್ನು ಪಡೆಯಲು ನಡೆಸಿದ ಹೋರಾಟದ ಸಂಕ್ಷಿಪ್ತ ಅರಿವು ಇರುವುದು ಅಗತ್ಯ.

ಸ್ವಾತಂತ್ರ್ಯ ಹಾಗೂ ಹಕ್ಕುಗಳಿಂದ ವಂಚಿತರಾಗಿದ್ದ ಮಹಿಳೆಯರನ್ನು ನಾಲ್ಕು ಗೋಡೆಗಳ ಬಂಧನದಿಂದ ಹೊರತಂದು ಅವರಿಗೆ ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸಿದ್ದು ಗಾಂಧೀಜಿಯವರು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳಬೇಕೆಂದು ನೀಡಿದ ಕರೆಯ ಮೂಲಕ. ಇದು ಭಾರತದ ಮಟ್ಟಿಗೆ ನಿಜ. ಆದರೆ ಜಾಗತಿಕ ಮಟ್ಟದಲ್ಲಿ ಮಹಿಳಾ ಹಕ್ಕುಗಳಿಗಾಗಿ ಇನ್ನೂ ಹಿಂದಿನಿಂದಲೇ ಹೋರಾಟ ನಡೆದಿತ್ತು. ಸಮಾನತೆ, ಶಾಂತಿ ಮತ್ತು ಅಭಿವೃದ್ಧಿಗಳಿಗಾಗಿ ನಡೆದ ಹೋರಾಟದ ಚರಿತ್ರೆ ಇದು.

ಜಾಗತಿಕ ಮಟ್ಟದಲ್ಲಿ, ೧೯ನೇ ಶತಮಾನದ ಪ್ರಾರಂಭ ಮತ್ತು ಅದಕ್ಕೂ ಹಿಂದೆ ನಡೆದ ಹೋರಾಟ ಮುಖ್ಯವಾಗಿ ಮಹಿಳೆಯರ ಶಿಕ್ಷಣ ಮತ್ತು ಆಸ್ತಿ ಹಕ್ಕುಗಳಿಗಾಗಿ ನಡೆದ ಹೋರಾಟವಾಗಿತ್ತು. ೧೯ನೇ ಶತಮಾನ

ಮತ್ತು ೧೯೨೧ರ ವರೆಗೆ ಮಹಿಳಾವಾದಿಗಳ ಹೋರಾಟದ ಮುಖ್ಯ ಕಾಳಜಿ ಮಹಿಳೆಯರ ಮತದಾನದ ಹಕ್ಕುಗಳನ್ನು ಪಡೆದುಕೊಳ್ಳುವುದಾಗಿತ್ತು, ಮಹಿಳಾ ವಾದದ ಎರಡನೇ ಅತಿ ಎಂದು ಪರಿಗಣಿಸಲಾಗುವ ೧೯೬೦-೧೯೭೦ ರ ಅವಧಿಯಲ್ಲಿ, ಮಹಿಳಾವಾದಿಗಳ ಹೋರಾಟ ಮಹಿಳೆಯರ ಪ್ರಜನನ ಹಕ್ಕುಗಳು, ಆರ್ಥಿಕ ಹಕ್ಕುಗಳು, ಮನೆ ಮತ್ತು ಉದ್ಯೋಗದ ಸ್ಥಳದಲ್ಲಿ ಸಮಾನತೆಯ ಹಕ್ಕು ಮತ್ತು ಇತರ ಹಕ್ಕುಗಳಿಗಾಗಿ ನಡೆದ ಹೋರಾಟವಾಗಿದೆ.

ಭಾರತ ಮಹಿಳೆಯರ ಪಾಲಿಗೆ ಮಧ್ಯಕಾಲೀನ ಯುಗ ಕತ್ತಲೆಯ ಯುಗವಾಗಿತ್ತು. ಮೊಘಲರು ಮತ್ತು ವಿದೇಶೀಯರು ಭಾರತದ ಮೇಲೆ ನಡೆಸಿದ ಆಕ್ರಮಣಗಳಿಂದ, ಭಾರತದ ಮಹಿಳೆಯರ ಸ್ಥಾನಮಾನ ಕೆಳಗಿಳಿದಿತ್ತು. ಹಾಗಾಗಿ ಹಿಂದಿನ ಕೆಲವು ಶತಮಾನಗಳಲ್ಲಿ ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಅನೇಕ ಏರಿಳಿತಗಳನ್ನು ಕಂಡಿದೆ.

ಶತಮಾನಗಳಿಂದಲೂ ಭಾರತದಲ್ಲಿ ಮಹಿಳೆಯನ್ನು ಸ್ವತ್ತು ಎಂದೇ ಭಾವಿಸಲಾಗಿತ್ತು. ಮೊದಲಿಗೆ ತಂದೆ, ನಂತರ ಪತಿ, ಆನಂತರದಲ್ಲಿ ಅವಳ ಗಂಡು ಮಕ್ಕಳು ಅವಳ ರಕ್ಷಕರಾಗಿರುತ್ತಿದ್ದರು. ಮಹಿಳೆಯನ್ನು ತಮ್ಮ ಆಸ್ತಿಯೋಪಾದಿಯಲ್ಲಿ ಜೋಪಾನ ಮಾಡುತ್ತಿದ್ದರು ಇಲ್ಲವೆ ತಮ್ಮಿಷ್ಟ ಬಂದಂತೆ ಬಳಸುತ್ತಿದ್ದರು. ಮಹಿಳೆಯರಿಗೆ ತಮ್ಮದೇ ಆದ ಅಸ್ತಿತ್ವವಾಗಲೀ ಹಕ್ಕುಗಳಾಗಲೀ ಇರಲಿಲ್ಲ. ತಮ್ಮ ಮನೆಯ ಮಹಿಳೆಯರನ್ನು ಹೊರಗಿನ ಆಕ್ರಮಣಕಾರರಿಂದ ರಕ್ಷಿಸುವುದಕ್ಕಾಗಿ ಮಹಿಳೆಯರನ್ನು ಶಿಕ್ಷಣ ಮೊದಲಾದ ಎಲ್ಲ ಅವಕಾಶಗಳಿಂದ ವಂಚಿತರನ್ನಾಗಿಸಲಾಯಿತು, ಅವಳನ್ನು ನಾಲ್ಕು ಗೋಡೆಗಳೊಳಗಿನ ಪ್ರಪಂಚಕ್ಕೆ ಸೀಮಿತಗೊಳಿಸಲಾಯಿತು, ಬಾಲ್ಯ ವಿವಾಹ ಪದ್ಧತಿ ಜಾರಿಗೆ ಬರುವುದಕ್ಕೂ ಇದೇ ಕಾರಣವಾಯಿತು ಎಂಬುದು ಮಹಿಳೆಯ ಸ್ಥಾನಮಾನ ಕೆಳಗಿಳಿದುದಕ್ಕೆ ಕೊಡಲಾಗುವ ಅನೇಕ ಕಾರಣಗಳು. ಆ ನಂತರದಲ್ಲಿ, ಬ್ರಿಟೀಷರ ಕಾಲದಲ್ಲಿ ಮೇಲ್ವರ್ಗಕ್ಕೆ ಸೇರಿದ ಮಹಿಳೆಯರಿಗೆ ಶಿಕ್ಷಣದ ಬಾಗಿಲು ತೆರೆಯಿತು. ಈ ಶಿಕ್ಷಣದಿಂದಾಗಿಯೇ ಕೆಲವರಾದರೂ ಮಹಿಳೆಯರು ಮಹಾತ್ಮ ಗಾಂಧೀಜಿಯವರ ಅಂದಿನ ರಾಜಕೀಯ ಬೆಳವಣಿಗೆಗಳಲ್ಲಿ ಸಕ್ರಿಯವಾಗಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪಾಲ್ಗೊಳ್ಳಲು ಮತ್ತು ಮಹಿಳೆಯರಿಗೆ ಸಮಾನ ಸ್ಥಾನಮಾನ ದೊರೆಯಬೇಕು ಎಂಬುದರ ಬಗ್ಗೆ ದನಿಯೆತ್ತಲು ಸಾಧ್ಯವಾಯಿತು. ಇದಕ್ಕೆ ಪೂರಕವಾಗಿ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮಹಿಳೆಯರು ಮಹಾತ್ಮಾ ಗಾಂಧಿಯವರ ಕರೆಗೆ ಓಗೊಟ್ಟು ಮನೆಯಿಂದ ಹೊರಬಂದು ಹೋರಾಟದಲ್ಲಿ ಪಾಲ್ಗೊಂಡರು. ಈ ಬೆಳವಣಿಗೆಗಳು, ಭಾರತದಲ್ಲಿ ಮಹಿಳೆಯರಿಗೆ ಅವರ ಹಕ್ಕುಗಳನ್ನು ದೊರಕಿಸಿಕೊಡಲು ಕಾರಣವಾಯಿತು ಎಂದರೆ ತಪ್ಪಲ್ಲ.

ಮಹಿಳೆಯರ ಹಕ್ಕುಗಳ ಇತಿಹಾಸ ಎಂದರೆ ಪ್ರಾಚೀನ ಕಾಲದಿಂದ ಮಧ್ಯಕಾಲದವರೆಗೆ ಇಳಿಮುಖವಾಗಿದ್ದ ಮಹಿಳೆಯರ ಸ್ಥಾನಮಾನವನ್ನು ಆಧುನಿಕ ಕಾಲದಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡುವ ಮೂಲಕ

ಉತ್ತಮಪಡಿಸಿದುದರ ವಿವರಣೆಯೇ ಆಗಿದೆ. ಆಧುನಿಕ ಕಾಲದಲ್ಲಿ, ಮಹಿಳೆ ರಾಜಕೀಯದಲ್ಲಿ ಒಂದು ರಾಷ್ಟ್ರದ ಅಧ್ಯಕ್ಷ ಸ್ಥಾನ, ಪ್ರಧಾನ ಮಂತ್ರಿಯ ಸ್ಥಾನ, ಲೋಕ



ಸಭೆಯ ಅಧ್ಯಕ್ಷ ಸ್ಥಾನ ಮೊದಲಾದ ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸುವ ಮಟ್ಟಿಗೆ ಅಷ್ಟೇ ಅಲ್ಲದೆ ಔದ್ಯೋಗಿಕ ಕ್ಷೇತ್ರದಲ್ಲಿ, ಕಲಾ ಮಾಧ್ಯಮದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ, ವಿಜ್ಞಾನ ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಮಹಿಳೆಯರು ಅತ್ಯುನ್ನತ ಸಾಧನೆಯನ್ನು ಮಾಡುವ ಮಟ್ಟಿಗೆ, ಎಂದರೆ ಎಲ್ಲ ಕ್ಷೇತ್ರಗಳಲ್ಲೂ ತನ್ನ ಛಾಪನ್ನು ಒತ್ತುವಷ್ಟರಮಟ್ಟಿಗೆ ಮಹಿಳೆಯರ ಸ್ಥಾನಮಾನ ಸುಧಾರಿಸಿದೆ. ಇದು ಸಾಧಾರಣವಾದ ಬೆಳವಣಿಗೆಯಲ್ಲ.

ಸಮಾಜದಲ್ಲಿ ಎರಡನೆಯ ಪ್ರಜೆಯನ್ನಾಗಿಯೇ ಗುರುತಿಸಲಾಗಿದ್ದ ಮಹಿಳೆಗೆ ಪುರುಷರೊಡನೆ ಸಮಾನ ಸ್ಥಾನಮಾನವನ್ನು ಮತ್ತು ಸಮಾನ ಹಕ್ಕುಗಳನ್ನು ನೀಡಿದ್ದು ಭಾರತದ ಸಂವಿಧಾನ.

ಭಾರತದ ಸಂವಿಧಾನ

ಭಾರತದ ಸಂವಿಧಾನ ಭಾರತದ ಎಲ್ಲ ಪ್ರಜೆಗಳಿಗೆ ಅನ್ವಯಿಸುವ ಸರ್ವೋತ್ಕೃಷ್ಟ ಕಾನೂನು. ಇದೇ ಭಾರತದ ಸಾರ್ವಭೌಮತೆಯ ಹಾಗೂ ಜನತೆಯ ಹಕ್ಕುಗಳ ಮೂಲ. ಹಾಗೆಯೇ ಜನತೆಯೇ ಸಂವಿಧಾನದ ಮೂಲ, ಏಕೆಂದರೆ ಭಾರತದ ರಾಜಕಾರಣದ ಸಾರ್ವಭೌಮತ್ವದ ಮೂಲ ಇರುವುದು ಜನತೆಯಲ್ಲಿ, ಗಣತಂತ್ರ ರಾಷ್ಟ್ರವಾದ ಭಾರತ ತನ್ನ ಅಧಿಕಾರಗಳನ್ನು ಪಡೆಯುವುದು ಜನ ಸಮುದಾಯದಿಂದ. ಹಾಗಾಗಿಯೇ ನಮ್ಮ ಸರ್ಕಾರ ಜನರಿಂದ, ಜನತೆಗಾಗಿ ರೂಪುಗೊಳ್ಳುವ ಜನತೆಯ ಸರ್ಕಾರ. ಜನತೆಯಿಂದ ಚುನಾಯಿತರಾದ ಸಂಸತ್ ಸದಸ್ಯರು ಹಾಗೂ ವಿಧಾನಸಭಾ ಸದಸ್ಯರು ರಾಷ್ಟ್ರದ ಸರ್ವೋನ್ನತ ಸ್ಥಾನವನ್ನು ಅಲಂಕರಿಸುವ ರಾಷ್ಟ್ರಪತಿಯವರನ್ನು ಚುನಾಯಿಸುತ್ತಾರೆ. ಆದ್ದರಿಂದ ಆಡಳಿತದ ಚುಕ್ಕಾಣಿ ಇರುವುದು ಜನತೆಯ ಕೈಯಲ್ಲೇ. ಪ್ರಜಾಸತ್ತೆಯಲ್ಲಿ ಜನತೆಯ ಆಶೋತ್ತರಗಳನ್ನು ಪ್ರತಿನಿಧಿಸುವ ಪ್ರಜಾಪ್ರತಿನಿಧಿಗಳೇ ನಿಜವಾದ ಪ್ರಭುಗಳು. ಮಹಿಳೆಯರು ದೇಶದ ಜನಸಂಖ್ಯೆಯ ಸರಿಸುಮಾರು ಅರ್ಧದಷ್ಟಿದ್ದಾರೆ. ಅವರಿಗೆ ಮತದಾನದ ಹಕ್ಕಿದ್ದು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಅವರೂ ಪಾಲ್ಗೊಳ್ಳುವುದರಿಂದ ದೇಶದ ಭವಿಷ್ಯವನ್ನು ನಿರ್ಧರಿಸುವಲ್ಲಿ ಅವರ ಪಾತ್ರ ಮಹತ್ವವಾದದ್ದು. ಅಷ್ಟೇ ಅಲ್ಲ ಪುರುಷರೊಡನೆ ಸಮಾನತೆಯಿಂದ ಬಾಳುವ ಮತ್ತು ಸಮಾನ ಹಕ್ಕುಗಳನ್ನು ಹೊಂದುವ ಎಲ್ಲ ಹಕ್ಕೂ ಅವರಿಗಿದೆ.

ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕುಗಳು

ಜನತೆಯ ಎಲ್ಲ ಹಕ್ಕುಗಳ ಮೂಲವಾದ ಭಾರತದ ಸಂವಿಧಾನ ಭಾರತದ ನಾಗರಿಕರೆಲ್ಲರೂ ಶಾಂತಿ ಸೌಹಾರ್ದದಿಂದ ಬಾಳಲು ಅಗತ್ಯವಾದ ಹಕ್ಕುಗಳನ್ನು ಸಂವಿಧಾನ ನಮಗೆ ಕೊಟ್ಟಿದೆ. ಇವೇ ಮೂಲಭೂತ ಹಕ್ಕುಗಳು, ವ್ಯಕ್ತಿಯ ಸರ್ವತೋಮುಖ ವ್ಯಕ್ತಿತ್ವ ವಿಕಸನಕ್ಕೆ ಈ ಹಕ್ಕುಗಳು ಅತ್ಯಗತ್ಯ. ಇವು ಅವರಲ್ಲಿ ಆತ್ಮ ವಿಶ್ವಾಸವನ್ನು, ಆತ್ಮ ಸ್ಥೈರ್ಯವನ್ನು ಮೂಡಿಸುತ್ತವೆ. ಸಂವಿಧಾನ ನೀಡಿರುವ ಸಮಾನತೆಯ ಮೂಲಭೂತ ಹಕ್ಕು ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಅತ್ಯವಶ್ಯವಾಗಿ ಅಗತ್ಯವಿರುವ ಮೂಲಭೂತ ಹಕ್ಕು. ಮಹಿಳೆಯರ ಶೋಷಣೆಗೆ ಮುಖ್ಯ ಕಾರಣ ಅವರು ಅನುಸರಿಸುವ ಧರ್ಮಗಳಲ್ಲಿ, ಅವರ ಮನೆಯ ಪುರುಷರಲ್ಲಿ ಮತ್ತು



ಸ್ತ್ರೀಯರಲ್ಲಿ, ಸಮಾಜದ ಮನೋಭಾವದಲ್ಲಿ, ಆಚರಣೆಗಳಲ್ಲಿ, ಸಂಪ್ರದಾಯಗಳಲ್ಲಿ ಹಾಸುಹೊಕ್ಕಾಗಿರುವ ಸ್ತ್ರೀ ಪುರುಷ ತಾರತಮ್ಯ. ಆದ್ದರಿಂದ ಸಂವಿಧಾನ ನೀಡುವ ಸಮಾನತೆಯ ಹಕ್ಕು ಮಹಿಳೆಯ ಜೀವನ ಕ್ರಮವನ್ನು ಮತ್ತು ಅವಳ ಜೀವನ ಮಟ್ಟವನ್ನು ಬದಲಾಯಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಸಮಾನತೆಯ ಹಕ್ಕು ಎಲ್ಲ ಹಕ್ಕುಗಳ ಮತ್ತು ಸ್ವಾತಂತ್ರ್ಯಗಳ ಮೂಲ ಅಡಿಪಾಯ. ಸಮಾನತೆಯ ಹಕ್ಕು ತನ್ನ ಪ್ರಜೆಗಳಿಗೆ ಕಾನೂನಿನ ಮುಂದೆ ಸಮಾನತೆಯನ್ನು ನೀಡುತ್ತದೆ. ಬೇರೆ ಬೇರೆ ಜಾತಿ, ಧರ್ಮ, ಮತ, ಮೂಲವಂಶ, ಲಿಂಗ ಮತ್ತು ಬೇರೆ ಬೇರೆ ಜನ್ಮಸ್ಥಳಗಳಿಗೆ ಸೇರಿರುವವರ ನಡುವೆ ತಾರತಮ್ಯವನ್ನು ಎಣಿಸುವಂತಿಲ್ಲ ಎಂಬ ಸಮಾನತೆಯನ್ನು ನೀಡುತ್ತದೆ. ಹಾಗೆಯೇ ರಾಜ್ಯದ ಅಧೀನದಲ್ಲಿರುವ ಯಾವುದೇ ಹುದ್ದೆಗೆ ಸಂಬಂಧಿಸಿದಂತೆ ಉದ್ಯೋಗ ಮತ್ತು ನೇಮಕಾತಿಯ ವಿಷಯದಲ್ಲಿ ಎಲ್ಲ ನಾಗರಿಕರಿಗೂ ಸಮಾನ ಅವಕಾಶವಿರಬೇಕೆಂಬುದನ್ನು ವಿಧಿಸುತ್ತದೆ. ಕಾನೂನಿನ ಮುಂದೆ ಸಮಾನತೆ, ಕಾನೂನುಗಳಿಂದ ಸಮಾನ ರಕ್ಷಣೆ, ಸ್ತ್ರೀ ಪುರುಷ ಸಮಾನತೆ, ಉದ್ಯೋಗಾವಕಾಶಗಳಲ್ಲಿ ಸಮಾನತೆ-ಇವು ನಮಗೆ ನಮ್ಮ ಸಂವಿಧಾನ ಕೊಡಮಾಡಿರುವ ಸಮಾನತೆಯ ಹಕ್ಕುಗಳು. ಯಾವುದೇ ಕಾನೂನು ಕೊಡುವ ಹಕ್ಕುಗಳಿಂದ ಸಾಮಾನ್ಯವಾಗಿ ವಂಚಿತರಾಗುವುದು ಮಹಿಳೆಯರೇ! ಭಾರತದಲ್ಲಿ ರಚನೆಯಾಗಿ ಜಾರಿಗೊಳ್ಳುವ ಎಲ್ಲ ಕಾನೂನುಗಳೂ ಭಾರತದ ಸಂವಿಧಾನಕ್ಕೆ ಪೂರಕವಾಗಿರಬೇಕು, ಅದರ ಆಶಯಗಳಿಗೆ ವಿಧವಾಗಿರಬಾರದು ಮತ್ತು ಅದರ ಆಶಯವನ್ನು ಉಲ್ಲಂಘಿಸಬಾರದು. ಆದ್ದರಿಂದ ಯಾವುದೇ ಕಾನೂನಿನಲ್ಲಿ ಸ್ತ್ರೀ ಮತ್ತು ಪುರುಷರ ನಡುವೆ ತಾರತಮ್ಯ ಎಸಗುವಂಥ ಯಾವುದೇ ಉಪಬಂಧವಿದ್ದರೂ ಅದು

ಸಂವಿಧಾನಕ್ಕೆ ವಿರೋಧವಾದುದಾಗಿರುತ್ತದೆ. ಅಂಥ ಯಾವುದೇ ಕಾನೂನನ್ನು ಪ್ರಶ್ನಿಸಲು ಮತ್ತು ಅಂಥ ಕಾನೂನನ್ನು ಅನ್ವಯಿಸಿ ಕೈಗೊಂಡ ಕ್ರಮವನ್ನು ಪ್ರಶ್ನಿಸಲು ಮಹಿಳೆಗೆ ಅವಕಾಶವಿರುತ್ತದೆ.

ಭಾರತದ ಸಂವಿಧಾನ ನಮಗೆ ಕೊಟ್ಟಿರುವ ಮೂಲಭೂತ ಹಕ್ಕುಗಳ ಪೈಕಿ ಮಹಿಳೆಯರ ಬದುಕನ್ನು ಬದಲಿಸಬಲ್ಲ ಅತ್ಯಂತ ಮಹತ್ವವಾದ ಮತ್ತು ಅತ್ಯಂತ ಪ್ರಮುಖವಾದ ಮೂಲಭೂತ ಹಕ್ಕೆಂದರೆ ಸ್ವಾತಂತ್ರ್ಯದ ಹಕ್ಕು, ಸ್ವಾತಂತ್ರ್ಯದ ಹಕ್ಕು ಎಂದರೆ, ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು, ಶಾಂತಿಯಿಂದ ಮತ್ತು ನಿರಾಯುಧರಾಗಿ ಸಭೆ ಸೇರುವ ಹಕ್ಕು, ಸಂಸ್ಥೆಗಳನ್ನು ಅಥವಾ ಸಂಘಗಳನ್ನು ರಚಿಸುವ ಹಕ್ಕು, ಭಾರತದ ಗಡಿಯೊಳಗೆ ಅಬಾಧಿತರಾಗಿ ಸರ್ವತ್ರ ಸಂಚಾರ ಮಾಡುವ ಹಕ್ಕು, ಭಾರತದ ರಾಜ್ಯ ಕ್ಷೇತ್ರದಲ್ಲಿ ಯಾವುದೇ ಭಾಗದಲ್ಲಿ ವಾಸ ಮಾಡುವ ಮತ್ತು ನೆಲೆಸುವ ಹಕ್ಕು, ಯಾವುದೇ ವೃತ್ತಿಯನ್ನು ಕೈಗೊಳ್ಳುವ ಅಥವಾ ಯಾವುದೇ ಕಸುಬು, ವ್ಯಾಪಾರ ಅಥವಾ ವ್ಯವಹಾರವನ್ನು ನಡೆಸುವ ಹಕ್ಕು.

ಈ ಎಲ್ಲ ಹಕ್ಕುಗಳನ್ನೂ ಸಾರ್ವಜನಿಕ ಸುವ್ಯವಸ್ಥೆ ಮತ್ತು ಶಾಂತಿಗೆ, ಸಭ್ಯತೆ ಅಥವಾ ನೈತಿಕತೆಗೆ, ಭಾರತದ ಅಖಂಡತೆ ಹಾಗೂ ಐಕ್ಯತೆಗೆ ಭಂಗ ಬಾರದಂತೆ ಚಲಾಯಿಸಬೇಕು.

ಸಂವಿಧಾನ ನೀಡಿರುವ ಮತ್ತೊಂದು ಬಹು ಮುಖ್ಯವಾದ, ಮಹಿಳೆಯರಿಗೆ ಸಂಬಂಧಿಸಿದಂತೆ ಅವರ ವಿರುದ್ಧ ನಡೆಯುವ ಶೋಷಣೆಗೆ ನೇರವಾಗಿ ತಡೆ ಹಾಕುವಂಥ



ಮತ್ತೊಂದು ಹಕ್ಕು- ಜೀವಿಸುವ ಹಕ್ಕು, ಜೀವಿಸುವುದು ಎಂದರೆ ಘನತೆಯಿಂದ ಜೀವಿಸುವುದು ಎಂಬುದನ್ನು ಸರ್ವೋಚ್ಚ ನ್ಯಾಯಾಲಯ ತನ್ನ ಅನೇಕ ತೀರ್ಪುಗಳಲ್ಲಿ ಅಭಿಪ್ರಾಯಪಟ್ಟಿದೆ ಮತ್ತು ಘನತೆಯಿಂದ ಜೀವಿಸುವುದು ಎಂದರೆ ಯಾವುದೇ ರೀತಿಯ ಒತ್ತಾಯಕ್ಕೆ, ದಬ್ಬಾಳಿಕೆಗೆ ಮತ್ತು ಶೋಷಣೆಗೆ ಒಳಗಾಗದೆ ಜೀವಿಸುವುದು ಎಂದೂ ಅರ್ಥೈಸಿದೆ.

ಶೋಷಣೆಯಿಂದ ಮುಕ್ತವಾಗಿ ಘನತೆಯಿಂದ ಜೀವಿಸುವ ಹಕ್ಕು

ನಮ್ಮ ಸಂವಿಧಾನ ಮನುಷ್ಯರಿಂದ ಮನುಷ್ಯರ ಮೇಲೆ ನಡೆಯುವ ಎಲ್ಲ ಬಗೆಯ ಶೋಷಣೆಗಳ ವಿರುದ್ಧ ರಕ್ಷಣೆ ನೀಡುತ್ತದೆ. ಶೋಷಣೆಯ ವಿರುದ್ಧ ವ್ಯಕ್ತಿಗೆ ರಕ್ಷಣೆಯಿಲ್ಲದಿದ್ದರೆ ಸಂವಿಧಾನ ಕೊಡಮಾಡಿರುವ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಅರ್ಥವೇ ಇರುವುದಿಲ್ಲ. ಆದ್ದರಿಂದ ಸಂವಿಧಾನ ನಮಗೆ ನೀಡಿರುವ ಈ ಹಕ್ಕು ವೈಯಕ್ತಿಕ ಸ್ವಾತಂತ್ರ್ಯ ಹಾಗೂ ಘನತೆಯಿಂದ ಬಾಳುವ ಹಕ್ಕುಗಳಿಗೆ ಪೂರಕವಾಗಿದೆ. ನಾಗರಿಕತೆಯ ಉದಯವಾದಾಗಿನಿಂದಲೂ ಪ್ರತಿ

ಸಮಾಜದಲ್ಲಿಯೂ ದುರ್ಬಲ ವರ್ಗಕ್ಕೆ ಸೇರಿದವರು ಮತ್ತು ಮಹಿಳೆಯರು ಶೋಷಣೆಗೆ ಗುರಿಯಾಗುತ್ತಲೇ ಇದ್ದಾರೆ. ಮನುಷ್ಯರ ಮಾರಾಟ-ಅದರಲ್ಲೂ ಹೆಣ್ಣು ಮಕ್ಕಳ ಮಾರಾಟ, ಕಳ್ಳ ಸಾಗಾಣಿಕೆ, ಜೀತ ಕಾರ್ಮಿಕ ಪದ್ಧತಿ ಮುಂತಾದ ವಿವಿಧ ರೀತಿಯ ಶೋಷಣೆಗೆ ಗುರಿಯಾಗುತ್ತಲೇ ಬಂದಿದ್ದಾರೆ. ಮಹಿಳೆಯನ್ನು ವೇಶ್ಯಾ ವೃತ್ತಿಗೆ ತಳ್ಳುವುದು ಮಹಿಳೆಯ ವಿರುದ್ಧ ಎಸಗುವ ಅತ್ಯಂತ ಹೇಯ ಕ್ರೌರ್ಯವಾಗಿದೆ. ಯಾವುದೇ ಒತ್ತಾಯಕ್ಕೆ ಒಳಪಡಿಸಿ ಯಾರೇ ವ್ಯಕ್ತಿಯಿಂದ ಯಾವುದೇ ಕೃತ್ಯವನ್ನು ಮಾಡಿಸುವುದೂ ಕ್ರೌರ್ಯವೆನಿಸಿಕೊಳ್ಳುತ್ತದೆ. ಸ್ವತಂತ್ರ ಭಾರತದಲ್ಲಿ ಎಲ್ಲ ವ್ಯಕ್ತಿಗಳಿಗೂ, ಯಾವುದೇ ಒತ್ತಾಯ ಒತ್ತಡಗಳಿಗೆ ಮಣಿಯದೆ ತಮಗಿಷ್ಟ ಬಂದಂತೆ ಬದುಕಲು ಮತ್ತು ಕಾನೂನುಬಾಹಿರವಲ್ಲದಂಥ ಯಾವುದೇ ಕೆಲಸಮಾಡಲು ಸಾಧ್ಯವಾಗುವಂಥ ಪರಿಸರ ನಿರ್ಮಾಣ ಮಾಡುವುದು ಕಾನೂನು ರಕ್ಷಕರ ಕರ್ತವ್ಯವಾಗಿರುತ್ತದೆ.

ಮಾನವ ಕಳ್ಳ ಸಾಗಾಣಿಕೆಯನ್ನು ತಡೆಯಲು, ಅದರಲ್ಲೂ ಮಹಿಳೆಯರನ್ನು ಮತ್ತು ಹೆಣ್ಣು ಮಕ್ಕಳನ್ನು ಅನೈತಿಕ ವ್ಯವಹಾರಗಳಿಗೆ ಬಳಸಿಕೊಳ್ಳುವುದಕ್ಕಾಗಿ ಅಪಹರಿಸುವುದನ್ನು, ಮಾರಾಟಮಾಡುವುದನ್ನು ಹಾಗೂ ಕಳ್ಳತನದಿಂದ ಅವರನ್ನು ಸಾಗಿಸುವುದನ್ನು ತಡೆಯುವುದಕ್ಕಾಗಿ ಅನೈತಿಕ ವ್ಯವಹಾರಗಳಿಗಾಗಿ ಕಳ್ಳಸಾಗಾಣಿಕೆ(ತಡೆಗಟ್ಟುವಿಕೆ) ಅಧಿನಿಯಮವನ್ನು ಸರ್ಕಾರ ಜಾರಿಗೊಳಿಸಿದೆ. ಅಲ್ಲದೆ, ಅದಕ್ಕೆ ಕಾರಣಗಳು, ಇಂಥ ಶೋಷಣೆಗೆ ಸುಲಭವಾಗಿ ಗುರಿಯಾಗುವವರು, ಅನೈತಿಕ ವ್ಯವಹಾರಗಳಲ್ಲಿ ತೊಡಗಿರುವವರನ್ನು ರಕ್ಷಿಸುವುದು ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವುದು ಮುಂತಾದ ಎಲ್ಲ ವಿಷಯಗಳನ್ನೊಳಗೊಂಡ ಒಂದು ಸಮಗ್ರ ಕ್ರಿಯಾ ಯೋಜನೆಯನ್ನು ಸಹ ಸರ್ಕಾರ ರೂಪಿಸಿದೆ.

ಭಾರತದ ಸಂವಿಧಾನ ಮೂಲಭೂತ ಹಕ್ಕುಗಳನ್ನು ಕೊಡುವುದಷ್ಟೇ ಅಲ್ಲದೆ ಮೂಲಭೂತ ಕರ್ತವ್ಯಗಳನ್ನೂ ವಿಧಿಸುತ್ತದೆ. ಸ್ವಸ್ಥ ಜೀವನಕ್ಕೆ ಮೂಲಭೂತ ಹಕ್ಕುಗಳ ಬಗ್ಗೆ ತಿಳಿದಿರುವುದು ಎಷ್ಟು ಅಗತ್ಯವೋ, ಮೂಲಭೂತ ಕರ್ತವ್ಯಗಳ ಬಗ್ಗೆ

ತಿಳಿದಿರಬೇಕಾದುದೂ ಅಷ್ಟೇ ಅಗತ್ಯ. ಹಕ್ಕು ಮತ್ತು ಕರ್ತವ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಒಂದನ್ನು ಹೊರತುಪಡಿಸಿ ಇನ್ನೊಂದಿಲ್ಲ. ಸ್ತ್ರೀಯರ ಗೌರವಕ್ಕೆ ಕುಂದುಂಟು ಮಾಡುವ ಆಚರಣೆಗಳನ್ನು ಬಿಟ್ಟುಬಿಡಬೇಕು ಎಂಬುದು ನಮ್ಮ ಸಂವಿಧಾನ ವಿಧಿಸಿರುವ ಮೂಲಭೂತ ಕರ್ತವ್ಯಗಳಲ್ಲಿ ಒಂದು ಎಂಬುದನ್ನು ಎಲ್ಲರೂ ತಿಳಿಯುವುದು ಅತ್ಯಗತ್ಯ. ನಮ್ಮ ಸಮಾಜದಲ್ಲಿ ಮಹಿಳೆಯರ ಘನತೆಗೆ ಕುಂದುಂಟುಮಾಡುವಂಥ ಮತ್ತು ಅವಳ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವಂಥ ಅನೇಕ ಆಚರಣೆಗಳು ಹಾಗೂ ಮೂಢನಂಬಿಕೆಗಳು ರೂಢಿಯಲ್ಲಿವೆ.

ಅವನ್ನು ಕೈಬಿಡಲು ಮತ್ತು ಅಂಥ ಯಾವುದೇ ಆಚರಣೆಯನ್ನು ಅಪರಾಧವನ್ನಾಗಿಸಲು ಮೂಢನಂಬಿಕೆ ನಿಷೇಧ ಕಾನೂನನ್ನು ಜಾರಿಗೆ ತರುವ ಪ್ರಯತ್ನ ನಡೆಯುತ್ತಿದೆ.

ಸಂವಿಧಾನದ ಮೂಲಕ ಮಹಿಳೆಯರಿಗೆ ದೊರೆತಿರುವ ಎಲ್ಲ ಹಕ್ಕುಗಳೂ ಜಾರಿಗೊಳಿಸುವಂಥವು, ಎಂದರೆ ಆ ಯಾವುವೇ ಹಕ್ಕುಗಳ ಉಲ್ಲಂಘನೆಯಾದಾಗ, ಅಂಥ ಉಲ್ಲಂಘನೆಯನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋಗುವ ಅವಕಾಶ ಮತ್ತು ನ್ಯಾಯ ದೊರಕಿಸಿಕೊಳ್ಳುವ ಅವಕಾಶ ಮತ್ತು ಹಕ್ಕು ಮಹಿಳೆಗೆ ಇರುತ್ತದೆ.

ನಮ್ಮ ದೇಶದಲ್ಲಿ ಜಾರಿಯಲ್ಲಿರುವ ಎಲ್ಲ ಕಾನೂನುಗಳೂ ನಮ್ಮ ಸಂವಿಧಾನಕ್ಕೆ ಪೂರಕವಾಗಿರಬೇಕು ಮತ್ತು ಸಂವಿಧಾನ ಕೊಡಮಾಡಿರುವ ಯಾವುದೇ ಹಕ್ಕುಗಳನ್ನು ಮೊಟಕು ಮಾಡುವಂತಿಲ್ಲ ಮತ್ತು ಉಲ್ಲಂಘಿಸುವಂತಿಲ್ಲ. ಆದರೆ, ಭಾರತದಲ್ಲಿ ಹಲವು ಧರ್ಮಗಳಿಗೆ ಸೇರಿದವರಿದ್ದಾರೆ. ವಿವಾಹ, ವಿಚ್ಛೇದನೆ, ಜೀವನಾಂಶ, ದತ್ತಕ, ಆಸ್ತಿ ಮುಂತಾದುವುಗಳಿಗೆ ಸಂಬಂಧಿಸಿದಂತೆ ಆಯಾ ಧರ್ಮಕ್ಕೆ ಅನ್ವಯಿಸುವ ಪ್ರತ್ಯೇಕ ಕಾನೂನುಗಳು ಭಾರತದಲ್ಲಿ ಜಾರಿಯಲ್ಲಿವೆ. ಹಿಂದೂಗಳಿಗೆ ಹಿಂದೂ ವಿವಾಹ ಅಧಿನಿಯಮ, ಮುಸಲ್ಮಾನರಿಗೆ ಮುಸ್ಲಿಂ ವಿವಾಹ ಕಾನೂನು, ಕ್ರಿಶ್ಚಿಯನ್ನರಿಗೆ ಕ್ರಿಶ್ಚಿಯನ್ ವಿವಾಹ ಕಾನೂನು, ಪಾರ್ಸಿಗಳಿಗೆ ಪಾರ್ಸಿ ವಿವಾಹ ಕಾನೂನು, ಹೀಗೆ ಆಯಾ ಧರ್ಮದವರಿಗೆ ಅವರವರದೇ ಆದ ಕಾನೂನುಗಳಿವೆ. ಇವೇ ವೈಯಕ್ತಿಕ ಕಾನೂನುಗಳು. ಈ ವೈಯಕ್ತಿಕ ಕಾನೂನುಗಳೆಲ್ಲವೂ ಅವರವರ ಧರ್ಮದಲ್ಲಿ ಇದ್ದ ಆಚರಣೆಗಳನ್ನು ಮತ್ತು ಆಯಾ ಧರ್ಮದ ಸಂಪ್ರದಾಯಗಳನ್ನು ಆಧರಿಸಿದವುಗಳು. ಹಾಗಾಗಿ ಈ ಕಾನೂನುಗಳಲ್ಲಿ ಏಕರೂಪತೆಯಿಲ್ಲ. ಆದರೆ ಎಲ್ಲ ಧರ್ಮದ ಮಹಿಳೆಯರೂ ಏಕ ಪ್ರಕಾರವಾಗಿ ಹಲವು ಬಗೆಯ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬುದು ವಿಪರ್ಯಾಸ. ಇದಕ್ಕೆ ಕಾರಣ ನಮ್ಮದು ಪಿತೃಪ್ರಧಾನವಾದ ಮತ್ತು ಪುರುಷ ಪ್ರಧಾನವಾದ ಸಮಾಜ ಎಂಬುದು. ಜನಸಂಖ್ಯೆಯ ಸರಿ ಸುಮಾರು ಅರ್ಧದಷ್ಟಿರುವ ಮಹಿಳೆಯರು ಮತ್ತು ಪುರುಷರಂತೆಯೇ ಮತದಾನ ಮಾಡುವ ಮೂಲಕ ಸಕ್ರಿಯ ರಾಜಕಾರಣದಲ್ಲಿ ಪಾಲ್ಗೊಳ್ಳುವ ಮಹಿಳೆಯರು ಎರಡನೆ ದರ್ಜೆಯ ಪ್ರಜೆಗಳಾಗಿರುವುದು. ಹಾಗಾಗಿ ಧರ್ಮಾಧಾರಿತ ಕಾನೂನುಗಳಿಂದಾಗಿ ಕೌಟುಂಬಿಕ ನೆಲೆಯಲ್ಲಿ ಅನ್ಯಾಯಕ್ಕೆ ಭಣಾದರೆ, ಸಮಾಜದ ಪುರುಷ ಪ್ರಧಾನ ದೃಷ್ಟಿಕೋನದಿಂದಾಗಿ ಕೌಟುಂಬಿಕ ಮತ್ತು ಸಾಮಾಜಿಕ ನೆಲೆಗಳೆರಡರಲ್ಲೂ ದೌರ್ಜನ್ಯಕ್ಕೆ

ಒಳಗಾಗುತ್ತಿದ್ದಾರೆ. ಹೀಗಾಗಿ ಮಹಿಳೆಯರು ಒಳಗಾಗುವ ದೌರ್ಜನ್ಯಗಳಿಗೆ ನೂರು ಮುಖ.

ವೈಯಕ್ತಿಕ ಕಾನೂನುಗಳಲ್ಲಿ ಇರುವ ಸ್ತ್ರೀ-ಪುರುಷ ತಾರತಮ್ಯದಿಂದಾಗಿ ಮಹಿಳೆಯರಿಗೆ ಆಗಿರುವ ಅನ್ಯಾಯಗಳನ್ನು ನಿವಾರಿಸುವ ಪ್ರಯತ್ನಗಳು ಸತತವಾಗಿ ನಡೆಯುತ್ತಲೇ ಇವೆ. ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ, ಎಲ್ಲ ಧರ್ಮದವರಿಗೂ ಅನ್ವಯಿಸುವ ಏಕರೂಪ ನಾಗರಿಕ ಸಂಹಿತೆಯನ್ನು ತರುವ ಎಲ್ಲ ಪ್ರಯತ್ನಗಳೂ ವಿಫಲಗೊಳ್ಳುತ್ತಿದ್ದರೂ ಆಯಾ ವೈಯಕ್ತಿಕ ಕಾನೂನುಗಳಲ್ಲಿ ಆಗಿಂದಾಗ್ಗೆ ತಿದ್ದುಪಡಿಗಳನ್ನು ತರುವ ಮೂಲಕ ಈ ತಾರತಮ್ಯವನ್ನು ಹೋಗಲಾಡಿಸುವ ಪ್ರಯತ್ನಗಳಂತೂ ನಿರಂತರವಾಗಿ ನಡೆಯುತ್ತಲೇ ಇವೆ.

ಕೌಟುಂಬಿಕ ದೌರ್ಜನ್ಯದ ವಿರುದ್ಧ ಹಕ್ಕು

ಇಂದು ಬಹುಪಾಲು ಮಹಿಳೆಯರು ತಮ್ಮ ಕುಟುಂಬದ ವ್ಯಕ್ತಿಗಳಿಂದಲೇ ದೌರ್ಜನ್ಯಕ್ಕೆ, ಹಿಂಸೆಗೆ ಒಳಗಾಗುತ್ತಿದ್ದಾರೆ. ಇಂತಹ ದೌರ್ಜನ್ಯ ಅನೇಕ ಶತಮಾನಗಳಿಂದಲೂ ನಡೆಯುತ್ತಾ ಬಂದಿದೆ. ಇದಕ್ಕೆ ಕಾರಣ ಮಹಿಳೆಯರು ಆರ್ಥಿಕವಾಗಿ ಪುರುಷರನ್ನು ಅವಲಂಬಿಸಿರುವುದು ಮತ್ತು ಪುರುಷರು ಮಹಿಳೆಯರಿಗಿಂತ ಮೇಲು ಎಂಬ ಭಾವನೆ ಸಮಾಜದಲ್ಲಿ ಬೇರೂರಿರುವುದು. ಹಾಗಾಗಿ ಇದರ ವಿರುದ್ಧ ಹೋರಾಡಲು ಮತ್ತು ಕೌಟುಂಬಿಕ ಹಿಂಸೆಯಿಂದ ರಕ್ಷಣೆ ಪಡೆಯಲು ತೀರಾ ಇತ್ತೀಚಿನವರೆಗೆ ಮಹಿಳೆಗೆ ಯಾವುದೇ ಕಾನೂನಿನ ಬೆಂಬಲ ಇರಲಿಲ್ಲ. ಮಹಿಳಾ ಸಂಘಟನೆಗಳ ದೀರ್ಘ ಕಾಲದ ಹೋರಾಟದ ಫಲವಾಗಿ "ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರಿಗೆ ರಕ್ಷಣೆ" ಎಂಬ ಕಾನೂನು ೨೦೦೬ ರಿಂದ ಜಾರಿಗೆ ಬಂದಿದೆ. ಕುಟುಂಬದ ಸದಸ್ಯರಿಂದಲೇ ನಡೆಯುವ ದೌರ್ಜನ್ಯ ಹಾಗೂ ಹಿಂಸೆಗಳ ವಿರುದ್ಧ ಹೋರಾಡಲು ಮಹಿಳೆಯರಿಗೆ ಈ ಕಾನೂನಿನ ಅರಿವು ಇರುವುದು ಅಗತ್ಯ. ಈ ಕಾನೂನಿನ ಅಡಿಯಲ್ಲಿ ರಕ್ಷಣೆ ದೊರೆಯುವುದು ಮಹಿಳೆಯರಿಗೆ ಮಾತ್ರ. ಪುರುಷರಿಂದ ಹಿಂಸೆಗೆ ಅಥವಾ ದೌರ್ಜನ್ಯಕ್ಕೆ ಒಳಗಾಗಿದ್ದರೆ ಮಾತ್ರ ಮಹಿಳೆ ಅವರ ವಿರುದ್ಧ ದೂರು ನೀಡಬಹುದು. ಮಹಿಳೆ ವಿವಾಹಿತೆಯಾಗಿರುವಲ್ಲಿ, ಹಿಂಸೆ ನೀಡುವವರು ಮಹಿಳೆಯರಾಗಿದ್ದರೂ ಅವರು ಅವಳ ಗಂಡನ ಸಂಬಂಧಿಗಳಾಗಿದ್ದರೆ ಅವರ ವಿರುದ್ಧ ಆಕೆ ದೂರು ನೀಡಬಹುದು ಎಂದರೆ, ಕೌಟುಂಬಿಕ ಸಂಬಂಧದಿಂದ ಉಂಟಾದ ಸಂಬಂಧಿಗಳಿಂದ ಹಿಂಸೆ ಅನುಭವಿಸುತ್ತಿದ್ದರೆ ಈ ಕಾನೂನಿನ ಅಡಿಯಲ್ಲಿ ಪರಿಹಾರವಿದೆ.

ಮಹಿಳೆಯ ಜೀವಿಸುವ ಹಕ್ಕನ್ನು ಉಲ್ಲಂಘಿಸುವಂಥ ಅಥವಾ ಕಸಿಯುವಂಥ ಯಾವುದೇ ಕೃತ್ಯವೂ ಈ ಕಾನೂನಿನ ಅಡಿಯಲ್ಲಿ ದೌರ್ಜನ್ಯದ ವ್ಯಾಪ್ತಿಯಲ್ಲಿ ಬರುತ್ತದೆ.

ಎಂದರೆ ಇಂಥ ದೌರ್ಜನ್ಯ ಮಾತುಗಳ ಮೂಲಕ ಅಥವಾ ದೈಹಿಕವಾಗಿ ಗಾಯಗೊಳಿಸುವಂಥ ಅಥವಾ ನೋವುಂಟು ಮಾಡುವಂಥ ಕೃತ್ಯಗಳ ಮೂಲಕ ನಡೆದಿರಬಹುದು ಅಥವಾ ಹೀಗೆ ಮಾಡುತ್ತೇನೆಂದು ಒಡ್ಡುವ ಬೆದರಿಕೆಯೂ ಆಗಬಹುದು. ದಿನ ನಿತ್ಯದ ಅಗತ್ಯಗಳನ್ನು ಅವಳಿಗೆ ಮತ್ತು ಅವಳ ಮಕ್ಕಳಿಗೆ ಒದಗಿಸದೆ ಇರುವುದು

ಸಹ ದೌರ್ಜನ್ಯವೆನಿಸಿಕೊಳ್ಳುತ್ತದೆ ಅಥವಾ ಅವಳ ಆತ್ಮೀಯರಿಗೆ ಅಥವಾ ಅವಳು ಪ್ರೀತಿಸುವವರಿಗೆ ಕೊಡುವ ಈ ರೀತಿಯ ತೊಂದರೆಯೂ ಹಿಂಸೆ ಎನಿಸಿಕೊಳ್ಳುತ್ತದೆ. ಗಂಡು ಮಗುವನ್ನು ಹೆರಲಿಲ್ಲವೆಂದು ಮೂದಲಿಸುವುದು, ಹೀಯಾಳಿಸುವುದು, ಅಥವಾ ಬೇರಾವುದೇ ಕಾರಣಕ್ಕೆ ಹೀಯಾಳಿಸುವುದು ಸಹ ಹಿಂಸೆಯೇ. ಇಂಥ ಕೃತ್ಯಗಳೆಲ್ಲವೂ ಮಾನಸಿಕ ಹಾಗೂ ದೈಹಿಕ ದೌರ್ಜನ್ಯ ಉಂಟು ಮಾಡುವ ಕೃತ್ಯಗಳೆನಿಸಿಕೊಳ್ಳುತ್ತವೆ.

ವರದಕ್ಷಿಣೆಯನ್ನು ತರುವಂತೆ ಪೀಡಿಸುವುದು, ಅವಳಿಗೆ ಸೇರಿದ ಯಾವುದೇ ಆಸ್ತಿಯನ್ನು ಮಾರುವಂತೆ ಒತ್ತಾಯಿಸುವುದು, ಮಾರಾಟ ಮಾಡುವುದು, ಅಥವಾ ಅವಳಿಗೆ ಆಸ್ತಿ ದೊರೆಯದಂತೆ ಮಾಡುವ ಸಲುವಾಗಿ ತನಗೆ ಸೇರಿದ ಆಸ್ತಿಯನ್ನು ಗಂಡ ಮಾರಾಟ ಮಾಡಿಬಿಡುವುದು, ವಾಸಿಸುವ ಮನೆಗೆ ಬಾಡಿಗೆ ಕೊಡದೆ ಇರುವುದು, ಜೀವನ ನಿರ್ವಹಣೆಗೆ ಅಗತ್ಯವಾದ ವಸ್ತುಗಳನ್ನು ಅಥವಾ ಹಣವನ್ನು ಕೊಡದೆ ಇರುವುದು, ಆಕೆ ದುಡಿದ ಹಣವನ್ನೆಲ್ಲ ಆಕೆಯಿಂದ ಕಸಿದುಕೊಳ್ಳುವುದು ಮುಂತಾದ ಎಲ್ಲ ಕೃತ್ಯಗಳಿಂದ ಆದ ಹಿಂಸೆ ಆರ್ಥಿಕ ಹಿಂಸೆ ಎನಿಸಿಕೊಳ್ಳುತ್ತದೆ. ಪತ್ನಿಯ ಸಮ್ಮತಿಯಿಲ್ಲದಿದ್ದರೂ ಲೈಂಗಿಕ ಕ್ರಿಯೆಗೆ ಒತ್ತಾಯಿಸುವುದು, ಅವಳ ಘನತೆಗೆ ಕುಂದು ತರುವಂಥ ಲೈಂಗಿಕ ಸ್ವರೂಪದ ಯಾವುದೇ ಕೃತ್ಯವನ್ನು ಎಸಗುವುದು, ಲೈಂಗಿಕ ಚಿತ್ರಗಳನ್ನು ನೋಡುವಂತೆ ಒತ್ತಾಯಿಸುವುದು, ಮುಂತಾದುವು ಲೈಂಗಿಕ ಹಿಂಸೆ ಎನಿಸಿಕೊಳ್ಳುತ್ತದೆ.

ಮಹಿಳೆಯನ್ನು ವ್ಯಕ್ತಿಯಾಗಿ ಗುರುತಿಸದೆ ಅವಳು ಗಂಡಿನ ಆಸ್ತಿ ಎಂದು ಪರಿಗಣಿಸುತ್ತಿದ್ದ ಕಾಲವಿತ್ತು. ಮಹಿಳೆಯ ಹಕ್ಕುಗಳನ್ನು ಮಾನವ ಹಕ್ಕುಗಳೆಂದೇ ಪರಿಗಣಿಸದಿದ್ದ ಕಾಲವಿತ್ತು, ಇದು ಭಾರತಕ್ಕೆ ಮಾತ್ರ ಸೀಮಿತವಾಗಿದ್ದ ಪರಿಸ್ಥಿತಿಯೇನಲ್ಲ ಜಾಗತಿಕ ಮಟ್ಟದಲ್ಲಿಯೂ ಮಹಿಳೆಯ ಪರಿಸ್ಥಿತಿ ಹೀಗೇ ಇತ್ತು. ಇಂದಿಗೂ ಮಹಿಳೆಯ ಮೇಲೆ ಎಸಗಲಾಗುತ್ತಿದ್ದ ದೌರ್ಜನ್ಯವನ್ನು ಮಹಿಳೆಯರೇ, ಅದರಲ್ಲಿಯೂ ದೌರ್ಜನ್ಯಕ್ಕೆ ಒಳಗಾಗುತ್ತಿದ್ದ ಮಹಿಳೆಯರೇ ಒಪ್ಪಿಕೊಳ್ಳುವ ಮನೋಭಾವ ಪೂರ್ಣವಾಗಿ ಬದಲಾಗಿಲ್ಲ. ಕೌಟುಂಬಿಕ ದೌರ್ಜನ್ಯದ ಬಗ್ಗೆ ಮಹಿಳೆಯರ ಅಭಿಪ್ರಾಯವನ್ನು ದಾಖಲಿಸಲು ನಡೆಸಲಾದ ಸಮೀಕ್ಷೆಯೊಂದು, ಶೇ. ೬೫ ರಷ್ಟು ಮಹಿಳೆಯರು ಅದನ್ನು ಪ್ರಶ್ನಿಸದೆ ಒಪ್ಪಿಕೊಳ್ಳಬೇಕಾಗುತ್ತದೆ, ಹೆಂಡತಿಯನ್ನು ಹೊಡೆಯಲು ಗಂಡನಿಗೆ ಹಕ್ಕಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆಂಬುದಾಗಿ ತಿಳಿಸುತ್ತದೆ. ಇದು ಮಹಿಳೆಯರ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ಇದೇ ಕೌಟುಂಬಿಕ ದೌರ್ಜನ್ಯದ ಕಾರಣಕ್ಕಾಗಿ ವಿಚ್ಛೇದನೆಗಾಗಿ ಅರ್ಜಿ ಸಲ್ಲಿಸಿದ ಪ್ರಕರಣವೊಂದರಲ್ಲಿ ಪತ್ನಿಯನ್ನು ದಾರಿಗೆ ತರುವುದಕ್ಕಾಗಿ ಅವಳನ್ನು ಹೊಡೆಯಲು ಪತಿಗೆ ಹಕ್ಕಿದೆ. ಅದರೆ ಆ ಹೊಡೆತ ಅವಳ ಮೊಲೆ ಮುರಿಯುವಷ್ಟು ಅಥವಾ ಅವಳ ದೇಹವನ್ನು ವಿರೂಪಗೊಳಿಸುವಷ್ಟು ಜೋರಾಗಿರಬಹುದು* ಎಂದು ದುಬೈ ನ್ಯಾಯಾಲಯ ತೀರ್ಪಿನಲ್ಲಿ ದಾಖಲು ಮಾಡಿದೆ. ಇದು ಭಾರತವೊಂದರಲ್ಲೇ ಅಲ್ಲದೆ ಜಾಗತಿಕ ಮಟ್ಟದಲ್ಲಿಯೂ ಮಹಿಳೆಯರ ಬಗೆಗಿರುವ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ಈ ಹಿನ್ನೆಲೆಯಲ್ಲಿ ಇದ್ದೆ ಕಾನೂನು ಜಾರಿಗೆ ಬಂದಿರುವುದು ಬಹಳ ಮಹತ್ವ ಪೂರ್ಣವಾದುದು.

ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರಿಗೆ ರಕ್ಷಣೆ ನೀಡುವ ಕಾನೂನನ್ನು ಪರಿಣಾಮಕಾರಿ ಜಾರಿಗೆ ತರುವುದಕ್ಕಾಗಿ ರಾಜ್ಯ ಸರ್ಕಾರ ಜಿಲ್ಲಾ ಮಟ್ಟ ಹಾಗೂ ತಾಲೂಕು ಮಟ್ಟಗಳಲ್ಲಿ 'ಸಂರಕ್ಷಣಾ ಅಧಿಕಾರಿಗಳನ್ನು ನೇಮಕ ಮಾಡಿದೆ. ಜಿಲ್ಲಾ ಮಟ್ಟದಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರುಗಳನ್ನು, ತಾಲೂಕು ಮಟ್ಟದಲ್ಲಿ ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಸಂರಕ್ಷಣಾಧಿಕಾರಿಗಳನ್ನಾಗಿ ರಾಜ್ಯ ಸರ್ಕಾರ ನೇಮಕ ಮಾಡಿದೆ. ಯಾರೇ ಮಹಿಳೆ ಕುಟುಂಬ ಸದಸ್ಯರಿಂದ ದೌರ್ಜನ್ಯಕ್ಕೆ ಒಳಗಾದಾಗ ಈ ಸಂರಕ್ಷಣಾಧಿಕಾರಿಗಳ ಸಹಾಯ ಪಡೆಯಬಹುದು. ಪೊಲೀಸರ ಸಹಾಯವನ್ನು ಪಡೆಯಬಹುದು ಇಲ್ಲವೇ ನೇರವಾಗಿ ಮ್ಯಾಜಿಸ್ಟ್ರೇಟರಿಗೆ ದೂರು ಸಲ್ಲಿಸಬಹುದು. ತೊಂದರೆಗೆ ಒಳಗಾದ ವ್ಯಕ್ತಿ ಈ ಬಗ್ಗೆ ದೂರು ಸಲ್ಲಿಸಬಹುದು ಅಥವಾ ಮಹಿಳೆಯ ಮೇಲೆ ದೌರ್ಜನ್ಯ ನಡೆಯುತ್ತಿದೆಯೆಂದು ತಿಳಿದ ಮತ್ತು ಅದನ್ನು ತಡೆಯಲಿಚ್ಚಿಸುವ ಯಾರೇ ವ್ಯಕ್ತಿ ದೂರು ಸಲ್ಲಿಸಬಹುದು.

ಯಾವುದೇ ಅಪರಾಧ ಪ್ರಕರಣದಲ್ಲಿ ಜನ ಸಾಮಾನ್ಯರು ತೊಂದರೆಗೊಳಗಾದ ವ್ಯಕ್ತಿಗೆ ಯಾವುದೇ ರೀತಿಯ ಸಹಾಯ ಮಾಡಲು ಹಿಂಜರಿಯುತ್ತಾರೆ. ಅದಕ್ಕೆ ಕಾರಣ ಮುಂದೆ ತಾವು ಈ ಪ್ರಕರಣದಲ್ಲಿ ಸಾಕ್ಷಿ ಹೇಳಬೇಕಾಗುತ್ತದೆ, ನ್ಯಾಯಾಲಯಕ್ಕೆ ಅಲೆದಾಡಬೇಕಾಗುತ್ತದೆ ಇತ್ಯಾದಿ ಭಯ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಆ ಭಯಕ್ಕೆ ಕಾರಣವಿಲ್ಲ, ಏಕೆಂದರೆ ಕೌಟುಂಬಿಕ ದೌರ್ಜನ್ಯದ ಬಗ್ಗೆ ದೂರು ನೀಡಿದ ವ್ಯಕ್ತಿ ಯಾವುದೇ ಸಾಕ್ಷ್ಯ ನುಡಿಯುವ ಅಗತ್ಯವಿಲ್ಲ. ಅಂಥ ವ್ಯಕ್ತಿಯ ಹೆಸರನ್ನು ಬಹಿರಂಗಗೊಳಿಸುವ ಅಗತ್ಯ ಕೂಡ ಇಲ್ಲ. ದೂರು ಸ್ವೀಕರಿಸಿದವರು ಎಂದರೆ ಸಂರಕ್ಷಣಾಧಿಕಾರಿ ಅಥವಾ ಪೋಲೀಸು ಅಧಿಕಾರಿ ದೌರ್ಜನ್ಯಕ್ಕೆ ಒಳಗಾದ ಮಹಿಳೆಗೆ ಅವಳಿಗಿರುವ ಹಕ್ಕುಗಳ ಬಗ್ಗೆ ಮಾಹಿತಿಯನ್ನು ನೀಡುತ್ತಾರೆ ಮತ್ತು ಅಗತ್ಯ ಸಹಾಯವನ್ನೂ ಮಾಡುತ್ತಾರೆ, ಈ ಕಾನೂನಿನ ಅಡಿಯಲ್ಲಿ ಆಕೆ ರಕ್ಷಣಾ ಆದೇಶವನ್ನು ಪಡೆಯಬಹುದು, ಹಣಕಾಸಿನ ಪರಿಹಾರವನ್ನು ಪಡೆಯಬಹುದು, ಮಕ್ಕಳ ಅಭಿರಕ್ಷೆಯ ಆದೇಶವನ್ನು ಪಡೆಯಬಹುದು, ವಾಸಸ್ಥಳದ ಆದೇಶವನ್ನು ಪಡೆಯಬಹುದು, ಆದ ನಷ್ಟಕ್ಕಾಗಿ ನಷ್ಟಪರಿಹಾರದ ಆದೇಶವನ್ನು ಪಡೆಯಬಹುದು, ಮೇಲಿನ ಯಾವುದೇ ಆದೇಶಗಳನ್ನು ಅಗತ್ಯವಿದ್ದರೆ, ಒಟ್ಟಿಗೆ ಪಡೆಯಬಹುದು.

ನ್ಯಾಯಾಲಯವು ನೀಡಿದ ಆದೇಶವನ್ನು ರದ್ದು ಪಡಿಸುವಂತೆ ಕೋರಿಕೆ ಸಲ್ಲಿಸುವವರೆಗೆ ಈ ಆದೇಶಗಳು ಜಾರಿಯಲ್ಲಿರುತ್ತವೆ. ಗಂಡನ ವಿರುದ್ಧ ಈಗಾಗಲೇ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಮೊಕದ್ದಮೆಯನ್ನು ಹೂಡಿದ್ದರೂ ಸಹ ಈ ಕಾನೂನಿನ ಅಡಿಯಲ್ಲಿ ದೂರು ಸಲ್ಲಿಸಬಹುದು.

ಈ ಕಾನೂನಿನ ಬಹು ಮುಖ್ಯವಾದ ಅಂಶವೆಂದರೆ ಇದು ಮಹಿಳೆಗೆ ನೀಡಿರುವ "ವಾಸದ ಹಕ್ಕು", ಎಂದರೆ ಮಹಿಳೆಯನ್ನು ಅವಳ ಗಂಡನ ಮನೆಯಿಂದ ಯಾರೂ ಹೊರದೂಡುವಂತಿಲ್ಲ. ವಿವಾಹದ ನಂತರ ಮಹಿಳೆಗೆ ಗಂಡನ ಮನೆಯೇ ತನ್ನ ಮನೆಯಾಗುತ್ತದೆ. ಆದ್ದರಿಂದ ಆ ಮನೆಯಲ್ಲಿರಲು ಪುರುಷನಿಗೆ ಎಷ್ಟು ಹಕ್ಕು

ಇರುತ್ತದೆಯೋ ಅಷ್ಟೇ ಹಕ್ಕು ಮಹಿಳೆಗೂ ಇರುತ್ತದೆ. ಅದ್ದರಿಂದ ಗಂಡನ ಮನೆಯಿಂದ ಹೆಂಡತಿಯನ್ನು ಹೊರದೂಡುವುದು ಕಾನೂನಿಗೆ ವಿರುದ್ಧವಾದುದು.

ಈ ಕಾನೂನು ಜಾರಿಯಲ್ಲಿದ್ದರೂ ಈ ಎಲ್ಲ ದೌರ್ಜನ್ಯಗಳೂ ಮಹಿಳೆಯ ಮೇಲೆ ಅವ್ಯಾಹತವಾಗಿ ನಡೆಯುತ್ತಲೇ ಇವೆ. ಕಾನೂನಿನ ಅರಿವಿದ್ದಾಗ ಮಾತ್ರ ಅದನ್ನು ವಿರೋಧಿಸುವುದು ಸಾಧ್ಯ ಮತ್ತು ಅದರಿಂದ ರಕ್ಷಣೆ ಪಡೆಯುವುದು ಸಾಧ್ಯ.

ವರದಕ್ಷಿಣೆ ವಿರುದ್ಧ ಹಕ್ಕು

ಇಷ್ಟೆಲ್ಲ ಪ್ರಯತ್ನಗಳಾದರೂ ಮಹಿಳೆ ಒಳಗಾಗುವ ದೌರ್ಜನ್ಯಗಳಿಗೆ ನೂರು ಮುಖ. ಸಮಾಜದಲ್ಲಿ ಬೇರೂರಿರುವ ವರದಕ್ಷಿಣೆಯ ಪಿಡುಗು ಮಹಿಳೆಯ ಬಾಳನ್ನು ಅಸಹನೀಯವನ್ನಾಗಿ ಮಾಡಿದೆ. ವರದಕ್ಷಿಣೆಗಾಗಿ ನಾನಾ ಥರದ ಹಿಂಸೆಗೆ ಒಳಗಾಗುವ ಹೆಣ್ಣು ಮಕ್ಕಳಿಗೆ ಲೆಕ್ಕವಿಲ್ಲ. ಆ ಹಿಂಸೆಯನ್ನು ತಾಳಲಾರದೆ ಆತ್ಮಹತ್ಯೆಗೆ ಎಳಸುವವರಿಗೆ ಲೆಕ್ಕವಿಲ್ಲ. ಅದಕ್ಕಾಗಿ ನಡೆದ ವಧೂದಹನಗಳಿಗೆ ಲೆಕ್ಕವಿಲ್ಲ. ೧೯೬೧ರಷ್ಟು ಹಿಂದೆಯೇ ವರದಕ್ಷಿಣೆ ನಿಷೇಧ ಕಾನೂನು ಜಾರಿಯಲ್ಲಿ ಬಂದರೂ ಅದು ವರದಕ್ಷಿಣೆಯ ಪಿಡುಗನ್ನು ನಿವಾರಿಸುವಲ್ಲಿ ವಿಫಲವಾಯಿತು. ಸಮಾಜ ಮುಖಿಯಾದ ಮತ್ತು ಸಮಾಜ ಸುಧಾರಣಾ ಕಾನೂನು ಜಾರಿಗೆ ತಂದರೂ ಅದನ್ನು ಕಟ್ಟು ನಿಟ್ಟಾಗಿ ಅನುಷ್ಠಾನಗೊಳಿಸದಿದ್ದರೆ ಮತ್ತು ಜನಸಾಮಾನ್ಯರು ಅರಿತುಕೊಂಡು ಕೈಜೋಡಿಸದಿದ್ದರೆ ಎಂಥ ಕಾನೂನಾದರೂ ವಿಫಲವಾಗುತ್ತದೆ ಎಂಬುದನ್ನು ಇದು ಸಾಬೀತುಪಡಿಸಿತು.

ಆದರೆ ಅಪರಾಧಿಗಳಿಗೆ ಶಿಕ್ಷೆಯ ಭಯವಿಲ್ಲದಿದ್ದರೆ ಯಾವುದೇ ಅಪರಾಧವೂ ನಿಯಂತ್ರಣಕ್ಕೆ ಬರುವುದು ಸಾಧ್ಯವಿಲ್ಲ. ಆದ್ದರಿಂದಲೇ, ವರದಕ್ಷಿಣೆಯ ಕಾರಣಕ್ಕಾಗಿ ಮತ್ತು ಇತರ ಕಾರಣಗಳಿಗಾಗಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಗಟ್ಟುವುದಕ್ಕಾಗಿ, ೧೯೮೬ರಷ್ಟು ಹಿಂದೆಯೇ ಭಾರತ ದಂಡ ಸಂಹಿತೆಗೆ ತಿದ್ದುಪಡಿ ಮಾಡಿ ಹಿಂಸೆ ನೀಡುವುದನ್ನು ಅಪರಾಧವನ್ನಾಗಿ ಮಾಡಲಾಯಿತು. ಅದೇ ೪೯೮ಎ ಎಂಬ ಆಪಶ್ಬಾಂಧವ.

ಹಿಂಸೆಯ ವಿರುದ್ಧ ರಕ್ಷಣೆ : ೪೯೮ಎ ಪ್ರಕರಣ

ಸಮಾಜದಲ್ಲಿ ಬೇರೂರಿರುವ ವರದಕ್ಷಿಣೆ ಪಿಡುಗಿನಿಂದಾಗಿ ಅನೇಕ ಮಹಿಳೆಯರು ದಿನನಿತ್ಯವೂ ವರದಕ್ಷಿಣೆ ಕಿರುಕುಳಕ್ಕೆ ಒಳಗಾಗುತ್ತಿದ್ದರೂ ಅನೇಕ ಮಹಿಳೆಯರು ಕಿರುಕುಳವನ್ನು ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಅನೇಕ ಮಹಿಳೆಯರನ್ನು ಜೀವಂತವಾಗಿ ಸುಡಲಾಗುತ್ತಿದ್ದರೂ ಹಾಗೆ ಹಿಂಸಿಸುವವರನ್ನು ಹಿಡಿದು ಶಿಕ್ಷಿಸಬಲ್ಲ ಒಂದು ಕಾನೂನು ಸಹ ೧೯೮೬ರವರೆಗೆ ಜಾರಿಯಲ್ಲಿರಲಿಲ್ಲ. ಮಹಿಳೆಯರ ಮೇಲೆ ನಡೆಸುವ ಹಿಂಸೆಯನ್ನು ಅಪರಾಧವೆಂದೇ ಪರಿಗಣಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ, ಮಹಿಳೆಯ ಮೇಲೆ ನಡೆಸುವ ಹಿಂಸೆಯನ್ನು

ತಡೆಯುವ ಮತ್ತು ಅಪರಾಧಿಗೆ ಶಿಕ್ಷೆ ಕೊಡಿಸುವ ಉದ್ದೇಶದಿಂದ ൧൯൮൩ರಲ್ಲಿ ದಂಡ ಸಂಹಿತೆಗೆ ತಿದ್ದುಪಡಿ ಮಾಡಿ ൪൯൮൧ ಪ್ರಕರಣವನ್ನು ಸೇರಿಸಲಾಯಿತು. ಕಾನೂನಿನಲ್ಲಿ ಎಲ್ಲಿಯೂ ಅದುವರೆಗೂ ಎಂಥ ಕೃತ್ಯ 'ಹಿಂಸೆ'



ಎನಿಸಿಕೊಳ್ಳುತ್ತದೆ ಎಂಬುದನ್ನು ವಿವರಿಸಿರಲಿಲ್ಲ. ಮೊಟ್ಟ ಮೊದಲ ಬಾರಿಗೆ ಆಗ ಹಿಂಸೆ ಎಂಬ ಶಬ್ದವನ್ನು ಅರ್ಥೈಸಲಾಯಿತು. ಇದರ ಪ್ರಕಾರ ಹಿಂಸೆ ಎಂದರೆ, ಮಹಿಳೆಯ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುವ ಗಂಡನ ಅಥವಾ ಅವನ ಬಂಧುಗಳ ಯಾವುದೇ ವರ್ತನೆ; ಮಹಿಳೆಯ ಜೀವಕ್ಕೆ, ಅಂಗಗಳಿಗೆ ಹಾನಿಯುಂಟುಮಾಡುವ ಅಥವಾ ದೈಹಿಕ ಅಥವಾ ಮಾನಸಿಕ ಆರೋಗ್ಯಕ್ಕೆ ಹಾನಿ ಉಂಟುಮಾಡುವಂಥ ವರ್ತನೆ; ಅವಳಿಂದ ಅಥವಾ ಅವಳ ಸಂಬಂಧಿಗಳಿಂದ ಆಸ್ತಿ ಪಡೆಯುವುದಕ್ಕಾಗಿ ನೀಡಿದ ಕಿರುಕುಳ; ಅವರ ಆಸ್ತಿಯ ಅಥವಾ ಹಣದ ಬೇಡಿಕೆಯನ್ನು ಈಡೇರಿಸಲಿಲ್ಲವೆಂದು ನೀಡುವ ಕಿರುಕುಳ. ಇದು, ಮಹಿಳೆಗೆ ನೀಡುವ ಹಿಂಸೆಯನ್ನು ಅಪರಾಧವಾಗಿಸುವ ಪ್ರಕರಣ.

൪൯൮൧ ಪ್ರಕರಣದ ಅಡಿಯಲ್ಲಿ ಅಪರಾಧವೆನಿಸುವ ಇಂಥ ಕೃತ್ಯ ಜಾಮೀನೀಯವಲ್ಲದ, ರಾಜಿ ಮಾಡಿಕೊಳ್ಳಲಾಗದ ಸಂಜ್ಞೆಯ ಅಪರಾಧ. ಎಂದರೆ ಅಪರಾಧ ಎಸಗಿದವನನ್ನು ವಾರೆಂಟಿಲ್ಲದೆ ಬಂಧಿಸಬಹುದಾದ, ದೂರು ಕೊಟ್ಟವರೇ ದೂರನ್ನು ಹಿಂತೆಗೆದುಕೊಂಡು ರಾಜಿ ಮಾಡಿಕೊಳ್ಳಲು ಬಯಸಿದರೂ ಹಿಂತೆಗೆದುಕೊಳ್ಳಲು ಅವಕಾಶವಿಲ್ಲದಂಥ ಅಪರಾಧ.

ವರದಕ್ಷಿಣೆ ಕಿರುಕುಳದ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಜಾರಿಗೊಳಿಸಿದ್ದರೂ ಕುಟುಂಬದಲ್ಲಿ ಒಳಗಾಗುವ ಹಿಂಸೆಯ ಸಂದರ್ಭದಲ್ಲಿಯೂ ಈ ಕಾನೂನಿನ ನೆರವನ್ನು ಮಹಿಳೆ ಪಡೆಯಬಹುದು. ಇಂಥ ಹಿಂಸೆಯಿಂದ ಕೂಡಲೇ ರಕ್ಷಣೆ ಪಡೆಯಲು ಹತ್ತಿರದ ಪೊಲೀಸು ಠಾಣೆಯಲ್ಲಿ ದೂರು ನೀಡಬಹುದು. ಕಿರುಕುಳಕ್ಕೆ ಒಳಗಾದ ಮಹಿಳೆ ತಾನೇ ಸ್ವತಃ ದೂರು ನೀಡಬಹುದು ಇಲ್ಲವೇ ಹಿಂಸೆಗೆ ಒಳಗಾದ ಮಹಿಳೆಯ ತಂದೆ, ತಾಯಿ, ಸೋದರ, ಸೋದರಿ ಅಥವಾ ತಂದೆ ಅಥವಾ ತಾಯಿಯ ಸೋದರ ಅಥವಾ ಸೋದರಿ ದೂರನ್ನು ಸಲ್ಲಿಸಬಹುದು. ಹಿಂಸೆಗೊಳಗಾದ ಮಹಿಳೆಯ ಯಾರೇ ರಕ್ತ ಸಂಬಂಧಿ, ಅಥವಾ ವಿವಾಹ ಅಥವಾ ದತ್ತಕದ ಮೂಲಕ ಸಂಬಂಧಿಯಾದ ಯಾರೇ ವ್ಯಕ್ತಿ ದೂರು ನೀಡಬೇಕಾದರೆ ನ್ಯಾಯಾಲಯದ ಅನುಮತಿ ಪಡೆದು ನೀಡಬಹುದು.

ಇದು ರಾಜಿ ಮಾಡಿಕೊಳ್ಳಲಾಗದ ಅಪರಾಧವಾಗಿರುವುದರಿಂದ ದೂರು ಕೊಟ್ಟವರು ದೂರನ್ನು ಹಿಂತೆಗೆದುಕೊಳ್ಳಲು ಬಯಸಿದರೂ ಅದಕ್ಕೆ ಅವಕಾಶ ಇರುವುದಿಲ್ಲ. ಹಾಗಾಗಿ ಕುಟುಂಬದವರು ರಾಜ

ಮಾಡಿಕೊಂಡು ಒಂದಾಗುವ ಸಾಧ್ಯತೆಗಳು ಕಡಿಮೆ. ಇದು ಸಂಜ್ಞೆಯ ಅಪರಾಧವಾದ್ದರಿಂದ ದೂರಿನಲ್ಲಿ ಹೆಸರಿಸಿದವರೆಲ್ಲರನ್ನೂ ಪೊಲೀಸರು ಕೂಡಲೇ ದಸ್ತಗಿರಿ ಮಾಡಲಾಗುತ್ತಿತ್ತು.

ಅವರು, ಅವಳ ಗಂಡ, ಅತ್ತೆ, ಮಾವ, ಮೈದುನ, ನಾದಿನಿ ಯಾರೂ ಆಗಬಹುದಿತ್ತು. ವಯಸ್ಸಾದ ಅತ್ತೆ ಮಾವಂದಿರಿಗೂ ದಸ್ತಗಿರಿಯಿಂದ ವಿನಾಯಿತಿ ಇರಲಿಲ್ಲ. ಹಾಗಾಗಿ ವಯಸ್ಸಾದವರು, ಕಾಯಿಲೆಯಿಂದ ನರಳುತ್ತಿರುವವರು, ಎಳೆ ಮಕ್ಕಳ ತಾಯಂದಿರು ಹೀಗೆ ಎಲ್ಲರೂ ಜೈಲು ವಾಸ ಅನುಭವಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಹಾಗಾಗಿ ೪೯೮ಎ ಎಂದರೆ ಸಾಕು ಗಂಡ ಮತ್ತು ಅವನ ಮನೆಯವರೆಲ್ಲ ಹೆದರುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಮಹಿಳೆಯರು ತಮ್ಮ ಗಂಡನ ಹಾಗೂ ಗಂಡನ ಮನೆಯವರ



ವಿರುದ್ಧ ದ್ವೇಷ ಸಾಧನೆಗಾಗಿ ಈ ಪ್ರಕರಣವನ್ನು ಬಳಸಿಕೊಳ್ಳುತ್ತಿದ್ದಾರೆಂಬ ಆಕ್ರೋಶ ಹಾಗೆ ದಸ್ತಗಿರಿಯಾದ ಕುಟುಂಬದವರಿಂದ ವ್ಯಕ್ತವಾಗಲು ಪಾರಂಭವಾಯಿತು. ಈ ಪ್ರಕರಣವನ್ನು ವಿರೋಧಿಸುವ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಇದರ ಅಡಿಯಲ್ಲಿ ಕೈಗೊಳ್ಳುವ ಕ್ರಮವನ್ನು ಕಾನೂನು ಭಯೋತ್ಪಾದನೆ' ಎಂದು ಕರೆಯಲಾಯಿತು. ಸ್ವಲ್ಪಮಟ್ಟಿಗೆ ಒಮ್ಮೆ ಸತ್ಯ ಸ್ವಲ್ಪಮಟ್ಟಿಗೆ ಅಲ್ಲ. ಏಕೆಂದರೆ ತಾವು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕೆಂದು ನಿರೀಕ್ಷಿಸುವ ಗಂಡನ ಮನೆಯವರಿಗೆ ಮಹಿಳೆಯ (ಸಾಮಾನ್ಯವಾಗಿ ಮದುವೆಯಾಗಿ ಬಂದ ಸೊಸೆ) ಈ ಪ್ರತಿರೋಧ ನುಂಗಲಾರದ ತುತ್ತಾಗಿತ್ತು. ಈ ಆಕ್ರೋಶಕ್ಕೆ ಇದು ಒಂದು ಕಾರಣ. ಹಾಗಾಗಿ ಈ ಆರೋಪ ಸುಳ್ಳು, ಆಕ್ರೋಶಕ್ಕೆ ಮತ್ತೊಂದು ಕಾರಣವೆಂದರೆ ಇದನ್ನು ಕೆಲವು ಮಹಿಳೆಯರು ದುರುಪಯೋಗ ಪಡಿಸಿಕೊಂಡುದುದು, ಎಂದು ತಮ್ಮ ದ್ವೇಷ ಸಾಧನೆಗಾಗಿ ಅಥವಾ ಹಣ ಕೀಳುವುದಕ್ಕಾಗಿ ಸುಳ್ಳು ದೂರು ನೀಡಿ ಅವರಿಗೆ ಹಿಂಸೆ ನೀಡಲು ಈ ಪ್ರಕರಣವನ್ನು ಬಳಕೆ ಮಾಡಿಕೊಂಡುದುದು. ಹಾಗಾಗಿ ಈ ಅರೋಪ ನಿಜ.

ಆದರೆ ಕಾನೂನಿನ ಈ ಪ್ರಕರಣವನ್ನು ವ್ಯಾಪಕವಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ದೂರುಗಳು ಬಂದ ಹಿನ್ನೆಲೆಯಲ್ಲಿ, ಸರ್ವೋಚ್ಚ ನ್ಯಾಯಾಲಯ, ಪ್ರಾಥಮಿಕ ವಿಚಾರಣೆಯಿಲ್ಲದೆ ದಸ್ತಗಿರಿ ಮಾಡಬಾರದೆಂದು ನಿರ್ದೇಶನ ನೀಡಿದೆ. ಈ ಕಾನೂನನ್ನು ಮಹಿಳೆಯರು ತಮ್ಮ ದ್ವೇಷ ಸಾಧನೆಗೋ ಪ್ರತೀಕಾರಕ್ಕೋ ಬಳಸಿಕೊಳ್ಳಬಾರದು. ಏಕೆಂದರೆ, ಈಗಾಗಲೇ, ಈ ಕಾನೂನನ್ನು ವ್ಯಾಪಕವಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ, ಆದ್ದರಿಂದ ಇದನ್ನು ಜಾಮೀನೀಯವಾದ ಹಾಗೂ ಸಂಜ್ಞೆಯವಲ್ಲದ ಅಪರಾಧವನ್ನಾಗಿ ಮಾಡಬೇಕು' ಎಂಬ ಬೇಡಿಕೆಯನ್ನು ನಾನಾ ಸಂಘಟನೆಗಳು ಮುಂದಿಟ್ಟಿವೆ. ಹಾಗೇನಾದರೂ ಮಾಡಿದರೆ ಕಾನೂನು ಲಗೊಳ್ಳುತ್ತದೆ ಮತ್ತು ಮಹಿಳೆಯ ಶೋಷಣೆಗೆ ಕಡಿವಾಣ ಇರುವುದಿಲ್ಲ. ಹಾಗಾಗಬಾರದು ಎಂದರೆ ಈ ಕಾನೂನಿನ

ದುರ್ಬಳಕೆ ನಿಲ್ಲಬೇಕು. ಆಗ ನಿಜವಾಗಿ ಅಗತ್ಯವಿರುವ ಮಹಿಳೆಯರಿಗೆ ಈ ಕಾನೂನಿನ ನೆರವು ದೊರೆಯುವುದು ಸಾಧ್ಯ.

ವೈಯಕ್ತಿಕ ಕಾನೂನುಗಳು

ಮೇಲೆ ಹೇಳಿದ ಎರಡೂ ಕಾನೂನುಗಳೂ ಮಹಿಳೆಗೆ ಮನೆಯ ನಾಲ್ಕು ಗೋಡೆಗಳ ನಡುವೆ ತನ್ನವರಿಂದಲೇ ಒಳಗಾಗುವ ದೌರ್ಜನ್ಯದ ವಿರುದ್ಧ ರಕ್ಷಣೆಯನ್ನೂ, ಅದರಿಂದಾಗಿ ಉಂಟಾಗುವ ಕಷ್ಟ ನಷ್ಟಗಳಿಗೆ ಪರಿಹಾರವನ್ನು ಮತ್ತು ಅದರ ವಿರುದ್ಧ ಹೋರಾಡುವ ಹಕ್ಕನ್ನು ಕೊಡುತ್ತದೆ. ಇವೆಲ್ಲವುಗಳ ನಡುವೆ ವೈಯಕ್ತಿಕ ಕಾನೂನುಗಳಲ್ಲಿ ಕಾಲದಿಂದ ಕಾಲಕ್ಕೆ ಆದ ತಿದ್ದುಪಡಿಗಳೂ ಸಹ, ಧಾರ್ಮಿಕ ಸಂಪ್ರದಾಯಗಳು ಮತ್ತು ಆಚರಣೆಗಳಿಂದಾಗಿ ಒಳಗಾಗುತ್ತಿದ್ದ ಶೋಷಣೆಯ ವಿರುದ್ಧ ಅವಳಿಗೆ ಸ್ವಲ್ಪಮಟ್ಟಿಗೆ ನ್ಯಾಯವನ್ನು ಒದಗಿಸಿಕೊಡುವಲ್ಲಿ ಯಶಸ್ವಿಯಾಗಿವೆ, ನಿಜ. ಆದರೆ, ಇನ್ನೂ ಅನೇಕ ತಾರತಮ್ಯಗಳು ಉಳಿದುಕೊಂಡೇ ಬಂದಿವೆ. ಭಾರತದ ಸಂವಿಧಾನದಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಮತ್ತು ಸಮಾನ ಹಕ್ಕುಗಳನ್ನು ನೀಡಲಾಯಿತಾದರೂ ಆ ನಂತರದಲ್ಲಿ



ಕ್ರೋಢೀಕೃತಗೊಂಡ ವೈಯಕ್ತಿಕ ಕಾನೂನುಗಳಲ್ಲಿ ಇದು ಸಂಪೂರ್ಣವಾಗಿ ಪ್ರತಿಬಿಂಬಿತವಾಗಲಿಲ್ಲ. ಇದಕ್ಕೆ ಕಾರಣ ವೈಯಕ್ತಿಕ ಕಾನೂನುಗಳ ಮೂಲವಿರುವುದು ಆಯಾ ಧರ್ಮಗಳಲ್ಲಿ. ಹಾಗಾಗಿ, ಸ್ವಾತಂತ್ರ್ಯ ಪೂರ್ವದಲ್ಲಿ ಆಯಾ ಧರ್ಮಗಳಲ್ಲಿ ಪಾಲಿಸುತ್ತಿದ್ದ ಮತ್ತು ರೂಢಿಯಲ್ಲಿದ್ದ ಸಂಪ್ರದಾಯಗಳು ಮತ್ತು ಆಚರಣೆಗಳ ಆಧಾರದ ಮೇಲೆಯೇ ವಿವಾಹ, ದತ್ತಕ, ಆಸ್ತಿ ಮುಂತಾದ ವಿಷಯಗಳ ಬಗ್ಗೆ ನ್ಯಾಯ ಪ್ರದಾನವಾಗುತ್ತಿದ್ದವು. ಈ ವ್ಯವಸ್ಥೆ ಸ್ವಾತಂತ್ರ್ಯಾನಂತರ ಕ್ರೋಢೀಕೃತ ಕಾನೂನುಗಳು ಜಾರಿಗೆ ಬಂದ ನಂತರ, ಸಂವಿಧಾನದಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಿದ್ದರ ಕಾರಣದಿಂದ ಸ್ವಲ್ಪಮಟ್ಟಿಗೆ ಬದಲಾಯಿತು. ಪ್ರಮುಖವಾಗಿ, ವಿವಾಹವನ್ನು ಒಂದು ಪವಿತ್ರ ಆಚರಣೆಯನ್ನಾಗಿ ಪರಿಭಾವಿಸುವ ಹಿಂದೂ ವಿವಾಹ ವ್ಯವಸ್ಥೆಯಲ್ಲಿ ಈ ಕಾನೂನುಗಳು ಕಲವುಂದು ಪ್ರಗತಿಪರ ಬದಲಾವಣೆಗಳನ್ನು ತಂದವು. ಬಹುಮುಖ್ಯವಾಗಿ, ಬಾಲ್ಯವಿವಾಹವನ್ನು ಕಾನೂನು ಬಾಹಿರಗೊಳಿಸಿ ವಿವಾಹ ಯೋಗ್ಯ ವಯಸ್ಸನ್ನು ನಿಗದಿಪಡಿಸಲಾಯಿತು, ಜಾರಿಯಲ್ಲಿದ್ದ ದ್ವಿಬಹು ಪತ್ನಿತ್ವ ಪದ್ಧತಿಗೆ ತಡೆ ಹಾಕಿ ಏಕ ಪತ್ನಿತ್ವ ಏಕ ಪತಿತ್ವವನ್ನು, ವಿವಾಹ ಸಮಯದಲ್ಲಿ ವಧೂ ವರರಿಬ್ಬರೂ ಮಾನಸಿಕವಾಗಿ ಸ್ವಸ್ಥರಿರಬೇಕೆಂಬುದನ್ನು ಕಡ್ಡಾಯಗೊಳಿಸಲಾಯಿತು ಸ್ವಯಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಸಮಾನ ಹಕ್ಕನ್ನು ನೀಡಲಾಯಿತು ಮತ್ತು ಕೆಲವೊಂದು ಕಾರಣಗಳ ಮೇಲೆ ವಿವಾಹ ಬಂಧನದಿಂದ ಹೊರಬರುವ ಸ್ವಾತಂತ್ರ್ಯ ಮಹಿಳೆಗೆ ದೊರೆಯಿತು. ಈ

ಅವಕಾಶಗಳು ಮತ್ತು ಹಕ್ಕುಗಳು ಮಹಿಳೆಯ ಸಾಮಾಜಿಕ ಜೀವನದಲ್ಲಿ ಮತ್ತು ಅವರ ಸ್ಥಾನಮಾನದಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದವು ಮತ್ತು ಅವಳಿಗೆ ಸ್ವಾತಂತ್ರದ ಹೆಬ್ಬಾಗಿಲನ್ನೇ ತೆರೆದವು. ಆದರೆ ಮಹಿಳೆ ಇನ್ನೂ ಆರ್ಥಿಕವಾಗಿ ಸ್ವತಂತ್ರಳಾಗಿಲ್ಲದಿದ್ದ ಕಾರಣ, ಸ್ತ್ರೀ ಪುರುಷರಿಬ್ಬರಿಗೂ ಸಮಾನವಾಗಿ ಲಭ್ಯವಾದ ವಿಚ್ಛೇದನೆಯ ಹಕ್ಕು ಮಹಿಳೆಯನ್ನು ಅತಂತ್ರಳನ್ನಾಗಿಸಬಾರದು ಎಂಬ ದೃಷ್ಟಿಯಿಂದ ಜೀವನಾಂಶದ ಹಕ್ಕನ್ನೂ ಕಾನೂನಿನಲ್ಲಿ ನೀಡಲಾಯಿತು. ಹೀಗೆ ಕಾನೂನಿನಲ್ಲಿ ಅನೇಕ ಬದಲಾವಣೆಗಳನ್ನು ತರುವ ಮೂಲಕ ಸ್ತ್ರೀಯರಿಗೆ ಪುರುಷರಿಗಿರುವ ಹಕ್ಕುಗಳನ್ನು ಸಮಾನವಾಗಿ ನೀಡುವ ಪ್ರಯತ್ನಗಳಾದವು.

ಆಸ್ತಿ ಹಕ್ಕು

ಮಹಿಳೆಯರು ಆರ್ಥಿಕವಾಗಿ ಪರಾವಲಂಬಿಗಳಾಗಿರುವುದೇ ಈ ಪಿಡುಗು ಇಷ್ಟು ಸರ್ವವ್ಯಾಪಿಯಾಗಿ ಬೆಳೆಯುವುದಕ್ಕೆ ಕಾರಣ ಎಂಬ ಹಿನ್ನೆಲೆಯಲ್ಲಿ

ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿಯೂ ಸಮಾನ ಹಕ್ಕು ನೀಡಲಾಯಿತು. ೧೯೫೬ ರಷ್ಟು ಹಿಂದಿನಿಂದಲೇ ಸ್ವಯಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳೊಂದಿಗೆ ಸಮಾನವಾಗಿ ಆಸ್ತಿ ಹಂಚಿಕೊಳ್ಳುವ ಹಕ್ಕನ್ನು ನೀಡಲಾಗಿತ್ತು ೧೯೯೪ ರಲ್ಲಿ ಕರ್ನಾಟಕದಲ್ಲಿ ಮತ್ತು ೨೦೦೫ ರಲ್ಲಿ ಇಡೀ ದೇಶಕ್ಕೆ ಅನ್ವಯಿಸುವಂತೆ ಹಿಂದೂ ಉತ್ತರಾಧಿಕಾರ ಕಾನೂನಿಗೆ ತಿದ್ದುಪಡಿ ಮಾಡುವ ಮೂಲಕ ಪಿತ್ರಾರ್ಜಿತ ಆಸ್ತಿಯಲ್ಲಿಯೂ ಹಣ್ಣು ಮಕ್ಕಳಿಗೆ ಸಮಾನ ಆಸ್ತಿ ಹಕ್ಕನ್ನು ನೀಡಲಾಯಿತು. ಇದಕ್ಕೆ ಪುರುಷ ವರ್ಗದಿಂದ ತೀವ್ರವಾದ ವಿರೋಧ ವ್ಯಕ್ತವಾಯಿತು. ವಿರೋಧ, ವಾದ ವಿವಾದಗಳ ನಡುವೆಯೇ ಈ

ಕಾನೂನು ಜಾರಿಯಾಯಿತು. ಗಂಡು ಮಕ್ಕಳಿಂದ ಮಾತ್ರವೇ ಮೋಕ್ಷ ಪ್ರಾಪ್ತಿಯಾಗುವುದು ಮತ್ತು ಗಂಡು ಮಕ್ಕಳಿಂದ ಮಾತ್ರವೇ ವಂಶ ಮುಂದುವರಿಯುವುದು ಎಂದು ಬಲವಾಗಿ ಈಗಲೂ ನಂಬಿರುವ ಹಿಂದೂ ಸಮಾಜದಲ್ಲಿ, ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಸಮ ಪಾಲು ಪಡೆಯುವ ಹಕ್ಕು ನೀಡಿದ ಈ ಕ್ರಮ ಮಹಿಳಾ ಹಕ್ಕುಗಳ ಇತಿಹಾಸದಲ್ಲಿ ಒಂದು ಮೈಲಿಗಲ್ಲು.

ಹೆಣ್ಣು ಭ್ರೂಣ ಹತ್ಯೆಯ ವಿರುದ್ಧ ಹಕ್ಕು

ಹೆಣ್ಣು ಮಕ್ಕಳು ಎಂದರೆ ಒಂದು ಜವಾಬ್ದಾರಿ ಮತ್ತು ಹೊರೆ ಎಂಬಂಥ ಮನೋಭಾವ ಈಗಲೂ ನಮ್ಮ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿದೆ. ಮದುವೆಯಾಗಿ ಮತ್ತೊಂದು ಮನೆಗೆ ಹೋಗುವ ಮಗಳ ಶಿಕ್ಷಣಕ್ಕೆ ಮಾಡುವ ಖರ್ಚು ವ್ಯರ್ಥ ಎಂಬ ಆಲೋಚನೆಯಿಂದಾಗಿ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಹೆಣ್ಣು ಮಗು ಹುಟ್ಟಿದಂದಿನಿಂದಲೇ ತಂದೆ ತಾಯಿಯರಿಗೆ ಅವಳ ಮದುವೆಗೆ ವರದಕ್ಷಿಣೆಗಾಗಿ ಹಣ ಹೊಂದಿಸುವುದು ಹೇಗೆಂಬ ಯೋಚನೆ ಪ್ರಾರಂಭವಾಗುತ್ತದೆ. ಇದರಿಂದ ಪಾರಾಗಲು ಕಂಡುಕೊಂಡ ಮಾರ್ಗ ಹೆಣ್ಣು ಶಿಶು/ಹೆಣ್ಣು ಭ್ರೂಣ ಹತ್ಯೆ, ಇದು ಹೆಣ್ಣಿನ ಹುಟ್ಟುವ ಹಕ್ಕನ್ನೇ ಕಸಿದುಕೊಂಡಂತೆ. ಇದರಿಂದಾಗಿ ಸಮಾಜದಲ್ಲಿ ಸ್ತ್ರೀ ಪುರುಷರ ಸಂಖ್ಯೆಯಲ್ಲಿ ಇರಬೇಕಾದ ಅನುಪಾತ ಏರುಪೇರಾಗಿ ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗಿದೆ. ಇಂಥ ಹತ್ಯೆಯನ್ನು ತಡೆಯುವುದಕ್ಕಾಗಿ

೧೯೯೪ ರಲ್ಲಿ ಗರ್ಭ ಧಾರಣಾ ಮತ್ತು ಪ್ರಸವ ಪೂರ್ವ ರೋಗ ನಿದಾನ ತಂತ್ರಗಳ (ಲಿಂಗ ಆಯ್ಕೆ ನಿಷೇಧ) ಕಾನೂನನ್ನು ಜಾರಿಗೆ ತರಲಾಯಿತು. ಹೆಣ್ಣಿನ ಹುಟ್ಟುವ ಹಕ್ಕನ್ನು ರಕ್ಷಿಸುವುದು ಮತ್ತು ಸಮಾಜದಲ್ಲಿನ ಸ್ತ್ರೀ ಪುರುಷರ ಸಂಖ್ಯೆಯ ನಡುವಿನ ಸಾಮಾಜಿಕ ಸಮತೋಲನ ಏರುಪೇರಾಗದಂತೆ ನೋಡಿಕೊಳ್ಳುವುದು ಇದರ ಉದ್ದೇಶವಾಗಿತ್ತು. ಈ ಕಾನೂನಿನ ಅಡಿಯಲ್ಲಿ, ಹೊಟ್ಟೆಯಲ್ಲಿರುವ ಮಗು ಹೆಣ್ಣೋ ಗಂಡೋ ಎಂದು ತಿಳಿದುಕೊಳ್ಳಲು ಭ್ರೂಣ ಲಿಂಗ ಪತ್ತೆ ಪರೀಕ್ಷೆಯನ್ನು ಮಾಡಿಸಿಕೊಳ್ಳುವಂತೆ ಮಹಿಳೆಯ ಮೇಲೆ ಒತ್ತಡ ಹೇರುವುದು ಮತ್ತು ಅದಕ್ಕೆ ಬೆಂಬಲ ನೀಡುವುದು ಗಂಭೀರ ಶಿಕ್ಷಾರ್ಹ ಅಪರಾಧಗಳಾಗಿವೆ.

ಉದ್ಯೋಗ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳದ ವಿರುದ್ಧ ಹಕ್ಕು

ಮಹಿಳೆಗೆ ಶಿಕ್ಷಣದ ಅವಕಾಶಗಳು ಹೆಚ್ಚಾದಂತೆ ಮತ್ತು ಕೈಗಾರಿಕೀಕರಣದಿಂದಾಗಿ ಹೆಚ್ಚು ಹೆಚ್ಚು ಮಹಿಳೆಯರು ಉದ್ಯೋಗಕ್ಕೆ ಸೇರತೊಡಗಿದರು, ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚಾಯಿತು. ಸ್ತ್ರೀ ಪುರುಷರು ಒಟ್ಟಾಗಿ ಕೆಲಸ ಮಾಡುವ ಸಂದರ್ಭಗಳು ಸೃಷ್ಟಿಯಾದುದರಿಂದ, ಉದ್ಯೋಗ ಸ್ಥಳದಲ್ಲಿ ಪುರುಷರಿಂದ ಮಹಿಳೆಯರು ಲೈಂಗಿಕ ಕಿರುಕುಳವನ್ನು ಎದುರಿಸುವ ಸಂದರ್ಭಗಳೂ ಸೃಷ್ಟಿಯಾದವು. ಇದು ಮಹಿಳೆಯ ಶೋಷಣೆಯ

ಮತ್ತೊಂದು ಮುಖ. ಹೇಳಿಕೊಳ್ಳಲಾಗದ ಆದರೆ ಅನುಭವಿಸಲಾಗದ ಮಾನಸಿಕ ಹಿಂಸೆ. ಇದನ್ನೂ ಕೂಡ ಯಾವುದೇ ಕಾನೂನು ಪುಸ್ತಕದಲ್ಲಿಯೂ



ಅಪರಾಧವೆಂದು ಪರಿಗಣಿಸಿರಲಿಲ್ಲ. ಮಹಿಳಾ ಸಂಘಟನೆಗಳ ದೀರ್ಘ ಕಾಲದ ಹೋರಾಟದ ಫಲವಾಗಿ ಇದನ್ನು ಒಂದು ಅಪರಾಧವೆಂದು ಪರಿಗಣಿಸಲಾಗಿದೆ ಮತ್ತು ಅಂಥ ಲೈಂಗಿಕ ಕಿರುಕುಳದ ವಿರುದ್ಧ ಮಹಿಳೆಯರಿಗೆ ರಕ್ಷಣೆ ಕೊಡಲು 'ಉದ್ಯೋಗ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ನಿವಾರಣೆ, ನಿಷೇಧ, ಮತ್ತು ಪರಿಹಾರ) ಅಧಿನಿಯಮ, ೨೦೧೩' ಎಂಬ ಕಾನೂನನ್ನು ಜಾರಿಗೊಳಿಸಲಾಗಿದೆ.

ಶೋಷಣೆಯಿಂದ ಮುಕ್ತವಾದ ಸುರಕ್ಷಿತ ಕೆಲಸದ ಪರಿಸರ ಪ್ರತಿಯೊಬ್ಬ ಉದ್ಯೋಗಸ್ಥ ಮಹಿಳೆಯ ಹಕ್ಕು, ಅಂಥ ಪರಿಸರ ನಿರ್ಮಾಣದ ಜವಾಬ್ದಾರಿ ಉದ್ಯೋಗ ನೀಡಿದ ವ್ಯಕ್ತಿಯದು ಅಥವಾ ಆಕೆ ಉದ್ಯೋಗ ಮಾಡುತ್ತಿರುವ ಸಂಸ್ಥೆಯ ಮಾಲೀಕರದು.

ಸ್ತ್ರೀ ಪುರುಷ ಸಮಾನತೆ, ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯ ಇವು ಮಹಿಳೆಯ ಮೂಲಭೂತ ಹಕ್ಕುಗಳು. ಜೀವಿಸುವ ಸ್ವಾತಂತ್ರ್ಯ ಎಂದರೆ ಘನತೆಯಿಂದ ಜೀವಿಸುವ ಸ್ವಾತಂತ್ರ್ಯ ಎಂದು ಸರ್ವೋಚ್ಛ ನ್ಯಾಯಾಲಯ ತನ್ನ ಅನೇಕ ತೀರ್ಪುಗಳಲ್ಲಿ ಅಭಿಪ್ರಾಯಪಟ್ಟಿದೆ.

ಅತ್ಯಾಚಾರ ಅಂತ್ರಸ್ತೆಯರ ಹಕ್ಕುಗಳು

ಮಹಿಳೆ ಆಕೆ ಸ್ತ್ರೀ ಎಂಬ ಕಾರಣಕ್ಕಾಗಿಯೇ ಅನೇಕ ಬಗೆಯ ಶೋಷಣೆಗಳಿಗೆ/ ಅಪರಾಧಗಳಿಗೆ ಒಳಗಾಗುತ್ತಾಳೆ. ಅತ್ಯಾಚಾರ ಮಹಿಳೆಯ ವಿರುದ್ಧ ಎಸಗುವ ಅತ್ಯಂತ ಹೇಯವಾದ ಅಪರಾಧ, ಅತ್ಯಂತ ಘೋರವಾದ ಅಪರಾಧ, ಘನತೆಯಿಂದ ಜೀವಿಸುವ ಅವಳ ಮೂಲಭೂತ ಹಕ್ಕನ್ನು, ಅವಳ ಮಾನವ ಹಕ್ಕನ್ನು ಸಾರಾಸಗಟಾಗಿ ಹೊಸಕಿ ಹಾಕುವಂಥ ಕೃತ್ಯ. ಆದರೆ ಅತ್ಯಾಚಾರ ಪ್ರಕರಣವೊಂದನ್ನು ತನಿಖೆ ಮಾಡುವಾಗ, ಆಕೆಯ ಹೇಳಿಕೆಯನ್ನು ಪಡೆಯುವುದರಿಂದ ಮೊದಲುಗೊಂಡು ಆಕೆಯನ್ನು ದೈಹಿಕವಾಗಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಆಕೆಯ ಮೇಲೆ ಅತ್ಯಾಚಾರವಾಗಿದೆಯೋ ಇಲ್ಲವೋ ಎಂಬುದನ್ನು ಖಚಿತ ಪಡಿಸಿಕೊಳ್ಳುವವರೆಗಿನ ಪ್ರತಿಯೊಂದು ಹಂತದಲ್ಲಿಯೂ ಮತ್ತೊಮ್ಮೆ ಆಕೆಯ ಮಾನವ ಹಕ್ಕುಗಳ ಉಲ್ಲಂಘನೆ ಇತ್ತೀಚಿನವರೆಗೂ ಆಗುತ್ತದೆ. ಕಾನೂನು ಅದಕ್ಕೆ ಪೂರಕವಾಗಿದೆ ಎಂಬುದೇ ಮಹಿಳೆ ಬಗ್ಗೆ ನಮ್ಮ ಸಮಾಜಕ್ಕೆ ಇರುವ ಮತ್ತು ನಮ್ಮ ಕಾನೂನು ರಚನಾಕಾರರಿಗೆ ಇರುವ ಮನೋಭಾವವನ್ನು ತೋರಿಸುತ್ತದೆ. ಆದರೆ ಮಹಿಳಾ ಸಂಘಟನೆಗಳ, ಮಹಿಳಾವಾದಿಗಳ

ಮತ್ತು ಪ್ರಜ್ಞಾವಂತ ನಾಗರಿಕರ ನಿರಂತರ ಹೋರಾಟದ ಫಲವಾಗಿ ಅತ್ಯಾಚಾರ ಕಾನೂನಿನಲ್ಲಿ ಮತ್ತು ಅದರ ತನಿಖಾ ಪ್ರಕ್ರಿಯೆಯ ಕಾನೂನಿನಲ್ಲಿ ಇರುವ ಮೂಲಭೂತ ಮತ್ತು ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಸಮಾರು ಎಲ್ಲ ಉಪಬಂಧಗಳನ್ನು ತಿದ್ದುಪಡಿ ಮಾಡಲಾಗಿದೆ. ದೆಹಲಿಯ ಸಾಮೂಹಿಕ ಅತ್ಯಾಚಾರ 'ನಿರ್ಭಯಾ' ಪ್ರಕರಣದ ತರುವಾಯ ಅತ್ಯಾಚಾರ ಕಾನೂನಿಗೆ ಮತ್ತಷ್ಟು ತಿದ್ದುಪಡಿ ಮಾಡಲಾಯಿತು. ಇದೆಲ್ಲದರ ಫಲವಾಗಿ ಇಂದು ತನ್ನ ಮೇಲೆ ಅತ್ಯಾಚಾರವನ್ನು ಎಸಗಲಾಗಿದೆ ಎಂದು ಆರೋಪ ಮಾಡಿದರೆ ಅದನ್ನು ಸುಳ್ಳು ಎಂದು ರುಜುವಾತು ಪಡಿಸುವ ಹೊಣೆ ಆರೋಪಿಯ ಮೇಲಿದೆ, ತನ್ನ ಮೇಲೆ ನಡೆದ ಲೈಂಗಿಕ ಆಕ್ರಮಣಕ್ಕೆ ತನ್ನ ಒಪ್ಪಿಗೆ ಇರಲಿಲ್ಲ ಎಂಬುದಕ್ಕೆ ರುಜುವಾತು ಬೇಕಿಲ್ಲ, ತನ್ನ ಒಪ್ಪಿಗೆ ಇರಲಿಲ್ಲ ಎಂದು



ಅತ್ಯಾಚಾರಕ್ಕೆ ಒಳಗಾದ ಮಹಿಳೆ ಹೇಳಿದರೆ ಅದನ್ನು ನ್ಯಾಯಾಲಯ ಒಪ್ಪಿಕೊಳ್ಳುತ್ತದೆ, ಪಾಟೀ ಸವಾಲಿನಲ್ಲಿ ಆಕೆಯನ್ನು ಮುಜುಗರಕ್ಕೆ ಒಳಪಡಿಸುವಂಥ ಪ್ರಶ್ನೆಗಳನ್ನು ಕೇಳುವುದಕ್ಕೆ ನಿರ್ಬಂಧವಿದೆ. ಎರಡು ಬೆರಳ ಪರೀಕ್ಷೆಯನ್ನು ಅಮಾನವೀಯ ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟು ಅದನ್ನು ಕೈ ಬಿಡಬೇಕೆಂದು ನಿರ್ದೇಶನ ನೀಡಿದೆ. ಅತ್ಯಾಚಾರದ ಅಪರಾಧಿಗೆ ಅತ್ಯಂತ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ. ಈ ಎಲ್ಲ ತಿದ್ದುಪಡಿಗಳ ಹಿಂದೆಯೂ ಅತ್ಯಾಚಾರ ಸಂತ್ರಸ್ತೆಯರ ನೋವಿನ ಕಥೆಯಿದೆ, ಮಹಿಳಾ ಸಂಘಟನೆಗಳ ಅವಿರತ ಹೋರಾಟವಿದೆ.

ಹಾಗೆಯೇ ಮಹಿಳೆಯ ಮೇಲಾಗುವ ಆಸಿಡ್ ಅಟ್ಯಾಕ್, ಮಹಿಳೆಯರ ಅಶ್ಲೀಲ ಚಿತ್ರಗಳನ್ನು ನೋಡುವುದು, ಮಹಿಳೆಯರ ಮೇಲೆ ಅಪರಾಧಿಕ ಹಲ್ಲೆ, ಚುಡಾಯಿಸುವಿಕೆ ಮೊದಲಾದಂಥ ಇತರ ದೌರ್ಜನ್ಯಗಳನ್ನು ಭಾರತ ದಂಡ ಸಂಹಿತೆಯ ವ್ಯಾಪ್ತಿಗೆ ತರುವ ಮೂಲಕ ಅವುಗಳನ್ನು ಶಿಕ್ಷಾರ್ಹ ನಿರ್ದಿಷ್ಟ ಅಪರಾಧಗಳನ್ನಾಗಿ ಮಾಡಲಾಗಿದೆ.

ಏಕರೂಪ ನಾಗರಿಕ ಸಂಹಿತೆ

ಧರ್ಮದ ಹೆಸರಿನಲ್ಲಿ ಜಾರಿಯಲ್ಲಿರುವ ವೈಯಕ್ತಿಕ ಕಾನೂನುಗಳಿಂದಾಗಿ ಮಹಿಳೆ ಹೆಜ್ಜೆ ಹೆಜ್ಜೆಗೂ ತಾರತಮ್ಯಕ್ಕೆ ಒಳಗಾಗಿದ್ದಾಳೆ. ಅಲ್ಲದೆ ಅನೇಕ ಅಮಾನವೀಯ ಆಚರಣೆಗಳನ್ನು ಆಚರಿಸಲು ಬದ್ಧಳಾಗಿದ್ದಾಳೆ, ಇವು ಅವಳ ಮೂಲಭೂತ ಹಕ್ಕುಗಳನ್ನಲ್ಲದೇ ಅವಳ ಮಾನವ ಹಕ್ಕುಗಳನ್ನೂ ಉಲ್ಲಂಘಿಸುತ್ತವೆ. ಸಮಾಜದ ಪುರುಷ ಪ್ರಧಾನ ಮನೋಭಾವದಿಂದಾಗಿಯೂ ಮಹಿಳೆ ತಾರತಮ್ಯಕ್ಕೆ ಒಳಗಾಗಿದ್ದಾಳೆ ಅಮಾನವೀಯ ಆಚರಣೆಗಳನ್ನು ಆಚರಿಸಲು ಬದ್ಧಳಾಗಿದ್ದಾಳೆ. ಇವೂ ಸಹ ಅವಳ ಮೂಲಭೂತ ಹಕ್ಕುಗಳನ್ನಲ್ಲದೇ ಅವಳ ಮಾನವ ಹಕ್ಕುಗಳನ್ನೂ ಉಲ್ಲಂಘಿಸುತ್ತವೆ ಮತ್ತು ಒಂದು ಧರ್ಮದ ವೈಯಕ್ತಿಕ ಕಾನೂನುಗಳಿಗೂ ಮತ್ತೊಂದು ಧರ್ಮದ ವೈಯಕ್ತಿಕ

ಕಾನೂನುಗಳಿಗೂ ಇರುವ ವ್ಯತ್ಯಾಸದಿಂದಾಗಿ, ಬೇರೆ ಬೇರೆ ಧರ್ಮಗಳಿಗೆ ಸೇರಿದ ಮಹಿಳೆಯರು ತಮ್ಮ ತಮ್ಮ ನಡುವೆಯೇ ತಾರತಮ್ಯಕ್ಕೆ ಒಳಗಾಗಿದ್ದಾರೆ. ಉದಾಹರಣೆಗೆ ಮುಸಲ್ಮಾನರಲ್ಲಿ ಜಾರಿಯಲ್ಲಿರುವ ತಲಾಕ್ ಪದ್ಧತಿ. ಮೂರು ಬಾರಿ ತಲಾಕ್ ಎಂದು ಉಚ್ಚರಿಸಿ ವಿವಾಹ ಬಂಧನದಿಂದ ಮುಕ್ತರಾಗಿಬಿಡಲು ಮುಸ್ಲಿಮ್ ಪುರುಷರಿಗೆ ಇರುವ ಅವಕಾಶದಿಂದಾಗಿ ಇತರ ಧರ್ಮದ ಮಹಿಳೆರಿಗಿಂತ ಈ ವಿಚಾರದಲ್ಲಿ ಹೆಚ್ಚಿನ ಶೋಷಣೆಗೆ ಈ ಧರ್ಮದ ಮಹಿಳೆಯರು ಒಳಗಾಗುತ್ತಿದ್ದಾರೆ. ಈ ತಾರತಮ್ಯ ಮತ್ತು ಶೋಷಣೆಯನ್ನು ತಪ್ಪಿಸಲು ತಲಾಕ್ ಅನ್ನು ರದ್ದು ಪಡಿಸಬೇಕೆಂದು ಕೇಂದ್ರ ಸರ್ಕಾರ ಅಭಿಪ್ರಾಯಪಟ್ಟಿದೆ. ಸದ್ಯದಲ್ಲಿ ಇದು ಸರ್ವೋಚ್ಛ ನ್ಯಾಯಾಲಯದ ಮುಂದಿದ್ದು ಈ ಬಗ್ಗೆ ಬಿರುಸಿನ ಚರ್ಚೆಗಳು ನಡೆಯುತ್ತಿವೆ. ಧರ್ಮದ ಹೆಸರಿನಲ್ಲಿ ಮಹಿಳೆಯರ ಮೂಲಭೂತ ಹಕ್ಕುಗಳನ್ನು ಕಸಿಯುವುದು ಖಂಡಿತವಾಗಿಯೂ ಸಂವಿಧಾನಕ್ಕೆ ವಿರೋಧವಾದುದು. ಏಕ ರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸುವುದು ಇಂಥ ತಾರತಮ್ಯವನ್ನು ನಿವಾರಿಸಲು ಇರುವ ಏಕೈಕ ಮಾರ್ಗ. ಎಲ್ಲ ಧರ್ಮಿಯರಿಗೂ, ಎಂದರೆ ಭಾರತದ ನಾಗರಿಕರೆಲ್ಲರಿಗೂ ಅನ್ವಯಿಸುವಂಥ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರುವ ಬಗ್ಗೆ ಸಂವಿಧಾನ ಜಾರಿಗೆ ಬಂದಂದಿನಿಂದಲೂ ಚರ್ಚೆಯಾಗುತ್ತಲೇ ಇದೆ.



ಈ ಅನೇಕ ದಶಕಗಳಲ್ಲಿ ಮಹಿಳೆಯರಿಗೆ ಹಕ್ಕುಗಳನ್ನು ದೊರಕಿಸಿಕೊಡುವ ಪ್ರಯತ್ನಗಳು ಸಾಕಷ್ಟು ನಡೆದಿವೆ, ಎಂದರೆ ಕಾನೂನುಗಳಲ್ಲಿ ಅಂಥ ಹಕ್ಕುಗಳಿಗೆ ಉಪಬಂಧ ಕಲ್ಪಿಸಲಾಗಿದೆ ಎಂದಷ್ಟೇ ಅರ್ಥ ಮತ್ತು ಈ ಎಲ್ಲ ಹಕ್ಕುಗಳೂ ಸಹ ನಿರಂತರವಾದ ಹೋರಾಟದಿಂದ ಮತ್ತು ಹಕ್ಕೊತ್ತಾಯಗಳಿಂದಾಗಿ ಬಂದವುಗಳೇ! ಈ ಎಲ್ಲ ಹಕ್ಕುಗಳೂ ನಿಜವಾದ ಅರ್ಥದಲ್ಲಿ ಮಹಿಳೆಯರಿಗೆ ದೊರಕುವುದು ಅವು ಜಾರಿಗೊಂಡು ಮಹಿಳೆಯರ ಜೀವನದ ರೀತಿಯಲ್ಲಿ ಉತ್ತಮ ರೀತಿಯ ಬದಲಾವಣೆಯನ್ನು ತಂದಾಗ ಮಾತ್ರ ಇದು ಕಾನೂನಿನಲ್ಲಿ ಹಕ್ಕುಗಳಿಗೆ ಉಪಬಂಧ ಕಲ್ಪಿಸುವುದರಿಂದ ಮಾತ್ರ ಆಗುವ ಕೆಲಸವಲ್ಲ. ತಮಗಿರುವ ಹಕ್ಕುಗಳ ಅರಿವು ಮಹಿಳೆಯರಿಗೂ ಇರಬೇಕಾಗುತ್ತದೆ. ಇದಕ್ಕೆ ಅಗತ್ಯವಾದ ಕಾನೂನು ಅರಿವು ಮೂಡಿಸುವಂಥ ಕಾನೂನು ಜಾಗೃತಿ ಆಂದೋಲನವನ್ನು ನಡೆಸಬೇಕು. ತಮಗಿರುವ ಹಕ್ಕುಗಳಿಂದ ವಂಚಿತರಾದಾಗ ಅದನ್ನು ಒತ್ತಾಯವಾಗಿ, ಕಾನೂನಿನ ಕ್ರಮದ ಮೂಲಕ ಪಡೆದುಕೊಳ್ಳಬೇಕು. ಸಮಾಜದ ಕಟ್ಟಕಡೆಯ ಮಹಿಳೆಗೂ ಹಾಗೆ ಪಡೆದುಕೊಳ್ಳುವುದು ಸಾಧ್ಯವಾಗುವಂಥ ಲೋಪರಹಿತ ವ್ಯವಸ್ಥೆಯನ್ನು ರೂಪಿಸಬೇಕು. ಇವೆಲ್ಲವೂ ಸರಿಯಾದ ರೀತಿಯಲ್ಲಿ ದೊರೆಯುವುದಕ್ಕೆ ಅಗತ್ಯವಾದ ದಕ್ಷ ಮತ್ತು ನಿಷ್ಪಕ್ಷಪಾತ ತನಿಖಾ ವ್ಯವಸ್ಥೆ ಜಾರಿಯಲ್ಲಿ ಬರಬೇಕು. ಇವುಗಳಲ್ಲಿ ಯಾವೊಂದು ಹಂತದಲ್ಲಿ ಲೋಪವಾದರೂ ಕಾನೂನುಗಳಿಂದ ನ್ಯಾಯ ದೊರೆಯದೇ ಹೋಗುತ್ತದೆ.

ರಾಜಕೀಯ ಹಕ್ಕು

ಇದಕ್ಕಾಗಿ ಅವಳನ್ನು ರಾಜಕೀಯವಾಗಿಯೂ ಸಶಕ್ತಗೊಳಿಸುವ ಅಗತ್ಯವಿದೆ. ಮಹಿಳೆಯರನ್ನು ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವ ವರ್ಗವನ್ನಾಗಿ ಗುರುತಿಸಿದ ಹೊರತು ಇದು ಸಾಧ್ಯವಾಗುವುದಿಲ್ಲ. ಆದರೆ ಮಹಿಳೆಯರಿಗೆ ಸಂಬಂಧಿಸಿದಂತೆ ಈ ಸುಧಾರಣೆ ಎಂಬುದು ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಮೂಲಕ ಅವರ ಯೋಗಕ್ಷೇಮ ನೋಡಿಕೊಳ್ಳುವುದಕ್ಕೆ ಸೀಮಿತವಾಗಿತ್ತು ಎಂದರೆ ಕಲ್ಯಾಣ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸೀಮಿತವಾಗಿತ್ತು. ಮೊದಲ ಐದು ಪಂಚವಾರ್ಷಿಕ ಯೋಜನೆಗಳು ಈ ದೃಷ್ಟಿಯಿಂದಲೇ ರೂಪಿತವಾದವುಗಳು. ಅವರು ಕುಟುಂಬದ, ಸಮುದಾಯದ ಹಾಗೂ ತನ್ಮೂಲಕ ರಾಷ್ಟ್ರದ ಆರ್ಥಿಕತೆಗೆ ನೀಡುವ ಕೊಡುಗೆಯನ್ನು ಪರಿಗಣನೆಗೆ ತೆಗೆದುಕೊಳ್ಳಲೇ ಇಲ್ಲ. ರಾಷ್ಟ್ರದ ಆರ್ಥಿಕತೆಯಲ್ಲಿ ಅವರು ವರ್ತಮಾನದಲ್ಲಿ ಹಾಗೂ ಭವಿಷ್ಯದಲ್ಲಿ ವಹಿಸಬಹುದಾದ ಪಾತ್ರದ ಬಗ್ಗೆ ಚಿಂತನೆಯೂ ನಡೆದಿರಲಿಲ್ಲ. ಮಹಿಳೆಯನ್ನು ಒಬ್ಬ ವ್ಯಕ್ತಿಯಾಗಿ ಗ್ರಹಿಸದ ತಾಯಿಯಾಗಿ ಮಾತ್ರ ಗ್ರಹಿಸಲಾಗಿತ್ತು. ಇದು ಅಂದಿನ ಆರ್ಥಿಕ ಕಾರ್ಯನೀತಿಗಳು, ಯೋಜನೆಗಳು ಹಾಗೂ ರಚಿಸಲಾದ ಕಾನೂನುಗಳಲ್ಲೂ ಪ್ರತಿಬಿಂಬಿತವಾಗಿವೆ ಎಂದೇ ಹೇಳಬಹುದು. ಇದಕ್ಕೆ ಕಾರಣ ಮಹಿಳೆಯರನ್ನು ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಳ್ಳಬಹುದಾದ ವರ್ಗವನ್ನಾಗಿ ಗ್ರಹಿಸದೆ ಯೋಜನೆಗಳ ಫಲಾನುಭವಿಯಾಗಿ ಮಾತ್ರ ಗ್ರಹಿಸಿದುದು. ೧೯೭೦ ರ ಮಧ್ಯಭಾಗದ ವೇಳೆಗೆ ಈ ಪರಿಕಲ್ಪನೆ ಬದಲಾಗಿ ಸುಧಾರಣೆ ಎಂದರೆ ಅಭಿವೃದ್ಧಿ, ಅಭಿವೃದ್ಧಿ ಎಂದರೆ 'ಸುಸ್ಥಿರ ಅಭಿವೃದ್ಧಿ, ಈ ಅಭಿವೃದ್ಧಿಯಲ್ಲಿ ಮಹಿಳೆಯರು ಪಾಲ್ಗೊಳ್ಳುವುದು ಅಗತ್ಯ ಎಂಬ ಪರಿಕಲ್ಪನೆ



ಚಾಲನೆ ಪಡೆಯಿತು. ಇದರ ಪರಿಣಾಮವಾಗಿ ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೊನೆಗೂ ಮಹಿಳೆಯರನ್ನು ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವ ವರ್ಗವನ್ನಾಗಿ ಗುರುತಿಸಲಾಯಿತು.

ಸ್ವಾತಂತ್ರ್ಯಾನಂತರ ಸ್ತ್ರೀ ಪುರುಷ ಸಮಾನತೆಗೆ ಸಂವಿಧಾನದ ಮೂಲಕ ಒತ್ತು ದೊರೆಯಿತಾದರೂ ರಾಜಕೀಯದಲ್ಲಿ ಮಹಿಳಾ ಸಬಲೀಕರಣ ಪ್ರಾಮುಖ್ಯತೆಯನ್ನು ಪಡೆಯಲಿಲ್ಲ. ಸುಮಾರು ೧೯೮೦ರವರೆಗೆ ಬಹುಪಾಲು ಇದೇ ಪರಿಸ್ಥಿತಿ ಮುಂದುವರಿಯಿತು. ಸಂವಿಧಾನದ ೭೩ ನೇ ತಿದ್ದುಪಡಿಯ ಮೂಲಕ ಸ್ಥಳೀಯ ಮಟ್ಟದಲ್ಲಿ ಮಹಿಳೆಯರಿಗೆ ರಾಜಕೀಯ ಪ್ರವೇಶಕ್ಕೆ ಅವಕಾಶ ದೊರೆಯಿತು. ಮಹಿಳೆಯರ ಪರವಾದ ಕಾನೂನುಗಳು, ಸಾಮಾಜಿಕ ಒತ್ತಡ ಹಾಗೂ ಚುನಾವಣೆ ಗೆಲ್ಲುವ ಕಾರ್ಯತಂತ್ರವಾಗಿ ರಾಜಕೀಯ ಪಕ್ಷಗಳ ಮಹಿಳಾಪರ ನಿಲುವುಗಳು ಮಹಿಳೆಯರಿಗೆ ರಾಜಕೀಯ ಪ್ರವೇಶಕ್ಕೆ ಮುಕ್ತ ಅವಕಾಶ ಕಲ್ಪಿಸಿದವು. ರಾಜಕೀಯ

ಮುಖ್ಯ ವಾಹಿನಿಯಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಖಾತರಿ ಪಡಿಸುವ ಮೀಸಲಾತಿ ವಿಧೇಯಕಕ್ಕೆ ಇನ್ನೂ ಅನುಮೋದನೆ ದೊರೆತಿಲ್ಲವಾದರೂ, ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ದೊರೆತ ಮೀಸಲಾತಿ ಮಹಿಳೆಯ ಸಬಲೀಕರಣ ಪ್ರಕ್ರಿಯೆಯಲ್ಲಿ ಅತ್ಯಂತ ಪ್ರಮುಖವಾದ ಹೆಜ್ಜೆ ಎಂಬುದನ್ನು ಅಲ್ಲಗಳೆಯಲಾಗದು,

ಆದರೆ, ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಕಾರ್ಯ ನೀತಿಗಳನ್ನು ಮತ್ತು ಯೋಜನೆಗಳನ್ನು ರೂಪಿಸುವ ರಾಜಕೀಯ ನಿರ್ಧಾರ ಕೈಗೊಳ್ಳುವ ಸ್ಥಾನಗಳಲ್ಲಿ ಮಹಿಳೆಯರು ಇದ್ದ ಹೊರತು ಮಹಿಳೆಯರ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳು ದೊರೆಯುವುದು ಸಾಧ್ಯವಾಗುವುದಿಲ್ಲ. ಆದರೆ ಮಹಿಳಾ ಮೀಸಲಾತಿ ವಿಧೇಯಕಕ್ಕೆ ವ್ಯಕ್ತವಾಗುತ್ತಿರುವ ಪ್ರತಿರೋಧ ನಮ್ಮ ಜನ ಪ್ರತಿನಿಧಿಗಳ ಬದ್ಧತೆಯನ್ನೇ ಅನುಮಾನಿಸುವಂತೆ ಮಾಡುತ್ತದೆ.

ಮಹಿಳೆಗೆ ಶಿಕ್ಷಣ ದೊರೆಯಬೇಕೆಂಬುದು ಎಷ್ಟು ಮುಖ್ಯವೋ ಅವಳಿಗೆ ಕಾನೂನಿನ ಅರಿವು ಇರಬೇಕೆಂಬುದೂ ಅಷ್ಟೇ ಮುಖ್ಯ. ಒಂದು ರಾಷ್ಟ್ರದ ಕಾನೂನು ಮತ್ತು ಸರ್ಕಾರಿ ಕಾರ್ಯನೀತಿಗಳು ಮಹಿಳೆಯರ ಅಭಿವೃದ್ಧಿಯ ಮೇಲೆ ಹೇಗೆ ಪರಣಾಮ ಬೀರುತ್ತವೆಯೋ ಹಾಗೆಯೇ ಶಿಕ್ಷಿತಳಾದ ಮತ್ತು ತನ್ನ ಹಕ್ಕುಗಳ ಅರಿವುಳ್ಳ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮಹಿಳೆ ಒಂದು ರಾಷ್ಟ್ರದ ರಾಜಕಾರಣ, ಕಾನೂನು ಮತ್ತು ಸರ್ಕಾರದ ಕಾರ್ಯನೀತಿಗಳ ಮೇಲೆ ಪ್ರಭಾವ ಬೀರುತ್ತಾಳೆ.

## ಮಾಧ್ಯಮಗಳು : ಸಂಕಷ್ಟ ಮತ್ತು ಜವಾಬ್ದಾರಿ

- ಆರ್.ಪೂರ್ಣಿಮಾ

ಜನಮಾನಸವನ್ನು ಸಮಕಾಲೀನ ಬೆಳವಣಿಗೆಗಳ ಜೊತೆ ಬೆಸೆಯುವ ಮಾಧ್ಯಮಗಳು ಎಂದಾದರೂ ಸಂಕಷ್ಟಗಳಿಂದ ಹೊರತಾಗಿವೆಯೇ ಎಂದು ಕೇಳಿದರೆ ಎಂದಿಗೂ ಇಲ್ಲ ಎಂದು ಹೇಳಬಹುದು; ಹಾಗೆಯೇ ಮಾಧ್ಯಮಗಳು ಜವಾಬ್ದಾರಿಯಿಂದ ದೂರವಾಗಿಯೇ ಎಂದು ಕೇಳಿದರೆ ಎಂದಿಗೂ ಕೂಡದು ಎಂದು ಹೇಳಬೇಕು. ಮಾಧ್ಯಮಗಳು ಆಳುವವರನ್ನು ಪ್ರಶ್ನಿಸುವುದರಿಂದ ಸಂಕಷ್ಟಗಳು ಇದ್ದೇ ಇರುತ್ತವೆ; ಮಾಧ್ಯಮಗಳು ಜನರಿಗೆ ಉತ್ತರದಾಯಿ ಆಗಿರುವುದರಿಂದ ಜವಾಬ್ದಾರಿ ಇದ್ದೇ ಇರಬೇಕಾಗುತ್ತದೆ. ಸಂಕಷ್ಟ ಮತ್ತು ಜವಾಬ್ದಾರಿ ಇಲ್ಲದ ಮಾಧ್ಯಮಗಳನ್ನು ಎಲ್ಲಾದರೂ ಕಂಡರೆ ಎಲ್ಲೋ ಏನೋ ಸರಿಯಾಗಿಲ್ಲ ಎಂದೇ ತಿಳಿಯಬೇಕು.

ಆ ಯಾವ ಭಾಗದಲ್ಲಾದರೂ ಆಗಲಿ ಮಾಧ್ಯಮಗಳು ಹುಟ್ಟಿರುವುದು ಪ್ರಜಾಪ್ರಭುತ್ವ ಸ್ವತಂತ್ರ ಚಿಂತನೆ, ದಬ್ಬಾಳಿಕೆಗೆ ವಿರೋಧ, ಆಳುವವರನ್ನು ಪ್ರತಿಭಟಿಸುವ ಮನೋಭಾವ ಇವುಗಳ ಜೊತೆಗೆ ಪ್ರಭುತ್ವವನ್ನು ಪ್ರಶ್ನಿಸುವುದೇ ಪತ್ರಿಕೆಯ ಹುಟ್ಟಿಗೆ ಕಾರಣ ಎಂದು ಹೇಳಬಹುದು. ಭಾರತದಲ್ಲಿ ರಾಷ್ಟ್ರೀಯ ಚಳವಳಿಯ ಭಾಗವಾಗಿ ಪತ್ರಿಕೆಗಳು ಹುಟ್ಟಿ ಬೆಳೆದವು. ಪತ್ರಿಕೆಗಳು ಹೋರಾಟದ ಅಸ್ತ್ರಗಳಾಗಿದ್ದರಿಂದಲೇ ಗಾಂಧೀಜಿಯವರಿಂದ ಮೊದಲಗೊಂಡು ರಾಷ್ಟ್ರೀಯ ಹೋರಾಟದ ಬಹುಪಾಲು ನೇತಾರರು ಪತ್ರಕರ್ತರಾಗಿದ್ದರು.

ಗಾಂಧೀಜಿಯವರಿಗೂ ಪತ್ರಿಕೆಗಳೇ ಸತ್ಯಾಗ್ರಹದ ಪ್ರಬಲ ಅಸ್ತ್ರಗಳಾಗಿದ್ದವು. ಹಲವಾರು ಪತ್ರಿಕೆಗಳನ್ನು ಆರಂಭಿಸಿ, ಸತತವಾಗಿ ಬರೆದ ಅವರು ನಮ್ಮ ದೇಶದ ಬಹು ದೊಡ್ಡ ಪತ್ರಿಕಾ ಹೋರಾಟಗಾರ. ಆ ಕಾಲದಲ್ಲೂ ಅವರು ಪತ್ರಿಕೆಗಳಲ್ಲಿ ಬರೆದದ್ದಲ್ಲಾ ದೇಶದ ಮೂಲೆಮೂಲೆಯನ್ನು ತಲುಪುತ್ತಿತ್ತು. ಗಾಂಧೀಜಿಯವರು ದಕ್ಷಿಣ ಆಫ್ರಿಕದಲ್ಲಿ ಮೊದಲು ಆರಂಭಿಸಿದ ಹೋರಾಟಕ್ಕೆ 'ಇಂಡಿಯನ್ ಒಪೀನಿಯನ್' ಪತ್ರಿಕೆ ಮುಖವಾಣಿಯಾಗಿತ್ತು. 'ಇಂಡಿಯನ್ ಒಪೀನಿಯನ್ ಪತ್ರಿಕೆ ಇಲ್ಲದೆ ಸತ್ಯಾಗ್ರಹ ಅನ್ನುವುದೇ ಹುಟ್ಟುತ್ತಿರಲಿಲ್ಲ' ಎಂದು ಅವರೇ ಒಂದೆಡೆ ಹೇಳಿಕೊಂಡಿದ್ದಾರೆ. ಭಾರತಕ್ಕೆ ಬಂದ ಮೇಲೆ ಅವರು ಯಂಗ್ ಇಂಡಿಯ, ನವಜೀವನ, ಹರಿಜನ ಪತ್ರಿಕೆಗಳನ್ನು ನಂತರ ಹರಿಜನ ಬಂಧು, ಹರಿಜನ ಸೇವ ಪತ್ರಿಕೆಗಳನ್ನು ನಡೆಸಿದರು. ಪತ್ರಕರ್ತ-ಸಂಪಾದಕರಾಗಿ ಸುಮಾರು ೪೦ ವರ್ಷಗಳ ಕಾಲ ಸತತವಾಗಿ ಬರದ ಅವರು 'ಪತ್ರಿಕೆಗಳಲ್ಲಿ ಪ್ರತಿದಿನ ನನ್ನ ಹೃದಯ ಆತ್ಮಗಳನ್ನು ತೆರೆದುಕೊಂಡಿದ್ದೇನೆ' ಎಂದು ಹೇಳಿದ್ದಾರೆ. ಬಾಲಗಂಗಾಧರ ತಿಲಕರ 'ಕೇಸರಿ' ಪತ್ರಿಕೆಯೂ ದೇಶದ ಅನೇಕ ಭಾಷೆಗಳಿಗೆ ಅನುವಾದಗೊಳ್ಳುತ್ತಿತ್ತು.

ರಾಷ್ಟ್ರೀಯ ಹೋರಾಟ ಕಾಲದಲ್ಲಿ ಭಾರತದ ಪತ್ರಿಕೆಗಳೆಲ್ಲ ಸಾಮ್ರಾಜ್ಯಶಾಹಿ ಆಡಳಿತವನ್ನು ಉಗ್ರವಾಗಿ ವಿರೋಧಿಸಿದ್ದರಿಂದ ಬ್ರಿಟೀಷರ ಕೆಂಗಣ್ಣಿಗೆ ಗುರಿಯಾಗಿದ್ದವು.

ಪತ್ರಿಕೆಗಳಿಗೆ ನಿರ್ಬಂಧ ಹೇರುವುದು, ಸಂಪಾದಕರನ್ನು ಗಡಿಪಾರು ಮಾಡುವುದು, ಅವರನ್ನು ಬಂಧಿಸಿ ಸೆರೆಮನೆಗೆ ಅಟ್ಟುವುದು, ಮುದ್ರಣಾಲಯಗಳನ್ನು ಮುಚ್ಚಿ ಮುಟ್ಟುಗೋಲು ಹಾಕಿಕೊಳ್ಳುವುದು ಎಲ್ಲವೂ ದೇಶದಾದ್ಯಂತ ನಡೆದವು. ಕನ್ನಡ ಪತ್ರಿಕಾರಂಗದಲ್ಲೂ ಇದಕ್ಕೆ ಹಲವಾರು ಉದಾಹರಣೆಗಳಿವೆ. ಪ್ರಭುತ್ವದ ದಬ್ಬಾಳಿಕೆಯನ್ನು ಎದುರಿಸುವುದು ಪತ್ರಿಕೆಗಳ ಜವಾಬ್ದಾರಿ ಮತ್ತು ಆ ಕಾರಣ ಸಂಕಷ್ಟ ತಪ್ಪಿದ್ದಲ್ಲ. ಆದರೆ ಭಾರತೀಯ ಪತ್ರಿಕಾರಂಗ ಅದಕ್ಕೆ ಹೆದರಲಿಲ್ಲ ಎನ್ನುವುದೇ ಬಹಳ ಮುಖ್ಯ. ಪತ್ರಿಕೆಗಳನ್ನು ಹತ್ತಿಕ್ಕಲು ಬ್ರಿಟೀಷರು ತಂದ ಕಾಯಿದೆಗಳು ಈಗಲೂ ಚಾಲ್ತಿಯಲ್ಲಿವೆ ಎನ್ನುವುದೇ ದೊಡ್ಡ ವಿಪರ್ಯಾಸ

ಭಾರತದಲ್ಲಿ ಪತ್ರಿಕೆಗಳು ಹೋರಾಟದ ಅಸ್ತ್ರಗಳಾಗಿ, ದೇಶಭಕ್ತರ ವಲಯದ ಪ್ರಮುಖ ಚಟುವಟಿಕೆಯಾಗಿತ್ತು. ಹಾಗಿದ್ದರೂ ದೆಹಲಿ, ಕೋಲ್ಕತ್ತ, ಮುಂಬೈ, ಮದ್ರಾಸ್ ಮುಂತಾದ ಸ್ಥಳಗಳಲ್ಲಿ ಕೆಲವು ಶ್ರೀಮಂತರು ಕಂಪೆನಿಗಳ ಮೂಲಕ ಪತ್ರಿಕೆಗಳನ್ನು ಪ್ರಕಟಿಸಿ ಅದನ್ನೊಂದು ಉದ್ಯಮವಾಗಿ ಬೆಳೆಸುತ್ತಿದ್ದರು. ಮುಖ್ಯವಾಗಿ ಇಂಗ್ಲೀಷ್ ಪತ್ರಿಕೆಗಳಾದ ಇವುಗಳ ರಾಷ್ಟ್ರಪ್ರೇಮವನ್ನೂ ಪ್ರಶ್ನಿಸುವಂತಿರಲಿಲ್ಲ. ಸ್ವಾತಂತ್ರ್ಯ ಬಂದ ನಂತರ ದೇಶದ ಪತ್ರಿಕಾರಂಗದ ಸ್ವರೂಪ ಮತ್ತು ಆಶಯ ಗಮನಾರ್ಹವಾಗಿ ಬದಲಾದವು. ಹೋರಾಟದ ಅಸ್ತ್ರಗಳಾಗಿದ್ದ ಪತ್ರಿಕೆಗಳು ಉದ್ಯಮದ ಸ್ವರೂಪ ಪಡೆದು, ಪತ್ರಿಕೋದ್ಯಮ ವಿಸ್ತಾರವಾಗಿ ಬೆಳೆಯಿತು. ಬಂಡವಾಳ ಹೂಡಿದ ಉದ್ಯಮ, ಸಹಜವಾಗಿ ಪತ್ರಿಕೆಯನ್ನು ಒಂದು ಉತ್ಪನ್ನವಾಗಿ ಪರಿಗಣಿಸಿತು; ಮಾರುಕಟ್ಟೆಯ ವಿಸ್ತರಣೆ, ಜಾಹೀರಾತು ಮೂಲಕ ಲಾಭದ ಗಳಿಕೆ, ಪತ್ರಿಕೆಗಳ ಹೆಚ್ಚು ಪ್ರಸರಣದ ಮೂಲಕ ಶಕ್ತಿ ಸಾಮರ್ಥ್ಯ ಪ್ರದರ್ಶನ ಇವುಗಳನ್ನು ಬಯಸಿತು. ಆದರೆ ಸ್ವಾತಂತ್ರ್ಯ ಬಂದ ನಂತರ ದೇಶ ಕಟ್ಟುವ ಕೆಲಸ ಹೇಗಿದೆ ಎಂಬುದನ್ನು ಗಮನಿಸಲು ಮರೆಯಲಿಲ್ಲ. ದಾಸ್ಯವನ್ನು ಕಿತ್ತೊಗೆದು ಸ್ವಾತಂತ್ರ್ಯ ಗಳಿಸಿದ ಮೇಲೆ ಜನರೇ ಆಡಳಿತ ನಡೆಸುವ ಪ್ರಯೋಗದ ಕಷ್ಟನಷ್ಟಗಳು, ಸರ್ಕಾರದ ಗೆಲುವು ಸೋಲುಗಳು, ರಾಜಕಾರಣಿಗಳ ಭ್ರಷ್ಟಾಚಾರ, ಬಡಜನರ ಉದ್ಧಾರದ ವಿಳಂಬ, ಭ್ರಮನಿರಸನಗಳು ಎಲ್ಲವನ್ನೂ ಪತ್ರಿಕೆಗಳು ಗಮನಿಸಿ ವಿಶ್ಲೇಷಣೆ ನಡೆಸಿ ಜವಾಬ್ದಾರಿ ನಿರ್ವಹಿಸಿದವು. ಇದು ಆಳುವ ಸರ್ಕಾರಗಳಿಗೆ ಇಷ್ಟವಾಗಲಿಲ್ಲ ಎನ್ನುವುದನ್ನು ಹೇಳಬೇಕಿಲ್ಲ

ಸ್ವಾತಂತ್ರ್ಯ ಬಂದು ಕಾಲು ಶತಮಾನ ಕಳೆದ ಮೇಲೆ ಭಾರತೀಯ ಪತ್ರಿಕೋದ್ಯಮಕ್ಕೆ ದೊಡ್ಡ ಆಂತರಿಕ ಅಗ್ನಿಪರೀಕ್ಷೆ ಎದುರಾಯಿತು. ಸರ್ವಾಧಿಕಾರಕ್ಕೆ ಮೊದಲ ಶತ್ರು ಪತ್ರಿಕಾ ಸ್ವಾತಂತ್ರ್ಯ. ಅದನ್ನು ಹರಣ ಮಾಡುವುದೇ ಅದರ ಮೊದಲ ಕೆಲಸ ಎನ್ನುವುದು ಮತ್ತೊಮ್ಮೆ ಸಾಬೀತಾಯಿತು. ಪ್ರಧಾನಮಂತ್ರಿ ಇಂದಿರಾಗಾಂಧಿ ಅವರು ೧೯೭೫ರಲ್ಲಿ ದೇಶದ ತುರ್ತು ಪರಿಸ್ಥಿತಿ ಹೇರಿ ಪತ್ರಿಕೆಗಳ ಕೈಬಾಯಿ ಕಟ್ಟಲು ಯತ್ನಿಸಿದರು. ಸುದ್ದಿಗಳನ್ನು ಪ್ರಕಟಿಸುವ ಮೊದಲು ಆಡಳಿತದ ಒಪ್ಪಿಗೆ ಪಡೆಯುವ ಸೆನ್ಸಾರ್ ಷಿಪ್ ಜಾರಿಗೆ ಬಂದು ಪತ್ರಿಕೆಗಳನ್ನು ಅತೀವ ಸಂಕಷ್ಟಕ್ಕೆ ಗುರಿ ಪಡಿಸಿತು. ವಿರೋಧ ಪಕ್ಷಗಳ ನಾಯಕರು, ಜನಪರ ಹೋರಾಟಗಾರರ ಹಾಗೆ ಹಲವಾರು ಪರ್ತಕರ್ತರೂ ಬಂಧನಕ್ಕೊಳಗಾದರು. ಸರ್ಕಾರದ ಈ ಮಿತಿಯಿಲ್ಲದ ದಬ್ಬಾಳಿಕೆಯನ್ನು ಎದುರಿಸುವುದು,

ಉದ್ಯಮವನ್ನು ಉಳಿಸಿಕೊಳ್ಳಲು ಮಾಲೀಕರು ಪಡುತ್ತಿದ್ದ ಬವಣೆಗೆ ಜೊತೆಯಾಗುವುದು ಮುಂತಾದ ಸಂಕಷ್ಟಗಳನ್ನು ತುರ್ತುಪರಿಸ್ಥಿತಿಯ ಅವಧಿ ಪತ್ರಕರ್ತರಿಗೆ ತಂದಿಟ್ಟಿತು. ಆಗ ಗಲಿಬಿಲಿಗೊಂಡ, ಕಕ್ಕಾಬಿಕ್ಕಿಯಾದ ಪತ್ರಕರ್ತರು ಜೀವ ಮತ್ತು ಉದ್ಯೋಗ ಉಳಿಸಿಕೊಳ್ಳಲು ಕಸರತ್ತು



ಮಾಡಬೇಕಾಯಿತು; ನಂತರ ಸರ್ಕಾರ ಒಂದು ಚೂರು ನಡು ಬಗ್ಗಿಸಲು ಹೇಳಿದರೆ ನೀವು ಪೂರ್ತಿ ತೆವಳಿಬಿಟ್ಟಿರಿ' ಎಂಬ ಮೂದಲಿಕೆಯನ್ನೂ ಕೇಳಬೇಕಾಯಿತು! ಅಷ್ಟಾಗಿಯೂ 'ಇಂಡಿಯನ್ ಎಕ್ಸ್‌ಪ್ರೆಸ್ ಬಳಗದ ಮಾಲೀಕ ರಾಮನಾಥ ಗೋಯೆಂಕ ಅವರಂಥ ಕೆಲವರು ಸರ್ವಾಧಿಕಾರವನ್ನು ಎದುರಿಸಲು ತಮ್ಮ ಪತ್ರಿಕೆಗಳನ್ನು ಅಸ್ತ್ರಗಳನ್ನಾಗಿ ಬಳಸಿದರೆನ್ನುವುದು ಬಹಳ ಮುಖ್ಯ.

ತುರ್ತು ಪರಿಸ್ಥಿತಿಯ ನಂತರ ದೇಶದಲ್ಲಿ ಏನೇನೋ ಬದಲಾದ ಹಾಗೆ ಪತ್ರಿಕೋದ್ಯಮವೂ ಬದಲಾಯಿತು. ಮುಂದಿನ ಹದಿನೈದು ವರ್ಷಗಳಲ್ಲಿ ದೇಶದ ಮೂಲೆಮೂಲೆಗಳಲ್ಲಿ ಬೆಳೆದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಳುವಳಿಗಳಿಗೆ ಪತ್ರಿಕೋದ್ಯಮ ಸಾಕಷ್ಟು ಗಮನ, ಬೆಂಬಲ ಮತ್ತು ಪ್ರಚಾರ ಕೊಟ್ಟವು. ಆದರೆ ಪತ್ರಿಕಾ ಸಂಸ್ಥೆಗಳ ಆಡಳಿತವರ್ಗಗಳು ಸಂಕಷ್ಟಗಳನ್ನು ಮೈಮೇಲೆ ಎಳೆದುಕೊಳ್ಳಲು ಇಚ್ಛಿಸದೆ, ಎಲ್ಲ ಸರ್ಕಾರಗಳೊಂದಿಗೆ ಹೊಂದಿಕೊಳ್ಳುವ, ಎಲ್ಲ ರಾಜಕೀಯ ಪಕ್ಷಗಳನ್ನು ಬೆಂಬಲಿಸುವ ನಿರಾಕ್ರಮಣ ನಿಲುವನ್ನು ತಳೆದಾಗ, ಅಲ್ಲಿ ನೌಕರರಾದ ಪತ್ರಕರ್ತರು ಏನು ಮಾಡಬೇಕು? ಹೊಂದಿಕೊಂಡು ಹೋಗುವುದೇ ಅವರಿಗೆದುರಾದ ದೊಡ್ಡ ಸಂಕಷ್ಟ ಎನ್ನಬಹುದು.

ನಮ್ಮ ದೇಶದ ತೊಂಬತ್ತರ ದಶಕದಲ್ಲಿ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣವನ್ನು ತ್ರಿಕರಣಪೂರ್ವಕವಾಗಿ ಒಪ್ಪಿಕೊಂಡ ಮೇಲೆ, ಪತ್ರಿಕೋದ್ಯಮದ ರೂಪುರೇಷೆ ಇನ್ನಷ್ಟು ಬದಲಾಗುವುದು ಅನಿವಾರ್ಯವಾಯಿತು. ಜಾಗತೀಕರಣ ಮತ್ತು ಅದರೊಂದಿಗೆ ಬಂದ ಮಾಹಿತಿ ತಂತ್ರಜ್ಞಾನದ ಕ್ರಾಂತಿ ಎರಡೂ ಪತ್ರಿಕೋದ್ಯಮದ ಚಹರೆಯನ್ನೇ ಬದಲಾಯಿಸಿವೆ. ಹೊಸ ಸಹಸ್ರಮಾನದಲ್ಲಿ ದೃಶ್ಯ ಮಾಧ್ಯಮದ ಅಗಾಧ ಬೆಳವಣಿಗೆ ಅದಕ್ಕೆ ತಕ್ಕಂತೆ ತನ್ನದೇ ನಿಯಮಗಳನ್ನು ರೂಪಿಸಿಕೊಂಡು ಮುದ್ರಣ ಮಾಧ್ಯಮಕ್ಕೆ ಹೊಸ ಸವಾಲುಗಳನ್ನು ಎಸೆದಿದೆ. ಅವುಗಳನ್ನು ಎದುರಿಸಿ ಅಸ್ತಿತ್ವ ಮತ್ತು ಅಸ್ಮಿತೆ ಉಳಿಸಿಕೊಳ್ಳುವ ಸಂಕಷ್ಟ ಉದ್ದಕ್ಕೂ ಇದ್ದೇ ಇರುತ್ತದೆ. ಫೇಸ್‌ಬುಕ್, ಟ್ವಿಟರ್, ವಾಟ್ಸಾಪ್‌ಗಳೂ ಸೇರಿ ನವಮಾಧ್ಯಮ ಕ್ಷಣಕ್ಷಣಕ್ಕೆ ಹಾಕುವ ಸವಾಲುಗಳು ಮತ್ತು ಅವುಗಳಲ್ಲಿ ಹಿಂದೆಂದೂ ಕಾಣದಂಥ ಸಮುದಾಯದ ಪಾಲ್ಗೊಳ್ಳುವಿಕೆ ಇವುಗಳನ್ನು ಗಮನಿಸದೆ ಇಂದು ಮುದ್ರಣ ಮಾಧ್ಯಮ ಮತ್ತು ದೃಶ್ಯ ಮಾಧ್ಯಮ ಕೆಲಸ ಮಾಡಲು ಸಾಧ್ಯವಿಲ್ಲ. ಪತ್ರಿಕಾವಲಯಗಳು ಮತ್ತು ಟಿವಿ

ವಾಹಿನಿಗಳ ಕಾರ್ಯಾಲಯಗಳೆಲ್ಲ ಇಂದು ತಂತ್ರಜ್ಞಾನ ಕಾರ್ಖಾನೆಗಳಂತೆ ಕಾಣುವುದರ ಮಧ್ಯೆ ಮುಖ್ಯವಾದುದೇನೋ ಕಳೆದು ಹೋಗಿರುವಂತೆ ಭಾಸವಾಗುತ್ತಿದೆ.

ನಲವತ್ತು ವರ್ಷಗಳ ಹಿಂದೆ ಪ್ರತಿಯೊಂದು ಭಾಷೆಯಲ್ಲೂ ಬೆಳೆದ ಸಾಂಸ್ಕೃತಿಕ ಚಳುವಳಿಗಳನ್ನು ಪೋಷಿಸುವ ಜವಾಬ್ದಾರಿಯನ್ನು ಪತ್ರಿಕೆಗಳು ನಿರ್ವಹಿಸಿದ್ದವು. ಸಾಹಿತ್ಯ, ರಂಗಭೂಮಿ, ಚಿತ್ರಕಲೆ, ಸುಗಮಸಂಗೀತ, ಚಲನಚಿತ್ರಗಳಲ್ಲಿ ಹುಟ್ಟಿದ ಹೊಸ ಆಶಯಗಳ ಚಳುವಳಿಗಳಿಗೆ ಪತ್ರಿಕೆಗಳೇ ವೇದಿಕೆಯಾಗಿದ್ದವು. ಈ ಸಾಂಸ್ಕೃತಿಕ ಜವಾಬ್ದಾರಿಯನ್ನು ಇಂದಿನ ಮಾಧ್ಯಮಗಳು ಮರೆತೇಬಿಟ್ಟಿವೆ ಎಂದು ಅನೇಕರು ಕೊರಗುವುದರಲ್ಲಿ ನಿಜವಿದೆ. ಕೆಲವು ಪತ್ರಿಕೆಗಳ ಅಪವಾದ ಬಿಟ್ಟರೆ ಇಂದು ಬಹುತೇಕ ಪತ್ರಿಕೆಗಳಿಗೆ ಮತ್ತು ದೃಶ್ಯಮಾಧ್ಯಮಕ್ಕೆ



'ಸಂಸ್ಕೃತಿ' ಎಂದರೆ ಕಮರ್ಷಿಯಲ್ ಸಿನಿಮಾ ಮಾತ್ರ ಏಕೆಂದರೆ, ಇದೇ ಅವುಗಳ ಆದಾಯದ ಪ್ರಮುಖ ಮೂಲ ಎನ್ನುವುದೂ ಎಲ್ಲರಿಗೆ ಗೊತ್ತು. ಜೀವನಶೈಲಿ ಮತ್ತು ಮನರಂಜನೆಗೆ ಮಾಧ್ಯಮಗಳಲ್ಲಿ ಸಿಗುವ ಪ್ರಾಶಸ್ತ್ಯ ನೋಡಿದರೆ, ನಮ್ಮ ಸಮಾಜದಲ್ಲಿ ಯಾವ ಸಮಸ್ಯೆಯೂ ಇಲ್ಲವೇನೋ ಎಂಬ ಭ್ರಮೆ ಹುಟ್ಟುತ್ತದೆ. ಆದರೆ ರೈತರ ಆತ್ಮಹತ್ಯೆಗಳು ಮಾಧ್ಯಮಗಳ ಆತ್ಮಸಾಕ್ಷಿಯನ್ನು ಅಣಕ ಮಾಡದೇ ಇರುವುದಿಲ್ಲ.

ಜಗತ್ತಿನಾದ್ಯಂತ ಆಗುತ್ತಿರುವಂತೆ, ನಮ್ಮ ದೇಶದಲ್ಲೂ ಪ್ರಮುಖ ರಾಜಕಾರಣಿಗಳು, ಉದ್ಯಮಪತಿಗಳು ಮಾಧ್ಯಮಗಳ ಮಾಲೀಕರಾಗುವುದು ಹೆಚ್ಚುತ್ತಿದೆ. ಇದು ಯಾವುದಕ್ಕೆ ಬಂಡವಾಳ ಹೂಡಿಕೆ ಎನ್ನುವುದನ್ನು ಊಹಿಸಬಹುದು. ಯಾವ ರಾಜಕೀಯ ಪಕ್ಷ, ಯಾವ ರಾಜಕೀಯ ಪಕ್ಷದ ಸರ್ಕಾರ ಎಂಬುದನ್ನು ಅವಲಂಬಿಸಿಯೇ ಮಾಧ್ಯಮ ಸಂಸ್ಥೆಗಳ, ಮುಖ್ಯವಾಗಿ ದೃಶ್ಯ ಮಾಧ್ಯಮದ ಕಾರ್ಯನೀತಿ ಮತ್ತು ಕಾರ್ಯಶೈಲಿ ಎರಡೂ ನಿರ್ಧಾರವಾಗುತ್ತಿವೆ. ಇವುಗಳ ನೆರಳಿನಲ್ಲಿ ಪತ್ರಕರ್ತರು ತಮ್ಮ ವೈಯಕ್ತಿಕ ವರ್ಚಸ್ಸು ಮತ್ತು ಹಣಕಾಸು ಎರಡನ್ನೂ ಹೆಚ್ಚಿಸಿಕೊಳ್ಳಲು ಯತ್ನಿಸುವುದೂ ಹೆಚ್ಚುತ್ತಿದೆ. ಮಾಲೀಕರು ಬಿಡಿ, ಪತ್ರಕರ್ತರೂ ಪಕ್ಷಗಳ ವಕ್ತಾರರಾಗಿ, ಅದು ಫಲಗಳನ್ನು ಪಡೆಯುವುದು ಎಲ್ಲರಿಗೂ - ತಿಳಿದಿದೆ. ಮಾಧ್ಯಮ ರಂಗ ಸರ್ಕಾರಕ್ಕೆ ಶಾಶ್ವತ ವಿರೋಧ ಪಕ್ಷದಂತೆ ಕೆಲಸ ಮಾಡಬೇಕಿತ್ತು. ಬದಲಿಗೆ ದಲ್ಲಾಳಿ ಕೆಲಸ ಮಾಡುತ್ತಿರುವುದು, ಚುನಾವಣೆಗೆ ಟಿಕೆಟ್, ನಾಮಕರಣಗಳಿಂದ ಹಿಡಿದು ಭೂ ಅವ್ಯವಹಾರಗಳ ತನಕ ಎಲ್ಲ ಬಗೆಯ ರಾಜಕೀಯ ಭ್ರಷ್ಟಾಚಾರಗಳಲ್ಲಿ ಪತ್ರಕರ್ತರೂ ಪಾಲುದಾರರಾಗುವುದು ಯಾರಿಗೆ ಗೊತ್ತಿಲ್ಲ? ಇತ್ತೀಚೆಗೆ ಸಚಿವರೊಬ್ಬರು ಪತ್ರಕರ್ತರಿಗೆ "ಪ್ರಾಸ್ಟಿಟ್ಯೂಟ್‌ಗಳು ಎಂದು ಬಿರುದು ಕೊಟ್ಟರಲ್ಲ? 'ನನ್ನ ಎಂಜಲು ತಿಂದು ಈಗ ನನ್ನ ವಿರುದ್ಧವೇ ಬರೆಯುತ್ತೀರಾ' ಎಂದು ಬ್ಯಾಂಕ್‌ಗಳಿಗೆ ನಾಮ ತೀಡಿದ ಉದ್ಯಮಿಯೊಬ್ಬರು ಇತ್ತೀಚೆಗೆ ಹೂಂಕರಿಸಿದರಲ್ಲ? ಈ ಕಳಂಕವನ್ನು ತೊಳೆದುಕೊಳ್ಳುವ ಸವಾಲು

ಎದುರಿಸುವುದೇ ಇಂದಿನ ದೊಡ್ಡ ಸಂಕಷ್ಟ, ಸದ್ಯ ದೇಶದ ಎಲ್ಲ ಪತ್ರಕರ್ತರೂ ಹೀಗಿಲ್ಲ ಎನ್ನುವ ಸಮಾಧಾನವೇ ಮಾಧ್ಯಮದ ಮರ್ಯಾದೆ ಉಳಿಸಬೇಕು.

ಮಾಧ್ಯಮ ರಂಗ ತನ್ನ ಕಳಂಕದ ಸಂಕಷ್ಟ ಕಳೆದುಕೊಳ್ಳುವ ಬಗೆಯನ್ನು, ಜವಾಬ್ದಾರಿಯನ್ನು ನೆನಪಿಸಿಕೊಳ್ಳುವ ರೀತಿಯನ್ನು ಬೇರೆ ಯಾರೋ ಬರೆದುಕೊಡಲು ಬರುವುದಿಲ್ಲ. ಪತ್ರಕರ್ತರು ರೂಪಿಸಿಕೊಂಡಿರುವ ಅನೀತಿಸಂಹಿತೆಯನ್ನು ಅವರೇ ಅಳಿಸಿಹಾಕಬೇಕು. ಸರ್ಕಾರಗಳ ಆಮಿಷಗಳು, ಸಂಸ್ಥೆಯ ಮಾಲೀಕವರ್ಗದ ಒತ್ತಡಗಳ ನಡುವೆ ವೃತ್ತಿಯ ಸಾಮಾಜಿಕ ಜವಾಬ್ದಾರಿಯನ್ನು ಕಾಪಾಡಿಕೊಳ್ಳುವುದು ಪತ್ರಕರ್ತರ ಎದುರಿಗಿರುವ ದೊಡ್ಡ ಸವಾಲು. ಆದರೆ ಅದೇ ಅವರ ಹೃದಯ ಮತ್ತು ತಲೆಯಲ್ಲಿ ಇರಬೇಕಾದ 'ಸಾಫ್ಟ್‌ವೇರ್' ಅಲ್ಲವೇ? ಐದು ವರ್ಷದ ಹೆಣ್ಣುಮಕ್ಕಳಿಗೆ ತಾಳಿ ಕಟ್ಟುವ ಬಗ್ಗೆ, ದಲಿತ ಹೆಣ್ಣುಮಕ್ಕಳನ್ನು ಮರಕ್ಕೆ ನೇಣು ಹಾಕುವ ಬಗ್ಗೆ ಬರೆಯದೇ ಸುಮ್ಮನಿರುವುದು ಸರಿಯೇ? ಅಪ್ರಿಯವಾದ ಸತ್ಯಗಳನ್ನೂ ಹೇಳುವುದು ಪತ್ರಕರ್ತರ ಕರ್ತವ್ಯವಲ್ಲವೇ? ಸುದ್ದಿ ಎನ್ನುವ ದೊಡ್ಡ ಸರಕು ಮಾರುಕಟ್ಟೆಯಲ್ಲಿ ಪ್ರಾಮಾಣಿಕತೆಯನ್ನು ಬಿಕರಿ ಮಾಡದೇ ರಕ್ಷಿಸಿಕೊಳ್ಳುವುದು ಹೇಗೆ?

ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಸಬಲೀಕರಣ :

ಸಮಸ್ಯೆಗಳು, ಸಾಧ್ಯತೆಗಳು

- ಸಾವಿತ್ರಿ ಮುಖರ್ಮ್ದಾರ

ಒಟ್ಟು ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ಇಂದು ಸಬಲೀಕರಣ ಗೊಳ್ಳುತ್ತಿದ್ದಾರೆ. ಸಾಮಾಜಿಕವಾಗಿ ೨ನೇ ದರ್ಜೆಯ ಪ್ರಜೆಯಾಗಿ ಬಾಳುತ್ತಿರುವ ಕೌಟುಂಬಿಕ ಬಹುಮುಖ ಜವಾಬ್ದಾರಿಯ ಹಕ್ಕುರಹಿತ ಸದಸ್ಯೆಯಾದ, ರಾಜಕೀಯ ಸಮಾನ ಅಧಿಕಾರ ಪಡೆಯದ, ಆರ್ಥಿಕತೆಯ ಮೂಲವಾದರೂ ಆದಾಯದ ಮೂಲವೆನಿಸಿಕೊಳ್ಳದೇ ಬದುಕುತ್ತಿರುವ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಸಬಲೀಕರಣದತ್ತ ಹೆಜ್ಜೆ ಹಾಕುತ್ತಿರುವುದು ತೀರಾ ಇತ್ತೀಚೆಗೆ

ಶತಶತಮಾನಗಳಿಂದ ಶೋಷಣೆಗೊಳಗಾದ ಅಸ್ಪೃಶ್ಯಳಾದ ಮತ್ತು ಅಸ್ತಿತ್ವವನ್ನೇ ಕಳೆದುಕೊಂಡಿರುವ ಮಹಿಳೆ ಸಾವಕಾಶವಾಗಿ ಚೇತರಿಸಿಕೊಳ್ಳುತ್ತಿದಾಳೆ. ಸಮಾಜದ ಮುಖ್ಯವಾಹಿನಿಗೆ ಬರಲು ಹವಣಿಸುತ್ತಿದ್ದಾಳೆ. ಇಂತಹ ಸಂಕ್ರಮಣ ಕಾಲದಲ್ಲಿ ಆಕೆ ಎದುರಿಸುತ್ತಿರುವ ಸಮಸ್ಯೆಗಳು, ಸವಾಲುಗಳು ನೂರಾರು. ಆದರೆ ಸಮಾನತೆಯ ಹಿಮಾಲಯವನ್ನು ಏರುವ ಆತ್ಮವಿಶ್ವಾಸಗಳಿಸಿಕೊಂಡಿದ್ದಾಳೆ.

ಮಹಿಳೆಯನ್ನು ಅಬಲೆಯನ್ನಾಗಿ ನೋಡುತ್ತಿರುವ ಸಮಾಜಕ್ಕೆ ಶತಶತಮಾನಗಳ ಇತಿಹಾಸವಿದೆ. ಬೇಟೆ ಸಂಸ್ಕೃತಿಯಿಂದ ಕೃಷಿಸಂಸ್ಕೃತಿಯತ್ತ ವಾಲುತ್ತಿರುವ ಕಾಲಘಟ್ಟದಲ್ಲಿ ಮಹಿಳೆ ಸಬಲೀಕರಣದಿಂದ ನೇಪಥ್ಯಕ್ಕೆ ಸರಿಸಲ್ಪಟ್ಟಿದ್ದಾಳೆ ಎಂಬುದು ಐತಿಹಾಸಿಕ ಸತ್ಯ, ಅಲೆಮಾರಿತನದಿಂದ ಕುಟುಂಬ ವ್ಯವಸ್ಥೆಗೆ ಹೊರಳುತ್ತಿರುವ ಸಂದರ್ಭದಲ್ಲಿ ಮಹಿಳೆಯನ್ನು ಶಿಶುಪಾಲನೆ ಮತ್ತು ಪಶುಪಾಲನೆಗೆ ಸೀಮಿತಗೊಳಿಸಿರುವುದು ಕಂಡುಬರುತ್ತದೆ. ಭೂಮಿಯ ಹಕ್ಕನ್ನು ತನ್ನದಾಗಿಸಿಕೊಂಡ ಗಂಡು, ಹೆಣ್ಣನ್ನು ತನ್ನ ಅಧೀನದಲ್ಲಿರಿಸಿಕೊಂಡಿರಲಿಕ್ಕೂ ಸಾಕು. ಅದಾಯವನ್ನು ತನ್ನದೆಂದು, ಜವಾಬ್ದಾರಿಯನ್ನು ಮಹಿಳೆಯದ್ದೆಂದು ನಿರೂಪಿಸಿಬಿಟ್ಟ. ಅಂದಿನಿಂದಲೇ ಮಹಿಳೆ ಅಬಲೆಯಾಗಿ ಬಾಳುತ್ತಿದ್ದಾಳೆ.

ತಾಯ್ತನದ ನೆಪವೊಡ್ಡಿ ಮಹಿಳೆಯನ್ನು ಮನೆಯಲ್ಲಿಯೇ ಕೂಡಿ ಹಾಕಲಾಯಿತು. ಆ ಮೂಲಕ ಅವಳ ದುಡಿಮೆಯನ್ನು ಆದಾಯದ ಮೂಲವೆಂದು ಪರಿಗಣಿಸಲಿಲ್ಲ. ಸಂಪತ್ತಿನ ಹಕ್ಕನ್ನೆಲ್ಲ ತನ್ನದಾಗಿಸಿಕೊಂಡ ಪುರುಷ, ಮಹಿಳೆಯನ್ನು ಕೇವಲ ಭೋಗದ ವಸ್ತುವೆಂದು ಭಾವಿಸಿದ. ಪ್ರಕೃತಿಯ ಎಲ್ಲವನ್ನೂ ಭೋಗಿಸುವಂತೆ ಇವಳನ್ನು ಭೋಗಕ್ಕಾಗಿ ಮಾತ್ರವೆಂದು ಭಾವಿಸಿರುವುದೇ ಮಹಿಳೆ 'ಅಬಲೆ' ಎಂದಿದ್ದಕ್ಕೆ ಮೂಲಕಾರಣವಾಗಿದೆ.

ಶೋಷಣೆಯ ಎಲ್ಲ ಹಂತಗಳನ್ನು ದಾಟುತ್ತ ಮಹಿಳೆ ಅಬಲೆ ಪಟ್ಟದಿಂದ ಮುಂದೆ ಸರಿಯುತ್ತ ಸಬಲೀಕರಣದತ್ತ ಹೆಜ್ಜೆ ಹಾಕುತ್ತಿರುವುದು ೧೯ನೇ ಶತಮಾನ ಉತ್ತರಾರ್ಧ ಮತ್ತು ೨೦ನೇ ಶತಮಾನದ ಪ್ರಾರಂಭದಿಂದಲೇ, ಮಹಿಳೆಗೆ ಶಿಕ್ಷಣದ ಅವಕಾಶಗಳು ದೊರೆತ ಮೇಲೆ ತನ್ನ ಹಕ್ಕಿನ ಅರಿವಾಗುತ್ತಿದೆ. ಶಿಕ್ಷಿತ ಮಹಿಳೆಯರು ತಮ್ಮ ಹಕ್ಕಿಗಾಗಿ ಹೋರಾಡುತ್ತ ಸಬಲೀಕರಣದತ್ತ ದಾಪುಗಾಲನ್ನು ಇಡುತ್ತಿದ್ದಾರೆ. ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕ ಮಹಿಳಾ ಸಬಲೀಕರಣ ಎಂಬ ಪುಟ್ಟ ಹಣತೆ ಅಲ್ಲಲ್ಲಿ ಬೆಳಗುತ್ತಿದೆ.

ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಸಮಾನತೆಯಿಂದ ಕೂಡಿರುವ ನಮ್ಮ ಭಾರತದಲ್ಲಿ ಲಿಂಗ, ಜಾತಿ, ವರ್ಗ, ಧರ್ಮ, ನಗರ, ಗ್ರಾಮ ಮುಂತಾದ ತಾರತಮ್ಯಗಳಿಂದ ಯಾವುದೇ ಸವಲತ್ತುಗಳು ಮಹಿಳೆಯರಿಗೆ ದಕ್ಕುವುದು ತೀರಾ ಕೂನಯಲ್ಲಿ, ಆರ್ಥಿಕವಾಗಿ ಸುರಕ್ಷಿತ ಹಾಗೂ ಉತ್ತಮವಾದ ಖಾಯಂ ಕೆಲಸಗಳು ಮಹಿಳೆಯರಿಗೆ ದೊರಕಲು ಪ್ರಾರಂಭವಾದದ್ದು ತೀರಾ ಇತ್ತೀಚೆಗೆ ಅದೂ ಕೆಳವರ್ಗದ ಗ್ರಾಮೀಣ ಬಡಮಹಿಳೆಯರ ತನಕ ಒಂದರ್ಥದಲ್ಲಿ ಇನ್ನೂ ಮುಟ್ಟಿಯೇ ಇಲ್ಲ. ಆದರೂ ಮಹಿಳೆಯರು ತಮ್ಮ ಹೋರಾಟ ಮತ್ತು ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ.

ಮಹಿಳಾ ಸಬಲೀಕರಣ ಎನ್ನುವುದು ಪ್ರಾದೇಶಿಕವಾಗಿ ಒಂದೇ ಸಮನಾಗಿಲ್ಲ. ನಗರಗಳು ಮಹಿಳಾ ಸಬಲಿಕರಣದಲ್ಲಿ ಯಶಸ್ಸು ಸಾಧಿಸುತ್ತಿದ್ದರೂ, ಗ್ರಾಮೀಣ ಭಾಗಗಳಲ್ಲಿ ಮಹಿಳೆಯರಿಗೆ ಸಬಲೀಕರಣ ಗಗನಕುಸುಮವಾಗಿಯೇ ಉಳಿದಿದೆ. ಹೀಗಾಗಿ ಮಹಿಳಾ ಸಬಲೀಕರಣವನ್ನು ವಿಶ್ಲೇಷಿಸುವಾಗ ನಗರ ಮತ್ತು ಗ್ರಾಮೀಣ ಮಹಿಳೆಯರನ್ನು ಒಂದೇ ತಕ್ಕಡಿಯಲ್ಲಿ ತೂಗುವುದು ಸರಿಯಲ್ಲ, ಇದಕ್ಕೆ ವಿಭಿನ್ನ ಕಾರಣಗಳೂ ಇವೆ.

ಗ್ರಾಮೀಣ ಪ್ರದೇಶದ ಸಮಾಜೋಧಾರ್ಮಿಕ ಜಾಡ್ಯಗಳು ನಗರಗಳಲ್ಲಿ ಅಷ್ಟಾಗಿ ಕಾಣಿಸುವುದಿಲ್ಲ. ಮೂಲಭೂತ ಸೌಕರ್ಯಗಳ ಕೊರತೆಯೂ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿದೆ. ಆಧುನಿಕ ಸೌಲಭ್ಯಗಳು ಗ್ರಾಮೀಣ ಭಾಗದ ಜನರಿಗೆ ದಕ್ಕುತ್ತಿಲ್ಲ. ಹೀಗಾಗಿ ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಪ್ರತ್ಯೇಕವಾಗಿ ನೋಡುವುದೇ ಯೋಗ್ಯ ಮಹಿಳಾ ಸಬಲೀಕರಣದ ವಿಷಯದಲ್ಲಿಯೂ ನಗರ ಮತ್ತು ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಪ್ರತ್ಯೇಕಿಸುವುದು ಸರಿಯೆನಿಸುತ್ತದೆ.

ಮಹಿಳಾ ಸಬಲೀಕರಣಕ್ಕಿರುವ ಮೊದಲ ಅಸ್ತ್ರವೇ ಮಹಿಳಾ ಶಿಕ್ಷಣ. ಶಿಕ್ಷಣದಲ್ಲಿ ಲಿಂಗಸಮಾನತೆ ಎಂಬುದು ಇಂದಿಗೂ ಸಾಧ್ಯವಾಗಿಲ್ಲ ಎಂದೇ ಹೇಳಬೇಕಾಗುತ್ತದೆ. ಪುರುಷರಿಗಷ್ಟೇ ಮೀಸಲಾದ ಶಿಕ್ಷಣ ವ್ಯವಸ್ಥೆಯ ಬೇರುಗಳು ನಮ್ಮ ಧಾರ್ಮಿಕ ವ್ಯವಸ್ಥೆಯಲ್ಲಿಯೇ ಇವೆ. 'ಗುರುಕುಲ' ಎನ್ನವುದು ವಿದ್ಯಾರ್ಥಿಗಳಿಗೆ ವಿನಹಃ ವಿದ್ಯಾರ್ಥಿನಿಯರಿಗಾಗಿ ತೆರೆದುಕೊಂಡಿದ್ದಿಲ್ಲ. ಹೀಗಾಗಿ ಮಹಿಳಾ ಶಿಕ್ಷಣ ಎನ್ನುವುದು ನಮಗೆ ದಕ್ಕಿರುವುದು ಬ್ರಿಟೀಷರ ಆಗಮನದ ನಂತರವೆ. ಈ ದೇಶದ ಮೊದಲ ಶಿಕ್ಷಕಿ 'ಸಾವಿತ್ರಿಬಾಯಿ ಫುಲೆ'ಯವರು ನಡೆಸಿದ ಮಹಿಳಾ ಶಿಕ್ಷಣದ ಪರವಾದ ಹೋರಾಟಗಳನ್ನು ಗಮನಿಸಿದರೆ ಶಿಕ್ಷಣದಲ್ಲಿಯ ಲಿಂಗ ಅಸಮಾನತೆಯ ಕಾರಣಗಳನ್ನು ತಿಳಿಯಬಹುದು.

ಸಮಾನತೆಯ ಕಡೆಗೆ ಮುಖಮಾಡಿದ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಶಿಕ್ಷಣ ತೀವ್ರ ಹಿನ್ನಡೆಯನ್ನು ಅನುಭವಿಸುತ್ತಿದೆ. ಹೆಣ್ಣನ್ನು ವ್ಯಕ್ತಿ ಎಂದು ನೋಡದ ಸರಕು ಎಂಬಂತೆ ನೋಡಲಾಗುತ್ತಿದೆ. ಹೆಣ್ಣೊಬ್ಬಳು ಕಲಿತರೆ ಸಬಲೆಯಾಗಿ ಸ್ವತಂತ್ರಳಾಗುತ್ತಾಳೆಂಬ ಭಯ ಹಳ್ಳಿಗರಿಗಿದೆ. ಅವಳನ್ನು ಮನಕೆಲಸಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಬಾಲ್ಯವಿವಾಹವು ಅವಳ ಕಲಿಕೆಗೆ ತಡೆಗೋಡೆಯಾಗಿದೆ 'ಬಾಲ್ಯವಿವಾಹ ನಿಷೇಧ ಕಾಯ್ದೆ' ೨೦೦೬ರಲ್ಲಿ ಜಾರಿಗೆ ಬಂದರೂ ಇನ್ನೂ ಕೆಲವು ಹಳ್ಳಿಗಳಲ್ಲಿ ಸಾಮೂಹಿಕ ಮದುವೆಗಳಲ್ಲಿ ಬಾಲ್ಯವಿವಾಹ ನಡೆಯುವುದನ್ನು ಕಾಣುತ್ತೇವೆ. ಎಲ್ಲಕ್ಕಿಂತ ಮುಖ್ಯವಾಗಿ ಹಳ್ಳಿಗರ ಬಡತನ ಮತ್ತು ಅಜ್ಞಾನ ಮಹಿಳಾ ಶಿಕ್ಷಣಕ್ಕೆ ಬೇಲಿ ಹಾಕಿವೆ. ಹೀಗಾಗಿ ಗ್ರಾಮೀಣ ಪ್ರದೇಶಗಳ ಶಿಕ್ಷಣದಲ್ಲಿ ಲಿಂಗಾನುಪಾತದಲ್ಲಿ ವ್ಯತ್ಯಾಸ ಬಹಳಷ್ಟಿದೆ.

೨೦೧೧ ರ ಜನಗಣತಿ ಪ್ರಕಾರ ದೇಶದ ಪುರುಷ ಸಾಕ್ಷರತೆ ೮೦.೧೪ ಇದ್ದರೆ, ಮಹಿಳೆಯರದ್ದು ೬೫.೪೬ ರಷ್ಟಿದೆ. ಮಹಿಳಾ ಶಿಕ್ಷಣ ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡು ಬರುವುದರಿಂದ ಗ್ರಾಮೀಣ ಭಾಗದಲ್ಲಿ ಮಹಿಳಾ ಸಾಕ್ಷರತೆ ೪೦ ಪ್ರತಿಶತಕ್ಕಿಂತಲೂ ಕಡಿಮೆ ಎನ್ನುವುದು ಕಳವಳದ ಸಂಗತಿ. ಹೀಗಾಗಿ ಮಹಿಳಾ ಸಬಲೀಕರಣದ ಆಧಾರಸ್ತಂಭದಂತಿದ್ದ ಮಹಿಳಾ ಶಿಕ್ಷಣ ಗ್ರಾಮೀಣ ಭಾಗದಲ್ಲಿ ದಕ್ಕದಂತಾಗಿ, ಗ್ರಾಮೀಣ ಮಹಿಳಾ ಸಬಲೀಕರಣಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಈ ನಿಟ್ಟಿನಲ್ಲಿ ಜಾಗೃತಿಯ ಅವಶ್ಯಕತೆ ಇದೆ. ೧೦೦ ಕೋಟಿ ರೂಪಾಯಿಯ ಬೇಟಿ ಬಚಾವೋ ಬೇಟಿ ಪಡಾವೋ ದಂತಹ ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನಗೊಳ್ಳಬೇಕಿದೆ.

ಭಾರತ ಹಳ್ಳಿಗಳ ದೇಶವಾಗಿದ್ದು, ಅನಕ್ಷರಸ್ಥರು ಮತ್ತು ಬಡವರು ಹೆಚ್ಚಾಗಿರುವ ಹಳ್ಳಿಗಳ ರಾಷ್ಟ್ರವಾಗಿದೆ. ಬಡತನ ಹೋಗಲಾಡಿಸಲು ಸ್ವಸಹಾಯ ಸಂಘಗಳು ಸಹಕಾರಿಯಾಗಿವೆ. ಗ್ರಾಮೀಣ ಬಡ ಹೆಣ್ಣು ಮಕ್ಕಳೆಲ್ಲ ಸಂಘಟಿತರಾಗಿ ಸ್ವ-ಸಹಾಯ ಸಂಘಗಳನ್ನು ರಚಿಸಿಕೊಂಡು, ಸರ್ಕಾರದ ವಿವಿಧ ಇಲಾಖೆಗಳ ಸೌಲಭ್ಯಗಳನ್ನು ಮತ್ತು ಬ್ಯಾಂಕುಗಳ ಸಹಕಾರ ಪಡೆದು ತಮ್ಮ ಬಡತನವನ್ನು ನಿವಾರಿಸಿಕೊಂಡು ತಾವು ಅಭಿವೃದ್ಧಿಯಾಗುವುದಲ್ಲದೆ, ಈ ದೇಶದ ಅಭಿವೃದ್ಧಿಗೂ ಸಹಕಾರಿಯಾಗಿದ್ದಾರೆ.

ಗ್ರಾಮೀಣ ಬಡಮಹಿಳೆಯರು ಒಟ್ಟುಗೂಡಿ ತಮ್ಮ ಆರ್ಥಿಕ, ಸಾಮಾಜಿಕ, ಭೌತಿಕ, ವೈಜ್ಞಾನಿಕ, ಶೈಕ್ಷಣಿಕ ಆರೋಗ್ಯಕರ ಬೆಳವಣಿಗೆಗಾಗಿ ಸ್ವ-ಸಹಾಯ ಸಂಘಗಳನ್ನು ರಚಿಸಿಕೊಂಡಿದ್ದಾರೆ. ಅವರ ಜೀವನದ ಗುಣಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಈ ಸಂಘಗಳು ದಾರಿದೀಪವಾಗಿವೆ. ಜೊತೆಗೆ ಉಳಿತಾಯ ಮತ್ತು ಸಾಲದ ಮೂಲಕ ಸ್ವಾವಲಂಬಿಯಾಗಿ ಸ್ವ-ಸಾಮರ್ಥ ಪಡೆಯುತ್ತವೆ.

ಸ್ವ-ಸಹಾಯ ಅಥವಾ ಸ್ತ್ರೀಶಕ್ತಿ ಗುಂಪುಗಳು ಎಂದರೆ ಒಂದೇ ಗ್ರಾಮದ, ಒಂದೇ ಮನೋಭಾವವುಳ್ಳ ಗ್ರಾಮೀಣ ಬಡಮಹಿಳೆಯರು ಸೇರಿ ಸ್ವ-ಪ್ರೇರಣೆಯಿಂದ ತಮ್ಮ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಅಲ್ಲದೆ ತಮ್ಮ ಕಷ್ಟ-ಸುಖಗಳನ್ನು ವಿನಿಮಯ ಮಾಡಿಕೊಳ್ಳುವುದು ಮತ್ತು ಸ್ವ ಸಹಾಯ

ಗುಂಪುಗಳ ಉಳಿತಾಯ ಸಾಲ ಚಟುವಟಿಕೆಗಳ ಜೊತೆಗೆ ಸಾಕ್ಷರತೆ, ಗ್ರಾಮನೈರ್ಮಲ್ಯ ನೆಲಜಲ ಸಂರಕ್ಷಣೆ ಮರಗಿಡಗಳ ಪೋಷಣೆ, ಬಾಲಕಾರ್ಮಿಕತೆಯನ್ನು ವಿರೋಧಿಸುವುದು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸುವುದು, ಗ್ರಾಮಶಾಲೆ, ಅಂಗನವಾಡಿ ಕೇಂದ್ರ, ದೇವಸ್ಥಾನದ ರಸ್ತೆ, ಚರಂಡಿಗಳ ಸ್ವಚ್ಛತೆ, ಶಾಲೆ ಸರಕಾರಿ ಸಂಘ ಸಂಸ್ಥೆಗಳ ಕಟ್ಟಡಗಳು, ಕೆರೆಬಾವಿಗಳ ನಿರ್ಮಾಣ ಮತ್ತು ದುರಸ್ಥಿಯಲ್ಲಿಯೂ ಸಹ ಸಕ್ರಿಯವಾಗಿ ಶ್ರಮದಾನದ ಮೂಲಕ ಭಾಗವಹಿಸುತ್ತಿದ್ದಾರೆ. ಶಾಲಾಮಕ್ಕಳಿಗೆ ಸಾಂಸ್ಕೃತಿಕ ಚಟುವಟಿಕೆಗಳಿಗೂ ಸ್ತ್ರೀ ಶಕ್ತಿ ಗುಂಪಿನವರೂ ಪ್ರೋತ್ಸಾಹ ನೀಡುತ್ತಿದ್ದಾರೆ. ಎಲ್ಲಾ ಸದಸ್ಯರು ಸೇರಿ ಧೂಮಪಾನ ಮದ್ಯಪಾನ ಹಾಗೂ ತಂಬಾಕು ಸೇವನೆ ನಿಷೇಧಿಸುವಂತೆ ಪ್ರತಿಭಟನೆ ಚಳುವಳಿಗಳು ನಡೆಸುತ್ತಿದ್ದಾರೆ. ಉತ್ತಮ ಸಂಘಗಳು ಬಹಳ ಜವಾಬ್ದಾರಿಯಿಂದ ಸಮಾಜಮುಖಿಯಾಗಿ ಕೆಲಸ ನಿರ್ವಹಿಸುತ್ತಿವೆ.

ಇತ್ತೀಚೆಗೆ ಕಲಬುರ್ಗಿ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಸ್ತ್ರೀಶಕ್ತಿ ಗುಂಪಿನ ಮಹಿಳೆಯರು ಒಟ್ಟಾಗಿ ಸೇರಿ ಉದ್ಯೋಗಖಾತ್ರಿ ಯೋಜನೆ ಮೂಲಕ ಕೆರೆ ಹೂಳೆತ್ತುವ ಕೆಲಸವನ್ನು ಮಾಡಿದ್ದು ರಾಜ್ಯಮಟ್ಟದಲ್ಲಿ ಹೆಸರುವಾಸಿಯಾಗಿದೆ. ಸಾಮಾಜಿಕ ಹೋರಾಟಗಾರ್ತಿಯರಾದ ಕೆ. ನೀಲಾ ಹಾಗೂ ಮೀನಾಕ್ಷಿ ಬಾಳಿಯವರ ಮುಂದಾಳತ್ವದಲ್ಲಿ ಈ ಬೃಹತ್ ಕಾರ್ಯ ನಡೆದಿರುವುದನ್ನು ಗಮನಿಸಲೇಬೇಕು.

ಗ್ರಾಮೀಣ ಮಹಿಳಾ ಸಬಲೀಕರಣ ಎಂದೊಡನೆ ಥಟ್ಟನೆ ನೆನಪಾಗುವುದು ಶ್ರೀಮತಿ ಮೋಟಮ್ಮನವರು. ಅವರು ಸಚಿವೆಯಾಗಿದ್ದಾಗ ಸ್ವ ಸಹಾಯ ಗುಂಪುಗಳಿಗೆ ದೊಡ್ಡಮಟ್ಟದ ಚಾಲನೆ ದೊರೆಯಿತು. ಇಂದು ಪ್ರತಿಯೊಂದು ಹಳ್ಳಿಯಲ್ಲಿ ನೂರಾರು ಸ್ತ್ರೀ ಶಕ್ತಿ ಗುಂಪು ಕೆಲಸ ನಿರ್ವಹಿಸುವಂತಾಗಿದೆ. ೧೦೦೦-೧೦೦೯ನೇ ಸಾಲಿನಲ್ಲಿ ಅನುಷ್ಠಾನಗೊಂಡ ಸ್ತ್ರೀಶಕ್ತಿ ಗುಂಪು ಹಾಗೂ ಸ್ವ ಸಹಾಯ ಗುಂಪುಗಳು ಇಂದು ಕರ್ನಾಟಕದಲ್ಲಿ ೯ ೯/೧ ಲಕ್ಷ ರಚಿಸಲಾಗಿದೆ. ಈ ಯೋಜನೆಯಲ್ಲಿ ೧೧ ಲಕ್ಷ ಮಹಿಳೆಯರು ಸದಸ್ಯೆರಾಗಿ ಸ್ವಾವಲಂಬಿಗಳಾಗಿ ಬದಕುತ್ತಿದ್ದಾರೆ. ನಬಾರ್ಡ ಸಂಸ್ಥೆಯೂ ಸಹ ಸ್ತ್ರೀಶಕ್ತಿ ಗುಂಪಿನ ಮಹಿಳೆಯರಿಗೆ ತರಬೇತಿಗಳನ್ನು ನೀಡುತ್ತದೆ. ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಸ್ತ್ರೀಶಕ್ತಿ ಗುಂಪಿನ ಮಹಿಳೆಯರು ೧೦೯೮ ಕೋಟಿ ರೂಪಾಯಿ ಉಳಿತಾಯ ಮಾಡಿದ್ದಾರೆ. ಸಂಘದಲ್ಲಿರುವ ಎಲ್ಲಾ ಸದಸ್ಯರು ಸಾಕ್ಷರರಾಗಲು ಬ್ಯಾಂಕ್ ವ್ಯವಹಾರ ಮಾಡಲು ಶರಬೇತಿ ಪಡೆಯುತ್ತಿದ್ದಾರೆ.

ಕರ್ನಾಟಕದಲ್ಲಿ ಇತ್ತೀಚೆಗೆ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ಎಸ್.ಜಿ.ಎಸ್.ವಾಯ್ ಮತ್ತು ಶಹರಿ ರೋಜಗಾರ ಯೋಜನೆ, ಗ್ರಾಮೀಣ ಬ್ಯಾಂಕು, ಮಂಜುನಾಥ ಗ್ರಾಮೀಣಾಭೀವೃದ್ಧಿಯಂತಹ ಸಂಸ್ಥೆಗಳು ಸ್ವಸಹಾಯ ಸಂಘಗಳಿಗೆ ಅನೇಕ ಯೋಜನೆಗಳಡಿಯಲ್ಲಿ ಕೌಶಲ್ಯ ತರಬೇತಿ ನೀಡುತ್ತಿವೆ ಅಲ್ಲದೆ ಬ್ಯಾಂಕಿನಿಂದ ಸಾಲಸೌಲಭ್ಯ ಒದಗಿಸಿಕೊಟ್ಟು ಮಹಿಳೆಯರನ್ನು ಸ್ವಾವಲಂಬಿಗಳಾಗಿ ಮಾಡುತ್ತಿವೆ.

ಮಹಿಳೆಗೆ ನಿರುದ್ಯೋಗ ಎಂಬ ಪದ ಅನ್ವಯವಾಗುವುದೇ ಇಲ್ಲ, ಏಕೆಂದರೆ ಎಲ್ಲ ಮಹಿಳೆಯರು ಒಂದಿಲ್ಲಾ ಒಂದು ಕೆಲಸದಲ್ಲಿ ತೊಡಗಿಸಿಕೊಂಡೆ ಇರುತ್ತಾರೆ. ಗ್ರಾಮೀಣ

ಮಹಿಳೆಯರು ಮನೆಗೆಲಸ ಶಿಶುಪಾಲನೆಯತ್ತ ಪಶುಪಾಲನೆಯೊಂದಿಗೆ ಹೊರಗಿನ ಕೆಲಸಗಳಿಗೂ ತೆರಳುತ್ತಾರೆ. ಕೃಷಿ ಪ್ರಧಾನ ಪ್ರದೇಶಗಳಾದ ಹಳ್ಳಿಗಳಲ್ಲಿ ಎಲ್ಲಾ ಕೃಷಿ ಚಟುವಟಿಕೆಗಳನ್ನು ಮಹಿಳೆಯೇ ನಿರ್ವಹಿಸಬಲ್ಲಳು. ಹೊಲಗಳಲ್ಲಿ ಕಳೆತೆಗೆಯುವ, ತೆನೆಮುರಿಯುವ ನಾಟಿಮಾಡುವ, ಹೂಬಿಡಿಸುವ, ಅಕ್ಕಾಡಿಹಾಕುವ ಕೆಲಸಗಳು ಮಹಿಳೆಯರಿಗೆ ಮೀಸಲಾಗಿವೆ. ತೋಟದಲ್ಲಿ ಬೆಳೆದ ಕಾಯಿಪಲ್ಯ ಸೊಪ್ಪುಗಳನ್ನು ಹೊತ್ತುಮಾರುವವರೂ ಮಹಿಳೆಯರೇ ಇದಲ್ಲದೆ ಬೀಜ ಸಂಸ್ಕರಣೆ, ಕೂದಲು ಸಂಸ್ಕರಣೆ, ಸಂತೆಮಾರುಕಟ್ಟೆ, ಖಾನಾವಳಿ ಮತ್ತು ಹೋಟಲ್‌ಗಳ ಖಾದ್ಯಗಳು, ಕಲ್ಲು ಒಡೆಯುವ ಮತ್ತು ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಕೂಲಿಯಾಳುಗಳಾಗಿ ಹಳ್ಳಿಯ ಮಹಿಳೆಯರು ದುಡಿಯುತ್ತಿರುವುದು ಎಲ್ಲೆಡೆ ಕಾಣಸಿಗುತ್ತದೆ. ಕೆಲವು ಹಳ್ಳಿಗಳಲ್ಲಿ ನೇಕಾರಿಕೆಯಲ್ಲಿಯೂ ತೊಡಗಿಕೊಂಡಿರುವ ಮಹಿಳೆಯರು ಸಾಕಷ್ಟಿದ್ದಾರೆ. ಇಷ್ಟೆಲ್ಲ ಅಭಿವೃದ್ಧಿಯತ್ತ ಮಹಿಳೆಯರು ವಾಲುತಿದ್ದರೂ ಅವರ ಸಮಸ್ಯೆಗಳಿಗೆ ಕೊರತೆಯಿಲ್ಲ.

ಆದರೆ ಇತ್ತೀಚೆಗೆ ಹಳ್ಳಿಗಳಲ್ಲಿ ಕೆಲ ಗಂಡಸರು ಜೂಜು ಮತ್ತು ಕುಡಿತದ ದಾಸರಾಗುತ್ತಿದ್ದಾರೆ. ಇದರಿಂದಾಗಿ ಇದ್ದ ಆಸ್ತಿಯನ್ನೆಲ್ಲಾ ಮಾರಿ ದಿವಾಳಿಯಾಗಿ ಹೆಂಡತಿಯ ಕೂಲಿಯ ಹಣಕ್ಕೂ ಕೈಹಾಕುತ್ತಾರೆ. ಗಂಡನಿಂದ ಆದಾಯವಿಲ್ಲದೆ ತಾವೇ ದುಡಿದುತಂದು ಕುಟುಂಬ ನಿರ್ವಹಣೆ ಮಾಡುವ ದಾರುಣ ಪರಿಸ್ಥಿತಿ ಮಹಿಳೆಯರದ್ದಾಗಿದೆ. ಮಕ್ಕಳ ಪಾಲನೆಯನ್ನು ಮಹಿಳೆಯರೇ ನಿರ್ವಹಿಸುವಂತಾಗಿದೆ. ಮಹಿಳೆಯರು ಕುಡಿದ ಗಂಡಂದಿರಿಂದ ಹಲ್ಲೆ ಮತ್ತು ಹತ್ಯೆಗೂ ಒಳಗಾಗುತ್ತಿದ್ದಾರೆ. ಇಂತಹ ವಿಷಮ ಸ್ಥಿತಿಯಲ್ಲಿ ಮಹಿಳಾ ಸಬಲೀಕರಣ ಗಾಳಿಗೋಪುರವಷ್ಟೇ. ಆದರೂ ಸಮಾಧಾನದ ಸಂಗತಿ ಎಂದರೆ ಇತ್ತಿಚೇಗೆ ಮದ್ಯಪಾನ ವಿರೋಧಿ ಚಳುವಳಿಗಳು ಗ್ರಾಮೀಣ ಮಹಿಳೆಯರಿಂದ ರೂಪಗೊಳ್ಳುತ್ತಿವೆ. ಹಳ್ಳಿಗಳಲ್ಲಿ ಸ್ವಸಹಾಯ ಗುಂಪಿನ ಮಹಿಳೆಯರು ಮದ್ಯದಂಗಡಿಗಳನ್ನು ತೆರವುಗೊಳಿಸುವ ಅಕ್ರಮ ಮದ್ಯಮಾರಾಟವನ್ನು ತಡೆಗಟ್ಟಲು ಪ್ರತಿಭಟನೆ ಮಾಡುತ್ತಿದ್ದಾರೆ. ಕಳೆದ ತಿಂಗಳು ರಾಯಚೂರಿನಲ್ಲಿ ನಡೆದ ಮದ್ಯವಿರೋಧಿ ಜನಾಂದೋಲನ ಐತಿಹಾಸಿಕ ದಾಖಲೆಯನ್ನೇ ಮೆರೆದಿದೆ. ೨೭ ಪ್ರಮುಖ ಸಂಘಟನೆಗಳಿಂದ ಈ ಆಂದೋಲನ ನಡೆದಿದೆ. ೧೫ ಸಾವಿರಕ್ಕೂ ಹೆಚ್ಚು ಮಹಿಳೆಯರು ಸ್ವ-ಇಚ್ಚೆಯಿಂದ ಇದರಲ್ಲಿ ಪಾಲ್ಗೊಂಡಿದ್ದರು. ಮದ್ಯದ ವಿರುದ್ಧ ರಣಕಹಳೆಯನ್ನೇ ಮೊಳಗಿಸಿದ್ದಾರೆ. ಅಕ್ರಮ ಮದ್ಯ ಮಾರಾಟವನ್ನು ತಡೆಯಲು ತೀವ್ರ ಹೋರಾಟಕ್ಕೆ ಚಾಲನೆ ನೀಡಿದ್ದಾರೆ. ಕುಡುಕರಿಗೆ ಎದೆನಡುಕ ಶುರುವಾಗಿದೆ. ಅಬಕಾರಿ ಇಲಾಖೆ ತತ್ತರಿಸಿದೆ. ಸರಕಾರಕ್ಕೂ ಬಿಸಿಮುಟ್ಟಿದೆ. ಇಂತಹ ಕ್ರಾಂತಿಕಾರಿ ಹೋರಾಟದ ನಾಯಕತ್ವ ಸಾಮೂಹಿಕವಾಗಿದ್ದರೂ ಈ ಆಂದೋಲನಕ್ಕಾಗಿ ವಿದ್ಯಾಪಾಟೀಲ್ ಮತ್ತು ಅಭಯ್ ಕುಮಾರ ಖಂಬಾ ಶ್ರಮಿಸಿದ್ದಾರೆ. ಗ್ರಾಮೀಣ ಮಹಿಳೆಯರಿಗೆ ಇದು ಮುಖ್ಯ ಪ್ರೇರಣೆಯಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಭ್ರೂಣಹತ್ಯೆ ಅಷ್ಟಾಗಿ ಇರದೆ ಇರಬಹುದು. ಅಂದ ಮಾತ್ರಕ್ಕೆ ಹುಟ್ಟುವ ಹೆಣ್ಣು ಮಗುವಿಗೆ ಪ್ರಾಧಾನ್ಯತೆ ಸಿಕ್ಕಿದೆ ಎಂದಲ್ಲ. ಹಳ್ಳಿಗಳಲ್ಲಿ ಹೆಣ್ಣೆಂದು ಹುಟ್ಟಿದರೆ ತಾಯಿ ಮತ್ತು ಮಗು ಇಬ್ಬರೂ

ಶೋಷಣೆಗೆ ಒಳಗಾಗುತ್ತಾರೆ. ಹೆಣ್ಣು ಹಡೆದ ತಾಯಿಯನ್ನು ಕುಟುಂಬದವರೇ ನಿರ್ಲಕ್ಷಿಸುತ್ತಾರೆ. ಹೆಣ್ಣು ಹುಟ್ಟಿದ್ದ ಮಾತ್ರಕ್ಕೆ ಮಹಿಳೆಯನ್ನು ಗಂಡನ



ಮನೆಯಿಂದ ಹೊರ ಹಾಕಿದ ಸಂದರ್ಭಗಳು ಇವೆ. ಹುಟ್ಟಿದ ಹೆಣ್ಣುಮಗುವನ್ನು ಆಸ್ಪತ್ರೆ ಗುಡಿ, ಬಸ್‌ನಿಲ್ದಾಣ, ರೇಲ್ವೆ ಸ್ಟೇಷನ್‌ಗಳಲ್ಲಿ ಬಿಟ್ಟು ಹೋದದ್ದು ಇದೆ. ಮಡದಿಯನ್ನು ಬಿಟ್ಟು ಬೇರೊಂದು ಹೆಣ್ಣನ್ನು ಮದುವೆಯಾದವರೂ ಇದ್ದಾರೆ. ಹೀಗಾಗಿ ಹೆಣ್ಣು ಹುಟ್ಟುವದು ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಶಾಪವೇ ಆಗಿದೆ. ಹುಟ್ಟಿದಾಗಿನಿಂದಲೂ ಶಾಪಗ್ರಸ್ತಳಾಗಿ ಬೆಳದ ಹೆಣ್ಣು ಮಗುವಿಗೆ ಶಿಕ್ಷಣ ಗಗನಕುಸುಮವೆ ಸರಿ. ನನ್ನ ನಂತರ ಹುಟ್ಟಿದ ತಮ್ಮ ಅಥವಾ ತಂಗಿಯನ್ನು ನೋಡಿಕೊಳ್ಳುವುದು ಹೆಣ್ಣು ಮಗುವಿನ ಕೆಲಸವಾಗಿಬಿಡುತ್ತದೆ. ಮನೆಕೆಲಸವನ್ನು ಆ ಮಗುವೆ ಮಾಡುತ್ತದೆ. ಗಂಡುಮಗುವನ್ನು ಮಾತ್ರ ಶಾಲೆಗೆ ಕಳಿಸಲಾಗುತ್ತದೆ.

ಬಾಲ್ಯವಿವಾಹ ಹಳ್ಳಿಗಳಲ್ಲಿ ಸರ್ವೆಸಾಮಾನ್ಯ ಕಾನೂನಿನ ಕಣ್ಣಿಗೆ ಮಣ್ಣೆರಚಿ ಗುಟ್ಟಾಗಿ ಬಾಲ್ಯವಿವಾಹ ಮಾಡುತ್ತಾರೆ. ಏನೂ ಅರಿಯದ ಶಿಕ್ಷಣದಿಂದ ವಂಚಿತ ಹೆಣ್ಣುಮಗುವು ಬಾಲ್ಯದಲ್ಲಿಯೇ ಬಾಳನೌಕೆಗೆ ಹುಟ್ಟು ಹಾಕುತ್ತಾಳೆ. ಬಾಲ್ಯವಿವಾಹ ನಿಷೇಧ ಕಾಯಿದೆ ಕುರಿತು ಜಾಗೃತಿ ಮೂಡಿಸಿದರೂ ಪೂರ್ಣ ಪ್ರಮಾಣದ ಅನುಷ್ಠಾನವಾಗಿಲ್ಲ. ಹೆಣ್ಣು ಮಗುವಿಗೆ ಸಾಂಪ್ರದಾಯಕ ಕಟ್ಟಳೆಗಳು ಕಟ್ಟುನಿಟ್ಟಾಗಿವೆ. ತಮ್ಮ ಹಳ್ಳಿಯಲ್ಲಿ ಇರುವ ಕನ್ನಡ ಶಾಲೆಗೆ ಮಾತ್ರ ಹೆಣ್ಣು ಮಗುವನ್ನು ಕಳಿಸುತ್ತಾರೆ. ಹಳ್ಳಿಗಳಲ್ಲಿ ಪ್ರೌಢ ಪದವಿ ಶಿಕ್ಷಣದ ಸೌಲಭ್ಯವಿಲ್ಲದ್ದರಿಂದ ಹೆಣ್ಣು ಮಕ್ಕಳನ್ನು ಶಾಲೆ-ಕಾಲೇಜು ಬಿಡಿಸುತ್ತಾರೆ. ಆದರೆ ಎಷ್ಟೇ ಕಷ್ಟವಿದ್ದರೂ ಗಂಡು ಮಗುವನ್ನು ನಗರಗಳಿಗೆ ಕಳಿಸಿ ಇಂಗ್ಲೀಷ್ ಮಾಧ್ಯಮದ ಶಾಲೆಗೆ ಸೇರಿಸಿ, ಸಾಕಷ್ಟು ದುಡ್ಡು ಸುರಿದು ಶಿಕ್ಷಣ ಕೊಡಿಸುತ್ತಾರೆ. ಹೀಗೆ ಮುಂದುವರೆದ ಶಿಕ್ಷಣದಲ್ಲಿನ ಲಿಂಗತಾರತಮ್ಯ ಗ್ರಾಮೀಣ ಮಹಿಳಾ ಸಬಲೀಕರಣವನ್ನು ಹಿಂದಕ್ಕೆ ತಳ್ಳುತ್ತಿದೆ ಎಂತಲೂ ಹೇಳಬಹುದು.

ಭೂಮಿಯ ಒಡೆತನ ಇಂದಿಗೂ ಪುರುಷರ ಕೈಯಲ್ಲಿಯೇ ಇದೆ. ಕೇವಲ ೩ ಪ್ರತಿಶತ ಭೂಮಿಯ ಒಡೆತನವನ್ನು ಮಹಿಳೆಯರು ಪಡೆದುಕೊಂಡಿದ್ದಾರೆ. ೯೭ ಪ್ರತಿಶತ ಭೂಮಿಯ ಒಡೆತನ ಪುರುಷರ ಪಾಲಾಗಿದೆ. ಹೊಲಗದ್ದೆಗಳೆಲ್ಲ ಗಂಡಸರ ಕೈಯಲ್ಲಿರುವಾಗ, ಮಹಿಳಾ ಸಬಲೀಕರಣ ಹೇಗೆ ಸಾಧ್ಯವಾಯಿತು? ಆದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಸಬಲೀಕರಣಗೊಳ್ಳಲು ಭೂಮಿಯ ಒಡೆತನದಲ್ಲಿ ಲಿಂಗಸಮಾನತೆ ಬರಬೇಕು. ಪಿತ್ರಾರ್ಜಿತ ಆಸ್ತಿಗೆ ಗಂಡು ಮತ್ತು ಹೆಣ್ಣು ಇಬ್ಬರೂ ಸಮಾನರಾದರೂ ಹಳ್ಳಿಗಳಲ್ಲಿ ಈ ಕಾಯಿದೆ ಅಷ್ಟಾಗಿ ಅನುಷ್ಠಾನಗೊಳ್ಳುತ್ತಿಲ್ಲ.

ಮಹಿಳಾ ಸಬಲೀಕರಣಕ್ಕೆ ಮಹಿಳೆಯರ ಆರೋಗ್ಯವೂ ಕಾರಣವಾಗುತ್ತದೆ. ಭಾರತದಲ್ಲಿ ಪ್ರತಿ ೩ನೇ ಮಹಿಳೆ ಪೋಷಕಾಂಶದ ಕೊರತೆಯಿಂದ ಬಳಲುತ್ತಿದ್ದಾಳೆ. ಪ್ರತಿ ಇಬ್ಬರಲ್ಲಿ ಒಬ್ಬ ಮಹಿಳೆಗೆ ರಕ್ತಹೀನತೆ ಇದೆ. ಬಾಲ್ಯವಿವಾಹದಿಂದ ಬೇಗನೆ ತಾಯಿಯಾಗುವ ಮಹಿಳೆಯರ ಮರಣ ಪ್ರಮಾಣ ಹೆಚ್ಚಾಗಿದೆ. ಕುಟುಂಬದಲ್ಲಿ ನಿರ್ಲಕ್ಷಿತ ಮಹಿಳೆಯರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಸಮೀಕ್ಷೆಯ ಪ್ರಕಾರ ಪ್ರತಿ ೧ ಲಕ್ಷ ತಾಯಂದಿರಲ್ಲಿ ೧೯೦ ತಾಯಂದಿರು ಮರಣವನ್ನಪ್ಪುತ್ತಾರೆ. ೨೦೧೩ರಲ್ಲಿ ೩ ಲಕ್ಷ ತಾಯಂದಿರಲ್ಲಿ ೫೦ ಸಾವಿರ ತಾಯಂದಿರು



ಹೆರಿಗೆ ಸಂದರ್ಭದಲ್ಲಿ ಸಾವನ್ನಪ್ಪುತ್ತಾರೆ. ಹೆಣ್ಣು ಮಕ್ಕಳ ಆರೋಗ್ಯವನ್ನು ಗಮನಿಸಲು ಈಗ ಹಳ್ಳಿಗಳಲ್ಲಿ ಆರೋಗ್ಯ ಇಲಾಖೆಯಿಂದ ಆಶಾ ಕಾರ್ಯಕರ್ತೆಯರನ್ನು ನೇಮಿಸಲಾಗಿದೆ. ಅವರು ಹಳ್ಳಿಯ ಹೆಣ್ಣುಮಕ್ಕಳನ್ನು ಸಂಪರ್ಕಿಸಿ ಅವರ ಆರೋಗ್ಯವನ್ನು ವಿಚಾರಿಸುತ್ತಿದ್ದಾರೆ. ಗರ್ಭಿಣಿಯರಿಗೆ ಸೂಕ್ತ ಚಿಕಿತ್ಸೆ ಕೊಡಿಸುವುದಲ್ಲದೇ ಅವರ ಸುರಕ್ಷಿತ ಹೆರಿಗೆಗಾಗಿ ಎಲ್ಲ ಅನುಕೂಲತೆಗಳನ್ನು ಮಾಡಿಕೊಡುತ್ತಾರೆ. ಸದ್ಯ ಆಶಾ ಕಾರ್ಯಕರ್ತೆಯರ ನೆರವಿನಿಂದ ಹಳ್ಳಿಯ ಮಹಿಳೆಯರು ಸರಕಾರಿ ಸೌಲಭ್ಯಗಳನ್ನು ಪಡೆದುಕೊಂಡು ಆರೋಗ್ಯ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಹಳ್ಳಿಯ ಶಿಕ್ಷಿತ ಮಹಿಳೆ ಆಶಾ ಕಾರ್ಯಕರ್ತೆಯಾಗಿ ಅಲ್ಪ ಗೌರವಧನದೊಂದಿಗೆ ಸಾಮಾಜಿಕ ಕಳಕಳಿಯನ್ನು ಮೈಗೂಡಿಸಿಕೊಂಡು ಗ್ರಾಮೀಣ ಮಹಿಳೆಯರ ಆರೋಗ್ಯಕ್ಕೆ ಸಹಕಾರಿಯಾಗಿದ್ದಾರೆ.

ಗ್ರಾಮೀಣ ಸ್ತ್ರೀ ಶಕ್ತಿ ಸಬಲೀಕರಣಕ್ಕೂ, ರಾಜಕಾರಣಕ್ಕೂ ಹತ್ತಿರದ ನಂಟಿದೆ. ಸರಕಾರಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತ ಸೌಲಭ್ಯಗಳನ್ನು ಪಡೆಯುತ್ತಾ ಸಬಲೀಕರಣಗೊಳ್ಳಬೇಕಾದರೆ, ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಲೇಬೇಕಿದೆ. ನಗರ ಪ್ರದೇಶಗಳಲ್ಲಿ ನಡೆಯುವ ಅತ್ಯಾಚಾರ ಪ್ರಕರಣಗಳಿಗೂ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಅತ್ಯಾಚಾರ ಪ್ರಕರಣಗಳಿಗೂ ವ್ಯತ್ಯಾಸಗಳಿವೆ. ನಗರಗಳಲ್ಲಿ ಕೇವಲ ಕಾಮದಾಹವನ್ನು ತೀರಿಸಿಕೊಳ್ಳಲು ಮತ್ತು ವಿಕೃತ ಮನಸ್ಥಿತಿಯ ಅತ್ಯಾಚಾರಿಗಳನ್ನು ಕಾಣಬಹುದು. ಆದರೆ ಹಳ್ಳಿಗಳಲ್ಲಿ ನಡೆಯುವ ಅತ್ಯಾಚಾರ ಪ್ರಕರಣಗಳನ್ನು ಅವಲೋಕಿಸಿದರೆ ಅವುಗಳ ಕಥೆಯೇ ಬೇರೆ.

ಹಳ್ಳಿಗಳಲ್ಲಿ ಮುಖ್ಯವಾಗಿ ಕಾಣುವುದು ಬಡವ ಮತ್ತು ಶ್ರೀಮಂತನೆಂಬ ವರ್ಗಭೇದ. ಶ್ರೀಮಂತರ ಮತ್ತು ಜಮೀನುದಾರರ ಅಟ್ಟಹಾಸವೇ ವಿಜೃಂಬಿಸುತ್ತಿದೆ. ಇಂತಹವರ ಹೊಲಗದ್ದೆಗಳಲ್ಲಿ, ಮನೆಗಳಲ್ಲಿ, ಬಡಕೂಲಿಕಾರ್ಮಿಕ ಮಹಿಳೆಯರು ದುಡಿಯುತ್ತಿರುತ್ತಾರೆ. ಈ ಕೂಲಿಯಾಳಾದ ಮಹಿಳೆ ಮೇಲೆ ಜಮೀನುದಾರ ಅಥವಾ ಆತನ ಮಕ್ಕಳು ಅತ್ಯಾಚಾರ ಎಸಗುವುದನ್ನು ಕಾಣುತ್ತೇವೆ. ಆ ಮಹಿಳೆ ಅಸಹಾಯಕತೆಯಿಂದ ಅನ್ಯಾಯವಾದರೂ ಸುಮ್ಮನಾಗಿಬಿಡುತ್ತಾಳೆ.

ಕಂಪ್ಯೂಟರ್ ಯುಗದಲ್ಲಿಯೂ ಇನ್ನೂ ಗ್ರಾಮೀಣ ಪ್ರದೇಶಗಳಲ್ಲಿ ಮೇಲು-ಕೀಳೆಂಬ ಜಾತಿ ಆಧಾರಿತ ಬದುಕಿದೆ. ಕೆಲವು ಮೇಲು ವರ್ಗದವರು ಕೆಳವರ್ಗದ ಮತ್ತು ದಲಿತ ಮಹಿಳೆಯರ ಮೇಲೆ ದೌರ್ಜನ್ಯ ಮತ್ತು ಅತ್ಯಾಚಾರ ನಡೆಸುತ್ತಾರೆ. ಆ ಮಹಿಳೆಗೆ ಪ್ರತಿಭಟಿಸಲು ಧ್ವನಿ ಇಲ್ಲವಾಗಿದೆ.

ಅಧಿಕಾರ ವಿಕೇಂದ್ರೀಕರಣದಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮರಿಪುಡಾರಿಗಳ ಸಂಖ್ಯೆ ಹೆಚ್ಚಾಗಿದೆ. ಜಾತಿಯ, ರಾಜಕೀಯ ಅಥವಾ ಮನೆತನಗಳ ದ್ವೇಷಗಳು ಹಳ್ಳಿಗಳಲ್ಲಿ ಅತ್ಯಾಚಾರದ ತಿರುವುಗಳನ್ನು ಪಡೆದುಕೊಂಡಿರುವದನ್ನು ಗಮನಿಸಿದ್ದೇನೆ.

ಸಮಾಜ ಚಿಂತಕರು ಮತ್ತು ಸಂಘಟನೆಯ ಮುಖಂಡರು ಹಳ್ಳಿಗಳತ್ತ ಹೊರಳಿ ನೋಡಬೇಕಾಗಿದೆ. ನೊಂದ ಮಹಿಳೆಗೆ ಹಾಗೂ ಆಕೆಯ ಕುಟುಂಬದವರಿಗೆ ಬೆಂಬಲವಾಗಿ ನಿಂತು ನ್ಯಾಯಕ್ಕಾಗಿ ಹೋರಾಡಬೇಕಾಗಿದೆ. ಹಳ್ಳಿಯ ಮಹಿಳೆಯರಿಗೂ ಮಹಿಳಾಪರ ಕಾನೂನಿನ ತಿಳುವಳಿಕೆ ನೀಡಬೇಕು.



ಮಹಿಳೆಯರನ್ನು ದೇವರ ಹೆಸರಿನಲ್ಲಿ "ದೇವದಾಸಿ"ಯನ್ನಾಗಿ ಮಾಡುವ ಅನಿಷ್ಟ ಪದ್ಧತಿ ಹಳ್ಳಿಗಳಲ್ಲಿದೆ. ತಳಸಮುದಾಯದ ಮಹಿಳೆಯರು ಈ ದುರಂತಕ್ಕೆ ಒಳಗಾಗುತ್ತಿದ್ದಾರೆ. ಜೋಗತಿ, ಬಸವಿ, ಲೇಸಿ, ಮರಳೆ, ಪಾತರದವಳು ಹೀಗೆ ಕರೆಯಲ್ಪಡುವ ದೇವದಾಸಿಯರು ಗ್ರಾಮೀಣ ಪ್ರದೇಶಗಳಲ್ಲಿ ಸಿಗುತ್ತಾರೆ. ಸಮೀಕ್ಷೆಯಿಂದ ಲಭ್ಯವಿರುವ ಅಂಕಿ-ಅಂಶಗಳ ೧೯೮೪ರಲ್ಲಿ ೨೨,೮೭೩ರಷ್ಟಿದ್ದ ದೇವದಾಸಿಯರು ೨೦೦೭ರ ಹೊತ್ತಿಗೆ ೪೬,೬೬೦ ರಷ್ಟಿದ್ದರು, ಈಗ ಕರ್ನಾಟಕದಲ್ಲಿ ೨ ಲಕ್ಷ ದೇವದಾಸಿಯರು ಇರುವ ಅಂದಾಜಿದೆ. ಈ ಅನಿಷ್ಟ ಪದ್ಧತಿ ನಿರ್ಮೂಲನಕ್ಕಾಗಿ ೧೯೮೨ರಲ್ಲಿಯೇ ಕಾಯಿದೆಯನ್ನು ರೂಪಿಸಿದ್ದರೂ ಈಗಲೂ ಮುಗ್ಧ ಗ್ರಾಮೀಣ ಮಹಿಳೆಯರು ಬಲಿಯಾಗುತ್ತಿರುವುದು ನಾಚಿಕೆಗೇಡು. ಇದುವರೆಗೆ ಕೇವಲ ೪೫ ಮೊಕದ್ದಮೆಗಳು ದಾಖಲಾಗಿ, ಒಂದೇ ಒಂದು ಶಿಕ್ಷೆಯೂ ಆಗಿಲ್ಲ.

ಕರ್ನಾಟಕದ ಜಿಲ್ಲೆಗಳಾದ ಬೆಳಗಾವಿ ೩,೬೦೦, ವಿಜಾಪುರದಲ್ಲಿ ೧,೯೬೪, ಬಾಗಲಕೋಟೆಯಲ್ಲಿ ೪,೮೦೪, ಬಳ್ಳಾರಿಯಲ್ಲಿ ೬೩೫, ಕೊಪ್ಪಳದಲ್ಲಿ ೪,೮೮೦, ರಾಯಚೂರಿನಲ್ಲಿ ೨,೪೯೪, ಗುಲ್ಬರ್ಗಾದಲ್ಲಿ ೯೯೧, ಧಾರವಾಡದಲ್ಲಿ ೪೮೧, ಹಾವೇರಿಯಲ್ಲಿ ೬೧೭, ಗದಗದಲ್ಲಿ ೧,೪೦೭, ಒಟ್ಟು ೨೨,೮೭೩ ದೇವದಾಸಿಯರನ್ನು ಗುರುತಿಸಿ ಅವರ ಪುನರ್ವಸತಿಗಾಗಿ ಸರಕಾರ ವ್ಯವಸ್ಥೆ ಮಾಡಿದೆ. ಮಾಜಿ ದೇವದಾಸಿಯರಿಗೆ ನಿವೇಶನ, ಭೂಮಿ, ಉದ್ಯೋಗ ಮತ್ತು ತರಬೇತಿಗಳನ್ನು ನೀಡಿ ಅವರ ಬದುಕಿನ ಭದ್ರತೆಗಾಗಿ ಶ್ರಮಿಸಲಾಗುತ್ತಿದೆ. ಈ ದಿಶೆಯಲ್ಲಿ ಖಾಸಗಿ ಸಂಘ ಸಂಸ್ಥೆಗಳೂ ಕೆಲಸ ಮಾಡುತ್ತಿವೆ. ಅಥಣಿಯಲ್ಲಿ ಬಿ.ಎಲ್.ಪಾಟೀಲರವರು ದೇವದಾಸಿ ವಿಮೋಚನಾ ಪುನರ್ವಸತಿ

ಸಂಘ ಸ್ಥಾಪಿಸಿ ಸಾವಿರಾರು ಮಾಜಿ ದೇವದಾಸಿಯರ ಬದುಕಿನಲ್ಲಿ ಬೆಳಕು ನೀಡಿದ್ದಾರೆ. ಅದರಂತೆ ಶೋಭಾ ಗಸ್ತಿಯವರು ಮಾಸ್ ಸಂಸ್ಥೆಯನ್ನು ಕಟ್ಟಿ ೪೫೦೦ ಮಾಜಿ ದೇವದಾಸಿಯರಿಗೆ ನೆಲೆ ಒದಗಿಸಿದ್ದಾರೆ. ಈವರೆಗೆ ೫೧೪ ದೇವದಾಸಿ ಸ್ವಸಹಾಯ ಗುಂಪುಗಳಿವೆ. ಗುರುತಿಸಲ್ಪಟ್ಟ ದೇವದಾಸಿಯರಿಗೆ ಮಾಸಾಶನ ಕೊಡುವ ಯೋಜನೆಯು ಇದೆ. ಆದರೂ ಸಾಮಾಜಿಕವಾಗಿ ಇವರಿಗೆ ಮನ್ನಣೆ ಕೊಟ್ಟು ಸಮಾಜದ ಮುಖ್ಯ ವಾಹಿನಿಗೆ ತರಬೇಕಾಗಿದೆ. ದೇವದಾಸಿಯರ ಮಕ್ಕಳಿಗೂ ಪುನರ್ವಸತಿ ಹಾಗೂ ಉನ್ನತ ಶಿಕ್ಷಣ ಸಿಗಬೇಕಿದೆ.

ನಗರ ಪ್ರದೇಶಗಳಲ್ಲಿ ಮಹಿಳಾ ಸಬಲೀಕರಣದ ನಾಗಾಲೋಟದಲ್ಲಿದ್ದು ಸಮಾಜ ಮತ್ತು ಸರಕಾರಗಳು ಅದರ ಜೊತೆಗೆ ಇವೆ. ಆದರೆ ಗ್ರಾಮೀಣ ಪ್ರದೇಶದ ಮಹಿಳೆಯರು ಆರೋಗ್ಯ ಶಿಕ್ಷಣ ಆರ್ಥಿಕತೆ ಮೂಲಭೂತ ಸೌಕರ್ಯ ಮತ್ತು ಸಾಮಾಜಿಕ ಭದ್ರತೆಯಿಂದ ವಂಚಿತವಾಗಿ ಸಬಲೀಕರಣಕ್ಕೆ ಅಷ್ಟಾಗಿ ತೆರೆದುಕೊಳ್ಳುತ್ತಿಲ್ಲ. ಸ್ತ್ರೀಶಕ್ತಿ ಯೋಜನೆ, ಉದ್ಯೋಗಖಾತ್ರಿ ಯೋಜನೆ, ಮುಂತಾದವುಗಳ ಮೂಲಕ ಬೆಳಕು ಕಂಡುಕೊಳ್ಳಬೇಕಿದೆ. ಅವರ ಸಮಸ್ಯೆಗಳಿಗೆ ಶಿಕ್ಷಣ ಸಂಘಟನೆ ಮತ್ತು ಹೋರಾಟದ ಮೂಲಕ ಬೆಳಕು ಕಂಡುಕೊಳ್ಳಬೇಕಿದೆ.

# ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ

ಡಾ. ಸಿದ್ಧಗಂಗಮ್ಮ

ಪ್ರಕೃತಿಯ ಹಲವು ವಿಸ್ಮಯಗಳಲ್ಲಿ ಒಂದಾಗಿರುವ ನೀರು ಮಾನವನ ಉಳುವಿಗೆ ಮೂಲ ಆಕರವಾಗಿದೆ. ನೀರಿಲ್ಲದ ಜೀವ ಅಸ್ತಿತ್ವವನ್ನು ಊಹಿಸಲು ಸಾಧ್ಯವಿಲ್ಲ. ಆನರು ಆರೋಗ್ಯವಂತ ಉತ್ತಮ ಬದುಕು ನಡೆಸಬೇಕಾದರೆ ಸುರಕ್ಷಿತ ಕುಡಿಯುವ ನೀರು, ನೈರ್ಮಲ್ಯ ಆಹಾರ, ವಸತಿ ಮುಂತಾದವುಗಳು ಅತ್ಯವಶ್ಯಕ. ಇಂತಹ ಕನಿಷ್ಠ ಮೂಲಭೂತ ಅಗತ್ಯಗಳನ್ನು ಪೂರೈಸುತ್ತಾ ಜನರ ಜೀವನಮಟ್ಟ ಸುಧಾರಿಸುವುದೇ ಅಭಿವೃದ್ಧಿಯ ಮುಖ್ಯ ಧ್ಯೆಯವಾಗಿದೆ. ಜನತೆಗೆ ಆರೋಗ್ಯ ಸೌಲಭ್ಯಯ ಒದಗಿಸುವಲ್ಲಿ ನೀರು ನೈರ್ಮಲ್ಯ ಒಂದಕ್ಕೊಂದು ಪೂರ್ವ ಅಂಶವಾಗಿದ್ದು ಒಂದೇ ನಾಣ್ಯದ ಎರಡು ಮುಖಗಳಂತಿವೆ.

ಕುಡಿಯಲಿಕ್ಕೆ, ಅಡುಗೆ ಮಾಡಲು, ಸ್ನಾನ ಮಾಡಲು, ಬಟ್ಟೆ ತೊಳೆಯಲು ಮುಂತಾದ ನಿತ್ಯದ ಅಗತ್ಯಗಳಲ್ಲದೆ ಕೃಷಿ, ಕೈಗಾರಿಕೆ, ವಿದ್ಯುತ್ ಉತ್ಪಾದನೆ, ಮನರಂಜನೆ ಮುಂತಾದವುಗಳಿಗೆ ನೀರು ಬೇಕೇ ಬೇಕು. ಹೀಗೆ ಹಲವು ಹನ್ನೊಂದು ನಿಟ್ಟಿನಿಂದ ಮಾನವನ ಬದುಕು ನೀರಿನಿಂದ ಸುತ್ತುವರಿಯಲ್ಪಟ್ಟಿದೆ. ಇಂತಹ ಬಹುರೂಪಿ ಬೇಡಿಕೆಯ ನೀರನ್ನು ನಿಸರ್ಗದ ವಿವಿಧ ಮೂಲಗಳಿಂದ ಉಚಿತವಾಗಿ ಪಡೆಯಲಾಗುತ್ತಿತ್ತು.

ಶತಮಾನಗಳು ಉರುಳಿದೆಂತೆಲ್ಲಾ ಜನಸಂಖ್ಯೆ ಹೆಚ್ಚಾಗುತ್ತಾ ಬಂದು ಆಧುನೀಕರಣ ಕೈಗಾರಿಕೀಕರಣ, ಖಾಸಗೀಕರಣಗಳ ಸರಗಿಯಲ್ಲಿ ಉಚಿತ ಕೊಡುಗೆಯಂತಿದ್ದ ವಸ್ತುಗಳೆಲ್ಲ ಮಾರುಕಟ್ಟೆಯ ಸರಕಾಗಿ ಪರಿವರ್ತನೆಗೊಳ್ಳುತ್ತಿವೆ. ಕುಡಿಯುವ ನೀರು ಸಹ ಅದೇ ಹಾದಿಯಲ್ಲಿ ಹರಿಯುತ್ತಿದೆ.

ಭಾರತದಲ್ಲಿ ನೀರು ಮತ್ತು ನೈರ್ಮಲ್ಯ ಕೊರತೆಯಿಂದಾಗಿ ಉಂಟಾಗುವ ಖಾಯಿಲೆಗಳಿಗೆ ಆಗಾಗ ತುತ್ತಾಗಿ ಬದುಕುಳಿದ ಲಕ್ಷಾನುಗಟ್ಟಲೆ ಜನರು ಅಪೌಷ್ಠಿಕತೆಯಿಂದಾಗಿ ಉತ್ಪಾದನಾ ಸಾಮರ್ಥ್ಯ ಕಳೆದುಕೊಳ್ಳುತ್ತಿದ್ದಾರೆ. ನೀರು ನೈರ್ಮಲ್ಯ ಕೊರತೆ ಸಮಸ್ಯೆಯಿಂದಾಗಿಯೇ ಪ್ರತಿ ವರ್ಷ ೧೮೦ ಕೋಟಿ ಮಾನವ ಗಂಟೆಗಳು ನಷ್ಟವಾಗುತ್ತಿವೆ. ಮಕ್ಕಳ ಮರಣ ಪ್ರಮಾಣದಲ್ಲಿನ ಶೇ. ೩೦ರಷ್ಟು ಮರಣಗಳಿಗೆ ನೀರು ನೈರ್ಮಲ್ಯ ಕೊರತೆಯೇ ಕಾರಣವಾಗಿದೆ.

ಕುಡಿಯುವ ನೀರು ನೈರ್ಮಲ್ಯದ ಕೊರತೆ ಭೀಕರಗೊಂಡಂತೆಲ್ಲಾ ಮಾನವ ಅಸ್ತಿತ್ವದ ವಿನಾಶದ ಅಂಚಿಗೆ ತಲುಪುತ್ತಿರುವುದನ್ನು ಗಮನಿಸಿದ ರಾಷ್ಟ್ರಸಂಘವು ನೀರು ನೈರ್ಮಲ್ಯಗಳು ಮೂಲಭೂತ ಅಗತ್ಯಗಳೆಂದು ಪರಿಗಣಿಸಿ ಅಭಿವೃದ್ಧಿಶೀಲ ಮತ್ತು

ಹಿಂದುಳಿದ ರಾಷ್ಟ್ರಗಳಿಗೆ ಸುರಕ್ಷಿತ ಕುಡಿಯುವ ನೀರು ನೈರ್ಮಲ್ಯ ಸೌಲಭ್ಯ ಒದಗಿಸಲು ಶ್ರಮಿಸುತ್ತಿದೆ.

ಭಾರತ ದೇಶ-ವಿದೇಶಗಳ ನೆರವಿನೊಂದಿಗೆ ಜನತೆಗೆ ಕುಡಿಯುವ ನೀರು ನೈರ್ಮಲ್ಯ ಸೌಲಭ್ಯ ಒದಗಸುವಲ್ಲಿ ನಿರತವಾಗಿದೆ. ಆದರೆ ನೀರು ನೈರ್ಮಲ್ಯ ಸೌಲಭ್ಯ ಒದಗಿಸುವಲ್ಲಿ ಗ್ರಾಮೀಣ ನಗರ ಪ್ರದೇಶಗಳ ನಡುವೆ ತಾರತಮ್ಯ ತೋರಲಾಗುತ್ತಿದೆ.

ನಗರ ಪ್ರದೇಶ ಶೇ. ೮೧.೩೮ ರಷ್ಟು ಜನತೆ ಸುರಕ್ಷಿತ ಕುಡಿಯುವ ನೀರು ಮತ್ತು ಶೇ. ೬೩.೮೫ರಷ್ಟು ನೈರ್ಮಲ್ಯ ಸೌಲಭ್ಯ ಪಡೆಯುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಈ ಪ್ರಮಾಣ ಕ್ರಮವಾಗಿ ಶೇ. ೫೫ ಮತ್ತು ಶೇ. ೯ ರಷ್ಟಿದೆ. ಈ ತಾರತಮ್ಯ ಎಲ್ಲಾ ರಾಜ್ಯಗಳಲ್ಲೂ ಮುಂದುವರೆಯುತ್ತಿದೆ. ಕರ್ನಾಟಕ ರಾಜ್ಯವು ಇದರಿಂದ ಹೊರತಾಗಿಲ್ಲ.

ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯ ಒದಗಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಸರಕಾರವು ಕುಡಿಯುವ ನೀರು ನೈರ್ಮಲ್ಯಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿಗಳಲ್ಲಿ ಯೋಜನೆಗಳನ್ನು ರೂಪಿಸಿ ಗ್ರಾಮ ಪಂಚಾಯತಿಗಳ ಮೂಲಕ ಅನುಷ್ಠಾನಗೊಳಿಸುತ್ತದೆ.

ಪ್ರಸ್ತುತ ಗ್ರಾಮೀಣ ಜನತೆಗೆ ಕುಡಿಯುವ ನೀರನ್ನು ಕೈ ಪಂಪು ಕೊಳವೆ ಬಾವಿಗಳು, ಕಿರು ಘಟಕಗಳು ಹಾಗೂ ನಲ್ಲಿ ಜಾಲದ ಮೂಲಕ ಪೂರೈಸಲಾಗುತ್ತಿದೆ. ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ನಿರ್ಮಲ ಕರ್ನಾಟಕ, ಸ್ವಚ್ಛ ಗ್ರಾಮ ಮುಂತಾದ ಯೋಜನೆಗಳ ಮೂಲಕ ಜನತೆಗೆ ವೈಯಕ್ತಿಕ ಮತ್ತು ಸಾರ್ವಜನಿಕ ಶೌಚಾಲಯಗಳನ್ನು ಒದಗಿಸುವುದು, ಒಳ ಚರಂಡಿ ವ್ಯವಸ್ಥೆ, ಊರಿನ ಸುತ್ತಮುತ್ತಲಿನ ತಿಪ್ಪೆಗಳನ್ನು ಸ್ಥಳಾಂತರಿಸುವುದು ಮುಂತಾದ ಕಾರ್ಯಕ್ರಮಗಳನ್ನು ಕೈಗೊಂಡು ಜನತೆಗೆ ನೈರ್ಮಲ್ಯ ಸೌಲಭ್ಯ ಒದಗಿಸುತ್ತಾ ಬರುತ್ತಿದೆ. ಇಷ್ಟಾದರೂ ರಾಜ್ಯದಲ್ಲಿ ೮೦೦ಕ್ಕೂ ಅಧಿಕ ಗ್ರಾಮಗಳು ತಲಾವಾರು ೧೦ ಲೀಟರ್ ನೀರು ಪಡೆಯುತ್ತಿರುವುದು ಕಂಡುಬಂದಿದೆ. ಅಲ್ಲದೆ ಶೇ. ೮೭ರಷ್ಟು ಜನತೆ ಶೌಚಾಲಯ ಸೌಲಭ್ಯ ಪಡೆಯಲಾಗುತ್ತಿಲ್ಲ.

ಅಭಿವೃದ್ಧಿ ಕುರಿತಂತೆ ಚರ್ಚೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಸ್ಯೆಯ ಚರ್ಚೆ ಇಲ್ಲಿದೆ ಅದು ಪೂರ್ಣಗೊಳ್ಳಲಾರದು. ಜನತೆಯ ಆರೋಗ್ಯ ವರ್ಧನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ನೀರಿನ ಪೂರೈಕೆ ಮತ್ತು ನೈರ್ಮಲ್ಯ ಸೌಲಭ್ಯ ಕುರಿತಂತೆ ಗ್ರಾಮ ಪಂಚಾಯಿತಿಗಳು ಯಾವ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ. ಜನರು ನೀರು ನೈರ್ಮಲ್ಯ ಪಡೆಯುತ್ತಿರುವ ಸ್ಥಿತಿಗತಿ ಮತ್ತು ಅಲ್ಲಿನ ಸಮಸ್ಯೆಗಳನ್ನು ತಿಳಿಯುವ ಒಂದು ಪುಟ್ಟ ಪ್ರಯತ್ನ ಮಾಡಲಾಗಿದೆ.

ಗ್ರಾಮೀಣ ಪ್ರದೇಶಗಳ ಸಮಸ್ಯೆ ಕುರಿತಂತೆ ಹಲವಾರು ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಆದರೆ ಈ ಎಲ್ಲಾ ಅಧ್ಯಯನಗಳು ಮುಖ್ಯವಾಗಿ ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಸ್ಯೆಗಳನ್ನು ಮೂಲ ನೆಲೆಯಾಗಿ

ಅಭ್ಯಸಿಸಿರುವ ಅಧ್ಯಯನಗಳು ವಿರಳವೆಂದೇ ಹೇಳಬಹುದು. ಗ್ರಾಮೀಣ ಪ್ರದೇಶಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ



ಸೂಕ್ಷ್ಮವಾಗಿ ತಳಸ್ಪಷ್ಟದ ಅಧ್ಯಯನಗಳನ್ನು ಮಾಡಿದಾಗ ಮಾತ್ರ ತಳಮಟ್ಟದ ಸಮಸ್ಯೆಗಳ ಒಳ ಅರಿವು ತಿಳಿಯಲು ಸಾಧ್ಯ. ಇಂತಹ ಸೂಕ್ಷ್ಮ ಒಳ ಅರಿವನ್ನು ಕೃಷ್ಣನಗರ ಪಂಚಾಯ್ತಿ ವ್ಯಾಪ್ತಿಯ ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಸ್ಯೆಗಳ ತಿಳಿಯುವ ಪ್ರಯತ್ನ ಮಾಡಲಾಗಿದೆ.

ಉದ್ದೇಶಗಳು

೧. ಕೃಷ್ಣನನಗರ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಹಳ್ಳಿಗಳಲ್ಲಿನ ಕುಡಿಯುವ ನೀರು ಮತ್ತು ನೈರ್ಮಲ್ಯ ವಸ್ತುಸ್ಥಿತಿ ತಿಳಿಯಬಹುದು.

೨. ನೀರು ನೈರ್ಮಲ್ಯ ಸೌಲಭ್ಯ ಒದಿಗಸುವಲ್ಲಿ ಗ್ರಾಮ ಪಂಚಾಯ್ತಿಯ ಕಾರ್ಯವೈಖರಿ.

೩. ಆರ್ಥಿಕ ಸಾಮಾಜಿಕ ನೆಲೆಯಲ್ಲಿ ಕುಟುಂಬಗಳು ಲಿಂಗ ಸಂಬಂಧಿ ಆಯಾಮ- ಗಳನ್ನು ತಿಳಿಯಬಹುದು.

೪. ನೀರು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಲಿಂಗ ಸಂಬಂಧಿ ಆಯಾಮಗಳನ್ನು ತಿಳಿಯಬಹುದು.

೫. ನೀರು ನೈರ್ಮಲ್ಯ ಸರಬರಾಜಿನ ಪರಿಕರಗಳ ದುರಸ್ತಿಕಾರ್ಯಗಳು ಸ್ಥಿತಿ ತಿಳಿಯುವುದಾಗಿದೆ.

METHODOLOGY

ಪ್ರಸ್ತುತ ಅಧ್ಯಯನವು ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಕೃಷ್ಣನಗರ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೀಮಿತಗೊಳಿಸಲಾಗಿದೆ. ಈ ಪಂಚಾಯ್ತಿಯು ಕೃಷ್ಣನಗರ ಮತ್ತು ದೌಲತ್‌ಪುರ ಎಂಬ ಎರಡು ಹಳ್ಳಿಗಳನ್ನು ಒಳಗೊಂಡಿದ್ದು, ತಾಲೂಕು ಕೇಂದ್ರದಿಂದ ಕೇವಲ ೧.೩ ಕಿ.ಮೀ ದೂರದಲ್ಲಿ ಪಟ್ಟಣದೊಳಗಿನ ಹಳ್ಳಿಗಳಂತಿವೆ.

ಜನರ ಪ್ರಾಥಮಿಕ ಆದ್ಯತೆಗಳಾದ ಕುಡಿಯುವ ನೀರು ಮತ್ತು ನೈರ್ಮಲ್ಯ ಕುರಿತಂತೆ ಪ್ರಥಮ ಮತ್ತು ಆನುಷಂಗಿಕ ಮಾಹಿತಿ ಅವಲಂಬಿಸಿದ ಇದೊಮದು ತಳ ಸ್ಪರ್ಶ ಪ್ರಯೋಗಾತ್ಮಕ ಅಧ್ಯಯನವಾಗಿದೆ.

ಪ್ರಸ್ತುತ ಅಧ್ಯಯನವು ಹಲವು ದಿಕ್ಕಿನಿಂದ ಪ್ರಾಮುಖ್ಯತೆ ಪಡೆದುಕೊಂಡಿದೆ.

ಮೊದಲನೆಯದಾಗಿ ಸಂಡೂರು ತಾಲೂಕು ಮಾಜಿ ಗ್ರಾಮೀಣ ಸಚಿವ ಗೋರ್ಪಡೆಯವರ ಕ್ಷೇತ್ರ.

ಬಳ್ಳಾರಿ ಜಿಲ್ಲೆ ಆರೋಗ್ಯದಲ್ಲಿ ೨೦ ಸ್ಥಾನದಲ್ಲಿದೆ. ಕೆಳಮಾಧ್ಯಮಗಳಾದ ಜಾತಿ ಜನಗಳೇ ಅಧಿಕ ಸಂಖ್ಯೆಯಲ್ಲಿರುವ ಸಾಯಿಬಾಬ ಅವರು ಕುಡಿಯುವ ನೀರು ನೈರ್ಮಲ್ಯ ಒದಗಿಸುವಲ್ಲಿ ೩೦೦ ಕೋಟಿ ರೂ. ನೀಡಿದ್ದಾರೆಂಬ ವದಂತಿ ಇದ್ದು ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯಗಳ ಮಹಾಪೂರಗಳೇ ಬರುತ್ತಿವೆ ಎಂಬ ನಂಬಿಕೆ ಜನರಲ್ಲಿದೆ. ಈ ನಿಟ್ಟಿನಲ್ಲಿ ಸರಕಾರ ಗ್ರಾಮೀಣ ಜನತೆಗೆ ಕುಡಿಯುವ



ನೀರು ನೈರ್ಮಲ್ಯ ಸೌಲಭ್ಯ ಯೋಜನೆಗಳಲ್ಲಿ ಪಂಚಾಯ್ತಿಗಳು ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಹಾಗೂ ನಿರ್ವಹಣೆಯ ಬಗ್ಗೆ ಯಾವ ನಿಲುವು ತಳೆದಿದೆ.

ಜನತೆಗಾಗಿ ರೂಪಿಸುತ್ತಿರುವ ಯೋಜನೆಗಳಲ್ಲಿ ಜನರು ಅನುಕೂಲ ಪಡೆಯುತ್ತಿದ್ದಾರೆಯೇ? ಯೋಜನೆ ಜಾರಿಗೊಳಿಸುವಲ್ಲಿನ ಸಮಸ್ಯೆಗಳೇನು? ಮುಂತಾದವುಗಳಿಗೆ ಸಂಬಂಧಿಸಿದಂತೆ ನೀರು ನೈರ್ಮಲ್ಯ ಚಿತ್ರಣ ನೀಡುವುದರಿಂದ ಗ್ರಾಮೀಣ ಜನತೆಗೆ ಕುಡಿಯುವ ನೀರು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸುವಲ್ಲಿ ಇಂತಹ ಅಧ್ಯಯನಗಳು ನೆರವಾಗುತ್ತವೆ ಎಂದು ನಂಬಲಾಗಿದೆ.

ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಯನ್ನು ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ವಿವಿಧ ಜಾತಿ ಧರ್ಮಿಯರನ್ನು ಒಳಗೊಂಡಂತೆ ಕೃಷ್ಣ ನಗರದಿಂದ ೧೦೦ ಹಾಗೂ ದೌಲತ್‌ಪುರದಿಂದ ೬೦ ಕುಟುಂಬಗಳಲ್ಲಿ ರ್‍ಯಾಂಡಮ್ ಮಾದರಿಯ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ.

ಪ್ರಶ್ನಾವಳಿ, ಸಂದರ್ಶನ, ಅವಲೋಕನಗಳ ಮೂಲಕ ಪ್ರಾಥಮಿಕ, ಮಾಹಿತಿ ಸಂಗ್ರಹಿಸಲಾಗಿದೆ. ಗ್ರಾಮ ಪಂಚಾಯ್ತಿ, ತಾಲೂಕು, ಜಿಲ್ಲಾ ಪಂಚಾಯ್ತಿಗಳು, ಗ್ರಾಮೀಣ ಅಭಿವೃದ್ಧಿ ಇಲಾಖೆಗಳಿಂದ ಆನುಷಂಗಿಕ ಮಾಹಿತಿ ಸಂಗ್ರಹಿಸಲಾಗಿದೆ.

ಕೃಷ್ಣಾನಗರ ಗ್ರಾಮ ಪಂಚಾಯ್ತಿ ತನ್ನ ವ್ಯಾಪ್ತಿಯ ಜನತೆಗೆ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯ ಒದಗಿಸುವಲ್ಲಿ ೧೫ ಕೈಪಂಪು ಕೊಳವೆ ಬಾವಿಗಳು, ೮ ಕಿರುನೀರು ಘಟಕಗಳು, ನಲ್ಲಿ ಜಾಲದ ಮೂಲಕ ನೀರು ಪೂರೈಸುವಲ್ಲಿ ನಾಲ್ಕು ಟ್ಯಾಂಕಗಳು ನಿರ್ಮಿಸಿದೆ. ಈ ಟ್ಯಾಂಕುಗಳಿಗೆ ನೀರು ಪೂರೈಸಲು ಆರು ಪಂಪ್‌ಸೆಟ್ಟುಗಳ ಅಳವಡಿಸಿದೆ. ೧೦೦ ವೈಯಕ್ತಿಕ ನಳಗಳು, ೨೭ ಸಾರ್ವಜನಿಕ ನಳಗಳ ಅನುಷ್ಠಾನಗೊಳಿಸಿದೆ. ಪ್ರಸ್ತುತದಲ್ಲಿ ಕೈಪಂಪು ಕೊಳವೆ ಬಾವಿಗಳು ಕಿರು ನೀರು ಘಟಕಗಳು ಹಾಗೂ ನಲ್ಲಿ ಜಾಲದ ಮೂಲಕ ಕುಡಿಯುವ ನೀರು

ಪೂರೈಸಲಾಗುತ್ತಿದೆ. ಇನ್ನು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ೬ ಮಹಿಳಾ ಸಾಮೂಹಿಕ ಶೌಚಾಲಯ, ೧೬೦ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಒಳ ಚರಂಡಿ ಮಾಡಿ ಬಂಡೆ ಹಾಕಿಸುವುದು. ಮುಂತಾದ ಕೆಲಸಗಳಲ್ಲಿ ನಿರತವಾಗಿದೆ.

ಕೃಷ್ಣಾ ನಗರ ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಶೇ. ೪೬೮೭ರಷ್ಟು ಕುಟುಂಬಗಳು ೨೫ ಲೀಟರ್‌ಗಿಂತ ಕಡಿಮೆ ಪ್ರಮಾಣದ ನೀರು ಪಡೆಯುತ್ತಿದ್ದಾರೆ. ಶೇ. ೪೦.೬೩ ರಷ್ಟು ಕುಟುಂಬಗಳು ೨೫-೪೦ ಲೀಟರ್ ನೀರು ಪಡೆಯುತ್ತಿವೆ. ಉಳಿದಂತೆ ಶೇ. ೧೨.೫೦ರಷ್ಟು ಕುಟುಂಬಗಳು ೪೦ ಲೀಟರ್‌ಗಿಂತ ಹೆಚ್ಚಿನ ಪ್ರಮಾಣದ ನೀರು ಪಡೆಯುತ್ತವೆ. ಶೇ. ೨೯.೭೩ರಷ್ಟು ಕುಟುಂಬಗಳು ಶೌಚಾಲಯ ಸೌಲಭ್ಯ ಹೊಂದಿವೆ. ಇವುಗಳು ಶೇ. ೨೪.೩೪ರಷ್ಟು ಶೌಚಾಲಯಗಳು ಬಳಸಲಾಗುತ್ತಿದೆ.

ನೀರಿನ ಕೊರತೆಯಿಂದಾಗಿ ಮಹಿಳಾ ಸಾಮೂಹಿಕ ಶೌಚಾಲಯಗಳು ಬಳಸುತ್ತಿಲ್ಲ. ಶೇ. ೫೦ಕ್ಕೆ ಹೆಚ್ಚು ಕುಟುಂಬಗಳಿಗೆ ಸ್ನಾನದ ಮನೆ ಸೌಲಭ್ಯವಿಲ್ಲ.



೧. ಸಾಮಾಜಿಕ ಆರ್ಥಿಕ ಸ್ಥಿತಿಗತಿ ಮತ್ತು ಕುಡಿಯುವ ನೀರು ನೈರ್ಮಲ್ಯ ಪಡೆಯುವುದರ ನಡುವೆ ಆಂತರಿಕ ಸಂಬಂಧ ಕಂಡುಬಂದಿದೆ. ನಮ್ಮ ಅಧ್ಯಯನ ವ್ಯಾಪ್ತಿಯಲ್ಲಿ ಲಿಂಗಾಯತರು, ಕುರುಬರು, ಮುಸ್ಲಿಂ ಒಳಗೊಂಡಂತೆ ಶೇ. ೪೫ರಷ್ಟು ಕುಟುಂಬಗಳು ೪೦ ಲೀಟರ್‌ಗಿಂತ ಹೆಚ್ಚಿನ ಪ್ರಮಾಣದ ನೀರು ಪಡೆಯುತ್ತಿವೆ. ಈ ಕುಟುಂಬಗಳು ಮನೆಯೊಳಗೆ ನಲ್ಲಿಗಳನ್ನು ಅಳವಡಿಸಿಕೊಂಡಿವೆ. ಸ್ನಾನದ ಮನೆ, ಶೌಚಾಲಯಗಳು ಸೌಲಭ್ಯಗಳು ಮನೆಯೊಳಗೆ ಪಡೆದಿವೆ. ವಿದ್ಯುತ್ ಅಭಾವದಿಂದಾಗಿ ನೀರಿನ ಕೊರತೆ ಉಂಟಾದರೂ ಈ ಕುಟುಂಬಗಳು ಎತ್ತಿನ ಬಂಡಿ ಕ್ಯಾಟರ್ ಮೂಲಕ ನೀರು ಸಂಗ್ರಹಿಸುತ್ತಿದ್ದು ಉಳಿದಂತೆ ಕುಟುಂಬಗಳು ನೀರಿನ ಕೊರತೆ ಅನುಭವಿಸುವಲ್ಲಿ ಸ್ವಚ್ಛತೆಗೆ ಹೆಚ್ಚು ಗಮನಕೊಡುತ್ತಿಲ್ಲ. ನೀರಿನ ಕೊರತೆಯಿಂದಾಗಿ ಸಾರ್ವಜನಿಕ ಶೌಚಾಲಯಗಳ ಬಳಕೆ ಇಲ್ಲ.

ಪರಿಶಿಷ್ಟ ಜಾತಿ/ಪಂಗಡ ಬಡತನದ ಕುಟುಂಬಗಳು ನಿತ್ಯ ಅಗತ್ಯದಷ್ಟು ನೀರು ಪಡೆಯಲಾಗುತ್ತಿಲ್ಲ. ಈ ಕುಟುಂಬಗಳು ನಿತ್ಯ ಸ್ನಾನ, ಸ್ವಚ್ಛತೆಗೆ ಹೆಚ್ಚು ಆಧ್ಯತೆ ನೀಡುತ್ತಿಲ್ಲ. ಸರಕಾರ ಉಚಿತ ಸಾಮೂಹಿಕ ಶೌಚಾಲಯ ನಿರ್ಮಿಸಿದ್ದರೂ ನೀರಿನ ಕೊರತೆ ಮತ್ತು ಸ್ವಚ್ಛತೆ ಇಲ್ಲದ ಕಾರಣ ಸಾರ್ವಜನಿಕ ಶೌಚಾಲಯಗಳು ಬಳಸಲಾಗುತ್ತಿಲ್ಲ.

೨. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯಲಿಕ್ಕೆ ಮತ್ತು ಮನೆ ಬಳಕೆಗೆ ಅಗತ್ಯವಾದ ನೀರು ಸಂಗ್ರಹಿಸುವುದು ಮಹಿಳೆಯರ ಜವಾಬ್ದಾರಿ. ಶೇ. ೨೧.೨೫ರಷ್ಟು ಕುಟುಂಬಗಳಲ್ಲಿ ಸ್ತ್ರೀಯರು ನೀರು ಸಂಗ್ರಹಿಸುತ್ತಿದ್ದಾರೆ. ಶೇ.

೧೭.೫೦ರಷ್ಟು ಕುಟುಂಬಗಳಲ್ಲಿ ಪುರುಷರು ನೀರು ಸಂಗ್ರಹಿಸುತ್ತಿದ್ದಾರೆ. ಶೇ. ೧೦ರಷ್ಟು ಕುಟುಂಬಗಳಲ್ಲಿ ಸ್ತ್ರೀ ಪುರುಷರಿಬ್ಬರೂ ಸಂದರ್ಭಕ್ಕೆ ಅನುಸಾರ ನೀರು ಸಂಗ್ರಹಿಸುತ್ತಿರುವುದು ಕಂಡುಬಂದಿದೆ. ಇನ್ನು ೧೬.೮೮ರಷ್ಟು ಕುಟುಂಬಗಳಲ್ಲಿ ನೀರು ಸಂಗ್ರಹಿಸುವುದು ಮಕ್ಕಳ ಜವಾಬ್ದಾರಿಯಾಗಿದೆ. ಉಳಿದಂತೆ ಶೇ. ೧೩.೭೫ರಷ್ಟು ಕುಟುಂಬಗಳಲ್ಲಿ ಸ್ತ್ರೀಯರು + ಪುರುಷರು + ಮಕ್ಕಳು ನೀರು ಸಂಗ್ರಹಿಸುತ್ತಿರುವುದನ್ನು ಕಾಣಬಹುದಾಗಿದೆ.

ಒಟ್ಟಾರೆ ನೀರು ಸಂಗ್ರಹಿಸುವುದು ಲಿಂಗವಾರು ನೋಡಿದಾಗ ಶೇ. ೬೮.೭೫ರಷ್ಟು ಸ್ತ್ರೀಯರು ಉಳಿದಂತೆ ಪುರುಷರು ನೀರು ಸಂಗ್ರಹಿಸುತ್ತಿದ್ದಾರೆ.

ಗ್ರಾಮ ಪಂಚಾಯ್ತಿ ನೀರು ನೈರ್ಮಲ್ಯ ಸೌಲಭ್ಯ ಒದಗಿಸುವಲ್ಲಿ ಜನಸಂಖ್ಯೆ ಅಗತ್ಯಕ್ಕಿಂತ ಹೆಚ್ಚಿನ ನೀರು ನೈರ್ಮಲ್ಯ ಮೂಲಗಳನ್ನು ಅನುಷ್ಠಾನಗೊಳಿಸಿದೆ. ಆದರೆ ಅವುಗಳ ಸಮರ್ಪಕ ನಿರ್ವಹಣೆ ಕೊರತೆಯಿಂದಾಗಿ ಜನತೆಗೆ ಅಗತ್ಯದಷ್ಟು ಸೌಲಭ್ಯಗಳನ್ನು ಪೂರೈಸಲಾಗುತ್ತಿಲ್ಲ.

ನೀರು ಪೂರೈಸಲಿರುವ ೮ ಕಿರುನೀರು ಘಟಕಗಳಲ್ಲಿ ದೌಲತ್‌ಪುರದಲ್ಲಿರುವ ಮೂರು ಕಿರುನೀರು ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಉಳಿದಂತೆ ಕೃಷ್ಣನಗರದಲ್ಲಿ ಎಲ್ಲಾ ಕಿರುನೀರು ಘಟಕಗಳು ದುರಸ್ತಿಗೊಂಡಿವೆ.

೧೫ ಕೈಪಂಪು, ಕೊಳವೆ ಬಾವಿಗಳ ಪೈಕಿ ಕೇವಲ ಮೂರು ಕೈಪಂಪು ಕೊಳವೆ ಬಾವಿಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದ ಮೂಲಗಳು ದುರಸ್ತಿಗೊಂಡು ಬಹಳ

ವರ್ಷಗಳೇ ಆಗಿವೆ. ಆದರೆ ದುರಸ್ತಿ ಕೆಲಸ ನಡೆದಿಲ್ಲ. ಕೃಷ್ಣನಗರದಲ್ಲಿ ಒಂದು ಕೈಪಂಪು, ನೀರು ಉಪ್ಪಾಗಿದ್ದು, ಕಿಲುಬು ವಾಸನೆ ಬರುತ್ತಿದ್ದು ಕುಡಿಯಲು ಹಾಗೂ ಮನೆ ಬಳಕೆಗೆ ಯೋಗ್ಯವಾಗಿಲ್ಲ. ಆಶ್ರಯಮನೆ ಕಟ್ಟಡಗಳ ನಿರ್ಮಾಣಕ್ಕೆ ಈ ನೀರು ಬಳಸಲಾಗುತ್ತಿದೆ. ಗ್ರಾಮ ಪಂಚಾಯ್ತಿ ಕಚೇರಿ ಹತ್ತಿರದ ಕೈಪಂಪು ಕೊಳವೆ ಬಾವಿ ನೀರು ಬರುತ್ತಿದೆ. ಈ ನೀರು ಸೇವನೆಯಿಂದ ಮೈಕೈ ಚರ್ಮ ತುರಕೆ ಬರುತ್ತಿದೆ. ಮನೆ ಬಳಕೆಗೆ ಮಾತ್ರ ನೀರು ಉಪಯೋಗಿಸಲಾಗುತ್ತಿದೆ.

ದೌಲತ್‌ಪುರ ಮಸೀದಿ ಹತ್ತಿರವಿರುವ ಕೈಪಂಪು ಕೊಳವೆ ಬಾವಿ ನೀರು ತುಂಬಾ ಹೊತ್ತು ಜಗ್ಗಿದರೆ ಮಾತ್ರ ನೀರು ಬರುತ್ತದೆ.

೪. ಕೃಷ್ಣನಗರ ಗ್ರಾಮಪಂಚಾಯ್ತಿ ನೀರು ನೈರ್ಮಲ್ಯ ಪೂರೈಕೆಗೆ ಅನುಷ್ಠಾನಗೊಳಿಸಿರುವ ೧೫ ಕೈಪಂಪು ಕೊಳವೆ ಬಾವಿಗಳಲ್ಲಿ ಕೇವಲ ೩ ಕೈಪಂಪುಗಳು ಕಾರ್ಯನಿರ್ವಹಿಸುತ್ತಿವೆ. ಉಳಿದಂತೆ ೧೨ ಕೈಪಂಪುಗಳು ದುರಸ್ತಿಗೊಂಡಿವೆ. ೮ ಕಿರುನೀರು ಘಟಕಗಳಲ್ಲಿ ೩ ಕಿರುನೀರು ಘಟಕಗಳು ಮಾತ್ರ ಕಾರ್ಯ ನಿರ್ವಹಿಸುತ್ತವೆ. ನಲ್ಲಿ ನೀರಿನ ಸರಬರಾಜಿಗಾಗಿ ೬ ಪಂಪ್‌ಸೆಟ್‌ಗಳು ನಿರ್ಮಿಸಲಾಗಿದೆ. ಅವುಗಳಲ್ಲಿ ೨ ಮಾತ್ರ ಕಾರ್ಯನಿರ್ವಹಿಸುತ್ತವೆ. ಉಳಿದಂತೆ ೪ ಪಂಪ್‌ಸೆಟ್‌ಗಳು ಕರ್ತವ್ಯ ನಿರ್ವಹಿಸುತ್ತಿಲ್ಲ.

ನೀರು ದಾಸ್ತಾನುಗೊಳಿಸಲು ನಿರ್ಮಿಸಿರುವ ೪ ಟ್ಯಾಂಕ್‌ಗಳು ಸದ್ಯದಲ್ಲಿ ೧ ಟ್ಯಾಂಕ್ ಮಾತ್ರ ಚಾಲ್ತಿಯಲ್ಲಿದೆ. ದೌಲತ್‌ಪುರದಲ್ಲಿರುವ ಟ್ಯಾಂಕ್ ತುಂಬಾ ಎತ್ತರದಲ್ಲಿ ನೀರು ಏರುವುದಿಲ್ಲ. ಕೃಷ್ಣನಗರದಲ್ಲಿ ಹೊಸ ಟ್ಯಾಂಕ್ ಇನ್ನು ಚಾಲು ಆಗಿಲ್ಲ. ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದ ನೀರು ಸರಬರಾಜು ಮಾಡುತ್ತಿದ್ದ ರಸ್ತೆ ಬದಿಯ ಪೈಪುಗಳು ಕಿತ್ತು ಹಾಕಿರುವುದರಿಂದ ಟ್ಯಾಂಕಿಗೆ ನೀರು ಸರಬರಾಜು ಆಗಿಲ್ಲ. ಹಾಗಾಗಿ ಕೃಷ್ಣನಗರ ಒಂದು ಟ್ಯಾಂಕ್ ಮಾತ್ರ ಕರ್ತವ್ಯ ನಿರ್ವಹಿಸುತ್ತಿದೆ. ದುರಸ್ತಿಗೊಂಡಿರುವ ನೀರಿನ ಮೂಲಗಳ ರಿಪೇರಿ ಕೆಲಸಗಳು ನಡೆದಿಲ್ಲ. ನೀರಿನ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯ್ತಿ ನೀರಿನ ಗುಣಮಟ್ಟ ಪರೀಕ್ಷೆ ನಡೆಸಿಲ್ಲ.

ಪ್ರಸ್ತುತದಲ್ಲಿ ಸರಬರಾಜಾಗುತ್ತಿರುವ ನೀರಿನ ಗುಣಮಟ್ಟ ಕೃಷ್ಣನಗರ ಉತ್ತಮವಾಗಿಲ್ಲ. ಆದ್ದರಿಂದ ಇಲ್ಲಿನ ಜನರು ಕುಡಿಯಲು ತೋಟದ ಬಾವಿಗಳಿಂದ ನೀರು ಸಂಗ್ರಹಿಸುತ್ತಿದ್ದಾರೆ. ದೌಲತ್ ಪುರದಲ್ಲಿ ಕುಡಿಯಲು ನೀರಿನ ಗುಣಮಟ್ಟ ಸಾಧಾರಣವಾಗಿದ್ದು ಜನರು ಅದೇ ನೀರು ಉಪಯೋಗಿಸುತ್ತಾರೆ.

ಸಾರಾಂಶ

ಕೃಷ್ಣನಗರ ತಾಲೂಕು ಕೇಂದ್ರದಿಂದ ಕೇವಲ ೧ ಕಿ.ಮೀ ದೂರದಲ್ಲಿದ್ದು, ಅತ್ತ ಪಟ್ಟಣ ಅಲ್ಲದ ಇತ್ತ ಹಳ್ಳಿಯೂ ಅಲ್ಲದ ಇತ್ತಂಡದ ಗ್ರಾಮ ಪಂಚಾಯ್ತಿ ಆಗಿದೆ. ೧೦೨೪ ಕುಟುಂಬಗಳಿದ್ದು, ಶೇ. ೬೦ಕ್ಕೂ ಹೆಚ್ಚು ಮುಸ್ಲಿಂ

ಕುಟುಂಬಗಳಿವೆ. ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿ ೭೦೦೦ ಜನಸಂಖ್ಯಾ ಇದೆ. (೨೦೦೧) ವಿವಿಧ ಜಾತಿ ಧರ್ಮಿಯರನ್ನು ಒಳಗೊಂಡ ಬಹುಜಾತಿಯ ಜನಗಳ ಪಂಚಾಯ್ತಿ ಇದಾಗಿದೆ. ಕೆಲ



ಮುಸ್ಲಿಂ ಕುಟುಂಬಗಳು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿವೆ. ಶೇ. ೫೨ರಷ್ಟು ಪುರುಷರು ಶೇ. ೪೮ರಷ್ಟು ಮಹಿಳೆಯರಿದ್ದಾರೆ. ಶಿಕ್ಷಣದ ಪ್ರಮಾಣ ಶೇ. ೩೯ರಷ್ಟಿದೆ. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು, ಸಿಬ್ಬಂದಿಯ ಕೊರತೆಯಿಂದಾಗಿ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿಲ್ಲ. ಪಂಚಾಯ್ತಿಗೆ ಒಂದು ಸ್ವಂತ ಕಟ್ಟಡವಿಲ್ಲ. ಮುಸ್ಲಿಂ ಸಮುದಾಯವು ಉದ್ಯೋಗದ ದೃಷ್ಟಿಯಿಂದ ಗಂಡು ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗೆ ಕಳುಹಿಸಲು ಒಲವುಳ್ಳವರಾಗಿದ್ದಾರೆ. ಹೆಣ್ಣುಮಕ್ಕಳು ಮದುವೆಯಾಗಿ ಹೋಗುವವರು ಆದ್ದರಿಂದ ಅವರು ನಮಾಜು ಮಾಡುವಷ್ಟು ಶಿಕ್ಷಣ ಕಲಿತರೆ ಸಾಕೆಂಬ ಭಾವನೆಯಿಂದ ಉರ್ದು ಮಾಧ್ಯಮಗಳಿಗೆ ಕಳುಹಿಸುತ್ತಿದ್ದಾರೆ.

ಇಲ್ಲಿನ ಶೇ. ೫೨ರಷ್ಟು ಕುಟುಂಬಗಳು ಬಡತನ ರೇಖೆಯ ಕೆಳಗಿದ್ದಾರೆ. ಲಿಂಗಾಯತರು, ಕುರುಬರು, ಕೆಲ ಮುಸ್ಲಿಂ ಕುಟುಂಬಗಳು ಸುಸ್ಥಿತಿಯಲ್ಲಿವೆ. ಕೃಷಿಯು ಜನರ ಮುಖ್ಯ ಕಸುಬಾಗಿದೆ. ಜೊತೆಗೆ ಮೈನ್ಸ್, ವ್ಯಾಪಾರ, ಗ್ಯಾರೆಜ್ ಮುಂತಾದವುಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಕೃಷ್ಣನಗರದ ಸುತ್ತಲು ಎತ್ತರವಾದ ಪುರಾತನ ಕೋಟೆಯಿದೆ. ಜನಸಂಖ್ಯೆ ಹೆಚ್ಚಳಕ್ಕೆ ತಕ್ಕಂತೆ ವಸತಿ ಸೌಲಭ್ಯ ಒದಗಿಸಲು ಸ್ಥಳ ಅಭಾವದಿಂದಾಗಿ ಇಕ್ಕಟ್ಟಾದ ಸಂದಿಗೊಂದಿಗಳಲ್ಲಿ ಗಾಳಿ ಬೆಳಕಿಲ್ಲದ ಮನೆಗಳಲ್ಲಿ ಜನರು ವಾಸಿಸುತ್ತಿದ್ದಾರೆ. ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲ. ಬೀದಿಗಳಲ್ಲಿ ಅಲ್ಲಲ್ಲಿ ನೀರು ನಿಂತಿದೆ. ಜೊತೆಗೆ ಊರಿನ ಸುತ್ತಲೂ ಹಾಗೂ ಊರಿನ ಮಧ್ಯದಲ್ಲಿ ತಿಪ್ಪೆಗಳ ರಾಶಿಗಳು, ಮುಳ್ಳು, ಅಲ್ಲಲ್ಲಿ ಮಲಮೂತ್ರ ವಿಸರ್ಜನೆ ಎಲ್ಲ ಸೇರಿ ಕೆಟ್ಟ ವಾಸನೆ ಬರುತ್ತಿವೆ. ಸಾಮೂಹಿಕ ಶೌಚಾಲಯಗಳು ನಿರ್ಮಿಸಿದ್ದರೂ ನೀರಿನ ಕೊರತೆಯಿಂದಾಗಿ ದುರ್ವಾಸನೆ ಬರುತ್ತಿವೆ.

ಗ್ರಾಮ ಪಂಚಾಯ್ತಿಯ ಅರ್ಧದಷ್ಟು ಜನರು ಅಗತ್ಯದಷ್ಟು ನೀರಿನ ಸೌಲಭ್ಯ ಪಡೆಯಲಾಗುತ್ತಿಲ್ಲ. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಜನರು ನೀರು ನೈರ್ಮಲ್ಯ ಸೌಲಭ್ಯಗಳನ್ನು ತಮ್ಮ ಮನೆಯೊಳಗೆ ಪಡೆದಿದ್ದಾರೆ. ನೀರಿನ ಕೊರತೆ ಉಂಟಾದರು ಬೇರೆ ಬೇರೆ ಊರು ಕೆರೆಕಟ್ಟೆಗಳಿಂದ ಎತ್ತಿನ ಗಾಡಿ, ಟ್ಯಾಂಕರ್‌ಗಳ ಮೂಲಕ ನೀರು ಪಡೆಯುತ್ತಾರೆ. ಕಡು ಬಡವರು ಅಗತ್ಯದಷ್ಟು ನೀರು ಪಡೆಯಲಾಗದೆ, ನೈರ್ಮಲ್ಯದ ಬಗ್ಗೆ ಗಮನ ಕೊಡುತ್ತಿಲ್ಲ. ನೀರಿನ ಕೊರತೆಯಿಂದಾಗಿಯೆ ಸರಕಾರ ಒದಗಿಸುವ ಶೌಚಾಲಯಗಳನ್ನು ಉಪಯೋಗಿಸುತ್ತಿಲ್ಲ.

ನೀರು ನೈರ್ಮಲ್ಯದ ಕೊರತೆ ಹೆಚ್ಚಾದಂತೆಲ್ಲಾ ಮಹಿಳೆಯರ ಮೇಲೆ ಹೆಚ್ಚು ಪರಿಣಾಮ ಉಂಟಾಗುತ್ತದೆ. ಕುಟುಂಬದ ಅಗತ್ಯಗಳಿಗೆ ಬೇಕಾದಷ್ಟು ನೀರು ಸಂಗ್ರಹಿಸುತ್ತಿರುವುದು ಮಹಿಳೆ ಮತ್ತು ಮಕ್ಕಳ ಕರ್ತವ್ಯವಾದಂತಿದೆ. ಬೇಸಿಗೆಯಲ್ಲಿ ನೀರಿನ ಅಭಾವ ವಿಪರೀತ. ನೀರಿನ ಕೊರತೆ ಹೆಚ್ಚಾದಂತೆ ಮಹಿಳೆಯರು ಹೆಚ್ಚು ಹೆಚ್ಚು ದೂರ ನಡೆದು ಹೋಗಿ ನೀರು ತರುತ್ತಿದ್ದಾರೆ. ಕುಡಿಯುವ ನೀರಿನ ಗುಣಮಟ್ಟ ಉತ್ತಮವಾಗಿಲ್ಲ. ಕಾರಣ ಜನರ ಕುಡಿಯುವ ನೀರನ್ನು ನಿತ್ಯ ತೋಟದ ಬಾವಿಗಳಿಂದ ತರುತ್ತಿದ್ದಾರೆ. ತೋಟದ ಬಾವಿಯಿಂದ ನೀರು ಸಂಗ್ರಹಿಸಿ ತರುತ್ತಿದ್ದಾಗ ಲತಾ ಎಂಬ



ಹುಡುಗಿ ಬೈಕಿಗೆ ಸಿಕ್ಕಿ ತನ್ನ ಕಾಲು ಕಳೆದುಕೊಂಡು ಮೂಲೆಯಲ್ಲಿ ಕುಳಿತಿದ್ದಾಳೆ. ನೀರು ಸಂಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಹೆಂಗಸರ ಮಧ್ಯೆ ಜಗಳ ಉಂಟಾಗುತ್ತಿವೆ. ನೀರು ಸಂಬಂಧವಾಗಿ ಪೋಲೀಸರು ಮತ್ತು ಮಹಿಳೆಯರ ಮಧ್ಯೆ ಕೈಕೈ ಮಿಲಾಯಿಸುವವರೆಗೆ ಘಟನೆ ನಡೆದಿದೆ. ಸರ್ಕಾರವು ಗ್ರಾಮೀಣ ಜನತೆಗೆ ಕುಡಿಯುವ ನೀರು ನೈರ್ಮಲ್ಯಗಳಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಸ್ವಜಾತಿ, ಪಕ್ಷಪಾತ ರಾಜಕೀಯ, ಪಂಚಾಯ್ತಿಗಳ ನಿರ್ಲಕ್ಷ್ಯ, ಜನರಲ್ಲಿ ತಮ್ಮದೆಂಬ ಭಾವನೆ ಇಲ್ಲದಿರುವುದರಿಂದ, ಯೋಜನೆಗಳು ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗುತ್ತಿಲ್ಲ. ಕೃಷ್ಣನನಗರ ಗ್ರಾಮ ಪಂಚಾಯ್ತಿಯು ಇದರಿಂದ ಹೊರತಾಗಿಲ್ಲ.

ಜಾತಿ ಧರ್ಮದ ಸ್ವಾರ್ಥದ ನೆಲೆಯಲ್ಲಿ ನೀರಿನ ಮೂಲಗಳ ನಿರ್ಮಿಸುವಲ್ಲಿ ಸೂಕ್ತ ಸ್ಥಳಗಳ ಆಯ್ಕೆ ಮಾಡದಿರುವುದು, ದುರಸ್ತಿಗೊಂಡ ನೀರು ನೈರ್ಮಲ್ಯ ಮೂಲಗಳು ನಿರ್ವಹಣೆಗಳು, ಪಂಚಾಯ್ತಿಗಳ ನಿರ್ಲಕ್ಷ್ಯ, ವಿದ್ಯುತ್ ಕೊರತೆ ನೀರು ನೈರ್ಮಲ್ಯ ಪಡೆಯಲು ಇರುವ ಸಮಸ್ಯೆಗಳಾಗಿವೆ.

ಸಲಹೆ ಸೂಚನೆಗಳು

ದೇಶದ ಅಭಿವೃದ್ಧಿಯು ಹಳ್ಳಿಗಳ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಸರಕಾರವು ಹಳ್ಳಿಗಳ ಅಭಿವೃದ್ಧಿಗೆ ಆದ್ಯತೆ ನೀಡಿ ಪಂಚವಾರ್ಷಿಕ ಯೋಜನೆಗಳ ಮೂಲಕ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ, ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ. ಆನರ ಮೂಲಭೂತ ಅಗತ್ಯಗಳಾದ ಆಹಾರ, ವಸತಿ, ವಿದ್ಯುತ್, ಆರೋಗ್ಯ, ಕುಡಿಯುವ ನೀರು ನೈರ್ಮಲ್ಯ ಮುಂತಾದ ಸೌಲಭ್ಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಆದರೆ ಜನರಲ್ಲಿ ಬೇರು ಬಿಟ್ಟಿರುವ ಅಜ್ಞಾನ ಮೂಢನಂಬಿಕೆ, ಅನಕ್ಷರತೆ, ಬಡತನ, ಸ್ವಜಾತಿ, ಧರ್ಮ, ಸ್ವಾರ್ಥದಿಂದಾಗಿ ಹಾಕಿಕೊಂಡು ಯೋಜನೆಗಳು ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗುತ್ತಿಲ್ಲ. ಕೃಷ್ಣನಗರ

ಗ್ರಾಮ ಪಂಚಾಯ್ತಿಯು ಇದರಿಂದ ಹೊರತಾಗಿಲ್ಲ. ಈ ಪಂಚಾಯ್ತಿಯು ತನ್ನ ವ್ಯಾಪ್ತಿಯಲ್ಲಿ ಜನತೆಗೆ ಕುಡಿಯುವ ನೀರು ಮತ್ತು ನೈರ್ಮಲ್ಯ ಒದಗಿಸುವಲ್ಲಿ ಜನಸಂಖ್ಯೆ ಪ್ರಮಾಣಕ್ಕೆ ನಿರ್ಮಿಸಬೇಕಿದ್ದ ಪ್ರಮಾಣಕ್ಕಿಂತಲೂ ಹೆಚ್ಚಿನ ಕೈಪಂಪು ಕೊಳವೆ ಬಾವಿಗಳು, ಕಿರುನೀರು ಘಟಕ, ನಲ್ಲಿ ನೀರಿನ ಮೂಲಗಳು, ವೈಯಕ್ತಿಕ ಸಾರ್ವಜನಿಕ ನಳಗಳು ನೀರು ದಾಸ್ತಾನು ಟ್ಯಾಂಕ್‌ಗಳು ನಿರ್ಮಿಸಲಾಗಿದೆ. ಸ್ವಚ್ಛತೆಗಾಗಿ ವೈಯಕ್ತಿಕ, ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಇಷ್ಟೆಲ್ಲ ಸೌಲಭ್ಯಗಳು ಒದಗಿಸಲಾಗಿದ್ದರೂ ಜನರು ಅಗತ್ಯದಷ್ಟು ಪ್ರಮಾಣದ ನೀರು ಮತ್ತು ನೈರ್ಮಲ್ಯ ಸೌಲಭ್ಯ ಪಡೆಯುತ್ತಿಲ್ಲ. ಸ್ವಜಾತಿ, ಧರ್ಮದ ಪ್ರೀತಿ, ತಮ್ಮ ಮನೆಗಳ ಮುಂದೆ ನೀರಿನ ಮೂಲಗಳನ್ನು ನಿರ್ಮಿಸಬೇಕೆಂಬ ಸ್ವಾರ್ಥದಿಂದ ಸೂಕ್ತವಾದ ಸ್ಥಳಗಳಲ್ಲಿ ನೀರಿನ ಮೂಲಗಳನ್ನು ನಿರ್ಮಿಸದೇ ಇರುವುದು, ಒಂದು ನೀರಿನ ಮೂಲಕ್ಕೂ ಮತ್ತೊಂದು ನೀರಿನ ನಡುವೆ (೧೦೦ ಮೀಟರ್) ಅಂತರ ಪಾಲಿಸದೆ ಇರುವುದು, ದುರಸ್ತಿವಿಳಂಬ, ವಿದ್ಯುತ್ ಕೊರತೆ ಮುಂತಾದ ಅಂಶಗಳು ಕುಡಿಯುವ ನೀರಿನ ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವಲ್ಲಿರುವ ಮುಖ್ಯವಾದ ಸಮಸ್ಯೆಗಳಾಗಿವೆ. ಈ



ಸಮಸ್ಯೆಗಳನ್ನು ನಿವಾರಿಸಲು ಕೆಳಗಿನ ಪ್ರಯತ್ನಗಳನ್ನು ಮಾಡಿದ್ದಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಗಳು ಫಲಕಾರಿಯಾಗುವ ಸಾಧ್ಯತೆಗಳಿವೆ.

೧. ಸಾಂಘಿಕ ಉಸ್ತುವಾರಿ ಮನೋಭಾವೆಯನ್ನು ಸಾರ್ವಜನಿಕರಲ್ಲಿ ಮೂಡಿಸುವುದು

ಸರಕಾರ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ತಮ್ಮದೇ ಎನ್ನುವ ಭಾವನೆ ಮತ್ತು ಜವಾಬ್ದಾರಿ ಮೂಡಿಸುವುದರಲ್ಲದೆ ದುರಸ್ತಿಗೊಂಡ ನೀರಿನ ಮೂಲಗಳನ್ನು ಸ್ಥಳೀಯ ಜನರೇ ರಿಪೇರಿಗೊಳಿಸುವಂತಹ ಹಾಗೂ ಪರಿಸರ ಸ್ವಚ್ಛಗೊಳಿಸುವ ಹೊಣೆ ಹೊಂದಿರಬೇಕು. ಈ ನಿಟ್ಟಿನಲ್ಲಿ ಸ್ತ್ರೀಶಕ್ತಿ, ಯುವಕ ಸಂಘಗಳಿಗೆ ಜವಾಬ್ದಾರಿ ವಹಿಸಬೇಕು. ಈ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆಯೇ? ಇಲ್ಲವೆ ಎಂಬುದನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಆಯಾ ವಾರ್ಡಿನ ಸದಸ್ಯರಿಗೆ ವಹಿಸಬೇಕು. ಕೃಷ್ಣಾನಗರದಲ್ಲಿ ರಸ್ತೆ ವಿಸ್ತರಿಸುವಲ್ಲಿ ಹೊಡೆದು ಹಾಕಿರುವ ನೀರು ಸರಬರಾಜು ಮಾಡುವ ಕೊಳವೆಗಳನ್ನು ತಕ್ಷಣವೇ ದುರಸ್ತಿ ಕಾರ್ಯ ಕೈಗೊಂಡು ಜನತೆಗೆ ಕುಡಿಯುವ ನೀರು ಸರಬರಾಜು ಮಾಡಬೇಕಿದೆ. ಬಾಬಯ್ಯನ ಕ್ರಾಸ್ ಬಳಿಯಿರುವ ಬೋರ್‌ವೆಲ್‌ಗೆ ಪರ್ಯಾಯವಾಗಿ ಜನವಸತಿಗೆ ಹತ್ತಿರದಲ್ಲಿ ಸುರಕ್ಷಿತ ಕುಡಿಯುವ ನೀರಿನ ಮೂಲ ಪತ್ತೆ ಹಚ್ಚಿ ಮತ್ತೊಂದು ನೀರಿನ ಮೂಲ ನಿರ್ಮಿಸಬೇಕಿದೆ. ತುಂಬ ವರ್ಷಗಳಿಗೆ ಚಾಲ್ತಿಯಾಗದೆ ಇರುವ ನಿಷ್ಕ್ರಿಯೆಗೊಂಡಿರುವ ಎಲ್ಲಾ ಕಿರುನೀರು ಘಟಕಗಳನ್ನು ದುರಸ್ತಿಗೊಳಿಸಿ ಚಾಲನೆಗೆ ತರುವ ಅಗತ್ಯವಿದೆ. ನೀರಿನ ಹೊಸ ಟ್ಯಾಂಕ್ ಸದ್ಯದಲ್ಲೇ ಕಾರ್ಯರಂಭಿಸಬೇಕಾಗಿದೆ.

ದೌಲತ್‌ಪುರದಲ್ಲಿರುವ ನೀರು ದಾಸ್ತಾನು ಮತ್ತೊಂದು ಟ್ಯಾಂಕ್ ನಿರ್ಮಿಸಿ ನೀರು ಪೂರೈಸಬೇಕಿದೆ. ನೀರಿನ ಮೂಲಗಳು ಬತ್ತಿ ಹೋಗಿರುವ ಕೈಪಂಪು ಕೊಳವೆ ಬಾವಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕೈಪಂಪು ಕೊಳವೆ ಬಾವಿಗಳ ದುರಸ್ತಿ ಕೈಗೊಳ್ಳಬೇಕಾಗಿದೆ. ಜನತೆ ಕುಡಿಯುವ ನೀರು ಸರಬರಾಜಿನಲ್ಲಿ ಇರುವ ಸಮಸ್ಯೆಗೆ ಶೀಘ್ರದಲ್ಲಿ ದುರಸ್ತಿಕೆಲಸಗಳನ್ನು ಮಾಡದಿರುವುದು. ದುರಸ್ತಿ ಕಾರ್ಯನಿರ್ವಹಿಸುವ ತರಬೇತಿ ಪಡೆದ ಸಿಬ್ಬಂದಿ, ರಿಪೇರಿ ಪರಿಕರಗಳು ತಾಲ್ಲೂಕು ಪಂಚಾಯ್ತಿಯಲ್ಲಿದ್ದು ಈ ಸಿಬ್ಬಂದಿ ಇಡೀ ತಾಲ್ಲೂಕಿನಲ್ಲಿರುವ ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿರುವ ದುರಸ್ತಿಕೆಲಸ ನಿರ್ವಹಿಸಬೇಕಿದೆ. ದುರಸ್ತಿ ಪರಿಕರಗಳು ವಾಹನ ಸೌಲಭ್ಯ ಮುಂತಾದ ಸಮಸ್ಯೆಗಳಿಂದ ನೀರಿನ ಮೂಲಗಳ ದುರಸ್ತಿ ಕೆಲಸ ವಿಲಂಬವಾಗುತ್ತದೆ. ಹಾಗಾಗಿ ಸ್ಥಳೀಯ ತರಬೇತಿ ಪಡೆದ ಸಿಬ್ಬಂದಿ ದುರಸ್ತಿ ಪರಿಕರಗಳನ್ನು ಪ್ರತಿ ಗ್ರಾಮ ಪಂಚಾಯ್ತಿಯು ಹೊಂದಿರಬೇಕು.

ಇನ್ನೂ ಕುಟುಂಬಗಳಿಗೆ ಅಗತ್ಯದಷ್ಟು ನೀರು ಪೂರೈಸುವಲ್ಲಿ ಇರುವ ಮತ್ತೊಂದು ತೊಂದರೆ ನಿರಂತರ ವಿದ್ಯುತ್ ಸರಬರಾಜು ಕೊರತೆ, ಕೊನೆ ಪಕ್ಷ ಕುಡಿಯುವ ನೀರು ಸರಬರಾಜಿಗಾದರೂ ನಿರಂತರ ವಿದ್ಯುತ್ ಸರಬರಾಜಿನ ಸೌಲಭ್ಯ ಒದಗಿಸಬೇಕು.

ದುರಸ್ತಿ ಕೆಲಸಗಳಿಗೆ ನೀಡುತ್ತಿದ್ದ ಹಣವನ್ನು ಇದ್ದಕ್ಕಿದ್ದಂತೆ ಸರಕಾರ ಸ್ಥಗಿತಗೊಳಿಸುವುದರಿಂದ ಪಂಚಾಯ್ತಿಯು ತೆರಿಗೆ ವಸೂಲಾತಿಗೆ ಪರ್ಯಾಯ ಹೊಸ ಮಾದರಿಯನ್ನು ಅಳವಡಿಸಿ ತಮ್ಮ ಸಂಪನ್ಮೂಲವನ್ನು ಹೆಚ್ಚಿಸಿಕೊಂಡು ಆ ಮೂಲಕ ಕುಡಿಯುವ ನೀರು ನೈರ್ಮಲ್ಯ ದುರಸ್ತಿ ಕಾಮಗಾರಿಗಳಿಗೆ ಬಳಸಿಕೊಳ್ಳುವ ಅಗತ್ಯವಿದೆ.



ಗ್ರಾಮ ಪಂಚಾಯ್ತಿಯ ಜನತೆಗೆ ಇದುವರೆಗೂ ಶೇ. ೧೭ರಷ್ಟು ಶೌಚಾಲಯ ಸೌಲಭ್ಯ ಒದಗಿಸಲಾಗಿದೆ. ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯ ಒದಗಿಸುವುದು ಜೊತೆಗೆ ಪುರುಷರಿಗೂ ಸಾಮೂಹಿಕ ಶೌಚಾಲಯಗಳನ್ನು ತುರ್ತಾಗಿ ಒದಗಿಸುವುದು ಅಗತ್ಯವಾಗಿದೆ. ಸದ್ಯದಲ್ಲಿರುವ ಮಹಿಳಾ ಸಾಮೂಹಿಕ ಶೌಚಾಲಯಗಳಲ್ಲೂ ನೀರಿನ ಸಂಗ್ರಹಣೆಗಾಗಿ ತೊಟ್ಟಿಗಳನ್ನು ನಿರ್ಮಿಸಿ ಪ್ರತಿದಿನ ನೀರು ಸರಬರಾಜಿನ ವ್ಯವಸ್ಥೆ ಮಾಡಬೇಕಾಗಿದೆ. ಅಲ್ಲದೆ ಶೌಚಾಲಯಗಳ ಸ್ವಚ್ಛತೆಗಾಗಿ ಗ್ರಾಮ ಪಂಚಾಯ್ತಿಯ ಕೆಲಸಗಾರರನ್ನು ನೇಮಿಸಿ, ಶೌಚಾಲಯಗಳ ಪರಿಸರ ನೈರ್ಮಲ್ಯ ಕಾಪಾಡುವುದು ಅಗತ್ಯವಾದ ಕೆಲಸವಾಗಿದೆ. ಎರಡು ಹಳ್ಳಿಗಳ ಮಧ್ಯದಲ್ಲಿರುವ ತಿಪ್ಪೆಗಳನ್ನು ಸ್ಥಳಾಂತರಿಸುವುದು ಬಹುಮುಖ್ಯವಾದುದು. ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಆರೋಗ್ಯಕ್ಕೆ ಮಾರಕವಾಗಿರುವ ಸ್ಮಾರಕ ಕೃಷ್ಣನಗರದ ಸುತ್ತಲು ಇರುವ ಕೋಟೆಯನ್ನು ಸರಕಾರದ ಅನುಮತಿ ಪಡೆದು ನೆಲಸಮ ಮಾಡಿ ಆ ಸ್ಥಳದಲ್ಲಿ ಜನರಿಗೆ ವಸತಿ ಸೌಲಭ್ಯ ಒದಗಿಸುವುದರ ಜೊತೆಗೆ ಊರಿನ ಕೊಳಚೆ ನೀರು ಆಚೆಗೆ ಹೋಗುವಂತೆ

ವ್ಯವಸ್ಥೆ ಮಾಡುವುದು ಪಂಚಾಯ್ತಿ ಕಛೇರಿ ಹಿಂಭಾಗದಲ್ಲಿರುವ ಕೊಳಚೆ ಬಾವಿಯನ್ನು ಮುಚ್ಚಿಸಬೇಕಿದೆ. ಗ್ರಾಮ ಪಂಚಾಯ್ತಿಯು ಸದ್ಯದಲ್ಲೇ ಕುಡಿಯುವ ನೀರಿನ ಗುಣಮಟ್ಟದ ಪರೀಕ್ಷೆ ನಡೆಸಿ ಗುಣಮಟ್ಟದ ಕುಡಿಯುವ ನೀರು ಪೂರೈಸುವುದು ಅಗತ್ಯವಾಗಿದೆ.

ಮನೆಕೆಲಸ ಮಹಿಳೆಯರಿಗೆ ಮುಡುಪಾಗಿರುವುದರಿಂದ ನೀರು ಸಂಗ್ರಹಿಸುವ ಕೆಲಸವನ್ನು ಮಹಿಳೆಯರೇ ನಿರ್ವಹಿಸುತ್ತಿರುವುದರಿಂದ ಸಣ್ಣಪುಟ್ಟ ಕೆಲಸವನ್ನು ದುರಸ್ತಿ ಕೆಲಸಗಳ ಬಗ್ಗೆ ಮಹಿಳೆಯರಿಗೆ ತರಬೇತಿ ನೀಡಬೇಕು. ಕುಡಿಯುವ ನೀರು ಮತ್ತು ನೈರ್ಮಲ್ಯದ ಪ್ರಾಮುಖ್ಯತೆಯ ಬಗ್ಗೆ ಸ್ತ್ರೀಯರು ಪುರುಷರು ಬೀದಿ ನಾಟಕ ಜಾನಪದ ಹಾಗೂ ನೃತ್ಯಗಳ ಮೂಲಕ ಹಳ್ಳಿಯ ಜನತೆಗೆ ತಿಳುವಳಿಕೆ ಕೊಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ನೀರು ನೈರ್ಮಲ್ಯದ ಮನೋಭಾವನೆ ಬೆಳೆಸಬೇಕಾಗಿದೆ.

ಗ್ರಾಮ ಪಂಚಾಯ್ತಿಗೆ ಒಂದು ಸ್ವಂತ ಕಟ್ಟಡ ಅಗತ್ಯವಿದೆ. ಪಂಚಾಯ್ತಿಯು ಸದಸ್ಯರಿಗೆ ಅದರಲ್ಲೂ ವಿಶೇಷವಾಗಿ ಮಹಿಳಾ ಪ್ರತಿನಿಧಿಗಳಿಗೆ ನೀರು ನೈರ್ಮಲ್ಯದ ಮಹತ್ವ ಯೋಜನೆಯ ಕಾರ್ಯ ವೈಖರಿ ಮುಂತಾದವುಗಳ ಬಗ್ಗೆ ತರಬೇತಿ ನೀಡಿ ತಮ್ಮ ಜವಾಬ್ದಾರಿಗಳನ್ನು ಅರಿತು ಕಾಲಬದ್ಧ ಯೋಜನೆಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳುವಂತೆ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಕರ್ತವ್ಯ ನಿರ್ವಹಿಸಬೇಕಾಗಿದೆ. ಮೇಲಿನ ಎಲ್ಲಾ ಸಲಹೆ ಸೂಚನೆಗಳನ್ನು ಪರಿಗಣಿಸಿ, ಗ್ರಾಮೀಣ ಜನತೆಗೆ ಸುರಕ್ಷಿತ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯ ಪಡೆಯುವಂತಾಗಿ ಉತ್ತಮ ಆರೋಗ್ಯವಂತ ಜೀವನ ನಡೆಸುವ ಅವಕಾಶ ಮಾಡಕೊಡಬೇಕಾಗಿದೆ.

# ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

## ಕಾರ್ಯಕಾರಿ ಸಮಿತಿ

**ನಾಡೋಜ ಡಾ. ಮನು ಬಳಿಗಾರ್**, ಅಧ್ಯಕ್ಷರು
**ಡಾ. ರಾಜಶೇಖರ ಹತಗುಂದಿ**, ಗೌರವ ಕಾರ್ಯದರ್ಶಿ
**ಶ್ರೀ ಕೆ. ರಾಜಕುಮಾರ**, ಗೌರವ ಕಾರ್ಯದರ್ಶಿ
**ಶ್ರೀ ಪಿ. ಮಲ್ಲಿಕಾರ್ಜುನಪ್ಪ**, ಗೌರವ ಕೋಶಾಧ್ಯಕ್ಷರು

**ಶ್ರೀ ಮಾಯಣ್ಣ**, ಬೆಂಗಳೂರು ನಗರ
**ಶ್ರೀ ಚಿ.ಮಾ.ಸುಧಾಕರ**, ಬೆಂ. ಗ್ರಾಮಾಂತರ
**ಶ್ರೀ ಸಿಂ.ಲಿಂ. ನಾಗರಾಜ್**, ರಾಮನಗರ
**ಶ್ರೀ ನಾಗಾನಂದ ಕೆಂಪರಾಜ್**, ಕೋಲಾರ
**ಡಾ. ಕೈವಾರ ಎನ್. ಶ್ರೀನಿವಾಸ**, ಚಿಕ್ಕಬಳ್ಳಾಪುರ
**ಶ್ರೀಮತಿ ಬಾ.ಹ. ರಮಾಕುಮಾರಿ**, ತುಮಕೂರು
**ಡಾ. ದೊಡ್ಡಮಲ್ಲಯ್ಯ**, ಚಿತ್ರದುರ್ಗ
**ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ**, ದಾವಣಗೆರೆ
**ಶ್ರೀ ಡಿ.ಬಿ. ಶಂಕರಪ್ಪ**, ಶಿವಮೊಗ್ಗ
**ಡಾ. ವೈ.ಡಿ. ರಾಜಣ್ಣ**, ಮೈಸೂರು
**ಶ್ರೀ ಬಿ.ಎಸ್. ವಿನಯ್**, ಚಾಮರಾಜನಗರ
**ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ**, ಮಂಡ್ಯ
**ಶ್ರೀ ನಾಯಕರಹಳ್ಳಿ ಮಂಜೇಗೌಡ**, ಹಾಸನ
**ಶ್ರೀ ಬಿ.ಎಸ್. ಲೋಕೇಶ ಸಾಗರ್**, ಕೊಡಗು
**ಶ್ರೀ ಕುಂದೂರು ಅಶೋಕ**, ಚಿಕ್ಕಮಗಳೂರು
**ಶ್ರೀ ನೀಲಾವರ ಸುರೇಂದ್ರ ಅಡಿಗ**, ಉಡುಪಿ
**ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ**, ದಕ್ಷಿಣ ಕನ್ನಡ
**ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ**, ಬೆಳಗಾವಿ
**ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ**, ವಿಜಯಪುರ
**ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ**, ಬಾಗಲಕೋಟೆ
**ಡಾ. ಲಿಂಗರಾಜ ರು. ಅಂಗಡಿ**, ಧಾರವಾಡ
**ಶ್ರೀ ಲಿಂಗಯ್ಯ ಬಿ. ಹಿರೇಮಠ**, ಹಾವೇರಿ
**ಡಾ. ಶರಣು ಗೋಗೇರಿ**, ಗದಗ
**ಶ್ರೀ ಅರವಿಂದ ಕರ್ಕಿಕೋಡಿ**, ಉತ್ತರ ಕನ್ನಡ
**ಶ್ರೀ ವೀರಭದ್ರ ಸಿಂಪಿ**, ಗುಲ್ಬರ್ಗ
**ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ**, ಯಾದಗಿರಿ
**ಶ್ರೀ ಸುರೇಶ ಚನಶೆಟ್ಟಿ**, ಬೀದರ್
**ಡಾ.ಬಸವಪ್ರಭು ಪಾಟೀಲ ಬೆಟ್ಟದೂರು**,ರಾಯಚೂರು
**ಶ್ರೀ ರಾಜಶೇಖರ ಗು. ಅಂಗಡಿ**, ಕೊಪ್ಪಳ
**ಶ್ರೀ ಸಿದ್ಧರಾಮ ಕಲ್ಮಠ**, ಬಳ್ಳಾರಿ
**ಶ್ರೀ ಬಸವರಾಜ ಸಿದ್ರಾಮಪ್ಪ ಮಸೂತಿ**, ಮಹಾರಾಷ್ಟ್ರ
**ಪ್ರೊ. ಎಚ್.ಬಿ. ಶಿವಕುಮಾರ್**, ಆಂಧ್ರ ಪ್ರದೇಶ
**ಡಾ. ತಮಿಳ್ ಸೆಲ್ವಿ**, ತಮಿಳುನಾಡು
**ಶ್ರೀ ಸುಬ್ರಹ್ಮಣ್ಯ ವಿ.ಭಟ್**, ಕೇರಳ
**ಶ್ರೀ ಮಲ್ಲಿಕಾರ್ಜುನ ಬದಾಮಿ**, ಗೋವಾ

೮೫ನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು :
**ಡಾ. ಎಚ್.ಎಸ್. ವೆಂಕಟೇಶಮೂರ್ತಿ**

ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ವಿ. :
**ಡಾ. ಗೀತಾ ವಸಂತ**

ವಿಶ್ವವಿದ್ಯಾಲಯ ಪ್ರತಿನಿಧಿ, ಕಲಬುರಗಿ ವಿ.ವಿ. :
**ಡಾ. ರಮೇಶ ಲಂಡನಕರ**

ಸರ್ಕಾರದ ಪ್ರತಿನಿಧಿ :
**ನಿರ್ದೇಶಕರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮಹಿಳಾ ಪ್ರತಿನಿಧಿಗಳು :
**ಡಾ. ವಸುಂಧರಾ ಭೂಪತಿ ಮತ್ತು**
**ಡಾ. ಎಸ್.ಪಿ. ಉಮಾದೇವಿ**

ಪರಿಶಿಷ್ಟ ಜಾತಿ ಪ್ರತಿನಿಧಿಗಳು :
**ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮತ್ತು**
**ಡಾ. ಸುಬ್ರಾವ ಎಂಟೆತ್ತಿನವರ**

ಪರಿಶಿಷ್ಟ ಪಂಗಡ ಪ್ರತಿನಿಧಿ :
**ಡಾ. ನೀಲಗಿರಿ ತಳವಾರ**

ಸಂಘಸಂಸ್ಥೆಗಳ ಪ್ರತಿನಿಧಿ :
**ಪ್ರೊ. ಸಿದ್ರಾಮಪ್ಪ ಮಾಸಿಮಾಡೆ**

# ಸಂಕೀರ್ಣ

ಕನ್ನಡದ ಲೇಖಕಿಯರ ಅನುಭವ ಲೋಕ, ಆಲೋಚನೆ, ಆಳದ ತಲ್ಲಣ ಮತ್ತು ಪ್ರತಿಭಟನೆಗಳು ಅವರ ಕೃತಿಗಳಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ಈ ಮಹಿಳಾ ಸಂಪುಟಗಳು ಹಿಡಿದು ಇಟ್ಟಿವೆ. ಇದೇ ಮೊದಲ ಬಾರಿ ಅವರ ಬಹು ಮುಖ ಅಭಿವ್ಯಕ್ತಿಯನ್ನು ಒಟ್ಟಂದದಲ್ಲಿ ಗ್ರಹಿಸಲು ಅನುವಾಗುವಂತೆ ಈ ಸಂಪುಟಗಳನ್ನು ರೂಪಿಸಲಾಗಿದೆ. ಹೆಣ್ಣು ಮತ್ತು ಗಂಡಿನ ಸಂವೇದನೆಗಳ ನಡುವಿನ ಭಿನ್ನತೆಗಳನ್ನು ಮತ್ತು ಸಾಮ್ಯತೆಗಳನ್ನು ಗುರುತಿಸಲು ಈ ಸಂಪುಟಗಳು ನೆರವಾಗುತ್ತವೆ ಎಂಬ ನಂಬಿಕೆ ನನ್ನದು. ಮಹಿಳಾ ಸಾಹಿತ್ಯ ಕುರಿತ ಉನ್ನತ ಅಧ್ಯಯನಕ್ಕೆ ಈ ಸಂಪುಟಗಳು ಆಕರಗಳಾಗುತ್ತವೆ ಹಾಗೂ ಆ ಅಧ್ಯಯನವನ್ನು ಇನ್ನಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗಲು ಅವು ನೆರವಾಗುತ್ತವೆ ಎಂದೂ ನಾನು ಭಾವಿಸಿದ್ದೇನೆ. ಇಂಥ ಅನನ್ಯ ಕೆಲಸವನ್ನು ನನ್ನ ಅವಧಿಯಲ್ಲಿ ಮಾಡಿ ಪೂರೈಸಿದ ಹೆಮ್ಮೆ ನನ್ನದು.

**ನಾಡೋಜ ಡಾ. ಮನು ಬಳಿಗಾರ್**
ಅಧ್ಯಕ್ಷರು

ರೂ ೨೪೦/-

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು - ೫೬೦ ೦೧೮.